ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸಗಳು

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶ್ರದ್ಧಾ ಎಲ್. ಬೆಳದಡಿ

ಮಾರ್ಗದರ್ಶಕರು

ಡಾ. ಎಸ್.ಎಫ್. ಜಕಬಾಳ

ಕನ್ನಡ ಪ್ರಾಧ್ಯಾಪಕರು

ಕೆ.ಎಸ್.ಎಸ್. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ

ಗದಗ.

ಭಾಷಾ ನಿಕಾಯ

ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ– ೫೮೩೨೭೬

ಮಾನ್ಯತಾ ಸಂಸ್ಥೆ

…ಎಂ.ಎಂ. ಕಲ್ಬುರ್ಗಿ ಸಂಶೋಧನ ಕೇಂದ್ರ,

…ಗದ್ಗುರು ತೋಂಟದಾರ್ಯ ಸಂಸ್ಥಾನಮಠ.

ಗದಗ–೫೮೨೧೦೧.

೨೦೧೯

398.2
SHR K
049

ಪರಾಮರ್ಶೆಗೆ ಮಾತ್ರ

“ಸಿರಿಗನ್ನಡ” ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

Shri Mahantesh
BOOK BINDING
Digital Colour Prin
Laser Prints & Xerox

[illegible] ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, [illegible]

[illegible] ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ. [illegible]

ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸಗಳು

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶ್ರದ್ಧಾ ಎಲ್. ಬೆಳದಡಿ

ಮಾರ್ಗದರ್ಶಕರು

ಡಾ. ಎಸ್.ಎಫ್. ಜಕಬಾಳ

ಕನ್ನಡ ಪ್ರಾಧ್ಯಾಪಕರು,

ಕೆ.ಎಸ್.ಎಸ್. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ,

ಗದಗ.

ಭಾಷಾ ನಿಕಾಯ

ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-೫೮೩೨೭೬

ಮಾನ್ಯತಾ ಸಂಸ್ಥೆ

ಡಾ.ಎಂ.ಎಂ. ಕಲ್ಬುರ್ಗಿ ಸಂಶೋಧನ ಕೇಂದ್ರ,

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,

ಗದಗ-೫೮೨೧೦೧.

೨೦೧೯

[illegible] ಗ್ರಂಥಾಲಯ
[illegible] ವಿಶ್ವವಿದ್ಯಾಲಯ, [illegible]

141630

398.2
SHR K

ಪ್ರಮಾಣ ಪತ್ರ

ಕು. ಶ್ರದ್ಧಾ ಎಲ್. ಬೆಳದಡಿ ಆದ ನಾನು **ಡಾ.ಎಸ್.ಎಫ್.ಜಕಬಾಳ** ಅವರ ಮಾರ್ಗದರ್ಶನದಲಿ **"ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾಲೋಕದ ವಿನ್ಯಾಸಗಳು"** ಎಂಬ ವಿಷಯದ ಕುರಿತು ಸಿದ್ಧಪಡಿಸಿದ ಮಹಾ ಪ್ರಬಂಧವನ್ನು ಡಾ.ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ, ಹಂಪಿ.

ದಿನಾಂಕ: 9-07-2019

Shali

ಕು. ಶ್ರದ್ಧಾ ಎಲ್. ಬೆಳದಡಿ
ಸಂಶೋಧನಾ ವಿದ್ಯಾರ್ಥಿ
ಡಾ. ಎಂ.ಎಂ. ಕಲಬುರ್ಗಿ ಸಂಶೋಧನ ಕೇಂದ್ರ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ,
ಗದಗ.

ದೃಢೀಕರಣ ಪತ್ರ

ಕು. ಶ್ರದ್ಧಾ ಎಲ್. ಬೆಳದಡಿ ಇವರು ನನ್ನ ಮಾರ್ಗದರ್ಶನದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ.ಎಂ.ಎಂ. ಕಲಬುರ್ಗಿ ಸಂಶೋಧನ ಕೇಂದ್ರ ಗದಗದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ. **"ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸಗಳು"** ಎಂಬ ವಿಷಯದ ಕುರಿತು ಸಿದ್ಧಪಡಿಸಿದ ಇವರ ಪಿಎಚ್.ಡಿ. ಮಹಾ ಪ್ರಬಂಧವು ಮೂಲ ಸಂಶೋಧನಾ ಕೃತಿ ಆಗಿದೆ. ಈ ಮಹಾಪ್ರಬಂಧವು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ, ಹಂಪಿ.

ದಿನಾಂಕ: 9-07-2019

ಡಾ.ಎಸ್.ಎಫ್. ಜಕಬಾಳ

ಮಾರ್ಗದರ್ಶಕರು

ಡಾ.ಎಂ.ಎಂ. ಕಲಬುರ್ಗಿ ಸಂಶೋಧನ ಕೇಂದ್ರ,

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ,

ಗದಗ.

ಪರಿವಿಡಿ

ಪ್ರಸ್ತಾವನೆ :

ಜನಪದ ಜಗತ್ತು ತುಂಬಾ ವೈವಿಧ್ಯಮಯವಾದ ವಿಶಾಲವಾದ ವ್ಯಾಪ್ತಿಯನ್ನು ಒಳಗೊಂಡಿದೆ. ಆದ್ದರಿಂದ ಜನಪದ ಸಾಹಿತ್ಯವು ಆಕಾಶದಷ್ಟು ವಿಶಾಲ, ಸಾಗರದಷ್ಟು ಆಳವನ್ನು ಹೊಂದಿ ತನ್ನ ಒಡಲೊಳಗೆ ಗಾದೆ, ಒಗಟು, ಒಡಪು, ಕಥೆ, ಗೀತೆ, ಕಥನಗೀತೆಗಳು ಹೀಗೆ ಹಲವಾರು ಪ್ರಕಾರಗಳನ್ನು ಹುದುಗಿಸಿಕೊಂಡಿದೆ. ಈ ಎಲ್ಲ ಪ್ರಕಾರಗಳ ಉಪಲಬ್ಧತೆಯಿಂದ ಇಡೀ ಜಗತ್ತಿನ ಸಾಹಿತ್ಯದ ಮೂಲವನ್ನೆಲ್ಲ ಜನಪದ ಸಾಹಿತ್ಯದಲ್ಲಿ ಕಾಣಬಹುದು. ಅದಕ್ಕಾಗಿಯೇ ಬಿ.ಎಂ.ಶ್ರೀ ಅವರು ಜನಪದ ಸಾಹಿತ್ಯವನ್ನು ಕುರಿತು 'ಜನವಾಣಿ ಬೇರು ಕವಿವಾಣಿ ಹೂವು' ಎಂದು ಹೇಳಿ ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯದ ವಿಶಿಷ್ಟತೆಯನ್ನು ಎತ್ತಿ ಹಿಡಿದಿದ್ದಾರೆ.

ಜನಪದರು ಉನ್ನತ ಶಿಕ್ಷಣ ಪಡೆದವರಲ್ಲ. ಆದರೆ ಜೀವನದಲ್ಲಾದ ಅನುಭವಗಳ ಪಾಠ ಕಲಿತವರು. ಕಲಿತ ಪಾಠವನ್ನು ಜನಮಾನಸಕ್ಕೆ ತಮ್ಮ ಮಾತಿನ ಮೂಲಕ ಪಸರಿಸಿಕೊಂಡು ಬಂದು ಅಂದಂದಿನ ಸಾಮಾಜಿಕ ಸ್ಥಿತಿಗತಿಗಳ ಬಗೆಗೆ, ಸಾಂಸ್ಕೃತಿಕ ಚಿತ್ರಣದ ಬಗೆಗೆ ತಮ್ಮ ಅರಿವಿನಿಂದ ತಿಳಿಸಿ ಕನ್ನಡ ಸಾಹಿತ್ಯದಲ್ಲಿ ದಾಖಲಾದವರು. ಅವರು ಬಿತ್ತಿ ಬೆಳೆದ ಸಾಹಿತ್ಯ ಸರ್ವಕಾಲಕ್ಕೂ ಅಧ್ಯಯನ ಆಕರಗಳಾಗಿವೆ. ಆದ್ದರಿಂದಲೇ ಜನಪದ ಸಾಹಿತ್ಯವೆಂಬುದು ನಿಂತ ನೀರಲ್ಲ. ಸದಾ ಪ್ರವಹಿಸುತ್ತಿರುವ ಜೀವಂತವಾಹಿನಿ ಎಂದು ಸಾಬೀತಾಗುತ್ತದೆ.

ಯಾವುದೇ ಜನಾಂಗದ ಜೀವಂತ ಪಳೆಯುಳಿಕೆಯಾದ ಜನಪದ ಸಾಹಿತ್ಯವು ಜನಪದರು ತಾವು ಪಟ್ಟ ಪಾಡೆಲ್ಲವನ್ನು ಹಾಡಾಗಿಸಿ ಹೊರಹೊಮ್ಮಿಸಿದಂತಹ ಸಾಹಿತ್ಯದ ದಾಖಲಾಗಿವೆ. ಅವುಗಳ ಅಧ್ಯಯನ ಕಾಲಕಾಲಕ್ಕೆ ಬದಲಾವಣೆ ಕಾಣುತ್ತ ಹೊಸ ತಿರುವನ್ನು ಪಡೆದುಕೊಳ್ಳುತ್ತಿದೆ. ಅವುಗಳಲ್ಲಿ ಕಥನಗೀತೆಯೂ ಕೂಡ ಒಂದಾಗಿದ್ದು, ಜನಪದ ಸಾಹಿತ್ಯದಿಂದ ಹಿಡಿದು ಹೊಸಗನ್ನಡದ ಸಾಹಿತ್ಯದವರೆಗೂ ಅದರ ಛಾಪನ್ನು ಮೂಡಿಸಿದೆ; ಬದಲಾವಣೆಯನ್ನು ಕೂಡ ಕಂಡಿದೆ. ಜನಪದ ಕಥನಗೀತೆಗಳು ಹಾಗೂ ಆಧುನಿಕ ಕಥನಕವನಗಳು ಒಂದೇ ರೀತಿಯ ಲಕ್ಷಣಗಳನ್ನು ಹೊಂದಿದ್ದರೂ ಆಶಯ, ವಸ್ತುವಿನಲ್ಲಿ ಬದಲಾವಣೆಯನ್ನು ಕಾಣಬಹುದು. ಜನಪದ ಕಥನಗೀತೆಗಳು ಒಂದು ಸಮುದಾಯದ ಅಥವಾ ಒಂದು ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಪ್ರತಿನಿಧಿಸುವ ಸಾಹಿತ್ಯ ರೂಪಗಳಾಗಿ ಜನ್ಮ ತಾಳಿದರೆ; ಆಧುನಿಕ ಕಥನ ಕವನಗಳು ಮುಖ್ಯವಾಗಿ ಪ್ರಕೃತಿಯ ವರ್ಣನೆ,

ನಾಟಕೀಯತೆ, ಮೌಲ್ಯ ಪ್ರತಿಪಾದನೆ, ವಿಡಂಬನೆ, ಸಾಂಕೇತಿಕತೆ ಪ್ರಧಾನವಾಗಿದ್ದು, ಜೊತೆಗೆ ಚಾರಿತ್ರಿಕ ಘಟನೆಗಳನ್ನು ವಸ್ತುವಾಗಿ ತೆಗೆದುಕೊಂಡು ವರ್ತಮಾನದ ಸಂಗತಿಗಳಿಗೆ ಸ್ಪಂದಿಸುವಂತಹ ಕಥನ ಕವನಗಳಾಗಿವೆ. ಅಷ್ಟೇ ಅಲ್ಲದೆ ಕೆಲವೊಂದು ಕಥನ ಕವನಗಳು ಬಡವರ, ಶೋಷಿತರ, ಮಹಿಳೆಯರ ಪ್ರಗತಿಪರ ನಿಲುವಿಗೆ ಸಹಾಯಕವಾಗಿವೆ. ಇದಕ್ಕೆ ನಿದರ್ಶನವೆಂಬಂತೆ ಬರಗೂರ ರಾಮಚಂದ್ರಪ್ಪನವರ 'ಮಾದಿಗರ ಹುಡುಗಿ' ಕಥನ ಕವನದಲ್ಲಿ 'ಪುಟ್ಟಿ' ಎಂಬ ಮಾದಿಗರ ಹುಡುಗಿಯ ಕಥೆ ಸಾಕ್ಷಿಯಾಗಿದೆ. ಇದರ ನಾಯಕಿ ಊರಿನಲ್ಲಿರುವ ಮೌಢ್ಯ ಆಚಾರ-ವಿಚಾರಗಳಿಗೆ ವಿರೋಧಿಯಾಗಿ ಅವುಗಳ ನಿರ್ನಾಮಕ್ಕಾಗಿ ಪಣ ತೊಡುತ್ತಾಳೆ. ಜನಪದ ಸಾಹಿತ್ಯದಲ್ಲಿಯೂ ಸಹ ಕೆರೆಗೆ ಹಾರ, ಧರಣಿಯಮ್ಮ, ಕೆಂಚವ್ವ ಇತ್ಯಾದಿ ಸುಪ್ರಸಿದ್ಧ ಕಥನಗೀತೆಗಳಿವೆ. ಆದರೆ ಇವು ಯಾರ ಪ್ರಭಾವವನ್ನೂ ಬಳಸಿಕೊಳ್ಳದೆ ಕನ್ನಡ ಸಾಹಿತ್ಯದಲ್ಲಿ ದಾಖಲಾದರೆ ಆಧುನಿಕ ಕಥನ ಕವನಗಳು ಕೀಟ್ಸ್, ಸ್ಕಾಟ್, ವರ್ಡ್ಸ್‌ವರ್ತ್, ಛಾಸರ್ ಮೊದಲಾದ ಇಂಗ್ಲೀಷ್ ಕವಿಗಳ ಮಾರ್ಗವನ್ನು ಅನುಸರಿಸಿ ಕಥೆಗಳನ್ನು ನಿರೂಪಿಸಿರುವುದನ್ನು ಮಾಸ್ತಿ, ಕುವೆಂಪು, ಸು.ರಂ.ಎಕ್ಕುಂಡಿ, ಕಡೆಂಗೋಡ್ಲು ಶಂಕರಭಟ್ಟ ಮುಂತಾದ ಕವಿಗಳಿಂದ ಕಥನ ಕವನಗಳು ಕನ್ನಡಕ್ಕೆ ಬಂದಿವೆ. ಆಧುನಿಕ ಕಥನ ಕವನಗಳು ಕತೆಯನ್ನು ನಿರ್ವಹಿಸುವಾಗ ವಾಸ್ತವದ ನೆಲೆಯಲ್ಲಿ ನಿಂತು ಚಿಂತಿಸಿ, ಹಳೆಯ ಕಥೆ ಅಥವಾ ಹೊಸ ಕಥೆಯನ್ನು ಪುನರ್ ರಚಿಸುತ್ತವೆ.

ಸಾಮಾಜಿಕ, ಚಾರಿತ್ರಿಕ ಘಟನೆಗಳನ್ನಾಧರಿಸಿ ಸಮಾಜಪರ ನಿಲುವಿನೊಂದಿಗೆ ಕಥನ ಕವನಗಳು ಉದಯಿಸಿ ತನ್ನದೆಯಾದ ಮಹತ್ವವನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಪಸರಿಸಿವೆ. ಕನ್ನಡ ಜನಪದ ಕಥನಗೀತೆಗಳು ಇದ್ದ ಸ್ಥಿತಿಯನ್ನು ಹೇಳಿದರೆ ಕಥನ ಕವನಗಳು ಸ್ಥಿತಿಯೊಂದಿಗೆ ವೈಚಾರಿಕತೆಯನ್ನು ಕೂಡ ಹುಟ್ಟುಹಾಕುತ್ತವೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಜನಪದ ಕಥನಗೀತೆಗಳು ಆಧುನಿಕ ಕಥನ ಕವನಗಳವರೆಗೂ ತನ್ನ ಛಾಪನ್ನು ಮೂಡಿಸಿಕೊಂಡು ಬಂದಿವೆ. ಅಧ್ಯಯನ ಕೈಗೊಂಡಷ್ಟು ಹೊಸ ಹೊಸ ವಿಷಯಗಳ ಸೃಷ್ಟಿಯಾಗುತ್ತ ಹೊಸ ಅನ್ವೇಷಣೆಗೆ ಸಹಾಯಕವಾಗಿ ಜನಪದ ಕಥನಗೀತೆಗಳು ಕಂಡುಬರುತ್ತವೆ.

ಕಥನ ಕಾವ್ಯ ಎಂಬುದು ಕನ್ನಡ ಜನಪದ ಸಾಹಿತ್ಯದ ಪ್ರಾಚೀನ ಪ್ರಕಾರವಾಗಿದ್ದು, ಇದರ ಬೀಜಾಂಶವನ್ನು ಕನ್ನಡ ನಾಡಿನ ಶಾಸನಗಳ ಸ್ತುತಿ ಪದ್ಯಗಳಲ್ಲಿ ಕಾಣುತ್ತೇವೆ. ವೀರರ, ಮಹಾಸತಿಯರ ಮುಂತಾದವರ ಜೀವನ ಕಥೆಯನ್ನು ತಿಳಿಸಿಕೊಡುವಲ್ಲಿ ಕಥನಕವನವು

ಅಂಕುರಿಸಿದ್ದನ್ನು ಕಾಣಬಹುದು. ೧೨೦೦ರ ಅಬ್ಬಲೂರಿನ ಶಾಸನವಂತೂ ಆ ಕಾಲದ ಕಥನ ಕಾವ್ಯಕ್ಕೆ ಅತ್ಯುತ್ತಮ ನಿದರ್ಶನವಾಗಿದೆ.

ಜನಪದ ಕಥನಗೀತೆಗಳು ಜಗತ್ತಿನಾದ್ಯಂತ ಎಲ್ಲ ಸಮುದಾಯಗಳಲ್ಲಿ ಮತ್ತು ಎಲ್ಲ ಭಾಷೆಗಳಲ್ಲಿ ಹಿಂದಿನಿಂದಲೂ ಪ್ರಚಲಿತವಿರುವ ಜನಪದ ಗೀತ ಪ್ರಕಾರವಾಗಿದೆ. ಇಲ್ಲಿ ಕಥೆಗೆ ಹೆಚ್ಚಿನ ಪ್ರಾಧಾನ್ಯತೆ ಇರುವುದರಿಂದ ಆಯಾ ಸಮುದಾಯಗಳು ತಮ್ಮ ಸಂಸ್ಕೃತಿಯ ಮಹತ್ವದ ದಾಖಲೆಗಳನ್ನು ಹಾಡಿನ ರೂಪದಲ್ಲಿ ದಾಖಲಿಸಿಕೊಟ್ಟಿವೆ. ಇದರಲ್ಲಿ ಐತಿಹಾಸಿಕ ಘಟನೆಗಳು ಸಾಂಸ್ಕೃತಿಕ ವೀರರ ಚರಿತೆಗಳು ನಿಜಜೀವನದಲ್ಲಿ ಘಟಿಸಿದ ದುರಂತ ಪ್ರಸಂಗಗಳು ಕೂಡ ಸೇರಿ ಅಂದಂದಿನ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ತಿಳಿಸುತ್ತವೆ. ಅವುಗಳನ್ನು ಇಂದು ಪುನರ್ ವಿಮರ್ಶೆಗೊಳಪಡಿಸುವ ಅವಶ್ಯಕತೆ ಇದೆ.

ಕಥನ ಎಂದರೆ ಪ್ರೇಕ್ಷಕರಿಗೆ ಒಂದು ಕಥೆಯನ್ನು ತಿಳಿಸಲು ಲಿಖಿತ ಅಥವಾ ಮೌಖಿಕ ನಿರೂಪಣೆಯ ಬಳಕೆ. ಇದು ತಂತ್ರಗಳ ಒಂದು ಸಮೂಹವನ್ನು ಒಳಗೊಳ್ಳುತ್ತದೆ ಮತ್ತು ಇದರ ಮೂಲಕ ಕಥೆಯ ಸೃಷ್ಟಿಕರ್ತನು ತನ್ನ ಕಥೆಯನ್ನು ಪ್ರಸ್ತುತಪಡಿಸುತ್ತಾನೆ. ವೈಯಕ್ತಿಕ ಅಥವಾ ಅವೈಯಕ್ತಿಕ ಕಥೆಯನ್ನು ಹೇಳುವ ಸ್ವರೂಪವನ್ನು ಹೊಂದಿರುತ್ತದೆ. ಭೂತಕಾಲ, ವರ್ತಮಾನಕಾಲ, ಭವಿಷ್ಯತ್ ಕಾಲದಲ್ಲಿ ಕಥೆಯ ಸಮಯ ಚೌಕಟ್ಟನ್ನು ಹೊಂದಿರುತ್ತದೆ. ಕಥನವು ಕೇವಲ ಕಥೆಯನ್ನು ಹೇಳುವವನ್ನಷ್ಟೇ ಒಳಗೊಳ್ಳುವುದಿಲ್ಲ, ಜೊತೆಗೆ ಕಥೆಯನ್ನು ಹೇಗೆ ಹೇಳಲಾಗುತ್ತದೆ ಎಂಬುದನ್ನು ಕೂಡ ಒಳಗೊಳ್ಳುತ್ತದೆ. ಸಾಂಪ್ರದಾಯಿಕ ಸಾಹಿತ್ಯಿಕ ಆಖ್ಯಾನಗಳಲ್ಲಿ ಕಥನವು ಅಗತ್ಯವಾದ ಕಥಾ ಘಟಕವಾಗಿರುತ್ತದೆ.

ಕಥನ (ನೆರೆಟಿವ್) ಎಂಬ ಪದವು ಲ್ಯಾಟಿನ್ ಭಾಷೆಯ 'ಹೇಳು' ಎಂಬ ಪದದಿಂದ ರೂಪಿತವಾಗಿದೆ. ನಿರೂಪಣೆ ಎಂಬ ಪದವನ್ನು ನೆರೇಟಿವ್‌ಗೆ ಸಮಾನಾರ್ಥವಾಗಿ ಬಳಸುತ್ತಾರೆ. ಕಥನಗೀತೆಗೆ ಇಂಗ್ಲೀಷನಲ್ಲಿ 'ಬ್ಯಾಲೆಡ್' ಎಂಬ ಹೆಸರಿದೆ. ತೆಲುಗಿನಲ್ಲಿ "ಸಾಮಾನ್ಯ ಮನಪದಮು" ಎನ್ನಲಾಗಿದೆ. ಮರಾಠಿಯಲ್ಲಿ 'ಆಖ್ಯಾನ ಕಾವ್ಯ' ಎಂದು ಕರೆಯಲಾಗುತ್ತದೆ. ಈ ಕಥನಗೀತೆಯನ್ನು ಒಂದೇ ವ್ಯಾಖ್ಯೆಯಲ್ಲಿ ವಿವರಿಸುವುದು ಕಷ್ಟ. ಈ ಕುರಿತು ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ಸಾಕಷ್ಟು ಅಧ್ಯಯನ ಮಾಡಿ ಅವುಗಳ ಅರ್ಥವನ್ನು ಈ ಕೆಳಗಿನಂತೆ ತಿಳಿಸಿದ್ದಾರೆ.

- ಘಟನೆಗಳ ಸರಣಿಯೊಂದನ್ನು ನಿರೂಪಿಸಿ, ಕಥೆಯೊಂದನ್ನು ಸೃಷ್ಟಿಸಿದಾಗ ಅದು ಕಥನ ಕವನವಾಗುತ್ತದೆ – ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ

- ಕಥನಾಂಶ, ಗೇಯಾಂಶ, ಜಾನಪದೀಯವಾದ ವಸ್ತುಶೈಲಿ ರೂಪ, ರಚನೆ, ಏಕ ಘಟನಾತ್ಮಕ ಕತೆ, ವಸ್ತುನಿಷ್ಠ ಘಟನೆ ಮತ್ತು ಸಂಭಾಷಣೆಗಳ ಮೂಲಕ ಕ್ರಿಯಾತ್ಮಕತೆಯಾಗಿದೆ – ಮ್ಯಾಕ್ ಎಡ್ವರ್ಡ್ ಲೀಚರ್

- ವಸ್ತು ಶೈಲಿ, ತಂತ್ರಗಳಲ್ಲಿ ಜಾನಪದೀಯವಾಗಿದ್ದು, ಕಥನಪರವಾಗಿದ್ದು ಹಾಡಲು ಬರುವಂತಿದ್ದು ಸಾಹಿತ್ಯ ವಿಭಾಗವನ್ನು ಜನಪದ ಕಥನವೆನ್ನುವರು. – ಎನ್.ಆರ್. ನಾಯಕ

- ಪೌರಾಣಿಕ ಕಥೆಗಳನ್ನು, ಐತಿಹಾಸಿಕ ಘಟನೆಗಳನ್ನು, ಸ್ಥಳ ಮಹಾತ್ಮೆಯನ್ನು ಅಥವಾ ಮಹಾತ್ಮರ ಘಟನೆಗಳನ್ನು ವರ್ಣಿಸುವ ದೀರ್ಘವಾದ ಹಾಡು ಕಥನಗೀತೆಯಾಗಿದೆ – ಕೆ.ಎಂ. ರೇವಣ್ಣನವರು

ಮೇಲಿನ ವ್ಯಾಖ್ಯೆಗಳನ್ನೆಲ್ಲಾ ಗಮನಿಸಿದರೆ ಕಥನಗೀತೆಯೆಂದರೆ ಗದ್ಯರೂಪದ ಪದ್ಯ. ಇದರಲ್ಲಿ ಕಥೆ ಪ್ರಧಾನವಾಗಿರುತ್ತದೆ. ಅರ್ಧಗಂಟೆಯಲ್ಲಿ ಹಾಡಬಹುದಾದ ಪದಗಳಿಂದ ಹಿಡಿದು ಇಡೀ ಒಂದು ರಾತ್ರಿ, ಅಥವಾ ಅನೇಕ ರಾತ್ರಿಗಳವರೆಗೂ ಹಾಡುವಷ್ಟು ಪದಗಳು ಇದರಲ್ಲಿ ಅಡಗಿರುತ್ತವೆ.

ಕಥನಗೀತೆಗಳ ವಸ್ತು ವೈವಿಧ್ಯವು ವಿಸ್ತಾರವಾಗಿರುತ್ತದೆ. ಹಾಗಾಗಿ ಇಲ್ಲಿ ಜನಪದರು ಕಂಡ ಪುರಾಣ, ಚರಿತ್ರೆ, ಪರಾಕ್ರಮ, ಶೌರ್ಯ, ಧಾರ್ಮಿಕ, ಸಾಮಾಜಿಕ, ತ್ಯಾಗ, ಬಲಿದಾನ, ಅಮಾನುಷ್ಯ ಘಟನೆಗಳು, ಸಾಧು–ಸಂತರ, ವೀರರ, ಜೀವನದ ಸಂಗತಿಗಳು, ಐತಿಹ್ಯ, ದಂತಕಥೆ, ಪ್ರಾಣಿಕಥೆ, ತತ್ವವಿಚಾರ, ನೀತಿ, ಸ್ವಾತಂತ್ರ್ಯ ಚಳುವಳಿ ಇತ್ಯಾದಿ ವಿಷಯಗಳಿರುತ್ತವೆ.

ಈ ಗೀತೆಗಳನ್ನು ಜನಪದರು ಮದುವೆ, ಹಬ್ಬ–ಹರಿದಿನಗಳು, ನಾಟಿ ಕಳೆ, ಒಕ್ಕಣೆ ಮೊದಲಾದ ಕೃಷಿ ಕರ್ಮಗಳು, ಅಡಿಕೆ ಸಿಪ್ಪೆ ಸುಲಿಯೋಣ, ಹಗ್ಗ ಹೊಸೆಯೋಣ, ಬುಟ್ಟಿ ಹೆಣೆಯೋಣ ಮೊದಲಾದ ವೃತ್ತಿಗಳು; ನೂಲೋಣ, ಬೀಸೋಣ ಮುಂತಾದ ಗೃಹ ಕೃತ್ಯಗಳಲ್ಲಿ ಹಾಡುವರು. ಇಂತಹ ಪದಗಳನ್ನು ಗಂಡಸರು–ಹೆಂಗಸರು ಮಾತ್ರವಲ್ಲದೇ ಇಬ್ಬರೂ ಕೂಡಿ ಹಾಡಿರುವುದನ್ನು ಕಾಣಬಹುದು. ಹೆಂಗಸರು ಗೀತೆಗಳಲ್ಲಿ ಸ್ತ್ರೀ ಪಾತ್ರಗಳನ್ನೇ ಹೆಚ್ಚಾಗಿ

ಪ್ರತಿನಿಧಿಸಲಾಗಿದ್ದು, ಕಥೆಗಳತ್ತ ಹೆಚ್ಚು ಒಲವನ್ನು ತೋರುತ್ತಾರೆ. ಹೆಣ್ಣಿನ ಭಾವನೆಯ ಅಭಿವ್ಯಕ್ತಿಗೆ ಇಲ್ಲಿ ಹೆಚ್ಚಿನ ಪ್ರಾಧಾನ್ಯತೆ ನೀಡಿರುತ್ತಾರೆ. ಗಂಡಸರ ಹಾಡುಗಳು ಶೌರ್ಯ ಸಾಹಸಗಳಿಗೆ ಹೆಚ್ಚು ಒತ್ತು ಕೊಟ್ಟದ್ದು ವರ್ಣನೆಗೆ ವಿಶೇಷ ಪ್ರಾಧಾನ್ಯತೆ ನೀಡಲಾಗಿರುತ್ತದೆ.

ಕಥನಗೀತೆಗಳ ಲಕ್ಷಣಗಳು :

- ಕಥನಗೀತೆಗಳು ಮೊದಲು ದೇವರ ಸ್ತುತಿಯೊಂದಿಗೆ ಪ್ರಾರಂಭವಾಗಿ ನಂತರ ಕಥೆ ಆರಂಭವಾಗುತ್ತದೆ.
- ಘಟನೆಯಿಂದ ಘಟನೆಗೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ಸುಲಭವಾಗಿ ಸಾಗುತ್ತದೆ. ಅಲ್ಲಿ ಪಾತ್ರ ಪ್ರಧಾನವಾಗಿದ್ದು, ಉಳಿದುವೆಲ್ಲ ಪ್ರಧಾನ ಪಾತ್ರಕ್ಕೆ ಪೋಷಕವಾಗಿ ಬರುತ್ತವೆ.
- ಯಾವುದೇ ಒಂದು ಘಟನೆ, ಒಂದು ಸನ್ನಿವೇಶ, ಒಂದು ತತ್ವದೃಷ್ಟಿ ಕೇಂದ್ರವಾಗಿದ್ದು, ಉದ್ದಿಷ್ಟ ಗುರಿ ಮಾತ್ರ ಸ್ಪಷ್ಟವಾಗಿ ಪರಿಣಾಮವೊಂದೇ ಅಂತಿಮವಾಗಿರುತ್ತದೆ.
- ಸ್ತ್ರೀ ಪ್ರಧಾನವಾದ ಕಥನಗೀತೆಗಳಲ್ಲಿ ಮಾತ್ರ ಮೊದಲಿಗೆ ಗಂಡ ದಂಡಿಗೆ ಹೋಗುವ ಸಂದರ್ಭದಿಂದ ಅಥವಾ ಕೆರೆಯಲ್ಲಿ ನೀರು ಬತ್ತಿದ ಪ್ರಸಂಗದಿಂದ ಪ್ರಾರಂಭವಾಗುತ್ತದೆ. ನಂತರ ಆ ಹೆಣ್ಣಿನೊಂದಿಗೆ ಕೌಟುಂಬಿಕ ಸದಸ್ಯರ ಸಂಬಂಧ, ಅವರು ಕಷ್ಟದಲ್ಲಿ ತೊಳಲಾಡುವ ಚಿತ್ರ, ಅಸಹಾಯಕತೆ ಚಿತ್ರಿತವಾಗುತ್ತದೆ.
- ಕಥೆಯು ಶೋಕದಲ್ಲಿ ನಿರೂಪಣೆಗೊಳ್ಳುತ್ತ ಮುಂದುವರೆಯುತ್ತದೆ. ಬಹುಪಾಲು ಕಥನಗೀತೆಗಳ ಕಥೆಯ ಅಂತ್ಯದಲ್ಲಿ ಹೆಣ್ಣಿನ ಜೀವನ ದುಃಖಾಂತದಿಂದಲೇ ಕೊನೆಯಾಗುತ್ತದೆ.
- ಕಥೆಯ ಪ್ರಸಂಗಗಳಿಗೆ ತಕ್ಕಂತೆ ಹಾಡುಗಾರಿಕೆಯಲ್ಲಿ ಏರಿಳಿತಗಳಿರುತ್ತವೆ. ಸಂತೋಷದ ವರ್ಣನೆಗೂ ದುಃಖದ ವರ್ಣನೆಗೂ ಸ್ಪಷ್ಟವಾದ ಹಾಡಿನ ಧಾಟಿಯಲ್ಲಿ ವ್ಯತ್ಯಾಸವಿರುತ್ತದೆ.
- ಹಾಡುಗಾರರು ಕಂಸಾಳೆ, ತಾಳೆ, ದಮ್ಮಡಿ, ಚೌಡಿಕೆ, ಕಿನ್ನರಿ, ಏಕತಾರಿ, ಗಣಿ, ಗುಮ್ಮಟೆ, ಗಗ್ಗರ ಹೆಜ್ಜೆ ಮುಂತಾದ ವಾದ್ಯಗಳನ್ನು ಬಳಸಿಕೊಂಡು ಹಾಡುವರು.
- ಕಥನಗೀತೆಗಳು ಯಾರೋ ಒಬ್ಬ ವ್ಯಕ್ತಿಯಿಂದ ಪ್ರಚಾರಕ್ಕೆ ಬಂದರೂ ಅವು ಜನರ ಕೈಸೇರುವ ಹೊತ್ತಿಗೆ ಹಾಡಿನ ಕರ್ತೃ ಅನಾಮಧೇಯನಾಗಿರುತ್ತಾನೆ.

- ಪ್ರತಿ ಹಾಡುಗಾರ ಹಾಡುವಾಗ ತನ್ನದೇಯಾದ ಅಂಶ ಸೇರಿಸುವುದರಿಂದ ಹೊಸ ಹೊಸ ರೂಪ ಪಡೆಯುತ್ತದೆ. ಆದ್ದರಿಂದ ಒಂದೇ ವಸ್ತುವನ್ನಾಧರಿಸಿದ ಜನಪದ ಕಥನಗೀತೆಗಳು ಅನೇಕ ಭಿನ್ನರೂಪಗಳಲ್ಲಿ ದೊರೆಯುತ್ತವೆ.

ಲಾವಣಿ – ಕಥನಗೀತೆ – ಖಂಡಕಾವ್ಯ – ಮಹಾಕಾವ್ಯಗಳಲ್ಲಿರುವ ಅರ್ಥ ಭಿನ್ನತೆ :

'ಹಾಡ್ಗತೆ'ಯನ್ನು ಲಾವಣಿಗೂ, ಹಾಡುಗಬ್ಬವನ್ನು ಖಂಡಕಾವ್ಯಗಳಿಗೂ ಅನ್ವಯಿಸ-ಬಹುದು. ಹಾಡ್ಗತೆಯಲ್ಲಿ ಕಥೆ ಪ್ರಧಾನವಾಗಿದ್ದು, ಹಾಡಿನ ಮೂಲಕ ಕಥೆಯನ್ನು ನಿರೂಪಿಸಲಾಗುವುದು. ಹಾಡು ಕಥಾ ನಿರೂಪಣೆಯ ಒಂದು ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಇವುಗಳಲ್ಲಿ ಚಿಕ್ಕದಿರುವುದರಿಂದ ದೊಡ್ಡದರವರೆಗೂ ಇರುತ್ತದೆ. ಚಿಕ್ಕ ಕಥನಗೀತೆಗಳನ್ನು **'ಲಾವಣಿ'** ಎಂದೂ, ಲಾವಣಿಯ ಮುಂದಿನ ಬೆಳವಣಿಗೆಯ ವಿಸ್ತಾರವಾದುದನ್ನು **'ಖಂಡಕಾವ್ಯ'** ಎಂದು ಕರೆಯಲಾಗುವುದು. ಇದು ಲಾವಣಿಗಿಂತ ದೊಡ್ಡದು. ಮಹಾಕಾವ್ಯಕ್ಕಿಂತ ಚಿಕ್ಕದು.[೧]

ಲಾವಣಿಯಲ್ಲಿ ಒಂದು ಘಟನೆಯ ಸುತ್ತ ಒಂದು ಕಥೆ ಹೆಣೆದಿರುತ್ತದೆ. ಇದರಲ್ಲಿ ಕ್ರಿಯೆ ಪ್ರಧಾನ. ಆದಷ್ಟು ಬೇಗ ಒಬ್ಬ ವ್ಯಕ್ತಿಯ ಸುತ್ತ ಸುಳಿದು ಬದುಕಿನ ಒಂದು ಘಟನೆಯನ್ನು ಚಿತ್ರಿಸುತ್ತದೆ. ಲಾವಣಿ ಒಂದು ರೀತಿಯಲ್ಲಿ ಮಾತಿನ ರೂಪದ ಸಾಕ್ಷಿ ಕಲ್ಲುಗಳು. ಇದರ ವಸ್ತು ಸಾಮಾನ್ಯ ವಾಸ್ತವಿಕ ಘಟನೆಯನ್ನು ಹೆಚ್ಚಾಗಿ ಅವಲಂಬಿಸಿ ಬದುಕಿನ ಅನೇಕ ದುರಂತಗಳು ಲಾವಣಿಗಳಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತವೆ. ಇವುಗಳಲ್ಲಿ ಬದುಕಿನ ನೋವನ್ನು ಚಿತ್ರಿಸುವ ಹಾಡುಗಳೇ ಹೆಚ್ಚು. ಉತ್ತರದೇವಿ, ಈರೋಬಿ, ಭಾಗೀರಥಿ, ನಾಗವ್ವ ಮುಂತಾದವುಗಳು ಕಾಲ್ಪನಿಕ ವ್ಯಕ್ತಿಗಳಾಗಿರದೆ, ಒಂದು ಕಾಲದಲ್ಲಿ ಸಮಾಜದ ನಡುವೆ ಬಾಳಿ ಬದುಕಿ ಸಂಕಟಕ್ಕೆ ಸಿಲುಕಿ ಬಾಳಿದವರು. ಹಲವಾರು ಕಷ್ಟ–ನಷ್ಟಗಳನ್ನು ಅನುಭವಿಸಿದವರು ಹಾಗೂ ಸಮಾಜಕ್ಕಾಗಿ, ಕುಟುಂಬಕ್ಕಾಗಿ ತಮ್ಮ ಪ್ರಾಣವನ್ನು ಲೆಕ್ಕಿಸದೇ ತ್ಯಾಗ ಮಾಡಿದವರು. ಹಾಗಾಗಿ ಇವರ ತ್ಯಾಗ–ಬಲಿದಾನ, ನಿಷ್ಠೆ ಎಂಬ ಮೌಲ್ಯಗಳು ವಿವಿಧ ರೀತಿಯಲ್ಲಿ ಕಂಡುಬರುತ್ತವೆ.

ಖಂಡಕಾವ್ಯದಲ್ಲಿ ಕಥೆಗಾರನ ಉದ್ದೇಶ ಲಾವಣಿಕಾರನ ಉದ್ದೇಶಕ್ಕಿಂತ ಭಿನ್ನವಾಗಿರುತ್ತದೆ. ಇಲ್ಲಿನ ಕಥೆಗಳು ತಮ್ಮಲ್ಲಿ ದುರಂತವನ್ನು ಗರ್ಭೀಕರಿಸಿಕೊಂಡಿದ್ದರೂ ಕ್ರಮ–

---

೧. ಕನ್ನಡ ಜನಪದ ಸಾಹಿತ್ಯ : ಜಿ.ಎಸ್. ಭಟ್ಟ, ಪು.೮೬

ಕ್ರಮವಾಗಿ ಅದರ ಛಾಯೆ ಮುಸುಕಾಗಿ ಸುಖಾಂತ್ಯದಲ್ಲಿ ಮುಕ್ತಾಯವಾಗಬೇಕು. ಇಲ್ಲಿ ಘಟನೆಗಳ ಸರಪಣಿ ಪರಸ್ಪರ ಹೊಂದಿಕೊಂಡಿರುತ್ತದೆ. ಆದ್ದರಿಂದ ಹಲವು ವ್ಯಕ್ತಿಗಳು ಇದರಲ್ಲಿ ಭಾಗವಹಿಸುತ್ತಾರೆ. ಕಥೆ ಊರು, ಕೇರಿ, ವ್ಯಕ್ತಿಗಳ ವಿವರಗಳನ್ನೊಳಗೊಂಡು ಆರಂಭವಾಗಿ ಒಬ್ಬ ಕಥಾನಾಯಕನನ್ನೋ, ನಾಯಕಿಯನ್ನೋ ಗುರಿಯಾಗಿಟ್ಟುಕೊಂಡು ಸಾಗಿ ಅವರ ಬದುಕಿನ ಅನೇಕ ಸಿಹಿ-ಕಹಿ ಅನುಭವಗಳನ್ನು ಚಿತ್ರಿಸಿ ಕೊನೆಗೆ ಕಷ್ಟ ಪರಂಪರೆಗೆ ಇಳಿದ ಅವರನ್ನು ಪಾರು ಮಾಡುವುದೇ ಕಥೆಗಾರನ ಮೂಲ ಉದ್ದೇಶ. ಇವರ ವ್ಯಾಪ್ತಿ ದೊಡ್ಡದು. ಇವುಗಳನ್ನು ಹಾಡುವ ವೃತ್ತಿಗಾಯಕರಾದ ನೀಲಗಾರರು, ತಂಬೂರಿಯವರು, ತೆಲುಗು ಜಂಗಮರು, ಕಂಸಾಳೆಯವರು. ಸಾಧಾರಣವಾಗಿ ಕಥೆಗೆ ರಕ್ತ, ಮಾಂಸ, ಜೀವ-ಭಾವಗಳನ್ನು ತುಂಬಿ, ಒನಪು ಒಯ್ಯಾರಗಳನ್ನು ಬಿತ್ತಿ, ನಮ್ಮೆದುರು ತಂದು ಮೆರೆಸುತ್ತಾರೆ.

ಮಾನವನ ಮೌಢ್ಯ, ಕ್ರೌರ್ಯ, ಕ್ರೋಧ, ಈರ್ಷೆ, ಸ್ವಾರ್ಥಗಳಿಂದ ಎಂಥ ಅನಾಹುತ-ಗಳಾಗುತ್ತವೆ. ಅದಕ್ಕೆ ಎಂಥ ಜೀವಿಗಳು ಬಲಿಯಾಗುತ್ತವೆ ಎಂಬುದರ ನೆನಪುಗಳು ಮನದಲ್ಲಿ ಅಚ್ಚಳಿಯದೇ ಉಳಿಯುತ್ತವೆ. ಲಾವಣಿ-ಖಂಡಕಾವ್ಯಗಳಲ್ಲಿ ಸ್ವಲ್ಪ ಅಂತರ ಗಮನಿಸ ಬಹುದು. ಎರಡರ ಉದ್ದೇಶವೂ ಕಥೆ ಹೇಳುವುದೇ ಆದರೂ ಲಾವಣಿ ಲೌಕಿಕ ಚೌಕಟ್ಟಿನಲ್ಲಿ ನಿಲ್ಲುತ್ತದೆ. ಲೌಕಿಕ ಕಥೆಯಾದರೂ ಖಂಡಕಾವ್ಯ ಪುಣ್ಯಕಥೆ ಎನಿಸಿ ಧಾರ್ಮಿಕ ಆವರಣವನ್ನು ಪಡೆದುಕೊಳ್ಳುತ್ತದೆ.

ಕಾವ್ಯಕಥೆ, ಪದ್ಯಕಥೆ, ಜನಪದ ಕಥನಕಾವ್ಯ, ಕಥನಗೀತೆ, ನೀಳ್ಗವನ, ಹಾಡ್ಗತೆಯನ್ನು 'ಬ್ಯಾಲೆಡ್' ಎನ್ನುವರು (ಲಾವಣಿ). ಕಥೆ ಇರುವ ಗೀತೆ, ಕಥನಗೀತೆಗಳನ್ನು ವ್ಯಾಖ್ಯಾನಿಸಿ, ತತ್ತ್ವಗಳನ್ನು ಹೇಳಲು ಪ್ರಯತ್ನಪಟ್ಟವರಲ್ಲಿ ಗಮರಿ, ಫ್ರೀಡ್‌ಮನ್ ಮುಖ್ಯರು. ಗಮರಿ ಅವರು ಲಾವಣಿಯನ್ನು ಜನಪ್ರಿಯ ಹಾಗೂ ಸಂಪ್ರದಾಯಿಕ ಎಂದು ಎರಡು ಭಾಗಗಳಾಗಿ ವಿಂಗಡಿಸಿದರು. ಜನಪ್ರಿಯ ಲಾವಣಿ ಹಾಡುವ ಉದ್ದೇಶಕ್ಕಾಗಿ ಇರುವ ಒಂದು ಕಾವ್ಯ, ಇದು ವ್ಯಕ್ತಿನಿಷ್ಠೆಯಲ್ಲದ್ದು. ಸಾಮಾಜಿಕ ನೃತ್ಯಕ್ಕೆ ಸಂಬಂಧಪಟ್ಟದ್ದು. ನಾಟಕಕ್ಕೆ ಸಂಬಂಧಪಟ್ಟದ್ದು.

ಜನಪದ ಕಥನಗೀತೆಗಳನ್ನು ಜನಪದ ನೀಳ್ಗವನಗಳೆಂದು ಕೂಡ ಕರೆಯುತ್ತಾರೆ. ಇವು ಬಾಹ್ಯರೂಪದಲ್ಲಿ ಭಾವಗೀತೆಯನ್ನು ನೆನಪಿಸುವ 'ನೆರೆಟಿವ್ ಲಿರಿಕ್' ಎಂದು ಹೇಳುವರು. ಜನಪದ ಗೀತೆಗಳ ಲಕ್ಷಣಗಳನ್ನೇ ಹೊಂದಿರುತ್ತವೆ. ಜನಪದೀಯ ಗೇಯ ವಾಗ್ರೂಪ ಪ್ರಚಾರ, ಸಹಜಶೈಲಿ ಅಪ್ರಯತ್ನ ರಚನೆಯಾಗಿರುತ್ತವೆ. ವೀರರಸ ಕಥಾ ಭಾಗಕ್ಕಿಂತ ಮುಖ್ಯವಾಗುತ್ತದೆ.

ಜನಪದರ ಆಲೋಚನೆಗೆ ಸಿಗುವಂತಹ ಸನ್ನಿವೇಶಗಳು ಕಥನಗೀತೆಯಲ್ಲಿ ಮುಖ್ಯ ಎಂದು ಗಮರಿ ಮುಂತಾದ ವಿದ್ವಾಂಸರು ಹೇಳಿದ್ದಾರೆ.

ಜನಪದ ಕಥನಗೀತೆಗಳ ಗುಣಗಳೆಂದರೆ, ಒಂದು ಸನ್ನಿವೇಶದಿಂದ ಮತ್ತೊಂದು ಸನ್ನಿವೇಶಕ್ಕೆ ಹೋಗಿ ಬಿಡುವುದು, ಮಧ್ಯದಲ್ಲಿ ಅಂತರ ಕಂಡುಬರುವುದು ಇತ್ಯಾದಿ ಗುಣಗಳನ್ನು ಜನಪದ ಕಥನಗೀತೆಗಳಲ್ಲಿ ಕಾಣಬಹುದು. ಪ್ರಾಚೀನ ಮಾನವನ ಚಿತ್ತವೃತ್ತಿಯನ್ನು ಪ್ರತಿಬಿಂಬಿಸುವ ಮಾನಸಿಕ ಸ್ಥಿತಿಯಲ್ಲಿ ಉಗಮಗೊಳ್ಳುವುದು. "ಬ್ರಿಟಾನಿಕಾ ವಿಶ್ವಕೋಶದಲ್ಲಿ ಹೇಳಿರುವಂತೆ ಕಥನಗೀತೆಗಳೂ, ಜನಪದ ಗೀತೆಯ ಒಂದು ಪ್ರಭೇದ."[೨] ಜನಪದ ಮಹಾಕಾವ್ಯಗಳನ್ನು ಒಂದು ದೇಶದ ಅಥವಾ ಸಾಂಸ್ಕೃತಿಕ ಇಲ್ಲವೇ ಸಾಮಾಜಿಕ ವರ್ಗದ ಪುರಾಣ ಎಂದು ಕರೆಯಬಹುದು. ಮಹಾಕಾವ್ಯಗಳ ಶ್ರೀಮಂತಿಕೆಯನ್ನು ನಮ್ಮ ದೇಶದಲ್ಲಿ ಕಾಣಬಹುದು. ಆದರೂ ಜನಪದ ಮಹಾಕಾವ್ಯಗಳ ಮೂಲ ಕರ್ತೃ ಯಾರು ಎಂಬುದು ತಿಳಿದಿಲ್ಲ. ಜರ್ಮನಿಯ ತತ್ತ್ವಶಾಸ್ತ್ರಜ್ಞ ರುರ್ಡರಸ ರಮ್ಯ ರಾಷ್ಟ್ರೀಯವಾದ ಜನಪದ ಮಹಾಕಾವ್ಯಗಳ ಅಸ್ತಿತ್ವವನ್ನು ಗುರುತಿಸಲು ಮತ್ತು ಅದರ ಸಂಗ್ರಹಕ್ಕೆ ತೊಡಗಲು ಪ್ರೇರಣೆಯನ್ನು ನೀಡಿತು. ಜನಪದ ಮಹಾಕಾವ್ಯವನ್ನು ಕಥೆ ಎಂದು ಹೇಳುತ್ತಾರೆ. ವೀರರ ಸಾಹಸಗಳು, ಧಾರ್ಮಿಕ ವ್ಯಕ್ತಿಗಳ ಸಾಧನೆಗಳನ್ನು ವಿಸ್ತರಿಸುತ್ತವೆ. ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಖಂಡಕಾವ್ಯದ ವ್ಯಾಪ್ತಿ ದೀರ್ಘವಾಗಿದ್ದರೆ ಮಹಾಕಾವ್ಯವಾಗುತ್ತದೆ. ಜಾತ್ರೆ ಸಮಯಗಳಲ್ಲಿ ಜನಪದ ಕಲಾವಿದರು ಇವುಗಳನ್ನು ಹಾಡುತ್ತಾರೆ. ನಾಟಕೀಯವಾಗಿ ಪುರಾಣ ಕಥೆಯನ್ನು ಪ್ರಸ್ತುತಪಡಿಸುತ್ತಾರೆ. ಹಾಗಾಗಿ ಜನಪದ ಮಹಾಕಾವ್ಯ ದೇಶದ ಪುರಾಣವಾಗಿಯೇ ಇರುತ್ತದೆ.

ಹೀಗೆ ಕಥನಗೀತೆ, ಲಾವಣಿ, ಖಂಡಕಾವ್ಯ, ಮಹಾಕಾವ್ಯಗಳು ಒಂದಕ್ಕೊಂದು ಅಂಟಿಕೊಂಡು ಬೆಳವಣಿಗೆಯಾಗುತ್ತ ಸ್ವರೂಪದಲ್ಲಿ ಬದಲಾವಣೆಯಾಗುತ್ತ ತಮ್ಮದೇಯಾದ ವೈಶಿಷ್ಟ್ಯತೆಯಿಂದ ಕನ್ನಡ ಜನಪದ ಸಾಹಿತ್ಯದಲ್ಲಿ ದಾಖಲಾಗಿವೆ.

---

೨. ಕನ್ನಡ ಜನಪದ ಸಾಹಿತ್ಯ : ಜಿ.ಎಸ್. ಭಟ್ಟ, ಪು.೭೫

ಅಧ್ಯಾಯ–೧
ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಸ್ವರೂಪ ಮತ್ತು ವೈಧಾನಿಕತೆ

೧.೧. ಅಧ್ಯಯನದ ಉದ್ದೇಶ
೧.೨. ಅಧ್ಯಯನದ ಮಹತ್ವ
೧.೩. ಅಧ್ಯಯನದ ವ್ಯಾಪ್ತಿ–ಸ್ವರೂಪ
೧.೪. ಅಧ್ಯಯನದ ವೈಧಾನಿಕತೆ

ಅಧ್ಯಾಯ - ೧

ಅಧ್ಯಯನದ ಉದ್ದೇಶ-ವ್ಯಾಪ್ತಿ-ಸ್ವರೂಪ-ವಿಧಾನ ಮತ್ತು ಮಹತ್ವ

ಜನಪದ ಕಾವ್ಯಗಳಲ್ಲೊಂದಾದ ಹಾಡಿನ ರೂಪದಲ್ಲಿರುವ ಕಥೆಗಳನ್ನು ಕಥನ ಗೀತೆಗಳೆಂದು ಕರೆಯಲಾಗುತ್ತದೆ. ಜನಪದರು ತಾವು ಕೇಳಿದ ಮತ್ತು ಕೆಲವೊಮ್ಮೆ ನೋಡಿದ ಪುರಾಣ, ಪವಾಡ, ಪರಾಕ್ರಮ, ತ್ಯಾಗ-ಬಲಿದಾನವಲ್ಲದೆ ಕುಟುಂಬದ ಸಾಮಾಜಿಕ, ಧಾರ್ಮಿಕ, ಸುಖ-ದುಃಖದ ಸಂದರ್ಭಗಳಿಗೆ ಸಹಜವಾಗಿ ಸ್ಪಂದಿಸಿ ಅಂತಹ ಘಟನೆಗಳನ್ನು ಕಥಾನಕಗಳಾಗಿ ವಿವರವಾಗಿ ಸೆರೆಹಿಡಿದು; ಹಾಡಿಗೆ ತಿರುಗಿಸಿ ಮನಮೋಹಕವಾಗಿ, ಹೃದಯಸ್ಪರ್ಶಿಯಾಗಿ ಹಾಡುತ್ತಾ ಬಂದ ಗೀತೆಗಳೇ ಜನಪದ ಕಥನಗೀತೆಗಳು. ಕನ್ನಡದಲ್ಲಿ ಜನಪದ ಕಥನಗೀತೆಗೆ ಜನಪದ ಕಥನ ಕಾವ್ಯ, ಕಥಾಗೀತ, ನೀಳ್ಗವಿತೆ, ಪದ್ಯಕಥೆ, ಕಾವ್ಯಕಥೆ, ಖಂಡಕಾವ್ಯ, ಲಾವಣಿ ಎಂಬ ಹೆಸರುಗಳನ್ನು ಬಳಸುವ ಗೀತೆಗಳಲ್ಲಿ ಕಥನಗೀತೆ ಬಹಳ ಮುಖ್ಯವಾದ ಭಾಗವಾಗಿದೆ.

ತಾವು ಕೇಳಿದ, ತಿಳಿದ ಅಥವಾ ಕಂಡಂತಹ ಒಂದು ಘಟನೆಯ ಹಿನ್ನೆಲೆಯಲ್ಲಿ ಬೇರುಬಿಟ್ಟ ಪವಾಡ, ನಂಬಿಕೆ, ಕ್ರಿಯಾಚರಣೆಗಳಿಗೆ ತಾನು ಬದ್ಧ ಎನ್ನುವ ಆಂತರಿಕ ಪ್ರೇರಣೆಯಿಂದ ಕಥನಗೀತೆಗಳು ನಿರೂಪಿತವಾಗುತ್ತವೆ. ಮತ್ತು ಜನಪದರ ಸೃಜನಶೀಲ ಚಿತ್ತಸ್ಫುಟಗೊಂಡು ತಂಡೋಪತಂಡವಾಗಿ ಮೋಡಗಳು ಮುಗಿಲಲ್ಲಿ ಗೂಡುಗಟ್ಟಿ ನಿಲ್ಲುವಂತೆ ಅವರಲ್ಲಿ ಒಂದು ಪ್ರತ್ಯೇಕ ವಸ್ತು, ಪಾತ್ರ ಮತ್ತು ಸನ್ನಿವೇಶಗಳು ಒಟ್ಟುಗೂಡಿ ಮಂಡಲ ಮಂಡಲವಾದ ಕಥನಗೀತೆಗಳನ್ನು ಕಾಣಬಹುದು. ಮಾಂತ್ರಿಕ ಪರಿಸರದ ಪವಾಡಗಳನ್ನು ವರ್ಣಿಸುವಾಗ ವಿಸ್ಮಯ, ಚಾರಿತ್ರಿಕ ಹಿನ್ನೆಲೆಯ ಪರಾಕ್ರಮವನ್ನು ವಿವರಿಸುವಾಗ ಬಲೆ ಅಥವಾ ಸನ್ನಿವೇಶಕ್ಕೆ ತಕ್ಕ ಮೆರಗು ಕೊಡುವಷ್ಟು ವರ್ಣನೆ ಕಥಾ ಮುಖವನ್ನು ನೇರವಾಗಿ ಶ್ರೋತೃಗಳ ಗಮನಕ್ಕೆ ತರುವ ಕಲಾ ಕೌಶಲ್ಯ ಕಂಡುಬರುತ್ತದೆ. ಹಂತ ಹಂತವಾಗಿ ತೀವ್ರಗತಿಯ ಘಟನೆಗಳ ಸಂಯೋಜನೆ ವಿವಿಧ ಪಾತ್ರಗಳ ಮನೋದ್ದೇಶಗಳ ಏರಿಳಿತ ಹೀಗೆ ಒಂದು ನಿರ್ದಿಷ್ಟ ಗುರಿಯತ್ತ ಕಥನಗೀತೆಗಳು ಮುಂದುವರಿಯುತ್ತವೆ.

ಹೆಸರೇ ಸೂಚಿಸುವಂತೆ ಈ ಗೀತೆಗಳು ಕಥೆಯಾಧಾರಿತವಾಗಿವೆ. ಕಥೆಯೇ ಹಾಡಿನ ರೂಪದಲ್ಲಿ ನಿರೂಪಿಸಲ್ಪಡುತ್ತದೆ. ಹಾಡು ಸಂವಾದ ರೂಪದಲ್ಲಿ ಯಾರೋ ಒಬ್ಬರು ನಿರೂಪಿಸಿದಂತೆ ಕಂಡುಬರುತ್ತದೆ. ಇಲ್ಲಿ ವರ್ಣನೆಯಷ್ಟೇ ಮುಖ್ಯವಲ್ಲ; ಪಾತ್ರ ರಚನೆ ಮತ್ತು ಕ್ರಿಯೆಗಳು ಮುಖ್ಯ. ಇದರಲ್ಲಿ ಒಬ್ಬ ವ್ಯಕ್ತಿಯ ಬದುಕಿನ ಸ್ವಾರಸ್ಯಕರವಾದ ಘಟನೆ ಇದ್ದು

ಸನ್ನಿವೇಶಕ್ಕೆ ಅನುಗುಣವಾಗಿ ಕಥೆ ಸುಲಭವಾಗಿ ಜರುಗುತ್ತಿರುತ್ತದೆ. ಉಳಿದ ಪಾತ್ರಗಳೆಲ್ಲವೂ ಪೋಷಕವಾಗಿ ಕಂಡುಬರುತ್ತವೆ. ಕಥೆ ಕಲ್ಪನೆಗಿಂತ ಹೆಚ್ಚು ನಿತ್ಯ ಬದುಕಿನ ಸತ್ಯ ಕಥೆಯನ್ನು ತಿಳಿಸಲಾಗುತ್ತದೆ. ಹೆಣ್ಣಾಗಲಿ ಗಂಡಾಗಲಿ ಕಥನಗೀತೆಗಳನ್ನು ಹಾಡುತ್ತಿದ್ದಾಗ ಕಥೆಯು ವೇಗವಾಗಿ ಚಲಿಸುವುದನ್ನು ಕಾಣುತ್ತೇವೆ. ಸಂಗೀತವೇ ಅವಿಭಾಜ್ಯ ಅಂಗವೆಂಬಂತಿರುವ ಕಥನಗೀತೆಗೆ ಆಕರ್ಷಕವಾದ ಪಲ್ಲವಿಗಳು ಕೆಲವೊಂದರಲ್ಲಿ ಕಂಡುಬರುತ್ತವೆ.

ಸಂತೋಷ–ದುಃಖಕ್ಕೆ ಸಂಬಂಧಪಟ್ಟಂತಹ ಕಥನಗೀತೆಗಳಲ್ಲಿ ಲಯದ ಏರಿಳಿತಗಳಿದ್ದು, ಧಾಟಿಯಲ್ಲಿ ವ್ಯತ್ಯಾಸ ಕಂಡುಬರುತ್ತವೆ. ತ್ಯಾಗ ಬಲಿದಾನಗಳಿಗೆ ಹೆಸರಾದ ಅಪಾರ ಸಂಖ್ಯೆಯ ಕಥನಗೀತೆಗಳನ್ನು ಹಾಡುವವರು ಕಂಸಾಳೆ, ತಾಳ, ದಮ್ಮಡಿ, ಚೌಡಕಿ, ಕಿನ್ನರಿ, ಏಕತಾರಿ, ಗಣೆ, ಗುಮ್ಮಟೆ, ಗಗ್ಗರ ಗೆಜ್ಜೆ ಮೊದಲಾದವುಗಳನ್ನು ಬಳಸುತ್ತಾರೆ. ಕನ್ನಡ ಜನಪದ ಕಥನಗೀತೆಗಳ ರಾಶಿ ಅಪರಿಮಿತವಾಗಿದ್ದು ಐತಿಹಾಸಿಕ ಘಟನೆಗಳ ಸಾಮಾಜಿಕ ಸಂಗತಿಗಳ ಹಿನ್ನೆಲೆಯಲ್ಲಿ ರಚಿತವಾದ ಕಥನಗೀತೆಗಳಲ್ಲಿ ಸುಖಾಂತಗಳೂ ಉಂಟು; ದುಃಖಾಂತಗಳೂ ಉಂಟು. ಸೂಕ್ಷ್ಮವಾಗಿ ಪರಿಶೀಲಿಸಿದರೆ ದುಃಖಾಂತವೇ ಆಗಿರುವ ಅನೇಕ ಕಥನಗೀತೆಗಳು ಆಯಾ ಸಂದರ್ಭಗಳ ಕೊನೆಯಲ್ಲಿ ದೇವತೆಗಳ ಪ್ರವೇಶವು ದುರಂತಕ್ಕೆ ಈಡಾದ ವ್ಯಕ್ತಿಯ ವೈಭವೀಕರಣದಿಂದಾಗಿ ಪರಿವರ್ತಿಸಿಕೊಳ್ಳುವ ದೈವೀ ಸ್ವರೂಪದಿಂದಲೆ ಸುಖಾಂತವಾಗುತ್ತದೆ.

ಕಥನಗೀತೆಗಳಲ್ಲಿ ಬರುವ ಬಹುಮಟ್ಟಿನ ಸ್ತ್ರೀ ಪಾತ್ರಗಳು ಒಂದೊಂದು ವಿಭಿನ್ನ ನೆಲೆಯಲ್ಲಿ ಪ್ರತಿಪಾದಿಸುತ್ತವೆ. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ರೂಪಗೊಂಡ ತ್ಯಾಗ, ಬಲಿದಾನ, ಸಹಗಮನ, ಪಾತಿವ್ರತ್ಯಕ್ಕೆ ಸಂಬಂಧಿಸಿದಂತೆ ಕೆಲವು ಸ್ತ್ರೀ ಪಾತ್ರಗಳನ್ನು ಗುರುತಿಸಿದರೆ ಇನ್ನೂ ಕೆಲವು ಮಹಿಳಾ ಪಾತ್ರಗಳು ಮಾನವ ಸಹಜವಾದ ಕಾಮ, ಕ್ರೋಧ, ರಾಗ, ದ್ವೇಷಗಳಿಗೆ, ಸಾಹಸಕ್ಕೆ ಸಂಬಂಧಿಸಿವೆ.

೧.೧. ಅಧ್ಯಯನದ ಉದ್ದೇಶ:

ಕಥನಗೀತೆಗಳನ್ನು ಕುರಿತು ಇಲ್ಲಿಯವರೆಗೆ ಹಲವಾರು ಸಂಶೋಧನೆಗಳು ನಡೆದಿವೆ. ಆದಾಗ್ಯೂ ಈ ಕ್ಷೇತ್ರ ವಿಶಾಲವಾದ ಹರಹುವನ್ನು ಹೊಂದಿದ್ದು, ಅಗೆದಷ್ಟು ಹೊಸದನ್ನು ಕಾಣಿಸುವ ವಿಪುಲ ಅವಕಾಶಗಳನ್ನು ಹೊಂದಿದೆ. ಆದ್ದರಿಂದ ಕಥನಗೀತೆಗಳ ಬಗ್ಗೆ ವಿಭಿನ್ನ ದೃಷ್ಟಿಕೋನದಲ್ಲಿ ಸಂಶೋಧನೆಯನ್ನು ಕೈಗೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಜನಪದ ಕಥನಗೀತೆಗಳನ್ನು ಕೇವಲ ಸಾಂಪ್ರದಾಯಿಕ ದೃಷ್ಟಿಕೋನದಿಂದ ಅಭ್ಯಸಿಸಿದರೆ ಸಮಂಜಸವಾಗದು. ಏಕೆಂದರೆ ಅದರಲ್ಲಿ ಒಂದು ಪ್ರದೇಶದ ಜನರ ಜೀವನ, ಆಚಾರ-ವಿಚಾರ ಅಲ್ಲಿ ಬದುಕುವ ಒಟ್ಟು ಸಂಸ್ಕೃತಿ ಲಿಂಗ ತಾರತಮ್ಯದ ಹಿನ್ನೆಲೆಯಲ್ಲಿ ನಿರೂಪಿತವಾಗಿವೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಮಹಿಳೆ ಬದುಕಲಾರದೆ, ಪ್ರತಿಭಟಿಸಲಾರದೆ ಜೀವವನ್ನು ತ್ಯಾಗ ಮಾಡಿದ್ದಾಳೆ. ಆದ ಕಾರಣ ಮಹಿಳಾ ಚಿಂತನೆಯ ಮೂಲಕ ಅಭ್ಯಸಿಸಿ ವೈಚಾರಿಕ ನೆಲೆಯಲ್ಲಿ ಸತ್ಯಾಂಶವನ್ನು ಪ್ರತಿನಿಧಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

'ಸಾಹಿತ್ಯ ಪರಿಸರದ ಕೂಸು' ಆಯಾ ಕಾಲಕ್ಕೆ ತಕ್ಕಂತೆ ಸಾಮಾಜಿಕ ಪರಿಸರ ವಿಭಿನ್ನವಾಗಿ ಇರುತ್ತದೆ. ಆ ಕಾರಣ ಎಲ್ಲ ಸಾಹಿತ್ಯಗಳಲ್ಲಿಯೂ ಕೂಡ ಇದು ಅಭಿವ್ಯಕ್ತವಾಗಿರುತ್ತದೆ. ಕನ್ನಡ ಜನಪದ ಕಥನಗೀತೆಗಳು ಇದಕ್ಕೆ ಹೊರತಾಗಿಲ್ಲ. ಇವುಗಳ ಮುಖಾಂತರ ಅಂದಿನ ಸಾಮಾಜಿಕ ಪರಿಸರ, ಸ್ತ್ರೀ ನೆಲೆಯ ಆಳವನ್ನು ಪುನರ್ ವಿಮರ್ಶಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಕಥನಗೀತೆಗಳು ಸ್ತ್ರೀಪಾತ್ರ ಪ್ರಧಾನವುಳ್ಳವುಗಳಾಗಿವೆ. ಹಿಂದಿನ ಕಾಲದಿಂದಲೂ ಸ್ತ್ರೀಯರಿಗಿದ್ದ ಸ್ಥಾನಮಾನಗಳನ್ನು, ಸಮಾಜ ಅವರನ್ನು ಹೇಗೆ ಉಪಯೋಗ ಮತ್ತು ದುರುಪಯೋಗಪಡಿಸಿಕೊಂಡಿದೆ ಮತ್ತು ಪುರುಷ ಪ್ರಧಾನ ಸಮಾಜ ಸೃಷ್ಟಿಸಿದ ನಂಬಿಕೆ, ಸಂಪ್ರದಾಯಗಳಿಗೆ ಮಹಿಳೆಯರು ಹೇಗೆ ತಮ್ಮನ್ನು ತಾವೇ ಬಲಿಕೊಟ್ಟುಕೊಂಡಿದ್ದಾರೆ ಎಂಬುದನ್ನು ತಿಳಿಸುವುದು ಸಹ ಅಧ್ಯಯನದ ಉದ್ದೇಶಗಳಲ್ಲೊಂದು. ಅಷ್ಟೇ ಅಲ್ಲದೆ ಮಹಿಳೆಯರದು ಕೂಡ ಈ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವಿದೆ ಎಂಬುದನ್ನು ತಿಳಿಸುವುದು ಸಹಿತ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಜನಪದ ಕಥನಗೀತೆಗಳಲ್ಲಿ ಮಹಿಳೆ ನಂಬಿಕೊಂಡು ಬಂದ ಮೂಢ ಆಚರಣೆಗಳನ್ನು ತಿಳಿಸುವುದರೊಂದಿಗೆ ಮಹಿಳೆಯರ ಪ್ರಗತಿಪರ ವಿಚಾರಗಳತ್ತ ಗಮನಹರಿಸಬೇಕಾದ ಅವಶ್ಯಕತೆಯನ್ನು ತಿಳಿಸುವ ಸದುದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಪ್ರಾಚೀನ ಕಾಲದಿಂದಲೂ ಹೆಣ್ಣಿನ ಬದುಕು ಮತ್ತು ಸ್ಥಾನ-ಮಾನಗಳು ಪುರುಷರ ಅಧೀನಕ್ಕೆ ಒಳಗಾಗಿಯೇ ಬೆಳೆದುಕೊಂಡು ಬಂದಿದೆ. ಬದುಕು ಹಸನಾಗಲು, ಭೂಮಿ ಸಂತುಷ್ಟಿಯಿಂದಿರಲು ಹೆಣ್ಣು ಪೂಜಿಸಲ್ಪಡಬೇಕು ಎಂಬುದು ಒಂದು ಅಭಿಪ್ರಾಯವಾದರೆ, ಸ್ತ್ರಿ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಮಾತು ಮತ್ತೊಂದು ಕಡೆ ಕಾಣಿಸುತ್ತದೆ. ಪಂಚ

ಪತಿವ್ರತೆಯರನ್ನು ಸೃಷ್ಟಿ ಮಾಡಿ ಅವರಿಗೊಂದು ದೊಡ್ಡ ಸ್ಥಾನವನ್ನು ಕಲ್ಪಿಸಿಕೊಟ್ಟು, ವಿಶೇಷಣಗಳನ್ನು ಹಚ್ಚಿದ ಸಮಾಜದಲ್ಲಿಯೇ ಹೆಣ್ಣು ಅನಾದರಕ್ಕೊಳಗಾಗಿದ್ದಾಳೆ. ಹೆಣ್ಣನ್ನು ಹೇಗೆಂದರೆ ಹಾಗೆ ದುರುಪಯೋಗಪಡಿಸಿಕೊಂಡು ಭೋಗದ ವಸ್ತುವಾಗಿಯೇ ಜೀವನ ಮಾಪನ ಮಾಡಿದ ಸಂದರ್ಭಗಳೇ ಹೆಚ್ಚು. ಇದಲ್ಲದೇ ಪ್ರಾಚೀನ ಕಾಲದಿಂದಲೂ ಬಾಲ್ಯವಿವಾಹ, ದೇವದಾಸಿ ಪದ್ಧತಿ ಸಾರ್ವಜನಿಕ ಹಿತಕ್ಕಾಗಿ ಮಹಿಳೆಯನ್ನು ಬಲಿಕೊಡುವುದು, ಅನುಗಮನ ಮತ್ತು ಸಹಗಮನದಂತಹ ಅನಿಷ್ಟ ಪದ್ಧತಿಗಳು ರೂಢಿಯಲ್ಲಿದ್ದವು. ಆದ್ದರಿಂದ ಎಲ್ಲ ಕಥನಗೀತೆಗಳಲ್ಲಿ ಮಹಿಳೆ ಯಾವ ರೀತಿ ಪ್ರತಿನಿಧಿಸಲ್ಪಟ್ಟಿದ್ದಾಳೆ ಎಂಬುದನ್ನು ಮತ್ತು ಮಹಿಳಾವಾದದ ದೃಷ್ಟಿಕೋನದಿಂದ ನೋಡುವ ಮೂಲಕ ಕನ್ನಡ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿಭಿನ್ನ ನೆಲೆಗಳನ್ನು ಅಭ್ಯಸಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

ಶತಶತಮಾನಗಳಿಂದ ಸಮಾಜ ವ್ಯವಸ್ಥೆಯ ಜಾಲದಲ್ಲಿ ಸಿಲುಕಿರುವ ಮಹಿಳಾಲೋಕದ ಸಮಸ್ಯಾತ್ಮಕ ಸ್ಥಿತಿಗಳನ್ನು ಅರ್ಥಮಾಡಿಕೊಳ್ಳಬೇಕೆಂದರೆ ತೀವ್ರವಾದ ಅಧ್ಯಯನವನ್ನಾಧರಿಸಿದ ಗಂಭೀರ ಚಿಂತನೆಗಳಿಗೆ ಅವಕಾಶ ಒದಗಿಬರಬೇಕು. ಸಮಸ್ಯೆಗಳು ಎಷ್ಟು ಹಳೆಯವೋ ಅಷ್ಟೇ ಹೆಣ್ಣಿನ ದುಃಖವೂ ಹಳೆಯದಾಗಿದೆ. ತನ್ನ ದುಃಖವನ್ನು ಹಂಚಿಕೊಳ್ಳುವ ಅವಕಾಶದಿಂದ ವಂಚಿತವಾಗಿರುವುದು ಹಳೆಯದೇ. ಸ್ವಂತ ಅಸ್ತಿತ್ವವಿದೆ ಎಂಬುದನ್ನೇ ವಿಸ್ಮೃತಿಗೆ ತಳ್ಳಿಹಾಕುವ ಸಮಾಜದ ಪ್ರೇರಣೆಗೆ ಗುರಿಯಾದ ಮಹಿಳೆ ಹೆಣ್ಣು ಜನ್ಮವನ್ನೇ ನಿಂದಿಸಿಕೊಂಡು ಮೌನಿಯಾದಳು. ಹಾಗಾಗಿ ಸ್ತ್ರೀವಾದಿ ಚಿಂತನೆ ಮೂಲಕ ಮಹಿಳಾ ಬದುಕಿನ ಸ್ಥಿತಿಗತಿಗಳನ್ನು ಅರಿಯುವ, ಅಲ್ಲಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಶೋಧಿಸುವ ಉದ್ದೇಶವನ್ನು ಹೊಂದಿದೆ.

ಜಗತ್ತಿನಾದ್ಯಂತ ಪುರುಷ ಪ್ರಧಾನ ಸಂಸ್ಕೃತಿಯೇ ಕಂಡುಬರುತ್ತಿದೆ. ಇಂತಹ ಸಂಸ್ಕೃತಿಯಲ್ಲಿ ಪುರುಷನ ಅಧೀನಳಾಗಿ ಬದುಕುವ ಹೆಣ್ಣಿನ ಸ್ಥಾನ ಹೀನಾಯವಾದುದು. ಹೆಣ್ಣು ಕೀಳು ಎಂಬ ಭಾವನೆ ಸಮಾಜದಲ್ಲಿ ನೆಲೆಯೂರಿ ಬಿಟ್ಟಿದೆ. ಜೊತೆಗೆ ಕೆರೆ, ಕೋಟೆ ಇತ್ಯಾದಿಗಳಿಗೆ ಮಹಿಳೆಯರನ್ನೇ ಬಲಿ ನೀಡುವ ಮೂಲಕ ಪಕ್ಷಪಾತ ಧೋರಣೆ ಇನ್ನಷ್ಟು ಹೆಚ್ಚಿದೆ. ಹೀಗೆ ಸಮಾಜದ ಎಲ್ಲ ಅನಿಷ್ಟ ಪರಂಪರೆಗೂ ಗುರಿಯಾಗುತ್ತಾ ಕೌಟುಂಬಿಕ, ಸಾಮಾಜಿಕ ಶೋಷಣೆಯನ್ನು ಸಹಿಸಿಕೊಳ್ಳುತ್ತಾ ಮಹಿಳೆ ಬದುಕುಳಿದಿರುವುದೇ ಸೋಜಿಗದ ಸಂಗತಿ. ಅಂತಹ ಪರಿಸ್ಥಿತಿಯಲ್ಲೂ ಜೀವಿಸಬೇಕೆಂಬ ಆಕಾಂಕ್ಷೆಯೊಂದಿಗೆ ಅವಳು ಬಾಳಿನಲ್ಲಿ ಅದಮ್ಯ ಉತ್ಸಾಹ, ಪ್ರೀತಿಗಳನ್ನು ತೋರಿಸುತ್ತಾ ಬಂದಿದ್ದಾಳೆ. ಈ ಎಲ್ಲ ಅಂಶಗಳನ್ನು ಆಧರಿಸಿ

ಕಥನಗೀತೆಗಳಲ್ಲಿ ಮಹಿಳಾಲೋಕದ ವಿಭಿನ್ನ ನೆಲೆಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಈ ಮಹಾಪ್ರಬಂಧ ಹೊಂದಿದೆ ಮತ್ತು ಮಹಿಳೆಯರ ಶೋಷಣೆ, ಕಷ್ಟ ಪರಂಪರೆಗಳ ಕತ್ತಲ ಜೀವನ, ಬಲಿಯಾಗುವ ರೀತಿ ಒಂದೊಂದು ಕಥನಗೀತೆಗಳಲ್ಲಿ ಆಶಯ ಜೀವನ ವಿಭಿನ್ನ ರೀತಿಯಲ್ಲಿ ಕಂಡುಬರುತ್ತವೆ. ಅದನ್ನು ಸ್ಥೂಲವಾಗಿ ಅಭ್ಯಸಿಸಿ ಸಂಶೋಧನೆ ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ.

ಜನಪದರ ದಿನನಿತ್ಯದ ವಿವಿಧ ಕಾರ್ಯಚಟುವಟಿಕೆಗಳೊಡನೆ ಹೊಮ್ಮಿಬಂದ ಸಾಹಿತ್ಯ ಜನಪದ ಸಾಹಿತ್ಯವಾಗಿದ್ದು, ಕ್ರಿಯೆ ಮೂಲಕ ಆರಂಭವಾದ ಈ ಸಾಹಿತ್ಯ ಮಹಾಕಾವ್ಯಗಳವರೆಗೆ ಹೊರಹೊಮ್ಮಿದೆ. ಜನಾಂಗವನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಒಂದೇ ಮಾರ್ಗದಲ್ಲಿ ಮುನ್ನಡೆಸಿಕೊಂಡು ಆಯಾ ಜನಾಂಗಗಳು ತಮ್ಮ ಬದುಕಿನಲ್ಲಿ ನಂಬಿದ ಜೀವನದ ಮೌಲ್ಯಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಭದ್ರಪಡಿಸಿವೆ. ಆದ್ದರಿಂದ ಒಂದು ಆತಂಕವು ನಮ್ಮೆಲ್ಲರಿಗೂ ಎದುರಾಗುತ್ತದೆ. ಏಕೆಂದರೆ ಮೌಲ್ಯಗಳು ಪರಿವರ್ತನೆಯ ಗುಣಗಳನ್ನು ಹೊಂದಿರುವುದು. ಒಂದು ಜನಾಂಗ ಅಥವಾ ಸಮುದಾಯ ನಂಬಿ ಒಪ್ಪಿಕೊಂಡು ಬಂದ ಮೌಲ್ಯಗಳು ಕೆಲವೊಂದು ಚಿರಕಾಲ ಉಳಿದರೆ ಕೆಲವೊಂದು ಬದಲಾವಣೆಗೆ ಕಾರಣವಾಗುತ್ತದೆ. ಇನ್ನೂ ಕೆಲವೊಂದನ್ನು ಕೈಬಿಡಬೇಕಾದ ಪರಿಸ್ಥಿತಿಯು ಎದುರಾಗುತ್ತದೆ. ಇವೆಲ್ಲವುಗಳನ್ನು ತೌಲನಿಕವಾಗಿ ಕಥನಗೀತೆಗಳಲ್ಲಿ ಅಭ್ಯಸಿಸಿ ತಾತ್ವಿಕ ನೆಲೆಯಲ್ಲಿ ಅಧ್ಯಯನ ಕೈಗೊಳ್ಳುವ ಉದ್ದೇಶವನ್ನೊಳಗೊಂಡಿದೆ.

ದೇವತೆಗಳ ಸಂತೃಪ್ತಿಗಾಗಿ ಮತ್ತು ಕೋಟೆಯ ಭದ್ರತೆಗೆ ಮಹಾಸತಿ, ಕೆರೆಗೆಹಾರ ಹೀಗೆ ಮುಂತಾದ ನಂಬಿಕೆಗಳನ್ನು ಕಾಲಾಂತರದಲ್ಲಿ ಕೈಬಿಡಲಾಗಿ ಜನಪದ ಶಿಷ್ಟಪದಕ್ಕೆ ವಾಲುತ್ತಿದ್ದಂತೆ ಜನಾಂಗಗಳಲ್ಲಿ ನಾಡಿಗಾಗಿ, ರಾಷ್ಟ್ರಕ್ಕಾಗಿ ಹೋರಾಡಿ ಮಡಿದ ವೀರರ ಚರಿತ್ರೆಗಳು ಜನಪದ ಗರ್ಭದಲ್ಲಿ ಅಂಕುರಿಸಿದವು. ಅವುಗಳಲ್ಲಿರುವ ಮೌಲ್ಯಗಳು ಪ್ರಸ್ತುತ ದಿನಮಾನಕ್ಕೆ ಅವಶ್ಯಕವಾಗಿವೆ. ಅಂತಹ ಮೌಲ್ಯಗಳನ್ನು ಕಥನಗೀತೆಗಳ ಮೂಲಕ ಸಮಾಜಕ್ಕೆ ಅವುಗಳ ಮಹತ್ವವನ್ನು ತಿಳಿಸುವ ಉದ್ದೇಶವನ್ನು ಕೂಡ ಈ ಅಧ್ಯಯನ ಹೊಂದಿದೆ.

ಜನರ ನಂಬಿಕೆಗಳು, ಸಂಪ್ರದಾಯಗಳು, ಪದ್ಧತಿಗಳು ಉತ್ತಮ ಸಮಾಜದ ದಾರಿದೀಪವಾಗಿದ್ದರೆ ಅವುಗಳನ್ನು ಅಳವಡಿಸಿಕೊಳ್ಳುವುದು ಸೂಕ್ತ. ಕೆಲವೊಂದು ಆಚರಣೆ, ಪದ್ಧತಿಗಳಿಂದ ಜನರನ್ನು ದಿಕ್ಕು ತಪ್ಪುವಂತೆ ಮಾಡುತ್ತದೆ. ಅದರಲ್ಲೂ ಮಹಿಳೆಯರಿಗೆ ವಿಧಿಸಿದಂತಹ ಆಚರಣೆಗಳು; ಪದ್ಧತಿಗಳು ಶಾಪದಂತೆ ಇನ್ನೂ ಅಂಟಿಕೊಂಡೇ ಇವೆ.

ಅವುಗಳಿಂದ ಮುಕ್ತಿ ಹೊಂದಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಈ ಪದ್ಧತಿ, ಆಚರಣೆಗಳ ಹೆಸರಿನಲ್ಲಿ ಬಹಳಷ್ಟು ಮಹಿಳೆಯರು ಶೋಷಣೆಗೆ ಈಡಾಗುತ್ತಿರುವರು. ಹಾಗಾಗಿ ಪ್ರಾಚೀನ ಕಾಲದಿಂದಲೂ ಒಂದಿಲ್ಲೊಂದು ಆಚರಣೆಗಳಿಗೆ, ಸಂಪ್ರದಾಯಗಳಿಗೆ ಬಲಿಯಾಗಿ ಮಹಿಳೆ ನೊಂದು-ಬೆಂದು-ಕಮರಿ ಹೋಗಿದ್ದಾಳೆ. ಆದ್ದರಿಂದ ಆಚರಣೆಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶವನ್ನು ಈ ಮಹಾಪ್ರಬಂಧ ಹೊಂದಿದೆ.

೧.೨. ಅಧ್ಯಯನದ ಮಹತ್ವ :

ಕನ್ನಡ ಸಾಹಿತ್ಯದಲ್ಲಿ ಸ್ತ್ರೀಪರತೆಯ ವಿಕಾಸವನ್ನು ಗಮನಿಸುವುದಕ್ಕಿಂತ ಪೂರ್ವದಲ್ಲಿ ಅಕ್ಷರ ಪ್ರಪಂಚಕ್ಕೆ ಸಮಾನಾಂತರವಾಗಿ ಬೆಳೆದ ಮೌಖಿಕ ಪರಂಪರೆಯನ್ನು ಗಮನಿಸಬೇಕಾಗುತ್ತದೆ. ಮೌಖಿಕ ಪರಂಪರೆಯಲ್ಲಿ ಕಥನ ಕಲೆಯು ಮಹಿಳೆಗೆ ಸಹಜವಾಗಿ ಸಿದ್ಧಿಸಿದ ಅಭಿವ್ಯಕ್ತಿ ಕಲೆ. ಜನಪದ ಕಾವ್ಯಗಳಲ್ಲೂ ಕೂಡ ಈ ಕಥನ ಕ್ರಮವೇ ಪ್ರಮುಖವಾಗಿ ಎದ್ದು ಕಾಣಿಸುತ್ತದೆ. ಶಿಕ್ಷಣದಿಂದ ಬಹುಕಾಲ ವಂಚಿತಳಾಗಿಯೇ ಉಳಿದ ಮಹಿಳೆ ಮೌಖಿಕ ನೆಲೆಯಲ್ಲಿ ತನ್ನದೆಯಾದ ಭಿನ್ನ ಅಭಿವ್ಯಕ್ತಿ ಕ್ರಮವನ್ನು ರೂಢಿಸಿಕೊಂಡಿರುವುದನ್ನು ಗಮನಿಸಬಹುದು. ಈ ಮೌಖಿಕ ನೆಲೆಯಲ್ಲಿ ಮಹಿಳೆ ಪಡೆದುಕೊಂಡ ಅಭಿವ್ಯಕ್ತಿ ಸ್ವಾತಂತ್ರ್ಯವು ಗಮನಾರ್ಹವಾದುದು. ಇಲ್ಲಿ ಸ್ತ್ರೀ ತನ್ನ ಕುರಿತು ಮಾತನಾಡುತ್ತಲೇ ಇಡೀ ಮಹಿಳಾ ಲೋಕವನ್ನು ಕುರಿತು ಚಿಂತಿಸುವುದನ್ನು ಕಾಣಬಹುದು. ಹಾಗಾಗಿಯೇ ಶಿಷ್ಟ ಸಾಹಿತ್ಯದಲ್ಲಿ ಕಾಣಸಿಗದ ಮಹಿಳೆಯ ವಿಶಿಷ್ಟ ಅನುಭವ ಲೋಕವು ಜನಪದ ಸಾಹಿತ್ಯದಲ್ಲಿ ಸಿಗುತ್ತದೆ. ಸಾಮಾಜಿಕ ಚಳುವಳಿಯ ಬೆಂಬಲವಾಗಲಿ, ಹೊನ್ನಮ್ಮನಂತೆ ರಾಜಾಶ್ರಯವಾಗಲಿ ಇಲ್ಲದ ಸಾಮಾನ್ಯ ಹಿನ್ನೆಲೆಯಿಂದ ಬಂದ ಈ ಕವಯಿತ್ರಿಯರು ತಮ್ಮ ಅಭಿವ್ಯಕ್ತಿಯನ್ನು ಸಾಧಿಸಿದ್ದೇ ಒಂದು ಮಹತ್ವದ ಮೈಲುಗಲ್ಲಾಗಿದೆ.

ಕಥನಗೀತೆಗಳಲ್ಲಿ ಕಂಡುಬರುವ ಬಹುಮಟ್ಟಿನ ಪಾತ್ರಗಳು ಮಹಿಳೆಯರ ಪಾತ್ರಗಳು, ಒಂದೊಂದು ಕಥನಗೀತೆ ಸಮಾಜದ ಕಟ್ಟಳೆಗೆ ಭಾಸವಾಗಿ ರಚಿತವಾಗಿದೆ. ತ್ಯಾಗ, ಬಲಿದಾನ, ಸಹಗಮನ, ಪಾತಿವ್ರತ್ಯಕ್ಕೆ ಸಂಬಂಧಿಸಿದಂತಹ ಪಾತ್ರಗಳನ್ನು ಕಾಣಬಹುದು. ಕಾಮ, ಕ್ರೋಧ, ರಾಗ, ದ್ವೇಷ, ಬಂಜೆತನ, ವೈಧವ್ಯ, ಸವತಿ ಮಾತ್ಸರ್ಯ, ರಹಸ್ಯ ಪ್ರಣಯ, ಗುರುವಿನ ಉಪಟಳ ರಸಿಕತೆಗೆ ಸಂಬಂಧಿಸಿದಂತಹ ಕಥನಗೀತೆಗಳನ್ನೂ ಕಾಣುತ್ತೇವೆ. ಜನಪದರು ದೈವೀ ಸಂಬಂಧವನ್ನು ಕೂಡಾ ಎತ್ತಿ ಹಿಡಿದಿದ್ದಾರೆ. ಅಂದರೆ ಆಸೆ, ಪ್ರೇಮ, ಕಾಮ, ವಿರಹ, ಕೋಪ, ತಾಪ, ಮಾತ್ಸರ್ಯ ಅವರಲ್ಲಿಯೂ ಇತ್ತು ಎಂದು ಕಂಡುಬರುತ್ತದೆ

ಹಾಗೂ ಮಾನವ ಸಹಜವಾದ ಗುಣ-ಸ್ವಭಾವ ಹೊಂದಿ ಜೀವಿಸಿದ್ದರು ಎಂದು ಅಧ್ಯಯನದ ಮೂಲಕ ತಿಳಿದು ಬರುತ್ತದೆ. ಹಾಗೆಯೇ ರಾಮಾಯಣ, ಮಹಾಭಾರತಗಳಲ್ಲಿ ಕಂಡು ಬರುವ ಸ್ತ್ರೀ ಪಾತ್ರಗಳನ್ನು ಕುರಿತು ಸೊಗಸಾಗಿ ಚಿತ್ರಿಸಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ ಜನಪದರು ಹೇಳದ ವಿಷಯವಿಲ್ಲ; ಹಾಡದ ಕಥೆಯಿಲ್ಲ ಎಂದು ಸಾಬೀತಾಗುತ್ತದೆ.

ಕಥನಗೀತೆಗಳನ್ನು ಓದಿದಾಗ ಮಹಿಳೆಯ ಕಷ್ಟ, ಸಂಕಟ, ನೋವು, ದುಃಖ ದುಮ್ಮಾನಗಳು ಕಣ್ಣೆದುರಿಗೆ ಬಂದಂತೆ ಭಾಸವಾಗುತ್ತದೆ. ಒಂದು ಹೆಣ್ಣು ಒಂದು ಗಂಡು ಪರಸ್ಪರ ಸಮ್ಮತಿಯಿಂದ ದಾಂಪತ್ಯ ಜೀವನಕ್ಕೆ ಕಾಲಿಟ್ಟು ಲೈಂಗಿಕ ಆಸೆ ಆಕಾಂಕ್ಷೆಗಳನ್ನು ಪೂರೈಸಿ ಕೊಳ್ಳುವುದರೊಂದಿಗೆ ಮಕ್ಕಳನ್ನು ಹೆತ್ತು ಒಂದು ಕುಟುಂಬ ನಿರ್ಮಾಣಕ್ಕೆ ಕಾರಣರಾಗುತ್ತಾರೆ. ಇಂತಹ ಹಲವು ಕುಟುಂಬಗಳು ಸೇರಿ ಒಂದು ಊರು, ಹಲವು ಊರುಗಳು ಅಥವಾ ಗ್ರಾಮಗಳು ಸೇರಿ ಒಂದು ತಾಲೂಕು, ಹಲವು ತಾಲೂಕುಗಳು ಸೇರಿ ಒಂದು ಜಿಲ್ಲೆ, ಹಲವು ಜಿಲ್ಲೆಗಳು ಸೇರಿ ಒಂದು ರಾಜ್ಯ, ಹಲವು ರಾಜ್ಯಗಳು ಸೇರಿ ಒಂದು ರಾಷ್ಟ್ರ ಹೀಗೆ ಹಲವು ರಾಷ್ಟ್ರಗಳು ಸೇರಿ ಒಂದು ವಿಶ್ವವಾಗಿರುವುದು ಸಾರ್ವಕಾಲಿಕ ಸತ್ಯವೆಂಬುದನ್ನು ಅಳೆದು ನೋಡಲಾಗಿ ಇಂತಹ ಒಂದು ವಿಶ್ವದ ನಿರ್ಮಾಣದಲ್ಲಿ ಪುರುಷನಷ್ಟೇ ಸರಿಸಮಾನವಾದ ಪಾತ್ರ ಮಹಿಳಯದೂ ಇದೆ ಎಂಬುದು ಮನದಟ್ಟಾಗುತ್ತದೆ. ಹೀಗಿದ್ದರೂ ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ವ್ಯವಸ್ಥೆಯಿಂದಾಗಿ ಕಡೆಗಣಿಸಲ್ಪಟ್ಟು ನೋವು-ಸಂಕಟಗಳಿಂದ ನರಳಿದರೂ ಪುರುಷರ ಮತ್ತು ಸಮಾಜದ ಏಳ್ಗೆಗಾಗಿ ಮಹಿಳೆಯರು ಬೆನ್ನೆಲುಬಾಗಿ ನಿಂತಿದ್ದಾರೆ. ಅಗಣಿತ ಸನ್ನಿವೇಶಗಳನ್ನು ಜಗತ್ತಿನ ಯಾವುದೇ ಕಥೆ, ಕಥನಗೀತೆಗಳು ದಾಖಲೆಗಳನ್ನು ಒದಗಿಸುತ್ತವೆ. ಅದರಂತೆ ಜನಪದ ಸಾಹಿತ್ಯದಲ್ಲಂತೂ ಹೇರಳ ದಾಖಲೆಗಳು ಸಿಗುತ್ತವೆ.

ಮಹಿಳೆಯರು ಸಕಲವನ್ನು ಸಹಿಸಿಕೊಳ್ಳುವ ಸಾಕಾರ ಮೂರ್ತಿಗಳೆಂದು ಹೊಗಳಿರುವ ಪುರುಷರು ಆಕೆಯನ್ನು ಧರಣಿಗೆ ಹೋಲಿಸಿ ಮಾತನಾಡಿ, ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಿರುವುದು ಆದಿಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ನಡೆದು ಬಂದ ಸಂಪ್ರದಾಯದಂತೆ ತೋರುತ್ತದೆ. ಇತ್ತೀಚಿನ ಕೆಲವು ದಶಕಗಳಲ್ಲಿ ಸ್ತ್ರೀಯ ಶಕ್ತಿ, ಸಾಮರ್ಥ್ಯಕ್ಕೆ ತಕ್ಕ ಸರಿಸಮಾನ ಅವಕಾಶಗಳನ್ನು ಕೊಟ್ಟಿರುವುದನ್ನು ಹೊರತುಪಡಿಸಿದರೆ ಜನಪದ ಸಮಾಜದಲ್ಲಿ ಆಕೆ ನರಕ ಸದೃಶ್ಯ ಬದುಕನ್ನು ಬದುಕಿರುವುದು ಶಾಸನ, ಜನಪದ ಕಥೆ, ಖಂಡಕಾವ್ಯ, ಮಹಾಕಾವ್ಯ, ಲಾವಣಿ ಮತ್ತು ಕಥನಗೀತೆಗಳು ಸಾರಿ ಸಾರಿ ಹೇಳುತ್ತವೆ.

ಬದುಕಿನ ಕ್ರೂರ ಸತ್ಯಗಳನ್ನು ಆಧರಿಸಿ ಹುಟ್ಟಿಕೊಂಡ ಇಂಥ ರಚನೆಗಳು ಜನಪದ ಕಥೆಗಳಂತೆ ಸುಖಾಂತವಾಗುವುದಿಲ್ಲ. ತಮಗೆ ಸಹಜವಾದ ರೀತಿಯಲ್ಲಿ ದುರಂತ ಮುಕ್ತಾಯ ಹೊಂದುತ್ತವೆ. ಇಂತಹ ಕಥನಗೀತೆಗಳ ರಚನೆಗಳಲ್ಲಿ ಬದುಕಿನ ಸುಖ ಸಂತೋಷಕ್ಕಿಂತ ನೋವಿನ ಸಂಗತಿಗಳೇ ತುಂಬಿರುತ್ತವೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಉತ್ತರದೇವಿ, ಈರೋಬಿ, ನಾಗವ್ವ, ಭಾಗೀರಥಿ, ಧರಣಿಯಮ್ಮ, ಜಾಗಾಲೆ, ಹೊನ್ನಾಲದೇವಿ, ಗುಣಸಾಗರಿ, ಹೊನ್ನಮ್ಮ, ಸಂಪನ್ನೆ, ಕೊಂತ್ಯಮ್ಮ, ಕಾಟವ್ವ, ವೀರ ತಿಮ್ಮವ್ವ, ಅಣಜಿ ಹೊನ್ನಮ್ಮ, ಹುಳಿಯಾರು ಕೆಂಚಮ್ಮ ಇತ್ಯಾದಿ ಕಥೆಗಳು ಮುಖ್ಯವಾದವುಗಳಾಗಿವೆ. ಈ ಬಗೆಯ ವಸ್ತುವನ್ನುಳ್ಳ ನೂರಾರು ಕಥನಗೀತೆಗಳು ದೊರೆಯುತ್ತವೆ. ಇವುಗಳಲ್ಲಿ ಮಹಿಳಾ ನಾಯಕಿಯರು ಸಮಾಜದಲ್ಲಿ ಎಂದೋ ಬಾಳಿ ಬದುಕಿದವರು. ತಮ್ಮದಲ್ಲದ ತಪ್ಪಿಗೆ ಪ್ರಾಣ ತ್ಯಾಗ ಮಾಡಿಕೊಂಡವರು. ಪುರುಷ ಪ್ರಧಾನ ವ್ಯವಸ್ಥೆಯ ಸಂಚುಗಳನ್ನು ಅರಿಯದೆ ಅವರು ಮಾಡುವ ಆದೇಶ, ಕೊಡುವ ಶಿಕ್ಷೆಗೆ ಬಲಿಪಶುವಾದವರು. ತಮ್ಮ ಬಲಿದಾನದ ಹಿಂದೆ ಕೇವಲ ತನ್ನ ಕುಟುಂಬವಲ್ಲ ಇಡೀ ಸಮಾಜದ ಹಿತವಿದೆ ಎಂದು ನಂಬಿ ಮೂಕ ಪ್ರಾಣಿಯಂತೆ ಅವರು ಹಾಕುವ ಕೊಡಲಿ ಪೆಟ್ಟಿಗೆ ತಮ್ಮ ಕೊರಳನ್ನೊಪ್ಪಿಸಿ ಜೀವನ ಸಾರ್ಥಕ್ಯ ಕಂಡವರು. ಅಷ್ಟು ಮಾತ್ರವಲ್ಲ ಹೆಣ್ಣಿಗೆ ಹೆಣ್ಣೆ ಶತ್ರು ಎನ್ನುವಂತೆ ಕೆಲವೊಮ್ಮೆ ಅತ್ತೆಯರ ತಂತ್ರ, ದರ್ಪಗಾರಿಕೆಗೆ ಎದುರಾಗದೆ ಅರಳುವ ಮೊದಲೆ ಮೊಗ್ಗಲ್ಲೇ ಮುರಿಟಿದಂತೆ ತುಂಬಿದ ಯೌವನದಲ್ಲಿರುವಾಗಲೆ ಕೆರೆಯೋ, ಬಾವಿಯೋ ಪಾಲಾಗಿ ಅದರಲ್ಲೆ ಉಪ್ಪು ಕರಗಿದಂತೆ ಕರಗಿದವರು ಮಾತ್ರವಲ್ಲ ಕೊರಗಿದವರೂ.

ಹಿಂದೆ ಹೆಣ್ಣು ತನಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಲು ಅದರ ವಿರುದ್ಧ ಧ್ವನಿ ಎತ್ತಲು ಸಾಧ್ಯವಾಗುತ್ತಿರಲಿಲ್ಲ. ಸಾಮಾಜಿಕ ವ್ಯವಸ್ಥೆಯ ಸುಳಿಗೆ ಬಲಿಯಾಗಿ ಜೀವನ ದುರಂತಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಆದರೆ ಆ ದುರಂತವನ್ನು ಮಹಿಳೆ ಸ್ವಇಚ್ಛೆಯಿಂದ ಸ್ವಾಗತಿಸಿದ್ದಾಗಿರದೆ ಸಾಮಾಜಿಕ ಹಿತದ ಹಿನ್ನೆಲೆಯಲ್ಲೋ, ಪುರುಷ ಹಿತಾಸಕ್ತಿಯ ಹಿನ್ನೆಲೆಯಲ್ಲೋ ಹೆಣ್ಣನ್ನು ಬಲವಂತವಾಗಿ ಬಲಿಯಾಗಿಸಲಾಗುತ್ತಿತ್ತು. ಹಾಗಾಗಿ ನೇರವಾಗಿ ಧ್ವನಿಯೆತ್ತಲು ಸಾಧ್ಯವಾಗದೆ ಅನಿವಾರ್ಯವಾಗಿ ಅದನ್ನು ಜನಪದ ಮಹಿಳೆಯರು ಕಥಾನಕ ರೂಪದಲ್ಲಿ ಹೇಳಿಕೊಂಡಿದ್ದಾರೆ. ಕಾರಣ ಕಥನಗೀತೆಗಳಲ್ಲಿ ಭಾರತೀಯ ಸಮಾಜದ ಹೆಣ್ಣಿನ ಅಂತರಂಗದ ಧ್ವನಿ ಇದೆ. ಅದನ್ನು ಆಲಿಸುವ ಮತ್ತು ಆ ಹೆಣ್ಣು ಮನಸ್ಸಿನ ಸೂಕ್ಷ್ಮ ಭಾವಗಳನ್ನು ದಾಖಲಿಸುವ ಮತ್ತು ಆ ಮೂಲಕ ಮಹಿಳಾ ಬದುಕಿನ ದಾರುಣ ಚರಿತ್ರೆಯನ್ನು

ದಾಖಲಿಸುವ ಪ್ರಯತ್ನ ಈ ಅಧ್ಯಯನದ್ದಾಗಿದ್ದು, ಈ ಬಗೆಯ ಮಹಿಳೆಯರ ಅಂತರಂಗದ ಧ್ವನಿಯನ್ನು ಕೇಳಿಸುವ ಮಹತ್ವದ ಅಧ್ಯಯನ ಇದಾಗಿದೆ.

ಜನಪದ ಕಥನಗೀತೆಗಳು ಒಂದು ಪ್ರದೇಶದ ಜನಜೀವನ, ಅಲ್ಲಿ ಬದುಕುವ ಜನಪದರ ಒಟ್ಟು ಸಂಸ್ಕೃತಿ ಅದರಲ್ಲಿ ದಾಖಲಾಗಿರುತ್ತದೆ. ಈ ದೃಷ್ಟಿಯಿಂದ ಕನ್ನಡ ಜನಪದ ಕಥನಗೀತೆಗಳು ಆಯಾ ಪ್ರದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವ ಮೌಖಿಕ ಪಠ್ಯಗಳಾಗಿವೆ. ಅವುಗಳ ಆಧಾರದಿಂದ ಕಥನಗೀತೆಗಳಲ್ಲಿ ಮಹಿಳಾಲೋಕದ ವಿನ್ಯಾಸವನ್ನು ವಿಭಿನ್ನ ನೆಲೆಗಳಿಂದ ಅಧ್ಯಯನ ಮಾಡಲು ಅವಕಾಶವಿದೆ. ಮಹಿಳಾ ಪಾತ್ರಗಳ ಸ್ವರೂಪವನ್ನು ತಿಳಿಯುತ್ತ ಪ್ರಸ್ತುತ ಸಾಮಾಜಿಕ ಸ್ಥಿತಿಯಲ್ಲಿ ಮಹಿಳೆಯ ನೆಲೆಯನ್ನು ಗುರುತಿಸಿ ಮಹಿಳಾವಾದದ ಮುಖೇನ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ, ತಾತ್ವಿಕತೆಯನ್ನು ಕಟ್ಟಿಕೊಡುವಲ್ಲಿ ಈ ಅಧ್ಯಯನ ಪ್ರಮುಖ ಪಾತ್ರ ವಹಿಸುತ್ತದೆ.

ಒಂದೊಂದು ರೀತಿಯ ವೈಚಾರಿಕ ಪ್ರೇರಣೆ ಒಂದೊಂದು ಸಂಸ್ಕೃತಿಯನ್ನು ರೂಪಿಸುತ್ತದೆ ಹಾಗೂ ಸಾಮಾಜಿಕ ಬದಲಾವಣೆಗೆ ಸ್ಫೂರ್ತಿಯಾಗಿದೆ. ಈ ನಿಟ್ಟಿನಲ್ಲಿ ದೊರೆತ ಆಧಾರಗಳ ಮೇಲೆ ಕನ್ನಡ ಜನಪದ ಕಥನಗೀತೆಗಳು ಹಾಗೂ ಮಹಿಳಾ ಲೋಕ ಇವೆರಡನ್ನು ತೌಲನಿಕವಾಗಿ, ವಿಮರ್ಶಾತ್ಮಕವಾಗಿ, ತಾತ್ವಿಕ ನೆಲೆಯಲ್ಲಿ ಅಭ್ಯಸಿಸಬೇಕೆಂಬ ಛಲ, ಮನೋಧೈರ್ಯ ಉದ್ಭವಿಸಿ ಈ ಅಧ್ಯಯನ ಕೈಗೊಳ್ಳಲು ಸ್ಫೂರ್ತಿಯಾಯಿತು. ಮಹಿಳೆ ಅನಾದಿ ಕಾಲದಿಂದಲೂ ಶೋಷಣೆಗೆ ಒಳಗಾಗಿರುವುದು ಇಂದಿಗೂ ಆಕೆ ಅದರ ಸುಳಿಯಲ್ಲಿಯೇ ಸಿಲುಕುತ್ತಿರುವುದನ್ನು ಮನಗಂಡು ಅಧ್ಯಯನ ಮಾಡಬೇಕೆಂಬ ಹಂಬಲವಾಯಿತು. ಆದ ಕಾರಣ 'ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸಗಳು' ಎಂಬ ಶೀರ್ಷಿಕೆಯೊಂದಿಗೆ ಮಹಿಳೆ ಕೌಟುಂಬಿಕ, ಸಾರ್ವಜನಿಕ, ಆಚರಣಾತ್ಮಕ ನೆಲೆಯಲ್ಲಿ ಹೇಗೆ ನೆಲೆಸಿದ್ದಳೆಂಬುದರ ಕುರಿತು ಅಧ್ಯಯನ ಕೈಗೊಳ್ಳಲು ಅನುಕೂಲವಾಯಿತು. ಅಷ್ಟೇ ಅಲ್ಲದೆ ಒಂದು ಸಮಾಜದಲ್ಲಿ ಪುರುಷ ಮತ್ತು ಮಹಿಳೆ ಇಬ್ಬರೂ ಎಷ್ಟು ಅವಶ್ಯಕವಾಗಿದ್ದಾರೆ, ಅವರ ಮೌಲ್ಯಗಳು ಸಮಾಜಕ್ಕೆ ಅವಶ್ಯಕವಾದ ಸಂಗತಿಯನ್ನು ತಿಳಿಸುತ್ತಾ ಅಂದಿನ ಹಾಗೂ ಇಂದಿನ ಮೌಲ್ಯಗಳ ಕುರಿತು ಚರ್ಚಿಸಲು ಈ ಅಧ್ಯಯನ ಪ್ರೇರಣೆ ನೀಡಲು ಸಹಾಯಕವಾಗಿದೆ.

೧.೩. ವ್ಯಾಪ್ತಿ ಮತ್ತು ಸ್ವರೂಪ :

ಭಾರತ ದೇಶದಲ್ಲಿ ಜನಪದ ಸಾಹಿತ್ಯ ತನ್ನದೇಯಾದ ವೈಶಿಷ್ಟ್ಯತೆ ಮತ್ತು ವ್ಯಾಪ್ತಿಯನ್ನು ಹೊಂದಿದೆ. ಅದರಲ್ಲೂ ಕರ್ನಾಟಕದ ಜಾನಪದ ಸಂಸ್ಕೃತಿಯು ಅತ್ಯಂತ ಶ್ರೀಮಂತವಾಗಿದೆ. ಜನಪದ ಸಾಹಿತ್ಯವೂ ಆಕಾಶದಷ್ಟು ವಿಶಾಲ, ಸಾಗರದಷ್ಟು ಆಳವನ್ನು ಹೊಂದಿದ್ದು ಅಗೆದಷ್ಟು ಹೊಸದನ್ನು ಕಾಣುವ ವಿಫುಲ ಅವಕಾಶವನ್ನು ಕಲ್ಪಿಸಿದೆ. ಅದರಲ್ಲಿ ಒಗಟು, ಒಡಪು, ಗಾದೆ, ಕಥೆ, ಗೀತೆ, ಕಥನಗೀತೆ, ಮಹಾಕಾವ್ಯ ಮುಂತಾದ ಪ್ರಕಾರಗಳನ್ನು ತನ್ನ ಒಡಲಲ್ಲಿರಿಸಿಕೊಂಡಿದೆ. ಇಡೀ ಜಗತ್ತಿನ ಸಾಹಿತ್ಯದ ಮೂಲವನ್ನೆಲ್ಲ ಜನಪದ ಸಾಹಿತ್ಯದಲ್ಲಿ ಕಾಣಬಹುದು. ಅದಕ್ಕೆ ದೇ.ಜವರೇಗೌಡ ಅವರು ಬಾಲ ಬಾಯಿಯಲ್ಲಿ ಬ್ರಹ್ಮಾಂಡವು ಅಡಗಿರುವಂತೆ ಎಲ್ಲವೂ ಅಡಗಿದೆ ಎಂದು ಹೇಳಿದ್ದಾರೆ. ಜನಪದ ಜ್ಞಾನ ಪರಂಪರಾನುಗತವಾಗಿ ಸಾಗಿ ಬಂದದ್ದು, ಇದು ಸಮಷ್ಟಿಕೃತವಾಗಿದೆ. ಎಲ್ಲಿಯವರೆಗೆ ಜಗತ್ತಿನಲ್ಲಿ ಸಾಮಾನ್ಯ ವರ್ಗ ಅಸ್ತಿತ್ವದಲ್ಲಿರುವುದೋ ಅಲ್ಲಿಯವರೆಗೆ ಅದು ಉಳಿದು ಬರುತ್ತದೆ ಎಂದು ಹೇಳುವಲ್ಲಿ ಸಂದೇಹವಿಲ್ಲ.

ಜನಪದ ಗದ್ಯ ಕಥೆಗಳಾದ ಪುರಾಣ, ಐತಿಹ್ಯ, ಕಟ್ಟುಕಥೆಗಳು ಮುಖ್ಯವಾಗಿ ಕಥೆ ಹೇಳುತ್ತವೆ. ಕನ್ನಡ ಜನಪದ ಕಥನಗೀತೆಗಳ ಮೂಲೋದ್ದೇಶವೂ ಕಥೆ ಹೇಳುವುದಾದರೂ ಅದು ಹಾಡಿನಲ್ಲಿ ನಿರೂಪಿಸಲ್ಪಡುವ ಕಥೆಯಾಗಿದೆ. ಆದ್ದರಿಂದಲೇ ಇದಕ್ಕೆ 'ಹಾಡ್ಗತೆ', 'ಕಥನಗೀತೆ' ಎಂದು ಕರೆಯುತ್ತಾರೆ. ಸಮಾಜದ ಮೂಲಾನುಭವವೇ ಇವುಗಳಿಗೆ ಮೂಲ ಸಾಮಗ್ರಿ, ಸಾಮಾನ್ಯವಾಗಿ ವಾಸ್ತವಿಕ ಘಟನೆಗಳನ್ನು ಹೆಚ್ಚಾಗಿ ಹೊಂದಿರುತ್ತವೆ. ಜೀವನ-ವಿಧಾನ, ನೋವು-ನಲಿವಿನ, ಆಚರಣೆ-ಸಂಪ್ರದಾಯಗಳ ವಿವಿಧ ಮುಖಗಳು ಅಭಿವ್ಯಕ್ತವಾಗಿರುತ್ತವೆ. ವ್ಯಕ್ತಿಯ ಸ್ವಾಭಿಮಾನ, ಶೌರ್ಯ, ಪರಾಕ್ರಮಗಳಲ್ಲಿ ಮಹಿಳಾಲೋಕ ಹೇಗೆ ವಿನ್ಯಾಸಗೊಂಡಿದೆ ಎಂಬುದರ ಕುರಿತು ಈ ಕಥನಗೀತೆಗಳ ಅವಲೋಕನದಿಂದ ತಿಳಿದುಬರುತ್ತದೆ.

ಕನ್ನಡ ಜನಪದ ಕಥನಗೀತೆಗಳ ರಾಶಿ ಅಪರಿಮಿತ. ಇವು ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಘಟನೆಗಳ ಹಿನ್ನೆಲೆಯಲ್ಲಿ ರಚಿತವಾಗಿವೆ. ಇಲ್ಲಿ ಸುಖಾಂತ, ದುಃಖಾಂತ ಎರಡೂ ಉಂಟು. ಆದರೆ ಬಹುಪಾಲು ದುಃಖಾಂತದಲ್ಲಿಯೇ ಮುಕ್ತಾಯಗೊಂಡ ಕಥನಗೀತೆಗಳನ್ನು ಕಾಣುತ್ತೇವೆ. ಜನಪದ ಸಾಹಿತ್ಯ ವ್ಯಕ್ತಿಗಳ ಸಾಮೂಹಿಕ ಸೃಷ್ಟಿ. ಅದು ಅವರ ಭಾವನೆಗಳನ್ನು ಅಭಿವ್ಯಕ್ತಿಸುವ ಬೌದ್ಧಿಕ ರೂಪ. ಜನಪದಗಳು ದಿನನಿತ್ಯದ ಕಾರ್ಯ ಚಟುವಟಿಕೆಗಳೊಡನೆ

ಹೊಮ್ಮಿ ಬಂದಿವೆ. ಅವು ಕ್ರಿಯೆ, ಲಯ, ನಾದಗಳೊಂದಿಗೆ ಹೆಣೆಯಲ್ಪಟ್ಟಿವೆ. ಬೀಸುವ, ಕುಟ್ಟುವ, ಹಂತಿ ತಿರುಗಿಸುವ ಮುಂತಾದ ಕ್ರಿಯೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಹಬ್ಬ-ಹರಿದಿನ ಮುಂತಾದ ಶುಭಕಾರ್ಯದಲ್ಲಿ ತನ್ನದೇಯಾದ ಛಾಪನ್ನು ಮೂಡಿಸಿವೆ. ಪೌರಾಣಿಕ, ಚಾರಿತ್ರಿಕ, ಸಾಮಾಜಿಕ, ಕೌಟುಂಬಿಕ ಸಂದರ್ಭದ ಲಾವಣಿ ಮತ್ತು ಕಥನಗೀತೆಗಳು ಮಹಾಕಾವ್ಯದವರೆಗೆ ಇವುಗಳ ವ್ಯಾಪ್ತಿ ಇದೆ.

ವಾಕ್ ಪರಂಪರೆಯ ಮುಖೇನ ಬೆಳೆದು ಬಂದಿರುವ ಜನಪದ ಗೀತೆಗಳಲ್ಲಿ ಕಥನಗೀತೆಗಳ ಹರವು ಅಪಾರವಾದುದು. ಅಂತೆಯೇ ರಾಶಿರಾಶಿಯಾಗಿ ಕರ್ನಾಟಕದ ಎಲ್ಲ ಪ್ರದೇಶಗಳಿಂದಲೂ ಸಂಗ್ರಹಗೊಂಡು ಪ್ರಕಟಗೊಂಡಿವೆ. ಸ್ವಾತಂತ್ರ್ಯಕ್ಕಾಗಿ, ಸ್ವಾಭಿಮಾನದಿಂದ ಹೋರಾಡಿದ ವೀರರ, ಕೌಟುಂಬಿಕ, ಸಾಮಾಜಿಕ ಸಂದರ್ಭದಲ್ಲಿ ಸಿಲುಕಿ ಸಾವಿಗೆ ತುತ್ತಾಗುವ ಸಾಮಾನ್ಯರ ಪವಾಡ, ಪರಾಕ್ರಮ, ಯಾತನೆ, ತ್ಯಾಗ-ಬಲಿದಾನ, ಆಚರಣೆ, ಸಂಪ್ರದಾಯ ಇತ್ಯಾದಿ ವಸ್ತುಗಳನ್ನು ಒಳಗೊಂಡ ಕಥನಗೀತೆಗಳು ಕನ್ನಡ ಜನಪದ ಸಾಹಿತ್ಯದಲ್ಲಿ ಸಾಕಷ್ಟು ದೊರಕುತ್ತವೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ ೫೩ ಕಥನಗೀತೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಮೂಲ ಆಕರಗಳನ್ನಾಗಿ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ ಯೋಜನೆಯ ಅಡಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಪ್ರಕಟಿಸಿದ ಶಾಲಿನಿ ರಘುನಾಥ ಅವರು ಸಂಪಾದಿಸಿದ 'ಜಾನಪದ ಸಾಮಾಜಿಕ ಕಥನಗೀತೆಗಳು', ಅಂಬಳಿಕೆ ಹಿರಿಯಣ್ಣ ಅವರು ಸಂಪಾದಿಸಿದ 'ಪೌರಾಣಿಕ ಕಥನಗೀತೆಗಳು', ಕೃಷ್ಣಮೂರ್ತಿ ಹನೂರ ಅವರು ಸಂಪಾದಿಸಿದ 'ಐತಿಹಾಸಿಕ ಕಥನಗೀತೆಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪ್ರಕಟಿಸಿದ ಕೃಷ್ಣಮೂರ್ತಿ ಹನೂರ ಅವರ 'ಕತ್ತಲದಾರಿ ದೂರ', ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಪಿ.ಕೆ. ಖಂಡೋಬಾ ಅವರ 'ಜನಪದ ಕಥನಗೀತೆಗಳು' ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪ್ರಕಟಿಸಿದ ಬಿ.ಬಿ. ಹೆಂಡಿಯವರು ಸಂಪಾದಿಸಿದ 'ಆಯ್ದ ಜನಪದ ಕಥನಗೀತೆಗಳು', ಜೀ.ಶಂ. ಪರಮಶಿವಯ್ಯ ಅವರ 'ಜನಪದ ಖಂಡಕಾವ್ಯಗಳು'. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿದ ಕೃಷ್ಣಮೂರ್ತಿ ಹನೂರವರ 'ಸಾವಿರದ ಸಿರಿಬೆಳಗು' ಕೃತಿಗಳಿಂದ ಕಥನಗೀತೆಗಳನ್ನು ಆಯ್ದುಕೊಂಡು ಕೌಟುಂಬಿಕ, ಸಾರ್ವಜನಿಕ, ಆಚರಣಾತ್ಮಕ ನೆಲೆಗಳಲ್ಲಿ ಮಹಿಳಾ ಲೋಕದ ವಿನ್ಯಾಸವನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಸ್ತ್ರೀ ಮೌಲ್ಯ ಪ್ರತಿಪಾದನೆ, ಪುರುಷ ಮೌಲ್ಯ ಪ್ರತಿಪಾದನೆಯೊಂದಿಗೆ ಸರ್ವಕಾಲಕ್ಕೂ ಸ್ಥಾಪಿತವಾದ ಮೌಲ್ಯಗಳನ್ನು ವೈಚಾರಿಕ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಒಟ್ಟಿನಲ್ಲಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಹೆಸರುವಾಸಿಯಾಗಿರುವ ಕನ್ನಡ ಜನಪದ ಕಥನಗೀತೆಗಳನ್ನು ವಸಾಹತುಶಾಹಿ (ಸ್ವಾತಂತ್ರ್ಯ ಪೂರ್ವ) ಮತ್ತು ವಸಾಹತೋತ್ತರ (ಸ್ವಾತಂತ್ರ್ಯೋತ್ತರ) ಸಂದರ್ಭದಲ್ಲಿಯ ಕಥನಗೀತೆಗಳನ್ನು ವ್ಯಾಪ್ತಿಗೆ ಅನುಗುಣವಾಗಿ ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ.

ಈಗಾಗಲೇ ಸಂಗ್ರಹಗೊಂಡು ಪ್ರಕಟಿಸಲಾಗಿರುವ ಜನಪದ ಕಥನಗೀತೆಗಳನ್ನು ಈ ಸಂಶೋಧನೆಗೆ ಮೂಲ ಆಕರವನ್ನಾಗಿ ಪರಿಗಣಿಸಲಾಗಿದೆ. ಜೊತೆಗೆ ಜನಪದ ಕಥನಗೀತೆಗಳನ್ನು ಕುರಿತು ನಡೆಸಿರುವ ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳನ್ನು ಪೂರಕ ಆಕರಗಳನ್ನಾಗಿ ಪರಿಗಣಿಸಲಾಗಿದೆ. ಇದಲ್ಲದೆ ಜನಪದ ಕಥನಗೀತೆಗಳನ್ನು ಕುರಿತು ಪ್ರಕಟವಾಗಿರುವ ಬಿಡಿ ಲೇಖನಗಳನ್ನು ಪೂರಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಒಟ್ಟು ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ – ಒಂದು : ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ ಮತ್ತು ಮಹತ್ವ

ಮೌಖಿಕ ಪರಂಪರೆಯಿಂದ ಇಡೀ ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇಯಾದಂತಹ ವಿಶಿಷ್ಟತೆಯನ್ನು ಗುರುತಿಸಿಕೊಂಡಿರುವ ಜನಪದ ಸಾಹಿತ್ಯ ಕಾವ್ಯ ಪ್ರಕಾರಗಳಲ್ಲೊಂದಾಗಿ ಕಥನಗೀತೆಗಳು ಗುರುತಿಸಿಕೊಳ್ಳುತ್ತವೆ. ಇದು ತನ್ನದೇಯಾದ ಸ್ವರೂಪ, ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಪ್ರಸ್ತುತ ಸಂಶೋಧನೆಯಲ್ಲಿ ೫೩ ಕನ್ನಡ ಜನಪದ ಕಥನಗೀತೆಗಳನ್ನು ಆಯ್ದುಕೊಂಡು ಅಧ್ಯಯನ ಕೈಗೊಳ್ಳಾಗಿದೆ. ವಿಸ್ತೃತ ಪ್ರಸ್ತಾವನೆಯೊಂದಿಗೆ ಅಧ್ಯಯನದ ಪ್ರೇರಣೆ, ವಿಷಯದ ಆಯ್ಕೆಯ ಕಾರಣ, ಅಧ್ಯಯನದ ಹಿನ್ನೆಲೆಯ ಉದ್ದೇಶಗಳು, ಅಧ್ಯಯನದ ಸ್ವರೂಪ ಹಾಗೂ ಅಧ್ಯಯನಕ್ಕೆ ಅಳವಡಿಸಿಕೊಂಡಿರುವ ವಿಧಾನಗಳನ್ನು ಮೊದಲನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ – ಎರಡು: ಈವರೆಗಿನ ಅಧ್ಯಯನಗಳ ಸಮೀಕ್ಷೆ ಮತ್ತು ವಿಧಾನಗಳು

ಈ ಅಧ್ಯಾಯವನ್ನು ಪ್ರಮುಖವಾಗಿ ಅಧ್ಯಯನಗಳು, ಕೃತಿಗಳು, ಲೇಖನಗಳು ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಕಥನಗೀತೆಗಳನ್ನು ಕುರಿತು ಈವರೆಗೆ ಕಂಡುಬಂದ ಅಧ್ಯಯನಗಳನ್ನು ಅವಲೋಕಿಸಿ ಅವು ಯಾವ ವಿಧಾನವನ್ನು ಹೊಂದಿವೆ ಎಂಬುದನ್ನು ಅವುಗಳ ಸ್ವರೂಪದೊಂದಿಗೆ ವಿಶ್ಲೇಷಿಸಲಾಗಿದೆ. ಎರಡನೇ ಭಾಗದಲ್ಲಿ

ಕಥನಗೀತೆಗಳನ್ನು ಕುರಿತ ಸಂಪಾದನ ಕೃತಿಗಳನ್ನು ಹಾಗೂ ಕಥನಗೀತೆಗಳನ್ನು ಕುರಿತು ಮಾಹಿತಿ ಲಭ್ಯವಾಗುವ ಜನಪದ ಸಾಹಿತ್ಯ ಕೃತಿಗಳನ್ನು ಅವಲೋಕಿಸಲಾಗಿದೆ. ಮೂರನೇ ಭಾಗದಲ್ಲಿ ಕಥನಗೀತೆಗಳನ್ನು ಕುರಿತು ಪ್ರಕಟವಾಗಿರುವ ಬಿಡಿ ಲೇಖನಗಳನ್ನು ಸಮೀಕ್ಷಿಸಲಾಗಿದೆ.

ಅಧ್ಯಾಯ – ಮೂರು : ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣು : ಕೌಟುಂಬಿಕ ನೆಲೆ

ಈ ಅಧ್ಯಾಯದಲ್ಲಿ ನಾನು ಆಯ್ಕೆ ಮಾಡಿಕೊಂಡ ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣಿನ ಬಾಲ್ಯ, ತವರಿನ ಚಿತ್ರಣ, ಮದುವೆಯ ಚಿತ್ರಣ, ದಾಂಪತ್ಯದ ಬದುಕನ್ನು ಕೌಟುಂಬಿಕ ನೆಲೆಯ ಹಿನ್ನೆಲೆಯಲ್ಲಿ ಅವಲೋಕಿಸಲಾಗಿದೆ. ಸಮಾಜ ಕುಟುಂಬವಿಲ್ಲದೇ ಸೃಷ್ಟಿ ಆಗಲಾರದು. ಸದೃಢ ಕುಟುಂಬವೇ, ಸದೃಢ ಸಮಾಜ ನಿರ್ಮಾಣಕ್ಕೆ ಸೋಪಾನ ಎಂಬ ನಿಲುವನ್ನು ತಾಳಿ, ಮಹಿಳೆ ಕುಟುಂಬದಲ್ಲಿ ಯಾವ ರೀತಿಯ ಶೋಷಣೆಗೆ ಗುರಿಯಾಗಿದ್ದಳು ಎಂಬುದನ್ನು ಕೌಟುಂಬಿಕ ನೆಲೆಯಲ್ಲಿ ಮಹಿಳೆಯನ್ನು ಕಾಣುವ ದೃಷ್ಟಿ ಬದಲಾಗಬೇಕಾದ ಅವಶ್ಯಕತೆ ಇದೆ ಎಂಬುದನ್ನು ಕಥನಗೀತೆಗಳ ವಿಮರ್ಶೆಯೊಂದಿಗೆ ತಿಳಿಸಲಾಗಿದೆ ಹಾಗೂ ಕೌಟುಂಬಿಕವಾಗಿ ಇಂದಿಗೂ ಮಹಿಳೆ ಶೋಷಣೆಯನ್ನು ಅನುಭವಿಸುತ್ತಿರುವಳು ಎಂಬುದಕ್ಕೆ ವಾಸ್ತವದ ಕೆಲವೊಂದು ಉದಾಹರಣೆ, ದಾಖಲೆಗಳನ್ನು ಕೊಡುತ್ತಾ ಮಹಿಳಾವಾದದ ಹಿನ್ನೆಲೆಯಲ್ಲಿ ಚರ್ಚಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ – ನಾಲ್ಕು : ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣು : ಸಾರ್ವಜನಿಕ ನೆಲೆ

ಈ ಅಧ್ಯಾಯದಲ್ಲಿ ನಾನು ಆಯ್ಕೆ ಮಾಡಿಕೊಂಡ ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳೆ ಊರು–ಕೇರಿಗಳಲ್ಲಿ, ಗೌಡ ಶಾನುಭೋಗರ ಆಡಳಿತದಲ್ಲಿ, ಸಮಾಜದ ಕಾನೂನು ಕಟ್ಟಳೆಗಳ ಸುಳಿಯಲ್ಲಿ ಸಿಕ್ಕು ನರಳಿರುವ ಹಾಗೂ ತಮ್ಮ ಜೀವನವನ್ನು ಸಾರ್ವಜನಿಕ ಹಿತಕ್ಕಾಗಿ ತ್ಯಾಗ–ಬಲಿದಾನಕ್ಕೆ ಸಮರ್ಪಿಸಿಕೊಂಡಿರುವ ಅಂದಿನ ಸಾಮಾಜಿಕ ರೀತಿ–ನೀತಿಗಳನ್ನು ತಿಳಿಸುವುದರೊಂದಿಗೆ ಮಹಿಳಾ ಹಿತಾಸಕ್ತಿಯ ಆಶಯದೊಂದಿಗೆ ವಿಶ್ಲೇಷಿಸಲಾಗಿದೆ. ಊರಿನಲ್ಲಿ ಬಹುಪಾಲು ಶೋಷಣೆಗೆ ಒಳಗಾಗಿರುವುದು ತಳಸಮುದಾಯದ ಮಹಿಳೆಯರೇ ಎಂದು ಸಾರ್ವಜನಿಕ ನೆಲೆಯಲ್ಲಿ ವಿಮರ್ಶಿಸಲಾಗಿದೆ.

ಅಧ್ಯಾಯ – ಐದು : ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣು : ಆಚರಣಾತ್ಮಕ ನೆಲೆ

ಈ ಅಧ್ಯಾಯದಲ್ಲಿ ಜನಪದ ಮಹಿಳೆಯರು ದೇವರ ಮೇಲೆ ಇಟ್ಟಂತಹ ನಂಬಿಕೆಯನ್ನು ಹಾಗೂ ಮಹಿಳೆಯರನ್ನೆ ಮೂಢ ಆಚರಣೆಗಳಿಗೆ ಗುರಿಮಾಡುವುದನ್ನು ವಿಮರ್ಶಿಸಲಾಗಿದೆ. ಕೆರೆ, ಕೋಟೆಗೆ ಮಹಿಳೆಯರನ್ನು ಹಾರವಾಗಿ ಕೊಡುತ್ತಿರುವಾಗ ನೆರವೇರಿಸುವಂತಹ ಆಚರಣೆಗಳ ಸ್ವರೂಪಗಳನ್ನು ತಿಳಿಸುತ್ತ ವಿಶ್ಲೇಷಿಸಲಾಗಿದೆ. ಅಷ್ಟೇ ಅಲ್ಲದೆ ತ್ಯಾಗ–ಬಲಿದಾನಗಳ ಅರ್ಥವನ್ನು ತಿಳಿಸುತ್ತಾ ಸಮಾಜವು ಮಹಿಳೆಗೆ ಸ್ವತಃ ತಾನೇ ಬಲಿಯಾಗುವಂತೆ ಪ್ರೇರೇಪಿಸುವಲ್ಲಿ ಪುರುಷ ಪ್ರಧಾನ ಸಮಾಜ ಸಫಲವಾಗಿತ್ತು ಎಂಬುದನ್ನು ಅಂದಿನ ಸಾಮಾಜಿಕ ಆಚರಣೆಗಳ ಮೂಲಕ ವಿಮರ್ಶಿಸಲಾಗಿದೆ.

ಅಧ್ಯಾಯ – ಆರು : ಕನ್ನಡ ಜನಪದ ಕಥನಗೀತೆಗಳಲ್ಲಿ ಮೌಲ್ಯಪ್ರತಿಪಾದನೆ

ಈ ಅಧ್ಯಾಯದಲ್ಲಿ ಕೆಲವೊಂದು ಕಥನಗೀತೆಗಳನ್ನು ಆಯ್ಕೆ ಮಾಡಿಕೊಂಡು ಪುರುಷ ಮೌಲ್ಯ ಪ್ರತಿಪಾದನೆ, ಸ್ತ್ರೀ ಮೌಲ್ಯ ಪ್ರತಿಪಾದನೆಗಳಾಗಿ ವಿಂಗಡಿಸಿ ಅವುಗಳಲ್ಲಿ ಕಂಡುಬಂದ ಮೌಲ್ಯಗಳನ್ನು ವಿಮರ್ಶಿಸಲಾಗಿದೆ. ಇದಲ್ಲದೆ ಸರ್ವಕಾಲಿಕವಾಗಿ ಸ್ಥಾಪಿತವಾದ ಸಾಮಾಜಿಕ ಮೌಲ್ಯಗಳನ್ನು ತಿಳಿಸುವುದರೊಂದಿಗೆ ಕೆಲವೊಂದು ಕಥನಗೀತೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಸಮಾಜಕ್ಕೆ ಅವಶ್ಯಕವಾದ ಮೌಲ್ಯಗಳನ್ನು ಮಾನವ ಮರೆಯಬಾರದು ಎಂಬ ಕರೆಯನ್ನೂ ತಿಳಿಸಲಾಗಿದೆ.

ಅಧ್ಯಾಯ – ಏಳು : ಸಮಾರೋಪ

ಮಹಾಪ್ರಬಂಧದ ಕೊನೆಯ ಅಧ್ಯಾಯ 'ಸಮಾರೋಪ'ವಾಗಿದ್ದು, ಪ್ರಸ್ತುತ ಅಧ್ಯಾಯದಲ್ಲಿ ಮಹಾಪ್ರಬಂಧ ಸಿದ್ಧವಾಗಲು ಹಾಕಿಕೊಂಡ ಎಲ್ಲ ಅಧ್ಯಾಯಗಳ ರೂಪರೇಷೆಗಳ ಫಲಶೃತಿಯನ್ನು ವಿವರಿಸಲಾಗಿದೆ. ಆಯ್ದುಕೊಂಡ ಕಥನಗೀತೆಗಳ ವ್ಯಾಪ್ತಿಯಲ್ಲಿ ಮಹಿಳಾ ವಿನ್ಯಾಸವನ್ನು ವಿಭಿನ್ನ ದೃಷ್ಟಿಕೋನಗಳಿಂದ ಅಭ್ಯಸಿಸಬಹುದು ಎಂಬ ವಿಚಾರವನ್ನು ಅಧ್ಯಯನ ಫಲಿತಗಳಿಂದ ಸ್ಪಷ್ಟಪಡಿಸಲಾಗಿದೆ. ಅನುಬಂಧದಲ್ಲಿ ಪ್ರಾಥಮಿಕ ಆಕರಗಳನ್ನು ಮತ್ತು ಪರಾಮರ್ಶನ ಗ್ರಂಥಗಳನ್ನು ಗ್ರಂಥಸೂಚಿಯಲ್ಲಿ ಕೊಡಲಾಗಿದೆ.

೧.೪. ಅಧ್ಯಯನದ ವೈಧಾನಿಕತೆ :

ಪ್ರಸ್ತುತ ಸಂಶೋಧನೆಯು ಕನ್ನಡ ಜನಪದ ಕಥನಗೀತೆಗಳನ್ನು ಕುರಿತದ್ದಾಗಿದೆ. 'ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸಗಳು' ಎಂಬ ಶೀರ್ಷಿಕೆಯಡಿ

ಜನಪದವನ್ನು ಮಹಿಳಾ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು ಸಾಮಾಜಿಕ ತುರ್ತು ಮತ್ತು ಶೈಕ್ಷಣಿಕ ಅಗತ್ಯ ಎರಡೂ ಮುಖ್ಯವಾದ ಸಂಗತಿಗಳಾಗಿವೆ. ಜನಪದ ಕಥನಗೀತೆಗಳು ಮುಖ್ಯವಾಗಿ ಹೆಣ್ಣನ್ನೇ ಕುರಿತದ್ದಾಗಿವೆ ಅಥವಾ ಹೆಣ್ಣಿನಿಂದಲೇ ನಿರೂಪಿಸಲ್ಪಟ್ಟಿವೆ. ಹೆಣ್ಣಿನ ನೋವು-ನಲಿವುಗಳು, ದುಃಖ-ದುಮ್ಮಾನಗಳು, ಕಷ್ಟ-ಸಂಕಟಗಳು, ಆಸೆ-ಕನಸುಗಳ ಕುರಿತು ಹಲವು ಆಯಾಮಗಳಲ್ಲಿ ಜನಪದ ಕಥನಗೀತೆಗಳು ರಚನೆಯಾಗಿವೆ. ಇವುಗಳನ್ನು ಅಧ್ಯಯನ ಮಾಡುವಾಗ ಮಹಿಳಾ ಹಿತಾಸಕ್ತಿ, ಮಹಿಳಾ ದೃಷ್ಟಿಕೋನ ಮುಖ್ಯವಾದುದು. ಆದರೆ ಕಥನಗೀತೆಗಳನ್ನು ಕುರಿತ ಸಾಮಾನ್ಯ ಗ್ರಹಿಕೆ ಪುರುಷ ಪ್ರಧಾನವಾಗಿದೆ. ಹಾಗಾಗಿ ಕಥನಗೀತೆಗಳಲ್ಲಿ ಮಹಿಳೆಯರ ಪಾತ್ರ ಮತ್ತು ಮೌಲ್ಯಗಳನ್ನು ವೈಭವೀಕರಿಸಲಾಗಿದೆ. ಆದರೆ ಇಂದಿನ ಕಾಲದ ಸಾಮಾಜಿಕ ಮತ್ತು ಶೈಕ್ಷಣಿಕ ಒತ್ತಡ ಬೇರೆಯೇ ಇದೆ. ಇದು ಎಲ್ಲವನ್ನು ವಿಮರ್ಶಾತ್ಮಕವಾಗಿ ನೋಡುವ ಕಾಲವಾಗಿದೆ. ಈ ದೃಷ್ಟಿಯಿಂದ ಕಥನಗೀತೆಗಳನ್ನು ಮಹಿಳಾ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ.

ಕಥನಗೀತೆಗಳಲ್ಲಿರುವ ಮಹಿಳಾ ನೆಲೆಯನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಿ-ಕೊಳ್ಳಲಾಗಿದೆ. ಮೊದಲನೆಯ ಭಾಗದಲ್ಲಿ ಮಹಿಳೆಯ ಕೌಟುಂಬಿಕ ನೆಲೆಯನ್ನು, ಎರಡನೆಯ ಭಾಗದಲ್ಲಿ ಹೆಣ್ಣಿನ ಸಾರ್ವಜನಿಕ ನೆಲೆಯನ್ನು, ಮೂರನೆ ಭಾಗದಲ್ಲಿ ಮಹಿಳೆಯ ಆಚರಣಾತ್ಮಕ ನೆಲೆಯನ್ನು, ಕೊನೆಯ ಭಾಗದಲ್ಲಿ ಜಾನಪದ ಕಥನಗೀತೆಗಳಲ್ಲಿ ವ್ಯಕ್ತವಾಗಿರುವ ಪುರುಷರ ಮತ್ತು ಮಹಿಳೆಯರ ಮೌಲ್ಯಗಳನ್ನು ಕುರಿತು ಚರ್ಚಿಸಲಾಗಿದೆ.

ಜನಪದ ಕಥನಗೀತೆಗಳಲ್ಲಿ ಹೆಣ್ಣನ್ನು ಕುರಿತ ವಿವರಗಳನ್ನು ಸಂಗ್ರಹಿಸಲಾಗಿದೆ. ಹಾಗೆಯೇ ಸಂಗ್ರಹಿಸಿದ ಅಂಶಗಳು ಹೆಣ್ಣಿನ ಯಾವ ನೆಲೆಯನ್ನು ಕುರಿತಾಗಿವೆ ಎಂಬುದನ್ನು ಪರಿಶೀಲಿಸಲಾಗಿದೆ. ಮಹಿಳೆ ಸಾರ್ವಜನಿಕ ವಲಯದಲ್ಲಿ ಅನಾದರಕ್ಕೆ ಒಳಗಾಗಿರುವುದನ್ನು ಚರ್ಚಿಸಲಾಗಿದೆ. ಪುರುಷನೊಂದಿಗೆ ಮಹಿಳೆಯ ಸಂಬಂಧದ ನೆಲೆಗಳನ್ನು ವಿಶ್ಲೇಷಿಸಲಾಗಿದೆ. ಜನಪದ ಕಥನಗೀತೆಗಳು ಮಹಿಳೆಯ ಯಾವ ನೆಲೆಗಳನ್ನು ಬಿಚ್ಚಿಟ್ಟಿವೆ ಮತ್ತು ಯಾವ ನೆಲೆಗಳನ್ನು ಮುಚ್ಚಿಟ್ಟಿವೆ ಎಂಬುದನ್ನು ಚರ್ಚಿಸಲಾಗಿದೆ. ಮಹಿಳೆಯ ಸಾಮಾಜಿಕ ಪಾತ್ರದ ಅಥವಾ ಆಕೆಯ ವೈಯಕ್ತಿಕ ವಸ್ತುಸ್ಥಿತಿಯ ವಿಭಿನ್ನ ಪಾತಳಿಗಳನ್ನು ಚರ್ಚಿಸಲಾಗಿದೆ. ಮಹಿಳೆಯ ಹತಾಶೆ, ನೋವು, ಸಂಕಟ, ನಲಿವು, ಕನಸು, ಪ್ರತಿರೋಧ, ಪ್ರತಿಭಟನೆ, ಧೈರ್ಯ, ಸಾಹಸ, ತ್ಯಾಗ, ಅಧೀನತೆ, ಅಸಹಾಯಕತೆ ಈ ಎಲ್ಲ ನೆಲೆಗಳನ್ನು ಸೂಕ್ಷ್ಮವಾಗಿ ಗುರುತಿಸಿ

ವಿಶ್ಲೇಷಿಸಲಾಗಿದೆ. ಜನಪದ ಕಥನಗೀತೆಗಳು ಮಹಿಳೆಯನ್ನು ಗ್ರಹಿಸಿರುವ ಲೋಕದೃಷ್ಟಿಯನ್ನು ಸಮಗ್ರವಾಗಿ ಗ್ರಹಿಸಲು ಪ್ರಯತ್ನಿಸಲಾಗಿದೆ.

ಈ ಮಹಾಪ್ರಬಂಧದ ರಚನೆಗೆ ಪ್ರಥಮ ಆಕರ ಸಾಮಗ್ರಿಗಳಾಗಿ ಸಾಮಾಜಿಕ ಕಥನಗೀತೆಗಳು, ಐತಿಹಾಸಿಕ ಕಥನಗೀತೆಗಳು, ಪೌರಾಣಿಕ ಕಥನಗೀತೆಗಳನ್ನು ತೆಗೆದು ಕೊಳ್ಳಲಾಗಿದೆ. ಇವುಗಳಿಗೆ ಪೂರಕವಾಗಿ ಕಥನಗೀತೆಗಳನ್ನು ಕುರಿತು ರಚಿತವಾದ ಮಹಾಪ್ರಬಂಧಗಳನ್ನು ಬಳಸಿಕೊಳ್ಳಲಾಗಿದೆ. ಮಹಿಳೆ ಕುರಿತು ರಚಿತವಾಗಿರುವ ಮಹಾ ಪ್ರಬಂಧಗಳನ್ನು, ಸಾಹಿತ್ಯ ಕೃತಿಗಳನ್ನು ಕೂಡ ಅವಲೋಕಿಸಿ ಬಳಸಿಕೊಳ್ಳಲಾಗಿದೆ. ಕಥನಗೀತೆಗಳ ಕುರಿತು, ಮಹಿಳಾ ಶೋಷಣೆ, ಸಮಸ್ಯೆಗಳ ಕುರಿತು ದಾಖಲಿಸಿರುವ ದಿನಪತ್ರಿಕೆ, ವಿಮರ್ಶಾ ಲೇಖನಗಳನ್ನು, ಅಂತರ್ಜಾಲದ ಮುಖಾಂತರ ಶೋಧಗಂಗಾ, ವಿಕಿಪೀಡಿಯಾ ಮುಂತಾದವುಗಳಿಂದ ಮಾಹಿತಿಗಳನ್ನು ಅವಲೋಕಿಸಿ ಮಾಹಿತಿ ಪಡೆಯಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ, ಎಂ.ಎಂ. ಕಲ್ಬುರ್ಗಿ ಲಿಂಗಾಯತ ಅಧ್ಯಯನ ಸಂಸ್ಥೆಯ ಸಂಶೋಧನಾ ಕೇಂದ್ರದಲ್ಲಿಯ ಗ್ರಂಥಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಸ್ನೇಹಿತರಿಂದ, ಹಿರಿಯರಿಂದ, ಹಿತೈಷಿಗಳಿಂದ, ವಿಷಯ ತಜ್ಞರಿಂದ, ಈ ಸಂಶೋಧನೆಗೆ ಪೂರಕವಾದ ವಿಷಯವನ್ನು ಸಂಗ್ರಹಿಸಲಾಗಿದೆ.

ಪ್ರಸ್ತುತ ಸಂಶೋಧನೆಯನ್ನು ಚಾರಿತ್ರಿಕ, ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ, ವಿವರಣಾತ್ಮಕ ಮತ್ತು ಸಂದರ್ಶನ ವಿಧಾನಗಳನ್ನು ಅಳವಡಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣು : ಕೌಟುಂಬಿಕ ನೆಲೆಯನ್ನು ಗುರುತಿಸುವಾಗ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣು: ಸಾರ್ವಜನಿಕ ನೆಲೆಯ ಅಧ್ಯಯನದಲ್ಲಿ ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿ ತಾತ್ವಿಕ ನೆಲೆಯಲ್ಲಿ ಚರ್ಚಿಸಲಾಗಿದೆ. ಕನ್ನಡ ಜನಪದ ಕಥನಗೀತೆಗಳಲ್ಲಿ ಹೆಣ್ಣು: ಆಚರಣಾತ್ಮಕ ನೆಲೆಯನ್ನು ಗುರುತಿಸುವಾಗ ಪೌರಾಣಿಕ ಹಿನ್ನೆಲೆಯೊಂದಿಗೆ ನಂಬಿ ಬೆಳೆದು ಬಂದ ದೈವಿಕ ಆಚರಣೆಗಳನ್ನು ನಿರೂಪಿಸುತ್ತಾ, ತ್ಯಾಗ-ಬಲಿದಾನವಾಗಿ ಮಹಿಳೆಯು ಕಂಡುಂಡ ಅನುಭವವನ್ನು ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಕೊನೆಯದಾಗಿ ಕನ್ನಡ ಜನಪದ ಕಥನಗೀತೆಗಳಲ್ಲಿ ಮೌಲ್ಯಪ್ರತಿಪಾದನೆ ಮಾಡುವಾಗ ಸ್ತ್ರೀ ಮತ್ತು ಪುರುಷ ಪ್ರಧಾನ ಮೌಲ್ಯಗಳನ್ನು ವಿಂಗಡಿಸಿ ತೌಲನಿಕವಾಗಿ ಮೌಲ್ಯಗಳನ್ನು ಚರ್ಚಿಸಿ ಸರ್ವಕಾಲಿಕ ಮೌಲ್ಯಗಳನ್ನು ಕೂಡ

ಸೆರೆಹಿಡಿಯಲಾಗಿದೆ. ಅವುಗಳು ಸಮಾಜಕ್ಕೆ ಎಷ್ಟು ಪೂರಕ, ಅವಶ್ಯಕವೆಂಬುದನ್ನು ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ, ವಿವರಣಾತ್ಮಕ ವಿಧಾನಗಳ ಮೂಲಕ ಅಭ್ಯಸಿಸಲಾಗಿದೆ.

ಅಧ್ಯಾಯ–೨

ಈವರೆಗಿನ ಅಧ್ಯಯನಗಳ ಸಮೀಕ್ಷೆ ಮತ್ತು ವಿಧಾನಗಳು

೨.೧. ಅಧ್ಯಯನಗಳು

೨.೨. ಕೃತಿಗಳು

೨.೩. ಲೇಖನಗಳು

ಅಧ್ಯಾಯ – ೨

ಕನ್ನಡ ಜನಪದ ಕಥನಗೀತೆಗಳ ಈವರೆಗಿನ ಅಧ್ಯಯನ ಸಮೀಕ್ಷೆ

ಕನ್ನಡ ಜನಪದ ಸಾಹಿತ್ಯದಲ್ಲಿ ಕಥನಗೀತೆಗಳಿಗೆ ವಿಶೇಷವಾದ ಮಹತ್ವವಿದೆ. ಅವುಗಳ ಅಧ್ಯಯನ ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಮಾನವನ ಆಲೋಚನೆಗಳು ಮೊದಮೊದಲು ಸರಳವಾಗಿದ್ದು, ಕಾಲಕ್ರಮೇಣ ಸಂಕೀರ್ಣವಾದವು. ಅನುಭವ, ಅನಿಸಿಕೆಗಳು ದೊಡ್ಡದಾಗಿ ಅವುಗಳನ್ನು ಹೇಳಿಕೊಳ್ಳಲು ಕೆಲವೇ ಅಭಿವ್ಯಕ್ತಿ ಪ್ರಕಾರಗಳು ಸಾಲದಾದವು. ಅದಕ್ಕಾಗಿ ಆಗ ಅಗತ್ಯಕ್ಕೆ ತಕ್ಕ ಅನ್ವೇಷಣೆ ಪ್ರಾರಂಭವಾಯಿತು. ಇಂತಹ ಸಂದರ್ಭದಲ್ಲಿ ಲಾವಣಿ, ಕಥನಗೀತೆ, ಖಂಡಕಾವ್ಯ, ಮಹಾಕಾವ್ಯಗಳಂತಹ ಪ್ರಕಾರಗಳು ಜನ್ಮ ತಾಳಿದವು.

ಕಥೆಯನ್ನು ಕಟ್ಟುವ, ಅದನ್ನು ಹಲವರಲ್ಲಿ ಹಂಚಿಕೊಳ್ಳಬೇಕೆನಿಸುವ ಹಂಬಲದಿಂದ ಗದ್ಯ–ಪದ್ಯಗಳ ರೂಪದಲ್ಲಿಯೂ ಜನಪದ ಸಾಹಿತ್ಯದಲ್ಲಿ ಕಥೆ ಹುಟ್ಟಿವೆ. ಕಿರಿದಾದ ಲಾವಣಿ, ಕಥನಗೀತೆಗಳಿಂದ ಹಿಡಿದು ಮಹಾಕಾವ್ಯಗಳವರೆಗೆ ಅವುಗಳ ಬೆಳವಣಿಗೆ ಇದೆ. ಕನ್ನಡ ಜನಪದ ಕಾವ್ಯದ ಇಂತಹ ನಾಲ್ಕು ಮುಖ್ಯವಾದ ಮಜಲುಗಳೇ ಲಾವಣಿ, ಕಥನಗೀತೆ, ಖಂಡಕಾವ್ಯ, ಮಹಾಕಾವ್ಯಗಳು. ಇವುಗಳನ್ನ ಕುರಿತು ಹಲವಾರು ಕೃತಿಗಳು ಸಾಹಿತ್ಯಲೋಕದಲ್ಲಿ ನೆಲೆ ನಿಂತಿವೆ. ಅದರಲ್ಲಿ ಕಥನಗೀತೆಗಳನ್ನು ಕುರಿತಾಗಿ ಬಂದಿರುವ ಸಂಶೋಧನಾ ಪ್ರಬಂಧಗಳು, ವಿಮರ್ಶಾ ಲೇಖನಗಳು, ಸಂಪಾದನಾ ಕೃತಿಗಳು, ಬಿಡಿ ಲೇಖನಗಳನ್ನು ಕುರಿತು ನೋಡಲಾಗಿದೆ. ಈ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಅಧ್ಯಯನಗಳು

೨. ಕೃತಿಗಳು

೩. ಲೇಖನಗಳು

೨.೧. ಅಧ್ಯಯನಗಳು :

ಕಥನಗೀತೆಗಳನ್ನು ಕುರಿತು ಇದುವರೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಪಿಎಚ್.ಡಿ. ಮಹಾಪ್ರಬಂಧಗಳು ಅಧ್ಯಯನಕ್ಕೆ ಪೂರಕವಾಗಿವೆ. ಅವುಗಳ ಅಧ್ಯಯನ ಸಮೀಕ್ಷೆ ಇಂತಿದೆ:

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜನಪದ ಸಾಹಿತ್ಯವನ್ನು ಕುರಿತು ನಡೆಸಿದ ಮೊದಲನೇ ಸಂಶೋಧನೆಯೆಂಬ ಹೆಗ್ಗಳಿಕೆಗೆ ಪಾತ್ರವಾದ ಬಿ.ಎಸ್. ಗದ್ದಗಿಮಠರವರ 'ಜಾನಪದ ಗೀತೆಗಳು' (೧೯೬೩) ಪ್ರಕಟಗೊಂಡಿದೆ. ಜನಪದ ಗೀತೆಗಳ ಸಂಗ್ರಹಣೆಯಲ್ಲಿ ಮೊದಲಿಗೆ ನಾಂದಿ ಹಾಡಿದ ಕೀರ್ತಿ 'ಹಲಸಂಗಿ ಗೆಳೆಯರಿಗೆ' ಸಲ್ಲುತ್ತದೆ. ಹಲಸಂಗಿ ಗೆಳೆಯರು ಸಂಗ್ರಹಿಸಿ ಪ್ರಕಟಿಸಿದ 'ಗರತಿಯ ಹಾಡು'. 'ಮಲ್ಲಿಗೆ ದಂಡೆ ಮತ್ತು ಜೀವನ ಸಂಗೀತ' ಎಂಬ ಕೃತಿಗಳು ಬಿ.ಎಸ್. ಗದ್ದಗಿಮಠ ಅವರಿಗೆ ಈ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಪ್ರೇರಣೆಯಾದವು ಎಂದು ಹೇಳಿಕೊಂಡಿದ್ದಾರೆ. ಇವರು ಜಾನಪದ ಗೀತೆಗಳಲ್ಲಿ ದಾಖಲುಗೊಂಡಿರುವ ಜನಪದ ಸಂಸ್ಕೃತಿಯ ಉನ್ನತ ವಿಚಾರಗಳನ್ನು ಎತ್ತಿ ಹಿಡಿಯುವುದರ ಕಡೆಗೆ ಹೆಚ್ಚು ಆಸಕ್ತಿ ತೋರಿದ್ದಾರೆ. ಕೆಲವು ಆಯ್ದ ಕಥನಗೀತೆಗಳನ್ನು ಅನುಬಂಧದಲ್ಲಿ ಕೊಡಲಾಗಿದ್ದರೂ ಅವುಗಳನ್ನು ಕುರಿತು ಹೆಚ್ಚಿನ ಅಧ್ಯಯನವನ್ನು ಮಾಡದಿರುವುದು ಗಮನಕ್ಕೆ ಬಂದಿದೆ. ಆದರೆ ಜನಪದದ ಕುರಿತು ಅಧ್ಯಯನ ಮಾಡುವ ಪ್ರತಿಯೊಬ್ಬ ಸಂಶೋಧನಾ ವಿದ್ಯಾರ್ಥಿಗೆ ಆಕರ ಗ್ರಂಥವಾಗಿದೆ. ವಿಶೇಷವಾಗಿ ಕಥನಗೀತೆಗಳ ಅಧ್ಯಯನಕ್ಕೆ ಅತ್ಯಾವಶ್ಯವಾಗಿದೆ. ಏಕೆಂದರೆ ಅವರ ಕೃತಿಗಳಲ್ಲಿ ವೀರಕಂಪಲಿರಾಯ, ಕುಮಾರರಾಮ ಇತ್ಯಾದಿ ಕಥನಗೀತೆಗಳನ್ನು, ವೀರರ ಜೀವನ ಚಿತ್ರಣವನ್ನು ಕಾಣುತ್ತೇವೆ. ಕಥನಗೀತೆಗಳಿಗೆ ಸಂಬಂಧಿಸಿದಂತೆ ಚಿಂತನ-ಮಂಥನ ಕೂಡ ಈ ಕೃತಿಯಲ್ಲಿ ಮಾಡಿದ್ದಾರೆ. ಜೊತೆಗೆ ಕಿನ್ನರಿ ಬೊಮ್ಮಯ್ಯ ಮುಂತಾದ ೧೨ನೆಯ ಶತಮಾನದ ಶಿವಶರಣರ ವೀರಗಾಥೆಯೂ ಇದೆ.

ಜೀ.ಶಂ. ಪರಮಶಿವಯ್ಯನವರ 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು' (೧೯೭೯) ಎಂಬ ಪಿಎಚ್.ಡಿ. ಮಹಾಪ್ರಬಂಧವು ಜಾನಪದದ ಸ್ವರೂಪ, ಸಿದ್ಧಾಂತ, ವರ್ಗೀಕರಣವನ್ನು ತಿಳಿಸುತ್ತ ಲಾವಣಿ-ಖಂಡಕಾವ್ಯಗಳ ಕುರಿತು ವಿವರಣೆಯನ್ನು ನೀಡುತ್ತದೆ. ಜನಪದ ವೃತ್ತಿ ಗಾಯಕರ ಹಾಗೂ ಅವರ ಸಾಹಿತ್ಯ ಮತ್ತು ಐತಿಹಾಸಿಕ, ರಮ್ಯ, ವಾಸ್ತವಿಕ, ಪೌರಾಣಿಕ ಇತ್ಯಾದಿ ಕಥನಗೀತೆಗಳ ಕುರಿತ ಅಧ್ಯಯನವೂ ಇಲ್ಲಿದೆ. ಜೀ.ಶಂ. ಪರಮಶಿವಯ್ಯನವರು ನಡೆಸಿದ ಸಂಶೋಧನೆಯ ಫಲವಾಗಿ ಹೊರಬಂದ ಈ ಮಹಾ ಪ್ರಬಂಧದಲ್ಲಿ ದಕ್ಷಿಣ ಕರ್ನಾಟಕದ ಎಲ್ಲಾ ಜನಪದ ಕಾವ್ಯ ಪ್ರಕಾರಗಳನ್ನು ಅಮೂಲಾಗ್ರವಾಗಿ ಶೋಧಿಸಿ, ಸಂಗ್ರಹಿಸಿ ಅವುಗಳ ವಿಶ್ಲೇಷಣೆ ಮಾಡಿದ್ದಾರೆ. ಆದರೆ ಕಥನಗೀತೆಗಳನ್ನೇ ಕೇಂದ್ರವಾಗಿರಿಸಿಕೊಂಡು ಮಹಿಳಾ ಲೋಕದ ಬಗ್ಗೆ ವಿಭಿನ್ನ ಗ್ರಹಿಕೆಯ ನೆಲೆಯಲ್ಲಿ ಇಲ್ಲಿ ಅಧ್ಯಯನ ಮಾಡಲಾಗಿಲ್ಲ. ಆದ್ದರಿಂದ ಮಹಿಳಾವಾದದ ಮೂಲಕ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

೧೯೮೫ ರಲ್ಲಿ ಪ್ರಕಟವಾದ ದೇವೇಂದ್ರಕುಮಾರ ಹಕಾರಿಯವರ 'ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ' ಮಹಾ ಪ್ರಬಂಧದಲ್ಲಿ ಹಲಗಲಿ ಬೇಡರು, ಗ್ವಾಲಣ್ಣನ ವೀರಗಾಥೆ, ಸಿರಿಕವಲಿ, ಕೆರೆಗೆಹಾರ, ಈರೋಬಿ, ನೀಲಗಂಗನ ಹಾಡು, ಬರದ ಹಾಡು, ಸಂಗವ ಮಾಡ್ಯಾಳ ನಿಮ ತಂಗಿ, ನಿನ ಮಕವ ಸಿಗಲಿಲ್ಲ, ಚಿಕ್ಕಿ ಉಂಗುರಕೆ ನಾರಿ ಮನಸೋತಳೋ ಎಂಬ ಕಥನಗೀತೆಗಳನ್ನು ಆಯ್ಕೆ ಮಾಡಿಕೊಂಡು ದುಃಖಾಂತವನ್ನು ನಿರೂಪಿಸಿದ್ದಾರೆ ಮತ್ತು ಸಂಸ್ಕೃತಿಯು ಜೀವಂತ ಪಳೆಯುಳಿಕೆಯಾದ ಕಾರಣ ಅದರ ವಿಶ್ಲೇಷಣೆ ಮಾಡಲಾಗಿದೆ. ಹಲವಾರು ಕಥನಗೀತೆಗಳಲ್ಲಿ ಕೇವಲ ಹನ್ನೊಂದನ್ನು ಮಾತ್ರ ಆಯ್ಕೆ ಮಾಡಿಕೊಂಡು ಸಾಮಾಜಿಕ ಹಿನ್ನೆಲೆ, ಸಂಪ್ರದಾಯ, ನಂಬುಗೆ, ವಿಧಿನಿಷೇಧ, ಬದುಕಿನ ಜಟಿಲತೆ, ಸಾಮಾಜಿಕ ಬದ್ಧತೆ, ಮೌಲ್ಯಗಳು ಮುಂತಾದ ವಿಚಾರಗಳನ್ನು ಕುರಿತು ಇಲ್ಲಿ ಸ್ಥೂಲವಾಗಿ ವಿವರಿಸುವುದರೊಂದಿಗೆ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ ಹೇಗೆ ಮೂಡಿಬಂದಿದೆ ಎಂಬುದರ ಕಡೆಗೆ ಹೆಚ್ಚು ಗಮನ ಹರಿಸಿದ್ದಾರೆ.

'ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ನಂ. ತಪಸ್ವೀಕುಮಾರ ರವರು ೧೯೮೭ ರಲ್ಲಿ ಪ್ರಕಟಿಸಿದ್ದಾರೆ. ಇಲ್ಲಿ ಜನಪದ ಗೀತೆಗಳಲ್ಲಿ ಸಂಗ್ರಹವಾಗಿರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಪ್ರತಿಮಾ ಅವರು 'ಉತ್ತರ ಕರ್ನಾಟಕದ ಜನಪದ ಕಥನಗೀತೆಗಳಲ್ಲಿ ಸ್ತ್ರೀ ಸಂವೇದನೆ' ಎಂಬ ಮಹಾಪ್ರಬಂಧವನ್ನು ೨೦೦೮ ರಲ್ಲಿ ಪ್ರಕಟಿಸಿದ್ದಾರೆ. ಈ ಸಂಶೋಧನೆಗೆ ಉತ್ತರ ಕರ್ನಾಟಕವನ್ನು ವ್ಯಾಪ್ತಿ ಪ್ರದೇಶವನ್ನಾಗಿ ಮಾಡಿಕೊಂಡಿದ್ದಾರೆ. ಇಲ್ಲಿರುವ ಕಥನಗೀತೆಗಳು ಬ್ರಿಟೀಷರು ಬರುವ ಪೂರ್ವದ ಒಂದು ಶತಮಾನದಿಂದ ಹಿಡಿದು ಅಂದರೆ ೧೬ನೇ ಶತಮಾನದಿಂದ ೧೯ ನೇ ಶತಮಾನದವರೆಗಿನ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಜೀವನವನ್ನು ದಾಖಲಿಸಿಕೊಂಡಿರುವುದರಿಂದ ಇಲ್ಲಿ ಚಾರಿತ್ರಿಕ ಮತ್ತು ಭೌಗೋಳಿಕ ವಿಧಾನದ ನೆರವು ಪಡೆಯಲಾಗಿದೆ ಮತ್ತು ಸಾಮಾಜಿಕ ವಿಶ್ಲೇಷಣೆ, ಅನ್ವಯಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಟ್ಟಿನಲ್ಲಿ ಸಮಾಜಶಾಸ್ತ್ರೀಯ ನೆಲೆಯ ವಿಶ್ಲೇಷಣಾ ವಿಧಾನವನ್ನು ಈ ಮಹಾಪ್ರಬಂಧದಲ್ಲಿ ಅನುಸರಿಸಲಾಗಿದೆ.

'ಮಹಾಸತಿ ಆಚರಣೆ: ಒಂದು ಅಧ್ಯಯನ' ಮಹಾಪ್ರಬಂಧದಲ್ಲಿ ಬಸವರಾಜ ಕಲ್ಗುಡಿಯವರು ಜಗತ್ತಿನ ವಿವಿಧ ಭಾಗಗಳ ಸತಿಪದ್ಧತಿಯ ಬಗೆಗೆ ಹಾಗೂ ಭಾರತದಲ್ಲಿ ಸತಿಸಹಗಮನದ ಪದ್ಧತಿಯ ವಿವರಗಳನ್ನು ಶಾಸನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಮಹಾಸತಿ ಪರಿವೀಕ್ಷಣೆಯ ವಿವರಗಳನ್ನು ಪೂರಕ ವಿಶ್ಲೇಷಣೆಯೊಂದಿಗೆ ತಿಳಿಸಿದ್ದಾರೆ. ಮಾಸ್ತಿ ಗೀತೆಗಳನ್ನು ಹಾಗೂ ಪೂರಕ ವಿಶ್ಲೇಷಣೆಯನ್ನು ಕೂಡ ಮಾಡಿದ್ದಾರೆ. ಅಷ್ಟೇ ಅಲ್ಲದೆ ಬೇರೆಯ ಕಡೆಗಳಲ್ಲಿ ಪ್ರಕಟವಾದ ಕೆಲವು ಮಾಸ್ತಿಗೀತೆ, ಕೆಲವು ಕತೆಗಳ ಭಾವ ಸಂಗ್ರಹವನ್ನು ದಾಖಲಿಸಿದ್ದಾರೆ. ಮಹಾಸತಿಯನ್ನು ಕುರಿತು ಅಧ್ಯಯನ ಮಾಡುವಂತಹ ಸಂಶೋಧನಾ ವಿದ್ಯಾರ್ಥಿಗಳು ಈ ಮಹಾಪ್ರಬಂಧವನ್ನು ಅವಲೋಕಿಸಲೇಬೇಕು. ಇಲ್ಲದಿದ್ದರೆ ಅಧ್ಯಯನ ಪರಿಪೂರ್ಣವಾಗದು.

ಎಂ.ಕೆ. ರುಕ್ಮಿಣಿಯವರ 'ಜನಪದ ಕಥನಗೀತೆಗಳಲ್ಲಿ ಮಹಿಳೆ: ಒಂದು ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧದಲ್ಲಿ ವಾಸ್ತವಿಕ, ರಮ್ಯ, ತ್ಯಾಗ ಬಲಿದಾನ, ಪೌರಾಣಿಕ, ಸಹಗಮನದ ಕುರಿತು 'ಕಥನಗೀತೆಗಳಲ್ಲಿ ಮಹಿಳೆ' ಎಂಬ ಶೀರ್ಷಿಕೆಯಡಿಯಲ್ಲಿ ಕೆಲವು ಕಥನಗೀತೆಗಳನ್ನು ಆಯ್ಕೆ ಮಾಡಿಕೊಂಡು ಅಂದಿನ ಸಂಸ್ಕೃತಿಯಲ್ಲಿ ಮಹಿಳೆ ಹೇಗೆ ರೂಪಿತವಾಗಿದ್ದಳು ಎಂಬುದನ್ನು ಗುರುತಿಸಿ ವಿಶ್ಲೇಷಿಸಿದ್ದಾರೆ.

ಎಸ್.ಎಂ. ಮುತ್ತಯ್ಯ ಅವರ 'ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ' ಎಂಬ ಮಹಾಪ್ರಬಂಧವು ಪುರಾಣ ಭಂಜನ ಮತ್ತು ಪ್ರತಿಸೃಷ್ಟಿ, ಪ್ರಭುತ್ವ ನಾಶ ಮತ್ತು ಪ್ರತಿ ನಿರ್ಮಾಣ, ಮಹಿಳಾ ಮುಖಗಳು, ಸಾಂಸ್ಕೃತಿಕ ಅನನ್ಯತೆ, ಸಂವಹನದ ಘಟಕಗಳು ಎಂಬ ಅಧ್ಯಾಯಗಳನ್ನು ಹೊಂದಿದ್ದು ಜನಪದ ಮಹಾಕಾವ್ಯಗಳ ಮುಖೇನ ಈ ಅಂಶಗಳನ್ನು ಇದರಲ್ಲಿ ಚರ್ಚಿಸಿದ್ದಾರೆ.

ಗಾಯತ್ರಿ ನಾವಡ ಅವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' ಮಹಾಪ್ರಬಂಧದಲ್ಲಿ ಸ್ತ್ರೀವಾದದ ಸ್ವರೂಪ ಮತ್ತು ತಾತ್ವಿಕತೆ, ಸ್ತ್ರೀವಾದಿ ಜಾನಪದ, ಮಾತೃರೂಪಿ ಸಂಸ್ಕೃತಿ ಮತ್ತು ಕರಾವಳಿ ಜನಪದ ಸಾಹಿತ್ಯ, ಸ್ತ್ರೀಶಕ್ತಿಯ ಮಾದರಿಯಾಗಿ ಸಿರಿ, ಸ್ತ್ರೀ ಸಂವೇದನೆ–ಅಭಿವ್ಯಕ್ತಿ, ಲಿಂಗ, ಲಿಂಗಪ್ರಭೇದ ಮತ್ತು ಪಠ್ಯ ಸ್ವರೂಪ ಎಂಬ ವಿಷಯಗಳ ಕುರಿತು ವಿಮರ್ಶಿಸಿದ್ದಾರೆ. ಕೆರೆಗೆ ಹಾರವಾದ ಭಾಗಿರಥಿ, ವಡ್ಡರಬೋಯಿ, ಹುಳಿಯೂರ ಕೆಂಚವ್ವ, ಮದಗದ ಕೆಂಚವ್ವ, ನಿಗಳ ಬಲಿ ಕಥನಗೀತೆಗಳ ಕಥಾ ಚಲನಗಳನ್ನು ತಿಳಿಸಿದ್ದಾರೆ. ಜೊತೆಗೆ ದ್ರೌಪದಿ ಪಗಡೆ ಆಟ ಆಡಿದ್ದನ್ನು ಹೆಣ್ಣು ಮಾದರಿಯ ಹೊಸ ಸೃಷ್ಟಿಯಾಗಿ, ಗಂಡಿನ ಶೀಲದ ವಿಸ್ತರಣೆಯನ್ನು ಕೊರಾತಿ ಕಂಚಿಯ ಕಥನಗೀತೆಯ ಮೂಲಕ ತಿಳಿಸಿದ್ದಾರೆ.

ಕ್ರಿ.ಶ. ೪೫೦ ರಿಂದ ಕ್ರಿ.ಶ. ೧೧೫೦ ರ ಅವಧಿಯ ಸ್ತ್ರೀಯ ವಿದ್ಯಾಭ್ಯಾಸ, ದೇವದಾಸಿ ಪದ್ಧತಿ, ಆತ್ಮಬಲಿಯ ಕೆಲವೊಂದು ಪ್ರಸಂಗಗಳನ್ನು ತಿಳಿಯಲು ಹಾಗೂ ಅಂದಿನ ಸಾಮಾಜಿಕ

ವ್ಯವಸ್ಥೆ, ರಾಜ್ಯಾಡಳಿತ, ಆರ್ಥಿಕ ವ್ಯವಸ್ಥೆಯನ್ನು ಅರಿಯಲು ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಈ ಮಹಾಪ್ರಬಂಧವು ಅನುಕೂಲವಾಗಿದೆ.

ಹೀಗೆ ಕಥನಗೀತೆಗಳಿಗೆ ಸಂಬಂಧಿಸಿದ ಇನ್ನೂ ಅನೇಕ ಕೃತಿಗಳನ್ನು ಸಮೀಕ್ಷೆ ಮಾಡಿ ಮಹಾಪ್ರಬಂಧವನ್ನು ರಚಿಸಲಾಗಿದೆ.

೨.೨ ಕೃತಿಗಳು :

೧೯೯೬ ರಲ್ಲಿ ಪ್ರಕಟವಾದ 'ಜನಪದ ಕಥನಗೀತೆಗಳು' ಕೃತಿಯಲ್ಲಿ ಪಿ.ಕೆ. ಖಂಡೋಬಾ ಅವರು ಗೋವಿನ ಹಾಡು, ಕೆರೆಗೆ ಹಾರ, ಉತ್ತರದೇವಿ, ನೀಲಗಂಗಾನ ಹಾಡು, ಗಂಗೆ ಗೌರಿ ಹಾಡು, ಕಲಿಯುಗದ ಬಾಲೆ, ಈರೋಬಿ, ಕಾಶೀಬಾಯಿ ಹಾಡು, ಕೊಂತ್ಯಮ್ಮ, ಬರದ ಹಾಡು, ಮಳೆ ಹಾಡು, ಸಂಗವ ಮಾಡ್ಯಾಳ ನಿಮ ತಂಗಿ ಹೀಗೆ ಒಟ್ಟು ೧೨ ಕನ್ನಡ ಜನಪದ ಕಥನಗೀತೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಸಂಗ್ರಹದ ಕೊನೆಯಲ್ಲಿ ಕಥಾನಕಗಳನ್ನು ಕುರಿತು ಮಾಹಿತಿ, ಕಠಿಣ ಶಬ್ದಾರ್ಥ, ಕಥನಗೀತೆಗಳ ವರ್ಗೀಕರಣ ಸೂಚಿ ನೀಡಲಾಗಿದೆ. ಇದರಿಂದ ಕಥನಗೀತೆಗಳ ಆಶಯ, ಪ್ರಕಾರಗಳನ್ನು ತಿಳಿಯಲು ಸುಲಭ-ವಾಗುತ್ತದೆ ಎಂದು ಹೇಳಬಹುದು. ಈ ಕೃತಿಯ ಕಥನಗೀತೆಗಳೊಂದಿಗೆ ಅಕ್ಕ ನಾಗಮ್ಮನ ಹಾಡು, ಕೆಂಚಮ್ಮ, ಮಾದರ ಚೆನ್ನಯ್ಯ, ಕಲ್ಯಾಣ ಬಸವಯ್ಯ ಕಥನಗೀತೆಗಳನ್ನು ಸೇರಿಸಿ 'ಜನಪದ ಕಥನಗೇತೆಗಳು' ಎಂಬ ಕೃತಿಯನ್ನು ಪಿ.ಕೆ.ಖಂಡೋಬಾ, ಟಿ.ಎಂ.ಬಾಸ್ಕರ್ ಅವರು ಸಂಪಾದಿಸಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ.

ಕರ್ನಾಟಕದ ಪರಂಪಾರಗತ ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ಅರಿಯಲು ಸಹಕಾರಿ ಆಗುವ ದೃಷ್ಟಿಯಿಂದ ಶಾಲಿನಿ ರಘುನಾಥ ಅವರು ಜಾನಪದ ಸಾಮಾಜಿಕ ಕಥನಗೀತೆಗಳನ್ನು ಸಂಪಾದಿಸಿದ್ದಾರೆ. ಇದು ೬೩ ಕಥನಗೀತೆಗಳನ್ನು ಹೊಂದಿದ್ದು, ಒಂದೊಂದು ಕಥನಗೀತೆಗಳು ಸಾಮಾಜಿಕ ನೆಲೆಯನ್ನು ನಿರೂಪಿಸುತ್ತ ಹೋಗುತ್ತವೆ. ಸಮಾಜದಲ್ಲಿ ಬೇರೂರಿದ್ದ ಅನೇಕ ಅನಿಷ್ಟ ಸಂಪ್ರದಾಯಗಳು ಜನಪದ ಮಹಿಳೆಯರ ಬದುಕಿನ ಮೇಲೆ ಯಾವ ಪರಿಣಾಮ ಬೀರಿದ್ದವು ಎಂಬುದನ್ನು ಇಲ್ಲಿಯ ಅನೇಕ ಕಥನಗೀತೆಗಳು ತಿಳಿಸುತ್ತವೆ.

ಅಂಬಳಿಕೆ ಹಿರಿಯಣ್ಣ ಅವರು ೨೧ ಪೌರಾಣಿಕ ಕಥನಗೀತೆಗಳನ್ನು ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ ಯೋಜನೆಯಡಿಯಲ್ಲಿ ಸಂಪಾದಿಸಿಕೊಟ್ಟಿದ್ದಾರೆ.

ಈ ಪ್ರಕಾರದ ಕಥನಗೀತೆಗಳು ಇತಿಹಾಸ ಪೂರ್ವಯುಗಕ್ಕೆ ಸಂಬಂಧಿಸಿದ್ದು ಎಂದು ಭಾವಿಸಲಾದ ವಿಶ್ವ ಸೃಷ್ಟಿಯ, ಸಮಾಜದ ನೆಲೆಗಳನ್ನು ತಿಳಿಸುತ್ತವೆ. ಧಾರ್ಮಿಕ ನಂಬಿಕೆ, ಅತಿಮಾನುಷ ಸಂಕಲ್ಪದ ಕಥೆಗಳನ್ನಲ್ಲದೆ ಒಂದು ಸಮಾಜದ ಚೈತನ್ಯಶೀಲ ನೆಲೆಗಳನ್ನು ತಿಳಿಯಲು ಅನುಕೂಲವಾಗಿದೆ.

ಕೃಷ್ಣಮೂರ್ತಿ ಹನೂರ ಅವರು ಸಮಗ್ರ ಕನ್ನಡ ಜಾನಪದ ಸಾಹಿತ್ಯ ಪ್ರಕಟಣೆ ಯೋಜನೆಡಿಯಲ್ಲಿ ೪೪ ಐತಿಹಾಸಿಕ ಕಥನಗೀತೆಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಇವು ಕೇವಲ ಹಿಂದೆ ನಡೆದ ಘಟನೆಗಳನ್ನು ಮಾತ್ರವಲ್ಲದೆ ಕಣ್ಣ ಮುಂದೆಯೂ ನಡೆದ, ನಡೆಯುತ್ತಿರುವ ಸಂಗತಿಗಳೇ ಎಂಬಂತೆ ಪರಿಭಾವಿಸುವಂತಿವೆ. ಇಲ್ಲಿಯ ವೀರಗೀತೆಗಳು, ಸತಿಗೀತೆಗಳು, ಸ್ತ್ರೀ ಬಲಿದಾನದ ಗೀತೆಗಳು, ಧರ್ಮ ರಕ್ಷಣೆ ಮತ್ತು ಸ್ವಾತಂತ್ರ್ಯ ಹೋರಾಟದ ಕಥನಗೀತೆಗಳು ಕನ್ನಡ ಜನಪದ ಕಥನಗೀತೆಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಪ್ರಾಮುಖ್ಯತೆ ಪಡೆದಿವೆ.

೧೯೨೮ ರಲ್ಲಿ ಬಿ.ಬಿ. ಹೆಂಡಿ ಅವರ 'ಆಯ್ದ ಜನಪದ ಕಥನಗೀತೆಗಳು' ಕೃತಿಯು ಒಟ್ಟು ಮೂರು ಅಧ್ಯಾಯಗಳಿಂದ ಕೂಡಿದೆ ಮತ್ತು ಇದರಲ್ಲಿ ಪ್ರಮುಖವಾಗಿ ಮುತ್ತೈದಿ ಚೆನ್ನಮ್ಮ, ಈಸೂರಾಯನ ಪದ, ಕಾಶೀಬಾಯಿ ಲಾವಣಿ ಎಂದು ಮೂರು ಕಥನಗೀತೆಗಳಿವೆ. ಇವು ಸ್ತ್ರೀ ಜೀವನದ ಸತ್ವಪರೀಕ್ಷೆಯ ವಸ್ತುಗಳನ್ನಾಧರಿಸಿದಂತಹ ಕಥನಗೀತೆಗಳಾಗಿವೆ. ಉತ್ತರ ಕರ್ನಾಟಕದ ಜನಸಾಮಾನ್ಯರಲ್ಲಿ ಕಥೆಗಳು ಒಂದು ಕಾಲಕ್ಕೆ ಜನಪ್ರೀಯತೆ ಪಡೆದಿದ್ದವು ಎಂಬುದಕ್ಕೆ ಉದಾಹರಣೆಗಳಾಗಿವೆ ಮತ್ತು ಮಹಿಳೆಯ ಕುರಿತು ಜನಪದರು ತಾಳಿದ ನಿಲುವೂ ಅಭಿವ್ಯಕ್ತವಾಗಿದೆ.

ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ 'ಸಾವಿರದ ಸಿರಿಬೆಳಗು' ಕೃತಿಯಲ್ಲಿ ಕೃಷ್ಣಮೂರ್ತಿ ಹನೂರ ಅವರು ಸಿರಿಯಜ್ಜಿ ಹಾಡಿದ ೨೧ ಜನಪದ ಕಥನಗೀತೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಇದು ಬುಡಕಟ್ಟು ಸಂಸ್ಕೃತಿ, ಮಹಿಳಾ ದೃಷ್ಟಿ ಮತ್ತು ಚಿತ್ರದುರ್ಗ ಪರಿಸರದ ಜನಜೀವನಗಳನ್ನು ತಿಳಿಸಿಕೊಡುತ್ತದೆ. ಕಾಡುಗೊಲ್ಲರ ಸಂಸ್ಕೃತಿಯ ಭಿತ್ತಿಯಿಂದಲೇ ಪುರಾಣದ, ಜನಪದ ಕಥನಗೀತೆಗಳನ್ನು ಕಟ್ಟುವ ಕಲೆಯನ್ನು ಇದರಲ್ಲಿ ಕಾಣಬಹುದು.

'ಕತ್ತಾಲ ದಾರಿ ದೂರ' ಎಂಬ ಕೃತಿಯಲ್ಲಿ ಸುಮಾರು ೧೩ ಮಹಾಸತಿಯ ಮತ್ತು ಸ್ತ್ರೀ ಬಲಿದಾನವನ್ನು ಕುರಿತ ಕಥನಗೀತೆಗಳನ್ನು ಸಂಗ್ರಹಿಸಿದ್ದಾರೆ. ಇದರಲ್ಲಿಯ ಕಥನಗೀತೆಗಳು ಸ್ತ್ರೀ ಪ್ರಧಾನ ಗೀತೆಗಳಾಗಿರುವುದು ವಿಶೇಷವಾಗಿದೆ.

ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದ್ಯರಲ್ಲೊಬ್ಬರಾದ ಬಿ.ಎಸ್. ಗದ್ದಗಿಮಠ ಅವರು 'ನಾಲ್ಕು ನಾಡಪದಗಳು' 'ಕಂಬಿಯ ಹಾಡುಗಳು' 'ಜನತಾಗೀತೆಗಳು' 'ಲೋಕಗೀತೆಗಳು' 'ಕುಮಾರರಾಮನ ದುಂದುಮೆಗಳು' ಎಂಬ ಕೃತಿಗಳನ್ನು ಸಾಹಿತ್ಯಲೋಕಕ್ಕೆ ನೀಡಿದ್ದಾರೆ.

ಅರ್ಜುನ ಗೊಳಸಂಗಿಯವರು ಜನಪದ ಕಥನಗೀತೆಗಳನ್ನು ಹೊಸ ನೆಲೆಯಲ್ಲಿ ಕಾಣಬೇಕೆಂಬ ಆಶಯದಿಂದ ಉತ್ತರದೇವಿ, ಹಲಗಲಿಯ ಬೇಡರ ಬಂಡಾಯ, ನರಗುಂದ ಎಂಬುದು ಅರಗಿಣಿ ಪಟ್ಟಣ, ಈರೋಬಿ ಕಥನಗೀತೆಗಳನ್ನು ರೂಪಕಗಳಾಗಿ ರಚಿಸಿ ಶೋಷಣೆ, ಅನ್ಯಾಯ, ಅವಮಾನ, ಅಸ್ಪೃಶ್ಯತೆಯಂತಹ ಅಮಾನವೀಯ ಮುಖಗಳನ್ನು ಅನಾವರಣ ಗೊಳಿಸಿದ್ದಾರೆ.

ಚಲುವರಾಜ ಅವರ 'ನಾಡೋಜ ಬುರ್ರಕಥಾ ದರೋಜಿ ಈರಮ್ಮ' ಹಾಡಿದ 'ಬಾಲ ನಾಗಮ್ಮನ ಕಥನಕಾವ್ಯ'ವನ್ನೂ ಗಮನಿಸಲಾಗಿದೆ.

೧೯೭೪ ರಲ್ಲಿ ಸೋಮಶೇಖರ ಇಮ್ರಾಪುರ ಅವರು 'ಜಾನಪದ ಕಿತ್ತೂರಿನ ಕಿಡಿಗಳು' ಕೃತಿಯಲ್ಲಿ ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಕಿತ್ತೂರಿನ ಇತರ ವೀರರು, ಕಿತ್ತೂರಿನ ಕುರಿತ ಲಾವಣಿಗಳು ಎಂದು ನಾಲ್ಕು ಭಾಗ ಮಾಡಿದ್ದಾರೆ.

೧೯೬೭ ರಲ್ಲಿ 'ಹೊನ್ನ ಬಿತ್ತೆವು ಹೊಲಕೆಲ್ಲ' ಎಂಬ ಹೊತ್ತಿಗೆಯನ್ನು ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ತರೀಕೆರಿಯವರು ಪ್ರಕಟಿಸಿದ್ದಾರೆ. ಇದರ ಸಂಪಾದಕರು ಸ.ಸ. ಮಾಳವಾಡರು. ಇದರಲ್ಲಿ ಐತಿಹಾಸಿಕ ಜನಪದ ಕಥನ ಗೀತೆಗಳ ಸಂಗ್ರಹಣೆ, ಜಾನಪದ ಗೀತೆಗಳಲ್ಲಿ ಕಿತ್ತೂರು, ಕನ್ನಡದಲ್ಲಿ ಕಥನ ಕವನ, ಗೋವಿನ ಹಾಡು ಇತ್ಯಾದಿ ವೀರಗೀತೆಗಳಿಗೆ ಸಂಬಂಧಪಟ್ಟಂತೆ ಮಾಹಿತಿ ಸಿಗುವುದರಿಂದ ಈ ಹೊತ್ತಿಗೆಯು ಕೂಡ ಕಥನಗೀತೆಗಳ ಅಧ್ಯಯನಕ್ಕೆ ಪೂರಕವಾಗಿದೆ.

ಎಂ.ಟಿ. ಸಾಸನೂರ ಅವರು ಸಂಗ್ರಹಿಸಿದ 'ಚೆನ್ನಮ್ಮನ ದಂಡಿ ಹಾಗೂ ಸತಿಗುಣಸಾಗರಿ' ಎಂಬ ಕಥೆಗಳು, ೧೯೭೨ ರಲ್ಲಿ ಪ್ರಕಟವಾದ ಸುಶೀಲಾ ಪಟ್ಟಣಶೆಟ್ಟಿಯವರ

'ಗುಣದಮ್ಮನ ಕಥೆ' ಇತ್ಯಾದಿ ಸಾಹಿತ್ಯ ಕೃತಿಗಳು ಅಧ್ಯಯನಕ್ಕೆ ಆಕರಗಳಾಗಿವೆ. ಬಸವರಾಜ ಮಲಶೆಟ್ಟಿಯವರು ಸಂಗ್ರಹಿಸಿದ 'ಇಜಿಯಣ್ಣನ ಹಾಡು' (೧೯೮೨), ಶಶಿಕಲಾ ಮೋಳ್ದಿಯವರು ಸಂಗ್ರಹಿಸಿದ 'ಹರದೆಯರ ಹಾಡುಗಳು' (೧೯೮೭) (೩೪ ಕಥಾನಕಗಳ ಸಂಗ್ರಹ), ಜಗನ್ನಾಥ ಹೆಬ್ಬಾಳೆ ಅವರು ಸಂಗ್ರಹಿಸಿದ ಬೀದರ ಜಿಲ್ಲೆಯ ಬುಲಾಯಿ ಹಾಡುಗಳು (೧೯೯೬) (೩೦ ಕಥಾನಕಗಳಿವೆ) ಇತ್ಯಾದಿ ಕಥನ ಕವನಗಳನ್ನು ಗಮನಿಸಲಾಗಿದೆ.

೧೯೭೬ ರಲ್ಲಿ 'ಬೀದರ ಜಿಲ್ಲೆಯ ಜನಪದ ಗೀತೆಗಳು' ಸಂಗ್ರಹದಲ್ಲಿ ಪೌರಾಣಿಕ, ಕೌಟುಂಬಿಕ, ಊರ ಹಿತಕ್ಕಾಗಿ ಹೋರಾಡಿದ ವೀರಗೀತೆಗಳಿವೆ. ಜಿ.ಎಸ್. ರಾಜಪ್ಪನವರು ಸಂಪಾದಿಸಿದ 'ರಾಯಚೂರು ಜಿಲ್ಲೆಯ ಜನಪದ ಗೀತೆಗಳು' ಅನೇಕ ಕಥನಗೀತೆ ಹಾಗೂ ಲಾವಣಿಗಳನ್ನೊಳಗೊಂಡಿದೆ.

ಬೆಟಗೇರಿ ಕೃಷ್ಣಶರ್ಮರವರ 'ಕನ್ನಡ ಬಾವುಟ', ಎಸ್.ಎ. ಕೃಷ್ಣಯ್ಯ ಅವರ 'ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು', ಶ್ರೀ ಕರಾಕೃರವರ ಸಂಕಲನಗಳಲ್ಲಿ 'ಹಣೆಗಂಟು ನಲುಗಿ ಉರಿದ್ಹೋದೊ', 'ಹೆಸರಿಗೆ ದೊಡ್ಡೋನು ಶಿವತಂದ', 'ಬಟ್ಟೆ ಕಾಣೆ ಇವಳ ಜಲುಮಾಕೆ', 'ಮಲೆಯ ಮಾದೇಶ್ವರ' ಎಂಬ ನಾಲ್ಕು ಜನಪದ ಕಥನಗೀತೆಗಳಿವೆ. ಮತಿಘಟ್ಟ ಕೃಷ್ಣಮೂರ್ತಿಯವರ 'ಕನ್ನಡ ಜನಪದ ಸಾಹಿತ್ಯ ಭಂಡಾರ' ದಲ್ಲಿನ ರಾಮಾಯಣದ ಕಥೆಗಳು ಎಂಬ ಭಾಗದಲ್ಲಿ ೭ ಕಥನ ಕಾವ್ಯಗಳಿವೆ.

ಬಿ.ಎಂ.ಶ್ರೀ ಅವರ 'ಕನ್ನಡದ ಬಾವುಟ' ಕೃತಿಯಲ್ಲಿ ನಾಡ ಪದಗಳು, ಗರತಿಯ ಹಾಡುಗಳು, ಗೋವಿನ ಹಾಡು, ಮಾನವಮಿ ಪದ, ಕೆರೆಗೆ ಹಾರ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಈ ಕೆರೆಗೆ ಹಾರ ಕಥನಗೀತೆಯನ್ನು ಕ್ರಮೇಣ ನಾಡಿನಲ್ಲಿ ಕೋಲಾಟ ಪದವನ್ನಾಗಿ ಸ್ವೀಕರಿಸಿದ ಮಾಹಿತಿ ಇದರಿಂದ ದೊರಕುತ್ತದೆ. ಹೀಗೆ ಅನೇಕ ಕೃತಿಗಳು ಜನಪದ ಸಾಹಿತ್ಯ ಹಾಗೂ ಕಥನಗೀತೆಗಳ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ. ಅಂತಹ ಕೃತಿಗಳನ್ನು ಸಮೀಕ್ಷಿಸಲಾಗಿದೆ.

೨.೩. ಲೇಖನಗಳು :

ತೀ.ನಂ. ಶ್ರೀಕಂಠಯ್ಯನವರ 'ಸಮಾಲೋಕನ' ಕೃತಿಯಲ್ಲಿ ಕೆರೆಗೆ ಹಾರ ಕುರಿತು ವಿಮರ್ಶಾ ಲೇಖನವಿದೆ. ಅದರಲ್ಲಿ ಕಥೆಯ ಹಿನ್ನೆಲೆ ಹಾಗೂ ಆಗಿನ ಸಾಮಾಜಿಕ ಸಂಪ್ರದಾಯದಲ್ಲಿ ಕುಟುಂಬದ ಹಿರಿಯರ ಮಾತಿಗೆ ಮಹಿಳೆ ತಲೆಬಾಗಲೇಬೇಕಾದ ಅನಿವಾರ್ಯತೆ ಇತ್ತೆಂಬುದನ್ನು ತಿಳಿಸಿಕೊಡುತ್ತಾರೆ.

'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ' ಕೃತಿಯಲ್ಲಿ ಸ್ತ್ರೀ ಕುರಿತ ಶಾಸನ, ಪ್ರಾಚೀನ, ಮಧ್ಯ ಕಾಲೀನ, ನವೋದಯ, ನವ್ಯ, ಪ್ರಗತಶೀಲ, ದಲಿತ-ಬಂಡಾಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಲೇಖನಗಳಿವೆ. ಜೊತೆಗೆ ಶಾಂತಿ ನಾಯಕ ಅವರು ಬರೆದ 'ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಕುಟುಂಬ ವ್ಯವಸ್ಥೆ' ಎಂಬ ಲೇಖನದಲ್ಲಿ ಉತ್ತರದೇವಿ, ತಾಡಿನಾಗಮ್ಮ, ಭಾಗಿರಥಿ ಇತ್ಯಾದಿ ಕಥನಗೀತೆಗಳ ಮೂಲಕ ಜನಪದ ಮಹಿಳೆಯರ ಸಂವೇದನೆಗಳ ಸ್ವರೂಪವನ್ನು ತಿಳಿಸುತ್ತ ಕೌಟುಂಬಿಕ ನೆಲೆಯನ್ನು ವಿಮರ್ಶಿಸಿದ್ದಾರೆ.

'ಕನ್ನಡ ಜಾನಪದ ಪ್ರಜ್ಞೆ' ಕೃತಿಯ ಕುರಿತು ವೀರಣ್ಣ ದಂಡೆಯವರು ೧೯೮೧ ರಿಂದ ೧೯೯೨ ರ ವರೆಗಿನ ಹತ್ತು-ಹನ್ನೆರಡು ವರ್ಷಗಳ ಕಾಲಾವಧಿಯಲ್ಲಿ ಬರೆದ ೨೭ ಲೇಖನಗಳ ಸಂಗ್ರಹವೆಂದು ಹೇಳಿಕೊಂಡಿದ್ದಾರೆ. ಕಥನಗೀತೆಗಳಿಗೆ ಸಂಬಂಧಿಸಿದಂತೆ ಅಸಗರಲಿ ಕಥಾನಕ, ಸೌಂಸತೇರು ಕಥಾನಕ, ಕೆರೆಗೆ ಹಾರದ ಭಾಗೀರತಿಯ ಸಾವಿರ ಸುತ್ತಮುತ್ತ, ಕಾಶೀಬಾಯಿ ಕಥಾನಕ ಒಂದು ಒಳನೋಟ, ಕಲಿಯುಗದ ಬಾಲೆ ಕಥಾನಕ ಒಂದು ವಿಶ್ಲೇಷಣೆ ಎಂದು ಐದು ಕಥನಗೀತೆಗಳ ಕುರಿತು ಲೇಖನಗಳನ್ನು ಬರೆದಿದ್ದಾರೆ.

ವೀರಣ್ಣ ದಂಡೆ, ಶ್ರೀಪಾದಶೆಟ್ಟಿ ಅವರು ಸಂಪಾದಿಸಿದ 'ಸುವರ್ಣ ಜಾನಪದ ಲೇಖನಗಳು' ಕೃತಿಯಲ್ಲಿ ಶ್ರೀಕಂಠ ಕೂಡಿಗೆಯವರು ಲಾವಣಿ, ಕಥನಗೀತೆ, ಖಂಡಕಾವ್ಯ, ಮಹಾಕಾವ್ಯಗಳ ಅರ್ಥ, ಸ್ವರೂಪ, ಮಹತ್ವವನ್ನು ಸೆರೆಹಿಡಿದಿದ್ದಾರೆ. ಜೊತೆಗೆ ಜನಪದ ಕಾವ್ಯಗಳ ಸಾಹಿತ್ಯಿಕ ಮೌಲ್ಯ, ಸಾಮಾಜಿಕ ಮೌಲ್ಯ, ಐತಿಹಾಸಿಕ ಮೌಲ್ಯಗಳನ್ನು ತಿಳಿಸಲಾಗಿದೆ. ಉಳಿದ ಲೇಖನಗಳು ಕೂಡ ಜನಪದ ಸಾಹಿತ್ಯ ಅಧ್ಯಯನಕ್ಕೆ ಮಾರ್ಗದರ್ಶನ ಆಗುವಂಥವುಗಳಾಗಿವೆ.

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪ್ರಕಟವಾದ ಜಾನಪದ ಕರ್ನಾಟಕ ಅರ್ಧವಾರ್ಷಿಕ ಪತ್ರಿಕೆಯಲ್ಲಿ ವೀರಣ್ಣ ದಂಡೆಯವರ ಸೋಮರಾಯ-ಭೀಮರಾಯ ಕಥಾನಕದಲ್ಲಿ ಮೌಲ್ಯಗಳ ಸಂಘರ್ಷ, ಸುಮಂಗಳಾ ಬಿ. ಅತ್ತಿಗೇರಿಯವರ 'ಕೆರೆಗೆ ಹಾರ' ಕಥನಗೀತೆಯ ಓದು ಕುರಿತು ಎರಡು ಲೇಖನಗಳು ಅಧ್ಯಯನಕ್ಕೆ ದೊರೆಕಿವೆ.

ಪ್ರಸಾರಾಂಗ, ಕನ್ನಡ ವಿಶ್ವವಿದ್ವವಿದ್ಯಾಲಯ ಹಂಪಿ ಪ್ರಕಟಿಸಿದ ಶಾಸನ ಅಧ್ಯಯನ ಎಂಬ ಅರ್ಧವಾರ್ಷಿಕ ಪತ್ರಿಕೆಯಲ್ಲಿ ಜೆ.ಎಂ. ನಾಗಯ್ಯ ಅವರ ಆತ್ಮಬಲಿದಾನದ ಕುರಿತ ಲೇಖನವು ಕಥನಗೀತೆಗಳ ಅಧ್ಯಯನಕ್ಕೆ ಪೂರಕವಾಗಿದೆ. ಏಕೆಂದರೆ ಇದರಲ್ಲಿ ತ್ಯಾಗ,

ಬಲಿದಾನ, ಪುರುಷ ಮಹಾಮರಣ, ಸ್ತ್ರೀಯರ ಮಹಾಮರಣಗಳ ಬಗೆಗೆ, ಚಿತಾಪ್ರವೇಶ ಪ್ರಾರಂಭವಾದ ಬಗೆಗೆ ದಾಖಲೆ ಗಳೊಂದಿಗೆ ಚರ್ಚಿಸಿದ್ದಾರೆ.

ರಹಮತ್ ತರೀಕೆರೆ ಅವರ 'ಮರದೊಳಗಣ ಕಿಚ್ಚು' (೨೦೦೨ರ) ಕೃತಿಯಲ್ಲಿ ಹೆಣ್ಣಿನ ಸಾವು-ನೋವಿನ, ಶೀಲದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇವರ ಈ ವಿಚಾರ ತ್ಯಾಗ-ಬಲಿದಾನದ ಕಥನಗೀತೆಗಳಿಗೆ ಪೂರಕವಾದಂತಿದೆ ಎಂದು ಹೇಳಬಹುದು. ಜೊತೆಗೆ ಸಂಸ್ಕೃತಿ-ಪ್ರತಿಸಂಸ್ಕೃತಿಯ ಬಗೆಗೆ ಚಿಂತನಾರ್ಹ ಚೌಕಟ್ಟನ್ನು ಹಾಕಿಕೊಟ್ಟು ಸಂಸ್ಕೃತಿಯನ್ನು ಹೊಸ ಆಯಾಮದಲ್ಲಿ ನೋಡುವ ದೃಷ್ಟಿಕೋನವನ್ನು ತಿಳಿಸಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ವೀರಗೀತೆಗಳು ಅಪಾರವಾಗಿ ಸಿಗುತ್ತವೆ. ಇವು ಅನೇಕ ತರಹದ ಪೌರಾಣಿಕ, ವಾಸ್ತವಿಕ, ಸಾಮಾಜಿಕ, ತ್ಯಾಗ-ಬಲಿದಾನ, ಸಹಗಮನ, ಕೌಟುಂಬಿಕ ಹೀಗೆ ನಾನಾ ರೀತಿಯಲ್ಲಿ ಕಂಡುಬರುತ್ತವೆ. ಅವುಗಳನ್ನು ಹಿರಿಯರು ತಮ್ಮ ಕೈಲಾದಮಟ್ಟಿಗೆ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಅಂತಹವರಲ್ಲಿ ಬೆಟಗೇರಿ ಕೃಷ್ಣಶರ್ಮ, ಜೀ.ಶಂ. ಪರಮಶಿವಯ್ಯ, ಕ್ಯಾತನಹಳ್ಳಿ ಶಾಮಣ್ಣ, ಕಾಳೇಗೌಡ ನಾಗವಾರ, ಕ.ರಾ.ಕೃ, ಕೃಷ್ಣಮೂರ್ತಿ ಹನೂರು ಇನ್ನೂ ಮುಂತಾದವರು ದುಡಿದಿದ್ದಾರೆ. ಸಂಗ್ರಹದ ಜೊತೆಗೆ ತಮ್ಮ ವಿದ್ವತ್ತಿನಿಂದ ಅನೇಕ ಕಥನಗೀತೆಗಳನ್ನು ವಿಮರ್ಶಿಸಿ ಸಹೃದಯರಿಗೆ ಒದಗಿಸಿಕೊಟ್ಟಿದ್ದಾರೆ. ಹೀಗೆ ಇವರೆಲ್ಲರಿಂದ ಸಂಗ್ರಹಿತವಾದ, ವಿಮರ್ಶಿಸಿದ ಕಥನಗೀತೆಗಳನ್ನು ಅವಲೋಕಿಸಲಾಗಿದೆ.

ಕನ್ನಡದಲ್ಲಿ ಜಾನಪದ ಕುರಿತ ಅಧ್ಯಯನದ ಆರಂಭದ ಹಿನ್ನೆಲೆಯನ್ನು ಖಚಿತವಾಗಿ ಹೇಳುವುದು ಕಷ್ಟ. ಆದರೆ ಪ್ರಥಮವಾಗಿ ಜನಪದ ಗೀತೆ, ಕತೆ, ಇತ್ಯಾದಿಗಳ ಮೊದಲಿನ ಸಂಗ್ರಹ ಮತ್ತು ಸಂಗ್ರಹಕಾರರನ್ನು ಗುರುತಿಸಬಹುದು. ಈ ನಿಟ್ಟಿನಲ್ಲಿ ಚಾರ್ಲ್ಸ್ ಇ. ಗೋವರ್ ಅವರು ೧೮೭೧ ರಲ್ಲಿ ಪ್ರಕಟಿಸಿದ 'ಜನಪದ ಗೀತೆಗಳು' ಕನ್ನಡದ ಮೊದಲ ಗೀತ ಸಂಕಲನವಾಗಿದೆ. ಆದರೆ ಇದರಲ್ಲಿರುವ ಗೀತೆಗಳು ದಾಸರ ಪದಗಳು ಎಂಬ ಅಂಶವನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಮುಂದೆ ೧೮೮೫ ರಲ್ಲಿ ಜೆ.ಎಫ್. ಫ್ಲೀಟ್ ಅವರು ಐತಿಹಾಸಿಕ ಲಾವಣಿಗಳನ್ನು ಸಂಗ್ರಹಿಸುತ್ತಾರೆ. ಇಲ್ಲಿಂದ ಕನ್ನಡ ಜನಪದ ಸಾಹಿತ್ಯ ಸಂಗ್ರಹದ ನಾಂದಿಯಾಯಿತು ಎಂದು ಹೇಳಬೇಕಾಗುತ್ತದೆ. ಫ್ಲೀಟರು ಸಂಗ್ರಹಿಸಿರುವ ಲಾವಣಿಗಳಲ್ಲಿ ಸಂಗೊಳ್ಳಿ ರಾಯಣ್ಣನ ಲಾವಣಿ ಅತ್ಯಂತ ಹಳೆಯದು. ರಾಯಣ್ಣನನ್ನು ಗಲ್ಲಿಗೇರಿಸಿದ್ದು ೧೮೨೯ ರಲ್ಲಿ. ಮರು ವರ್ಷವೇ ಅಂದರೆ ೧೮೩೦ರಲ್ಲಿ ಅವನ ಶೌರ್ಯ ಜೀವನದ ಕುರಿತು ಲಾವಣಿ ಹುಟ್ಟಿಕೊಂಡಿತು. ರಾಯಣ್ಣ ಮತ್ತು ಇತರರನ್ನು ಕುರಿತು ಬರೆದ ಲಾವಣಿಗಳು

ಅಂದು ಸಾಮಾಜಿಕವಾದರೆ, ಇಂದು ಐತಿಹಾಸಿಕವಾಗಿ ನಿಂತಿವೆ. ಆದ ಕಾರಣ ಅಂದಿನ ಕಥನಗೀತೆಗಳ ಅಧ್ಯಯನ ಇಂದಿಗೂ ಪ್ರಸ್ತುತ ಎನಿಸುತ್ತದೆ.

೧೯೬೦ರಲ್ಲಿ 'ಸ್ವಾತಂತ್ರ್ಯಯುದ್ಧ ೧೮೫೭' ಎಂಬ ಕೃತಿಯಲ್ಲಿ ಸಂಪೂರ್ಣವಾಗಿ ನಿಶ್ಯಸ್ತ್ರೀಕರಣವಲ್ಲದೇ ಜನಪದ ಲಾವಣಿಗಳನ್ನು, ವೀರರ ಚರಿತ್ರೆಯನ್ನು ಚಿತ್ರಿಸಲಾಗಿದೆ. ೧೮೫೭ರ ಇತಿಹಾಸದಲ್ಲಿ ಕಿತ್ತೂರ ಚೆನ್ನಮ್ಮ, ಸುರಪುರದ ವೆಂಕಟಪ್ಪ ನಾಯಕ, ನರಗುಂದದ ಬಾಬಾಸಾಹೇಬ, ಮುಂಡರಗಿಯ ಭೀಮರಾಯ ಇತ್ಯಾದಿ ಕೃತಿಗಳಲ್ಲಿ ಕಥನಗೀತೆಗಳಿಗೆ ಸಂಬಂಧಿಸಿದ ಲೇಖನಗಳಿವೆ.

೧೯೭೫ ರಲ್ಲಿ ಬೆಟಗೇರಿ ಕೃಷ್ಣಶರ್ಮರವರು 'ಕೆರೆಗೆ ಹಾರ' ಕಥನಗೀತೆಯನ್ನು ಸಂಗ್ರಹಿಸಿದ ಆದ್ಯನೆಂದು ಕರ್ನಾಟಕ ಜನಪದ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಬೆಟಗೇರಿ ಶರ್ಮರ ಚಿಂತನೆಗಳು' ವಿಚಾರ ಸಂಕೀರ್ಣದಲ್ಲಿ ಪ್ರೊ. ಚಂದ್ರಶೇಖರ ವಸ್ತ್ರದರವರು ಪ್ರಸ್ತಾಪಿಸಿದ್ದಾರೆ.

ಮಹಿಳಾ ಸಂಶೋಧನೆ ಎಂಬ ಲೇಖನ ಸಂಗ್ರಹಗಳ ಕೃತಿಯಲ್ಲಿ ಗಾಯತ್ರಿ ನಾವಡ ಅವರು ಕೆರೆಗೆ ಹಾರ ಒಂದು ಬದಲಿ ಓದಿಕೆ ಎಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಕಥನ ಗೀತೆಯ ಕಾವ್ಯಗುಣ ಹಾಗೂ ಹೆಣ್ಣಿನ ಸಾವನ್ನು ವೈಭವೀಕರಿಸಲು ಹೊರಟಿರುವ ವಿಮರ್ಶೆಯ ತುಣುಕುಗಳನ್ನು ಉಲ್ಲೇಖಿಸಿ ಅವು ಲಿಂಗ ಪ್ರಭೇದದ ಪರಿಕಲ್ಪನಾತ್ಮಕ ಚೌಕಟ್ಟಿನಲ್ಲಿ ನಿಂತು ಪುರುಷನಿಷ್ಠ ದೃಷ್ಟಿಕೋನದಿಂದ ಸ್ತ್ರೀತ್ವವನ್ನು ವ್ಯಾಖ್ಯಾನಿಸಿದ ಉದಾಹರಣೆಯಾಗಿವೆ ಎಂದು ಹೇಳುತ್ತಾರೆ. ಭಾಗಿರಥಿ ಮಾವನ ಮಾತು ತಪ್ಪದ ಹಿರಿತನದ ಒಳಗಿನ ಕ್ರೌರ್ಯ ಸಶಕ್ತವಾಗಿ ಕೇಳುತ್ತದೆ ಎಂದು ಹೇಳಿ ಸಾಂಸ್ಕೃತಿಕ-ಪ್ರಾದೇಶಿಕ ಪರಿಸರದ ಕೆಳಗೆ ಕಾಣಿಸಿದ ಕೆರೆಗೆ ಹಾರ, ವಡ್ಡರಬೋಯಿ, ಹುಳಿಯೂರು ಕೆಂಚವ್ವ, ಮದಗದ ಕೆಂಚವ್ವ, ನಿಗಳ ಬಲಿ ಎಂಬ ಐದು ಕಥನಗೀತೆಗಳ ಕಥಾಚಲನಗಳನ್ನು ಗುರುತಿಸಿದ್ದಾರೆ. ಕೆರೆಗೆಹಾರ ಕಥನ ಕವನದಲ್ಲಿ ಬಿಚ್ಚಿಕೊಳ್ಳುವ ಗಂಡಿನ ಅಧಿಕಾರಶಾಹಿ ವಾಸ್ತವದಲ್ಲಿ ಭಾಗೀರಥಿಯ ಪ್ರಜ್ಞೆಯನ್ನಿಟ್ಟು ವಿಶ್ಲೇಷಿಸಿದರೆ ಇದೇ ಕಥೆ ಹೊಸ ವ್ಯಾಖ್ಯಾನ ಬಯಸಿ ಮರು ಮೌಲ್ಯ ನಿರ್ಮಾಣಕ್ಕೆ ಒತ್ತಾಯಿಸುತ್ತದೆ ಎಂದಿದ್ದಾರೆ. ಒಟ್ಟಾರೆಯಾಗಿ ಈ ಲೇಖನ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಭಾಗೀರಥಿಯ ಮೌನವನ್ನು ಬಗೆಯುವ ಪ್ರಯತ್ನವನ್ನು ಮಾಡಲಾಗಿದೆ.

'ಜನಪದ ಸಾಹಿತ್ಯ ಚಿತ್ರಗಳು' ಎನ್ನುವ ಶೀರ್ಷಿಕೆಯಡಿಯಲ್ಲಿ ಜೀ.ಶಂ. ಪರಮಶಿವಯ್ಯನವರು ಪುಸ್ತಕ ಪ್ರಪಂಚ, ಜನಪ್ರಗತಿ, ಪ್ರಜಾವಾಣಿ, ಸುಧಾ ಪತ್ರಿಕೆಗಳಲ್ಲಿ ಕಥನಗೀತೆಗಳನ್ನು ಪರಿಚಯ ಮಾಡಿಕೊಟ್ಟಿದ್ದನ್ನು ಅವಲೋಕಿಸಲಾಗಿದೆ.

ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ದುಂದುಮೆ, ಚೌಪದಿಗಳೆಲ್ಲಕ್ಕೂ ಪ್ರೇರಕವಾಗಿ ನಿಂತ ಕನ್ನಡ ಜನಪದ ಕಥನಗೀತೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬಂದಿವೆ. ಗುಮಟೆ ವಾದನದೊಂದಿಗೆ ಹಾಡುವ ಕಥನಗೀತೆಗಳನ್ನು ಎಲ್.ಆರ್. ಹೆಗಡೆಯವರು ಸಂಗ್ರಹಿಸಿದ್ದಾರೆ. ತಿಮ್ಮಕ್ಕನ ಪದ, ಪರಮೇಶ್ವರಿಯ ಪದಗಳು ಈ ಬಗೆಯವು. ಕವಿತೆಯ ಗುಣ ಇವುಗಳಲ್ಲಿ ಹೆಚ್ಚಾಗಿರುವುದಿಲ್ಲ. ಆದರೆ ಕಥನಕಲೆ ಸೊಗಸಾಗಿ ಅರಳುತ್ತವೆ, ಎಂಬುದು ಅವರ ಮತ. ಶಿವರಾಮ ಐತಾಳರ 'ದಕ್ಷಿಣ ಕನ್ನಡ ಜನಪದ ಸಾಹಿತ್ಯ' ಸಂಕಲನದಲ್ಲಿಯೂ ಕೂಡ ಕೆಲವು ಉತ್ತಮ ನಿದರ್ಶನಗಳು ದೊರಕುತ್ತವೆ.

ಈ ದೃಷ್ಟಿಯಿಂದ ಮೈಸೂರು ಭಾಗದಿಂದ ಬಂದ ಅನೇಕ ಸಂಕಲನಗಳಲ್ಲಿ ಕಥನಗೀತೆಯ ಉತ್ತಮ ಮಾದರಿಗಳು ಲಭ್ಯವಿರುವುದು ಗಮನಾರ್ಹ. ಉತ್ತರ ಕರ್ನಾಟಕದಲ್ಲಿ ಲಾವಣಿಗಳು ಹುಲುಸಾಗಿ ಬೆಳೆದರೆ ಮೈಸೂರು ಭಾಗದಲ್ಲಿ ವಿಶೇಷತಃ ಚಿತ್ರದುರ್ಗ, ಮಂಡ್ಯ, ತುಮಕೂರು, ಅರಸೀಕೆರೆ, ಹಾಸನ ಇತ್ಯಾದಿ ಕಡೆ ಕಥನಗೀತೆಗಳು ರಾಶಿ ರಾಶಿಯಾಗಿ ಉಳಿದು ಬಂದವು. ಹಾಗಾಗಿ ಅಂತಹವುಗಳನ್ನು ಸಂಗ್ರಹಿಸಿ, ಅಧ್ಯಯನ ಕೈಗೊಂಡ ಮಹಾಪ್ರಬಂಧಗಳು, ವಿಮರ್ಶಾ ಲೇಖನಗಳು, ಕಥನಗೀತೆಗಳ ಸಂಗ್ರಹಗಳು ದೊರಕುತ್ತವೆ. "ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸಗಳು" ಎಂಬ ಶೀರ್ಷಿಕೆ ಅಡಿಯಲ್ಲಿ ಅಧ್ಯಯನ ಮಾಡುತ್ತಿರುವ ಉದ್ದೇಶದಿಂದ ಕೆಲವು ಮಹಿಳಾವಾದಕ್ಕೆ ಸಂಬಂಧಿಸಿದ ಸಾಹಿತ್ಯದ ಕೃತಿಗಳನ್ನು ಅಧ್ಯಯನಕ್ಕೆ ಪೂರಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಆದ ಕಾರಣ ಈ ಕುರಿತು ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಈ ಎಲ್ಲ ಅಧ್ಯಯನಗಳ ಸಮೀಕ್ಷೆಯನ್ನು ನೋಡಲಾಗಿ ಯಾವ ಸಂಶೋಧಕರೂ ಸಹ ಕನ್ನಡ ಜನಪದ ಕಥನಗೀತೆಗಳನ್ನು ಮಹಿಳಾವಾದದ ಹಿನ್ನೆಲೆಯ ಸ್ವರೂಪದಲ್ಲಿ ಅಧ್ಯಯನ ಮಾಡಿಲ್ಲವೆಂಬುದು ತಿಳಿದುಬರುವುದು. ಮಾಡಿದ್ದರೂ ಒಂದೊಂದು ಕಥನಗೀತೆಗಳನ್ನು ಮಾತ್ರ ವಿಮರ್ಶಿಸಲಾಗಿದೆ.

ಅಧ್ಯಾಯ–೩

ಜನಪದ ಕಥನಗೀತೆಗಳಲ್ಲಿ ಹೆಣ್ಣು : ಕೌಟುಂಬಿಕ ನೆಲೆ

೩.೧. ಹೆಣ್ಣಿನ ಬಾಲ್ಯ

೩.೨. ತವರಿನ ಚಿತ್ರಣ

೩.೩. ಮದುವೆಯ ಚಿತ್ರಣ

೩.೪. ದಾಂಪತ್ಯದ ಬದುಕು

ಅಧ್ಯಾಯ – ೩

ಜನಪದ ಕಥನಗೀತೆಗಳಲ್ಲಿ ಹೆಣ್ಣು : ಕೌಟುಂಬಿಕ ನೆಲೆ

ಗಂಡು-ಹೆಣ್ಣುಗಳ ನಡುವಣ ತಾರತಮ್ಯದ ಅನುಭವವಾಗುವುದು ಮೊದಲು ಕುಟುಂಬದಲ್ಲಿ. ಕುಟುಂಬ ಒಂದು ಸಾಮಾಜಿಕ ಘಟಕವಾಗಿದ್ದು, ಹಲವು ವ್ಯಕ್ತಿಗಳ ಸಂಬಂಧವನ್ನು ಕಟ್ಟುವ ಮುಖಾಂತರ ಎಲ್ಲರೂ ಸೇರಿ ಬದುಕುವುದನ್ನು ಅಪೇಕ್ಷಿಸುತ್ತದೆ. ಮಹಿಳೆಯರನ್ನು ಹೊರತುಪಡಿಸಿ ಕುಟುಂಬವನ್ನು ಕಟ್ಟಿಕೊಳ್ಳುತ್ತೇನೆ ಅಥವಾ ನಿರ್ಮಿಸುತ್ತೇನೆ ಎಂದು ಅಂದುಕೊಳ್ಳುವುದು ಮನುಷ್ಯನಿಗೆ ಅಸಾಧ್ಯ. ಮಹಿಳೆ ಅಷ್ಟರಮಟ್ಟಿಗೆ ಪುರುಷನಿಗೆ ಅವಶ್ಯಕ ಮತ್ತು ಅನಿವಾರ್ಯವಾಗಿದ್ದಾಳೆ. ಕೌಟುಂಬಿಕ ನೆಲೆ ಎನ್ನುವುದು ಸಾಮಾಜಿಕ ಭಾವನಾತ್ಮಕತೆಗೆ ಭದ್ರತೆಯನ್ನು ಒದಗಿಸುವ ಸದುದ್ದೇಶದಿಂದ ರೂಪಿತವಾಗಿದೆ. ಆದರೂ ಕೂಡ ಕುಟುಂಬ ಲಿಂಗ ತಾರತಮ್ಯದಿಂದ ಹೆಣ್ಣಿನ ಶೋಷಣೆ ನಡೆಯುವ ತಾಣವಾಗಿದೆ. ಕುಟುಂಬ ಬೆಳವಣಿಗೆಗಾಗಿ, ಹಿತಕ್ಕಾಗಿ, ರಕ್ಷಣೆಗಾಗಿ ಮಹಿಳೆ ಶ್ರಮಪಟ್ಟರು ಕುಟುಂಬದಿಂದ ಸ್ವಾತಂತ್ರ್ಯಹೀನಳಾಗಿ ಬದುಕುತ್ತಿರುವುದುನ್ನು ಕಂಡರೆ ಹೆಣ್ಣಿನ ದುರ್ದೈವ ಎನಿಸುತ್ತದೆ.

ಹೆಣ್ಣು ತನ್ನ ಜೀವನವನ್ನು ಸಾಗಿಸುವುದು ಪ್ರಮುಖವಾಗಿ ಎರಡು ಕುಟುಂಬಗಳಲ್ಲಿ. ಒಂದು ತವರುಮನೆ, ಮತ್ತೊಂದು ಗಂಡನ ಮನೆ. ಈ ಎರಡು ಕುಟುಂಬದ ಸುಳಿಯಲ್ಲಿಯೇ ಆಕೆಯ ಜೀವನ ಪಯಣ ಸಾಗುತ್ತದೆ. ಯಜಮಾನಿಕೆ ಸಾಮಾನ್ಯವಾಗಿ ಗಂಡಿನದಾಗಿರುತ್ತದೆ. ಹೆಣ್ಣು ಏನಿದ್ದರೂ ಎರಡನೇ ದರ್ಜೆಗೆ ಸಂಬಂಧಿಸಿದವಳಾಗಿ ಮಗಳು, ತಾಯಿ, ಸೊಸೆ, ಅತ್ತಿಗೆ, ನಾದಿನಿ, ನೆಗೆಣ್ಣಿ ಇತ್ಯಾದಿ ಪಾತ್ರವಾಗಿ ಜೀವನ ಮುಗಿಸುತ್ತಾಳೆ. ವಾಸ್ತವದಲ್ಲಿ ಕೆಲ ಮಹಿಳೆಯರು ಪುರುಷರಿಲ್ಲದೇ ಜೀವನವನ್ನು ನಡೆಸಿಕೊಂಡು ಹೋಗುತ್ತಿರುವುದನ್ನು, ಸ್ವಾವಲಂಬಿಯಾಗಿ ಬದುಕನ್ನು ಕಟ್ಟಿಕೊಂಡಿರುವುದನ್ನು ಕಂಡರೆ ಸಮಾಧಾನ- ವೆನಿಸುತ್ತದೆ. ಆದರೂ ಸಹಿತ ಆಕೆ ಸಮಾಜದಲ್ಲಿ ಅಂಜಿಕೆಯಿಂದಲೇ ಜೀವನ ಸಾಗಿಸಬೇಕಾದ ಪರಿಸ್ಥಿತಿ ಎದುರಾಗಿದೆ.

ಹೆಣ್ಣು ಬಹುಪಾಲು ಪುರುಷರಿಂದ, ಕೆಲವಾರು ಬಾರಿ ಹೆಣ್ಣಿನಿಂದಲೇ ಶೋಷಣೆಗೆ ಒಳಗಾಗಿದ್ದಾಳೆ. ತಿಳಿದೋ ತಿಳಿಯದೆಯೋ ಪ್ರಗತಿ ವಿರೋಧಿ ಮೌಲ್ಯಗಳಿಗೆ ತನ್ನನ್ನು ತಾನು ಒಡ್ಡಿಕೊಂಡು ವೈಭವೀಕರಿಸಿಕೊಂಡಿದ್ದಾಳೆ ಮತ್ತು ತನ್ನನ್ನು ತಾನು ಕೀಳಾಗಿ ಕಂಡು- ಕೊಂಡಿದ್ದಾಳೆ. ಗಂಡಿನ ದೌರ್ಜನ್ಯ, ಲೈಂಗಿಕ ಸ್ವೇಚ್ಛಾಚಾರವನ್ನು ಅದೊಂದು

ಅನಿವಾರ್ಯವೆಂಬಂತೆ ಒಪ್ಪಿಕೊಂಡಿದ್ದಾಳೆ. ಇಂದಿಗೂ ಕೂಡ ಪುರುಷರ, ಸಮಾಜದ ದಬ್ಬಾಳಿಕೆಗೆ ಗುರಿಯಾಗುತ್ತ ಜೀವ ತೇಯುತ್ತಿದ್ದಾಳೆ.

ಜನಪದ ಹೆಣ್ಣಿಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಆ ಒಂದು ಸೀಮೆಯನ್ನು ದಾಟಿ ಬರುವುದು ಆಕೆಗೆ ಸಾಧ್ಯವೂ ಇರಲಿಲ್ಲ. ತ್ಯಾಗ, ಶೀಲ, ಪಾತಿವ್ರತ್ಯ, ಬಲಿದಾನ, ತಾಳ್ಮೆ ಮುಂತಾದ ಭಾವನಾತ್ಮಕ ಅಂಶಗಳು ಹೆಣ್ಣಿನ ಬದುಕನ್ನು ಆಳುತ್ತಿದ್ದವು. ಇವೇ ಅವರಿಗೆ ಜೀವ ವಿರೋಧಿಯೂ ಕೂಡ ಆಗಿದ್ದವು. ಯಾವುದನ್ನೂ ಪ್ರಶ್ನಿಸುವ ಹಕ್ಕನ್ನು ಪಡೆಯದ ಹೆಣ್ಣು ಕೆರೆಕಟ್ಟೆಗೆ ಹಾರವಾಗಿ, ಸತಿಹೋಗಿ, ಅತ್ತೆ-ಮಾವನ ಕೈಯಲ್ಲಿ ಸವೆದು, ಮಕ್ಕಳಿಲ್ಲದೆ ಕಾಲ ಕಸಕ್ಕಿಂತ ಕಡೆಯಾಗಿ, ವಿಧವೆಯಾಗಿ ಅಮಂಗಳೆ ಎಂದು ಹೆಸರು ಗಳಿಸಿ ದೇವರ ಹೆಸರಿನಲ್ಲಿ ದೇವದಾಸಿಯಾಗಿ ಬದುಕಿದ್ದಾಳೆ. ಕುಟುಂಬದಲ್ಲಿಯ ಸಾವಿರಾರು ಸಮಸ್ಯೆಗಳನ್ನು ತನ್ನ ಮನಸ್ಸಿನಲ್ಲಿ ಹತ್ತಿಕ್ಕಿ ಜೀವನವನ್ನು ಸಾರ್ಥಕ್ಯಗೊಳಿಸಲು ಸದಾ ಹವಣಿಸುವವಳು ಈ ಮಹಿಳೆ. ಹೀಗಿರುವ ಈಕೆ ನೋವು-ಸಂಕಟಗಳನ್ನು ಅದುಮಿಟ್ಟು ಕೊಂಡರೂ ಸಹಿತ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಲೇ ಬಂದಿದ್ದಾಳೆ.

ಹಲವಾರು ಕಡೆಗಳಲ್ಲಿ ಹಿಂದುಳಿದ ಜನರು ವಾಸಮಾಡುವ ಹಟ್ಟಿಗಳಲ್ಲಿ ಹೆಣ್ಣುಮಕ್ಕಳು ಮುಟ್ಟಾದರೆ, ಮೈನೆರೆದರೆ ಮತ್ತು ಗರ್ಭಿಣಿ ಮಹಿಳೆ ಮಗುವಿಗೆ ಜನ್ಮನೀಡುವ ಸಮಯ ಬಂದರೆ ಈಗಲೂ ಜನರಿಂದ ದೂರಮಾಡಿ ಊರಾಚೆ ಪ್ರತ್ಯೇಕವಾಗಿ ಇರಿಸುತ್ತಾರೆ. ಅದರಲ್ಲೂ ಗೊಲ್ಲರ ಹಟ್ಟಿಗಳಲ್ಲಿ ಹೆರಿಗೆ ಆಗುವಾಗಲೂ ಸಹ ಮಹಿಳೆಯ ಸಹಾಯಕ್ಕೆ ಯಾರೂ ಹೋಗುವುದಿಲ್ಲ. ಆಕೆಯೇ ಏಕಾಂಗಿಯಾಗಿ ಎಲ್ಲವನ್ನೂ ನಿಭಾಯಿಸಿಕೊಂಡು ಹೆರಿಗೆ ಮಾಡಿಕೊಳ್ಳುವ ದುರಂತ ಚಿತ್ರಣಗಳು ನಮ್ಮ ಸಮಾಜದಲ್ಲಿವೆ. ಮುಟ್ಟಾದ ಮಹಿಳೆ, ಮಕ್ಕಳನ್ನು ಹೆರುವ ಮಹಿಳೆ ಮೈಲಿಗೆ ಎಂದು ಭಾವಿಸುವ ಹಳೆಯ ಕಾಲದ ಚಿಂತನೆಯ ಪರಿಣಾಮವಿದು. ಮಹಿಳೆಯರ ನಿಸರ್ಗಸಹಜವಾದ ದೈಹಿಕ ಪರಿಸ್ಥಿತಿಗಳ ಬಗೆಗೆ, ದೈಹಿಕ ಪ್ರಕ್ರಿಯೆಗಳ ಬಗೆಗೆ ಅದು ಅನಿಷ್ಟ ಎನ್ನುವ ಮನೋಭಾವ ಬೇರೂರಿ ಬಿಟ್ಟಿದೆ. ಈ ಧೋರಣೆ ಕೇವಲ ಹಟ್ಟಿಗಳಲ್ಲಿ ಮಾತ್ರ ಎಂದು ಭಾವಿಸಬೇಕಿಲ್ಲ. ಈ ಭಾವನೆ ಸುಶಿಕ್ಷಿತ ಸಮಾಜ ಹಾಗೂ ಕುಟುಂಬದಲ್ಲಿ ಅತ್ಯಂತ ವ್ಯಾಪಕವಾಗಿ, ಆಳವಾಗಿ ಬೇರೂರಿದೆ. "ಜೈವಿಕವಾಗಿ ಮಾತ್ರ ಗಂಡು-ಹೆಣ್ಣುಗಳಲ್ಲಿ ವ್ಯತ್ಯಾಸವಿದೆ. ಗಂಡು ಶ್ರೇಷ್ಠ, ಹೆಣ್ಣು ಶ್ರೇಷ್ಠ, ಎಂಬುದು ಇಲ್ಲವೇ ಇಲ್ಲ. ಅವೆಲ್ಲ ರೂಪಿಸಲ್ಪಟ್ಟವು."[೧] ಅಂದರೆ ಹೆಣ್ಣು ಅಧೀನವಾಗಿರಲು ಕೋಮಲತೆ, ಮೃದುತ್ವ, ಅಬಲೆ

೧. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ : ಎಚ್.ಎಸ್. ಮುಕ್ತಾಯಕ್ಕ, ಪು.x

ಮುಂತಾದ ಸ್ವಭಾವಗಳನ್ನು ಆರೋಪಿಸಿ ಸ್ತ್ರೀತ್ವದ ನೆಲೆಯಲ್ಲಿ ಗುರುತಿಸಲಾಗಿದೆ. ಈ ಲಿಂಗಭೇದದಿಂದ ಉಂಟಾದ ಅಸಮಾನತೆಯನ್ನು ತಳ್ಳಿಹಾಕಿ ವೈಜ್ಞಾನಿಕ ನೆಲೆಯಲ್ಲಿ ನೋಡುವುದು ಸಮಂಜಸ. ಸ್ವರೂಪದಲ್ಲಿ ಮಹಿಳೆ ಬದಲಾಗಿ ಕಾಣಬಹುದು. ಭೌದ್ಧಿಕವಾಗಿ ಆಕೆ ಪ್ರಬುದ್ಧಳು, ಆದರೆ ಅವಕಾಶದಿಂದ ವಂಚಿತಳಾಗಿ ಹಿಂದೆ ಉಳಿದಿದ್ದಳು ಅಷ್ಟೇ, ಕುಟುಂಬವೇ ಆಕೆಯನ್ನು ನಾಲ್ಕು ಗೋಡೆಗೆ ಸೀಮಿತವಾಗಿಸಿತ್ತು. ಮಹಿಳೆ ಇಂದು ಆ ಗೋಡೆಯನ್ನು ದಾಟಿ ಹೊರಗೆ ಬಂದು ತನ್ನ ಸಾಮರ್ಥ್ಯ ತೋರುತ್ತಿರುವುದು ಸಂತೋಷದಾಯಕ. ಆದರೆ ಇನ್ನೂ ಅನೇಕ ಮಹಿಳೆಯರು ಈ ಅವಕಾಶದಿಂದ ವಂಚಿತರಾಗಿರುವುದಕ್ಕೆ, ಶಿಕ್ಷಣದಿಂದ ವಂಚಿತರಾಗುವುದಕ್ಕೆ ಕುಟುಂಬವೇ ಕಾರಣವೆಂದು ಹೇಳಬಹುದು. ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿ ಮಾಡಬೇಕಾದ ಅವಶ್ಯಕತೆ, ಅನಿವಾರ್ಯತೆಯನ್ನು ಕುಟುಂಬ ತಿಳಿದುಕೊಳ್ಳಬೇಕು. ಆದ್ದರಿಂದ ಮಹಿಳೆ ಕೌಟುಂಬಿಕ ನೆಲೆಯಲ್ಲಿ ಬದಲಾವಣೆಯಾಗಬೇಕಾದ ಅವಶ್ಯಕತೆ ಇದೆ. ಕುಟುಂಬವು ಮಹಿಳೆ ಎಂದರೆ ಎಂದಿಗೂ ಬೇರೆಯ ಮನೆಗೆ ಸೇರುವಳೆಂದು ಭಾವಿಸಿ ಆಕೆಯ ಶಿಕ್ಷಣ ಕುಂಠಿತಗೊಳಿಸದೆ ಮುಂದುವರೆಸಲು ಅವಕಾಶ ಕಲ್ಪಿಸಬೇಕು. ಕನ್ನಡ ಜನಪದ ಕಥನಗೀತೆಗಳಲ್ಲಿ ಕಂಡು ಬರುವ ಮಹಿಳಾ ಲೋಕದಲ್ಲಿ ಶಿಕ್ಷಣದಿಂದ ವಂಚಿತಳಾಗಿಯೇ ಜೀವನ ಸಾಗಿಸಿದ್ದಾಳೆ.

ಪೂರ್ವದಲ್ಲಿ ಜನಪದರು ಹೆಣ್ಣನ್ನು ಕಾಣುವ ದೃಷ್ಟಿಕೋನದ ಪ್ರಭಾವದಿಂದಲೇ ಕುಟುಂಬದಲ್ಲಿ ಹುಟ್ಟಿದಾಗಿನಿಂದ ಶೋಷಣೆಗೆ ಒಳಗಾಗುತ್ತಾ ಬಂದಿರುವಳು. ಪ್ರಪಂಚದ ಜ್ಞಾನವನ್ನು ಅರಿಯದ ಮುಗ್ಧತನ, ತುಂಟಾಟ ಹೀಗೆ ಹಲವಾರು ಸಂಗತಿಗಳನ್ನು ನೆನೆದುಕೊಂಡರೆ ಬಾಲ್ಯದ ಜೀವನ ಸುಖಮಯವಾಗಿರುತ್ತದೆ ಎಂದು ತಿಳಿಯಬಹುದು. ಆದರೆ ಜನಪದ ಕಥನಗೀತೆಗಳಲ್ಲಿ ಹೆಣ್ಣಿನ ಬಾಲ್ಯ ಜೀವನವೇ ವಿಭಿನ್ನವಾಗಿ ಕಂಡುಬರುತ್ತದೆ.

ಜನಪದರು ಹೆಣ್ಣು ಹುಟ್ಟಿತೆಂದರೆ ಹುಣ್ಣು ಎಂದು ಭಾವಿಸುತ್ತಿದ್ದರು. ಜೊತೆಗೆ ಹೆಣ್ಣಿನ ಜನನದ ಬಗ್ಗೆ ಕೆಲವೊಂದು ನಂಬಿಕೆಗಳನ್ನು ಇಟ್ಟುಕೊಂಡಿದ್ದರು. ಅವು ಇಂತಿವೆ:

- ಅಮವಾಸ್ಯೆಯ ದಿನ ಹೆಣ್ಣು ಹುಟ್ಟಿದರೆ ತವರಿನವರಿಗೆ ಅಶುಭ.
- ಹುಣ್ಣಿಮೆಯ ದಿನ ಹೆಣ್ಣು ಹುಟ್ಟಿದರೆ ತವರಿನವರಿಗೆ ಶುಭ.
- ಆಶ್ಲೇಷಾ ನಕ್ಷತ್ರದಲ್ಲಿ ಹುಟ್ಟಿದ ಹೆಣ್ಣುಮಗಳನ್ನು ಅತ್ತೆ ಇಲ್ಲದ ಮನೆಗೆ ಕೊಡಬೇಕು.

- ಜೇಷ್ಠಾ ನಕ್ಷತ್ರದಲ್ಲಿ ಹೆಣ್ಣು ಹುಟ್ಟಿದರೆ ಭಾವ ಇಲ್ಲದ ಮನೆಗೆ ಕೊಡಬೇಕು.
- ಶುಕ್ರವಾರ ಹೆಣ್ಣು ಹುಟ್ಟಿದರೆ ಶುಭ.
- ಬುಧವಾರ ಹೆಣ್ಣು ಹುಟ್ಟಿದರೆ ಆಕೆಯ ಕನ್ಯಾದಾನ – ವಿವಾಹವನ್ನು ತಂದೆಯೇ ಮಾಡಿದರೆ ಶುಭ.
- ಮೂರು ಗಂಡಿನ ನಂತರ ಹೆಣ್ಣು ಹುಟ್ಟಿದರೆ ಹುಟ್ಟಿದ ಮನೆಗೆ ಕೇಡು.
- ಸೂರ್ಯೋದಯಕ್ಕೆ ಹುಟ್ಟಿದರೆ ಶ್ರೇಷ್ಠ, ಸೂರ್ಯಾಸ್ತದ ಸಮಯದಲ್ಲಿ ಹುಟ್ಟಿದರೆ ತಂದೆ–ತಾಯಿಗೆ ಕೇಡು.

ಹೀಗೆ ಹಲವಾರು ನಂಬಿಕೆಗಳನ್ನು ಇಟ್ಟುಕೊಂಡಂತಹ ಜನಪದರು ಹೆಣ್ಣಿನ ಬಗ್ಗೆ ಕೂಸು ಇದ್ದಾಗಲೇ ಸೂಕ್ಷ್ಮವಾಗಿ ವಿಚಾರಿಸುತ್ತಾರೆ. ಮಾಂಸದ ಮುದ್ದೆಯಂತಿರುವ ಮಗುವನ್ನು ಕುಟುಂಬ, ಸಮಾಜ, ಯಜಮಾನಿಕೆಯ ಸಂಸ್ಕೃತಿ ಹೀಗೆ ತಮಗೆ ಹೇಗೆ ಬೇಕೋ ಹಾಗೇ ಮೂರ್ತಿಯನ್ನಾಗಿ ಮಾಡಿಕೊಂಡು ಕೀಲುಗೊಂಬೆಯಾಗಿ ರೂಪಿಸುತ್ತಾರೆ.

ಹೆಣ್ಣು ಜೀವಕ್ಕೆ ಮೋಕ್ಷವಿಲ್ಲ. ಹೆಣ್ಣು ವೇದಮಂತ್ರಗಳನ್ನು ಪಠಿಸಬಾರದು. ಗಂಡು ಅಷ್ಟೇ ಓದಬೇಕು ಗಂಡು ಜೀವಕ್ಕೆ ಮಾತ್ರ ಮೋಕ್ಷವೆಂದು ತಿಳಿದಿದ್ದರು. ಆದರೆ ಆ ಒಂದು ಹೆಣ್ಣಿನಿಂದಲೇ ಗಂಡುಜೀವ ಪುರುಷ ತಾರೆಗಳು ಮಿನುಗುತ್ತವೆ ಎಂಬುದನ್ನೇ ಮರೆತಿರುತ್ತಾರೆ. ಏನೇ ಇರಲಿ ಮೋಕ್ಷವೆಂಬುದು ಇದೆಯೊ ಇಲ್ಲವೋ ಗೊತ್ತಿಲ್ಲ. ಸತ್ಯ, ನ್ಯಾಯ, ನೀತಿ, ಧರ್ಮ, ಸಮಾನತೆಯೊಳಗಡೆ ಮೋಕ್ಷವಿದೆ ಎಂದು ಪ್ರತಿಯೊಬ್ಬ ಮಾನವ ತಿಳಿಯಬೇಕು.

ಬಣ್ಣವನ್ನು ಅರಿಯದಂತಹ ವಯಸ್ಸಿನಲ್ಲಿ ಹೆಣ್ಣು ಮಗುವಿಗೆ ಮದುವೆ ಮಾಡುವಂತಹ ಕುಟುಂಬದ ದುರಂತ ಪ್ರಸಂಗಗಳು ಕಥನ ಗೀತೆಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಬಹುಮಟ್ಟಿಗೆ ಸಮಷ್ಠಿ ಜೀವಿಯಾಗಿಯೇ ತನ್ನನ್ನು ಗುರುತಿಸಿಕೊಳ್ಳುವಂತಹ ಜನಪದ ಮಹಿಳೆ ತಾನು ಬದುಕಿರುವ ಸಮಾಜ, ಸುತ್ತುವರಿದಿರುವ ಮಾನವೀಯ ಕೌಟುಂಬಿಕ ಸಂಬಂಧಗಳ ಬಗೆಗೆ ಅವಳಿಗಿರುವ ಪ್ರೀತಿ ಅಂತಃಕರಣಗಳು ಅಪೂರ್ವವಾಗಿವೆ. ಬಾಲ್ಯದಲ್ಲಿ ತಂದೆಯ, ವಿವಾಹದ ನಂತರ ಗಂಡನ, ವೃದ್ಧಾಪ್ಯದಲ್ಲಿ ಮಗನ ಆಸರೆಯಲ್ಲಿಯೇ ಜೀವಿಸುತ್ತ ಕುಟುಂಬದ ಕ್ಷೇಮಕ್ಕಾಗಿ ದುಡಿಯುತ್ತ ಧನ್ಯತೆಯನ್ನು ಅನುಭವಿಸುವವಳು ಹೆಣ್ಣು. ಭಾರತೀಯ ಸಮಾಜದಲ್ಲಿ ಹೆಣ್ಣುಮಗು ಎಂದಿನಿಂದಲೂ ಬಹುತೇಕ ಅನಪೇಕ್ಷಿತ ಅತಿಥಿಯಾಗಿಯೇ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ತಮ್ಮ ಕಷ್ಟಗಳನ್ನು ದೇವರಲ್ಲಿ ಮೊರೆಯಿಡುತ್ತಿರುವ ಜನಪದರು ಹೆಣ್ಣುಮಕ್ಕಳನ್ನು ಕೊಡದಿರು ಶಿವನೇ ಕೊಟ್ಟರೆ ಕಷ್ಟ ಸಂಕೋಲೆಗಳೊಂದಿಗೆ ಸಿಲುಕುವೆ ಎಂದು ತಮ್ಮ ನಿವೇದನೆಯನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ನಿದರ್ಶನ–

ಹೆಣ್ಣೀನ ತಾಯಿಗೆ ಹನ್ನೆರಡು ಸಂಕಟ
ಹುಣ್ಣು ಆದಾಂಗ ಕರಳೀಗೆ । ಶಿವರಾಯಾ
ಹೆಣ್ಣು ಮಕ್ಕಳನು ಕೊಡದಿರೋ ॥

ಎನ್ನುವಲ್ಲಿ ಹೆಣ್ಣು ಮಗುವಿನ ಜನನದಿಂದ ತಾಯಿಗೆ ಹಲವಾರು ಸಂಕಟ, ಸಮಸ್ಯೆಗಳು ಉದ್ಭವಿಸುತ್ತವೆ ಅದಕ್ಕಾಗಿ ಗಂಡು ಮಗು ಬೇಕು ಎಂದು ಅಪೇಕ್ಷೆಪಡುತ್ತಾ ನೂರಾರು ದೇವರಲ್ಲಿ ಮೊರೆ ಹೋಗುತ್ತಾರೆ. ಆದರೂ ತಾಯಿಜೀವ ಹೆಣ್ಣುಮಗುವಿಗಾಗಿ ಹಂಬಲಿಸಿದ ಚಿತ್ರಣವನ್ನು ಗರತಿಯರ ತ್ರಿಪದಿಯಲ್ಲಿ ಕಾಣುತ್ತೇವೆ.

ಹೆಣ್ಣು ಹೆತ್ತಳೆಂಬ ಹೆಚ್ಚಾಳ ನಿನಗ್ಯಾಕೆ
ಹೆಣ್ಣು ನೆರಮನೆಯ ಸಿರಿದೇವಿ । ಕಿರುಬಾಲೆ
ಹೆಣ್ಣಾಸೆ ನಮಗೆ ಅನುಗಾಲ ॥

ಈ ತ್ರಿಪದಿಯಲ್ಲಿ ಕೊಟ್ಟಮನೆಗೆ ಆಕೆ ಐಶ್ವರ್ಯದೇವತೆಯಾಗಬೇಕೆಂಬ ಆಸೆ ಸದಾ ಇದ್ದೇ ಇರುತ್ತದೆಂಬ ಆಶಯ ಕಂಡುಬರುತ್ತದೆ. ಜನಪದ ಸಮಾಜದಲ್ಲಿ ಹೆಣ್ಣು ಮಗುವನ್ನು ಹುಣ್ಣು-ಹೆಗ್ಗಣ ಇತ್ಯಾದಿ ಪರಿಕಲ್ಪನೆಗಳಿಗೆ, ಅನಿಷ್ಟ ಪದ್ಧತಿಗೆ ಹೋಲಿಸಿದರೆ ಅದೇ ಸಮಾಜ ಅಥವಾ ಕುಟುಂಬ ಆಕೆಯ ಜನನವನ್ನು ಸದಾ ನಿರೀಕ್ಷಿಸುವುದನ್ನು ಕಾಣುತ್ತೇವೆ. ಆಕೆಯನ್ನು ದೇವಿಯ ಸ್ವರೂಪವಾಗಿ ಕಾಣಲಾಗುತ್ತದೆ. ಹೀಗೆ ಕಾಣುತ್ತಿರುವ ಒಂದು ಮಗ್ಗುಲಲ್ಲಿಯೇ ಮಹಿಳೆಯರನ್ನು ಶಿಕ್ಷಣದಿಂದ ವಂಚಿತಳಾಗಿಸಿದ್ದರು ಎಂಬುದಕ್ಕೆ 'ಬಾರೋ ಬಾರೋ ನನ್ನ ಬಾಲಚಕ್ರವರ್ತಿ, ನಾಲಗೆಯ ಮೇಲೆ ಸರಸೋತಿ, ಇರುವಂಥ ಬಾಲಕ ಹಾಲು ಕುಡಿಬಾರೋ' ಎಂಬ ಜನಪದರ ಮಾತೇ ಸಾಕ್ಷಿಯಾಗಿದೆ. ಗಂಡಿಗೆ ಅಷ್ಟೇ ಶಾರದೆ(ವಿದ್ಯೆ) ಒಲಿಯುವಳು ಎಂಬ ಕಾಳಜಿ ವಹಿಸಿದರೂ ಜನಪದ ಸಮಾಜದಲ್ಲಿ ಹೆಣ್ಣು ಮಗುವಿಗೆ ಶಿಕ್ಷಣದ ಬಾಗಿಲು ಸಂಪೂರ್ಣ ಮುಚ್ಚಿತ್ತೆನ್ನಲಾಗದು. ಸಾಮೂಹಿಕ ಶಿಕ್ಷಣದ ಅವಕಾಶಗಳಿಲ್ಲದಿದ್ದರೂ, ಶಿಷ್ಟ ಸಮಾಜದಲ್ಲಿದ್ದಂತೆ ಮೇಲ್ವರ್ಗದ ಹೆಣ್ಣುಮಗುವಿಗೆ ಅಲ್ಪಸ್ವಲ್ಪ ಶಿಕ್ಷಣದ ಅನುಕೂಲತೆ ಇದ್ದಿರಬೇಕು. ಈ ಊಹೆಗೆ ಪೂರಕವಾಗಿ ಒಂದು ತ್ರಿಪದಿಯನ್ನು ಗಮನಿಸಬಹುದು.

ಓದು ಸಾಲಿಯಿಂದ ಓಡಿ ಬರುವುದು ಕಂಡೆ
ಕಾಲಾಗ ರುಳಿಯ ಕೈಮಾಟ । ಕಂದವ್ವ
ಮಾಲೀಕ ಗೌಡರ ಮಗಳೇ ॥

ಮಗು ಹುಟ್ಟಿದಾಗಿನಿಂದ ಅದಕ್ಕೆ ಬಟ್ಟೆ ತೊಡಿಸುವುದು, ಮನೆಯಲ್ಲಿಯ ದಿನನಿತ್ಯ ಚಟುವಟಿಕೆ ಮುಂತಾದ ಪ್ರಭಾವಗಳಿಂದ ಹೆಣ್ಣು ಎಂದು ಬಾಲ್ಯದಿಂದಲೇ ಮಾರ್ಪಡುತ್ತಾಳೆ. ಕುಟುಂಬ ಹಾಕಿದ ಚೌಕಟ್ಟಿನಲ್ಲಿಯೇ ಸಿಕ್ಕು ನರಳುತ್ತಾಳೆ. ಆದ್ದರಿಂದಲೇ ತಾನು ಹೇಗಿರಬೇಕೆಂದು ಕುಟುಂಬದಿಂದಲೇ ಬಾಲ್ಯದಲ್ಲಿ ಕಲಿಯುತ್ತಾ ಬರುತ್ತಾಳೆ. ಹೆಣ್ಣಿನ ಜನುಮ ಹೂವಿನ ಹಾಗೆ ಪರಿಮಳ ಬೀರಿ ತಾ ಬಾಳಬೇಕು. ಕೊಟ್ಟವರ ಮನೆಯಲ್ಲಿ ಕೊಂಡವರ ಮನದಲ್ಲಿ ದೀಪದ ಹಾಗೆ ತಾಳಿ ಬಾಳಬೇಕು.

ಹೆತ್ತಮನೆಗೆ ಹೂ(ಸಮೃದ್ಧಿಯ ಸಂಕೇತ) ತರಬೇಕಾದ ಮಗಳಿಗೆ ತಾಯಿ ತನ್ನ ಸ್ವಾನುಭವದ ಪಾಠವನ್ನು ನಿರ್ದೇಶಿಸುತ್ತಾಳೆ. ಗಂಡನ ಮನೆಯ ನೆಮ್ಮದಿಗಾಗಿ ಮಗಳಿಗೆ ತಾಳ್ಮೆ-ತ್ಯಾಗ, ಕಷ್ಟ ಸಹಿಷ್ಣುತೆಯ ಎಚ್ಚರವಿತ್ತು ಸಂಪ್ರದಾಯದ ನೊಗವನ್ನು ಹೊರಿಸುತ್ತಾ ಹೆತ್ತ ಮನಿಗೆ ಕೀರ್ತಿಯನ್ನು ತರುವ ಸಲುವಾಗಿ ಎಂತಹ ಸಂಕಷ್ಟ ಎದುರಾದರೂ ಸಹಿಸಿಕೊಂಡು ಹೋಗು ಎಂದು ಆಕೆಯನ್ನು ಕುಟುಂಬ ಮಾನಸಿಕವಾಗಿ ಸಿದ್ಧಮಾಡಿ ಕಳುಹಿಸುತ್ತದೆ.

ಮಹಿಳೆ ಗಂಡನ ಮನೆಯಲ್ಲಿ ತಾನೇ ಅಡುಗೆ ಮಾಡಿದರೂ ಅವರು ಹಾಕಿದಾಗ ಊಟ ಮಾಡಬೇಕು, ತಪ್ಪುಮಾಡದಿದ್ದರೂ ಸಮಾಜಕ್ಕೆ ಹಾಗೂ ಕುಟುಂಬಕ್ಕೆ ಹೆದರಿ ನಡೆಯಬೇಕು, ಗಂಡನ ಧ್ವನಿ ಕೇಳಿದರೆ ಸಾಕು ಹೆದರಿ ನಡೆದು ಕುಟುಂಬಕ್ಕೆ ಉತ್ತಮ ಹೆಸರು ತರಬೇಕೆಂದು ಆಕೆಗೆ ಕಿವಿಮಾತನ್ನು ಹೇಳಿ ಕಳುಹಿಸುತ್ತಿದ್ದರು. ಕುಟುಂಬದ ಉದ್ದೇಶ ಒಳ್ಳೆಯದಾಗಿದ್ದರೂ ಅಂತಹ ಬೋಧನೆಗಳಿಂದಾಗಿ ಮಹಿಳೆಯರು ಅಸಹಾಯಕರಾಗಿ, ಪರಾವಲಂಬಿಯಾಗಿ ಜೀವನ ಸಾಗಿಸುತ್ತಾ ಬಂದರು. ಇಂತಹ ಪರಿಸ್ಥಿತಿಗೆ ಸಿಕ್ಕು ಬಳಲುತ್ತಿರುವ ಮಹಿಳೆಯರೂ ಕಥನಗೀತೆಗಳಲ್ಲಿಯೂ ಕಂಡುಬರುತ್ತಾರೆ, ವಾಸ್ತವದಲ್ಲಿಯೂ ಕಂಡುಬರುತ್ತಾರೆ. ಬಾಲ್ಯದಿಂದಲೂ ಮಹಿಳೆ ಕೌಟುಂಬಿಕ ನೆಲೆಯಲ್ಲಿ ಹೇಗೆ ಗುರುತಿಸಲ್ಪಟ್ಟಿದ್ದಾಳೆ ಎಂಬುದನ್ನು ಈ ಕೆಳಗಿನ ಕೆಲವೊಂದು ಕಥನಗೀತೆಗಳಲ್ಲಿ ಒಡಮೂಡಿದ ಬಗೆಯಿಂದ ತಿಳಿದುಕೊಳ್ಳಬಹುದು.

೩.೧. ಹೆಣ್ಣಿನ ಬಾಲ್ಯ :

ಜೀವನದ ಪ್ರಥಮ ಮೆಟ್ಟಿಲು ಬಾಲ್ಯ. ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಬಾಲ್ಯ ಜೀವನವನ್ನು ದಾಟಿಯೇ ಬಂದಿರುತ್ತಾಳೆ/ನೆ. ಕೆಲವರು ಬಾಲ್ಯದ ದಿನಗಳಲ್ಲಿ ಕುಟುಂಬದ ಸದಸ್ಯರಾದ ಅಪ್ಪ-ಅಮ್ಮ, ಅಕ್ಕ-ತಂಗಿ ಮುಂತಾದ ಸದಸ್ಯರೊಂದಿಗೆ ಸಂತೋಷದಿಂದ ಆ ಕ್ಷಣಗಳನ್ನು ಕಳೆದರೆ, ಕೆಲವರು ಅನಾಥರಾಗಿ ಬಾಲ್ಯದ ಅಮೂಲ್ಯ ಕ್ಷಣಗಳನ್ನು ಕಳೆಯುತ್ತಾರೆ. ಇನ್ನೂ ಕೆಲವರು ಎಲ್ಲರೂ ಇದ್ದು ಇಲ್ಲದ ಹಾಗೇ ಬಾಲ್ಯವನ್ನು ಕಳೆಯುತ್ತಾರೆ.

ಕಥನಗೀತೆಗಳಲ್ಲಿ ಮಹಿಳೆಯ ಬಾಲ್ಯವನ್ನು ನೋಡಿದರೆ ಆಕೆ ಕುಟುಂಬದ ಎಲ್ಲ ಸದಸ್ಯರೊಂದಿಗೆ ಇದ್ದು ಅನುಭವಿಸಿದ ದುಃಖ ದುಮ್ಮಾನಗಳು ಕಣ್ಣು ಮುಂದೆ ಬಂದಂತೆ ಭಾಸವಾಗುತ್ತದೆ. ಕಥನಗೀತೆಗಳಲ್ಲಿ ಹೆಣ್ಣಿನ ಬಾಲ್ಯವು ಕುಟುಂಬ, ಸಮಾಜದ ಕಟ್ಟುಪಾಡುಗಳಿಗೆ, ಸಂಪ್ರದಾಯಗಳಿಗೆ ಹೆಣೆದುಕೊಂಡಿದ್ದವು. ಮಹಿಳೆಯರಿಗೆ ಬಾಲ್ಯದಲ್ಲಿರುವಾಗಲೇ ಮದುವೆ ಮಾಡಿ ಬಿಡುವಂತಹ ಚಿತ್ರಣಗಳು ಇಲ್ಲಿ ದಾಖಲಾಗಿವೆ. ಅಂತಹ ಕೆಲವೊಂದು ಕಥನಗೀತೆಗಳ ಮೂಲಕ ಹೆಣ್ಣಿನ ಬಾಲ್ಯವನ್ನು ವಿವರಿಸುತ್ತಾ ವಾಸ್ತವದಲ್ಲಿಯೂ ಬಾಲ್ಯ ವಿವಾಹ ತಾಂಡವವಾಡುತ್ತಿರುವ ಚಿತ್ರಣವನ್ನು ಹಾಗೂ ಕಾರಣಗಳನ್ನು ತಿಳಿಸಲಾಗಿದೆ.

ದಾಂಬ್ರಿ ವುವುs ಆಗಿ, ಅವ್ವ ಪುಟ್ಟಿದಾಳೋs :

ಬಾಲ್ಯ ವಿವಾಹವೂ ಪ್ರಾಚೀನಕಾಲದಿಂದಲೂ ನಡೆಯುತ್ತ ಬಂದಿರುವ ಅಳಿಸಲಾಗದ ಇತಿಹಾಸ ನಮ್ಮೆದುರಿಗಿದೆ. ದೇಶದಲ್ಲಿ ಜರುಗುವ ಬಾಲ್ಯವಿವಾಹ ಮತ್ತು ಅದರಿಂದುಂಟಾಗುವ ಸಮಸ್ಯೆ ಸಾಕಷ್ಟಿವೆ. ಇವು ಕನ್ನಡ ಜನಪದ ಕಥನಗೀತೆಗಳಲ್ಲಿ ಹೇರಳವಾಗಿ ದೊರಕುತ್ತವೆ. ಅದರಿಂದ ಎಷ್ಟೇ ದುಷ್ಪರಿಣಾಮಗಳಾಗುತ್ತಿದ್ದರೂ ನಿಷೇಧ ಕಾಯ್ದೆ ತಂದರೂ ಬಾಲ್ಯವಿವಾಹ ಕುರಿತು ಇಂದಿಗೂ ವರದಿಯಾಗುತ್ತಿರುವುದನ್ನು ಕಂಡರೆ ಸಮಾಜ ಅನಾಗರಿಕ ಯುಗದಲ್ಲಿಯೇ ಇದೆ. ಕೇವಲ ಶಿಕ್ಷಣ ಕಲಿಯುವುದಷ್ಟೇ ಮುಖ್ಯವಲ್ಲ. ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಂಡು ಪರಿವರ್ತನೆಯ ಹಾದಿಯನ್ನು ರೂಪಿಸಿವುದಾಗಿದೆ.

ಬಾಲ್ಯವಿವಾಹದಿಂದಾಗುವ ಅನಾಹುತವನ್ನು ತಿಳಿಸುವ ಈ ಕಥನಗೀತೆಯು ಎಂದಿಗೂ ಮನಕಲಕುವ ವಿಷಯವಾಗಿದೆ. ಜನಪದರ ಬಾಲ್ಯವಿವಾಹದ್ದಿಂದಿರುವ ಉದ್ದೇಶವನ್ನು ಈ ಕೆಳಗಿನ ವಿಷಯದ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಪಾಳೆಯಗಾರರ ಆಡಳಿತ ಕಾಲದಲ್ಲಿ ಪ್ರತಿಯೊಂದು ಊರಿನಿಂದಲೂ ಕೆಲವರು ಸೈನ್ಯಕ್ಕೆ ಸೇರಬೇಕಾಗುತ್ತಿತ್ತು. ದಂಡಿಗೆ ಹೋಗುವ ಯುವಕರನ್ನು ಸಾಮಾನ್ಯವಾಗಿ ಮದುವೆ ಮಾಡಿ ಕಳಿಸುತ್ತಿದ್ದರು. ಮದುವೆಯ ಜವಾಬ್ದಾರಿಯಿಂದ ಅವರನ್ನು ನಿಯತ್ತಿನಲ್ಲಿರಿಸಬಹುದು ಎಂಬ ಭಾವನೆ ಇಂಥ ಮದುವೆಗಳ ಹಿನ್ನೆಲೆಯಲ್ಲಿ ಇದ್ದಂತೆ ಕಂಡುಬರುತ್ತದೆ. ದಂಡಿಗೆ ಹೋದವರು ದೀರ್ಘಕಾಲ ಹಿಂತಿರುಗಿ ಬರುತ್ತಿರಲಿಲ್ಲ. ಮದುವೆಯಾದ ಎಳೆಹೆಣ್ಣಿಗೆ ಗಂಡನ ಮುಖದ ಕಲ್ಪನೆಯೂ ಮೂಡಿರುತ್ತಿರಲಿಲ್ಲ. ಇದರಿಂದಾಗಿ ಗಂಡನೇ ಸ್ವತಃ ಎದುರಿಗೆ ನಿಂತರೂ ಗುರುತು ಹಿಡಿಯವುದು ಸಾಧ್ಯವಾಗುತ್ತಿರಲಿಲ್ಲ. ಆಟ ಆಡುತ್ತಾ ಕಾಲಕಳೆಯಬೇಕಾದ ವಯಸ್ಸಿನಲ್ಲಿ ಆ ಹೆಣ್ಣುಮಗುವಿಗೆ ಬಾಲ್ಯದಲ್ಲಿ ಶಾಪವಾಗಿ ಮದುವೆ ನೆರವೇರಿಸುತ್ತಿದ್ದರು. ಏನೂ ಅರಿಯದ

ಹಸುಳೆಯನ್ನು ಮದುವೆ ಎಂಬ ಪಂಜರದಲ್ಲಿ ಸಿಲುಕಿಸಿ ಇವಳಿಗೆ ತಿಳುವಳಿಕೆ ಬಂದ ನಂತರ ಗಂಡನ ಮುಖವನ್ನು ನೋಡಿದರೆ ಆಗ ಆತನೇ ತನ್ನ ಗಂಡ ಎಂದು ಗುರುತಿಸಲು ಅಸಹಾಯಕಳಾದ ಸ್ಥಿತಿ ದಾಂಬ್ರಿವುವುsಆಗಿ, ಅವ್ವುಪುಟ್ಟಿದಾಳೋs ಕಥನಗೀತೆಯಲ್ಲಿ ಅಭಿವ್ಯಕ್ತವಾಗಿದೆ.

ಮನೆಗೆ ಗಂಡನೇ ಬಂದಿದ್ದರೂ ಯಾರೋ ವಾಲಿಕಾರನು ಬಂದಿದ್ದಾನೆ ಎಂದು ತಿಳಿದು ವೊನ್ನಲುದೇವಿ ಚಿಕ್ಕಮ್ಮನವರ ಮನೆಗೆ ಹೋಗಿ ವಿಷಯ ತಿಳಿಸುತ್ತಾಳೆ. ಆತನಿಗೆ ಅಣ್ಣೆಸೊಪ್ಪು ಆಮ್ರ ಇಕ್ಕಿದೀನಿ. ಸೋಮಕ್ಕಿ ಕೂಳು ಹಾಕಿದೀನಿ. ಅವನು ನಿನ್ನನ್ನು ಕೇಳುತ್ತಿರುವನು ಎಂದಾಗ ಚಿಕ್ಕಮ್ಮ ಬಂದು ಆತ ಗಂಡನಾಗಬೇಕೆಂದು ಕುಟುಂಬದೊಂದಿಗೆ ಆತನ ಸಂಬಂಧವನ್ನು ಮನವರಿಕೆ ಮಾಡಿಕೊಡುತ್ತಾಳೆ.

"ಅಮ್ಮ ಅವನು ನಿಮ್ಮ ಅಮ್ಮನಾ ತಮ್ಮನೋ
ನಿಮ್ಮ ಅಪ್ಪನಿಗೇ ಅವ್ನು ಇನ್ನು ಅಳಿಯಾನೋ
ನಿನಕಿನ್ನ ಗಂಡನಮ್ಮ ವೊನ್ನಲು ದೇವಿ
ಮೂರು ತಿಂಗಳು ಮಗುವೀಗೆ
ತೊಟ್ಲ ಬಾಸಿಂಗ ಕಟ್ಟಿದಾನೋ
ಆವೊತ್ತು – ವೊದಾನೇ
ಆವೊತ್ತು – ವೋದವನೆ ಅವ್ನು
ಈವೊತ್ತು ಬಂದವ್ನೆ ಅವ್ನು
ದಂಡು ಸಂಬಳ ವೋದಾನೋ
ಈ ಊರಾಕಿನ್ನ ಬಂದಾನೋ
ನಿನ್ನ ಮನೀಗೆ ಬಂದವ್ನೆ ಅವ್ನು
ನೀನಿನ್ನ ಸರಿಯಾಗಿ ಊಟಕೆ ಬಡಿಸೋ । "[೩]

ಅವನು ನಿನ್ನ ತಾಯಿಯ ತಮ್ಮ ಸೋದರಮಾವ, ನಿಮ್ಮಪ್ಪನಿಗೆ ಅಳಿಯನು. ನಿನಗೆ ಗಂಡನು ಅವನು. ನೀನು ಮೂರು ತಿಂಗಳಿರುವಾಗ ತೊಟ್ಟಿಲಕ್ಕೆ ಬಾಸಿಂಗವನ್ನು ಕಟ್ಟಿದ್ದನು. ಆಗ ದಂಡಿಗೆ ಹೋದವನು ಇಂದು ಬಂದಿದ್ದಾನೆ. ಅವನಿಗೆ ಸರಿಯಾಗಿ ಊಟಕ್ಕೆ ಬಡಿಸು ಎಂದು ಹೇಳುತ್ತ ಆಕೆಗೆ ಆತನೇ ನಿನ್ನ ಗಂಡ ಎಂದು ಆಕೆಯು ಬಾಲ್ಯವಿವಾಹವಾಗಿರುವ ಘಟನೆಯನ್ನು

---

೩. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೮೪,೮೫

ನೆನಪಿಸಿ ಗಂಡನೊಂದಿಗೆ ಸರಿಯಾಗಿ ನಡೆದುಕೋ ಎಂದು ತಿಳುವಳಿಕೆ ಹೇಳುತ್ತಾಳೆ. ಈ ಮಾತನ್ನು ಕೇಳಿದ ನಂತರ ವೊನ್ನಾಲದೇವಿ ಬಾವಿಗೆ ಸಾಯಲು ಹೋಗುತ್ತಾಳೆ.

ದಂಡಿಗೆ ಹೋದ ಗಂಡ ಹಿಂತಿರುಗಿ ಬಂದಾಗ ಗುರುತು ಹಿಡಿಯದೇ ವಾಸ್ತವವನ್ನು ಅರಿಯದೇ ಒರಟಾಗಿ ವರ್ತಿಸಿದೆ ಎಂದು ಸತ್ಯ ತಿಳಿದ ಮೇಲೆ ನಾಚಿಕೆಯಿಂದ ವಾಸ್ತವವನ್ನು ಎದುರಿಸಲಾಗದೇ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದೊಂದು ದುರಂತವಾಗಿದೆ. ಕುಟುಂಬ ಮಾಡಿದ ತಪ್ಪಿಗೆ ತಾನು ಸಾವಿಗೆ ಶರಣಾಗುತ್ತಾಳೆ. ಆಕೆಯು ಪ್ರೌಢಳಾದಾಗ ಆಚಾರ-ವಿಚಾರಗಳಲ್ಲಿ ಬದಲಾವಣೆಗಳು ಆಗುವುದು ಸಹಜ. ಆದರೆ ಗಂಡನೊಂದಿಗೆ ತಿಳಿಯದೇ ವರ್ತಿಸಿದ ತನ್ನತನವನ್ನು ಸಹಿಸಲಾಗದೇ ಮೂರ್ಖತನಕ್ಕೆ ಗುರಿಯಾಗುತ್ತಾಳೆ. ಇದಕ್ಕೆಲ್ಲ ಕಾರಣ ಕುಟುಂಬ ಮತ್ತು ಸಮಾಜ ಎಂದು ಹೇಳಬಹುದು. ಮುಂದೆ ಬಾವಿಯಲ್ಲಿ ದಾಳಿಂಬರ ಹೂವಾಗಿ ಅರಳುತ್ತಾಳೆ. ದೇವರ ಕೃಪೆಯಿಂದ ಹದಿನಾರರ ತರುಣಿಯಾಗಿ ಗಂಡನೊಂದಿಗೆ ಸುಖ ಸಂಸಾರ ಮಾಡುತ್ತಾಳೆಂದು ಕಥನಗೀತೆಯಲ್ಲಿ ನಿರೂಪಿತವಾಗಿದೆ. ಆದರೆ ವೈಚಾರಿಕತೆಯ ನಿಲುವಿನಲ್ಲಿ ಹೇಳಬೇಕೆಂದರೆ ಜನಪದರು ದುಃಖಾಂತವಾಗಿ ಮಾರ್ಪಡುವ ಗೀತೆಯನ್ನು ಸುಖಾಂತ ವಾಗಿಸಿದ್ದಾರೆ ಅಷ್ಟೇ. ಹೂವು ಒಂದು ಸಮೃದ್ಧಿಯ ಸಂಕೇತವಾದ್ದರಿಂದ ಹೂವಾಗಿ ವೊನ್ನಲದೇವಿ ಹುಟ್ಟಿದಳೆಂದು ಜನರಲ್ಲಿ ಬಲವಾದ ನಂಬಿಕೆ ಬೇರೂರಲಾಗಿದೆ.

ಕುಟುಂಬದವರು ತಮ್ಮ ತಮ್ಮ ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳಲು ಆ ಹೆಣ್ಣುಮಗುವಿಗೆ ತೊಟ್ಟಿಲ್ಲಲಿಯೇ ಮದುವೆ ಮಾಡಿ ಆಕೆಯ ಆಸೆ-ಆಕಾಂಕ್ಷೆಗಳಿಗೆ ಕಡಿವಾಣ ಹಾಕಿ ಆಕೆಯ ಆಶಾಗೋಪುರವನ್ನೇ ಸುಟ್ಟು ಬಿಡುತ್ತಾರೆ. ಕುಟುಂಬದವರು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾದ ಕಾರಣ ಈ ಹೆಣ್ಣು ಮಗು ಬಾಲ್ಯದಿಂದಲೇ ಶೋಷಣೆಗೆ ಒಳಗಾಗುತ್ತಲೇ ಬದುಕು ಸಾಗಬೇಕಿತ್ತು ಎಂಬುದಕ್ಕೆ ಈ ಕಥನಗೀತೆ ನಿದರ್ಶನ.

ಅಂದಿನ ಕಾಲದಲ್ಲಿ ಹೆಣ್ಣು ಮಗು ಹುಟ್ಟಿತೆಂದರೆ ಆ ಮಗುವಿಗೆ ತೊಟ್ಟಿಲಲ್ಲಿ ಇರುವಾಗಲೇ ಮದುವೆಯನ್ನು ನಿಶ್ಚಯಿಸಲಾಗುತ್ತಿತ್ತು. ಮತ್ತು ಬಾಲ್ಯದಲ್ಲಿರುವಾಗಲೇ ಮದುವೆಯನ್ನು ಮಾಡುತ್ತಿದ್ದರು. ಆಗ ತಾನೇ ಭೂಮಿಗೆ ಬಂದಂತಹ ಮಗುವಿಗೆ ಯಾವುದರ ಬಗ್ಗೆಯು ಜ್ಞಾನ, ವಿಚಾರವಿರುವುದಿಲ್ಲ. ಅಂತಹ ಮಾಂಸದ ಮುದ್ದೆಯಂತಿರುವ ಮಗುವನ್ನು ತಿದ್ದಿ, ಬೆಳೆಸಿ, ಒಳ್ಳೆಯ ಶಿಕ್ಷಣ, ಆಚಾರ-ವಿಚಾರ ತಿಳಿಸಿ ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಬೇಕಾದಂತಹ ಕುಟುಂದವರೇ ಹೆಣ್ಣಿನ ಜೀವನವನ್ನು ದುರಂತಕ್ಕೀಡುಮಾಡುತ್ತಿದ್ದರು.

ಎತ್ತಿಗೆ ಮೂಗದಾರ ಹಾಕಿದಂತೆ ಹೆಣ್ಣಿಗೆ ಸಮಾಜ ಮತ್ತು ಕುಟುಂಬವು ಮುಗದಾರ ಹಾಕಿ, ಬಾಲ್ಯದಲ್ಲಿಯೇ ಸ್ತ್ರೀ ಕೌಟುಂಬಿಕ ವೇದನೆಯನ್ನು ಅನುಭವಿಸಿದ ಯಾತನೆ ಚಿರಸ್ಥಾಯಿಯಾಗಿರುವಂತಹದ್ದು.

ಗುಣಸಾಗರಿ :

ಗುಣಸಾಗರಿ ಕಥೆಯು ಮೂರು ಹಂತಗಳಲ್ಲಿ ಸಾಗುತ್ತದೆ. ಮೊದಲನೆಯದು ಗುಣಸಾಗರಿಯ ಮದುವೆ. ಎರಡನೆಯದು ಗೀಜಗ ಜೋಡಿಗಳ ಸರಸ ಸಲ್ಲಾಪ, ಮೂರನೆಯದು ಗುಣಸಾಗರಿ ತನ್ನ ಗಂಡ ಸಂಪನ್ನನಿಂದ ಬೇರೆಯಾಗಿ ಅನುಭವಿಸುವ ಕಷ್ಟನಷ್ಟಗಳು. ಗುಣಸಾಗರಿ–ಸಂಪನ್ನರ ಮದುವೆಯ ಬಗ್ಗೆ ಹೇಳುವುದಾದರೆ ಮಲ್ಲಿಗಮ್ಮ–ಮಲ್ಲಶೆಟ್ಟಿಯ ಮಗನಾದ ಸಂಪನ್ನ ಹತ್ತು ವರ್ಷದವನಿದ್ದಾಗ ಇವನ ತಾಯಿ ಮಲ್ಲಿಗಮ್ಮ ತನ್ನ ಸೋದರ ಸೊಸೆಯಾದ ಆರು ವರ್ಷದವಳಿರುವ ಗುಣಸಾಗರಿಯನ್ನು ಸಂಪನ್ನನಿಗೆ ಮದುವೆ ಮಾಡಿಸುತ್ತಾಳೆ.

ಪ್ರಾಚೀನ ಕಾಲದಿಂದ ರಕ್ತಸಂಬಂಧಗಳಲ್ಲಿಯೇ ಹೆಣ್ಣುಮಕ್ಕಳನ್ನು ಮದುವೆ ಮಾಡುವುದು ಬೆಳೆದು ಬಂದ ಪದ್ಧತಿಯಾಗಿದೆ. ಹುಟ್ಟಿದ ತಕ್ಷಣದಿಂದಲೇ ಸೋದರ ಮಾವನಾಗುವ ಗಂಡಿನೊಂದಿಗೆ ನಿಶ್ಚಯಿಸಿ ಸೊಸೆಯೆಂದು ಮಾನಸಿಕವಾಗಿ ತಯಾರಾಗಿಸುತ್ತಾರೆ. ಅಂತಹ ಒಂದು ಕೌಟುಂಬಿಕ ನೆಲೆಯಲ್ಲಿ ಗುಣಸಾಗರಿ ಸಿಕ್ಕು ನರಳುವ ಸ್ಥಿತಿ ಈ ಕಥನಗೀತೆಯಲ್ಲಿ ಒಡಮೂಡಿದೆ.

ಗುಣಸಾಗರಿ ೬ ವರ್ಷದವಳಿದ್ದಾಗ ೧೦ ವರ್ಷದವನಾದ ಸಂಪನ್ನನಿಗೆ ಮದುವೆ ಮಾಡಲು ಬಾಲೆ ಗುಣಸಾಗರಿಯನ್ನು ಕೇಳಲು ಹಿರಿಯರೆಲ್ಲಾ ಸೇರಿ ಹೋಗುತ್ತಾರೆ.

"ಪೋದಂತ ಸರಣಾರೀಗೆ ಗಿಂಡೀಲಿ ನೀರು ಕೊಟ್ಟು
ಕುಂಡಿರಿಸ್ಯಾಳು ಮಡಿಕೆ ಜ್ಯಾಡೀಯ ಮ್ಯಾಲೆ
ಕುಂಡಿರಿಸ್ಯಾಳು ಮಡಿಕೆ ಜ್ಯಾಡಿ ಮ್ಯಾಲೆ
ಕುಂತಂತ ಸರಣಾರು ಬಂದ ಕಾರ್‍ಯವ ವಡದೇಳ್ಯಾರು ।
ಬಂದಂತ ಕಾರ್‍ಯವ ವಡೆದು ಏಳ್ಯಾರು
ಆಡೋಳು ಗುಣಸಾಗ್ರಮ್ಮನ ಕೇಳ್ಯಾರು ॥
ತಂದೇಗೆ ಅಚ್ಚಾಡ ತಾಯೀಗೆ ಸೀರೆ

ಮಗಳು ಗುಣಸಾಗ್ರಮ್ಮಗೆ ಉಡುಗೊರೆ ತಂದಾರೆ ॥
ಮಗಳು ಗುಣಸಾಗ್ರಮ್ಮಗ ಉಡುಗೊರೆ ತಂದಾರೆ
ಆಡೋಳು ಗುಣಸಾಗ್ರಮ್ಮನ ಕೊಡಿರೆಂದಾರೆ ॥"[೪]

ಈ ಆಟವಾಡುವಂತಹ ವಯಸ್ಸಿನ ಬಾಲೆ ಗುಣಸಾಗರಿಯನ್ನು ಆರು ವರುಷ-ದವಳಿರುವಾಗಲೇ ಗುಣಸಾಗರಿಯ ಮನೆಯವರೆಲ್ಲಾ ಸೇರಿ ಧಾರೆಯೆರೆದು ಕೊಡುತ್ತಾರೆ. ಈ ಬಾಲೆ ಮದುವೆಯಾದ ಮೂರು ದಿನಕ್ಕೆ ಗಂಡ ಸಂಪನ್ನ ಮುತ್ತಿನ ವ್ಯಾಪರಕ್ಕೆ ಹೊರಡಲು ಸಿದ್ಧವಾಗುತ್ತಾನೆ. ಹೋಗುವ ಪೂರ್ವದಲ್ಲಿ ಗುಣಸಾಗರಿಗೆ ಮದುವೆಯ ಸಾಲ ಬಹಳ ಇದೆ. ನಾನು ವ್ಯಾಪಾರಕ್ಕೆ ಹೋಗುತ್ತೇನೆ, ನಾನು ಬರುವುದು ೧೨ ವರ್ಷ ಆಗುತ್ತೆ ಎಂದು ಹೇಳಿ ಎರಡು ಮಾತನಾಡುವ ಗಿಳಿಗಳನ್ನು ತಂದುಕೊಟ್ಟು ಯಾರೊಂದಿಗೂ ಮಾತನಾಡಬೇಡ ಎಂದು ಎಚ್ಚರಿಕೆ ನೀಡಿ ಹೋಗುತ್ತಾನೆ.

ಬಾಲ್ಯ ವಿವಾಹದಿಂದ ಗುಣಸಾಗರಿಯ ಜೀವನದಲ್ಲಿ ಏರುಪೇರುಗಳಾಗುತ್ತವೆ. ಸಂಪನ್ನ ರಹಸ್ಯವಾಗಿ ಬಂದು ಗುಣಸಾಗರಿಯನ್ನು ಸೇರಿದ ಕಾರಣದಿಂದ ಗರ್ಭಿಣಿ-ಯಾಗುತ್ತಾಳೆ ಎಂಬುದೊಂದು ದೃಷ್ಟಿಕೋನವಾದರೆ ಹೊಸದಾಗಿ ಮದುವೆಯಾಗಿ ಗಂಡನ ಮನೆಗೆ ಬಂದ ಕೂಡಲೇ ಸಂಪನ್ನನ ತಮ್ಮ ನಿರ್ವಾಣಿ ಗುಣಸಾಗರಿ ಕುರಿತು ಹೇಳುವ ರೀತಿ ಹೀಗಿದೆ; "ನಮ್ಮಣ್ಣಂಗೆ ತಕ್ಕದ ಮಡದ್ಯಲ್ಲ ಗುಣಸಾಗ್ರಿ ನನಗೆ ತಕ್ಕಾದ ಮಡದ್ಯಂದ".[೫] ಅತ್ತಿಗೆ ತಾಯಿಯ ಸಮಾನಳಾದರೂ ಆತನ ಕೆಟ್ಟದೃಷ್ಟಿ ಆಕೆಯ ಮೇಲೆ ಬೀಳುತ್ತದೆ ಎಂಬುದೊಂದು ದೃಷ್ಟಿಕೋನ. ಏನೇಯಾದರೂ ಈಕೆ ಗರ್ಭ ಧರಿಸಿದ್ದು ಈಕೆಯ ಗರ್ಭ 'ಕಳ್ಳ ಬಸಿರು' ಎಂದು ತೌರಿನವರು, ಗಂಡನ ಮನೆಯವರೆಲ್ಲರೂ ಕಡೆಗಣಿಸುತ್ತಾರೆ; ದೂಷಿಸುತ್ತಾರೆ. ಗುಣಸಾಗರಿಯು ತನ್ನ ಪಾತಿವ್ರತ್ಯದ ಮೇಲೆ ಇದ್ದ ನಂಬಿಕೆ ತನಗೆ ಬಂದೊದಗಿದ ಎಲ್ಲ ಕಷ್ಟನಷ್ಟಗಳಿಂದ ಪಾರಾಗುತ್ತಾಳೆ. ಆದರೆ ಸಮಾಜದಲ್ಲಿ ಮನೆಯಲ್ಲಿ ಅನುಮಾನಕ್ಕೆ, ಕಳಂಕಕ್ಕೆ ಒಳಗಾಗುತ್ತಾಳೆಂಬುದೇ ಒಂದು ಶೋಚನೀಯ ಸಂಗತಿ. ಸತ್ಯ-ಅಸತ್ಯಗಳನ್ನು ತಿಳಿಯದೇ ತಾವೇ ಸ್ವತಃ ತಿಳಿದುಕೊಂಡು ಬಾಯಿಗೆ ಬಂದ ಹಾಗೇ ಮಾತನಾಡುತ್ತಾರೆ. ಆಕೆಯ ಸಂಕಷ್ಟಗಳಿಗೆ ಸ್ಪಂದಿಸದೇ, ಆಕೆಯನ್ನು ಮಾನಸಿಕ ವೇದನೆಗೆ ಗುರಿ ಮಾಡುತ್ತಾರೆ.

---

೪. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೨೬೭
೫. ಜನಪದ ಕಥನಗೀತೆಗಳಲ್ಲಿ ಮಹಿಳಾ ಪ್ರತಿನಿಧೀಕರಣ : ಮೇಘನಾಥ ಎ.ಕೆ.ಎನ್, ಪು.೭೨

ನಿರ್ವಾಣಿಗೆ ಗುಣಸಾಗರಿ ಬಸುರಿಯಾಗಿರುವುದು ಗೊತ್ತಾದ ಕೂಡಲೇ ಕಳ್ಳ ಬಸುರಿಯಾಗಿದ್ದಾಳೆ ಎಂದು ಅವಳಿಗೆ ವಿಚಿತ್ರವಾದ ಶಿಕ್ಷೆಯನ್ನು ಕೊಡುತ್ತಾನೆ. ಮುಂದೆ ಅವಳ 'ಪಾತಿವ್ರತ್ಯ'ದಿಂದ ಆ ಯಾವ ಸಂಗತಿಗಳೂ ಅನಾಹುತ ಮಾಡುವುದಿಲ್ಲ. 'ಮುದ್ರೆ ಉಂಗುರ' ಕೊಟ್ಟು ಹೋಗಿದ್ದಾನೆಂದರೂ ಯಾರೂ ಒಪ್ಪುವುದಿಲ್ಲ. ಮುದ್ರೆ ಉಂಗುರ ಸಹಿತ ಮಾಯೆ ಆಗಿರುತ್ತದೆ. ಕಳ್ಳ ಬಸುರಾಗಿದ್ದಾಳೆಂದು ಗುಣಸಾಗರಿಯ ತವರುಮನೆಗೆ ವಿಷಯ ತಿಳಿಸುತ್ತಾರೆ. ತವರಿನವರೂ ಕೂಡಾ ಆಕೆಯನ್ನು ದೂಷಿಸುತ್ತಾರೆ. ಹಾಗಾಗಿ ಗುಣಸಾಗರಿ ಬಾಯಾರಿ ಬಳಲಿ ಕಾಡಿನಲ್ಲಿ ಹೋಗುವಾಗ ಮುದ್ದಣನ ತೋಟ ಪ್ರವೇಶಿಸುತ್ತಾಳೆ. ಬಾಡಿ ಹೋದ ತೋಟ ಮತ್ತೆ ಹಸಿರಿನಿಂದ ಕಂಗೊಳಿಸಿದ್ದರಿಂದ ಮಹಾನ್ ಪತಿವ್ರತೆ ಗುಣಸಾಗರಿಯನ್ನು ಮನೆಗೆ ಕರೆತಂದು ಅವಳಿಗೆ ಸಂಗಮ್ಮ ಎನ್ನುವಂತಹ ಸೂಲಗಿತ್ತಿಯಿಂದ ಹೆರಿಗೆ ಮಾಡಿಸುತ್ತಾರೆ. 'ಮಣೆಯಪ್ಪ' ಎಂಬ ಮಗನಿಗೆ ಜನ್ಮ ನೀಡುತ್ತಾಳೆ. ಮುಂದೆ ಮುತ್ತಿನ ವ್ಯಾಪಾರಕ್ಕೆ ಹೋದ ಸಂಪನ್ನ ಬಂದು ಹೆಂಡತಿಯಿಲ್ಲದ ವಿಚಾರ ತಿಳಿದು ವ್ಯಥೆಪಟ್ಟು ಹುಡುಕಾಡುತ್ತಾನೆ. ಮಣೆಯಪ್ಪ ತನ್ನ ತಂದೆ-ತಾಯಿ ಒಂದಾಗುವಂತೆ ಮಾಡುತ್ತಾನೆ.

ಗುಣಸಾಗರಿಯ ಅತ್ತೆ ಸಂಪನ್ನನ ತಾಯಿಯಾದ ಮಲ್ಲಿಗಮ್ಮ ಮಾನವನ ಸಹಜವಾದ ಪ್ರೀತಿಗೆ, ರಾಗಕ್ಕೆ ಸಂಕೇತವಾಗಿ ಕಂಡುಬಂದು ಸೊಸೆಯನ್ನು ಮಗಳಂತೆ ನೋಡಿಕೊಳ್ಳುತ್ತಾಳೆ. ತನ್ನ ಎರಡನೇ ಮಗನ ವಿರುದ್ಧ ಪ್ರತಿಭಟಿಸಿ ಗುಣಸಾಗರಿಯ ಪರ ನಿಂತಿರುವುದು ಇಡೀ ಮಹಿಳಾಲೋಕಕ್ಕೆ ಮಾದರಿಯಾಗಿದೆ. ಗುಣಸಾಗರಿಯ ನಾದಿನಿಯರಾದ ಅಲ್ಲಕ್ಕ-ಮಲ್ಲಕ್ಕರು ಅತ್ತಿಗೆಯ ಮೇಲೆ ಚಾಡಿ ಹೇಳುವುದು, ಕಿರುಕುಳ ಕೊಡುವುದು, ಆಕೆಯ ಶ್ರೇಯಸ್ಸನ್ನು ಕಂಡು ಸಹಿಸದೇ ಇರುವ ಅವಗುಣ ಅವರ ವ್ಯಕ್ತಿತ್ವದ ಮೇಲೆ ಕಪ್ಪು ಚುಕ್ಕೆಯಾಗಿ ಹಾಗೂ ಮಹಿಳೆಯರ ಸಮಸ್ಯೆಗಳನ್ನು ಮಹಿಳೆಯರೆ ಅರಿಯದ ಅವಿವೇಕತೆ ಕಂಡುಬಂದಿದೆ.

ನಾಗವ್ವ :

ಈ ಕಥನಗೀತೆಯೂ ಸಹ ಬಾಲ್ಯವಿವಾಹ ಕುರಿತಾಗಿದ್ದು ಎಳೆಯ ನಾಗವ್ವ ಕುಟುಂಬದ ಬಲೆಗೆ ಸಿಕ್ಕು ನರಳಿ ತನ್ನ ಜೀವನವನ್ನು ತಾನು ಅರಿಯುವ ಮೊದಲೇ ಕೊನೆಗಾಣಿಸಿಕೊಂಡ ದುರಂತ ಇದರಲ್ಲಿ ವ್ಯಕ್ತವಾಗಿದೆ. ನಾಗವ್ವಳ ಮದುವೆಯನ್ನು ನಿಶ್ಚಯಿಸಿದ ಬಗೆ, ಅದರಿಂದಾದ ಪರಿಣಾಮವನ್ನು ಇದರಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಬಾಲೆ ನಾಗವ್ವಳನ್ನು ಮದುವೆಯಾಗಲು ನವಿಲೂರು ಗೌಡನ ಮಗ ಚೆಂದಯ್ಯನಿಗೆ ಕೇಳಲು ಕುಟುಂಬದ ಸದಸ್ಯರೆಲ್ಲರೂ ಬಂದು ಕೇಳಿದಾಗ ನಾಗವ್ವಳ ಕುಟುಂಬದವರು ಇಂತೆಂದರು:

> "ಚಿಕ್ಕದು ನಮ್ಮ ಹೆಣ್ಣು ಸೀರೆ ಉಡಲರಿಯದು
> ಬಟ್ಟಲು ಬೆಳಗೋದ ಕಲಿಯದು । ನವಿಲೂರ
> ಗೌಡರಿಗೆ ಹೆಣ್ಣು ನಾವು ಕೊಡಲಾರೊ"[೧]

141630

ಎಂದು ಕುಟುಂಬದವರು ಮಗಳನ್ನು ಕೊಡಲು ವಿರೋಧಿಸಿ ಕೊನೆಗೆ ಒಪ್ಪಿಕೊಳ್ಳುತ್ತಾರೆ. ಏಕೆಂದರೆ ನವಿಲೂರ ಗೌಡರು ಶ್ರೀಮಂತರಿದ್ದರು. ಆದಕಾರಣ ಅವರ ಶ್ರೀಮಂತಿಕೆಗೆ ಮಾರು ಹೋಗಿ ಕೆಲವೊಂದು ಅಪಶಕನುಗಳ ಮಧ್ಯದಲ್ಲಿಯೂ ಲಗ್ನ ನಿಶ್ಚಯವಾಯಿತು. ಆದರೆ ನಾಗಮ್ಮಳ ವಿಧಿ ಕ್ರೂರವಾಗಿತ್ತು. ಮದುವೆಗೆ ಮುನ್ನವೇ ಚೆಂದಯ್ಯ ತೀರಿಕೊಂಡನು. ಆಗ ಆಕೆ ಕೊಂಡಕ್ಕೆ ಹಾರಿದಳು. ಪ್ರಪಂಚದ ಬಗ್ಗೆ ಏನೂ ಅರಿಯದ ಬಾಲೆ ನಾಗವ್ವ ಚಿಕ್ಕವಯಸ್ಸಿನಲ್ಲಿ ತನ್ನ ಜೀವನಕ್ಕೆ ತಿಲಾಂಜಲಿಯನ್ನಿತ್ತಳು. ಇದಕ್ಕೆ ಕಾರಣ ಕೌಟುಂಬಿಕ ವ್ಯವಸ್ಥೆ, ಸಮಾಜದ ಕಟ್ಟುಪಾಡುಗಳೇ ಕಾರಣ ಎಂದು ನಿರ್ಭಯವಾಗಿ ಹೇಳಬಹುದು. ಬಾಲ್ಯವಿವಾಹವು ಇತ್ತೀಚಿನವರೆಗೂ ಬದುಕಿದ್ದ ಸಂಪ್ರದಾಯ. ಕ್ವಚಿತ್ತಾಗಿ ಈಗಲೂ ಗ್ರಾಮಗಳ ಕಡೆ ಈ ಪದ್ಧತಿ ಇದ್ದೇ ಇದೆ. "ನಾಲ್ಕು ಐದನೆಯ ವರ್ಷಕ್ಕೆ ಲಗ್ನವಾಗಿ ಆರೇಳು ವರ್ಷವಾಗುವುದರೊಳಗಾಗಿ ಗಂಡ ತೀರಿಕೊಂಡು ತಾವು ವಿಧವೆಯರು ಎಂಬುದು ಅವರಿವರಿಂದ ತಿಳಿದು ಮುಂದೆ ಅನಾಥರಾಗಿ ಎಂಬತ್ತು ತೊಂಬತ್ತು ವರ್ಷಗಳ ಕಾಲ ಬದುಕಿದ ಮುದುಕಿಯರು ಈಗಲೂ ಕೆಲ ಗ್ರಾಮಗಳಲ್ಲಿ ಕಣ್ಣಿಗೆ ಕಾಣಸಿಗುತ್ತಾರೆ."[೨] ಮಾನವೀಯತೆ ಮರೆತ ಜನರು, ಕುಟುಂಬ ಮಾಡುವ ತಪ್ಪಿನಿಂದ ಮತ್ತು ಪ್ರಾಣಿಗಿಂತ ಕಡೆಯಾಗಿ ಮುಗ್ಧ ಜೀವವನ್ನು ಬಲಿಯಾಗಿಸಿ ಕ್ರೂರತೆಯನ್ನು ಮೆರೆದು ಅನಾಥರಾಗಿಯೇ ಕಾಲವನ್ನು ಕೊನೆಯವರೆಗೂ ಕಳೆ ಬೇಕಾದಂತಹ ಸ್ಥಿತಿಗೆ ಕಾರಣರಾಗುತ್ತಾರೆ ಈ ಹೆಣ್ಣು ಜೀವಗಳು.

ಹೆಣ್ಣುಮಗು ತೊಟ್ಟಿಲಲ್ಲಿ ಇರುವಾಗಲೇ ಮದುವೆ ಮಾಡುತ್ತಿದ್ದುದು ಅಥವಾ ನಾಲ್ಕು ಐದನೆಯ ವಯಸ್ಸಿನಲ್ಲಿಯೇ ತಾಳಿ ಕಟ್ಟಿಸುತ್ತಿದ್ದುದು ಕಂಡುಬರುತ್ತದೆ. ಇಂದಿಗೂ ಕೂಡ ಅಂತಹ ಮಹಿಳೆಯರೂ ಒಂಟಿ ಬಾಳನ್ನೂ ಸಾಗಿಸುತ್ತಿರುವುದನ್ನು ಕಂಡರೆ ಬೇಸರವುಂಟಾಗುತ್ತದೆ. ಇಷ್ಟೆಲ್ಲಾ ದುರ್ಘಟನೆಗಳು ನಡೆದ ಇತಿಹಾಸ ನಮ್ಮೆದುರಿಗಿದ್ದರೂ ಕೂಡ ಬಾಲ್ಯ ವಿವಾಹಗಳು ಜರುಗುತ್ತಿರುವುದನ್ನು ಅವಲೋಕಿಸಿದರೆ ವಿಷಾದನೀಯ-ವೆನಿಸುತ್ತದೆ.

---

೧. ಜನಪದ ಖಂಡಕಾವ್ಯಗಳು : ಜೀ.ಶಂ. ಪರಮಶಿವಯ್ಯ, ಪು.೩೧
೨. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೪

ಇನ್ನು ಹೆತ್ತ ಮಕ್ಕಳನ್ನು ಸಾಕಲಾರದೆ ತಂದೆ ಬೇರೊಬ್ಬರಿಗೆ ಮಗಳನ್ನು ಮಾರಾಟ ಮಾಡುವಂತಹ, ಮಗುವನ್ನು ಕೊಂಡುಕೊಂಡು ದಲ್ಲಾಳಿ ಬೇರೆ ಸ್ಥಳಕ್ಕೆ ಲಾಭಕ್ಕಾಗಿ ಆಕೆಯನ್ನು ಸಾಗಿಸಿ ಮಾರುತ್ತಿದ್ದ ಸಂದರ್ಭಗಳೂ ಇವೆ. ಕೊಳ್ಳುವವರ ಮಾರಾಟಗರರ ನಡುವೆ ಪತ್ರ ಬರವಣಿಗೆಯೂ ನಡೆಯುತ್ತಿತ್ತು ಎಂಬುದು ಸುಮಾರು ಸಾವಿರದ ಇನ್ನೂರರಲ್ಲಿ (೧೨೦೦) ನಡೆದ ದಾಸೀ ವಿಕ್ರಯ ಪತ್ರದ ವಿವರಣೆಯು ರಾಹುಲ ಸಾಂಕೃತ್ಯಾಯನನ ಕೃತಿಯಲ್ಲಿ ಬರುತ್ತದೆ. "ರಾಣಾ ಪ್ರತಾಪಸಿಂಹನೆಂಬುವನು ತಲೆಯ ಮೇಲೆ ಹುಲ್ಲು ಹಿಡಿದುಕೊಂಡಿದ್ದ ಪೊನ್ನುತಿ ಎಂಬ ಹದಿನಾರು ವರ್ಷದ ಗೌರವ ವರ್ಣದ ದಾಸಿಯನ್ನು ನಾಲ್ಕು ದಾರಿಗಳು ಕೂಡುವ ಚೌಕಕ್ಕೆ ಕರೆ ತಂದು ಐನೂರ ನಾಲ್ಕು ದಮ್ಮಗಳಿಗೆ ಮಾರಾಟ ಮಾಡಿದ. ಯಜಮಾನನ ಮನೆಯಲ್ಲಿ ಆಕೆ ಹಿಟ್ಟು ತಯಾರಿಸುವುದು, ನೀರು ತರುವುದು, ಹೊಲಕ್ಕೆ ಆಹಾರ ಪದಾರ್ಥಗಳನ್ನು ಒಯ್ಯುವುದು ಇವೇ ಮುಂತಾದ ಕೆಲಸಗಳನ್ನು ಆಕೆ ಮೋಸವಿಲ್ಲದೆ ಮಾಡಬೇಕು. ಯಜಮಾನ ಆಕೆಗೆ ಊಟ, ಬಟ್ಟೆ ಕೊಡುವುದು, ಒಂದು ವೇಳೆ ಪೊನ್ನುತಿ ಕೆಲಸ ಮಾಡುವುದರಲ್ಲಿ ತಪ್ಪಿದರೆ ಕಟ್ಟಿ ಹಾಕಿ ಹೊಡೆಯಬಹುದು. ಜುಟ್ಟು ಹಿಡಿದು ಕಾಲಿನಿಂದ ಒದೆಯುತ್ತ ಬೆತ್ತದಿಂದ ತಾಡಿಸಬಹುದು. ಹೊಡೆತಕ್ಕೆ ಆಕೆ ಸತ್ತರೆ ಧಣಿಯಾದವನು ನಿರ್ದೋಷಿ. ಇದನ್ನೆಲ್ಲ ಪತ್ರ ಹೇಳುತ್ತದೆ."[೮] ಇದನ್ನು ಕೇಳಿದರೆ ಇಂದಿನ ದಿನಕ್ಕೂ ಅಂದಿನ ದಿನಕ್ಕೂ ಹೆಚ್ಚು ವ್ಯತ್ಯಾಸವಿಲ್ಲವೆನಿಸುತ್ತದೆ. ಏಕೆಂದರೆ ಹೆಣ್ಣುಮಕ್ಕಳನ್ನು ಅಪಹರಿಸಿ ಆಕೆಯನ್ನು ಮಾರಾಟ ಮಾಡುತ್ತಿದ್ದಾರೆ ಮತ್ತು ಸ್ವತಃ ತಂದೆಯು ಮಕ್ಕಳನ್ನು ಮಾರಾಟ ಮಾಡುವುದು ಇಂದಿಗೂ ಕಂಡುಬರುತ್ತದೆ. ಕುಟುಂಬದ ಅರ್ಥವನ್ನು ತಿಳಿಯದ ಸ್ವಂತ ತಂದೆಯೇ ಮಗಳನ್ನು ಮಾರಾಟ ಮಾಡುವುದೆಂದರೆ ನಂಬಲು ಅಸಾಧ್ಯ. ಆದರೆ ನಂಬುವುದು ಕೂಡಾ ಅಷ್ಟೆ ಅನಿವಾರ್ಯವಾಗಿದೆ. ಕೇವಲ ಹೆರುವುದೊಂದೆ ತಂದೆ-ತಾಯಿಯರ ಕರ್ತವ್ಯವೆಂದರೆ ಆಗದು; ಮಕ್ಕಳಿಗೆ ಲಾಲನೆ-ಪಾಲನೆ, ಪೋಷಣೆ ಕೊಟ್ಟು ಉತ್ತಮ ಶಿಕ್ಷಣ ಒದಗಿಸಿ ಉಜ್ವಲವಾದ ಭವಿಷ್ಯವನ್ನು ನಿರ್ಮಾಣ ಮಾಡಲು ಕುಟುಂಬದವರು ಶ್ರಮಿಸಬೇಕೆಂಬ ಸತ್ಯ ಮನವರಿಕೆಯಾಗಬೇಕು. ಕುಟುಂಬದ ಸದಸ್ಯರೊಂದಿಗೆ ಇರುವ ಸಂಬಂಧಕ್ಕೆ ಕಳಂಕ ಪ್ರಾಯವಾಗಿ ಅಹಿತಕರ ಘಟನೆಗಳು ನಡೆಯುತ್ತಿವೆ. ಕುಟುಂಬದ ಸದಸ್ಯರ ಮೇಲೆ ನಂಬಿಕೆ ಇಡದಂತಹ ಸ್ಥಿತಿ ಎದುರಾಗಿದೆ. ಇನ್ನು ಇಡೀ ಸಮಾಜದ ಮೇಲೆ ಯಾವ ನಂಬಿಕೆಯಿಡಲು ಅಸಾಧ್ಯ ಎನ್ನುವಂತಾಗಿದೆ. ಕುಟುಂಬದ ಸದಸ್ಯರೇ ತಮ್ಮ ಮನೆಯ ಹೆಣ್ಣುಮಕ್ಕಳ ಮೇಲೆ ಕೃತ್ಯ

---

೮. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೫,೬

ಎಸಗಿದರೆ ಇನ್ನು ಆ ಮಕ್ಕಳು ಯಾರನ್ನು ನಂಬಿ ಜೀವನವನ್ನು ಸಾಗಿಸಬೇಕೆಂಬ ಅನುಮಾನ, ಆತಂಕವಾಗುತ್ತಿದೆ.

ಕುಟುಂಬದ ಸದಸ್ಯರೇ ಮೊದಲು ಮಹಿಳೆಯನ್ನು ನಿರ್ಜೀವ ವಸ್ತುವಿನ ಹಾಗೆ ಕಂಡು ಪದ್ಧತಿಯ ಹೆಸರಲ್ಲಿ ಆಕೆಗೆ ನಿಕೃಷ್ಟ ಶಿಕ್ಷೆಯನ್ನು ವಿಧಿಸುತ್ತಿದ್ದರು ಎಂಬುದಕ್ಕೆ ಬಾರ್ಬೋಸಾ ಅವರ ಈ ಮುಂದಿನ ವಿವರಣೆಯೇ ಸಾಕ್ಷಿಯಾಗಿದೆ: ಬಂಧು-ಬಳಗದವರೆಲ್ಲ ಕೂಡಿ ಹತ್ತು ವರ್ಷದ ಬಾಲೆಯನ್ನು ದೇವಾಲಯದ ಕಡೆಗೆ ಕರೆದೊಯ್ಯುತ್ತಿದ್ದರು. ಗುಡಿಯ ಬಾಗಿಲಲ್ಲಿ ಒಂದಾಳೆತ್ತರದ ಕಲ್ಲಿನ ಬೋದಿಗೆ ಇರುತ್ತಿತ್ತು. ಅದರ ಸುತ್ತ ಪರದೆ. ಕನ್ಯೆಯೊಡನೆ ತಾಯಿ ಅಲ್ಲಿಗೆ ಪ್ರವೇಶ ಮಾಡಬೇಕು. ಪೂಜೆ ನಡೆದಾದ ಮೇಲೆ ಬೋದಿಗೆಗೆ ಸಿಕ್ಕಿಸಿದ್ದ ಉದ್ದನೆಯ ಕಡ್ಡಿಯ ತುದಿಗೆ ಹೆಣ್ಣುಮಗಳು ಜನನಾಂಗವನ್ನು ಇಡುತ್ತಿದ್ದಂತೆ ರಕ್ತ ಸೋರಲು ಆರಂಭವಾಗುತ್ತಿತ್ತು. ಕಡ್ಡಿಯ ಮೂಲಕ ನೆತ್ತರು ಬೋದಿಗೆಯನ್ನು ಮುಟ್ಟುತ್ತಿತ್ತು. ದೇವರು ಆಕೆಯನ್ನು ಉಪಭೋಗಿಸಿದ ಎಂದು ಎಲ್ಲರೂ ತಿಳಿಯುತ್ತಿದ್ದರು. ಅಲ್ಲಿಂದ ಮುಂದೆ ಆಕೆ ದೇವದಾಸಿ, ಅರ್ಥಾತ್ ದೇವಾಲಯಕ್ಕೆ ಸಂಬಂಧಿಸಿದ ಎಲ್ಲ ಪುರುಷರ ದಾಸಿ ಎಂದು ಆಕೆಯನ್ನು ಪರಿಗಣಿಸಲಾಗುತ್ತಿತ್ತು. ಈ ಆಚರಣೆಯನ್ನು ಕನ್ಯೆಯೊಬ್ಬಳು ದೇವದಾಸಿಯಾಗುವ ಮುನ್ನ ಆಕೆಗೆ ನೆರವೇರಿಸುತ್ತದ್ದ ಶಾಸ್ತ್ರವಾಗಿದೆ ದೇವದಾಸಿ ಆಗುತ್ತಿದ್ದವರಿಗೆಲ್ಲ ಮೊದಲು ಈ ವಿಧಿಯನ್ನು ನೆರವೇರಿಸುತ್ತಿದ್ದರು ಎಂಬ ಕುರುಹು ಇದರಿಂದ ತಿಳಿದುಬರುತ್ತದೆ. ಸಮಾಜ, ಕುಟುಂಬ ನಿರ್ಮಿಸಿರುವ ನಂಬಿಕೆ ಆಚರಣೆಗೆ ಬಾಲೆಯನ್ನು ಬಲಿಪಶು ಮಾಡುತ್ತಿದ್ದರು ಎಂಬುದು ಇಂಥ ಘೋರ ಕಠಿಣ ಶಿಕ್ಷೆಯಿಂದ ಸ್ಪಷ್ಟವಾಗುತ್ತದೆ.

ಮಹಾಸತಿ ತಾಡಿ ನಾಗಮ್ಮ:

ಮಹಾಸತಿ ತಾಡಿ ನಾಗಮ್ಮಳು ಓಬಳಾಪುರದವಳು. ಅಲ್ಲಿಯ ಎಲಿಯೋರು ಕುಲದಲ್ಲಿ ಹುಟ್ಟಿದವಳು. ತಾಡಿವಡ್ಡಗೆರೆಯ ಸಿರಿವಂತ ಗೌಡರು, ಹಿರಿಯ ಕಿರಿಯರಾದಿಯಾಗಿ ಒಡವೆ ವಸ್ತುಗಳೊಡನೆ ಗಾಡಿ ಹೂಡಿಕೊಂಡು ನಾಗಮ್ಮಳನ್ನು ತಮ್ಮ ಮನೆಯ ಸೊಸೆಯಾಗಿ ಮಾಡಿಕೊಳ್ಳಲು ಬಂದರು. ಆದರೆ ಕುಟುಂಬದವರು ನಮ್ಮ ಮಗಳು ಚಿಕ್ಕವಳಿದ್ದಾಳೆ. ಆಕೆಗೆ ಇನ್ನೂ ಸೀರೆ ಉಡುವುದಕ್ಕೆ, ಪಾತ್ರೆಗಳನ್ನು ತಿಕ್ಕಿ ತೊಳೆಯುವುದಕ್ಕೆ ಬರುವುದಿಲ್ಲ. ಮೇಲಾಗಿ ಸಿರಿವಂತರಾದ ನೀವು ನಮ್ಮಂತಹ ಬಡ ಕುಟುಂಬ ದವರೊಡನೆ ಸಂಬಂಧ ಬೆಳೆಸುವುದು ಯೋಗ್ಯವಲ್ಲವೆಂದು ಹೇಳುವ ಮಾತು ಕಥನಗೀತೆಯಲ್ಲಿ ಕೆಳಗಿನಂತೆ ವ್ಯಕ್ತವಾಗಿದೆ.

"ಚಿಕ್ಕೋಳು ನಮ್ಮಗಳು ದಟ್ಟಿವುಡುವುದ ಅರಿಯಳು

ಬಟ್ಟಲ ಬೆಳಗೋದ ಅರಿಯಾಳು । ವಡ್ಡಗೆರೆ

ದೊಡ್ಡೋರಿಗೆ ಮಗಳು ತರವಲ್ಲ ॥[೯]

ಎಂದು ನಾನಾ ರೀತಿ ಹೇಳಿದರೂ ನಾವೆಲ್ಲ ಆಕೆಗೆ ಕೆಲಸ ಕಾರ್ಯಗಳನ್ನೆಲ್ಲ ಕಲಿಸುತ್ತೇವೆ ಎಂದು ಹೇಳುತ್ತಾರೆ. ಕೊನೆಗೂ ಮನೆಯವರೆಲ್ಲರ ಒಪ್ಪಿಗೆ ಮೂಲಕ ಸಿರಿವಂತರಿಗೆ ಮಗಳನ್ನು ಕೊಟ್ಟು ಸಂಬಂಧ ಬೆಳೆಸುವುದೆಂದು ತೀರ್ಮಾನವಾಯಿತು. ಮದುವೆ ಕೂಡಾ ಆಯಿತು. ಗಂಡ ನಾಗಣ್ಣ ದಂಡಿಗೆ ಹೋದ ದಂಡಿನಲ್ಲಿ ಕಾರಣಾಂತರಗಳಿಂದ ಮಡಿದನು. ಈಕೆಗೆ ಸುದ್ದಿ ತಿಳಿದ ತಕ್ಷಣ ಕೊಂಡಕ್ಕೆ ಹೋಗಲು ಸಿದ್ಧಳಾಗುತ್ತಾಳೆ. ಮನೆಯಲ್ಲಿ ಎಲ್ಲರೂ ಆಕೆಗೆ ಸಮಾಧಾನ ಹೇಳಿ ಕೊಂಡಕ್ಕೆ ಹೋಗಲು ಬೇಡ ಎಂದು ಎಷ್ಟೇ ಹೇಳಿದರೂ ಆಕೆ ಕೇಳುವುದಿಲ್ಲ. ಅದಕ್ಕೆ ಬದಲಾಗಿ ಕಿಚ್ಚನ್ನು ಕೊಡದಿದ್ದರೆ ನಾಲಿಗೆಯನ್ನು ಕಿತ್ತುಕೊಳ್ಳುತ್ತೇನೆ ಎಂದು ದಿಟ್ಟತನದಿಂದ ಉತ್ತರಿಸುತ್ತಾಳೆ. ಇದಕ್ಕೆ ಪ್ರಜೆಗಳ ಹಾಗೂ ತೊಟ್ಟಿಲಲ್ಲಿ ಆಡುವ ಮಗನಾಣೆ ಎಂದು ಕುಟುಂಬದವರಿಗೆ ತನ್ನ ನಿರ್ಧಾರವನ್ನು ಕುರಿತು ಮಾತನಾಡುವಳು.

ಹೀಗೆ ಕೊಂಡಕ್ಕೆ ಹೋಗಲೇಬೇಕು ಎಂದು ಹಠ ಹಿಡಿಯುವುದಕ್ಕೆ ಕಾರಣ ಬಾಲೆ ನಾಗಮ್ಮಳಿಗೆ ಮದುವೆಯನ್ನು ಮಾಡಿ ಆಕೆ ಸಹಗಮನಕ್ಕೆ ಹೋಗಲು ಪರೋಕ್ಷವಾಗಿ ಕುಟುಂಬದವರೇ ಕಾರಣ ಎಂದು ಹೇಳಬಹುದು. ಮದುವೆ ಮಾಡಿ ಸಮಾಜದ ನಂಬಿಕೆ, ಆಚರಣೆ, ಸಂಪ್ರದಾಯ ಚೌಕಟ್ಟಿಗೆ ಆಕೆಯನ್ನು ಬಂಧಿಸಿ ಸಹಗಮನ ಎನ್ನುವುದು ತನ್ನ ಪಾಲಿನ ಕರ್ತವ್ಯ; ಅದನ್ನು ತಾನು ಪಾಲಿಸಲೇಬೇಕು ಅದರಿಂದ ಮಾತ್ರ ಸಿದ್ಧಿ ಲಭಿಸುತ್ತದೆ ಎನ್ನುವ ನಿರ್ಧಾರ, ಹಠ, ಛಲ, ಧೈರ್ಯ ಆಕೆಯಲ್ಲಿ ಬೇರೂರಿ ಬಿಟ್ಟಿದ್ದವು. ಕೊನೆಗೂ ಸಹಗಮನ ಮಾಡುತ್ತಾಳೆ. ಊರಿನಲ್ಲಿ ಸಹಗಮನ ಪದ್ಧತಿ ಇದ್ದರೂ ಕೂಡಾ ಯಾರೂ ಆಕೆಗೆ ಸಹಗಮನ ಮಾಡು ಎನ್ನುವುದಿಲ್ಲ. ನಾಗಮ್ಮಳೇ ಸ್ವತಃ ಸಹಗಮನ ಮಾಡುತ್ತಾಳೆ. ಕಾರಣ ಸಮಾಜದ ಆಚರಣೆ, ಕಟ್ಟುಪಾಡುಗಳಿಗೆ ಬದ್ಧಳಾಗಿರುವಂತೆ ಕುಟುಂಬವು ಬೆಳೆಸಿದ ಪರಿಕ್ರಮ.

ಕಥನಗೀತೆಗಳಲ್ಲಿ ಹೆಣ್ಣಿನ ಬಾಲ್ಯ ಎನ್ನುವುದು ಆನಂದದಿಂದ, ಉತ್ಸಾಹದಿಂದ ಕೂಡಿರದೇ ಕಷ್ಟ-ಕಾರ್ಪಣ್ಯಗಳ ಮಧ್ಯೆ ನೋವು, ಸಂಕಟ, ವೇದನೆಯಲ್ಲಿಯೇ ಕಳೆದು ಬಂದಿವೆ. ಬಾಲ್ಯದಲ್ಲಿ ಆಟವಾಡಿ, ಶಿಕ್ಷಣ ಪಡೆದು, ಸ್ನೇಹಿತರೊಡನೆ, ಕುಟುಂಬದವರೊಡನೆ ಖುಷಿಯಾಗಿ ಕಳೆಯಬೇಕಾದಂತಹ ಬಾಲ್ಯದ ಬದುಕು ಸಂಸಾರದ ಹೊರೆಯೊಡನೆ, ಕಠಿಣ ಶಿಕ್ಷೆಯೊಡನೆ ಆಕೆಯ ಬದುಕು ಸಾಗಿ ಬಂದಿದೆ ಎಂಬುದು ಕಂಡುಬರುತ್ತದೆ. ಬಾಲ್ಯವಿವಾಹಕ್ಕೆ

---

೯. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೪೬

ನಿಷೇಧಕಾಯ್ದೆ ಇದ್ದರೂ ಕೂಡ ವಾಸ್ತವದಲ್ಲಿ ಬಾಲ್ಯವಿವಾಹಗಳು ಜರುಗುತ್ತಿರುವುದು ಹಾಗೂ ಇದಕ್ಕೆ ಪ್ರೋತ್ಸಹಕವಾಗಿ ಸಾಂಪ್ರದಾಯಿಕ ಪಂಚಾಯಿತಿ ಕಟ್ಟೆ ಇರುವುದು ದುರಂತ. ಬಾಲ್ಯವಿವಾಹವೊಂದರ ಕುರಿತು ಸರಕಾರದ ಅಧಿಕಾರಿಗಳಿಗೆ ಮಾಹಿತಿ ಕೊಟ್ಟು ಅನ್ಯಾಯವನ್ನು ತಡೆಗಟ್ಟಿದ್ದಕ್ಕೆ ಗ್ರಾಮದ ಮುಖ್ಯಸ್ಥ- ರೆನಿಸಿಕೊಂಡವರು ಪಂಚಾಯ್ತಿ ಸೇರಿಸಿ ಮಹಿಳೆಯರಿಗೆ ಶಿಕ್ಷೆಯಾಗಿ ದೊಡ್ಡ ಮೊತ್ತದ ದಂಡ ವಿಧಿಸುವಂತಹ ಘಟನೆಗಳು ಜರಗುತ್ತಿವೆ. ಕಾನೂನಿನ ಪ್ರಕಾರ ಮಾಡಿದ ಕಾರ್ಯ ಸರಿಯಿದ್ದರೂ ಸಮಾಜ ಆಕೆಯನ್ನು ತಪ್ಪಿತಸ್ಥಳನ್ನಾಗಿಯೇ ಕಾಣುತ್ತದೆ. ಹೀಗಿರುವಾಗ ನ್ಯಾಯದ ಪರ ಹೋರಾಡಲು ಮುಂದೆ ಬರಲು ಜನರು ಭಯಪಡುತ್ತಾರೆ. ಇದರಿಂದ ಸಮಸ್ಯೆಗಳನ್ನು ಬಗೆಹರಿಸಲು ಎಂದಿಗೂ ಸಾಧ್ಯವಾಗುವುದಿಲ್ಲ. ಬದಲಾಗಿ ಸಮಸ್ಯೆಗಳು ಹೊಸ ರೂಪ ತಾಳಿ ಮುಂದುವರೆಯುತ್ತಿವೆ.

ಬಾಲ್ಯವಿವಾಹ ನೆರವೇರುವುದನ್ನು ಪ್ರತಿಬಂಧಿಸಿ ಪ್ರತಿಬಂಧಕ ಆಜ್ಞೆಯನ್ನು ಹೊರಡಿಸುವ ಅಧಿಕಾರ ನ್ಯಾಯಾಲಯಕ್ಕಿದೆ. ಇಂತಹ ಕಾನೂನಿನ ಅರಿವನ್ನು ಜನರಲ್ಲಿ ಮೂಡಿಸುವುದರೊಂದಿಗೆ ನ್ಯಾಯಕ್ಕೆ ಪ್ರೋತ್ಸಾಹಿಸುವ ಅಧಿಕಾರಿಗಳ ಅವಶ್ಯಕತೆ ಈ ಸಮಾಜಕ್ಕಿದೆ. ಆದರೆ ಅದೇ ಸಮಾಜ ಬಾಲ್ಯವಿವಾಹವನ್ನು ತಡೆಯಲು ಸರಕಾರದ ಅಧಿಕಾರಿಗಳಿಗೆ ದೂರು ಕೊಟ್ಟು ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಿದರೆ ಅವರಿಗೆ ಊರಿನ ಮುಖಂಡರು ಸಾಂಪ್ರದಾಯಿಕ ಕಟ್ಟೆ ಪಂಚಾಯ್ತಿಯಲ್ಲಿ ಶಿಕ್ಷೆಯನ್ನು ನೀಡುವುದು ಕಂಡರೆ, ಸಮಾಜವನ್ನು ಕಟ್ಟುವವರೇ ಕೆಡುವುವ ಕೆಲಸದಲ್ಲಿ ತೊಡಗಿದಾಗ ಸಮಾಜ ಬದಲಾವಣೆ ಯಾಗುವುದು ಪ್ರಶ್ನಾರ್ಹವಾಗಿದೆ. ಈ ರೀತಿ ಅನ್ಯಾಯ ಮಾಡಿದರೆ ಸಮಾಜದ ಸಮಸ್ಯೆಗಳು ಬಗೆಹರಿಯಲಾರವು.

ಹೆಣ್ಣು ಎಂದರೆ ಕೀಳು ದೃಷ್ಟಿಯಲ್ಲಿ ಕಾಣುವ ಸಮಾಜದಲ್ಲಿ ಗಂಡುಮಗುವಿನ ಜನನಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಾರೆ. ಯಾಕೆಂದರೆ ಗಂಡು ಮಗ ಎಂದರೆ ವೀರ, ಶೂರ, ಧೀರ, ಧೈರ್ಯವಂತ ಎಂಬುದು ಅವರ ಕಲ್ಪನೆ. ಅದಕೆಂದೇ ಮಹಾಸತಿ ವೀರ ತಿಮ್ಮವ್ವ ಕಥನಗೀತೆಯ ಭಾಗ ಒಂದರಲ್ಲಿ ಗಂಡು ಮಗುವನ್ನು ಪಡೆಯಬೇಕಾದರೆ ಏನು ಮಾಡಬೇಕೆಂಬುದನ್ನು ಜನಪದರು ತಿಳಿಸುತ್ತಾರೆ.

ಯೋಗಿಯಾ ನೆನೆದಾರೆ ಬಾಗ್ಯಾವ ಕೊಡುವಾನು
ಬಾಲರಾ ಕೊಡುವಾನು ಮನಿ ತುಂಬ । ಇರಿಯಟ್ಟಿ
ಯೋಗಿ ಜಂಗಮನ ನೆನೆದಾರೆ

ಬಾಲರಾ ಎನ್ನುವಲ್ಲಿ ಪುರುಷಪ್ರಧಾನತೆ ಕಂಡುಬರುತ್ತದೆ. ಭಾರತೀಯ ಸಮಾಜ ಪುರುಷ ಪ್ರಧಾನವಾದದ್ದು ಎಂಬುದಕ್ಕೆ ನಮಗೆ ಹಲವಾರು ದಾಖಲೆಗಳು ನಮ್ಮ ಭಾರತದ ಇತಿಹಾಸದಲ್ಲಿ ಹಾಗೂ ಜೀವನದ ಪ್ರತಿಬಿಂಬಗಳಾದ ಸಾಹಿತ್ಯದಲ್ಲಿ ಸಿಗುತ್ತವೆ. ಒಟ್ಟಿನಲ್ಲಿ ಹೆಣ್ಣು ಬಾಲ್ಯದಲ್ಲಿ ಒಂದಲ್ಲ ಒಂದು ಕಷ್ಟ, ನೋವುಗಳನ್ನು ಅನುಭವಿಸಿದ್ದಾಳೆ ಎಂಬುದು ಕಥನಗೀತೆಗಳಿಂದ ಸ್ಪಷ್ಟವಾಗುತ್ತದೆ.

ಸ್ತ್ರೀಯ ಇಂದಿನ ಸಾಮಾಜಿಕ ಸ್ಥಾನವನ್ನು ಗಮನದಲ್ಲಿಟ್ಟುಕೊಂಡು ಅಥವಾ ಇಪ್ಪತ್ತೊಂದನೆಯ ಶತಮಾನದಲ್ಲಿನ ಸ್ತ್ರೀಯ ದರ್ಜೆಯ ಸಂಬಂಧವಾಗಿ ವಿವೇಚನೆ ಮಾಡುವಾಗ ಒಂದು ಮಹತ್ವದ ವಿಷಯವು ತಿಳಿದುಬರುತ್ತದೆ. ಅದೇನೆಂದರೆ ಸ್ತ್ರೀಯು ಪುರುಷರಿಗಿಂತ ಯಾವುದರಲ್ಲಿಯೂ ಕನಿಷ್ಠಳಲ್ಲ ಎಂಬ ವಿಷಯಕ್ಕೆ ಇರುವ ಸಾಮಾಜಿಕ ಮಾನ್ಯತೆ. "ಸ್ತ್ರೀ ಪುರುಷರ ನಡುವಿನ ಲಿಂಗಭೇದವು ನಿಸರ್ಗ ನಿರ್ಮಿತವಾದುದು. ಅಂದರೆ ಸ್ತ್ರೀಯು ಮೊದಲು ಮಾನವ ಪ್ರಾಣಿ. ಅನಂತರ ಅವಳು ಸ್ತ್ರೀ. ಈ ದೃಷ್ಟಿಯಿಂದ ಸ್ತ್ರೀಯೇ 'ಶ್ರೇಷ್ಠ' ಎಂದು ಡಾ. ಜಾನ್‌ಸನ್ ಅಭಿಪ್ರಾಯಪಟ್ಟಿದ್ದಾರೆ. ಒಬ್ಬ ಫ್ರೆಂಚ್ ಲೇಖಕಿಯು ಒಂದೆಡೆ ಹೀಗೆ ಹೇಳಿರುತ್ತಾಳೆ. ಸ್ತ್ರೀಯು ಸ್ತ್ರೀ ಎಂಬುದಾಗಿಯೇ ಜನುಮವನ್ನು ಪಡೆಯುವುದಿಲ್ಲ. ಅವಳು ಸಂಸ್ಕಾರದಿಂದ ಸ್ತ್ರೀಯಾಗುತ್ತಾಳೆ."[೧೦] ಹಾಗಾಗಿ ಸ್ತ್ರೀಯೆಂದು ಗುರುತಿಸುವುದು ಬಾಲ್ಯ ಮತ್ತು ಸಂಸ್ಕಾರದಿಂದಲೇ ಎಂದು ಹೇಳಬಹುದು. ಬಾಲ್ಯದಿಂದಲೇ ಸಮಾಜ ಹಾಕಿದ ಚೌಕಟ್ಟು, ನಿಯಮ, ಸಂಸ್ಕಾರ ಸ್ತ್ರೀ ಅನುಭವಿಸಿದಂತಹ ಘಟನೆಗಳನ್ನು ಎಲ್ಲ ಕಥನಗೀತೆಗಳಲ್ಲಿ ಕಾಣುತ್ತೇವೆ. ಹೀಗೆ ಸ್ತ್ರೀಯು ಕೌಟುಂಬಿಕ ಪರಿಸರದಲ್ಲಿ ನೆಲೆನಿಂತ ಬಗೆಯನ್ನು ಕಥನಗೀತೆಗಳಲ್ಲಿ ಹೆಣ್ಣಿನ ಬಾಲ್ಯ ಹೇಗೆ ವಿನ್ಯಾಸಗೊಂಡಿದೆ ಎಂಬುದನ್ನು ತಿಳಿಯುತ್ತ ವೈಜ್ಞಾನಿಕವಾಗಿ, ವೈಚಾರಿಕವಾಗಿ ಚರ್ಚಿಸುವಂತಹ ಅವಶ್ಯಕತೆ ಇರುವುದರಿಂದ ಸ್ತ್ರೀಯು ಹುಟ್ಟಿನಿಂದ ಹೇಗೆ ಸ್ತ್ರೀಯಾಗಿ ನಿರ್ಮಿಸಲ್ಪಡುತ್ತಾಳೆ ಎಂಬುದನ್ನು ವಿವಿಧ ಮಹಿಳಾ ಲೇಖಕಿಯರ ಬರವಣಿಗೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳುತ್ತ ಕಥನಗೀತೆಗಳಲ್ಲಿ ಮಹಿಳೆಯ ಭಿನ್ನ-ವಿಭಿನ್ನ ವಿನ್ಯಾಸವನ್ನು ಚಿತ್ರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

"ವೇದ ಕಾಲದಲ್ಲಿದ್ದ ಸ್ತ್ರೀ ಸ್ವಾತಂತ್ರ್ಯ ಸ್ಮೃತಿ ಕಾಲಕ್ಕೆ ಬರುವುದರೊಳಗಾಗಿ ಮಸುಕಾಗಿ ಹೋಗಿ ಪುತ್ರನಿಗೆ ದೊರೆತ ಪ್ರಾಧಾನ್ಯ ಪುತ್ರಿಯನ್ನು ತೀರ ಅಪ್ರಧಾನಳನ್ನಾಗಿ ಮಾಡಿತು. ಹೆಣ್ಣು ಪರರೊಡನೆ; ಗಂಡು ಮಾತಾಪಿತೃಗಳ ಪೋಷಕ, ಪಿಂಡದಾತ, ಅವರ ಧರ್ಮವನ್ನು

೧೦. ಭಾರತೀಯ ಸ್ತ್ರೀ ಜೀವನ : ವಿಠ್ಠಲರಾವ್ ಚಿ. ಗಾಯಕ್ವಾಡ್, ಪು.೨೨

ಅನುಚಾನವಾಗಿ ಮುನ್ನಡೆಸಿಕೊಂಡು ಬರುವವನು. ಈ ಎಲ್ಲ ಭಾವನೆಗಳು ಹೆಣ್ಣನ್ನು ಪರಂಪರಾಗತವಾಗಿ ಬದಿಗೊತ್ತಲು ಸಹಾಯ ಮಾಡಿದವು."[೧೧] ಹೀಗೆ ಪರಂಪರಾಗತವಾಗಿ ಮಹಿಳೆಯನ್ನು ದ್ವಿತೀಯ ದರ್ಜೆಗೆ ಸೇರಿಸಿ ಸ್ವಾತಂತ್ರ್ಯ ಹೀನಳಾಗಿ, ಪರಾವಲಂಬಿಯಾಗಿಯೇ ಆಕೆಯನ್ನು ಕಂಡು ಪೋಷಿಸುತ್ತಾ ಬಂದಿವೆ. ಇಂದಿಗೂ ಕೂಡ ಸ್ವಾವಲಂಬಿಗಳಾಗಿ ಮಹಿಳೆ ಜೀವನವನ್ನು ಸಾಗಿಸುವುದು ಅತೀ ವಿರಳವಾಗಿ ಕಂಡು ಬರುತ್ತಿದೆ. ಗಂಡು ಮಗುವಿನ ಸಂತಾನಕ್ಕಾಗಿ ಹಂಬಲಿಸಿದ ಜನತೆಯನ್ನು ಶಾಸನಗಳು ಉಲ್ಲೇಖಿಸುತ್ತವೆ. ಜನತೆಯು ಕೂಡ ಗಂಡು ಮಗುವನ್ನು ಅಪೇಕ್ಷಿಸುತ್ತದೆ. ಹೀಗಿದ್ದಾಗಲೂ ನಮಗೆ ಹೆಣ್ಣುಮಗುವಿನ ಸಾರ್ಥಕತೆಯನ್ನು ಒಂದು ಸಂಗತಿಯ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಅದೆಂದರೆ: "ಚಂಡಯ್ಯ ಮಲ್ಲದೇವಿಯರು ತಮ್ಮ ಮಗಳು ಸೋಮವ್ವೆಯನ್ನು 'ಸುಪುತ್ರಿ ಕುಲದೀಪಿಕೆ' ಎಂದು ಕರೆದುದು ಹೆಣ್ಣಿಗೆ ದೊರೆತ ಗೌರವವನ್ನು ಸೂಚಿಸುವ ಗಮನಾರ್ಹ ಸಂಗತಿ ಎನಿಸಿದೆ."[೧೨] ಕುಲದ ದೀಪ ಎಂದರೆ ಹೆಣ್ಣು ಎಂದು ಹೇಳಿದ ಚೌಡಯ್ಯ-ಮಲ್ಲದೇವಿಯರು ಇಡೀ ಮಹಿಳಾ ಲೋಕಕ್ಕೆ ಹೆಮ್ಮೆಯನ್ನು ತಂದುಕೊಟ್ಟ ದಂಪತಿಗಳೆಂದು ತಿಳಿಯಲಾಗುತ್ತದೆ. ಪುರುಷರಷ್ಟೇ ಕುಲದ ಅಥವಾ ಕುಟುಂಬದ ಬೆಳಕಲ್ಲ ಮಹಿಳೆಯರು ಕೂಡಾ ಅದರಲ್ಲಿ ಭಾಗಿಗಳಾಗಿದ್ದಾರೆ ಎಂಬ ಅರಿವಿನ ದೀಪವನ್ನು ಜನಮಾನಸಕ್ಕೆ ತಿಳಿಸಿರುವುದು ಹೆಮ್ಮೆಯೆನಿಸುತ್ತದೆ.

ಮಹಿಳೆ ಕೇವಲ ಕುಲವನ್ನು ಬೆಳಗುವ ದೀಪ ಅಷ್ಟೇ ಅಲ್ಲದೇ ಆಕೆ ಸ್ತ್ರೀಯಾಗಿ ಹೇಗೆ ಕುಟುಂಬದಿಂದ ಮಾರ್ಪಡುತ್ತಾಳೆ ಎಂಬುದನ್ನು ಸಿಮೊನ್-ದ-ಬೋವಾ ಮೊದಲ ಸಂಪುಟದ ನಾಲ್ಕು ಭಾಗಗಳಲ್ಲಿ ವಿವಿಧ ಆಯಾಮಗಳ ಮೂಲಕ ಸ್ತ್ರೀ ಬದುಕನ್ನು ಚಿತ್ರಿಸಿ, ಎರಡನೇ ಸಂಪುಟದ ನಾಲ್ಕು ಭಾಗಗಳಲ್ಲಿ ಜೀವನದ ವಿವಿಧ ಘಟ್ಟಗಳಲ್ಲಿ ಹೆಣ್ಣು ಹೇಗೆ ರೂಪಗೊಳ್ಳುತ್ತಾಳೆ ಎಂಬುದನ್ನು ವಿವರಿಸುತ್ತಾಳೆ. ಬಾಲ್ಯ ಹಾಗೂ ಯೌವ್ವನಾವಸ್ಥೆಯಲ್ಲಿ ಹುಡುಗಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಹೇಗೆ ನಿರ್ಮಿಸಲ್ಪಡುತ್ತಾಳೆ ಎಂಬುದನ್ನು ನಿರೂಪಿಸುತ್ತಾಳೆ. ಬಾಲ್ಯದಿಂದಲೇ ಮಹಿಳೆ ಶೋಷಣೆಗೊಳಗಾಗಿ ಬಂದಿರುವ ವಿಷಯವನ್ನು ಮನಗಂಡು ಇಡೀ ಮಹಿಳಾ ಲೋಕಕ್ಕೆ ಮಾದರಿಯಾಗುವಂತೆ ತಮ್ಮ ಕೃತಿಯನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ.

---

೧೧. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಬರಗೂರು ರಾಮಚಂದ್ರಪ್ಪ, ಪು.೨೪
೧೨. ಅದೇ, ಪು.೨೫

ಹೆಣ್ಣಿನ ಬದುಕಿನ ಬಗೆಗೆ ವೈಚಾರಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಿದಂತಹ ಸಿಮೊನ್-ದ-ಬೋವಾ ಅವರ ಹೇಳಿಕೆ: "ಹೆಣ್ಣು ಹುಟ್ಟುವುದಿಲ್ಲ. ಹೆಣ್ಣಾಗಿ ರೂಪಿತ-ವಾಗುತ್ತಾಳೆ"[೧೩] ಎಂಬುದು ಸ್ತ್ರೀವಾದಿ ಜಗತ್ತಿನಲ್ಲಿ ಹೊಸ ಚಿಂತನೆಯನ್ನು ಹುಟ್ಟು ಹಾಕಿತು. ಹೆಣ್ಣನ್ನು ಅನ್ಯವಾಗಿಸುವುದರೊಂದಿಗೆ ಅವಳ ಬದುಕು ರೂಪಗೊಳ್ಳುತ್ತದೆ. ಮಗುವು ದೇಹದ ಮೂಲಕ ಜಗತ್ತನ್ನು ಗ್ರಹಿಸುತ್ತದೆ. ಬಾಲ್ಯದ ಮೊದಲ ಮೂರು ವರ್ಷಗಳಲ್ಲಿ ಹೆಣ್ಣು ಗಂಡುಮಕ್ಕಳ ವರ್ತನೆಯಲ್ಲಿ ವ್ಯತ್ಯಾಸವಿರುವುದಿಲ್ಲ. ಒಂದು ಹಂತದವರೆಗೆ ಇಬ್ಬರ ಅನುಭವ, ಭಾವನೆ, ಆನಂದ, ಆಸಕ್ತಿಗಳು ಒಂದೇ ತೆರನಾಗಿದ್ದು, ತಾಯಿಯೊಂದಿಗಿನ ಭಾವನಾತ್ಮಕ ಸಂಬಂಧವು ಒಂದೇ ರೀತಿಯಾಗಿರುತ್ತದೆ. ಹನ್ನೆರಡನೇ ವಯಸ್ಸಿನವರೆಗೆ ಹುಡುಗಿಯು ಹುಡುಗರಷ್ಟೇ ದೈಹಿಕ, ಮಾನಸಿಕ ಸಾಮರ್ಥ್ಯವನ್ನು ಹೊಂದಿರುತ್ತಾಳೆ. ಆದರೆ ಬಾಲ್ಯ ದಾಟುವ ಹಂತದಲ್ಲಿ ಅವಳನ್ನು ಹೆಣ್ಣಾಗಿ ತಿದ್ದುವ ಕೆಲಸ ಪ್ರಾರಂಭವಾಗುತ್ತದೆ ಎಂದು ಬೋವಾ ಅವರ ಅಭಿಪ್ರಾಯ.

ಸಿಮೊನ್ ದ ಬೋವಾಳ ಈ ಹೇಳಿಕೆ ನೂರಕ್ಕೆ ನೂರರಷ್ಟು ಸತ್ಯ ಎಂದು ಹೇಳಬಹುದು. ಹೆಣ್ಣನ್ನು ಸ್ತ್ರೀತ್ವದ ನೆಲೆಯಲ್ಲಿ ಸಮಾಜ ಆಕೆಯನ್ನು ರೂಪಿಸುತ್ತದೆ. ಹೆಣ್ಣು ಅಂದರೆ ಬಾಲ್ಯದಲ್ಲಿ ಆಕೆ ಆಡುವಂತಹ ಆಟ, ಅಡುಗೆ ಮಾಡುವುದು, ಗೊಂಬೆಯೊಂದಿಗೆ ಆಟವಾಡುವುದು ಹೀಗೆ ಬಾಲ್ಯದಲ್ಲಿ ಹೆಣ್ಣು ಮಗುವಿಗೆ ಆಟಿಕೆಯ ವಸ್ತುಗಳನ್ನು ಪಾಲಕರು ಇವುಗಳನ್ನೇ ಕೊಡಿಸುತ್ತಿದ್ದುದನ್ನು ಕಂಡರೆ ಮಹಿಳೆ ಎಂದರೆ ಹೀಗೆ ಇರಬೇಕೆಂಬ ಚೌಕಟ್ಟನ್ನು ಹಾಕಿ ಕುಟುಂಬದಲ್ಲಿ ಬೆಳೆಸುತ್ತಿದ್ದರು, ಇಂದಿಗೂ ಬೆಳೆಸುತ್ತಿದ್ದಾರೆ.

ಸಮಾಜ ಎಷ್ಟೇ ಮುಂದುವರೆದಿದೆ ಎಂದುಕೊಂಡರೂ ಕೆಲವೊಂದು ಘಟನೆಗಳು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಲ್ಲದ ಆಚರಣೆಗಳನ್ನು ನಡೆಸಿಕೊಂಡೇ ಬರುತ್ತಿದೆ. ಜಾಗೃತಿ, ಅರಿವು ಮೂಡಿಸುವ ಪ್ರಯತ್ನಗಳ ನಡುವೆಯೂ ಅವು ಜೀವಂತವಾಗಿವೆ. ಬಾಲ್ಯವಿವಾಹ ಪದ್ಧತಿ ಇದಕ್ಕೊಂದು ಜ್ವಲಂತ ಸಾಕ್ಷಿ. ಕಾನೂನು, ಸರ್ಕಾರದ ಕಟ್ಟುನಿಟ್ಟಿನ ಕ್ರಮದ ನಡುವೆಯೂ ಪುಟ್ಟ ಮಕ್ಕಳಿಗೆ ಮದುವೆ ಮಾಡಿಸುವ ಪಿಡುಗಿಗೆ ಕಡಿವಾಣ ಬಿದ್ದಿಲ್ಲ. ಈ ಪ್ರಮಾಣ ಉತ್ತರ ಭಾರತದಲ್ಲಂತೂ ಇನ್ನೂ ಹೆಚ್ಚಾಗಿಯೇ ಕಂಡುಬರುತ್ತದೆ.

---

೧೩. ಸಿಮೊನ್ ದ ಬೋವಾ ಅವರ ದಿ ಸೆಕೆಂಡ್ ಸೆಕ್ಸ್ ಒಂದು ಸಂಕ್ಷಿಪ್ತ ಪರಿಚಯ : ಹೇಮಲತಾ ಎಚ್.ಎಂ., ಪು.೧೦೦

ಅಕ್ಷಯ ತೃತೀಯ ಸಮೀಪಿಸುತ್ತಿರುವ ಹಾಗೆ ಕೆಲವರಿಗೆ ಚಿನ್ನ ಕೊಳ್ಳುವ ಸಂಭ್ರಮ. ಇನ್ನೂ ಕೆಲವರಿಗೆ ಹೊಸ ಹೊಸ ಕೆಲಸಗಳನ್ನು ಶುರು ಮಾಡುವ ಹುಮ್ಮಸ್ಸು. ಹೀಗೆ ವಿವಿಧ ಶುಭ ಕಾರ್ಯಗಳನ್ನು ಕೈಗೊಳ್ಳಲು ಮುಂದಾಗಿರುತ್ತಾರೆ. ಆದರೆ ಉತ್ತರ ಭಾರತದಲ್ಲಿ ಅಕ್ಷಯ ತೃತೀಯ ಬಂದಿತೆಂದರೆ ಸಾಕು ಮಕ್ಕಳಿಗೆ ಭಯ. ಈ ದಿನಗಳಲ್ಲಿ ತಮ್ಮ ಪಾಲಕರ ಕಣ್ಣು ತಪ್ಪಿಸಿಕೊಂಡು ಓಡಾಡಲು ಪ್ರಯತ್ನಿಸುತ್ತಾರೆ. ಏಕೆಂದರೆ ಅಕ್ಷಯ ತೃತೀಯ ದಿನದಂದು ಉತ್ತರ ಭಾರತದಲ್ಲಿ ಹೆಚ್ಚು ಬಾಲ್ಯವಿವಾಹಗಳು ನಡೆಯುತ್ತವೆ. ವಿಶೇಷವಾಗಿ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಮಕ್ಕಳನ್ನು ಇದ್ದಕ್ಕಿದ್ದ ಹಾಗೆ ಹಸೆಮಣೆಗೆ ತಂದು ಕೂರಿಸಿ ವಿವಾಹ ಮಾಡಿಸಲಾಗುತ್ತದೆ. ಅದೆಷ್ಟೋ ಮಕ್ಕಳಿಗೆ ತಮ್ಮ ಮದುವೆ ನಡೆಯುತ್ತಿದೆ ಎಂದೂ ಗೊತ್ತಾಗುವುದಿಲ್ಲ. ಅಷ್ಟು ಚಿಕ್ಕ ವಯಸ್ಸು ಆ ಮಕ್ಕಳಿಗೆ. ಯಾವುದೋ ಪೂಜೆ-ಪುನಸ್ಕಾರ ನಡೆಯುತ್ತಿರಬಹುದೆಂದು ಮಕ್ಕಳು ಮುಗ್ಧರಾಗಿ ಕುಳಿತುಕೊಳ್ಳುತ್ತಾರೆ. ಕ್ಷಣ ಮಾತ್ರದಲ್ಲಿ ಬಾಲಕಿಯ ಕೊರಳಿಗೆ ಮಂಗಳಸೂತ್ರ ಕಟ್ಟಲಾಗುತ್ತದೆ. ಈ ಪ್ರದೇಶಗಳಲ್ಲಿ ಮಾತ್ರವಲ್ಲದೇ ಕರ್ನಾಟಕ ದಲ್ಲಿಯೂ ಕೂಡ ಇಂಥ ಬಾಲ್ಯ ವಿವಾಹಗಳು ಜರುಗುತ್ತಿವೆ.

ಬದುಕು ಎಂದರೆ ಏನು ಎಂದು ಅರಿಯದ ಹುಡುಗನಿಗೆ ಇನ್ಮುಂದೆ ನೀನು ಈಕೆಯ ಗಂಡ ಎಂದು ಹೇಳಲಾಗುತ್ತದೆ. ಹೌದು ಒಂದೆಡೆ ಸಮಾಜ ಆಧುನಿಕತೆಯ ಹೆಸರಲ್ಲಿ ಮುಂದೆ ಸಾಗಿದ್ದರೆ ಮತ್ತೊಂದೆಡೆ ಅದೇ ಸಮಾಜದ ಇನ್ನೊಂದು ಭಾಗ ಹಳೆಯ ಪಿಡುಗುಗಳಿಗೆ, ಆಚರಣೆಗಳಿಗೆ, ಸಂಪ್ರದಾಯಗಳಿಗೆ, ಅಂಟಿಕೊಂಡು ಕುಳಿತಿದೆ. ವಿಚಿತ್ರವಾದ ನಂಬಿಕೆಗಳು, ಆಚರಣೆಗಳು ಮದುವೆಯ ಹೆಸರಲ್ಲಿ ಮಕ್ಕಳ ಬಾಲ್ಯ ಜೀವನವನ್ನೇ ಕಿತ್ತುಕೊಳ್ಳುತ್ತಿವೆ. ಶಿಕ್ಷಣ ಪಡೆದು ಉಜ್ವಲ ಭವಿಷ್ಯವನ್ನು ಕಟ್ಟಿಕೊಳ್ಳಬೇಕಾದಂತಹ ಚಿಂತನೆ ತುಂಬುವ ಬದಲು ಮದುವೆ ಮಾಡಿಸುವ ಮುಖಾಂತರ ಮಕ್ಕಳ ಹಕ್ಕುಗಳನ್ನು ಸಮಾಜ ಕಿತ್ತು ತಿನ್ನುತ್ತಿದೆ.

ಹುಡುಗನಾಗಿರಲಿ, ಹುಡುಗಿಯಾಗಿರಲಿ ೧೫ ವರ್ಷದ ಒಳಗಡೆ ಮದುವೆ ಮಾಡಿಬಿಡಬೇಕು ಎಂಬ ವಿಚಿತ್ರವಾದ ನಂಬಿಕೆ ಈಗಲೂ ಕೆಲವೆಡೆ ರೂಢಿಯಲ್ಲಿದೆ. 'ಋತುಮತಿಯಾದ ನಂತರವೂ ಹೆಣ್ಣನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಪಾಪ' ಎಂದು ನಂಬುವ ಗ್ರಾಮೀಣ ಭಾಗದ ಜನರು ಆಕೆಗೆ ಮದುವೆ ಮಾಡಿಕೊಟ್ಟು ಜವಾಬ್ದಾರಿಯಿಂದ ಮುಕ್ತವಾಗಬೇಕು ಎಂದು ಕೈ ತೊಳೆದುಕೊಳ್ಳುತ್ತಾರೆ. ಬಾಲ್ಯವಿವಾಹಗಳನ್ನು ಪ್ರೋತ್ಸಾಹಿಸುವ, ತಾವೇ ಮುಂದೆ ನಿಂತು ಇಂಥ ಮದುವೆ ಮಾಡಿಸುವ ಸಮೂಹಗಳೇ ಉತ್ತರ ಭಾರತದಲ್ಲಿ

ಕಂಡುಬರುತ್ತವೆ. ಖಾಪ್ ಪಂಚಾಯತ್‌ಗಳದ್ದೂ ಈ ನಿಟ್ಟಿನಲ್ಲಿ ದೊಡ್ಡ 'ಕೊಡುಗೆ' ಇದೆ. ರಾಜಸ್ಥಾನದ ಕೆಲವು ಕುಗ್ರಾಮಗಳಲ್ಲಂತೂ ೧೫ ವರ್ಷ ತುಂಬಿದರೂ ಮಕ್ಕಳಿಗೆ ಮದುವೆ ಮಾಡಿಸದ ಕುಟುಂಬಗಳನ್ನು ಗ್ರಾಮದಿಂದ ಬಹಿಷ್ಕರಿಸಲಾಗಿದೆ ಹಾಗೂ ಪಂಚಾಯತ್‌ಗಳು ಇದನ್ನು 'ಸರಿಯಾದ ಕ್ರಮ' ಎಂದು ಸಮರ್ಥಿಸಿಕೊಂಡಿವೆ.

ಹುಡುಗಿಗೆ ೧೮ ವರ್ಷ, ಹುಡುಗನಿಗೆ ೨೧ ವರ್ಷ ತುಂಬುವ ಮೊದಲು ಮದುವೆ ಮಾಡುವಂತಿಲ್ಲ. ಹಾಗೆ ಮಾಡಿದರೆ ಕಾನೂನಿನ ಉಲ್ಲಂಘನೆಯಾಗುತ್ತದೆ. ಅದಕ್ಕೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ಸರ್ಕಾರ ಮಾತ್ರವಲ್ಲದೆ ವಿವಿಧ ಸ್ವಯಂ ಸೇವಾ ಸಂಸ್ಥೆಗಳು, ಯುವ ಸಂಘಟನೆಗಳು ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿವೆ. ನಿಜ, ಆದರೆ ಗ್ರಾಮಸ್ಥರು ಮಾಡುವುದು 'ರಂಗೋಲಿ ಕೆಳಗೆ ತೂರುವ' ನೀತಿಯನ್ನು ಅಳವಡಿಸಿಕೊಂಡು ಗ್ರಾಮದ ದೇವಸ್ಥಾನದಲ್ಲೋ, ಮನೆ ದೇವರ ಸಮ್ಮುಖದಲ್ಲೋ ಕದ್ದು ಮುಚ್ಚಿ ವಿವಾಹ ಮಾಡಿ ಬಿಡುತ್ತಾರೆ. ಉತ್ತರ ಪ್ರದೇಶದ ಕೆಲ ಭಾಗಗಳಲ್ಲಂತೂ ಬಾಲ್ಯವಿವಾಹಗಳು ಸಾಮೂಹಿಕ-ವಾಗಿಯೇ ನಡೆಯುತ್ತವೆ. ಕೆಲವೊಮ್ಮೆ ಪೊಲೀಸರು ಇಂಥ ವಿವಾಹಗಳನ್ನು ತಡೆಯುವಲ್ಲಿ ಸೋತುಬಿಡುತ್ತಾರೆ. ಕಾರಣ, ಅಂಥ ಅಭೇದ್ಯ ಕೋಟೆಗಳಲ್ಲಿ ಈ ಮದುವೆಗಳನ್ನು ನಡೆಸಲಾಗುತ್ತದೆ.

ರಜಪೂತ ಸಮಾಜದಲ್ಲಿ ಮೊದಮೊದಲು ಬಾಲ್ಯ ವಿವಾಹಗಳು ರೂಢಿಯಲ್ಲಿರಲಿಲ್ಲ. ಆದರೆ ಮುಸ್ಲಿಂ ಆಕ್ರಮಣಕಾರರು ಭಾರತಕ್ಕೆ ಬಂದ ನಂತರ ತಮ್ಮ ತಮ್ಮ ಹೆಣ್ಣುಮಕ್ಕಳ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಬಾಲ್ಯದಲ್ಲೇ ವಿವಾಹ ನೆರವೇರಿಸಿಬಿಡುವ ಪದ್ಧತಿ ರೂಢಿಯಲ್ಲಿ ಬಂದಿತು. ಅಷ್ಟೇ ಅಲ್ಲದೆ ದಾಳಿಕೋರರಿಂದ ತಮ್ಮ ಪಾವಿತ್ರ್ಯ ರಕ್ಷಣೆಗಾಗಿ ಸಾಮೂಹಿಕವಾಗಿ ಅಗ್ನಿಪ್ರವೇಶಿಸುವ ಜೌಹಾರ್ ಪದ್ಧತಿ ರೂಢಿಯಲ್ಲಿತ್ತು. ಜೊತೆಗೆ ಸತಿಸಹಗಮನ ಪದ್ಧತಿ ರೂಢಿಯಲ್ಲಿತ್ತು. ಸತ್ತ ಗಂಡನ ಜೊತೆ ಆತನ ಪತ್ನಿ ಚಿತೆಗೆ ಹಾರಿ ಮಹಾಸತಿಯಾಗುತ್ತಿದ್ದಳು. ಕಾರಣ ಅಂದಿನ ಸಮಾಜದಲ್ಲಿ ವಿಧವಾ ವಿವಾಹಕ್ಕೆ ಮಾನ್ಯತೆ ಇರಲಿಲ್ಲ. ಮತ್ತೊಂದು ಕ್ರೂರ ನಂಬಿಕೆ ಎಂದರೆ ಹೆಣ್ಣು ಸಂತಾನ ಪಾಪಕರ, ದುಃಖದ ಸೂತಕ ಎಂದು ಭಾವಿಸಲಾಗುತ್ತಿತ್ತು. ಆದ್ದರಿಂದಲೇ ಹೆಣ್ಣುಶಿಶುವನ್ನು ಹುಟ್ಟುವಾಗಲೇ ಹತ್ಯೆ ಮಾಡುತ್ತಿದ್ದರು. ಅದೇ ಭಾವನೆ ಇಡೀ ಸಮಾಜದ ತುಂಬಾ ಆವರಿಸುತ್ತಾ ಹೋಗಿ ಮಹಿಳೆ ಎಂದರೆ ಸೂತಕದ ಹಾಗೆ ಪರಿಗಣಿಸಲ್ಪಡುತ್ತ ಸಾಗಿ ಬಂದಿದೆ.

ಇಂದಿನ ದಿನಮಾನದಲ್ಲೂ ಬಾಲ್ಯವಿವಾಹ ಜರುಗಲು ಹಲವು ಕಾರಣಗಳಿವೆ. ಒಂದು ವಿಚಿತ್ರವಾದ ನಂಬಿಕೆಗಳು: ಮನೆಯಲ್ಲಿ ಯಾರಾದರೂ ಹಿರಿಯರು ಮೃತಪಟ್ಟರೆ ಅವರು ನಿಧನರಾದ ೧೩ ದಿನದೊಳಗೆ ಮದುವೆಯೊಂದನ್ನು ನಡೆಸಬೇಕು. ಇದರಿಂದ ಮೃತರ ಆತ್ಮಕ್ಕೆ ಶಾಂತಿ ಸಿಗುವುದಲ್ಲದೆ ಅವರು ಮೋಕ್ಷಕ್ಕೆ ಭಾಜನರಾಗುತ್ತಾರೆ ಎಂದುಕೊಂಡು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ನಂಬಿಕೆಗಳಿವೆ. ಹರಿಯಾಣ, ಉತ್ತರಪ್ರದೇಶ, ಬಿಹಾರ ರಾಜ್ಯಗಳಲ್ಲಿ ಇಂದಿಗೂ ಬಾಲ್ಯವಿವಾಹಗಳನ್ನು ನಡೆಸಲಾಗುತ್ತದೆ. ಮದುವೆ ಎಂಬುದು ಗಂಡು-ಹೆಣ್ಣುಗಳ ಒಮ್ಮತದಿಂದ ಸಾಗಬೇಕಾದ ಜೀವನದ ದಾರಿ ಎಂದೆಲ್ಲ ಇವರು ಯೋಚಿಸುವುದೇ ಇಲ್ಲ. ಮನೆಯಲ್ಲಿ ತಾತ, ಮುತ್ತಾತ ಮೃತಪಟ್ಟರೆ ೧೩ ದಿನಗಳೊಳಗಾಗಿ ಹಸೆಮಣೆ ಏರುವ ಶಿಕ್ಷೆ ಮೊಮ್ಮಕ್ಕಳಿಗೆ, ಎಷ್ಟೋ ಬಾರಿ ೧೦-೧೨ ವರ್ಷದ ಬಾಲಕಿಯನ್ನು ೨೫-೩೦ ವರ್ಷದ ವ್ಯಕ್ತಿಗೆ ಮದುವೆ ಮಾಡಿಕೊಡಲಾಗುತ್ತದೆ. ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ಪ್ರತಿ ಐದು ಹೆಣ್ಣುಮಕ್ಕಳ ಪೈಕಿ ಇಬ್ಬರ ವಿವಾಹ ಅಪ್ರಾಪ್ತ ವಯಸ್ಸಿನಲ್ಲೇ ಆಗುತ್ತಿದೆ. ಇಂಥ ವಿವಾಹಗಳಿಗೆ ಮತ್ತೊಂದು ಪ್ರಮುಖ ಕಾರಣ ಬಡತನ: ಮನೆಯಲ್ಲಿ ಮೂರ್‍ನಾಲ್ಕು ಹೆಣ್ಣುಮಕ್ಕಳಿರುವಾಗ ಅವರನ್ನು ಸಾಕಲಾಗದೆ ಗಂಡನ ಮನೆಯವರಿಂದ ಬಿಡಿಗಾಸು ಪಡೆದು ಹೆಣ್ಣನ್ನು ಧಾರೆ ಎರೆದು ಕೊಡಲಾಗುತ್ತದೆ. ಬಾಲಕಿಯರೂ ಮಾತ್ರವಲ್ಲ ಬಾಲಕರೂ ಈ ಪಿಡುಗಿಗೆ ಆಹಾರವಾಗುತ್ತಿದ್ದಾರೆ. ೨೦೧೧ರ ಜನಗಣತಿಯ ಅಂಕಿಸಂಖ್ಯೆಗಳಂತೆ ದೇಶದಲ್ಲಿ ಬಾಲ್ಯ ವಿವಾಹವಾದವರ ಒಟ್ಟು ಸಂಖ್ಯೆ ೧.೨೧ ಕೋಟಿ ಇದ್ದು, ಈ ಪೈಕಿ ಬಾಲಕರೇ ಹೆಚ್ಚಾಗಿದ್ದಾರೆ. (೬೯.೪೯ ಲಕ್ಷ ಬಾಲಕರು, ೫೧.೫೭ ಲಕ್ಷ ಬಾಲಕಿಯರು) ಸಾಮಾನ್ಯವಾಗಿ ೧೩-೧೪ ವರ್ಷಕ್ಕೆ ಹುಡುಗರ ಮದುವೆ ಮಾಡಿಬಿಟ್ಟರೆ ಅವರು ಮುಂದೆ ಶಾಲೆಗೆ ಹೋಗುವಂತಿಲ್ಲ, ವಿದ್ಯಾಭ್ಯಾಸ ಮುಂದುವರಿಸುವಂತಿಲ್ಲ. ಬದಲಾಗಿ ಅಪ್ಪನಿಗೆ ಕೃಷಿ ಕಾರ್ಯದಲ್ಲಿ ಸಹಾಯ ಮಾಡಬೇಕು. ಸಹಾಯ ಮಾಡುವುದು ತಪ್ಪು ಅಂತ ಹೇಳುವುದು ಸಾಧ್ಯವಿಲ್ಲ. ಆದರೆ ಓದುವ ವಯಸ್ಸಿನಲ್ಲಿ ಓದಿದರೆ ವ್ಯವಹಾರ ಜ್ಞಾನ, ಕೃಷಿ ಕೆಲಸದ ಬಗೆಗೆ ಹೆಚ್ಚಿನ ಜ್ಞಾನ ಪಡೆದುಕೊಂಡು ಪ್ರಜ್ಞಾವಂತನಾಗಿ ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ ಎಂಬುದೊಂದೇ ಉದ್ದೇಶ. ಹುಡುಗ-ಹುಡುಗಿಯರಿಗೆ ಮುಂದೆ ಓದಬೇಕೆಂಬ ಆಸೆ ಇದ್ದರೂ, ಪ್ರತಿಭೆ ಇದ್ದರೂ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇಂಥವರನ್ನು ಮರಳಿ ಶಾಲೆಗೆ ತರಲು ಮಾನವ ಸಂಪನ್ಮೂಲ ಇಲಾಖೆ, ಆಯಾ ರಾಜ್ಯದ ಶಿಕ್ಷಣ ಇಲಾಖೆಗಳು ಪ್ರಯತ್ನಿಸುತ್ತಿವೆ-ಯಾದರೂ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸು ಸಿಕ್ಕಿಲ್ಲವೆಂಬುದು ಶೋಚನೀಯ.

ಬಾಲ್ಯವಿವಾಹ ಹುಟ್ಟು ಹಾಕಿರುವ ಮತ್ತೊಂದು ಗಂಭೀರ ಸಮಸ್ಯೆಯೆಂದರೆ ಶಿಶು ಹಾಗೂ ಗರ್ಭಿಣಿಯರ ಮರಣ ಪ್ರಮಾಣ ಹೆಚ್ಚಳ: ಬಾಲ್ಯವಿವಾಹಕ್ಕೊಳಗಾದ ಹೆಣ್ಣುಮಕ್ಕಳು ೨೦ನೇ ವಯಸ್ಸಿನೊಳಗೆ ತಾಯಿಯಾಗುತ್ತಿದ್ದು, ಇದರಿಂದ ಗರ್ಭಿಣಿಯರ ಹಾಗೂ ಶಿಶುಗಳ ಮರಣ ಪ್ರಮಾಣ ಹೆಚ್ಚುತ್ತಿದೆ. ಇನ್ನೊಂದೆಡೆ, ಒಂದಿಷ್ಟು ಅರಿವು ಬಂದ ಮೇಲೆ ಯುವತಿಯರೇ ಕೋರ್ಟ್ ಮೊರೆ ಹೋಗಿ ಇಂಥ ವಿವಾಹವನ್ನು ರದ್ದುಪಡಿಸುವಂತೆ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಆದರೆ ನ್ಯಾಯಾಲಯಗಳು ಇಂಥ ಪ್ರಕರಣಗಳನ್ನು 'ವಿಚ್ಛೇದನ ಪ್ರಕರಣಗಳೆಂದೇ ಪರಿಗಣಿಸುತ್ತಿರುವುದರಿಂದ ಶೀಘ್ರ ನ್ಯಾಯಪ್ರಾಪ್ತಿಯ ಕನಸು ಮರೀಚಿಕೆಯಾಗಿದೆ.

ಮುಂದುವರಿದ ರಾಜ್ಯವೆಂದು ಕರೆಯಲ್ಪಡುವ ಕರ್ನಾಟಕದಲ್ಲಿಯೂ ಇನ್ನೂ ಬಾಲ್ಯ ವಿವಾಹ ಪದ್ಧತಿ ಜೀವಂತದಲ್ಲಿದೆ. ಹೆಣ್ಣುಮಕ್ಕಳನ್ನು ಸಾಕಲಾಗದ ಬಡವರು ೫-೧೦ ಸಾವಿರಕ್ಕೆ ಮುಗ್ಧ ಹೆಣ್ಣುಮಕ್ಕಳ ವಿವಾಹವನ್ನು ವಯಸ್ಸಾದವರೊಂದಿಗೆ ಮಾಡಿಕೊಟ್ಟ ನಿದರ್ಶನಗಳಿವೆ. ಅಷ್ಟೇ ಅಲ್ಲ ಉತ್ತರ ಕರ್ನಾಟಕದ ಕೊಪ್ಪಳ, ಬಾಗಲಕೋಟೆ, ವಿಜಯಪುರ, ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕದ್ದು ಮುಚ್ಚಿ ಬಾಲ್ಯವಿವಾಹಗಳನ್ನು ನಡೆಸಲಾಗುತ್ತದೆ. ಇದರಿಂದ ಅಮಾಯಕ ಬಡವರ ಮೇಲೆ ಶೋಷಣೆಯೂ ನಡೆಯುತ್ತಿದೆ. ನ್ಯಾಯ ಉಳ್ಳವರ ಪಾಲಾಗಿ ಮೆರೆಯುತ್ತಿದೆ. ಯಾರಾದರೂ ಅಧಿಕಾರಿಗಳಿಗೆ ಮಾಹಿತಿ ಕೊಟ್ಟರೆ ಅವರು ಬಂದು ವಿವಾಹವನ್ನು ತಡೆಯುತ್ತಾರೆ. ಇಲ್ಲದಿದ್ದಲ್ಲಿ ಹೊರ ಜಗತ್ತನ್ನೇ ಅರಿಯದ ಪುಟ್ಟ ಹುಡುಗಿ ಸಾಂಸಾರಿಕ ಬಂಧನಕ್ಕೆ ಒಳಗಾಗಿ ಜೀವನವಿಡಿ ಪರಿತಪಿಸಬೇಕಾಗುತ್ತದೆ.

ಕಾನೂನಿನ ನಿಷೇಧವಿದ್ದರೂ ಕೂಡ ಅಪ್ರಾಪ್ತ ವಯಸ್ಸಿನ ಬಾಲಕಿಯರಿಗೆ ವಿವಾಹಗಳು ನಡೆಯುತ್ತಲೇ ಇವೆ. ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ಈ ತರಹದ ಮದುವೆಗಳು ವ್ಯಾಪಕವಾಗಿ ಕಂಡು ಬರುತ್ತವೆ. ಬಾಲ್ಯವಿವಾಹಗಳನ್ನು ತಡೆಯಲು ಅಧಿಕಾರಿಗಳು ಪಣತೊಟ್ಟು ನಿಂತಿದ್ದಾರೆ. ಆದರೆ ಅವರಿಗೆ ತಿಳಿಯದೇ ಬಾಲ್ಯವಿವಾಹಗಳು ಪ್ರಪಂಚದಾದ್ಯಂತ ಜರುಗುತ್ತಿವೆ. ಆದಕಾರಣ ಕುಟುಂಬದ ಸದಸ್ಯರು ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿವಹಿಸಬೇಕು ಜೊತೆಗೆ ಆಕೆಯ ಆಸೆ ಆಕಾಂಕ್ಷೆಗಳಿಗೆ, ಆಕೆಯ ಭವಿಷ್ಯದ ಕಲ್ಪನೆ ಏನಿದೆ ಎಂಬುದನ್ನು ತಿಳಿದುಕೊಂಡು ಸ್ಪಂದಿಸಿ, ಅವರ ಬೆನ್ನೆಲುಬಾಗಿ ನಿಂತು ಆಕೆಯ ಭವಿಷ್ಯದ ಬಗ್ಗೆ ನಿರ್ಧರಿಸಿ ಉನ್ನತಿಗಾಗಿ ಶ್ರಮಿಸಬೇಕು. ಮಕ್ಕಳ ಮತ್ತು ಪಾಲಕರೊಂದಿಗಿನ ಸಂವಹನದ ಕೊರತೆ ವಾಸ್ತವ ದಿನಮಾನದಲ್ಲಿ ಎದ್ದು ಕಾಣುತ್ತಿದೆ. ಮಕ್ಕಳ ಮತ್ತು ಪಾಲಕರೊಂದಿಗಿರುವ ಸಂಬಂಧ

ಸ್ನೇಹಿತರಂತೆ ಇರಬೇಕು. ಪಾಲಕರು ಅವಸರದ ಒಂದು ಜೀವನದಲ್ಲಿ ಹೆಚ್ಚು ಸಮಯವನ್ನು ಮಕ್ಕಳೊಡನೆ ಕಳೆಯುವುದಿಲ್ಲ. ಇಬ್ಬರೂ ಕೆಲಸ ನಿರ್ವಹಿಸುವುದರೊಂದಿಗೆ ಮಕ್ಕಳೊಡನೆ ಕೆಲ ಸಮಯ ಕಳೆಯುವುದು ಸೂಕ್ತ ಎಂದು ಇಂದಿನ ಪಾಲಕರು ಅರಿತು ಬೆರೆತು ನಡೆಯುವುದು ಅವಶ್ಯಕವಾಗಿದೆ.

ಉತ್ತರ ಪ್ರದೇಶ–೨೩,೩೦,೯೪೯, ರಾಜಸ್ಥಾನ–೧೭,೯೧,೭೦೦, ಬಿಹಾರ–೧೭,೦೯,೨೬೦, ಮಹಾರಾಷ್ಟ್ರ–೧೧,೬೦,೬೫೫, ಪಶ್ಚಿಮ ಬಂಗಾಳ–೯,೨೪,೪೨೫, ಮಧ್ಯಪ್ರದೇಶ–೮,೯೧,೮೧೧, ಗುಜರಾತ–೭,೭೫,೩೪೭, ಆಂಧ್ರಪ್ರದೇಶ–೬,೪೦,೧೮೧, ಕರ್ನಾಟಕ–೪,೭೮,೫೫೨, ತಮಿಳುನಾಡು–೩,೭೯,೯೭೫, ಆಸ್ಸಾಂ–೨,೬೨,೭೬೮ ಓಡಿಸ್ಸಾ (ಓರಿಸ್ಸಾ)–೨,೫೯,೧೩೩, ಜಾರ್ಖಂಡ–೩,೫೮,೦೬೪, ಹರಿಯಾಣ–೨,೪೭,೮೬೦, ಪಂಜಾಬ್–೨,೦೭,೯೭೮, ಛತ್ತೀಸಗಡ–೧,೭೪,೩೧೯, ಕೇರಳ–೧,೧೨,೯೪೮, ದೆಹಲಿ–೮೪,೨೭೭, ಜಮ್ಮು–ಕಾಶ್ಮೀರ–೭೯,೬೯೮, ಹಿಮಾಚಲ ಪ್ರದೇಶ–೩೩,೯೫೮, ತ್ರಿಪುರಾ–೩೨,೭೪೯, ಮೇಘಾಲಯ–೨೮,೩೬೫, ಮಣಿಪುರ–೧೮,೬೨೧, ಅರುಣಾಚಲ ಪ್ರದೇಶ–೧೩,೬೫೪, ನಾಗಾಲ್ಯಾಂಡ್–೧೨,೮೬೬, ಗೋವಾ–೧೦,೪೨೧, ಮಿಜೋರಂ–೭,೨೪೫, ಸಿಕ್ಕಿಂ–೫,೬೧೦, ಚಂಡಿಗಡ–೫,೩೮೨, ಪಾಂಡಿಚೆರಿ–೫,೨೮೦ ಹೀಗೆ ಕನ್ನಡ ದಿನಪತ್ರಿಕೆ, ವಿಜಯವಾಣಿ– ಭಾನುವಾರ ಏಪ್ರೀಲ್ ೧೯, ೨೦೧೫, ಪು.ಸಂ. ೧೨ರಲ್ಲಿ ಪ್ರಕಟವಾದ ೨೦೧೧ರ ಭಾರತೀಯ ಜನಗಣತಿಯ ಪ್ರಕಾರ ಬಾಲ್ಯ ವಿವಾಹ ರಾಜ್ಯವಾರು ಅಂಕಿ–ಅಂಶವನ್ನು ಗಮನಿಸಿದರೆ ಬಾಲ್ಯ ವಿವಾಹಗಳು ಇನ್ನೂ ಜರುಗುತ್ತಿವೆ ಎಂಬುದಕ್ಕೆ ಈ ಜನಸಂಖ್ಯೆಯ ಅಂಶಗಳೇ ನಿದರ್ಶನವಾಗಿವೆ.

ಎಲ್ಲ ಕಾಲಕ್ಕೂ ಸಮಾಜದಲ್ಲಿ ಬಾಲ್ಯ ವಿವಾಹಗಳು ಜಾರಿಯಲ್ಲಿದ್ದವು ಎಂಬುದಕ್ಕೆ ಹಲವಾರು ಕೃತಿಗಳು ಸಾಕ್ಷಯಾಗಿವೆ. ಕೊಡಗಿನ ಗೌರಮ್ಮನವರು ಮಹಿಳಾ ಬರಹಗಾರರಲ್ಲಿ ಮುಂಚೂಣಿಯಲ್ಲಿದ್ದು, ಅಂದಿನ ಸಮಾಜದಲ್ಲಿದ್ದ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಬರವಣಿಗೆಗೆ ಆಯ್ದುಕೊಂಡದ್ದು ಅವರಲ್ಲಿರುವ ಸ್ತ್ರೀಪರ ಕಾಳಜಿಯನ್ನು ಕಾಣಬಹುದು. ಆ ಕಾರಣ ಬಾಲ್ಯವಿವಾಹ, ವಿಧವಾ ಸಮಸ್ಯೆ, ವಿಧವಾ ವಿವಾಹ, ಬಾಲವೈಧವ್ಯ, ವಿಷಮ ಮದುವೆ ಇತ್ಯಾದಿ ಸ್ತ್ರೀಯರನ್ನು ಕಾಡುವ ಸಮಸ್ಯೆಗಳು ಇವರ ಕಥೆ–ಕಾದಂಬರಿಗಳಲ್ಲಿ ಕಾಣುತ್ತೇವೆ. ಉದಾ: "೧೯೩೧ ರಲ್ಲಿ ಗೌರಮ್ಮನವರು ಬರೆದ ಮೊದಲ ಕಥೆ 'ಪುನರ್ವಿವಾಹ'. ಆರು ತಿಂಗಳ ಹಿಂದೆ ವಿಧುರನಾದ ೩೫ರ ಹರೆಯದ ಶ್ರೀಮಂತನೊಬ್ಬ ಮರುಮದುವೆಗೆ

ಒಲ್ಲದವನು ೧೫ರ ಹರೆಯದ ಬಾಲೆಯನ್ನು ಕಂಡು ಮೋಹಗೊಳ್ಳುತ್ತಾನೆ. ಅವನ ಈ ವರ್ತನೆಯ ವಿರುದ್ಧ ಪ್ರತಿಭಟಿಸುವ ಮೂಲಕ ಸಾಮಾಜಿಕ ಅನ್ಯಾಯದ ವಿರುದ್ಧ ಸಿಡಿದು ಬೀಳುತ್ತಾಳೆ. ಅವಳ ಪಾತ್ರದ ಮೂಲಕ ಪುರುಷ ಪ್ರಧಾನ ಸಮಾಜದ ಲಿಂಗಭೇದವುಳ್ಳ ಪಕ್ಷಪಾತೀಯ ಕಟ್ಟಳೆಗಳನ್ನು ಲೇಖಕಿ ವ್ಯಂಗ್ಯವಾಗಿ ಧಿಕ್ಕರಿಸಿದ್ದಾರೆ."[೧೪] ಸಮಾಜದಲ್ಲಿ ಲಿಂಗಭೇದವನ್ನು ಗುರುತಿಸಿ ಕಾದಂಬರಿಗಳ ಮೂಲಕ ಪಕ್ಷಪಾತವನ್ನು ಬಯಲಿಗೆಳೆಯುತ್ತಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಬಾಲ್ಯದಿಂದಲೇ ತಾರತಮ್ಯಕ್ಕೊಳಗಾಗಿ ಬದುಕನ್ನು ಹೇಗೆ ಸಾಗಿಸುತ್ತಿರುವಳು ಎಂಬುದು ನಮಗೆ ಹಲವಾರು ಕಥೆ-ಕಾದಂಬರಿಗಳ ಮೂಲಕ ತಿಳಿದುಬರುತ್ತದೆ. ಸಮಾಜದಲ್ಲಿಯ ಅನ್ಯಾಯದ ವಿರುದ್ಧ, ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಮೂಲಕ ಪಕ್ಷಪಾತೀಯ ಧೋರಣೆಯನ್ನು ಕಿತ್ತು ಹಾಕಿ ಆದರ್ಶ ಸಮಾಜ ನಿರ್ಮಾಣ ಮಾಡುವ ಆಶಯದೊಂದಿಗೆ ಮುಂದಿನ ಹೆಜ್ಜೆಯನ್ನು ಇಟ್ಟು ಸಾಗಬೇಕು.

೩.೨. ತವರಿನ ಚಿತ್ರಣ :

ತವರು ಹೆಣ್ಣಿನ ಮೂಲ ನೆಲೆಯಾಗಿದ್ದು ತದನಂತರ ಗಂಡನ ಮನೆಯನ್ನು ಆಕೆಯ ಶಾಶ್ವತ ನೆಲೆಯಾಗಿ ರೂಪಿಸಲಾಗುತ್ತದೆ. ತವರು ಮನೆ ಎಂದರೆ ಪ್ರತಿಯೊಬ್ಬ ಮಹಿಳೆಗೂ ಪ್ರೀತಿ, ವಾತ್ಸಲ್ಯ, ಮಮಕಾರ ಇದ್ದೇ ಇರುತ್ತದೆ. ಆಕೆಯ ಕರಳು ಬಳ್ಳಿ ತವರು ಎಂದರೆ ತಪ್ಪಾಗಲಾರದು. ಮಹಿಳೆ ತನಗೆಷ್ಟೇ ದುಃಖಗಳು, ಕಷ್ಟಗಳು ಇದ್ದರೂ ಕೂಡ ತವರಿಗೆ ಗೊತ್ತಾಗದಿರಲಿ ಎಂದು ತವರಿನಲ್ಲಿ ನಗುತ್ತಾ ಇರುತ್ತಾಳೆ. ತಾನು ಆಡಿ-ಬೆಳೆದ ತವರು ಎಂದಿಗೂ ಸುಖಕರವಾಗಿರಲಿ, ಯಾವ ಕಷ್ಟಗಳೂ ಬಾರದಿರಲಿ ಎಂದು ಅಂತರ್ಯದಲ್ಲಿ ಯಾವಾಗಲೂ ಹಾರೈಸುತ್ತಿರುತ್ತಾಳೆ. ಹೆಣ್ಣು ದೊಡ್ಡವಳಾಗುತ್ತಾ ಹೋದಂತೆ ಅದರಲ್ಲೂ ಗಂಡನ ಮನೆಗೆ ಹೋದ ಮೇಲಂತೂ ಇಡೀ ತವರಿನ ಚಿತ್ರಣ ಮನಸ್ಸಿನಲ್ಲಿ ಅದಮ್ಯ ಬಯಕೆಯಾಗಿ ಕಾಡುತ್ತಾ ಇರುತ್ತದೆ. ತನ್ನನ್ನು ಧಾರೆ ಎರೆದು ಕೊಡುವಾಗ ತಂದೆ-ತಾಯಿ, ಅಣ್ಣ-ಅಕ್ಕ, ತಂಗಿ, ತಮ್ಮ, ಸಂಬಂಧಿಕರು ಮುಂತಾದವರ ಕಣ್ಣಲ್ಲಿ ಎಂದೆಂದಿಗೂ ಮರೆಯಲಾಗದ ಚಿತ್ರಣ ಈ ತವರು ಮನೆಯದ್ದಾಗಿದೆ. ತಾಯಿಯನ್ನು ಕುರಿತು ಹೆಣ್ಣು ವಿವಿಧ ಬಗೆಯಲ್ಲಿ ಹಂಬಲಿಸುತ್ತಾಳೆ ಎಂಬುದನ್ನು ಜನಪದ ತ್ರಿಪದಿಯೊಂದು ಹೀಗೆ ಹೇಳುತ್ತದೆ:

ಯಾರು ಇದ್ದರು ನನ್ನ ತಾಯವ್ವನ್ಹೊಲುರ
ಸಾವಿರ ಕೊಳ್ಳಿ ಒಲಿಯಾಗ । ಇದ್ದಾರ
ಜ್ಯೋತಿ ನಿನ್ನಾರು ಹೋಲಾರ

---

೧೪. ಸ್ತ್ರೀ ಸಂಪದ : ರೇಖಾ ಹಿಮಾನಂದ್, ಪು.೩೩

ಎಂದು ತಾಯಿಯ ಸಂಬಂಧವೆನ್ನುವುದು ಯಾರಿಗೂ ಹೋಲಿಸಲಾರದಷ್ಟು ದೊಡ್ಡದು ಎಂದು ಹೇಳುತ್ತಾರೆ. ಹಾಗೂ ಗಂಗೆಯಷ್ಟೇ ಪವಿತ್ರವಾದ ಸ್ಥಾನವನ್ನು ತಾಯಿಗೆ ನೀಡಿದ್ದಾರೆ. ಮಹಿಳೆಯು ಗಂಡನ ಮನೆ ಹಾಗೂ ತವರು ಮನೆ ಎರಡು ಕೌಟುಂಬಿಕ ಪರಿಸರಗಳ ಪಂಜರದೊಳಗೆ ತನ್ನ ಜೀವನವನ್ನು ಸಾಗಿಸುತ್ತಾಳೆ. ಅವೆರಡೂ ಕುಟುಂಬದಲ್ಲಿ ಪುರುಷನ ಅಧೀನದಲ್ಲಿಯೇ ಜೀವನವನ್ನು ಸಾಗಿಸುವಂತಹ ಪ್ರಸಂಗಗಳನ್ನು ಪ್ರಾಚೀನ ಕಾಲದಿಂದಲೂ ಕಾಣುತ್ತಲೇ ಬಂದಿದ್ದೇವೆ. ಇಂದಿಗೂ ಕೂಡ ಬಹುಪಾಲು ಹೆಣ್ಣುಮಕ್ಕಳು ಜೀವನವನ್ನು ಇದೇ ರೀತಿಯಾಗಿಯೇ ಸಾಗಿಸುತ್ತಿರುವುದು ಕಂಡುಬರುತ್ತದೆ. ಕಥನ ಗೀತೆಗಳಲ್ಲಿ ಕಂಡುಬರುವ ಮಹಿಳೆಯರು ತವರಿನಲ್ಲಿ ಕಂಡುಂಡ ಅನುಭವಗಳು ಹಾಗೂ ತವರು ಆಕೆಯನ್ನು ಹೇಗೆ ಕಂಡಿತ್ತು, ತವರಿನಿಂದ ಮಹಿಳೆ ಹೇಗೆ ತಿರಸ್ಕೃತಳಾಗುತ್ತಾ ಬಂದಳು ಎಂಬುದನ್ನು ಕೆಲವೊಂದು ಕಥನಗೀತೆಗಳು ವಿಧವಿಧವಾಗಿ ಬಣ್ಣಿಸುತ್ತವೆ.

ಹೆಣ್ಣುಮಗು ಹುಟ್ಟಿತೆಂದರೆ ಹುಣ್ಣು ಹುಟ್ಟಿದ ಹಾಗೆ; ಸೆರಗಿನಲ್ಲಿ ಕೆಂಡವನ್ನು ಕಟ್ಟಿಕೊಂಡ ಹಾಗೆ. ಆಕೆಯನ್ನು ಮದುವೆ ಮಾಡಿಸಿಕೊಡುವವರೆಗೆ ತವರಿನಲ್ಲಿ ಸಮಾಧಾನವೆಂಬುದೇ ಇರುವುದಿಲ್ಲ. ಮದುವೆಯನ್ನು ಮಾಡಿಕೊಟ್ಟು ಬಿಟ್ಟರೆ ತಮ್ಮ ಎಲ್ಲ ಜವಾಬ್ದಾರಿ ಕಳೆದುಕೊಂಡ ಹಾಗೇ ಎಂದುಕೊಂಡು ಕೈ ತೊಳೆದುಕೊಂಡು ಬಿಡುವಂತಹ ಸಮಾಜದ ವ್ಯಾಪ್ತಿ ಹಿರಿದಾಗಿದೆ. ಆಕೆಗೆ ಏನಾದರೂ ಸಂಕಷ್ಟ ಬಂದರೆ ತವರಿನಲ್ಲಿಯೂ ಹೇಳಿಕೊಳ್ಳಲಾಗದೇ, ಗಂಡನ ಮನೆಯಲ್ಲಿಯೂ ಹೇಳಲಾಗದೇ ವೇದನೆಯನ್ನು ಅನುಭವಿಸುತ್ತಾಳೆ. ತವರಿನಲ್ಲಿ ಹೇಳಿದರೆ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಏನೇ ಕಷ್ಟ-ಸಂಕಟ ಇದ್ದರೂ ಕೂಡ ಗಂಡಿನ ಮನೆಯಲ್ಲಿಯೇ ಬಾಳ್ವೆಯನ್ನು ಮಾಡಬೇಕು ಎಂಬುದು ತವರಿನವರ, ಸಮಾಜದವರ ಅಭಿಮತವಾಗಿದೆ. ಇಂತಹ ಹಲವಾರು ಘಟನೆಗಳನ್ನು ನಾವು ಕಥನಗೀತೆಗಳಲ್ಲಿ ಕಾಣಬಹುದು ಮತ್ತು ಇಂತಹ ಘಟನೆಗಳು ಇಂದಿಗೂ ನಡೆಯುವುದನ್ನು ಕಂಡರೆ ಬಹಳ ಖೇದವೆನಿಸುತ್ತದೆ. ಅತ್ತೆ-ಸೊಸೆಯ ಜಗಳ, ಮಲತಾಯಿ ಧೋರಣೆ ಇವೆಲ್ಲ ಜನಪದ ಸಾಹಿತ್ಯದ ಮಹತ್ವದ ಆಶಯಗಳಾಗಿವೆ. ಪುರುಷ ಪ್ರಧಾನ ವ್ಯವಸ್ಥೆ, ಸಮಾಜದ ಮೌಲ್ಯಗಳು ಇಂತಹ ವ್ಯವಸ್ಥೆಗೆ, ಪರಿಸ್ಥಿತಿಗೆ ಕಾರಣವಾಗಿರುವುದೆಂದರೆ ತಪ್ಪಾಗಲಾರದು.

ಆರ್ಥಿಕವಾಗಿ ಮಗನೇ ತನ್ನನ್ನು ಸಾಕುವುದು ಎಂಬ ದೃಷ್ಟಿಯಿಂದ ಮಗನ ಮೇಲೆಯೇ ಅವಲಂಬಿತವಾಗುವ ತಾಯಿ, ಮಗನ ಹೆಂಡತಿಯೂ ಹೆಣ್ಣೇ ಎಂದು ತಿಳಿಯದೇ ತನ್ನ ಅಧಿಕಾರವನ್ನು ಚಲಾಯಿಸಿ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಾಳೆ. ಇವಳಷ್ಟೇ

ಅಲ್ಲದೇ ಅತ್ತಿಗೆ, ನಾದಿನಿಯರು ನೀಡುವಂತಹ ಹಲವಾರು ಕಿರುಕುಳಗಳನ್ನು ಸೊಸೆಯಾದವಳು ಸಹಿಸಬೇಕಾಗುತ್ತದೆ. ಜೊತೆಗೆ ಅತ್ತೆ ಸೊಸೆಯ ಮೇಲೆ ಸಂಶಯ ಬಂದರಂತೂ ಮುಗಿದೇ ಹೋಯಿತು. ಯಾರಿಗೂ ಕಾಣದ ಹಾಗೇ ಇಡೀ ಜಗತ್ತನ್ನೇ ತೊರೆಯುವಂತಹ ಪ್ರಸಂಗ ಒದಗಿಬರುತ್ತದೆ. ಉದಾ: ಉತ್ತರದೇವಿಯಂತೆ ಮನೆ, ಜಗತ್ತು ತೊರೆಯಬೇಕಾಗುತ್ತದೆ. ಅತ್ತೆಗೆ ಹಿಡಿಸದ ಸೊಸೆ, ಗಂಡ, ತಂದೆ-ತಾಯಿ, ಬಂಧು ಬಳಗದವರಿಂದಲೂ ತಿರಸ್ಕೃತಳಾಗಿ ಕೊನೆಗೆ ಸಾವಿಗೆ ಶರಣಾಗುವುದೇ ಈ ಕಥನಗೀತೆಯ ವಾಸ್ತವವಾಗಿದೆ.

ಹೆಣ್ಣು ಮದುವೆಯಾಗಿ ಹೋಗುವಾಗ ನಾನಾ ರೀತಿಯ ಉಪದೇಶಗಳನ್ನು ಹೇಳಿ ಕಳುಹಿಸಲಾಗುತ್ತದೆ. ಆಗ ಆ ಹೆಣ್ಣುಮಗುವಿಗೆ ಗಂಡನ ಮನೆಯ ಬಗ್ಗೆ ಭಯ ಹುಟ್ಟುತ್ತಿತ್ತು. ತಾಯಿ ಹಾಗೂ ತವರಿನ ಕುಟುಂಬವರ್ಗವೆಲ್ಲ ಇದನ್ನೆಲ್ಲಾ ಮಗಳಿಗೆ ಹೇಳಿ ಕಳುಹಿಸುತ್ತಿದ್ದಳು ಎಂಬುದಕ್ಕೆ ಕೆಲವೊಂದು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು;

ಅತ್ತಿಯ ಮನಿಯಾಗ ಮುತ್ತಿನ್ಹಾಂಗಿರಬೇಕು
ಹೊತ್ತಾಗಿ ನೀಡಿದರೆ ಉಣಬೇಕು ! ಕಂದಮ್ಮ
ಹೆತ್ತ ಮನಿಗೆ ಹೆಸರ ತರಬೇಕು

ತವರಿನ ಮನೆಯವರು ಅತ್ತೆ ಮನೆಯಲ್ಲಿ ಮುತ್ತಿನಂತೆ ಯಾವಾಗಲೂ ಶೋಭಿತಳಾಗಿ ಎಷ್ಟೇ ಕಷ್ಟಗಳಿದ್ದರೂ ಸಹಿಸಿಕೊಂಡು ಅವರು ಕೊಟ್ಟಾಗ ಊಟ ಮಾಡಿ ಏನನ್ನೂ ಎದುರು ಮಾತನಾಡದೇ ತವರುಮನೆಗೆ ಕೀರ್ತಿಯನ್ನು ತೆಗೆದುಕೊಂಡು ಬಾ ಎಂದು ಹೇಳಿ ಕಳುಹಿಸುತ್ತಾರೆ. ಇನ್ನೊಂದು ತ್ರಿಪದಿಯಲ್ಲಿ ಹೇಳುವ ಬಗೆ ಎಂದರೆ;

ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ನಲ್ಲನ ದನಿಗಂಜಿ । ನಡೆದರ
ಎಂಥ ಉತ್ತಮರ ಮಗಳೆಂದ

ಗಂಡನ ಮನೆಯಲ್ಲಿರುವಾಗ ಅತ್ತೆ-ಮಾವರಿಗೆ ಹಾಗೂ ಗಂಡನಿಗೆ ಹೆದರಿ, ತಲೆಬಾಗಿ ನಡೆಯಬೇಕು ಮತ್ತು ನೆರೆಮನೆಯವರಿಗೂ ಕೂಡ ಹೆದರಿ ನಡೆದುಕೊಂಡು ಉತ್ತಮ ತಂದೆ-ತಾಯಿ ಮಗಳಿವಳು ಎನ್ನುವ ಹಾಗೆ ನಮ್ಮ ಹೆಸರನ್ನು ನೀನು ತರಬೇಕು ಎಂದು ಹೇಳಿ ಕಳುಹಿಸುತ್ತಾರೆ. ತನ್ನದೇ ಮನೆಯಲ್ಲಿ ಆ ಮಹಿಳೆಗೆ ಸ್ವಾತಂತ್ರ್ಯವಿಲ್ಲ, ಅಸ್ತಿತ್ವವಿಲ್ಲ. ಒಟ್ಟಿನಲ್ಲಿ ಎರಡೂ ಮನೆಗೆ ಉತ್ತಮ ಹೆಸರನ್ನು ತಂದುಕೊಡುವಂತಹ ಹೊರೆ(ಭಾರ) ಆಕೆಯ ಮೇಲಿದೆ.

ತವರಿನಲ್ಲಿಯೂ ಕೂಡ ಭದ್ರತೆಯಿಲ್ಲದೇ, ನೆಲೆ ಸಿಗದೇ ಇತ್ತ ಗಂಡನ ಮನೆಯಲ್ಲಿಯೂ ಭದ್ರತೆಯಿಲ್ಲದೆ ನೀರಮೇಲಣ ಗುಳ್ಳೆಯ ಹಾಗೆ ಆಕೆಯ ಬುದಕು ಸಾಗಬೇಕಿತ್ತು. ಗಂಡಿನ ಮನೆಯಲ್ಲಿ ಯಾವಾಗ ಬೇಕಾದರೂ ಹೊರಗೆ ಹಾಕುವಂಥ ಸ್ವಾತಂತ್ರ್ಯ ಗಂಡಿಗಿದೆ. ಗಂಡನೊಂದಿಗೆ ಸ್ವತಂತ್ರ್ಯವಾಗಿ ಮಾತನಾಡಲೂ ಸಹ ಅವಕಾಶ ವಂಚಿತಳು. ಅಂತೆಯೇ ಮಗಳನ್ನು ಕಳಿಸುವಾಗ;

"ಒಂಬತ್ತು ತಿಂಗಳು ತುಂಬಿಕೊಂಡು ತಿರುಗೇನು
ಹಂಬಲಿಸಿ ನಿನ್ನ ಹಡೆದೇನು ಚಿತ್ತರದ
ಗೊಂಬಿ ನಿನ್ನೊಪ್ಪಿಸಿಕೊಡಲ್ಹೆಂಗೆ
ಹೆಣ್ಣುಮಕ್ಕಳ ಕಳುವಿ ಕಣ್ಣೀಗಿ ನೀರು ತಂದು
ಸಣ್ಣ ಸೆಲ್ಲೆದಲಿ ಮುಸುಕು ಹಾಕು । ಹಡೆದಪ್ಪ
ಹೆಣ್ಣು ಸಾಕೆಂದ ಜಲುಮಾಕ"[೧೫]

ತಾಯಿ ತನ್ನ ಮಗುವನ್ನು ಒಂಬತ್ತು ತಿಂಗಳು ಹೊತ್ತು ಹೆತ್ತು ಕಾಳಜಿಯಿಂದ ಬೆಳೆಸಿರುತ್ತಾಳೆ. ಆದರೂ ಸಹಿತ ತಾಯಿಮನೆ ಬಿಟ್ಟು ಹೋಗುವ ಪ್ರಸಂಗ ಬಂದೇ ಬರುತ್ತದೆ. ಅದಕ್ಕಾಗಿ ಹೆಣ್ಣಮಗು ಬೇಡವೆಂಬ ನೋವು ತಾಯಿಯಲ್ಲಿ ಕಾಣುತ್ತದೆ. ತಂದೆ-ತಾಯಿಯರಿಗೆ ಮಗಳ ಅಗಲಿಕೆಯ ನೋವು ಆಳವಾದದ್ದು. ಕೊನೆಯವರೆಗೂ ಉಳಿಯುವಂಥದ್ದು. ಗಂಡನ ಮನೆಯಲ್ಲಿ ಹಲವಾರು ರೀತಿಯ ಹಿಂಸೆಗಳಾದರೂ ಆಕೆಗೆ ತವರು ಮನೆಯ ತಾಯಿ-ತಂದೆ, ಅಣ್ಣ-ತಮ್ಮಂದಿರ ಮುಂದೆ ಏನೂ ಹೇಳಲು ದಾರಿ ಇಲ್ಲ. ಮನಸ್ಸು ಬರುವುದಿಲ್ಲ. ಏಕೆಂದರೆ ನಂಬಿಕೆ, ಸಂಪ್ರದಾಯಗಳು, ಕಟ್ಟುಪಾಡುಗಳು ಆಕೆಯ ಬಾಯಿಯನ್ನು ಗಟ್ಟಿಯಾಗಿ ಬಿಗಿದಪ್ಪಿಕೊಂಡಿರುತ್ತವೆ. ಆದಕಾರಣ ಆಕೆ ತನ್ನ ಕಷ್ಟ-ಸಂಕಟಗಳನ್ನು ತಾನೇ ನುಂಗಿ-ಕೊಳ್ಳಬೇಕು. ನುಂಗಿ-ನುಂಗಿ ಸಾಕಾದರೆ ಜೀವವನ್ನು, ಜೀವನವನ್ನು ತ್ಯಜಿಸಿ ಜಗತ್ತನ್ನೇ ಬಿಟ್ಟು ಹೋಗಬೇಕು. ಹಾಗೆ ಹೋದಂತಹ ಹಲವಾರು ಮಹಿಳೆಯರನ್ನು ವಾಸ್ತವದಲ್ಲಿಯೂ ಹಾಗೂ ಕಥನ ಗೀತೆಗಳಲ್ಲಿ ಬರುವ ಮಹಿಳೆಯರಲ್ಲಿಯೂ ಕೂಡ ಕಾಣಬಹುದು. ಇಂದಿಗೂ ಕೂಡ ಮಹಿಳೆ ತನ್ನ ಅಳಲನ್ನು ತೋಡಿಕೊಳ್ಳಲಾಗದ ಪರಿಸ್ಥಿತಿಯಲ್ಲಿರುವುದು ಶೋಚನೀಯ ವಿಷಯವಾಗಿದೆ.

---

೧೫. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ : ಎಚ್.ಎಸ್. ಮುಕ್ತಾಯಕ್ಕ, ಪು.೫

ಗೃಹಿಣತ್ವ ಎಂಬ ಭೂತ ಮಹಿಳೆಯನ್ನು ಆವರಿಸಿ ಅವಳ ವ್ಯಕ್ತಿತ್ವವನ್ನು ಹಂತ-ಹಂತವಾಗಿ ನಿರ್ನಾಮ ಮಾಡುತ್ತ ಬರುತ್ತದೆ. ಮದುವೆಯಾಯಿತೆಂದರೆ ಸಾಕು ಮಾಡು, ತೊಳಿ, ಬಳಿ, ಮಕ್ಕಳನ್ನು ಹೆರುವುದು, ಜೋಪಾನ ಮಾಡುವುದು, ಮನೆಯ ಸಕಲ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಅನಿವಾರ್ಯವಾಗುತ್ತದೆ. ಅವಳು ಒಂದು ಸೇವೆಯನ್ನು ಮಾಡುವಂತಹ ಜೀವವಿಲ್ಲದ ಯಂತ್ರದ ಹಾಗೆ ಸಿದ್ಧಳಾಗಿಬಿಡುತ್ತಾಳೆ. ಹೆಣ್ಣುಮಗುವೊಂದು ಜನಿಸಿದ ಕ್ಷಣದಿಂದಲೇ ಅವಳ ವಿವಾಹಕ್ಕೆ ಸಕಲ ಸಿದ್ಧತೆ ಶುರುವಾಯಿತೆಂದೇ ತಿಳಿಯಬೇಕು. ಏಕೆಂದರೆ ಮನೆಯವರು, ಸಮಾಜದವರು ಆಡುವ ಮಾತು, ಹೆಣ್ಣುಮಗುವಿನ ಬಗೆಗಿರುವ ತಾತ್ಸಾರ ಭಾವನೆ ಒಂದು ಕಡೆಯಾದರೆ: ತವರು ಮಗಳ ಜೀವನದ ಬಗೆಗೆ ಕಾಳಜಿ ವಹಿಸುವ ಇನ್ನೊಂದು ಮುಖ ಕಾಣುತ್ತದೆ. ತನ್ನತನವನ್ನೇ ಮರೆತು ಈ ಪ್ರಪಂಚವೆಂದರೆ ಪುರುಷ ಕೇಂದ್ರಿತ ಎಂದು ತನ್ನ ವ್ಯಕ್ತಿತ್ವ, ಆಸೆ-ಆಕಾಂಕ್ಷೆಗಳಿಗೆ ಬೆಲೆ ಕೊಡದೇ ಅವರ ಕರಾರುಗಳಿಗೆ ತಲೆಬಾಗಿ ಉಸಿರೆತ್ತದೆಯೇ ಒಪ್ಪಿ ಜೀವನವನ್ನು ಸಾಗಿಸುತ್ತಾಳೆ. ಇದರ ಹೊರತಾಗಿಯೂ ಕೆಲವು ಮಹಿಳೆಯರು ಅಹಂಭಾವನೆಯಿಂದ ಬದುಕಿರುವುದನ್ನು ಕಾಣುತ್ತೇವೆ. ಆದರೆ ಕಥನಗೀತೆಗಳಲ್ಲಿ ಇಂತಹ ವ್ಯಕ್ತಿತ್ವದಿಂದ ಕೂಡಿದ ಮಹಿಳೆಯರು ಕಂಡುಬರುವುದು ಅತೀ ವಿರಳ. ಕಾರಣ ಕುಟುಂಬದ ಮರ್ಯಾದೆಗಾಗಿ, ನೆರೆಹೊರೆಯ ಜನಕ್ಕಾಗಿ ಎಲ್ಲ ಕಷ್ಟಗಳ ಸುರುಳಿಗಳನ್ನು ಬದಿಗೊತ್ತಿ ಬದುಕನ್ನು ಸಾಗಿಸುತ್ತಿದ್ದಳು. ಮಹಿಳೆಯಾಗಿರಲಿ, ಪುರುಷ ಆಗಿರಲಿ ಭಾವನೆಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಬರಬೇಕು. ಅಂದಾಗ ಮಾತ್ರ ಮಹಿಳಾ ವಾದಕ್ಕೆ ಮನ್ನಣೆ ಬರುತ್ತದೆ.

ಅವಿವಾಹಿತ ಹೆಣ್ಣುಮಕ್ಕಳು ತವರು ಮನೆಯಲ್ಲಿ ಅಷ್ಟೇ ಅಲ್ಲ ವಿಧವೆಯರು ಕೂಡ ತವರನ್ನೇ ಆಶ್ರಯಿಸಿ ಸೋದರ-ಸೋದರಿಯರಿಗೆ, ಅವರ ಮಕ್ಕಳಿಗೆ ದುಡಿದು ಹಣ್ಣಾಗಿ, ಸಂಸಾರದ ಭಾರವನ್ನು ಹೊತ್ತುಕೊಂಡು ತಮ್ಮ ಜೀವನವನ್ನು ಸವೆಸುತ್ತಿದ್ದಾರೆ. ಗಂಡ ಸತ್ತನೆಂದರೆ ಸಮಾಜ ಆಕೆಗೆ ವಿಧವೆ ಎಂಬ ಪಟ್ಟಕಟ್ಟಿ ಬಿಡುತ್ತದೆ. ಬೇರೆ ಯಾರನ್ನಾದರೂ ಮರುಮದುವೆಯಾದರೆ ಸಮಾಜ ಆಕೆಯನ್ನು ನೋಡುವ ದೃಷ್ಟಿಕೋನವೇ ಬೇರೆಯಾಗುತ್ತದೆ. ಅದೇ ಒಬ್ಬ ಮಹಿಳೆ ಮದುವೆಯಾಗಿ ತೀರಿಕೊಂಡರೆ ಗಂಡನಾದವನಿಗೆ ಸ್ವತಃ ಮನೆಯವರೇ ಇನ್ನೊಂದು ಹೆಣ್ಣನ್ನು ತಂದು ಮದುವೆಯನ್ನು ಮಾಡಿಸಿ ಹೊಸ ಸಂಸಾರವನ್ನು ರೂಪಿಸಿಕೊಂಡು ಸಂತೋಷದಿಂದ ಜೀವನ ನಡೆಸಲು ಅನುಮತಿ ನೀಡುತ್ತಾರೆ. ಮದುವೆಯಾಗದೇ ಇದ್ದ ಹೆಣ್ಣುಮಕ್ಕಳಿಗಂತೂ ನೂರಾರು ಚುಚ್ಚು ಮಾತಗಳನ್ನಾಡಿ ಆಕೆಯು ಸಾಯುವ ಹಂತಕ್ಕೆ ಹೋಗುವಷ್ಟು ಮಾನಸಿಕ ಹಿಂಸೆಯನ್ನು ನೀಡುತ್ತಾರೆ. ಬಹುಪಾಲು

ಮಹಿಳೆಯರು ಆ ಹಿಂಸೆಯಡಿಯಲ್ಲಿಯೇ ಜೀವನ ಸಾಗಿಸುತ್ತಾ ಸಾಗಿದ್ದಾರೆ. ಮದುವೆಯಾಗಿ ಗಂಡನ ಮನೆಯವರಿಂದ ತಿರಸ್ಕೃತಳಾಗಿ, ಗಂಡನ ಜೊತೆಗೆ ಸಂಸಾರ ಮಾಡದೇ ಇದ್ದರೂ ಆಕೆ ಕನ್ಯೆ ಎನಿಸುವುದಿಲ್ಲ. ಬದಲಾಗಿ ಗಂಡನನ್ನು ಬಿಟ್ಟು ಬಂದ ಮಹಿಳೆಯೆಂದು ದೂಷಿಸಲ್ಪಡುತ್ತಾರೆ.

ಜನಪದ ಕಥನಗೀತೆಗಳಲ್ಲಿ ತಾಯಿ ಮತ್ತು ತವರಿನವರೆಲ್ಲರೂ ಸಮಾಜದ ಆಚರಣೆಗಳಿಗೆ, ಚುಚ್ಚು ಮಾತುಗಳಿಗೆ ತಲೆಬಾಗಲೇ ಬೇಕಾದಂತಹ ಪ್ರಸಂಗ ಮಹಿಳೆಯನ್ನು ಬಾಚಿ ಆಚರಣೆ, ಸಂಪ್ರದಾಯಗಳ ಉದರದಲ್ಲಿ ಬಂಧಿಸಿಡುತ್ತದೆ. ಆ ಮಹಿಳೆ ತವರಿನಲ್ಲಿರಲಿ, ಗಂಡನ ಮನೆಯಲ್ಲಿರಲಿ ಬಂಧನಕ್ಕೊಳಪಟ್ಟೇ ಜೀವನ ಸಾಗಿಸಿದ್ದಾಳೆ.

ತವರು ಮನೆಯಲ್ಲಿ ಹುಟ್ಟಿ ಬೆಳೆದು ಮದುವೆಯಾಗಿ ಬೇರೊಂದು ಮನೆಯಲ್ಲಿ ಅಂದರೆ ಗಂಡನ ಮನೆಯಲ್ಲಿ ಬಾಳಬೇಕಾದ ಮಹಿಳೆಯ ಬದುಕು ಒಂದು ಬಗೆಯಲ್ಲಿ ಯಾವುದೋ ಒಂದು ಕಾಯಿಯ ಬಳ್ಳಿಯನ್ನು ಕಿತ್ತು ಬೇರೆ ಜಾಗದಲ್ಲಿ ನೆಟ್ಟು ಕಸಿ ಮಾಡುವಂತಹದ್ದು. ಬಳ್ಳಿ ಸರಿಯಾಗಿ ಬೆಳೆದರೆ ಹೂಬಿಟ್ಟು ಕಾಯಿ ಕೊಟ್ಟು ಫಲಪ್ರಧಾನವಾಗುತ್ತದೆ. ಇಲ್ಲದಿದ್ದರೆ ಒಣಗಿ ಮುದುಡಿ ಹೋಗುತ್ತದೆ. ಅಥವಾ ಸಾಯುತ್ತದೆ ಎಂದರ್ಥ. ಬಳ್ಳಿಯನ್ನು ಎಷ್ಟೇ ಸರಿಯಾಗಿ ನೀರು ಹಾಕಿ ಬೆಳೆಸಿದರೂ, ಬೆಳೆಯುವಂತಹ ನೆಲದ(ನೆಲೆಯ) ಗುಣ ಮತ್ತು ಅಲ್ಲಿ ಬೀಳುವ ಸೂರ್ಯನ ಬೆಳಕು, ಚಂದ್ರನ ಬೆಳಕು ಪ್ರಮುಖವಾಗುತ್ತವೆ. ಇವೆಲ್ಲ ಸರಿಯಾಗದಿದ್ದರೆ ಆ ಮಹಿಳೆಯ ಬದುಕು ಅಮವಾಸ್ಯೆಯ ಕತ್ತಲ ಹಾಗೇ ಜೀವನವನ್ನೇ ಕಳೆಯಬೇಕಾಗುತ್ತದೆ. ಇಂತಹ ಕತ್ತಲೆಯಲ್ಲಿಯೇ ಜೀವನವನ್ನು ಕೊನೆಗಾಣಿಸಿಕೊಂಡ ಮಹಿಳೆಯರನ್ನು ಕಾಣಬಹುದು. ಎಣಿಸಲಾರದಷ್ಟು ಈ ಕಥನಗೀತೆಗಳಲ್ಲಿಯೂ ಕೂಡಾ ಮಹಿಳೆಯರು ಅಮವಾಸ್ಯೆಯ ಕತ್ತಲಲ್ಲಿ ಮುಳುಗಿ ಹೋಗಿದ್ದಾರೆ. ಆದ ಕಾರಣ ಮಹಿಳೆ ವಾಸಿಸುಂತಹ ಕೌಟುಂಬಿಕ ನೆಲೆ ಸುಸಜ್ಜಿತವಾಗಿರಬೇಕು. ನೆಮ್ಮದಿ ನೀಡುವ ತಾಣವಾಗಬೇಕು. ಮಾನವ ಜನ್ಮ ಎಂಬುದು ಶಾಶ್ವತವಲ್ಲ ಎಂದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆದಕಾರಣ ಭೂಮಿಯ ಮೇಲೆ ಜೀವಿಸುವವರೆಗೆ ಮಾನವೀಯತೆಯೊಂದಿಗೆ ಆದರ್ಶತನವನ್ನು ಅಳವಡಿಸಿಕೊಂಡು ಹೋಗಬೇಕೆಂಬ ಆಶಯದೊಂದಿಗೆ ಕೆಲವೊಂದು ವಿವರಣೆಯೊಂದಿಗೆ ವಿಮರ್ಶಿಸಲಾಗಿದೆ.

ಭಾಗೀರಥಿ :

ಕೆರೆಗೆ ಹಾರ ಕಥನಗೀತೆಯಲ್ಲಿ ಕಲ್ಲನಕೇರಿಯ ಮಲ್ಲನಗೌಡ ಕೆರೆಯೊಂದನ್ನು ಕಟ್ಟಿಸುತ್ತಾನೆ. ಆದರೆ ಅದರಲ್ಲಿ 'ಸೆರೆಮುಕ್ಕು' ನೀರು ಇರುವುದಿಲ್ಲ. ಹೊತ್ತಿಗೆ ತೆಗೆಸಿ ಕೇಳುತ್ತಾರೆ. ಹಿರಿಸೊಸೆ ಮಲ್ಲವ್ವಳನ್ನು ಹಾರ ಕೊಡಬೇಕೆಂದು ಹೇಳುತ್ತಾರೆ ಜ್ಯೋತಿಷ್ಯರು. ಮಾವ ಹಿರಿಸೊಸೆಯನ್ನು ಹಾರ ಕೊಟ್ಟರೆ ಹಿರಿತನಕ್ಕೆ ಯಾರು ಇರಲ್ಲ. 'ಕಡೆಯ ಸೊಸೆ (ಕಿರಿಯ ಸೊಸೆ) ಭಾಗೀರಥಿಯನ್ನು ಹಾರಕೊಡುವುದೆಂದು ತೀರ್ಮಾನಿಸುತ್ತಾನೆ. ಇದನ್ನು ತಿಳಿದ ಕಿರಿಸೊಸೆ ಭಾಗೀರಥಿಯು ತವರುಮನೆಗೆ ಹೋಗುತ್ತಾಳೆ. ಅಲ್ಲಿ ಭಾಗೀರಥಿಯ ಬಾಡಿದ ಮುಖವನ್ನು, ಕಣ್ಣಾಗ ನೀರನ್ನು ಕಂಡು ಅಪ್ಪ ಪ್ರಶ್ನಿಸಿದಾಗ ಭಾಗೀರಥಿ ಕೆರೆಗೆ ಹಾರವಾಗುವ ವಿಷಯವನ್ನು ಹೇಳದೇ 'ನಮ್ಮ ಅತ್ತೆ ಮಾವ ಬೇರೆ ಇಡುತಾರಂತೆ' ಎಂದು ಹೇಳುತ್ತಾಳೆ. ಅದಕ್ಕೆ ಅವಳ ತಂದೆ 'ಹೊಲ, ಮನೆ ಕೊಡತೇನೆ ಏನು ಚಿಂತೆ ಮಾಡಬೇಡ' ಎಂದು ಹೇಳುತ್ತಾನೆ. ಈ ರೀತಿ ಹೇಳುವ ಬದಲಾಗಿ ಬೇರೆ ಇಡಲು ಕಾರಣವನ್ನು ವಿಚಾರಿಸಿ ಆಕೆಗೆ ಬಂದಂತಹ ಕಷ್ಟವೇನು ಎಂದು ಯೋಚಿಸದೇ ಹೊಲ-ಮನಿ ಕೊಡುತ್ತೇನೆಂದರೆ ಆಕೆಯ ಕಷ್ಟಗಳನ್ನು ಅರ್ಥಮಾಡಿಕೊಳ್ಳದೇ ಆಕೆಯ ನೋವಿಗೆ ಸ್ಪಂದಿಸಲಿಲ್ಲ ಎಂಬುದು ಗೋಚರವಾಗುತ್ತದೆ. ಆಕೆ ಹೊಲಮನಿ ತಗೊಂಡು ಹೊಳಿದಂಡ್ಯಾಗ ಹಾಕಪ್ಪ ಎಂದು ಹೇಳಿ ಮುಂದೆ ಹೋಗುತ್ತಾಳೆ. ಮುಂದೆ ಅವ್ವ ಎದುರಾಗುತ್ತಾಳೆ. ಎಂದಿಲ್ಲದ ಭಾಗೀರಥಿಯನ್ನು ಕಂಡು ಬಂದ ವಿಷಯದ ಬಗ್ಗೆ ವಿಚಾರಿಸುತ್ತಾಳೆ. ಇವಳಿಗೂ ಕೂಡಾ ಹಾಗೇ ಹೇಳುತ್ತಾಳೆ. ತಾಯಿ ಕೂಡ ಇಟ್ಟರೆ ಇಡಲೇಳು ವಾಲಿಜೋಡು ಕೊಡತೇನೆ ಎನ್ನುತ್ತಾಳೆ. ವಾಲಿಯ ಜೋಡು ಒಯ್ದು ಒಲಿಯೊಳಗ ಹಾಕವ್ವ ಎಂದು ಹೇಳಿ ಮುಂದೆ ಬರುತ್ತಾಳೆ. ಅವರಕ್ಕ ಎದುರಾಗುತ್ತಾಳೆ. ಅವಳಿಗೂ ಕೂಡಾ ಹಾಗೆ ಹೇಳುತ್ತಾಳೆ. ಅವಳಕ್ಕ ಕೂಡ 'ಇಟ್ಟರ ಇಡಲೇಳ ಮಕ್ಕಳನ್ನು ಜೋಡಿಗೆ ಕಳಿಸ್ತೇನೆ' ಎನ್ನುತ್ತಾಳೆ. ಮಕ್ಕಳಿದ್ದರೇನಕ್ಕ ದುಃಖ ಕಳೆಯಲು ಸಾಧ್ಯವಿಲ್ಲ ಎಂದು ಹೇಳುವಲ್ಲಿ ಆಕೆಯೊಳಗಡಗಿರುವ ದುಃಖಗಳ ಸುರಿಮಳೆ ಯಾರಿಗಾದರೂ ಅರ್ಥವಾಗುತ್ತದೆ. ಎಲ್ಲರೂ ಆಕೆಗೆ ಏನಾದರೂ ಆಸೆ ತೋರಿಸಿ ಜೀವನ ನಡೆಸಲು ಪ್ರೇರೆಪಿಸುತ್ತಾರೆಯೇ ಹೊರತು ಆಕೆಯಲ್ಲಿ ಅಡಗಿರುವ ದುಃಖದ ಬಗ್ಗೆ ಯಾರೂ ವಿಚಾರಿಸಲಾರರು. ಭಾಗೀರತಿ ತವರುಮನೆಯನ್ನು ಬಿಟ್ಟು ಗೆಳತಿಯ ಮನೆಗೆ ಬರುತ್ತಾಳೆ. ಬಾಗಿಲದಾಗ ಗೆಳತಿಯನ್ನು ಕಂಡು 'ಎಂದಿಲ್ಲದ ಭಾಗೀರಥಿ ಇಂದ್ಯಾಕ ಈ ಅಳವು' ಎಂದು ಕೇಳಿದಾಗ ಅಂಜಿ ಹೇಳಲಿ ಅಳುಕಿ ಹೇಳಲಿ ಗೆಳತಿ ಎಂದು ಪ್ರಶ್ನಿಸುತ್ತಾಳೆ. ಅಂಜಬೇಡ ಅಳುಕಬೇಡ ಇದ್ದ ವಿಷಯ ತಿಳಿಸು ಎಂದಾಗ ಆಗ ಭಾಗೀರಥಿ ನಿಜ ಹೇಳುತ್ತಾಳೆ. ನಮ್ಮತ್ತೆ

ನಮ್ಮ ಮಾವ ಕೆರೆಗ್ಹಾರ ಕೊಡತಾರಂತೆ ಎಂದು ಈಕೆ ಹೇಳಿದ ಮಾತನ್ನು ಕೇಳಿದರೆ ಯಾರಿಗಾದರೂ ಸಿಟ್ಟನ್ನು, ಭಯವನ್ನು, ಆಕ್ರೋಶವನ್ನು ತರಿಸುವಂತಾಗುತ್ತದೆ. ಆದರೆ ಈಕೆಯ ಗೆಳತಿ ಎಷ್ಟು ಸರಳವಾಗಿ, ನಯವಾಗಿ, ನಿಷ್ಠುರವಾಗಿ ಉತ್ತರವನ್ನು ಕೊಡುತ್ತಾಳೆ, "ಕೊಟ್ಟರೆ ಕೊಡಲೇಳು ಇಟ್ಟಾಂಗ ಇರಬೇಕು"[೧೬] ಎಂದು ಹೇಳಿಬಿಡುತ್ತಾಳೆ. ಇದನ್ನು ಕೇಳಿದ ತಕ್ಷಣವೇ ಬಹುಶಃ ಆಕೆ ಅಲ್ಲಿ ನಿಂತಿರಲಿಕ್ಕಿಲ್ಲ. ಏಕೆಂದರೆ ಸರ್ರನೆ ಹೋದಳು ಭರ್ರನೆ ಬಂದಳು ಎನ್ನುವ ಮಾತಿನಲ್ಲಿಯೇ ಆಕೆಯ ನೋವನ್ನು ತನ್ನ ಒಡಲಲ್ಲಿ ಕಟ್ಟಿಕೊಂಡು ಓಡಿ ಬಂದಳು ಎಂಬುದು ಅರ್ಥವಾಗುತ್ತದೆ. ಭಾಗಿರಥಿಗೆ ತವರು ಮನೆಯವರ, ಗೆಳತಿಯ ಮಾತು ಕೇಳಿ ಸಿಡಿಲು ಬಡಿದ ಹಾಗೆ ಆಗಿದೆ. ನಾನು ಯಾರಿಗೆ ಹೇಳಿದರೇನು ಪ್ರಯೋಜನವಿಲ್ಲ ಅಂದುಕೊಂಡು ಗಂಡನ ಮನೆಗೆ ಹೋಗುತ್ತಾಳೆ. ಪ್ರತಿಯೊಂದು ಕೆಲಸವನ್ನು ಮಾಡುವಾಗಲೂ ಆಕೆಯ ಕಣ್ಣು ನೀರಿನಿಂದ ತುಂಬಿರುತ್ತಿದ್ದವು. ಯಾರೇ ಕೇಳಿದರೂ ಏನು ಇಲ್ಲ ಎಂದು ಹೇಳಿ ತನ್ನ ಕೆಲಸ ಕಾರ್ಯದಲ್ಲಿಯೇ ತೊಡಗಿರುತ್ತಿದ್ದಳು. ಭಾಗೀರಥಿಯ ಗಂಡನು ಇರದ ವೇಳೆಗೆ ಇವೆಲ್ಲ ಘಟನೆಗಳು ಜರುಗಿದ್ದಾವೆ. ಒಟ್ಟಿನಲ್ಲಿ ಹೇಳಬೇಕಾದರೆ ಭಾಗೀರಥಿಗೆ ತೌರುಮನೆಯವರಿಂದ ಏನೂ ಆಸರೆ ಸಿಗದೇ, ಪ್ರೀತಿಯ ಮಾತುಗಳು ಸಿಗದೇ ಗಂಡನಮನೆಯವರು ಮಾಡಿದ ಹಾಗೇ ಆಗಲಿ ಎಂದು ಎಲ್ಲ ನೋವುಗಳನ್ನು ನುಂಗಿಕೊಂಡು ಅಸಹಾಯಕಳಾಗಿ ಕೆರೆಗೆ ಹಾರವಾದಳು ಭಾಗೀರಥಿ.

ಈ ಕಥನಗೀತೆಯಲ್ಲಿ ಬಂಗಾರದ ಬಟ್ಟಲನ್ನು ತರಲು ಹೋದ ಭಾಗೀರಥಿ ಕೆರೆಗೆ ಬಲಿಯಾಗುತ್ತಾಳೆ. ಅದು ಭಾಗೀರತಿಯ ದುಃಖಾಂತದ ಬಟ್ಟಲೂ ಆಗಿದೆ, ಚಿತೆಗೆ ದೂಡುವ ಭಸ್ಮ ಕುಂಭವೂ ಆಗಿ ಕಂಡುಬರುತ್ತದೆ. ಬಂಗಾರದ ಬಟ್ಟಲನ್ನು ಬಿಟ್ಟು ಬರುವುದು ಅಸಹಜವಲ್ಲ. ಆದರೆ ಅದನ್ನು ಮರೆಯುವುದು, ಮರೆತುದನ್ನು ತರಲು ಭಾಗಿರಥಿಯನ್ನು ಕಳುಹಿಸುವುದು, ಆಕೆ ಕೆರೆಯೊಳಕ್ಕೆ ಹೋಗುವುದು ಅವಳ ಬಂಗಾರದಂತಿರುವ 'ಬದುಕಿನ ಬಟ್ಟಲ'ಕ್ಕೆ ಸಂಕೇತವಾಗುತ್ತದೆ' ಎಂಬುದು ಅಕ್ಷರಶಃ ಸತ್ಯ. ಯಾಕೆಂದರೆ ಭಾಗೀರಥಿಯ ಬದುಕು ಬಂಗಾರದಂತೆಯೇ ಇತ್ತು. ಆದರೆ ಬಲಿಕೊಡುವ ನಿರ್ಧಾರದಿಂದ ಬಂಗಾರದಂತಿರುವ ಭಾಗೀರತಿಯೇ ಕೆರೆಗೆ ಬಲಿಯಾಗಿ ಸಮಾಜಕ್ಕೆ ಪೂಜನೀಯ ಳಾಗುತ್ತಾಳೆ.

---

೧೬. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೨೧

ಉತ್ತರದೇವಿ :

ಕನ್ನಡ ಜನಪದ ಕಥನಗೀತೆಗಳಲ್ಲಿ 'ಉತ್ತರದೇವಿ' ಕಥೆಯು ಗುಣಸಾಗರಿಯ ಕಥೆಯಷ್ಟೇ ಜನಪ್ರಿಯವಾಗಿದೆ. ಅತ್ತೆ ಸೊಸೆಯ ನಡುವಿನ ಜಗಳ ಮಾತಿಗೆ ಮಾತು ಬೆಳೆದು ಅತ್ತೆಯ ಮನೆಯಿಂದ ಹೊರ ಬಂದ ಉತ್ತರದೇವಿ ತೌರಿಗೆ ಹೋಗುವುದನ್ನು ಕಂಡರೆ ಯಾರಿಗಾದರೂ ಕರುಣೆ ಬರುತ್ತದೆ. ಆದರೆ ಇಲ್ಲಿ ಅತ್ತೆ ತಾನು ಕೂಡ ಒಬ್ಬ ಮಹಿಳೆ ಎನ್ನುವುದನ್ನು ಮರೆತು ಉತ್ತರದೇವಿ ನೀರಿಗೆ ಹೋಗಿ ತಡವಾಗಿ ಬಂದಿದ್ದರ ಕಾರಣ ಈಕೆಯ ಶೀಲದ ಮೇಲೆ ಶಂಕೆ ಪಡುತ್ತಾಳೆ. ಅಷ್ಟೇ ಅಲ್ಲದೆ ಆಕೆಯನ್ನು ಮನೆ ಬಿಟ್ಟು ಹೊರಗೆ ಹಾಕುತ್ತಾಳೆ. ಆಗ ಉತ್ತರದೇವಿ ತವರಿನ ಹಾದಿ ಹಿಡಿಯುತ್ತಾಳೆ.

"ಆಚೆಯ ಎಮ್ಮೆಲ್ಲ ಈಚೆಯ ಎಮ್ಮೆಲ್ಲ
ಎರಡರ ನಡುವೆ ಎಡನಡುವೆ-ಉತ್ತರದೇವಿ
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು-ಉತ್ತರದೇವಿ
ಬಾಲಾನೆತ್ತಿಕೊಂಡು ನಾರಿಕೈಲಿಡಕೊಂಡು
ಮುಂದಲ ಚುಕ್ಕಿ ಬೆಳಕಲ್ಲಿ-ಉತ್ತರದೇವಿ
ಹೋದಾಳಪ್ಪಾಜಿ ತೌರಿಗೆ-ಉತ್ತರದೇವಿ
ನನ್ನಪ್ಪ ನನಗೆ ಕದ ತೆಗೆಯೊ"[೧೭]

ಗಂಡನ ಮನೆಯಿಂದ ಅಪ್ಪ ಕೊಟ್ಟಿರುವ ಎಮ್ಮೆ ಹೊಡಕೊಂಡು, ಒಂದು ಮಗುವನ್ನೆತ್ತಿಕೊಂಡು ಒಂದು ಮಗುವನ್ನು ಕೈಲಿಡಕೊಂಡು ಕತ್ತಲ ಹೊತ್ತಿನಲ್ಲಿ ತವರಿಗೆ ಹೋಗುತ್ತಿರುತ್ತಾಳೆ. ಈ ಸಂದರ್ಭದಲ್ಲಿ ಅತ್ತೆಯ ಮನೆಯವರ್ಯಾರೂ ತಡೆಯುವುದಿಲ್ಲ. ತೌರಿಗೆ ಬಂದು ಉತ್ತರದೇವಿ 'ನನ್ನಪ್ಪ ನನಗೆ ಕದ ತೆಗೆಯೋ' ಎಂದು ಕೇಳುತ್ತಾಳೆ. ಆಗ ತಂದೆ ಹೇಳುವ ಮಾತೆಂದರೆ 'ಹಾಸಿಗೆ ಹಾಸ್ಯಾವೆ ದೀಪಲಾರೈಸದೆ ನಿಮ್ಮವ್ವ (ಮಲತಾಯಿ) ತೋಳಲ್ಲಿ ಒರಗವಳೆ ಉತ್ತರದೇವಿ ದೊಡ್ಡಪ್ಪನ ಅರಮನೆಗೆ ಹೋಗು' ಎಂದು ಹೇಳುತ್ತಾನೆ. ಮಗಳು ಏತಕ್ಕೆ ಇಷ್ಟು ರಾತ್ರಿ ಹೊತ್ತಲ್ಲಿ ತವರಿಗೆ ಬಂದಿದ್ದಾಳೆ. ಈಕೆಗೆ ಯಾವ ಕಷ್ಟ ಒದಗಿದೆಯೋ ಏನೋ, ಯಾತಕ್ಕಾಗಿ ಬಂದಿದ್ದಾಳೆಂದು ಏನನ್ನೂ ವಿಚಾರಿಸದೇ ತಮ್ಮ ಸ್ವಾರ್ಥಕ್ಕೆ, ಸುಖ-ಸಂತೋಷಕ್ಕೆ ಮನ್ನಣೆ ಕೊಟ್ಟುದು ಅವರಲ್ಲಿರುವ ಜ್ಞಾನಹೀನತೆಯ ಸಂಕೇತವಾಗಿ

---

೧೭. ಜನಪದ ಖಂಡಕಾವ್ಯಗಳು : ಜೀ.ಶಂ.ಪರಮಶಿವಯ್ಯ, ಪು.೧೫-೧೬

ಕಂಡುಬರುತ್ತದೆ. ಇಂತಹ ತಂದೆ ಇದ್ದರೆಷ್ಟು ಸತ್ತರೆಷ್ಟು ಅನಿಸುತ್ತದೆ. ಏಕೆಂದರೆ ಜವಾಬ್ದಾರಿ-ಯುತವಾಗಿ ಮಗಳ ಕಷ್ಟನಷ್ಟಗಳನ್ನು ವಿಚಾರಿಸದೇ ತಂದೆಯ ಗೌರವ ಸ್ಥಾನಕ್ಕೆ ಕಳಂಕ ತರುವ ಹಾಗೆ ಎನಿಸುತ್ತದೆ. ದೊಡ್ಡಪ್ಪನ ಮನೆಗೆ ಹೋಗು ಎಂದ ನಿಜ. ಸ್ವಂತ ತಂದೆಯೇ ಕದ ತೆಗೆಯದಾದಾಗ ಇನ್ನು ದೊಡ್ಡಪ್ಪ ತೆಗೆಯೋದು ಕನಸಿನ ಮಾತು. ಮುಂದೆ ಉತ್ತರದೇವಿ ತವರುಮನೆಯವರಾದ ದೊಡ್ಡಪ್ಪ, ಚಿಕ್ಕಪ್ಪ, ಅಣ್ಣ, ತಂಗಿ, ಬಂಧು-ಬಳಗದವರೆಲ್ಲರ ಬಾಗಿಲಿಗೆ ಹೋಗುತ್ತಾಳೆ. ಆದರೆ ಯಾರ ಅಶ್ರಯವು ಆಕೆಗೆ ದೊರಕುವುದಿಲ್ಲ. ಕೊನೆಗೆ ತನ್ನನ್ನು ಹಡೆದ ತಾಯಿಯ ಮನೆಗೆ ಬಂದಳು. ತಾಯಿ ಈಕೆಗೆ ಹೇಳುವುದೆಂದರೆ;

"ಒಂದರಿಬೆ ಹಾಸಿದ್ದೆ ಒಂದರಿಬೆ ಚೆಲ್ಲಿದ್ದೆ
ಒಂದೊರುಷ ನಿನ್ನ ಸಲವಿದ್ದೆ – ಕಂದಮ್ಮ
ನನ್ನಾಡು ನಿನಗೆ ಮಡಗಿತ್ತೆ – ನನ ಮಗಳೆ
ನೀನುತ್ತರೆ ಮಳೆಯಾಗಿ ಹೊರಡವ್ವ"[೧೮]

ಎಂದು ಉತ್ತರ ದೇವಿಯನ್ನು ಸಾಕಿ ಸಲುಹಿದ ತಾಯಿ ಈ ಕ್ರೂರ ಸಮಾಜದಲ್ಲಿ ಬಾಳುವುದಕ್ಕಿಂತ ಸಾಯುವುದೇ ಲೇಸು ಎಂದು ಮನಗಂಡು ಮಗಳಿಗೆ 'ಉತ್ತರೆ ಮಳೆಯಾಗಿ' ಹೋಗು ಎನ್ನುತ್ತಾಳೆ. ಇನ್ನೊಂದರ್ಥದಲ್ಲಿ ಉತ್ತರದೇವಿಯ ತಾಯಿಯೂ ಕೂಡ ಗಂಡನ ಮನೆಯಿಂದ ಶೋಷಿತಳಾಗಿದ್ದಳು ಎಂಬುದು ಆಕೆಯ ಮಾತಿನಿಂದ ಸ್ಪಷ್ಟವಾಗುತ್ತದೆ. ಆಗ ಉತ್ತರದೇವಿಗೆ ತೌರಿನವರಿಂದ ಯಾರ ಆಶ್ರಯವೂ ದೊರಕದೇ ಇದ್ದಾಗ ಮಕ್ಕಳನ್ನು ಕರಕೊಂಡು ಬರುತ್ತಾಳೆ. ಮುಂದೆ ಗಂಗಮ್ಮನ ಕಡೆ ಬಂದು ನಮಸ್ಕರಿಸಿ ಆ ಗಂಗಾ ಮಾತೆಯಲ್ಲಿ ನನ್ನಂತ ಪಾಪಿಗೆ ಈ ಬದುಕಿನಲ್ಲಿ ಯಾರೂ ಇಲ್ಲ. ಅದಕ್ಕಾಗಿ ನನ್ನ ತಂದೆ-ತಾಯಿ ನೀನೆ, ದಿಕ್ಕಿಲ್ಲದವರಿಗೆ ನೀನೆ ಬಂಧು ಬಳಗ ಎಲ್ಲವೂ ಎಂದು ತನ್ನ ವೇದನೆಯನ್ನು ಹೇಳಿಕೊಳ್ಳುತ್ತಾ ಅಡ್ಡಬಿದ್ದು ಗಂಗೆಗೆ ನಮಸ್ಕರಿಸಿ ಮಕ್ಕಳಿಗೆ ಸೀರೆ ಸೆರಗನ್ನು ಹರಿದು ಕಣ್ಣು ಕಟ್ಟುತ್ತಾಳೆ. ಆಗ ಮಕ್ಕಳು ದುಃಖಪಡುತ್ತಾ

"ಇದುವೇನೆ ತಾಯಿ ಅಪಸಕುನವು
ಈ ರೀತಿ ಮಾಡುವಕೆ ನಮ್ಮೇಕೆ ಸಾಕಿದಿರಿ
ಮುದ್ದು ಕೊಟ್ಟು ನಮ್ಮ ಕೊಲ್ಲಬಾರದು"[೧೯]

---

೧೮. ಜನಪದ ಖಂಡಕಾವ್ಯಗಳು : ಜೀ.ಶಂ.ಪರಮಶಿವಯ್ಯ, ಪು.೧೬,೧೭
೧೯. ಜನಪದ ಕಥನಗೀತೆಗಳು : ಪಿ.ಕೆ.ಖಂಡೋಬಾ, ಪು.೨೦

ಆ ಮುಗ್ಧ ಮಕ್ಕಳ ಈ ಮಾತುಗಳನ್ನು ಕೇಳಿದರೆ ಕರುಳು ಹಿಂಡಿದ ಹಾಗೆ ಆಗುತ್ತದೆ. ಆ ಎಳೆಯ ಮಕ್ಕಳು ಏನು ಪಾಪ ಮಾಡಿದವು ಎಂಬುದೇ ತಿಳಿಯುವುದಿಲ್ಲ. ಮಕ್ಕಳನ್ನು ಕಂಡಾದರೂ ಗಂಡನ ಮನೆಯವರಿಗೆ, ತವರಿನಮನೆಗೆ ಕನಿಕರ, ಮಕ್ಕಳ ಭವಿಷ್ಯದ ಬಗ್ಗೆ ವಿಚಾರ ಬರಲಿಲ್ಲವಲ್ಲ ಎಂಬ ವ್ಯಥೆ ಕಾಣುತ್ತದೆ. ಮಗಳ ಅಥವಾ ಸೊಸೆಯ ಮೇಲೆ ಇರದ ಕಾಳಜಿ ಇನ್ನು ಆ ಮೊಮ್ಮಕ್ಕಳ ಮೇಲೆ ಬರುವುದು ಅಸಾಧ್ಯ. ಇದಕ್ಕೆಲ್ಲ ಕಾರಣವೆಂದರೆ ಸಮಾಜದ ನಿಂದನೀಯ ಮಾತುಗಳು. ಎಲ್ಲದಕ್ಕೂ ಕಾರಣ ಮಹಿಳೆಯನ್ನೇ ಬೆರಳು ಮಾಡಿ ತೋರಿಸುವಂತಹ ಸಂಪ್ರದಾಯ. ಸತ್ಯ-ಅಸತ್ಯಗಳನ್ನು ಅವಲೋಕಿಸಿ ನೋಡದೇ ಈ ಉತ್ತರದೇವಿಯ ಮೇಲೆ ಸಂಶಿಸುವ ಮನೋಭಾವದಿಂದ ನಮಗೆ ಅರ್ಥವಾಗುವುದು ಏನೆಂದರೆ ಹೆಣ್ಣನ್ನು ಹೇಗೆ ಕಡೆಗಣಿಸುತ್ತಿದ್ದರು ಮತ್ತು ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎನ್ನುವಂತಹ ನುಡಿ ಇದಕ್ಕೆ ಸಮಂಜಸ. ಯಾಕೆಂದರೆ ತವರಿನವರು ಮದುವೆ ಮಾಡಿಕೊಟ್ಟು ತಮ್ಮ ಸಕಲ ಕಾರ್ಯಗಳಿಂದ ಮುಕ್ತಿ ಹೊಂದಿ ಮದುವೆ ಮಾಡಿ ಕೈ ತೊಳೆದುಕೊಂಡು ಆಕೆಯ ಮಾತನ್ನು ಕೇಳುವಷ್ಟು ಮಾನವೀಯತೆಯೂ ಇಲ್ಲವಲ್ಲ ಎಂಬುದು ತಿಳಿದುಬರುತ್ತದೆ.

ಉತ್ತರದೇವಿ ಕಥನಗೀತೆಯ ರೂಪಕವೊಂದರಲ್ಲಿ ತಾಯಿ ಮಗನ ಹತ್ತಿರ ಸೊಸೆಯ ಬಗ್ಗೆ ಚಾಡಿ ಹೇಳುವ ಸಂದರ್ಭದಲ್ಲಿ ಮಗನಾಡಿದ ಮಾತು ಗಮನಾರ್ಹವಾಗಿದೆ. "ಎವ್ವಾ ಮಗಾ ಅಂದ ಮ್ಯಾಲ ಏನ ಬೇಕಾದ್ದ ಹೇಳ ಕೇಳ್ತೀನಿ. ಆದ್ರ ಹಾಲಿನಂಥ ನಮ್ಮ ಸಂಸಾರದಾಗ ಹುಳಿ ಹಿಂಡೋ ಕೆಲಸಾ ಮಾಡಬ್ಯಾಡವಾ"[೨೦] ಎಂಬ ಉತ್ತರ ದೇವಿಯ ಗಂಡನ ಮಾತು ಬಹಳ ತೂಕವುಳ್ಳದ್ದು. ಹುಳಿ ಹಿಂಡುವಂತಹ ಕೆಲಸವನ್ನು ಯಾರೇ ಆಗಲಿ ಮಾಡಬಾರದೆಂಬ ಸೂಚನೆ ಇದರಿಂದ ತಿಳಿದುಬರುತ್ತದೆ.

ವಲ್ಲಣದೇವಿ :

ಈ ಕಥನಗೀತೆಯು ಉತ್ತರದೇವಿಯ ಕಥನಗೀತೆಯ ಆಶಯ ಹೊಂದಿದ್ದರೂ ಸ್ವಲ್ಪ ಭಿನ್ನತೆಯಿಂದ ಕೂಡಿದೆ. ಬಾವಿಯಿಂದ ನೀರನ್ನು ತರಲು ಹೋದ ವಲ್ಲಣದೇವಿಯ ಮೇಲೆ ಶ್ರೀಮಂತನೊಬ್ಬನ ಕಣ್ಣು ಬೀಳುತ್ತದೆ. ಆತ ಆಕೆಯನ್ನು ಕಂಡು ಆಕೆಗೆ ಅಸಹ್ಯಕರ ಮಾತುಗಳನ್ನಾಡುತ್ತಾನೆ:

"ನಿಮ್ಮೋರು ಕಾಣದಾಂಗೆ ನಮ್ಮೋರು ಕಾಣದಾಂಗೆ
ನಾರಿ ನೀ ಮಲಗೊ ನೆಲೆಯೇಳಿ"[೨೧]

---

೨೦. ಉತ್ತರದೇವಿ ಹಾಗೂ ಇತರ ರೂಪಕಗಳು : ಅರ್ಜುನ ಗೊಳಸಂಗಿ, ಪು.೩
೨೧. ಕತ್ತಾಲದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೯೯೧

ಎಂದು ಕೇಳುತ್ತಾನೆ. ವಲ್ಲಣದೇವಿ ಅದನ್ನು ಹೇಳದೇ ನಿರಾಕರಿಸಿ ಅಸಾಧ್ಯವೆಂದು ಹೇಳುತ್ತಾಳೆ. ಬಡವರಾದ ಕಾರಣ ಶ್ರೀಮಂತರು ಹೇಗೆ ಮಾತನಾಡಿದರೂ ಏನೇ ಮಾಡಿದರೂ ಸಹಿಸಿಕೊಳ್ಳುವಂತಹ ಸ್ಥಿತಿಯಲ್ಲಿ ವಲ್ಲಣದೇವಿ ಆ ಶ್ರೀಮಂತನ ಕಾಮುಕತನಕ್ಕೆ ಬಲಿಯಾಗದೇ ಸೂಕ್ಷ್ಮವಾಗಿ ಅದನ್ನು ಅಲ್ಲಗಳೆಯುತ್ತಾಳೆ. ಆದರೆ ತವರು, ಗಂಡನ ಮನೆ, ಸಮಾಜ ಆಕೆಯ ಬಗ್ಗೆ ಅಪಾರ್ಥ ಮಾಡಿಕೊಳ್ಳುತ್ತದೆ.

ಪರಪುರುಷ ಮಾತನಾಡಿಸಿದ್ದು ವಲ್ಲಣದೇವಿಯ ಗಂಡನಿಗೆ ಸಂಶಯವುಂಟಾಗುತ್ತದೆ. ಆಗ ಆಕೆಯನ್ನು ತವರಿಗೆ ಕಳುಹಿಸುತ್ತಾನೆ. ತವರಿನವರೆಲ್ಲ ವಲ್ಲಣದೇವಿಯನ್ನು ಕುರಿತು 'ಅಪವಾದ ಬಂದ ಹೆಣ್ಣನ್ನು ನಾವು ಇಟ್ಟುಕೊಳ್ಳಲು ಒಪ್ಪುವುದಿಲ್ಲ' ಎಂದು ಹೇಳುತ್ತಾರೆ. ನಂತರ ಅಕ್ಕನ ಮನೆಗೆ ಹೋಗುತ್ತಾಳೆ. ಅವಳೂ ಕೂಡ ಇಟ್ಟುಕೊಳ್ಳಲು ಒಪ್ಪುವುದಿಲ್ಲ. ಹೀಗೆ ತವರಿನವರು, ಬಂಧು-ಬಳಗದರೆಲ್ಲರಿಂದ ತಿರಸ್ಕರಿಸಲ್ಪಟ್ಟ ವಲ್ಲಣದೇವಿ ಅಕ್ಕನ ಮನೆಯ ಮುಂದಿನ ಬೇವಿನ ಮರಕ್ಕೆ ನೇಣು ಹಾಕಿಕೊಳ್ಳುತ್ತಾಳೆ.

ವಲ್ಲಣದೇವಿಯು ಗಂಡನ ಮನೆಯಿಂದ ಹೊರ ಹಾಕಿದಾಗ ತವರಿನವರಾದರೂ ಬಂಧು-ಬಳಗದವರಾದರೂ ಆಶ್ರಯ ನೀಡಿದ್ದರೆ ಸತ್ಯದ ಅರಿವನ್ನು ಗಂಡನ ಮನೆಯವರಿಗೆ ಮನದಟ್ಟಾಗುವಂತೆ ಮಾಡಬೇಕೆಂದುಕೊಂಡಿದ್ದಳೋ ಏನೋ ತಿಳಿಯದು. ಆದರೆ ಮನೆಯವರೆಲ್ಲ ತಿರಸ್ಕರಿಸಿದ ನಂತರ ಜೀವನದ ಬಗ್ಗೆ ಜಿಗುಪ್ಸೆ ಹೊಂದಿ, ಬೇಸರವಾಗಿ ಆತ್ಮಹತ್ಯೆಗೆ ಶರಣಾಗಿರಬಹುದೆಂದು ಭಾಸವಾಗುತ್ತದೆ. ಈ ಸಮಾಜದಲ್ಲಿ ಸತ್ಯಕ್ಕೆ, ನ್ಯಾಯಕ್ಕೆ ಬೆಲೆಯಿಲ್ಲ ಎಂಬುದು ವಲ್ಲಣದೇವಿ ಕಥನಗೀತೆಯಿಂದ ತಿಳಿದು ಬರುತ್ತದೆ. ಅಷ್ಟೇ ಅಲ್ಲದೆ ವಾಸ್ತವದಲ್ಲಿಯೂ ಸಹ ಎಷ್ಟೋ ಜನರ ಜೀವನದ ಕಥೆಗಳು ಸತ್ಯದಿಂದ, ನ್ಯಾಯದಿಂದ ವಂಚಿತವಾಗಿವೆ. ನ್ಯಾಯ ಹೇಳುವ ನ್ಯಾಯಾಲಯಗಳೇ ಕಣ್ಣು ಮುಚ್ಚಿರುವಾಗ ಬಂದಂತಹ ಸ್ಥಿತಿಯನ್ನು ಅನುಭವಿಸುವುದಷ್ಟೇ ಅವರ ಕರ್ತವ್ಯವಾಗಿದೆ.

ಅಪವಾದ ಹೊತ್ತ ಹೆಣ್ಣಿಗೆ ನಿರಪರಾಧಿಯೆಂದು ಸಾಬೀತುಪಡಿಸಲು ಯಾರ ಸಹಕಾರ ವಿಲ್ಲವೆಂದಾಗ ಮಾನಸಿಕವಾಗಿ ಕುಗ್ಗುತ್ತಾಳೆ. ಒಮ್ಮೆ ಸಮಾಜದಲ್ಲಿ ಶೀಲದ ಶಂಕೆಯು ಒಡಮೂಡಿತೆಂದರೆ ಆ ಹೆಣ್ಣು ನಾಯಿಗಿಂತಲೂ ಕಡೆ ಎಂಬ ಸೂಕ್ಷ್ಮ ಭಾವನೆಯನ್ನು ಇಂಥ ಕಥನಗೀತೆಗಳಿಂದ ತಿಳಿದುಕೊಳ್ಳಲಾಗಿದೆ. ಹೆಣ್ಣು ಯಾರಿಗೂ ಬೇಡದವಳಾಗಿ ತಿರಸ್ಕೃತಳಾಗಿ ಸಮಾಜದವರೆಲ್ಲರ ಚುಚ್ಚು ಮಾತುಗಳಿಂದ ನಿಂದನೆಗೆ ಒಳಗಾಗಿರುವುದನ್ನು ಕಾಣುತ್ತೇವೆ. ಸಮಾಜ ಹೆಣ್ಣಿನ ಶೀಲಕ್ಕೆ ಎಷ್ಟೊಂದು ಮಹತ್ವವನ್ನು ಕೊಟ್ಟಿದೆ. ಪುರುಷರ ಶೀಲದ ಬಗ್ಗೆ

ಯಾರೂ ಏನೂ ವಿಚಾರಿಸದೇ ಕೇವಲ ಹೆಣ್ಣಿನ ಶೀಲದ ಬಗ್ಗೆ ಅಷ್ಟೇ ಪ್ರಶ್ನಿಸುತ್ತಾರೆ. ಆಕೆ ಏನು ತಪ್ಪು ಮಾಡದೆ ಇದ್ದರೂ ಕಳಂಕಕ್ಕೆ ಗುರಿಯಾಗುತ್ತಾಳೆ. ಅದೇ ಪುರುಷ ಎಷ್ಟೇ ಮಹಿಳೆಯರ ಮೇಲೆ ಅತ್ಯಾಚಾರವೆಸಗಿದರೂ ಆತ ಅಪರಾಧದಿಂದ ದೂರ ಉಳಿಯುತ್ತಾನೆ. ಇದು ಕೇವಲ ಅಂದಿನ ಕಥನಗೀತೆಗಳಲ್ಲಿ ಮಾತ್ರವಲ್ಲದೇ ಪ್ರಸ್ತುತ ದಿನಮಾನದಲ್ಲೂ ಕೂಡ ಇನ್ನೂ ಬೇರೂರಿರುವಂತಹ ವಾಸ್ತವ ಚಿತ್ರಣವಾಗಿದೆ. ಶೀಲವೆಂಬುದು ಹೆಣ್ಣು-ಗಂಡು ಇಬ್ಬರಿಗೂ ಇರುತ್ತದೆ. ಸಮಾಜ, ಕುಟುಂಬ ಅದನ್ನು ಬೇರೆ ಬೇರೆಯಾಗಿಯೇ ಕಂಡು ಹೆಣ್ಣಿನ ಶೀಲವನ್ನು ಅನಾವರಣಗೊಳಿಸಿ ಗಂಡಿನ ಶೀಲದ ಕುರಿತು ಗೌಣವಾಗಿಡುತ್ತದೆ.

ಸಂಗವ ಮಾಡ್ಯಾಳ ನಿಮ ತಂಗಿ :

ಜನಪದ ಸಮಾಜ ಹೆಣ್ಣಿನ ಶೀಲ, ಚಾರಿತ್ರ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿ ಮಹಿಳೆಯಾದವಳು ಜೀವನದುದ್ದಕ್ಕೂ ಅದನ್ನು ಕಾಯ್ದುಕೊಂಡು ಜನರ ಮನ್ನಣೆಗೆ ಪಾತ್ರರಾಗಬೇಕಾಗಿತ್ತು. ಈಗಲೂ ಕೂಡ ಸಾಂಪ್ರದಾಯಿಕ ನಿಲುವಿನಲ್ಲಿ ಇದನ್ನು ಕಾಣಬಹುದು. ಮಹಿಳೆಯ ಶೀಲದ ಬಗೆಗೆ ಸಮಾಜದಿಂದ, ಕುಟುಂಬದಿಂದ ಸಂದೇಹಾಸ್ಪದ ಮಾತುಗಳು ಕೇಳಿಬಂದರೆ ಅದರ ಸ್ವರೂಪ ಗಂಭೀರವಾದ ಪರಿಣಾಮವನ್ನು ತರುತ್ತಿತ್ತು. ಅಂತಹ ಒಂದು ಕ್ರೂರ ಘಟನೆಯ ಕಥೆಯನ್ನು ಈ ಕಥನಗೀತೆ ತಿಳಿಸಿಕೊಡುತ್ತದೆ.

ಗಂಡನ ಮನೆಯನ್ನು ಬಿಟ್ಟು ತವರಿಗೆ ಬಂದು ನೆಲೆಸಿದ ತಂಗಿಯ ಶೀಲದ ಬಗ್ಗೆ ಸಂದೇಹದ ಮಾತುಗಳನ್ನು ಹೆಂಡತಿಯಿಂದ ತಿಳಿದುಕೊಂಡು ತಂಗಿಯನ್ನು ಗಂಡನ ಮನೆಗೆ ಕಳಿಸಿಕೊಡುವ ನೆಪದಲ್ಲಿ ಕಾಡಿಗೆ (ಅಡವಿಗೆ) ಕರೆದುಕೊಂಡು ಹೋಗಿ, ಆಕೆಯನ್ನು ಕಡಿದು ಹಾಕಿ ಬಾವಿಗೆ ತಳ್ಳುವಂತಹ ಕ್ರೂರ ಘಟನೆಯ ಚಿತ್ರಣವು ವಾಸ್ತವಕ್ಕೆ ಹತ್ತಿರವಾಗಿದೆ.

ಈರವ್ವ ಮಲಕವ್ವ ನೀರಿಗೆ ಹೋದ ಸಂದರ್ಭದಿಂದ ಕಥನಗೀತೆ ಪ್ರಾರಂಭವಾಗಿ ಮಲಕವ್ವ ಎರಡು ಬಾರಿ ನೀರು ತಂದರೂ ಈರವ್ವ ಬರಲಿಲ್ಲವಾದ ಕಾರಣ ಈರವ್ವಳ ತಾಯಿ ಮಲಕವ್ವಳನ್ನು ವಿಚಾರಿಸುವಳು. ಆಗ ಮಲಕವ್ವ ಇಂತೆಂದಳು:

"ಅಂಗಿನವರೊಂದಾರ ಮಂದಿ ಚುಂಗಿನವರೊಂದಾರ ಮಂದಿ
ಸಿಂಗಾರದ ಬಿಲ್ಲಿನ ತೋರೋರೊಂದ್ವೈದಿ ಮಂದಿ
ಸಿಂಗಾರದ ಬಿಲ್ಲಿನ ತೋರೋರೊಂದ್ವೈದಿ ಮಂದಿ ಕೂಟ
ಸಂಗವ ಮಾಡ್ಯಾಳ ನಿನ ಮಗಳ ಈರಮ್ಮ"[೨೨]

---

೨೨. ಜನಪದ ಕಥನಗೀತೆಗಳು : ಪಿ.ಕೆ. ಖಂಡೋಬಾ, ಪು.೬೦

ಎಂದು ಈರವ್ವಳ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುತ್ತಾಳೆ. ಈರವ್ವ ತನಗೆ ಪರಿಚಿತವಿರುವವರಲ್ಲಿ ತನ್ನ ಆಸರ-ಬ್ಯಾಸರದ ವಿಷಯಗಳನ್ನು ಹಂಚಿಕೊಳ್ಳುತ್ತಿರುವ ಕಾರಣ ಆಕೆ ನೀರನ್ನು ತರುವುದು ತಡವಾಗಿರಬಹುದು. ಆದರೆ ಮಲ್ಲವ್ವ ಅಷ್ಟೇ ವಿಷಯಕ್ಕೆ ಬಣ್ಣ ಹಚ್ಚಿ ಈರವ್ವಳ ಕುಟುಂಬಕ್ಕೆ ತಿಳಿಸಿ ಪರೋಕ್ಷವಾಗಿ ಆಕೆಯ ಸಾವಿಗೆ ಕಾರಣಳಾದಳು ಎಂದು ಹೇಳಬಹುದು. 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬ ಮಾತಿಗೆ ವಿರೋಧವಾಗಿ ಹೊಲಕ್ಕೆ ಬಂದ ಈರವ್ವಳ ಅಣ್ಣನಾದ ದ್ಯಾಮಣ್ಣನಿಗೆ ಅತ್ತಿಗೆ ಈರವ್ವಳ ಬಗ್ಗೆ ಸಮಾಜ ಮಾತನಾಡಿಕೊಳ್ಳುತ್ತಿರುವ ವಿಷಯವನ್ನು ತಿಳಿಸುತ್ತಾಳೆ. ಇದನ್ನು ಕೇಳಿ ಆತ ತಾಯಿಗೆ ಬುತ್ತಿಯನ್ನು ಕಟ್ಟು ಈರವ್ವಳನ್ನು ಗಂಡನ ಮನೆಗೆ ಕಳುಹಿಸಿ ಬರುತ್ತೇನೆಂದು ಸುಳ್ಳು ಹೇಳಿ ಹೊಂಚು ಹೂಡುತ್ತಾನೆ. ತಾಯಿಯ ಕರುಳು ಎಷ್ಟೇ ಆಗಲಿ ಮಗಳನ್ನು ಕಳುಹಿಸಿಕೊಡಲು ಒಪ್ಪುವುದಿಲ್ಲ. ಕಾರಣ ಗಂಡನ ಮನೆಯಲ್ಲಿ ಮಗಳಿಗೆ ಏನಾದರೂ ಕಷ್ಟವಿರಬಹುದೆನಿಸುತ್ತದೆ. ಈರವ್ವಳ ಗಂಡನ ಮನೆಯವರು ಯಾರೂ ಕರೆಯಲು ಬಂದಿಲ್ಲ. ಆದರೂ ಆಕೆಯನ್ನು ಕಳಿಸುತ್ತೇನೆಂದು ಹೇಳುತ್ತಿದ್ದೀಯಲ್ಲ ಅಷ್ಟೊಂದು ಬ್ಯಾಸರಾದಳೇನು ನನ ಮಗಳು ಎಂದು ಮಗ ದ್ಯಾಮಣ್ಣನಿಗೆ ಕೇಳುವಳು. ಆದರೆ ಆತ ಜೋಳದ ಹೊಲದಾಗ ಮಾವ, ಹತ್ತಿಯ ಹೊಲದಾಗ ಅತ್ತೆ ಬಂದು ಕರಕೊಂಡು ಬಾ ಎಂದಿದ್ದಾರೆ ಎಂದು ಹೇಳಿ ತಂಗಿ ಈರವ್ವಳಿಗೆ ಹೊಸ ಸೀರೆ, ಕುಬಸ, ಹೂ, ಬಳಿ ಎಲ್ಲವನ್ನು ಕೊಡಿಸಿ ಉಡಿತುಂಬಿ ಬುತ್ತಿಯ ಕಟ್ಟುವ ಹೊತ್ತಿಗೆ ನಾಯಿ, ಬೆಕ್ಕು ಅಡ್ಡ ಬಂದು ಅಪಶಕುನ ಆದಾಗ, ಮಗನನ್ನು ತಾಯಿ ಎಷ್ಟೇ ತಡೆದರು ಅಣ್ಣ ಕೇಳುವುದಿಲ್ಲ. ಓಣಿಯಲ್ಲಿರುವ ಅವ್ವ, ಅಕ್ಕಂದಿರಿಗೆ ಗಂಡನ ಮನೆಗೆ ಹೋಗಿಬರುತ್ತೇನೆಂದು ಹೇಳಿ ಹೊರಟಳು. ಅಣ್ಣ-ತಂಗಿ ಇಬ್ಬರೂ ಹೊರಟರು. ಮುಂದೆ ಹೋದಂತೆ ಗಂಡನ ಮನೆ ದಾರಿ ಬಿಟ್ಟು ಅಡವಿಯ ದಾರಿಯನ್ನು ಹಿಡಿದ ದ್ಯಾಮಣ್ಣನಿಗೆ ಪ್ರಶ್ನಿಸುತ್ತಾಳೆ. ಆಗ ಆತ ಊರಿನ ದಾರಿಯಲ್ಲಿ ಹವಳೀಕಿ(ಹವಳೆ=ಕಂದು ಬಣ್ಣದ ಹಸು) ಬಹಳ ಇರುವವು. ಆದಕಾರಣ ಅಡವಿಯ ದಾರಿಯಲ್ಲಿ ಹೋಗೋಣ ತಂಗಿ ಎಂದು ಹೇಳಿ ಮುಂದೆ ಒಂದು ಬಾವಿ ಕಂಡು ಅಲ್ಲಿ ಊಟ ಮಾಡೋಣ ತಂಗ್ಯವ್ವ ಎನ್ನುತ ಬಾವಿಯಲ್ಲಿ ಇಬ್ಬರೂ ಇಳಿದು ಕೈ-ಕಾಲು ಮುಖವನ್ನು ತೊಳೆದು ಬುತ್ತಿಯನ್ನು ಮೂರು ಭಾಗ ಮಾಡಿ ನಿನಗೊಂದು ಭಾಗ, ನನಗೊಂದು ಭಾಗ, ಇನ್ನೊಂದು ಗಂಗವ್ವಗೆ ತಂಗಿ ಎಂದು ಹೇಳಿ ತಂಗಿ ಈರವ್ವ ಒಂದು ತುತ್ತ ಉಣ್ಣಲು ಬಿಟ್ಟು, ಎರಡು ತುತ್ತು ಉಣ್ಣಲು ಬಿಟ್ಟು, ಮೂರನೇ ತುತ್ತಿಗೆ ಆಕೆಯನ್ನು ಕಡಿದು ಮೂಟೆ ಕಟ್ಟಿ ಬಾವಿಗೆ ಎಸೆದನು.

ಗಂಡನ ಮನೆಯ ಆಸರೆಯಿಂದ ವಂಚಿತಳಾಗಿ ತವರಿಗೆ ಬಂದ ಈರವ್ವ ತವರಿನಿಂದ ಶೋಷಣೆಗೆ ಒಳಗಾಗುತ್ತಾಳೆ. ತವರಿನವರು ಮನೆಮಗಳಿಗೆ ಮಾಡಿದ ಮೋಸ, ಆಕೆಯನ್ನು ಕಂಡ ರೀತಿ ಕೆಳಮಟ್ಟದ್ದಾಗಿದೆ. ರಕ್ಷೆಯನ್ನು ನೀಡಬೇಕಾದ ಅಣ್ಣನೇ ತಂಗಿಯ ಪ್ರಾಣವನ್ನು ತೆಗೆಯುವುದು ಹೆಣ್ಣಿಗೆ ತವರು ಎಂದರೆ ಭಯ ಹುಟ್ಟಿಸುವ ಹಾಗೆ ನಿರೂಪಿತವಾಗಿದೆ. ಹೆಣ್ಣುಮಕ್ಕಳಿಗೆ ತಂದೆ–ತಾಯಿ ಇರುವ ತನಕ ತವರಿನ ಹಂಬಲವಿರುವುದು ಎಂಬುದು ಇದರಿಂದ ಸಾಬೀತಾಗುತ್ತದೆ. ಸಮಾಜ ಹೇಗಿದ್ದರೂ ಒಂದು ಮಾತನಾಡುತ್ತದೆ. ಅದರಲ್ಲೂ ಗಂಡನ ಮನೆ ಬಿಟ್ಟು ಬಂದು ತವರಿನಲ್ಲಿ ನೆಲೆಸಿದರೆ ಇಲ್ಲಸಲ್ಲದ ಆರೋಪಗಳು ಆಕೆಯ ಬೆನ್ನಿಗೆ ಅಂಟಿಕೊಂಡಿರುತ್ತವೆ. ಅಂತಹ ಒಂದು ದಾರುಣ ಸ್ಥಿತಿ ಈರವ್ವಳಿಗೆ ಒದಗಿ ಬಂದಿದೆ.

ಗಂಗೆ–ಗೌರಿ :

ಶಿವನ ಪತ್ನಿಯರಾದ ಇವರಲ್ಲಿ ಸವತಿ ಮಾತ್ಸರ್ಯದಿಂದಾಗಿ ಇಬ್ಬರಲ್ಲಿ ಜಗಳವಾಗಿ ದೂರವಿರುವಾಗ ಶ್ರೀಗೌರಿಗೆ ಸೂತಕವಾದಾಗ ಗಂಗೆಗೆ ಮೊರೆ ಹೋಗಿ ಪರಿತಪಿಸುತ್ತಾಳೆ. ಕೊನೆಗೆ ಶಿವನನ್ನು ನಿನಗೆ ಬಿಟ್ಟುಕೊಡುತ್ತೇನೆಂದು ಭಾಷೆ ಕೊಟ್ಟಾಗ ನೀರನ್ನು ಕೊಡುತ್ತೇನೆಂದು ಹಠ ಹಿಡಿದ ಶ್ರೀಗಂಗೆಯ ವಿರುದ್ಧ ಚಾಣಾಕ್ಷತನದಿಂದ, ಉಪಾಯದಿಂದ ನೀರನ್ನು ಪಡೆಯಲು ಹೋದರೂ ಸಾಧ್ಯವಾಗಲಿಲ್ಲ. ಬದಲಾಗಿ ಗೌರಿ ನೀರಿನಲ್ಲಿ ಮುಳುಗುತ್ತಿರುವಾಗ ಗಂಗೆಯ ಸಹಾಯವನ್ನು ಬೇಡುವಳು. ಆಗ ಜುಟ್ಟು ಹಿಡಿದು ಮೇಲಕ್ಕೆ ಎಸೆದಳು. ಮತ್ತೆ ಭಾಷೆಯನ್ನು ಕೊಡದೆ ಗೌರಮ್ಮಳು ಅರಮನೆಗೆ ಬೇಗ ಹೋಗಿ ಅಡುಗೆ ಸಿದ್ಧ ಮಾಡಿ ಶಿವನಿಗೆ ಊಟಕ್ಕೆ ನೀಡಿ, ತಾನೂ ಮಾಡಿ ಇಬ್ಬರೂ ಸೇರಿ ತಾಂಬೂಲ ಹಾಕುತ್ತಿರುವಾಗ ಶ್ರೀಗೌರಿಯು ಶಿವರಾಯನಿಗೆ ತಾನು ತವರಿಗೆ ಹೋಗಿಬರುವೆನೆಂದು ಬೇಡಿಕೆಯನ್ನು ಇಡುತ್ತಾಳೆ. ಆಗ ಶಿವನು ಶ್ರೀಗೌರಿಯ ತವರಿನ ಮನೆಯವರ ಬಡತನದ ಚಿತ್ರಣವನ್ನು ಬಿಚ್ಚಿಟ್ಟು ಏಕೆ ತವರಿಗೆ ಹೋಗಿಬರಬೇಕೆಂದು ಬಯಸುತ್ತಿರುವೆ ಎಂದು ಹೀಗೆ ಕೇಳುವನು –

"ಹನ್ನೆರಡು ವರ್ಷದಿಂದ ತೌರೂರ ಬಯಸಿಲ್ಲ
ಈವತ್ತು ಏನ ಬಯಸಿದೆ ಶ್ರೀಗೌರಿ
ನಿನ್ನ ತೌರೊಂದು ಅಂಬಲಿ ಕುಡಿಯೋರು
ಅಂಬಲಿ ಕುಡಿಯೋರು ತುಂಬಿಸೊಪ್ಪು ತಿನ್ನೋರು
ಗೋಟಡಕೆ ತರಗೆಲೆ ಮೆಲ್ಲುವರವರು
ಕಂಬಳಿಯನ್ನೇ ಅವರು ಹೊದಿಯುವರು
ಅಂತ ತವರೂರ ಏನ ಭ್ರಮಿಸಿದೆ"[೨೩]

೨೩. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೪೯

ಎಂದು ಶಿವನು ಶ್ರೀಗೌರಿಯ ತವರಿನ ಚಿತ್ರಣದ ಬಗ್ಗೆ ಹೀಯಾಳಿಸಿದಾಗ ಆಗ ಶ್ರೀಗೌರಿಯ ತವರಿನ ಬಗೆಗೆ ಕುಗ್ಗದೇ ಅಂಬಲಿ ಕುಡಿದರೂ ಸರಿ, ತುಂಬಿಸೊಪ್ಪ ತಿಂದರೂ ಸರಿ, ಕಂಬಳಿಯನ್ನು ಹೊದ್ದೇನು ಒಪ್ಪತ್ತು ತವರಲ್ಲಿ ಇದ್ದು ಬರುವೆ ಎಂದು ಹೇಳುವಲ್ಲಿ ತವರಿನವರು ಎಷ್ಟೇ ಬಡವರಾಗಿದ್ದರೂ ಕೂಡ ಅಲ್ಲಿ ಹೋಗಿ ಬರುವ ಹಾಗೂ ಅಲ್ಲಿ ಪಡೆಯುವ ಸುಖ, ಪ್ರೀತಿ, ವಾತ್ಸಲ್ಯ ಎಂತಹ ಶ್ರೇಷ್ಠವೆಂಬುದು ಕಂಡುಬರುತ್ತದೆ.

ಶ್ರೀಗೌರಿಯನ್ನು ತವರಿನವರು ಉಪಚರಿಸಿದ ಬಗೆ :

ತವರಿನವರು ಒಪ್ಪತ್ತಿನವರು, ಬಡವರಾಗಿದ್ದರೂ ಅಲ್ಲಿಗೆ ಬಂದಳು ಗೌರಿ. ಈಕೆ ಬಂದ ನಂತರ ಚಿನ್ನದ ಗಿಂಡಿಯಲ್ಲಿ ಪನ್ನೀರನ್ನು ತೆಗೆದುಕೊಂಡು ಕೊಟ್ಟರು. ಎಂದೂ ಬರದ ಗೌರಮ್ಮಳು ಬಂದುದನ್ನು ಕಂಡು ಬಹಳ ಸಡಗರದಿಂದ ಇದ್ದರು. ಕೈಕಾಲು ಮುಖ ತೊಳೆದುಕೊಂಡು ಒಳಗೆ ಬಂದಳು.

ಹನ್ನೆರಡು ವರ್ಷದಿಂದ ಬರದಿದ್ದ ಗೌರಮ್ಮಳನ್ನು ಕಂಡು ಸಂತೋಷಪಡುತ್ತಾ ಹೋಳಿಗೆ ಒಬ್ಬಟ್ಟು, ಕಡಬು, ಕಜ್ಜಾಯ ಮಾಡಿ ಹಬ್ಬದೂಟವನ್ನು ಬಡಿಸಿದರು. ಒಟ್ಟಿನಲ್ಲಿ ತವರಿನವರು ಗೌರಮ್ಮ ಬಂದು ಮೂರು ದಿವಸವಾದರೂ ಸಡಗರ ಸಂಭ್ರಮದಿಂದ ನೋಡಿಕೊಂಡರು. ಮೂರು ದಿನದ ನಂತರ ಶಿವರಾಯ ಗೌರಿಯನ್ನು ಕರೆಯಲು ಬಂದನು. ಹಟ್ಟಿಯ ಒಳಗಡೆ ನಿಂತುಕೊಂಡು ಗೌರಿಗೆ ಹೊರಡು (ಹೋಗೋಣ) ಎಂದು ಹೇಳುವನು.ಇದನ್ನು ತಿಳಿದು ತೌರಿನವರು ಅಪರೂಪಕ್ಕೆ ಗೌರಿ ಬಂದಿರುವಳೆಂದು

"ಸೀರೆಯ ರವಿಕೆ ಉಡಿಸ್ಯಾರೆ ಅವರು
ತಲೆಯನ್ನೇ ಕೆರೆದು ಹೂವನ್ನೇ ಮುಡಿಸ್ಯಾರು
ಅರಿಸಿನ ಕುಂಕುಮ ಇಟ್ಟರು ಬೇಗ
ಮಡಲಕ್ಕಿ ಅವರು ಕಟ್ಟ್ಯಾರು ಬೇಗ
ಸಾಗುಗಳಿವ್ಯಾರೆ ಗೌರಮ್ಮನನ್ನು"[೨೪]

ತವರಿಗೆ ಬಂದ ಹೆಣ್ಣುಮಕ್ಕಳಿಗೆ ಅರಿಶಿನ-ಕುಂಕುಮ, ಹೂ, ಸೀರೆ-ಕುಪ್ಪಸ ಕೊಟ್ಟು ಉಡಿತುಂಬಿ ಕಳಿಸುವ ಸಂಪ್ರದಾಯ ಇಂದಿಗೂ ನಮ್ಮಲ್ಲಿ ಇದೆ. ಹೀಗೆ ತವರಿನಿಂದ ಉಡಿ ತುಂಬಿಕೊಂಡು ಶಿವ-ಗೌರಿಯರು ಜೊತೆಯಾಗಿ ಹೋದರು. ಹೋಗುವಾಗ ಅಡವಿಯಲ್ಲಿ ಒಂದು ಆಲದ

---

೨೪. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೫೦೦

ಮರದ ಅಡಿಯಲ್ಲಿ ಕುಳಿತುಕೊಳ್ಳೋಣ; ಬೇಸಿಗೆ ಬಿಸಿಲು ಬಹಳ ಇದೆ ಇಳಿದ ಮೇಲೆ ಹೋಗೋಣ ಎಂದು ಹೇಳುವನು. ಕುಳಿತುಕೊಂಡಿರುವಾಗ ಶಿವನು ಗೌರಿಗೆ ನಿಮ್ಮಪ್ಪನವರು ಏನಡಿಗೆ ಮಾಡಿದ್ದರು ಎಂದು ಕೇಳುವನು. ಆಗ ಚೇಷ್ಟೆಗಾಗಿ ಅವರು ಬಡವರು ಅಂಬಲಿ ಕುಡಿದು ತುಂಬಿಸೊಪ್ಪು ತಿಂದು ಒಪ್ಪತ್ತವರ ಮನೆಯಲ್ಲಿದ್ದು ಬಂದೆ ಎಂದಳು. ಆಗ ಶಿವನು ನಿಜ ಹೇಳಿದರೆ ಹೇಳು ಇಲ್ಲದಿದ್ದರೆ ಹೋಗಲಿ ಎಂದಾಗ ಶ್ರೀಗೌರಿ ಹೋಳಿಗೊಬ್ಬಟ್ಟು ಕಡುಬು ಕಜ್ಜಾಯವನ್ನು ತೆಗೆದು ತೋರಿಸುವಳು. ಆಗ ಶಿವನು ನಿನ್ನ ಸತ್ಯಕ್ಕೆ ನಾನು ಮೆಚ್ಚಿದೆ ವರ್ಷಕ್ಕೊಂದು ಸಾರಿ ಹೋಗಿ ಬಾರೆ ಶ್ರೀಗೌರಿ ಎಂದು ಹೇಳುವನು. ಆಗ ಶ್ರೀಗೌರಿಯು ನಾನು ಹೋಗದೆ ಇದ್ದರೂ ಸಹ ನಾಡಿನಲ್ಲಿರುವ ಹೆಣ್ಣುಮಕ್ಕಳು ತಮ್ಮ ತವರಿಗೆ ವರ್ಷಕ್ಕೊಮ್ಮೆಯಾದರೂ ಹೋಗಿ ಬರಲಿ ಎಂದು ಶಿವನಿಂದ ವರವನ್ನು ಪಡೆದಳು. ಅಲ್ಲಿಂದ ಶಿವನು ಮುಂದಾಗಿ ಶ್ರೀಗೌರಿ ಹಿಂದಾಗಿ ಕೈಲಾಸಕ್ಕೆ ಹೋದರು. ಮುಂದೆ ಶಿವರಾಯ ಇಲಿಯಾಗಿ ಬಂದು ಶ್ರೀಗೌರಿಯ ಸತ್ಯವನ್ನು ಪರೀಕ್ಷಿಸುತ್ತಾನೆ.

ಪಾಪವೆಂಬುದು ಅರಿಯೇ ನಾನು, ಪುಣ್ಯವೆಂಬೋದನ್ನು ಅರಿಯೇ ನಾನು, ಶೂಲಕಾಕ್ಯವರೆ ಹೆಣಗಳ ಈವತ್ತಿಗೆ ಮೂರು ದಿನಕೆ ನಾನು ಬರುತ್ತೇನೆಂದು ಗೌರಿಗೆ ಹೇಳಿ ಶಿವರಾಯ ಇಲಿಯಾಗಿ ಬಂದನು. ಇಲಿಯಾಗಿ ಬಂದು ಸ್ಯಾಲೆಯ ಸೀರೆಯ ನುಚ್ಚು ನುಚ್ಚು ಮಾಡುವನು. ಮಾಡಿ ಚಿಪ್ಪಲಿಗನಾಗಿ ಹೊರಟನು. ಗೌರಮ್ಮ ವೇಗದಿಂದ ಅರಮನೆಗೆ ಹೋಗಿ ಪೆಟ್ಟಿಗೆಯನ್ನು ಇಳಿಸಿ ಸ್ಯಾಲೆ ಸೀರೆಯನ್ನು ಕೈಲಿಡಿದು ಎದೆ ಎದೆ ಬಡಿದುಕೊಂಡು ಅಳುತ್ತಾಳೆ. ಹಾಳಾದ ಇಲಿಗಳು ಕಡಿದಿವೆ. ಶಿವರಾಯ ಬಂದ ನಂತರ ಏನು ಹೇಳುವುದೆಂದು ಹಣೆ ಹಣೆ ಬಡಿದುಕೊಳ್ಳುತ್ತಾ ಅಳುತ್ತಾಳೆ.

ಸಿಂಪಿಗನಾಗಿ ಹಾರುವರ ಕೇರಿಯಲ್ಲಿ ಮಕ್ಕಳಂಗಿಯನ್ನು ಹೊಲಸೀರ, ಒಕ್ಕಲಿಗರ ಕೇರಿಗೆ ಬಂದು ಮಕ್ಕಳ ಕುವ್ವಾಲಿ ಹೊಲಸೀರ ಎಂದು ಸಾರುತ್ತಿರುವಾಗ ಒಂದು ಕಡೆಯಿಂದ ದಾದಿಯರು ಇನ್ನೊಂದೆಡೆಯಿಂದ ಚಿಪ್ಪಿಗ ಬಂದು ಎದುರಾಗುತ್ತಾರೆ. ನೀರಿಗೆ ಬಂದ ದಾದಿಯರು ಈತನನ್ನು ನೋಡಿ ಚಿಪ್ಪಲಿಗ ಅರಮನೆಗೆ ಬಾರಯ್ಯ ಎಂದು ಕರೆದರು. ಆಗ ಚಿಪ್ಪಿಗ ವೇಷದ ಶಿವನು ನನ್ನ ಕರೆದವರ ಹೆಸರೇನು ಹೇಳಿರಿ ಎನ್ನುತ್ತಾ ಚಿಪ್ಪಿಗ ಬಂದನು. ಗೌರಮ್ಮ ಆಗ ಸೀರೆಯನ್ನು ಕೊಟ್ಟು ಹೊಲಿ ಎನ್ನುವಳು. ಚಿಪ್ಪಿಗನು ಸೀರೆಯನ್ನು ನಾನು ಗಟ್ಟಿಸಿ ಗಳಿಗಾಕಿದರೆ ನನಗೇನು ಕೊಡುವೆ ಎಂದು ಕೇಳುವನು. ಆಗ ಶ್ರೀಗೌರಿಯು ನೀನು ಕೇಳಿದ್ದನ್ನು ನಾನು ಕೊಡುವೆ ಎಂದು ವಚನವಿತ್ತಳು. ಆಗ ಶಿವನು ಸೀರೆಯನ್ನು ಗಟ್ಟಿಸಿ ಗಳಿಗಾಕಿಸಿ ಹಾಕಿ

ನನ್ನ ಕೂಲಿ ನನಗೆ ಕೊಡುಬಾರೆ ಎಂದನು. ಆಗ ಶ್ರೀಗೌರಿಯು 'ಅನ್ನದ ಮುತ್ತಲಾಗೆ ರನ್ನವ ತುಂಬಿಕೊಂಡು ಕೊಳ್ಳಯ್ಯ ನೀನು ಚಿಪ್ಪಿಗ' ಎಂದಾಗ ಅದಕ್ಕೆ ಶಿವನು ಮುತ್ತು ರತ್ನವನ್ನು ಹೇರಿಕೊಂಡು ಹೋಗಲು ಎತ್ತನ್ನು ಹೊಡೆತರಲಿಲ್ಲ ಶ್ರೀಗೌರಿ ಎನ್ನುವನು. ಆಗ ಮತ್ತೆ ಗೌರಿಯು 'ರನ್ನದ ಮುತ್ತುಲಾಗೆ ಚಿನ್ನವ ತುಂಬಿಕೊಂಡು ಕೊಳ್ಳಯ್ಯ ನೀನು ಚಿಪ್ಪಿಗ' ಎಂದು ನುಡಿದಾಗ ಚಿಪ್ಪಿಗನು ಹೊನ್ನು ಚಿನ್ನವನ್ನು ಹೇರಿಕೊಂಡು ಹೋಗೋಕೆ ಜೋಗಿ ಜಂಗಮನಲ್ಲ ಕಾಣೆ ಶ್ರೀಗೌರಿ, ನಾನು ಕೇಳಿದ್ದು ಕೊಡುಬಾರೆ ಎನ್ನುವನು. ಆಗ ಶ್ರೀಗೌರಿಯು ಕಣ್ಣಲ್ಲಿ ನೀರು ಸುರಿಸುತ್ತಿರುವಾಗ ಗೋಳಾಡಿಕೊಂಡ ನೀನೇಕೆ ಅಳುತ್ತಿರುವೆ ನಿನ್ನ ನೆರೆಯ ಗರತಿಯರನ್ನು ಕರೆಯಲೇ ಎಂದಾಗ ಶ್ರೀಗೌರಿಯು ಈ ಹಾಳು ಚಿಪ್ಪಿಗ ಕೇರಿಗೇಕೆ ಬಂದ ಎಂದು ಗೋಳಾಡಿ ಮತ್ತೆ ಅಳುವಳು. ಚಿಪ್ಪಿಗ ವೇಷದ ಶಿವನಿಗೆ ಗೌರಿಯು ನಮ್ಮ ಶಿವರಾಯನು ಹೋಗಿ ಇವತ್ತಿಗೆ ಮೂರು ದಿವಸ ಆಗಿದ್ದಾವೆ. ಇವತ್ತು ಬರುವರು, ಅವರು ಬಂದರೆ ನಿನ್ನನ್ನು ಸುಮ್ಮನೆ ಬಿಡಲಾರರು ಎಂದು ಎಚ್ಚರಿಕೆಯ ಮಾತುಗಳನ್ನಾಡುತ್ತಾಳೆ. ಜೊತೆಗೆ ಹಾಳಾದ ಚಿಪ್ಪಿಗ ನಮ್ಮ ಕೇರಿಗೆ ಯಾಕೆ ಬಂದನೋ ಏನೋ ಹಾಲಿನಂತಿರುವ ನಮ್ಮ ಕುಲವನ್ನು ಕೆಡಿಸುವುದಕ್ಕೆ ಬಂದನೋ ಎನ್ನುತ್ತಾ ಅಳುತ್ತಾಳೆ.

ಮತ್ತೆ ಚಿಪ್ಪಿಗ ವೇಷದ ಶಿವನು ಗೌರಮ್ಮಳಿಗೆ ಕೂಲಿಯನ್ನು ನೀನು ಕೊಡು, ಕೇಳಿದ್ದನ್ನು ನನಗೆ ನೀನು ಕೊಡುಬಾರೆ ಎನ್ನುತ್ತಾ ನೀರನ್ನು ಕಾಸು, ಅಡುಗೆಯನ್ನು ಮಾಡಿ ಊಟಕ್ಕೆ ಬಡಸೆಂದನು. ಮತ್ತೆ ನನ್ನ ಗಂಡ ಶಿವನು ಬರುವನು ಎಂದು ಎಚ್ಚರಿಕೆ ನೀಡುತ್ತಾ ಗೋಳಾಡಿ ಅಳುತ್ತಾ ನೀರು ಕಾಸಿ ಅಡುಗೆ ಮಾಡಿ ಅಗ್ರದ ಎಲೆಯಲ್ಲಿ ಊಟಕ್ಕೆ ಬಡಿಸಿದಳು.

ಇಷ್ಟೆಲ್ಲಾ ಮಾಡಿ ಊಟಕ್ಕೆ ಕರೆದರೂ ಚಿಪ್ಪಿಗ ಬಾಳೆಯ ಎಲೆಯಲ್ಲಿ ಊಟ ಮಾಡಲು ನಾನು ಜೋಗಿ ಜಂಗಮನಲ್ಲ. ಆದ ಕಾರಣ ನಿನ್ನ ಗಂಡ ಊಟ ಮಾಡುವ ಹರಿವಾಣವನ್ನು ಬೆಳಗಿ ತೆಗೆದುಕೊಂಡು ಬಾ ಎನ್ನುವನು. ಆಗ ಗೌರಿ ಮತ್ತೆ ರೋಧಿಸುತ್ತಾ ಹಾಳಾದ ಚಿಪ್ಪಿಗ ನಮ್ಮ ಕೇರಿಗೆ ಏಕೆ ಬಂದನೆನ್ನುತ್ತ ಹರಿವಾಣವನ್ನು ಬೆಳಗಿ ಊಟಕ್ಕೆ ನೀಡುವಳು. ಊಟವಾದ ನಂತರ ಶ್ರೀಗೌರಿಗೆ ಮಂಚವನ್ನು ಗುಡಿಸಿ ಹಾಸೆಂದನು. ಮತ್ತೆ ತನ್ನ ಗಂಡ ಶಿವನು ಬರುವನೆಂದು ಎಚ್ಚರಿಕೆ ನೀಡುತ್ತಾ ನಿನ್ನನ್ನು ಬಿಡುವುದಿಲ್ಲವೆನ್ನುತ್ತಾ ಮಂಚವನ್ನು ಗುಡಿಸಿ ಹಾಸಿದಳು. ನಂತರ ಎಲೆ ಅಡಿಕೆ (ವೀಳ್ಯವನ್ನು) ಇಡು ಎಂದನು. ಮತ್ತೆ ಅಳುತ್ತಾ ಕಳಿಯಡಿಕೆ,(ಕಳಿಯಡಕೆ=ಬೇಯಿಸಿದ ಎಳಸಾದ ಅಡಕೆ) ಬಿಳಿ ಎಲೆ, ಜಾಕಾಯಿ, ಜಾಪತ್ರೆ ಸೋಸಿರುವಂತಹ ಕೆನೆಸುಣ್ಣವನ್ನು ತಟ್ಟೆಯಲ್ಲಿ ತಂದು ಇಡುವಳು. ಇಟ್ಟ ನಂತರ ಗೌರಿಗೆ

ಊಟ ಮಾಡು ನೀನು ಎನ್ನುವನು. ತುಪ್ಪದಂತಹ ನಮ್ಮ ಕುಲವನ್ನು ಕೆಡಿಸುವುದರಲ್ಲಿ ಹಾಳಾದ ಚಿಪ್ಪಿಗ ಯಾಕೆ ಬಂದೆ ನೀನು ನಮ್ಮ ಕೇರಿಗೆ ಎನ್ನುತ್ತಾ ಊಟವನ್ನು ಮಾಡಿದಳು. ಊಟ ಮಾಡಿದ ನಂತರ ಮಂಚಕ್ಕೆ ಬಾ ಎಂದು ಕೇಳುವನು. ಆಗ ಶ್ರೀಗೌರಿಯು ರೋಧಿಸುತ್ತಾ ಹಣೆಗೆ ಕುಂಕುಮವಿಲ್ಲದೆ ಅರಿಶಿಣವಿಲ್ಲದೇ ಮಂಚದ ಮೇಲೆ ಕುಳಿತುಕೊಳ್ಳುವಳು.

ಆಗ ಚಿಪ್ಪಿಗನು 'ಕುಂಕುಮ ಇಡು, ಅರಿಸಿಣ ಧರಿಸು ಎಂದ್ಹೇಳಿ, ನೀನು ನನ್ನ ಎದುರಿಗೆ ಅಳಬೇಡ' ಎಂದಾಗ ಒಂದು ಕಣ್ಣಲ್ಲಿ ನೀರು ಸುರಿಸುತ್ತ, ಒಂದು ಕಣ್ಣಲ್ಲಿ ನೀರನ್ನು ಒರಸುತ್ತ ಕುಂಕುಮ-ಅರಿಸಿಣವನ್ನು ಧರಿಸುತ್ತ ಗೋಳಾಡಿಕೊಂಡು ಅಳುತ್ತಾಳೆ. ತದನಂತರ ಕಿವಿಗೆ ವಾಲೆಯನ್ನು ಧರಿಸೆಂದನು. ಧರಿಸಿ ಮಂಚಕ್ಕೆ ನೀನು ಬಾರೆ ಹೆಣ್ಣೆ ಎನ್ನುವನು. ಇಂತಹ ಮಾತನ್ನು ಕೇಳಿ ಗೋಳಾಡುತ್ತಾ ಭೂಲೋಕಕ್ಕೆ ಇಳಿದಳು. ಅರ್ಥಾತ್ ಆಕೆಗೆ ಸಿಡಿಲು ಬಡಿಯುವಷ್ಟು, ಭೂಮಿಗೆ ಇಳಿಯುವಷ್ಟು ದುಃಖ, ರೋಧನೆ ವುಂಟಾಗುತ್ತದೆ. ಹಾಳಾದ ಚಿಪ್ಪಿಗ ನೀ ಯಾಕೆ ಬಂದ್ಯಯ್ಯ ನನ್ನ ಕುಲವನ್ನು ಕೆಡಿಸೋಕೆ ಎನ್ನುತ್ತಿರುವಾಗ ಚಿಪ್ಪಿಗ ವೇಷದ ಶಿವರಾಯನು ಜಡೆಯನ್ನು ಒಂದೊಂದೇ ಬಿಡುತ್ತಾನೆ. ಭೂಮಿಗೆ ಇಳಿದ ಶ್ರೀಗೌರಿಯನ್ನು ಹಿಡಿದು ಎತ್ತಿ, ಶ್ರೀಗೌರಿಯ ಸತ್ಯಕ್ಕೆ ಮೆಚ್ಚಿ ವರ್ಷಕ್ಕೆ ಒಂದು ಸಾರಿ ತವರಿಗೆ ಹೋಗಿ ಬಾ ಎಂದು ಅಪ್ಪಣೆ ನೀಡುವನು. ಇಲ್ಲಿ ಶ್ರೀಗೌರಿಯನ್ನು ಪರೀಕ್ಷಿಸುವುದು ಅತಿರೇಕ ಎನಿಸಿದರೆ, ಮತ್ತೊಂದೆಡೆ ಗೌರಿಯಲ್ಲಿರುವ ಸತ್ಯ ಪ್ರತಿಪಾದನೆಯ ಮೌಲ್ಯವನ್ನು ವೈಭವೀಕರಿಸಲಾಗಿದೆ.

೩.೩. ಮದುವೆಯ ಚಿತ್ರಣ :

ಜನಪದ ಸಂಸ್ಕೃತಿಯಲ್ಲಿ ಮದುವೆ ಸಮಾರಂಭ ದಿನಗಟ್ಟಲೆ, ವಾರಗಟ್ಟಲೆ, ತಿಂಗಳಗಟ್ಟಲೇ ನಡೆಯುತ್ತಿದ್ದವು. ಹಬ್ಬದ ವಾತಾವರಣದ ಹಾಗೆ ನಡೆಯುತ್ತಿದ್ದವು. ಈ ಕಥನಗೀತೆಗಳಲ್ಲಿಯೂ ಕೂಡ ಮದುವೆ ವಿಜೃಂಭಣೆಯಿಂದಲೇ ನಡೆಯುತ್ತಿದ್ದವು. ಆದರೆ ಹೆಣ್ಣು-ಗಂಡುಗಳ ಒಪ್ಪಿಗೆಯನ್ನು ಕೇಳದೇ ಮದುವೆ ನಡೆಸುತ್ತಿದ್ದದ್ದು ಒಂದು ನೆಲೆಯಾದರೆ ಒಪ್ಪಿ ಮದುವೆಯಾಗುವ ಸಂಭ್ರಮವನ್ನು ಪೌರಾಣಿಕ ಕಥನಗೀತೆಗಳಲ್ಲಿ ಕಾಣುತ್ತೇವೆ. ಮದುವೆಯ ಅರ್ಥವನ್ನು ಅರಿಯದ ವಯಸ್ಸಿನಲ್ಲಿ ಮದುವೆ ಮಾಡುತ್ತಿರುವಾಗ ಇನ್ನು ಅವರ ಒಪ್ಪಿಗೆಯಂತೂ ಬಹಳ ದೂರದ ಆಲೋಚನೆಯೇ. ಸಮಾಜದವರ, ಕುಟುಂಬದವರ ಒಪ್ಪಿಗೆ ಇದ್ದರೆ ಸಾಕು ಮದುವೆ ಮಾಡಿಬಿಡುವಂತಹ ಚಿತ್ರಣವನ್ನು ಕಾಣುತ್ತೇವೆ. ಜೊತೆಗೆ ಅಂತಹ ಮದುವೆಯಿಂದ ಮಹಿಳೆಯರ ಮೇಲಾದ ಪರಿಣಾಮಗಳು ಘೋರವಾಗಿವೆ.

ಮನುಷ್ಯ ಜೀವನದ ಮುಖ್ಯ ಪುರುಷಾರ್ಥಗಳಾಗಿ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಧರ್ಮವೆಂಬ ಚೌಕಟ್ಟಿನಲ್ಲಿ ಅರ್ಥವೆಂಬ ವ್ಯವಸ್ಥೆಯನ್ನಿಟ್ಟು ಕಾಮವೆಂಬ ಪುರುಷಾರ್ಥವನ್ನು ನಾಶಗೊಳಿಸಿ ನಿಧಾನವಾಗಿ ಮೋಕ್ಷವೆಂಬ ಪುರುಷಾರ್ಥದ ಕಡೆಗೆ ಹೋಗಲು ವಿವಾಹವೆಂಬ ಸಂಸ್ಕಾರ ಸಮಾಜದಲ್ಲಿ ಜಾರಿಯಲ್ಲಿದೆ. ಈ ವಿವಾಹ ಎನ್ನುವುದು ವಿಶಾಲ ಅರ್ಥವನ್ನು ಹೊಂದಿದ್ದು, ಹಿಂದೂ ವಿವಾಹ ಪದ್ಧತಿಯಲ್ಲಿ ಸಪ್ತಪದಿ ಇಡುವುದರೊಂದಿಗೆ ಮದುವೆ ಎಂಬ ಬಂಧನವನ್ನು ಬೆಸೆಯಲಾಗುತ್ತದೆ. ಆದ್ದರಿಂದ ಸಪ್ತಪದಿಗೆ ಅತ್ಯಂತ ಮಹತ್ವಪೂರ್ಣ ಸ್ಥಾನವನ್ನು ನೀಡಲಾಗುತ್ತದೆ. ಸಪ್ತಪದಿ ಎಂದರೆ ಮದುವೆಯಾಗುವ ವಧು-ವರರು ಸದಾಕಾಲ ಇಬ್ಬರೂ ಜೊತೆಯಾಗಿ ಬಾಳುತ್ತೇವೆಂದು ಹೇಳುತ್ತಾ ಅಗ್ನಿಕುಂಡದ ಸುತ್ತ ಏಳು ಬಾರಿ ಸುತ್ತು ಬರುವ ಶಾಸ್ತ್ರವಾಗಿದೆ.

ಸಾಮಾನ್ಯವಾಗಿ ಮದುವೆ ಎಂದರೆ ಇಬ್ಬರು ಸೂಕ್ತ, ಸಮರಸದ ವ್ಯಕ್ತಿಗಳನ್ನು ಒಟ್ಟಿಗೆ ತರುವ ಪ್ರಕ್ರಿಯೆಯಾಗಿದೆ ಮತ್ತು ಭಾವನಾತ್ಮಕವಾಗಿ ಒಂದುಗೂಡುವಿಕೆ, ಅನ್ಯೋನ್ಯತೆ ಮತ್ತು ಪತಿ-ಪತ್ನಿಯರ ನಡುವಿನ ಪ್ರೀತಿಯ ಸಂಬಂಧವಾಗಿದೆ. ಇದಲ್ಲದೇ ಗೃಹಸ್ಥಾಶ್ರಮ ಜೀವನದ ಎರಡನೇ ಹಂತ ಪ್ರವೇಶಿಸಲು ಪವಿತ್ರ ಸಂಸ್ಕಾರ ಮತ್ತು ಧರ್ಮದ ಭಾಗವಾಗಿದೆ. ಅಷ್ಟೇ ಅಲ್ಲ ಮಹಿಳೆಯರಿಗೆ ಮದುವೆ ಮೂಲಕ ಗಂಡಿನೊಂದಿಗೆ ಸಂಬಂಧವನ್ನು ನಿರ್ಬಂಧಿಸಿ ನಿಯಮಗಳನ್ನು ಹಾಕಿ ಸಂಕುಚಿತ ಗೊಳಿಸುವುದಾಗಿದೆ. ಸ್ತ್ರೀವಾದದ ಚಿಂತನೆಯಲ್ಲಿ ಅವಲೋಕಿಸುವುದಾದರೆ ವಿವಾಹವೆಂದರೆ ಹೆಣ್ಣಿನ ಲೈಂಗಿಕತೆಯನ್ನು ಪ್ರತಿಬಂಧಿಸುವ ಬಹುಮುಖ್ಯ ಸಾಮಾಜಿಕ ಸಂಸ್ಥೆ ಎನ್ನಲಾಗಿದೆ.

ಮದುವೆಯನ್ನು ಕುರಿತು ಸಮಾಜದಲ್ಲಿ ನಾನಾರ್ಥಗಳಿವೆ. ಕೆಲವರು ಲೈಂಗಿಕ ಸಂಬಂಧವೆಂದರೆ, ಕೆಲವರು ಹೊಂದಾಣಿಕೆ ಎನ್ನುತ್ತಾರೆ. ಇನ್ನೂ ಕೆಲವರು ಶಾಶ್ವತವಾಗಿ ಸ್ತ್ರೀ ಪುರುಷರ ಅಧೀನದಲ್ಲಿ ಅಂಜಿ ಬದುಕಬೇಕು ಎಂದುಕೊಳ್ಳುತ್ತಾರೆ. ಸಮಾಜದ ಜನತೆ ತಮ್ಮ ಬುದ್ಧಿ ಸಾಮರ್ಥ್ಯಕ್ಕೆ ತಕ್ಕಂತೆ ಅದರ ಅರ್ಥವನ್ನು ಮಿತಿಗೊಳಿಸಿದ್ದಾರೆ. ಹಾಗಾದರೆ ಮದುವೆ ಅರ್ಥ, ದಾಂಪತ್ಯದ ಸ್ವರೂಪ ಮತ್ತು ಮಹತ್ವವನ್ನು ಅರಿತುಕೊಂಡಾಗ ಮಾತ್ರ ಬದುಕಿನ ಪಯಣ ಬೃಂದಾವನದ ತಾಣವಾಗಲು ಸಾಧ್ಯವಾಗುತ್ತದೆ. ಪ್ರಾಚೀನ ಕಾಲದಿಂದಲೂ ಮದುವೆಯು ವಿಭಿನ್ನ ರೀತಿಯಲ್ಲಿ, ಆಚರಣೆಗಳ ಅಡಿಯಲ್ಲಿ ನೆರವೇರುತ್ತ ಬಂದಿದೆ. ಕೆಲವೊಂದು ವಿವಾಹ ಪದ್ಧತಿಗಳ ಮೂಲಕ ಅವುಗಳ ಸ್ವರೂಪ ತಿಳಿಯಲಾಗಿದೆ.

ವಿವಾಹ ಪದ್ಧತಿಗಳು :

೧. **ಬ್ರಹ್ಮ ವಿವಾಹ** : ತಂದೆ ವಿದ್ಯಾವಂತ ಮನುಷ್ಯನನ್ನು ಕಂಡು ಅಲ್ಲಿ ತನ್ನ ಮಗಳನ್ನು ಮದುವೆಗೆ ಪ್ರಸ್ತಾಪಿಸುತ್ತಾನೆ. ಧಾರ್ಮಿಕವಾಗಿ ಅತ್ಯಂತ ಸೂಕ್ತವಾಗಿ ಮದುವೆ. ವರ ಮತ್ತು ವಧು, ಕುಟುಂಬಗಳು ಸ್ವ ಇಚ್ಛೆಯಿಂದ ಪ್ರಸ್ತಾವಗಳನ್ನು ಘಟಿಸುತ್ತದೆ. ಎರಡು ಕುಟುಂಬಗಳ ಸಂಬಂಧಿಗಳು ಸೇರಿ ವೈದಿಕವಾಗಿ ಮದುವೆ ಸಮಾರಂಭವನ್ನು ನಡೆಸುವರು. ಇದುವೇ ಬ್ರಹ್ಮ ವಿವಾಹ ಪದ್ಧತಿಯಾಗಿದೆ.

೨. **ದೈವ ವಿವಾಹ** : ಈ ರೀತಿಯ ಮದುವೆಯಲ್ಲಿ ತಂದೆ ಪಾದ್ರಿಗೆ ಆಭರಣಗಳ ಜೊತೆಗೆ ತನ್ನ ಮಗಳನ್ನು ಧಾರೆ ಎರೆದು ಕೊಡುತ್ತಾನೆ. ಈ ರೂಪದ ಮದುವೆಗಳು ಪ್ರಾಚೀನ ಕಾಲದಲ್ಲಿ ಯಜ್ಞ ಯಾಗದ ಸಂದರ್ಭದಲ್ಲಿ ಸಂಭ್ರಮಿಸುತ್ತಿದ್ದವು.

೩. **ರಾಕ್ಷಸ ವಿವಾಹ** : ಗಂಡು ಒಪ್ಪಿಕೊಂಡು ಹೆಣ್ಣಿನ ಒಪ್ಪಿಗೆಯನ್ನು ಪಡೆಯದೇ ಬಲವಂತವಾಗಿ ಆಗುವ ಅಥವಾ ಮಾಡುವ ವಿವಾಹ. ಕೆಲವೊಮ್ಮೆ ಬಲತ್ಕಾರವನ್ನು ಮಾಡಿಯಾದರೂ ಮದುವೆ ಮಾಡಿಕೊಳ್ಳುವಂತಹುದು.

೪. **ಆರ್ಶ ವಿವಾಹ** : ಈ ರೀತಿಯ ಮದುವೆಯಲ್ಲಿ ವರನು ಒಂದು ಹಸು ಮತ್ತು ಎಮ್ಮೆಯನ್ನು ವಧುವಿನ ತಂದೆಗೆ ನೀಡುತ್ತಾನೆ. ಆಗ ತಂದೆ ತನ್ನ ಮಗಳನ್ನು ಮದುವೆಗಾಗಿ ವಿನಿಮಯ ಮಾಡುತ್ತಾನೆ. ವರ ಮತ್ತು ವಧು ಕುಟುಂಬ ಜೀವನದ ತಮ್ಮ ಜವಾಬ್ದಾರಿಗಳನ್ನು ಪೂರೈಸುವ ಶಪಥ ಮಾಡಬೇಕಾಗುತ್ತದೆ.

೫. **ಪ್ರಜಾಪತ್ಯ ವಿವಾಹ** : ಈ ರೀತಿಯ ಮದುವೆಯಲ್ಲಿ ಕೆಲವು ಸಂಸ್ಕೃತ ಮಂತ್ರಗಳ (ಪರಸ್ಪರ ಪ್ರತಿಜ್ಞೆ) ವಿನಿಮಯ ಮೂಲಕ ವಧು-ವರರು ಮದುವೆಯಾಗಲು ಒಪ್ಪುತ್ತಾರೆ. ಮದುವೆಯ ಆ ರೂಪ ಸಂಪ್ರದಾಯಬದ್ಧ ಸಮಾರಂಭದಲ್ಲಿ ನಡೆಯುತ್ತದೆ.

೬. **ಗಾಂಧರ್ವ ವಿವಾಹ** : ಹೆಣ್ಣು-ಗಂಡು ಪರಸ್ಪರ ಒಪ್ಪಿಕೊಂಡು ಪ್ರಕೃತಿಯ ಸಾಕ್ಷಿಯಾಗಿ, ಮನಃಸಾಕ್ಷಿಗೆ ಅನುಗುಣವಾಗಿ ಆಗುವ ಮದುವೆ.[೨೫]

ಹೀಗೆ ಇನ್ನೂ ಹಲವಾರು ರೀತಿಗಳಲ್ಲಿ ಮದುವೆ ನಡೆಯುತ್ತಿದ್ದವು ಎಂಬುದಕ್ಕೆ ಮೇಲಿನ ವಿವಾಹ ಪದ್ಧತಿಗಳು ಸಾಕ್ಷಿಯಾಗಿವೆ. ನಮ್ಮ ಸಮಾಜದಲ್ಲಿ ಇಂದಿಗೂ ಕೂಡ ಬಹುಪಾಲು ಈ ಮದುವೆ ಪದ್ಧತಿಗಳು ಉಳಿದುಕೊಂಡು ಬಂದಿವೆ. ಆದರೆ ಈಗ ಕೆಲವೊಂದು

---

೨೫. http://kn.m.-wikipedia.org>wihi>

ವಿವಾಹ ಪದ್ಧತಿಗಳು ಅಪರಾಧವೆಂಬಂತೆ ಕಂಡು ಸಮಾಜ ಮನ್ನಣೆ ದೊರಕುತ್ತಿಲ್ಲ. ಆದ ಕಾರಣ ಸಮಾಜದಲ್ಲಿ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಕಲಹಗಳು ಏರ್ಪಡುತ್ತವೆ.

ಪ್ರಸ್ತುತ ದಿನಮಾನದಲ್ಲಿ ಬ್ರಹ್ಮವಿವಾಹ, ಪ್ರಜಾಪತ್ಯ ವಿವಾಹಕ್ಕೆ ಸಮಾಜದಲ್ಲಿ ಹೆಚ್ಚಿನ ಮನ್ನಣೆಯಿದೆ. ಗಾಂಧರ್ವ ವಿವಾಹಗಳು ಜರುಗುತ್ತವೆ. ಆದರೆ ಕುಟುಂಬದಿಂದ, ಸಮಾಜದಿಂದ ಗೌರವ ದೊರಕುತ್ತಿಲ್ಲ. ಅಂದು ಇಡೀ ಸಮಾಜವೇ ಮೆಚ್ಚಿ ಗಾಂಧರ್ವ ವಿವಾಹವನ್ನು ವಿಜೃಂಭಣೆಯಿಂದ ನಡೆಸುತ್ತಿದ್ದರು. ಇಂದು ಮನಃಸಾಕ್ಷಿಯಾಗಿ ಪ್ರಕೃತಿಯ ಸಾಕ್ಷಿಯಾಗಿ ಮದುವೆಯಾದ ಗಂಡು-ಹೆಣ್ಣುಗಳು ಕುಟುಂಬದ ಕೋಪಕ್ಕೆ ತುತ್ತಾಗಿ ಸಂಬಂಧಗಳಿಂದ ದೂರವಿದ್ದು, ಸಮಾಜಕ್ಕೆ ಹೆದರಿ ಬಾಳು ಮಾಡಬೇಕಾದ ಪರಿಸ್ಥಿತಿ ಒದಗಿದೆ. ಇಂತಹ ವಿವಾಹ ಪದ್ಧತಿಗಳಿಂದ ಕೊಲೆ, ಸುಲಿಗೆ, ದ್ವೇಷ, ಅಸೂಯೆಗಳು ಹೆಚ್ಚಿ ಮನುಷ್ಯನನ್ನು ಅಧಃಪತನಕ್ಕೆ ತಳ್ಳುತ್ತಿವೆ.

ಕಥನಗೀತೆಗಳಲ್ಲಿ ಬಹುಪಾಲು ಮದುವೆಗಳು ರಾಕ್ಷಸ ವಿವಾಹಗಳ ಸ್ವರೂಪದಲ್ಲಿ ಕಂಡುಬರುತ್ತವೆ. ಒಪ್ಪಿಗೆ ಕೇಳದೆ ವಿವಾಹ ಜರುಗಿದರೂ ಅವರಲ್ಲಿ ದಾಂಪತ್ಯ ನಿಷ್ಠೆಯಿಂದ ಸುಖಮಯವಾಗಿರುತ್ತಿತ್ತು. ಕೆಲವೊಂದರಲ್ಲಿ ಮಾತ್ರ ಕಲಹಗಳಿಂದ ಕೂಡಿ ದುರಂತಕ್ಕೆ ಈಡಾಗುತ್ತಿದ್ದವು.

ಕುಮಾರ ರಾಮನ ಕಥನಗೀತೆಯಲ್ಲಿ ಮದುವೆ ಚಿತ್ರಣ :

ಕುಮಾರ ರಾಮನ ಕಥನಗೀತೆಯಲ್ಲಿ ರಾಮನಿಗೆ ನಿಶ್ಚಯಿಸಲಾಗಿದ್ದ ರತ್ನಾಕ್ಷಿಯನ್ನು ಆತನ ತಂದೆಯಾದ ಕಂಪಿಲರಾಯ ಮೋಸದಿಂದ ಮದುವೆಯಾಗುವುದನ್ನು ಕಾಣುತ್ತೇವೆ. ಒಮ್ಮೆ ಅವಕಾಶ ಸಿಕ್ಕಾಗ ರಾಮನಿಗೆ ತನ್ನ ಮನಸ್ಸಿನ ಭಾವನೆಗಳನ್ನು ಹೇಳಿಕೊಳ್ಳುವಳು. ಇದು ಇವಳನ್ನು ವ್ಯಭಿಚಾರಿ, ಜಾರಿಣಿ ಮುಂತಾದ ವಿಶೇಷಣಗಳಿಂದ ಸಮಾಜ ಗುರುತಿಸುತ್ತದೆ. ಆದರೆ ಹಾಗೆ ಕಳಂಕಿತಳಾಗಿ ಗುರುತಿಸುವುದು ಸೂಕ್ತವಲ್ಲ. ಏಕೆಂದರೆ ಬಲವಂತದ ಮದುವೆಯಿಂದ ತನ್ನಲ್ಲಿರುವ ಆಸೆ-ಆಕಾಂಕ್ಷೆಗಳನ್ನು ಮನಸ್ಸಿನಲ್ಲಿಯೇ ಅದುಮಿಟ್ಟುಕೊಂಡು ಸಮಾಜ ವಿರೋಧಿ ನಿಲುವುಗಳನ್ನು ತೋರಿಸಿದ್ದಾಳೆ.

ಮದುವೆ ಎಂಬುದು ಸ್ತ್ರೀ ಪುರುಷರ ಮಧ್ಯದ ಶಾಶ್ವತ ಬಂಧನವಾಗಿದ್ದು, ಇದೊಂದು ಸಾಮಾಜಿಕ ಪ್ರಕ್ರಿಯೆ. ಏಕೆಂದರೆ ಮದುವೆ ಇಲ್ಲದೆ ಕುಟುಂಬ ಮೈದಳೆಯಲು ಅಸಾಧ್ಯ ಮಹಿಳೆ ಪ್ರೌಢಾವಸ್ಥೆಗೆ ಬರುತ್ತಿದ್ದಂತೆ ಮದುವೆ ಮಾಡಿಕೊಡಬೇಕೆಂಬ ಮೂಢನಂಬಿಕೆಯಿಂದ

ದೊರಕಿದ ವರನಿಗೆ ಮದುವೆಯನ್ನು ಮಾಡಿಕೊಟ್ಟಿರುವುದನ್ನು ಕಥನಗೀತೆಗಳಲ್ಲಿ ಕಾಣುತ್ತೇವೆ. ಇಂತಹ ಒಂದು ಘಟನೆಯನ್ನು 'ಕೊಟ್ಟೆತವ್ವ ಮುಪ್ಪಿನ ಮುದುಕಾಗೆ' ಎಂಬ ಕಥನಗೀತೆಯಲ್ಲಿ ವಯಸ್ಸಾದ ಮುದುಕನಿಗೆ ಚಿಕ್ಕ ವಧುವನ್ನು ಕೊಟ್ಟು ಮದುವೆ ಮಾಡಿದಂತಹ ದೃಶ್ಯವನ್ನು ಹಾಗೂ ಆ ಬಂಧನದಲ್ಲಿ ಸಿಲುಕಿ ನರಳುತ್ತಿರುವ ಹೆಣ್ಣಿನ ಅಸಹಾಯಕತೆಯನ್ನು ಕಾಣುತ್ತೇವೆ.

"ಕುಟ್ಟಿ ಬೀಸಿ ತುತ್ತು ಮಾಡಿ ಉಣಿಸಲಾರೆನೇ
ಉಣಿಸಲಾರನೇ ತಾಯವ್ವ ॥ ತಿನಿಸಲಾರೆನೆ
ಕೆಮ್ಮಿ ಕ್ಯಾಕರಿಸಿದ ಉಗುಳ ನಾನು ಚೆಲ್ಲಲಾರೆನೇ
ಚೆಲ್ಲಲಾರೆನೇ ತಾಯವ್ವ ॥ ನಿಲ್ಲಲಾರೆನೆ
ಕೋಲು ಕೊಟ್ಟು ಹೊರಾಕು ನಾನು ದೂಡಲಾರನೇ
ದೂಡಲಾರನೇ ತಾಯವ್ವ ॥ ನೋಡಲಾರೆನೆ"[೨೬]

ಇಲ್ಲಿ ತಂದೆ-ತಾಯಿಗಳು ಬೇಗ ದೊರಕಿದ ವರನಿಗೆ ಯುವತಿಯಾಗಿದ್ದ ಮಗಳನ್ನು ಮುಪ್ಪಿನ ಮುದುಕನಿಗೆ ಕೊಟ್ಟು ಮದುವೆ ಮಾಡಿದ ಘಟನೆ ಹಾಗೂ ಮದುವೆ ಎಂಬ ಬಂಧನದಲ್ಲಿ ಸಿಲುಕಿ ಮುದುಕ ಗಂಡನ ಸೇವೆ ಮಾಡಲಾಗುತ್ತಿಲ್ಲ. ಜೊತೆಗೆ ಹೊರಗೆ ಹಾಕಲು ಆಗದೇ ಆತನೊಂದಿಗೆ ಜೀವನ ನಡೆಸಲು ಆಗದೇ ಇದ್ದ ಪರಿಸ್ಥಿತಿಯನ್ನು ನಿವೇದಿಸಿಕೊಳ್ಳಲಾಗಿದೆ. ಮನೆತನದ ಆಸ್ತಿಗೋಸ್ಕರ, ಹಿರಿಯರ ಆಸ್ತಿಗೋಸ್ಕರ ಮನೆಯ ಮೊಮ್ಮಗಳನ್ನೇ ಸೊಸೆಯಾಗಿ ಮಾಡಿಕೊಳ್ಳುವ ವಾಡಿಕೆ ಇದೆ. ಮಹಿಳೆ ಮದುವೆಯಾಗಲು ಆಕ್ಷೇಪಿಸಿದರೂ ಅದರ ವಿರೋಧವಾಗಿ ಕುಟುಂಬ ತಮ್ಮ ಕರ್ತವ್ಯವನ್ನು ಪಾಲಿಸಿಬಿಡುತ್ತದೆ. ಅದರ ಪರಿಣಾಮ ಮದುವೆಯಾದ ನಂತರ ಕೆಲವರಿಗೆ ಮನದಟ್ಟಾಗುತ್ತದೆ. ಕೆಲವರು ಹಣೆಬರಹವೆಂಬ ನಿಲುವನ್ನು ತಾಳಿ ಮೌನವಾಗಿಬಿಡುವರು. ವಯಸ್ಸಿನ ಅಂತರ ಹೆಚ್ಚು ಇದ್ದಾಗ ಇಂತಹ ಮಾನಸಿಕ ಸ್ಥಿತಿಗಳು ತಾವಾಗಿಯೇ ಹೊರಬೀಳುತ್ತವೆ. ಮನೋವಿಜ್ಞಾನದಲ್ಲಿ ಕೆಲವೊಂದು ವಯಸ್ಸಿಗೆ ವ್ಯಕ್ತಿಯ ಮಾನಸಿಕ, ದೈಹಿಕ, ಬೌದ್ಧಿಕ ಶಕ್ತಿಗಳ ಪರಿಣಾಮಗಳು ಉಂಟಾಗುತ್ತಿರುತ್ತವೆ ಎಂದು ಹೇಳಲಾಗುತ್ತದೆ. ಆದಕಾರಣ ಒಂದೇ ವಯಸ್ಸಿನ ಅಥವಾ ಕಡಿಮೆ ಅಂತರದ ವಯಸ್ಸನ್ನು ಆಧರಿಸಿ ಮದುವೆ ಮಾಡುವುದು ಸೂಕ್ತ. ಇದೇ ರೀತಿಯಾಗಿ ಬಲವಂತವಾಗಿ ಮದುವೆಯಾಗಿ ತಾನು ಪ್ರೀತಿಸಿದ ಹುಡುಗನನ್ನು ಪಡೆಯಲಾಗದೆ ಅವನ

೨೬. ಬಾಚಿಗೊಂಡನಹಳ್ಳಿ ಮತ್ತು ಮಾಗಿ ಬಸಾಪುರದ ಜನಪದ ಗೀತೆಗಳು : ಎಸ್.ಎ. ಕೃಷ್ಣಯ್ಯ, ಪು.೧೪೪

ತಂದೆಯನ್ನು ಮದುವೆಯಾಗಿ ಬಾಳಬೇಕಾದ ಸಂದಿಗ್ಧ ಪರಿಸ್ಥಿತಿಯನ್ನು ಕುಮಾರ ರಾಮನ ಕಥನಗೀತೆಯಲ್ಲಿ ಕಂಡುಬಂದಿದೆ.

ಈಸೂರಾಯನ ಪದ ಕಥನಗೀತೆಯಲ್ಲಿ ಮದುವೆ ಚಿತ್ರಣ :

ಈಸೂರಾಯನ ಪದ ಇದೊಂದು ದೀರ್ಘ ಕಥನಗೀತೆ. ಇದು ನಾರಾಯಣ ಸ್ವಾಮಿಯ ಹಾಡು, ಇಂಜಿಯಣ್ಣನ ಹಾಡು, ಶಾನಪ್ಪ ಎಂಬ ಬೇರೆ ಬೇರೆ ಹೆಸರುಗಳಿಂದ ಪ್ರಚಲಿತದಲ್ಲಿದ್ದರೂ ಕಥೆ ಮಾತ್ರ ಒಂದೇ ಆಗಿದೆ. ಈಸೂರಾಯ ಅಥವಾ ಈಶ್ವರನಿಗೆ ಇಷ್ಟವಿಲ್ಲದ ಹೆಣ್ಣಿನೊಡನೆ ಮದುವೆ ನಿಶ್ಚಯಿಸಿದ್ದು, ಆತ ಮನೆ ಬಿಟ್ಟು ಹೋಗಿ ಸೂಳೆ (ವಲ್ಲಳ್ಳಿ) ವಲ್ಲಣಿಯ ಮೋಹಪಾಶದಲ್ಲಿ ಸಿಲುಕಿ ತನ್ನ ದಾಂಪತ್ಯ ಜೀವನವನ್ನು ಹಾಳು ಮಾಡಿಕೊಂಡ ವಿಷಯವೇ ಇದರ ಕಥಾವಸ್ತು.

ಈಸೂರಾಯ ತಂದೆ-ತಾಯಿಗಳಿಗೆ ಪ್ರೀತಿ ಪಾತ್ರನಾದ ಮಗ. ಮಗನಿಗೆ ಮದುವೆ ಮಾಡಿ ಆತನು ಸಂಸಾರ ಹೂಡಲು ಅನುವು ಮಾಡಿಕೊಡಲೆಂಬಂತೆ ತಮ್ಮಿಷ್ಟದ ಹೆಣ್ಣು ರುಪ್ಪಾಣಿಯೊಂದಿಗೆ (ರುಕ್ಮಿಣಿ) ಮದುವೆ ನಿಶ್ಚಯ ಮಾಡುತ್ತಾರೆ. ಆದರೆ ಈಸೂರಾಯನಿಗೆ ಆ ಹೆಣ್ಣನ್ನು ಮದುವೆಯಾಗಲು ಇಷ್ಟವಿಲ್ಲ. ಮನಸ್ಸಿಲ್ಲದ ಕಾರಣ ತಾನೇ ಹೆಣ್ಣನ್ನು ನೋಡಲು ಹೊರಡುವುದು ಆತನ ಜೀವನದ ಪ್ರಮುಖ ತಿರುವಿಗೆ ಕಾರಣವಾಗುತ್ತದೆ. ಹೆಣ್ಣು ನೋಡಲು ಹೊರಟ ಈಸೂರಾಯ ಕಾಡು-ಮೇಡುಗಳನ್ನು ದಾಟಿ ಬರುತ್ತಾನೆ. ಒಂದು ಹೊಲದಲ್ಲಿ ಸುಂದರ ಯುವತಿಯನ್ನು ನೋಡಿ ಆಕರ್ಷಣೆಗೆ ಒಳಗಾಗುತ್ತಾನೆ. ಅವಳೇ ವಲ್ಲಳ್ಳಿ (ವಲ್ಲಾಣಿ). ಇತ್ತ ರುಕ್ಮಿಣಿ ಮದುಮಗಳಾಗಿ ಹಸೆಮಣೆಯಲ್ಲಿ ಈಸೂರಾಯನಿಗೆ ಕಾಯುತ್ತಿರುತ್ತಾಳೆ. ಆದರೆ ಈಸೂರಾಯ ತಂದೆ ನಿಶ್ಚಯಿಸಿದ ಹೆಣ್ಣು ಇಷ್ಟವಿಲ್ಲದ ಕಾರಣ ವಲ್ಲಣ್ಣಿಯ ಹತ್ತಿರ ಹೋಗಿರುತ್ತಾನೆ. ಆತ ಮದುವೆಗೆ ಬರದೇ ಇದ್ದ ಕಾರಣ, ಹಿರಿಯರೆಲ್ಲರೂ ಸೇರಿ ರುಕ್ಮಿಣಿಯ ಮದುವೆಯನ್ನು ಕಠಾರದ ಜೊತೆಗೆ ಮಾಡುವರು. ರುಕ್ಮಿಣಿಗೆ ಆಗುತ್ತಿರುವ ನೋವಿನ ಬಗೆಗೆ ಯಾರೂ ವಿಚಾರಿಸದೇ ಮುಂದೆ ತಾನೇ ಸರಿ ಹೋಗುತ್ತಾಳೆಂದು ತಾವೇ ಭಾವಿಸಿ ಕಠಾರಿಯೊಂದಿಗೆಯೇ ಶೋಭನ ಕಾರ್ಯವನ್ನು ಮಾಡಿ ಮುಗಿಸುತ್ತಾರೆ. ಇದರಿಂದ ರುಕ್ಮಿಣಿಯ ಮನಸ್ಸು ಛಿದ್ರ-ಛಿದ್ರವಾಗುತ್ತದೆ. ಗಂಡು-ಹೆಣ್ಣಿನ ನಡುವೆ ಶಾಶ್ವತ ಬಂಧನ ಬೆಸೆಯುವ ಮದುವೆ ರುಕ್ಮಿಣಿಯ ಪಾಲಿಗೆ ಕಠಾರಿಯೇ ಪತಿಯೆಂದು ಸಾಯುವವರೆಗೂ ಬದುಕಬೇಕಾಯಿತು. ಈ ಕಠಾರಿಯೆನ್ನುವುದು ರುಕ್ಮಿಣಿಯ ಮನಸ್ಸಿಗೆ ಇರಿದ ಸಂಕೇತವಾಗಿ

ಕಂಡುಬರುತ್ತದೆ. ಕುಟುಂಬವು ವಿವಾಹಕ್ಕೋಸ್ಕರ ರೂಪಿಸುವ ನಿಯಮಗಳು ಅನೇಕ ಸಂದರ್ಭದಲ್ಲಿ ಮಹಿಳೆಗೆ ದಂಡನೆಯಾಗಿ ರೂಪಿತವಾಗುತ್ತವೆ.

ಮದುವೆಯಾದ ಮೇಲೆ ರುಕ್ಮಿಣಿ ಮೈನೆರೆಯುತ್ತಾಳೆ. ಆಗ ಅವಳ ಸೋಬಾನ ಮಾಡಲೆಂದು ಮತ್ತೊಮ್ಮೆ ಈಸೂರಾಯನಿಗೆ ಪತ್ರ ಬರೆದು ಕಳಿಸಿದರೂ ಸೂಳೆ ವಲ್ಲಳ್ಳಿಯ ಚಾತುರ್ಯದಿಂದ ಆ ಪತ್ರ ಅವನ ಕೈ ಸೇರದಂತೆ ಉಳಿಯುತ್ತದೆ. ತನ್ನನ್ನು ಬಿಟ್ಟು ಹೋದಾನೆಂಬ ಭಯದಿಂದ ಮದ್ದಿನ ಪ್ರಯೋಗವನ್ನು ಮಾಡುತ್ತಾಳೆ. ಈಸೂರಾಯನಿಗೆ ಆತನ ಮನೆಯಿಂದ ಬಂದ ಯಾವುದೇ ಸಂದೇಶ ತಲುಪದಂತೆ ಅವಳು ಜಾಗ್ರತೆ ವಹಿಸುತ್ತಾಳೆ. ಮೇಲ್ನೋಟಕ್ಕೆ ತನ್ನ ಸ್ವಾರ್ಥಕ್ಕಾಗಿ ಇನ್ನೊಂದು ಹೆಣ್ಣಿನ ಜೀವನದಲ್ಲಿ ಪ್ರವೇಶಿಸಿ ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ್ದಾಳೆ ಎಂಬ ಅಂಶ ಕಂಡುಬರುತ್ತದೆ. ಆದರೆ ಇಲ್ಲಿ ಕೇವಲ ವಲ್ಲಳ್ಳಿಯ ತಪ್ಪು ಅಂತ ಹೇಳಲು ಸಾಧ್ಯವಿಲ್ಲ. ಏಕೆಂದರೆ ಈಸೂರಾಯನಿಗೆ ಇಷ್ಟವಿಲ್ಲದೆ ಕುಟುಂಬದ ಸದಸ್ಯರಿಗೆ ಇಷ್ಟವಾದ ಹೆಣ್ಣನ್ನು ನಿಶ್ಚಯಿಸಿದ್ದರಿಂದ ಆತ ತನಗೆ ಇಷ್ಟವಾದ ಹೆಣ್ಣನ್ನು ಹುಡುಕಿಕೊಂಡು ಹೋಗಿದ್ದಾನೆ. ಆದಕಾರಣ ಇಲ್ಲಿ ಕುಟುಂಬ ಹಾಗೂ ಸಮಾಜದ ಒತ್ತಾಯಪೂರ್ವಕ ಸಂಪ್ರದಾಯಗಳು ತಪ್ಪು ಎಂದು ಗ್ರಹಿಸಬಹುದಾಗಿದೆ.

ಈಸೂರಾಯನ ಅನುಪಸ್ಥಿತಿಯಲ್ಲಿ ಕಠಾರಿಯನ್ನು ಆತನ ಗುರುತಿಗೆಂದು ಇಟ್ಟು ಲಗ್ನದ ವಿಧಿ-ವಿಧಾನಗಳನ್ನು ನೆರವೇರಿಸಿದ್ದು ರುಕ್ಮಿಣಿಗಾದ ಮೊದಲ ಆಘಾತ. ಒಲ್ಲದ ಗಂಡನೊಡನೆ ಆದ ಮದುವೆಯ ಚಿತ್ರಣ ಅವಳ ಜೀವನದ ದಿಕ್ಕನ್ನೇ ಬದಲಿಸಿ ಬಿಡುತ್ತದೆ. ಈಸೂರಾಯ ಬಾರದೇ ಇದ್ದಾಗ ಒಂದು ವೇಳೆ ರುಕ್ಮಿಣಿಯ ಮದುವೆ ನಿಲ್ಲಿಸಿಬಿಟ್ಟಿದ್ದರೆ ಆಕೆಗೆ ಆಗುವ ಅನ್ಯಾಯವನ್ನು ತಪ್ಪಿಸಬಹುದಿತ್ತು. ವಾಸ್ತವ ದಿನಮಾನದಲ್ಲಿ ಒಪ್ಪಿಗೆಯಿಂದಾಗುವ ಮದುವೆಗಳೇ ಯಶಸ್ವಿಯಾಗಲಾರವು ಎನ್ನುವ ಸಂದರ್ಭದಲ್ಲಿ ಇನ್ನೂ ಇಷ್ಟವಿರದ ಮದುವೆ ಮಾಡಿ ಹಿರಿಯರು ಎರಡು ಜೀವಗಳ ದುರಂತಕ್ಕೆ ಕಾರಣೀಭೂತ ರಾದರೆಂದರೆ ತಪ್ಪಾಗಲಾರದು.

ನಾಗವ್ವ ಕಥನಗೀತೆಯಲ್ಲಿ ಮದುವೆ ಚಿತ್ರಣ :

ಒಂದು ಹೆಣ್ಣಿಗೆ ಗಂಡು ಗೊತ್ತಾಯಿತೆಂದರೆ ಸಾಕು ಅವನೇ ತನ್ನ ಪತಿಯೆಂದು ನಂಬಿಬಿಡುತ್ತಿದ್ದಳು. ಮದುವೆಯಾಗಿರದೆ ಇದ್ದರೂ ಕೂಡ ಆ ಗಂಡು ತೀರಿ ಹೋದನೆಂದರೆ ಆ ಹೆಣ್ಣು ಚಿತೆಗೆ ಹಾರಲು ವಧುವಿನಂತೆ ಶೃಂಗರಿಸಿಕೊಂಡು ಕೊಂಡಕ್ಕೆ ಹೋಗಬೇಕಾದಂತಹ ಘಟನೆಗಳನ್ನು ಕೂಡ ಕಥನಗೀತೆಗಳಲ್ಲಿ ಕಾಣುತ್ತೇವೆ. ಈ ತರಹದ ಒಂದು ಘಟನೆಯನ್ನು

ನಾಗವ್ವ ಕಥನಗೀತೆಯಲ್ಲಿ ಚಿತ್ರಿಸಲಾಗಿದೆ. ಕಾಡುಗೊಲ್ಲರ ಹಟ್ಟಿಯಲ್ಲಿ ಹುಟ್ಟಿದ ಈ ನಾಗವ್ವಳಿಗೆ ನವಿಲೂರಿನ ಮುತ್ತನ ಮಗ ಚೆಂದಯ್ಯನೆಂಬುವವನಿಗೆ ಮದುವೆ ಮಾಡಲು ಕೇಳಿರುತ್ತಾರೆ. ಸೀರೆ ಉಡಲರಿಯದ ಮಗುವನ್ನು ಕೊಡಲು ಪ್ರಥಮದಲ್ಲಿ ಹಿರಿಯರೆಲ್ಲರೂ ವಿರೋಧಿಸಿದರೂ ನಂತರ ಎಲ್ಲರೂ ಮದುವೆಗೆ ಒಪ್ಪಿಗೆ ನೀಡಿ ಮದುವೆಗೆ ಸಿದ್ಧತೆ ಮಾಡುತ್ತಾರೆ. ಮದುಮಗ ಚೆಂದಯ್ಯ ಎಣ್ಣೆ ಸ್ನಾನವನ್ನು ಮಾಡುತ್ತಿರುವಾಗ ಆತನ ತಂಗಿ ಚೆಲುವಮ್ಮ ಬಂದು ಬೇಡರು ತಮ್ಮ ಆಡನ್ನು ಹೊಡೆದಂತಹ ಸುದ್ದಿಯನ್ನು ತಿಳಿಸುತ್ತಾಳೆ. ಈ ಮಾತನ್ನು ಕೇಳಿದ ಚೆಂದಯ್ಯ (ಮದುಮಗ) ಕಾಡಿಗೆ ಹೋಗುತ್ತಾನೆ. ಆಡುಗಳನ್ನು ಬಿಡಿಸಿಕೊಂಡು ಮನೆಗೆ ಬರುವಾಗ ಒಂದು ಕುಂಟ ಆಡಿನಮರಿ ಕಾಣಿಸುವುದಿಲ್ಲ. ಮರಳಿ ಕಾಡಿನಲ್ಲಿ ಹುಡುಕುತ್ತಿರುವಾಗ ಅಡಗಿಕೊಂಡಿದ್ದಂತಹ ಬೇಡರು ಚೆಂದಯ್ಯನನ್ನು ಕೊಂದುಬಿಡುತ್ತಾರೆ. ಮದುವೆಗೆ ಮುಂಚೆ ಚೆಂದಯ್ಯ ವಿಧಿವಶನಾಗುತ್ತಾನೆ. ಇತ್ತ ಮದುಮಗಳಾಗಿ ಸಿಂಗಾರ ಮಾಡಿಕೊಂಡು ಸಿದ್ಧವಾಗಿರುವ ನಾಗಮ್ಮಳಿಗೆ ಶಾಸ್ತ್ರಗಳನ್ನು ಆರಂಭಿಸಿದ್ದರು. ಹಿರಿಯರೆಲ್ಲರೂ ಬಲವಂತವಾಗಿ ಕೊಂಡಕ್ಕೆ ಧಾರೆಯರೆಯಲು ಸಿದ್ಧವಿರಲಿಲ್ಲವಾದರೂ ಕೂಡ ನಾಗವ್ವಳೇ ಸ್ವತಃ ಕೊಂಡಕ್ಕೆ ಹೋಗಲು ಮದುವಣಗಿತ್ತಿಯಂತೆ ಕೊಂಡಕ್ಕೆ ಹಾರುತ್ತಾಳೆ. ಈ ರೀತಿಯಾಗಿ ಮದುವೆಯು ದುಃಖಾಂತದ ಮೂಲಕ ನೆರವೇರಿ ನಾಗವ್ವಳ ಮದುವೆಯ ಚಿತ್ರಣ ಕಣ್ಣಿಗೆ ಕಟ್ಟಿದ ಹಾಗೇ ಕಂಡುಬರುತ್ತದೆ. ಮದುವೆಯಾಗಿ ಹೊಸ ಬಾಳ್ವೆಯನ್ನು ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ವಿಧಿ ಯಾವ ಬಾಳು ಬೇಡ ನಿನಗೆ ಎಂದು ಆಕೆಯನ್ನು ಈ ಲೋಕದಿಂದಲೇ ದೂರ ಮಾಡಿ ಅಣಕಿಸುವಂತಾಗಿದೆ. ಇಷ್ಟೊಂದು ಕ್ರೂರ ಮದುವೆ ಚಿತ್ರಣವನ್ನು ಈ ಕಥನಗೀತೆಯಲ್ಲಿ ಕಾಣಬಹುದಾಗಿದೆ. ಬದುಕಿನಲ್ಲಿ ವಿಧಿಯೆಂಬುದು ಯಾವ ರೀತಿ ಕೊಂಡೊಯ್ಯುತ್ತದೆ ಎಂಬುದನ್ನು ಊಹಿಸಲು ಅಸಾಧ್ಯವಾದ ಸಂಗತಿಗಳು ಹಲವಾರು ಕಥನಗೀತೆಗಳಲ್ಲಿ ನಿರೂಪಿತವಾಗಿವೆ.

ವಡ್ಡಗೆರೆ ನಾಗಮ್ಮ ಕಥನಗೀತೆಯಲ್ಲಿ ಮದುವೆ ಚಿತ್ರಣ ಮತ್ತೊಂದು ರೀತಿಯಲ್ಲಿ ಕಂಡು ಬಂದಿದೆ. ವಡ್ಡಗೆರೆ ನಾಗಮ್ಮ ಮತ್ತು ಈರಣ್ಣನ ಮದುವೆ ತುಂಬಾ ವೈಭವಯುಕ್ತವಾಗಿ ನಡೆಯುತ್ತದೆ. ಗಂಡನ ಮನೆಯಲ್ಲಿ ಎಲ್ಲರೂ ಪ್ರೀತಿಯಿಂದ ಕಾಣುತ್ತಿದ್ದರು. ಒಂದು ದಿನ ಈರಣ್ಣ ತನ್ನ ತಾಯಿಗೆ ನಾಗಮ್ಮಳನ್ನು ಚೆನ್ನಾಗಿ ನೋಡಿಕೋ ಎಂದು ಹೇಳಿ ರಣರಂಗಕ್ಕೆ ಹೋಗುತ್ತಾನೆ. ಬಾಯಾರಿದ ನಾಗಮ್ಮ ತೊರೆಯ ಮರಳಿನಲ್ಲಿ ನೀರಿಗೋಸ್ಕರ ಚಿಲುಮೆಯನ್ನು ತೆಗೆದಾಗ ಗಂಡನ ಕತ್ತಿ, ತಲೆ ಸಿಕ್ಕ ಭಯಂಕರ ಚಿತ್ರ ಎದ್ದುಕಾಣುತ್ತದೆ. ಯಾರೆಷ್ಟೇ ತಡೆದರೂ ನಿಲ್ಲದೇ ಆಕೆ ಗಂಡನ ತಲೆಯನ್ನು ತನ್ನ ಮಡಿಲಿನಲ್ಲಿ ಕಟ್ಟಿಕೊಂಡು ಮದುವೆಯಾಗಿ ಗಂಡನ

ಸುಖವನ್ನು ಕಾಣದೆ ವಿಧವೆಯಾಗಿ ಕೊಂಡಕ್ಕೇರುತ್ತಾಳೆ. ಕೊಂಡಕ್ಕೆ ಹೋಗುವಾಗ ತೌರಿನ ಮನೆಗೆ ಶಾಪವನ್ನು ಕೊಟ್ಟು ಹೋಗುತ್ತಾಳೆ. ಇದರಿಂದ ನಾಗಮ್ಮನಲ್ಲಿರುವಂತಹ ಸಿಟ್ಟು, ಆಕ್ರೋಶ, ವೇದನೆ, ಗಂಡನಿರದ ಬಾಳು ಈ ಸಮಾಜದಲ್ಲಿ ವ್ಯರ್ಥ ಎಂದುಕೊಂಡು ಮನಸ್ಸಿನಲ್ಲಿಯೇ ಜ್ವಾಲಾಮುಖಿಯನ್ನು ಅದುಮಿಕೊಂಡು ತನ್ನ ಆ ವೇದನೆಯೆಂಬ ಬೆಂಕಿಯಲ್ಲಿ ಸುಟ್ಟು ಕೊಂಡವೇರುತ್ತಾಳೆ. ಕೊಂಡಕ್ಕೇರುವಾಗ ಆಕೆ ಶಾಪಕೊಟ್ಟ ಮಾತೆಂದರೆ;

> "ವಡ್ಡಗೆರೆಯಂಬೋದು ದೊಡ್ಡ ಪಟ್ಟಣವೆಂದು
> ಇಪ್ಪತ್ತೆ ಹುಣಸೆ ನೆರಳಿಗೆ ! ನನ್ನೀಗ
> ಕತ್ತೀಗೆ ಧಾರೆ ಎರದವರೆ ! ನನ್ನ ತವರೋರು
> ಕೊಟ್ಟೋರ ಮನೆಯ ಉರಿಯಾಲಿ"[೨೭]

ಎಂದು ತನ್ನನ್ನು ಕತ್ತಿಗೆ ಧಾರೆಯೆರೆದು ಕೊಟ್ಟ ಕುಟುಂಬ, ಸಮಾಜದ ವಿರುದ್ಧ ಧನಿಯೆತ್ತಿರುವುದು ಆಕೆಯ ಮಾತಿನ ಮುಖಾಂತರ ಪ್ರಗತಿಪರ ನಿಲುವು ಎಂದು ಕಾಣುತ್ತದೆ. ಕತ್ತಿ ಎಂಬುದು ಪ್ರವಾಹದ ಸಂಕೇತ ಕೂಡ ಆಗಿ ಕಂಡುಬರುತ್ತದೆ. ಏಕೆಂದರೆ ಮದುವೆ ಎಂಬ ಪ್ರವಾಹಕ್ಕೆ ತನ್ನನ್ನು ಧುಮುಕಿಸಿದ್ದರ ಬಗೆಗೆ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾಳೆ. ಮದುವೆ ಎಂಬುದರಿಂದ ಎಷ್ಟೆಲ್ಲ ಅನಾಹುತಗಳು ಸಂಭವಿಸುತ್ತವೆ. ಎಷ್ಟು ಜಾಗರೂಕರಾಗಿ ಹೆಜ್ಜೆ ಇಡಬೇಕೆಂಬ ಕರೆ ಇದರಿಂದ ನಿರೂಪಿತವಾಗುತ್ತದೆ.

ಗಂಗೆ-ಗೌರಿ ಕಥನಗೀತೆಯಲ್ಲಿ ಮದುವೆ ಚಿತ್ರಣ :

ಹೆಣ್ಣು ಎಂದರೆ ಅಪಶಕುನವೆಂದು ತಿಳಿದು ಜೀವಿಸುತ್ತಿದ್ದ ಕಾಲದ ಆವರಣದಲ್ಲಿ ಸಿಲುಕಿ ಜೀವನದ ದಿಕ್ಕನ್ನೇ ಬದಲಿಸಿದಂತಹ ಕಥೆಯನ್ನು ಗಂಗೆ-ಗೌರಿಯರ ಜನನದ ಮೂಲಕವೇ ಅವರು ಸಮಾಜದ, ಕುಟುಂಬದ ಮೌಢ್ಯತೆಗೆ ಬಲಿಯಾಗಿ ಬದುಕು ವಿಭಿನ್ನ ರೀತಿಯಲ್ಲಿ ನೆಲೆಯನ್ನು ಕಾಣುವಂತಹ ಚಿತ್ರಣವನ್ನು ಈ ಕಥನಗೀತೆಯ ಮೂಲಕ ತಿಳಿಯಬಹುದಾಗಿದೆ.

ಹೆಣ್ಣು ಶುಕ್ರವಾರ ಹುಟ್ಟಿದರೆ ತವರಿಗೆ ಕೇಡಾಗುವುದು ಎಂಬ ನಂಬಿಕೆ ಪ್ರಾಚೀನ ಕಾಲದಿಂದಲೂ ಬೇರೂರಿದೆ. ಇಂತಹ ನಂಬಿಕೆಗೆ ಬಲಿಯಾದವರಲ್ಲಿ ಶ್ರೀಗೌರಿಯು ಕೂಡ ಒಬ್ಬಳಾಗಿದ್ದಾಳೆ. ಹೆಣ್ಣು ಹುಟ್ಟುವುದರಿಂದ ಹುಟ್ಟಿದ ಮನೆಗೆ ಬಡತನ ಬರುವುದು ಎಂದು

---

೨೭. ಜನಪದ ಕಥನಗೀತೆಗಳಲ್ಲಿ ಮಹಿಳೆ : ಒಂದು ಸಾಂಸ್ಕೃತಿಕ ಅಧ್ಯಯನ : ಎಂ.ಕೆ.ರುಕ್ಮಿಣಿ, ಪು.೧೩೭

ನಂಬಿದ ಕುಟುಂಬವು ಜೋಯಿಸರಿಗೆ ಮೊರೆ ಹೋದರೆ ಪಂಚಾಂಗದಲ್ಲಿ ಬ್ರಾಹ್ಮಣರಿಗೆ ದಾನವನ್ನು ಕೊಡಬೇಕೆಂಬ ಸುಳಿವು ಸಿಗುತ್ತದೆ. ಆಗ ಗೌರಿಯನ್ನು ದಾನ ಕೊಡುತ್ತಾರೆ. ಮಟ್ಟ ಮಂಗಳವಾರ ಹುಟ್ಟಿದ ಶ್ರೀಗೌರಿಗೆ ತಂದೆ-ತಾಯಿಗೆ, ಸೋದರ ಮಾವನಿಗೆ ಮರಣವಿದೆ ಎಂದು ನಂಬಿ ಕುಟುಂಬವು ಆ ಹಸುಳೆಯನ್ನು ಹರಿವ ಜಲಧಿಗೆ ಬಿಟ್ಟುಬಿಡಿ ಎಂದು ಜೋಯಿಸರ ಮೂಲಕ ಸೂಚನೆ ಸಿಕ್ಕಾಗ ಅದನ್ನು ತಿಳಿದ ತಾಯಿಯ ರೋಧನ ಹೇಳತೀರದು. ಭುಜ-ಭುಜವನ್ನು ತಟ್ಟಿಕೊಂಡು ಗೋಳಾಡಿ ಅಳುತ್ತಾ "ಪಾಪಿಯ ಹೊಟ್ಟೆಯಲ್ಲಿ ಹುಟ್ಟಬಹುದೆ ಶ್ರೀಗಂಗೆ" [೨೮] ಎಂದು ಬಾಚಿ ತಬ್ಬಿಕೊಂಡು ಮುದ್ದು ಮಾಡುತ್ತಾ ಗೋಳಾಡಿಕೊಂಡು ಅಳುತ್ತಾ ಪೆಟ್ಟಿಗೆಯಲ್ಲಿ ಮಲಗಿಸಿ ಶ್ರೀಗಂಗೆಯನ್ನು ಹರಿವ ಜಲಧಿಗೆ ಬಿಟ್ಟೆ, ಗೌರಿಯನ್ನು ಹೆತ್ತೆ ಬ್ರಾಹ್ಮಣನಿಗೆ ದಾನವನ್ನು ಕೊಟ್ಟೆ ಎನ್ನುತ್ತಾ ಹಡೆದ ತಾಯಿಯ ಒಡಲು ಮಕ್ಕಳ ಅಗಲಿಕೆಯಿಂದ ಪರಿತಪಿಸುತ್ತದೆ. ಹೆತ್ತ ತಾಯಿಯಲ್ಲಿ ಎಷ್ಟೇ ಸಂಕಟ, ನೋವು ಜ್ವಾಲೆಯಂತೆ ಉರಿಯುತ್ತಿದ್ದರೂ ಸಮಾಜದ ಮೂಢನಂಬಿಕೆಗೆ ತಲೆಬಾಗಲೇ ಬೇಕಾದಂತಹ ಸ್ಥಿತಿಯನ್ನು ಗಂಗೆ-ಗೌರಿಯ ತಾಯಿಯ ಚಿತ್ರಣದ ಮೂಲಕ ಸ್ಪಷ್ಟವಾಗುತ್ತದೆ.

ಗಂಗೆ-ಗೌರಿ ಕಥನಗೀತೆಯಲ್ಲಿ ಶಿವನ ಮಡದಿಯರಾದ ಇವರು ಮೊದಮೊದಲು ಐಕ್ಯತೆಯಿಂದ ಇದ್ದು, ಒಂದು ಸಣ್ಣ ಕಾರಣದಿಂದ ಸವತಿಯರಾಗುವಂತಹ ಸಂದರ್ಭ ಒದಗಿ ಬರುತ್ತದೆ. ಶ್ರೀಗೌರಿಯನ್ನು ಮದುವೆಯಾಗಿದ್ದರೂ ಗಂಗೆಯ ಮೋಹಕ್ಕೆ ಒಳಗಾಗಿ ಆಕೆಯನ್ನು ತನ್ನ ಜಡೆಯಲ್ಲಿ ಕೂಡಿಸಿಕೊಂಡು ಗಂಗೆ-ಗೌರಿಯರು ಸವತಿಯರಾಗಲಿಕ್ಕೆ ಕಾರಣವಾಗುವನು.

ಅಪಶಕುನವೆಂದು ದೂರಾದ ಗಂಗೆ ಅಂಬಿಗರ ಕೈಯಲ್ಲಿ ಸಿಕ್ಕಳು. ಅಂಬಿಗರ ಅರಮನೆಯಲ್ಲಿ ಹಾಲು-ತುಪ್ಪವನ್ನುಂಡು ಪ್ರೀತಿಯಿಂದ ೧೨ ವರ್ಷದವಳಾಗಿ ಬೆಳೆದು ನಿಲ್ಲುತ್ತಾಳೆ. ನಂತರ ನೀರನ್ನು ತರುತ್ತೇನೆಂದು ತಾಯಿಗೆ ಹೇಳಿ ಹಾರುವರ ಕೇರಿಗೆ ಹೋಗುತ್ತಾಳೆ. ದಡದಡನೆ ಹೋಗಿ ಕೊಡಗಳನ್ನು ಮುಳುಗಿಸಿ ನೀರನ್ನು ತುಂಬಿ ಬಾವಿಕಲ್ಲಿನ ಮೇಲೆ ಇಟ್ಟಳು. ಇಟ್ಟು ಕೈಕಾಲು ಮುಖವನ್ನು ತೊಳೆಯುತ್ತಿರುವಾಗ ಶಿವರಾಯನು ತನ್ನ ಜಪವನ್ನು ಮರೆತು ಈಕೆಯನ್ನು ಕಂಡು ನೀನ್ಯಾರ ಮಗಳಾದೆ, ನೀನ್ಯಾರ ಸೊಸೆಯಾದೆ ಎಂದು ಕೇಳಿದನು. ಆಗ ಶ್ರೀಗಂಗೆಯು ನಾನು ಯಾರ ಮಗಳೂ ಅಲ್ಲ, ಯಾರ ಸೊಸೆಯೂ ಅಲ್ಲ. ನಾನು ಅಂಬಿಗರಣ್ಣನ ಕಿರುತಂಗಿ ಎಂದು ಉತ್ತರ ನೀಡಿದಳು. ಆಗ ಶಿವನು ನನ್ನ

---

೨೮. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೪೮೧

ಶಿವಜಡೆಗೆ ಬಂದು ನೆಲೆಸು ಎಂದು ಕೇಳುವನು. ಆಗ ಗಂಗೆಯು ತಮ್ಮ ಕುಲದ ಬಗೆಗೆ ಕುರಿತು ಹೀಗೆನ್ನುವಳು;

"ಹೆಂಡ ಕುಡಿಯೋರ ಮಗಳು ಬಂಗಿ ತೆಗೆಯೋರ ಮಗಳು
ಹೆಂಗೆ ಬರಲಿ ಸ್ವಾಮಿ ಶಿವಜಡೆಗೆ ಶಿವಜಡೆಗೆ
ಮೀನು ತಿಂಬೋರ ಮಗಳು ಗುಳ್ಳದೇವರ ಮಗಳು
ಹೆಂಗೆ ಬರಲಿ ಸ್ವಾಮಿ ಶಿವಜಡೆಗೆ ಶಿವಜಡೆಗೆ"[೨೯]

ಗಂಗೆಯು ಇಷ್ಟೆಲ್ಲಾ ಹೇಳಿದಾಗ ಶಿವನು ಹೆಂಡದ ಗುಳ್ಳೆಯನ್ನು ತಾರೆ, ಬಂಗಿಯ ಚೀಲವ ತಾರೆ, ನೀನು ಮಾತ್ರ ಬಂದು ನನ್ನ ಜಡೆಗೆ ನೆಲೆಸು ಎಂದು ಕೇಳುವನು. ಆಗ ಗಂಗೆ ಹೋಗಿ ಶಿವನ ಜಡೆಯಲ್ಲಿ ನೆಲೆಸುವಳು. ಮುಂದೆ ಶಿವನು ಅಡವಿಯನ್ನು ಬಿಟ್ಟು ಎಲೆಯ ತೋಟಕ್ಕೆ, ಬಾಳೆಯ ತೋಟಕ್ಕೆ ಹೋಗಿ ಇನವಂದ(ವಿನೋದ)ವಾಡುವರು. ಇಲ್ಲಿ ಶಿವನ ಜಡೆಯಲ್ಲಿ ಗಂಗೆ ಹೋಗಿ ಕುಳಿತುಕೊಳ್ಳುವುದು ಅಸಾಧ್ಯ. ಶಿವನು ತನ್ನ ಪ್ರೀತಿಯ ನಿವೇದನೆಯನ್ನು ಜಡೆಯಲ್ಲಿ ಬಂದು ಕುಳಿತುಕೋ ಎಂದು ಹೇಳುವುದರ ಮೂಲಕ ತಿಳಿಸುತ್ತಾನೆ. ಪ್ರೀತಿ ಮಾಡುವುದು ತಪ್ಪಲ್ಲ; ಆದರೆ ಶ್ರೀಗೌರಿಯನ್ನು ಪೂರ್ವದಲ್ಲಿ ಮದುವೆಯಾಗಿ ಬೇರೆ ಹೆಣ್ಣನ್ನು ಅರ್ಥಾತ್ ಗಂಗೆಯನ್ನು ಪ್ರೀತಿಸಿದ್ದು ತಪ್ಪು ಎಂಬ ಗ್ರಹಿಕೆ ಒಡಮೂಡುತ್ತದೆ. ಶಿವ-ಗಂಗೆಯರ ಇನವಂದವನ್ನು ಶ್ರೀಗೌರಿಗೆ ಗಿಣಿಗಳ ಮೂಲಕ ಕಥನಗೀತೆಗಳಲ್ಲಿ ತಿಳಿಸಲಾಗಿದೆ. ವಿಷಯ ಶ್ರೀಗೌರಿಗೆ ಗೊತ್ತಾಗಿರುವ ಕಾರಣ ಆಕೆ ಶಿವನು ತನ್ನ ಬಾಗಿಲಿಗೆ ಬಂದರೂ ಬೇಗ ಕದವನ್ನು ತೆಗೆಯುವುದಿಲ್ಲ. ಆದರೂ ಕೂಡ ಅನಿವಾರ್ಯವಾಗಿ ಬಂದು ಬಾಗಿಲನ್ನು ತೆಗೆದು ಕೈಯೆತ್ತಿ ಮುಗಿದು ಪಾದಕ್ಕೆ ಪನ್ನೀರನ್ನು ಎರೆದು ಹತ್ತು ಕಾಲೇಣಿಯನ್ನು ಅಟ್ಟಕ್ಕೆ ಹಾಕಿ ಎರಡು ಮಣೆಗಳನ್ನು ತೆಗೆದು ಹಾಕಿದಳು. ಇಷ್ಟೆಲ್ಲಾ ಸೇವೆಯನ್ನು ಮಾಡಿದರೂ ಶಿವನು ಗಂಗೆಗೆ 'ನಿನಗೆ ಇಬ್ಬರು ಪುರುಷರೇನೆ' ಎಂದು ಪ್ರಶ್ನಿಸುತ್ತಾ ಜೊತೆಗೆ ನಿನ ಗಂಡ ಶಿವನಿಗೆ ಮದುವೇನೆ, ಗಂಡಗಲ್ಲದಿದ್ದರೆ ನಿನ್ನ ಮಗನಿಗೆ ಮದುವೇನೆ ಎಂದು ಶ್ರೀಗೌರಿಯು ಗಂಗೆಯನ್ನು ಒಪ್ಪಿಕೊಳ್ಳುತ್ತಾಳೋ ಇಲ್ಲೋ ಎಂಬುದನ್ನು ಪರೋಕ್ಷವಾಗಿ ಆಕೆಯ ಮನಸ್ಸಿನಲ್ಲಿರುವ ಆಶಯವನ್ನು ತಿಳಿಯಲು ಯತ್ನಿಸುತ್ತಿರುವನು ಎನಿಸುತ್ತದೆ. ಗಂಗೆಯ ವಿಷಯ ತಿಳಿದಿದ್ದ ಶ್ರೀಗೌರಿಯು

---

೨೯. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೪೮೩

"ಮೆಚ್ಚಿದೆ ಸ್ವಾಮಿ ನಿಮ್ಮಣಕಾದ ಮಾತಿಗೆ
ಶ್ರೀಗಂಗೆಗೊಂದು ನಿಮಗೊಂದು"[೩೦]

ಎಂದು ತನ್ನ ನೋವನ್ನು ಈ ಮೇಲಿನ ಮಾತಿನ ಮೂಲಕ ತಿಳಿಸಿದಳು. ಇಲ್ಲಿ ಕಾದ ಎಂಬ ಶಬ್ದ ಎರಡು ಅರ್ಥವನ್ನು ತಿಳಿಸಿಕೊಡುತ್ತದೆ. ಒಂದು ಶಿವನನ್ನು ಕಾಯುತ್ತ ಕುಳಿತಿರುವುದಾದರೆ ಮತ್ತೊಂದು ಶಿವನ ಅರಗಿಸಲಾಗದ ಬಿಸಿಯಾದ ಮಾತು ಎಂದರ್ಥವಾಗುತ್ತದೆ. ಇತ್ತ ಶಿವನು ಗಂಗೆಯು ಬಂದಿರುವ ಸುದ್ದಿಯನ್ನು ಗೌರಿಗೆ ಯಾರು ಹೇಳಿದರು ಎಂದು ಯೋಚಿಸುತ್ತಾ ಪುಂಡುಗಾರ ಚಿನ್ನ ಬಸವಯ್ಯ ಹೇಳಿರಬಹುದೆಂದು ತಿಳಿದು ಅವನನ್ನು ಕರೆಯಿಸಿ ಹಲ್ಲನ್ನು ಮುರಿಸಿ ಊರಿಂದಾಚೆಗೆ ಬಡಿಸಿರಿ ಎಂದು ಹೇಳುವಾಗ ಗೌರಿಗೆ ಕೋಪ ಬಂದು ಆತನನ್ನು ಏಕೆ ಕರೆಸುವಿರಿ, ಅವನದು ಯಾವ ತಪ್ಪು ಇಲ್ಲ. ಅವನು ನನಗೆ ಯಾವ ವಿಷಯವನ್ನೂ ಬಂದು ಹೇಳಲಿಲ್ಲ. ನಾಡ ಮೇಲಾಡೋ ಅರಗಿಣಿಗಳು ಬಂದು ಹೇಳಿದವು ಎಂದು ಬಾಯಿ ಬರದ ಗಿಣಿಗಳ ಮೇಲೆ ಹೇಳಿದಳು. ಆಗ ಶಿವನು ಗಂಡ-ಹೆಂಡರಿಗೆ ಕದನವನ್ನು ತಂದಿಡುವುದಕ್ಕೆ ಸುಳ್ಳನ್ನು ಹೇಳಿರಬಹುದು. ಹೀಗೆ ಮಾಡುವುದು ಸರಿಯೇ ಎಂದು ಶಿವನಿಗೆ ಕೋಪ ಬಂದು ಗಿಣಿಯನ್ನು ಕರೆಯಿಸಿ ಕಣ್ಣನ್ನು ಕೀಳಿಸಿ ಎಂದು ಹೇಳುತ್ತಿರುವಾಗ ಶ್ರೀಗೌರಿಯು ಗಿಣಿಗಳ ಕಣ್ಣನ್ನು ಏಕೆ ಕೀಳಿಸುವಿರಿ 'ಅನ್ಯಕಾರ ಪಾಪಿ ಶಿವರಾಯ' ಅವು ಕಂಡದ್ದು ಕಂಡ ಹಾಗೆ ಹೇಳಿರುವವು. ಅದರಲ್ಲಿ ತಪ್ಪೇನು ಇಲ್ಲ ಎಂದು ಹೇಳುವಳು. ಆಗ ಶಿವನು ನಿನ್ನ ಮೇಲೆ ಗಂಗೆಯನ್ನು ತರುತ್ತೇನೆ ತರಬಹುದೆ ಶ್ರೀಗೌರಿ ಎಂದು ಇತ್ತ ತಂದೇ ತರುತ್ತೇನೆಂದು ಒಂದು ಧಾಟಿಯಲ್ಲಿಯೂ, ನಿನ್ನ ಮೇಲೆ ಬೇರೊಬ್ಬ ಮಡದಿಯನ್ನು ತರಲು ಸಾಧ್ಯವಿಲ್ಲ ಎಂಬ ಧಾಟಿಯಲ್ಲಿಯೂ ಹೇಳಿ ಊಟಕ್ಕೆ ನೀಡು ಬಾರೆ ಶ್ರೀಗೌರಿಯೆಂದು ಹಸಿಗೋಡೆಯ ಮೇಲೆ ಹಳ್ಳು ಹೊಡೆದ ಹಾಗೆ ಹೇಳುತ್ತಾನೆ. ಮುಂದೆ ಶಿವನ ಮಡದಿಯರಾಗಿ ಗಂಗೆ-ಗೌರಿಯರು ಐಕ್ಯತೆಯಿಂದಲೇ ಒಬ್ಬ ತಾಯಿಯ ಮಕ್ಕಳ ಹಾಗೆ ಇರುತ್ತಾರೆ. ಹೀಗೆಯೇ ಹೊಂದಿಕೊಂಡು ಇರುವ ಕಾಲದಲ್ಲಿ ಇಬ್ಬರೂ ಸೇರಿ ನೀರು ತರಲು ಹೋಗಿರುವಾಗ ಚಿನ್ನದ ಸಿವುಡಿಟ್ಟು, ರನ್ನದ ಕೊಡಹೊತ್ತು ಹಿಂದೊಬ್ಬರು, ಮುಂದೊಬ್ಬರು ಹೋಗುವಾಗ ಉಂಗುಷ್ಟ ತಗುಲಿತು. ಆಗ ಶ್ರೀಗಂಗೆಯು ಶರಣೆಂದು ಗೌರಿಗೆ ಅಕ್ಕಯ್ಯ ಎಂದು ವಿನಯವಾಗಿ ನುಡಿದಳು. ಆದರೆ ಶ್ರೀಗೌರಿಯು

೩೦. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೪೮೫

"ಹೆಂಡ ಕುಡಿಯೋರ ಮಗಳು ಭಂಗಿ ಕುಡಿಯೋರ ಮಗಳು
ಒದಿಬೌದೆ ನೀನು ಕಾಲಾಗೆ
ಒದಿಬೌದೆ ನೀನು ಕಾಲಾಗೆ ನನ ಸವತಿ
ಬೆಸ್ತರ ಮಗಳು ಅಲ್ಲವೇನೆ
ಮೀನು ತಿನ್ನೋರ ಮಗಳು ಮೂಳೆ ತಿಂಬೋರ ಮಗಳು
ಅಂಬಿಗರ ಮಗಳು ಅಲ್ಲವೇನೆ
ಅಂಬಿಗರ ಮಗಳು ಅಲ್ಲವೇನೆ ನನ ಸವತಿ
ಓಡಿಬಂದೋಳು ಅಲ್ಲವೇನೆ"[೩೧]

ಎಂದು ಅತಿರೇಕದ ನಿಂದನೆಯ ಮಾತುಗಳನ್ನಾಡುತ್ತಿರುವಾಗ ಶ್ರೀಗಂಗೆಗೆ ಕೋಪ ಬಂದು ಹೆಚ್ಚಿನ ಮಾತುಗಳನ್ನಾಡಬೇಡ, ನಿನಗೆ ತಕ್ಕ ಮರ್ಯಾದೆಯನ್ನು ಮಾಡುತ್ತೇನೆಂದು ಜಿದ್ದಿಗೆ ಬಿದ್ದವರ ಹಾಗೆ ಒಬ್ಬರ ಮುಂದೆಲೆ ಇನ್ನೊಬ್ಬರ ಕೈಗೆ ಹಿಡಿಯುತ್ತಾ ಹೊಡೆದಾಡುವರು. ಹೀಗೆ ಕಿತ್ತಾಡುತ್ತಿರುವುದನ್ನು ಶಿವರಾಯ ನೋಡುತ್ತಾ, ನಗುತ್ತಾ ಗಂಗೆಗೆ ಹುಮ್ಮಸ್ಸನ್ನು ಕೊಡುವನು. ಇದನ್ನು ಕಂಡರೆ ಶಿವನಲ್ಲಿರುವ ದ್ವಿಭಾವನೆಗಳು ಕಂಡುಬರುತ್ತವೆ. ತಾನೇ ಈ ಸವತಿಯರ ಜಗಳಕ್ಕೆ ಕಾರಣವೆಂದು ಕೊಂಚಷ್ಟು ಪಾಪಪ್ರಜ್ಞೆ ಕಾಣುವುದಿಲ್ಲ. ಬದಲಾಗಿ ಗಂಗೆ-ಗೌರಿಗೆ ನಿಮ್ಮ ಜಗಳವನ್ನು ನೋಡಿ ಜನರು ನಗುತ್ತಿರುವರು. ಇನ್ನು ಮುಂದೆ ನೀವು ಬೇರೆ ಬೇರೆ ಇರಿ ಎಂದು ಹೇಳುವನು. ಅಂದಿನಿಂದ ಬೇರೆ ಇದ್ದಾಗ ಹಲವಾರು ಜಗಳಗಳು, ವೈಮನಸ್ಸುಗಳು ಹುಟ್ಟುತ್ತಾ ಹೋಗುತ್ತವೆ. ಗಂಗೆ-ಗೌರಿಯರ ಜಗಳಕ್ಕೆ ತಾನೂ ಕೂಡ ಕಾರಣ ಎಂದು ವಿಚಾರ ಮಾಡದೇ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಲೇಪಿಸುವ ಚಿತ್ರಣ ಕಂಡುಬರುತ್ತದೆ. ಒಟ್ಟಿನಲ್ಲಿ ಈ ಕಥನಗೀತೆಯಿಂದ ಬಹುಪತ್ನಿತ್ವಕ್ಕೆ ಮಾನ್ಯತೆ ಇತ್ತು ಎಂಬುದು ತಿಳಿದುಬರುತ್ತದೆ. ಜೊತೆಗೆ ಪುರುಷ ಪ್ರಧಾನ ಸಮಾಜ ಮಹಿಳೆಯರನ್ನು ತಮಗೆ ಹೇಗೆ ಬೇಕೋ ಹಾಗೇ ಉಪಯೋಗಿಸಿಕೊಳ್ಳುತ್ತಿತ್ತು ಎಂಬುದು ತಿಳಿದುಬರುತ್ತದೆ.

ಕೃಷ್ಣ ಕೊರವಂಜಿ :

ಪೌರಾಣಿಕ ವಸ್ತುವನ್ನು ಹೊಂದಿರುವ ಕೃಷ್ಣ ಕೊರವಂಜಿ ಗಮನಾರ್ಹ ಕಥನಗೀತೆ-ಗಳಲ್ಲೊಂದು. ಕೊರವಂಜಿ ವೇಷದಲ್ಲಿರುವ ಕೃಷ್ಣನ ರೂಪ, ಕಣಿ ಹೇಳುವದು ಕೊರವಂಜಿ ಎಂದೇ ನಂಬಿದ ರುಕ್ಮಿಣಿ ತನ್ನ ಮನಸ್ಸಿನ ಗಮನವನ್ನೆಲ್ಲಾ ಕೇಂದ್ರೀಕರಿಸಿ ಕೃಷ್ಣ ಕಾತರಳಾದ ಮನಸ್ಸಿನ ಗೊಂದಲದ ಪರಿಹಾರಕ್ಕಾಗಿ ಮೊರೆ ಹೊಕ್ಕಿರುವುದು ತಾನು ಬಯಸಿದ ಇನಿಯನೇ

---

೩೧. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೪೮೭

ಕೊರವಂಜಿಯ ವೇಷದಲ್ಲಿ ಬಂದು ತನ್ನ ಭವಿಷ್ಯದಲ್ಲಿ ಬರೆಯುತ್ತಿದ್ದಾನೆಂದು ತಿಳಿದಾಗ, ನಾಚಿ ಕೈ ಕಿತ್ತುಕೊಳ್ಳುವಿಕೆ ಮುಂತಾದ ಘಟನೆಗಳಲ್ಲಿ ಈ ಕಥನಗೀತೆ ಕೃಷ್ಣ ಕಥೆಗಳಲ್ಲಿ ಮುಖ್ಯ-ವಾದುದಾಗಿದೆ.

ರಾಜಬೀದಿಯಲ್ಲಿ ಕೃಷ್ಣ ಕೊರವಂಜಿ ವೇಷವನ್ನು ತಾಳಿ ಅಮ್ಮ ಕಣಿ ಕೇಳಿ ಕಣಿ ಎಂದು ಕರೆದು ಕೂಗಿದಳು. ಈ ಮಾತನ್ನು ರುಕ್ಮಿಣಿ ಕೇಳಿ ಗೌಡೀರ ಕೈಯಲ್ಲಿ ಕೊರವಿಯನ್ನು ಕರೆಯೆಂದು ಹೇಳಿ ಕಳುಹಿದಳು. ಗೌಡೀರು ಓಡಿ ಬಂದು ಅವ್ವಯ್ಯ ನೀನು ಬಾ ನಮ್ಮ ರಾಣಿ ರುಕ್ಮಿಣಿ ಕರೆದಿದ್ದಾಳೆ ಎಂದಾಗ ಆಗ ಕೊರವಂಜಿ ವೇಷದಲ್ಲಿರುವ ಕೃಷ್ಣನು "ಪುರುಷರಿಲ್ಲದ ಮನೆಗೆ ಹೇಗೆ ಬರಲಮ್ಮ" ಎಂದು ಹೇಳುತ್ತಾನೆ. ಆಗ ಗೌಡೀಯರು ಹೆಣ್ಣು ನಾವೆಲ್ಲರೂ ಯಾತಕ್ಕೆ ಭಯಪಡುವೆ ರಾಣಿ ರುಕ್ಮಿಣಿ ಇರುವಾಗ ಏನಮ್ಮ ಚಿಂತೆ ಅಂಜಿಕೊಳ್ಳಬೇಡ ಎಂದು ಹೇಳಿದರು.

ಅಂಜುತ್ತಾ ಹದಿನಾರು ಬಾಗಿಲು ದಾಟಿ ಚೆಲುವೆ ಕೊರವಿ ಬಂದು ನಿಂತಳು. ಆಕೆಯನ್ನು ನೋಡಿ ರುಕ್ಮಿಣಿಯು ಚಿನ್ನದ ಚಿಟ್(ಚಿಕ್ಕ) ಚಾಪೆ ಹಾಸಿ ಕುಳಿತುಕೊಳ್ಳಲು ಹೇಳಿದಳು. ರುಕ್ಮಿಣಿಯು ಕೊರವಂಜಿಗೆ ನಿಮ್ಮದು ಯಾವ ಊರು ಎಂದು ಕೇಳಿದಾಗ ಕೊರವಂಜಿ ವೇಷದ ಕೃಷ್ಣನು;

"ನಮ್ಮೂರ ನಮ್ಮ ಸೀಮೆ ಕೇಳೀಯ ರಾಣಿ
ನಮ್ಮೂರ ನಮ ಸೀಮೆ ಹೇಳೇನು ಕೇಳೆ
ಅಂಕಟಂಕಿನ ನಮ್ಮ ಗೋರ ಮಲೆಯಾಳ
ಮೆಚ್ಚಿನಾ ಬಂದರೆ ನಮ್ಮತ್ತೆಯ ಮನೆಯು
ಅಮ್ಮ ಬೇಸರಿಕೆ ಬಂದರೆ ನಮ್ಮ ತೌರೂರು
ದಿಳ್ಳಿದಿವಾನಗಿರಿ ಮೊದಲಲ್ಲೆ ನಮದು
ಆಕಾಶ ಬಾಣವ ಸೋಕಿ ನಾ ಬಂದೆ
ಹೆಣ್ಣೆ ಆದಿಗಣೇಶ್ವರನ ಮಗಳಲ್ಲವೇನೆ
ಸಿದ್ದಲಿಂಗೇಶ್ವರ ಚಿಕ್ಕಪ್ಪ ನನಗೆ
ವೈಯ್ಯಾರಿ ಪುರದಿಂದ ಈಗಿಳಿದು ಬಂದೆ"[೩೨]

೩೨. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೪೭೫

ನನಗೆ ಸುಳ್ಳು ಹೇಳಲು ಬರುವುದಿಲ್ಲ ಹೆಣ್ಣೆ. ನನ್ನ ಕಣಿಯನ್ನು ಸುಳ್ಳೆನ್ನುವೇ. ನನ್ನ ಕಣಿ ಸುಳ್ಳಲ್ಲ ಅಮ್ಮ ಮಗು ಮೇಲಾಣೆಯೆಂದು ಆಣೆ ಮಾಡಿ ತಾನು ಎಲ್ಲಿಂದ ಬಂದಿರುವಳೆಂದು ತಿಳಿಸಿದಳು.

ಕೊರವಂಜಿಯು ರುಕ್ಮಿಣಿಯ ಕೈಯ್ಯನ್ನು ನೋಡಿ ಕಣಿಯನ್ನು ಹೇಳುವಳು. ಎಂಟು ಮಂದಿಯು ನಿನ್ನ ನಂಟರು ಗರತಿ. ವೇಣುವಾದ ಕೃಷ್ಣನು ನಿನ್ನ ಗಂಡ ಈ ಹೊತ್ತಿನಲ್ಲಿ ನಾಳೆ ಬರುವನು, ಮೂಡಲ ಸೀಮೆಗೆ ಹೋಗಿರುವನು. ಏಕೆಂದರೆ ನಿನಗೆ ಬಂಗಾರ ಒಡವೆ ತರಲು, ಇನ್ನು ಮೂರು ದಿನದಲ್ಲಿ ತಪ್ಪದೇ ಬರುವನು. ಬಂದ ಮೂರು ದಿನಕ್ಕೆ ನಿನಗೆ ಮದುವೆ ಹೆಣ್ಣೆ, ಮದುವೆಗೆ ಮನೆಯ ಮುಂದೆ ಚಪ್ಪರ ಹಾಕಿಸಿ, ಚಪ್ಪರದಲ್ಲಿ ಕೈ ಹಿಡಿಸುವುದು, ಆತನ ಪಾದ ಹಿಡಿದು ಪನ್ನೀರು ತಂದು ತೊಳೆ ಹೆಣ್ಣೆ ತೊಳೆದು ತೀರ್ಥಪಾನ ಮಾಡು ಎನ್ನುವಳು.

ಕೃಷ್ಣನ ಕೊರವಂಜಿ ವೇಷವನ್ನು ತಿಳಿದ ರುಕ್ಮಿಣಿ :

ಕೊರವಂಜಿಯ ಕೈ ತಾ ಎಂದು ಆಕೆಯ ಕೈಯನ್ನು ನೋಡಿ, ರುಕ್ಮಿಣಿ ಇದು ಹೆಣ್ಣು ಕೈಯಲ್ಲ ಇದು ಗಂಡಸರದು, ಇದು ಹೆಣ್ಣು ಮಾತಲ್ಲ. ಗಂಡು ಮಾತೆಂದು ತಿಳಿದು ನಾಚಿಕೆಪಟ್ಟು ಕೋಣೆಯನ್ನು ಸೇರಿದಳು. ಹೆಂಗಸರ ನಾಚಿಕೆ ಕೆಡಿಸಬಾರದೆಂದು ಇದ್ದಕ್ಕಿದ್ದಂತೆ ಮಾಯವಾಗಿ ಕೃಷ್ಣ ದ್ವಾರಕಾಪುರಕ್ಕೆ ಸೇರಿದನು.

ಮದುವೆಗೆ ಹೊರಟ ಕೃಷ್ಣ :

ಕಾವೇರಿ ಹೊಳೆಯಲ್ಲಿ ಸ್ನಾನವ ಮಾಡಿ ಪಟ್ಟೆ ತಿರುಮಣಿನೀಗ ಇಟ್ಟು, ವಜ್ರದ ನಿಲುವಂಗಿ ತೊಟ್ಟು, ಪ್ರಬಲ ಕಿರೀಟವನ್ನು ಧರಿಸಿ, ಶಂಕಚಕ್ರವನ್ನು ಬಲಗೈಲಿ ಧರಿಸಿ, ವೇಣುನಾದದ ಕೋಲನ್ನು ಕೈಲಿ ಹಿಡಿದು ಗೋವರ್ಧನಗಿರಿಯ ಬೆಟ್ಟ ಹತ್ತಿ ಹದಿನಾರು ಗೋಪಿಕಾ ಸ್ತ್ರೀಯರನ್ನು ತನ್ನೊಂದಿಗೆ ಕರೆದುಕೊಂಡು ತಾಳಮೇಳದೊಂದಿಗೆ ಹೊರಟನು. ಇತ್ತ ಕೃಷ್ಣನ ದಾರಿ ಕಾಯುತ್ತಿದ್ದ ರುಕ್ಮಿಣಿಯು ಇವನು ತನ್ನ ಪುರುಷನೆಂದು ಕೈಮುಗಿದು ಪನ್ನೀರ ತಂದು ಪಾದ ತೊಳೆದು ತೀರ್ಥಪಾನ ಮಾಡಿ ಮುತ್ತಿನ ಸೆರಗಿನಲ್ಲಿ ಪಾದ ಒತ್ತಿದಳು.

ಕೃಷ್ಣನ ತಂದೆ-ತಾಯಿ ಬಂದು ಮದುವೆ ಮಾಡಿದ ಪ್ರಸಂಗ :

ಕೃಷ್ಣನ ತಂದೆ-ತಾಯಿ ರುಕ್ಮಿಣಿಯ ತಂದೆ-ತಾಯಿ ಅಲ್ಲಿಗೆ ಬಂದು ಆಕಾಶವೆನ್ನುವಷ್ಟು ಚಪ್ಪರವನ್ನು ಹಾಕಿಸಿ, ಭೂಮಿದೇವತೆಯಷ್ಟು ಹಸೆ ಜಗಲಿ ಬರೆದು ಚಿಕ್ಕ ಚಿಕ್ಕ ಮುತ್ತಿನ ಹಾಸನಿಟ್ಟರು. ಆಣೆ ಮುತ್ತನು ತಂದು ಧಾರೆಯೆರೆದರು. ಕೃಷ್ಣನಿಗೂ-ರುಕ್ಮಿಣಿಗೂ ಮದುವೆ ಮಾಡಿದರು. ಬ್ರಹ್ಮ ತ್ರಿಮೂರ್ತಿಗಳು ಧಾರೆ ಎರೆದರು. ಇಂತಹ ಪುಣ್ಯದ ಕಥೆಯನ್ನು

ಕೇಳಿದವರಿಗೆ 'ರುಕ್ಮಿಣಿ ಕಲ್ಯಾಣ ಕೇಳಿದವರಿಗೆ' ಮಾಡಿದ ಪಾಪವೆಲ್ಲಾ ಪರಿಹಾರ ಆಗುವುದೆಂದು ಹರಿಯ ಸ್ಮರಣೆ ಮಾಡಿಯೆಂದು ಜನಪದರು ಹೇಳಿದ್ದಾರೆ.

ಹಿಂದೂ ಧರ್ಮದಲ್ಲಿ ರುಕ್ಮಿಣಿ ಕೃಷ್ಣನ ಮೊದಲನೆಯ ಪತ್ನಿ ಹಾಗೂ ದ್ವಾರಕ ನಗರದ ರಾಣಿ. ಕೃಷ್ಣ ಪರಾಕ್ರಮವನ್ನು ನಾರದರಿಂದ ಕೇಳಿ ರುಕ್ಮಿಣಿ ಆತನೇ ತನ್ನ ಪತಿಯೆಂದು ಮನಸ್ಸಿನಲ್ಲಿ ದೃಢವಾಗಿ ಬೇರೂರಿದ್ದಳು. ತಂದೆ ಬೇರೊಬ್ಬರಿಗೆ ಮದುವೆ ಮಾಡಬೇಕೆಂದು ಕೊಂಡಾಗ ಮಾನಸಿಕವಾಗಿ ಕುಗ್ಗಿದಳು. ಅಂತಹ ಸಂದರ್ಭದಲ್ಲಿ ಶ್ರೀಕೃಷ್ಣ ಕೊರವಂಜಿಯ ವೇಷ ಧರಿಸಿ ಬಂದು ರುಕ್ಮಿಣಿಯನ್ನು ತಾನು ಮದುವೆಯಾಗುತ್ತೇನೆಂದು ಪರೋಕ್ಷವಾಗಿ ಹೇಳಿ ರುಕ್ಮಿಣಿಯನ್ನು ಸಂತೋಷಪಡಿಸಿದನು. ನಂತರ ಮದುವೆಗೆ ಸಿದ್ಧತೆ ಮಾಡಿಕೊಂಡು ಕೊರವಂಜಿ ವೇಷ ಕಳಚಿ ಕೃಷ್ಣನ ಅವತಾರದಲ್ಲಿ ಬಂದು ಮದುವೆ ಆಗುತ್ತಾನೆ.

ಜನಪದರಲ್ಲಿ ಸಾಮಾನ್ಯವಾಗಿ ಮದುವೆಯ ದಿನ ಮಂಟಪದಲ್ಲಿ ಮದುವೆ ನಿಂತರೆ ಮರಳಿ ಕಂಕಣ ಭಾಗ್ಯ ಬರುವುದಿಲ್ಲ ಎಂಬ ನಂಬಿಕೆಯು ಬೇರೂರಿದೆ. ಆದ್ದರಿಂದ ಎಷ್ಟೇ, ಏನೇ ಸಂಕಷ್ಟ ಎದುರಾದರೂ ಕೂಡ ಮದುವೆ ಮಾಡಿ ಮುಗಿಸುತ್ತಾರೆ. ಮದುವೆ ಎನ್ನುವುದು ಪ್ರತಿಯೊಬ್ಬ ಮಹಿಳೆಗೆ ಕಟ್ಟಿಟ್ಟ ಬುತ್ತಿ. ಹೆಣ್ಣು ಶಿಶು ಜನನವಾಯಿತೆಂದರೆ ಸಾಕು ಆಗಲೇ ಆಕೆಯ ಮದುವೆ ಎಂಬ ಬುತ್ತಿಯನ್ನು ಕಟ್ಟಲು ಪ್ರಾರಂಭಿಸುತ್ತಾರೆ. ಆಕೆ ವಯಸ್ಸಿಗೆ ಬರುವ ಹೊತ್ತಿಗೆ ದೊಡ್ಡ ಗಂಟು ಆಗಿರುತ್ತದೆ. ಆ ಭಾರವನ್ನು ಆಕೆಯ ತಲೆಯ ಮೇಲೆ ಹೊರಿಸಿ ಕಳುಹಿಸಿಬಿಡುತ್ತಾರೆ. ಆದರೆ ಆಕೆಗೆ ಭಾರವನ್ನು ಹೊರುವಷ್ಟು ಶಕ್ತಿ ಕೂಡ ಇರುವುದಿಲ್ಲ. ಕುಟುಂಬ ತಮ್ಮ ಜವಾಬ್ದಾರಿ ಕಳೆದುಕೊಳ್ಳಲು ತಮ್ಮ ಅಂತಹ ಹೆಣ್ಣುಮಕ್ಕಳಿಗೆ ಆ ಭಾರವನ್ನು ಹೊರಿಸಿ ತಮ್ಮ ಕರ್ತವ್ಯಕ್ಕೆ ತಿಲಾಂಜಲಿ- ಯನ್ನಿತ್ತುಬಿಡುತ್ತಾರೆ. ಮದುವೆಯಾಗದೆ ಇದ್ದರೆ ಸಮಾಜದ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಯಾವುದೇ ಒಂದು ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದ್ದಾಂಗ, ಸೆರಗಿನಲ್ಲಿ ಕೆಂಡ ಕಟ್ಟಿಕೊಂಡ ಹಾಗೇ ಎಂದು ಯೋಚಿಸಿ ಮದುವೆಯ ಬಗ್ಗೆ ಯೋಚನೆ ಮಾಡುತ್ತಾರೆ. ಜನಪದರು ಹೆಣ್ಣುಮಕ್ಕಳನ್ನು ಬಹಳ ವರ್ಷದ ಕಾಲ ಮದುವೆ ಮಾಡದೇ ಬಿಡುತ್ತಿರಲಿಲ್ಲ. ಈಗಲೂ ಎಷ್ಟೋ ಜನಪದರು ಕೂಡಾ ಹೀಗೆ ಮಾಡುತ್ತಾರೆ. ಮದುವೆಯೇ ಜೀವನ ಎಂದೂ ತಿಳಿದುಬಿಟ್ಟಿದ್ದಾರೆ. ಜೀವನದ ಒಂದು ಭಾಗ ಮದುವೆ ಎಂಬುದನ್ನು ತಿಳಿಯುವ ಅವಶ್ಯಕತೆ ಇದೆ.

೩.೪. ದಾಂಪತ್ಯ ಬದುಕು :

ದಾಂಪತ್ಯ ಎನ್ನುವುದು ಮದುವೆಯ ನಂತರದಲ್ಲಿ ಬರುವಂತಹ ಘಟ್ಟ. ಗಂಡ-ಹೆಂಡತಿಯರು ನವಜೀವನವನ್ನು ನಡೆಸುವಂತಹ ಕಾಲ. ಕುಟುಂಬದ ಕಾರ್ಯಗಳನ್ನು ಸತಿ-ಪತಿಗಳಿಬ್ಬರೂ ಸಮಾನವಾಗಿ ಹಂಚಿಕೊಂಡು ಎರಡೂ ಮನಸ್ಸುಗಳು ಒಂದಾಗಿ ಒಬ್ಬರಿಗೊಬ್ಬರು ಸಹಕರಿಸಿಕೊಂಡು ಸುಂದರವಾಗಿ ಜೀವನ ನಡೆಸಿಕೊಂಡು ಹೋಗುವುದೇ ದಾಂಪತ್ಯ. ಈ ದಾಂಪತ್ಯದಲ್ಲಿ ಸರಸ-ವಿರಸಗಳು, ಏರು-ಪೇರುಗಳು, ಕಷ್ಟ-ಸುಖಗಳು ಇದ್ದೇ ಇರುತ್ತವೆ. ಆದರೆ ಬದುಕಿನ ಬಂಡಿ ಸರಾಗವಾಗಿ ಸಾಗಬೇಕಾದರೆ ಒಬ್ಬರನ್ನೊಬ್ಬರು ಅರ್ಥೈಯಿಸಿಕೊಂಡು ಹೋಗುವುದು ಪ್ರಮುಖವಾಗಿದೆ. ಇಲ್ಲಿ ಬೇಂದ್ರೆಯವರ ಮಾತು ನಮಗೆ ನೆನಪಿಗೆ ಬರುತ್ತದೆ 'ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ' ಎಂದು ಹೇಳುವ ಮೂಲಕ ದಾಂಪತ್ಯ ಎಂಬುದು ಸತ್ವವನ್ನು ಹೊಂದಿದ್ದು ಅದನ್ನು ಅರಿತು ಬಾಳಿದರೆ ಇಡೀ ಕೌಟುಂಬಿಕ ವಾತಾವರಣ ಸುಖಮಯವಾಗಿರುತ್ತದೆ ಎಂಬ ಅರ್ಥವನ್ನು ತಿಳಿಸಿದ್ದಾರೆ. ದಾಂಪತ್ಯ ಸಂಬಂಧ ಒಂದು ಪವಿತ್ರವಾದ ಜೀವನ ಪರ್ಯಂತವೂ ಉಳಿಯುವ ಸಾಮಾಜಿಕ ಸಂಬಂಧವಾಗಿದೆ. ಆದ್ದರಿಂದ ಅಂತಹ ಜೀವನವನ್ನು ಉಳಿಸಿ ಬೆಳೆಸಿಕೊಂಡು ಹೋದರೆ ದಾಂಪತ್ಯ ಜೀವನ ಸಾರ್ಥಕ್ಯಗೊಳ್ಳುತ್ತದೆ. ದಾಂಪತ್ಯ ಎಂಬುದು "'ದಂಪತೀ' ಎಂಬುದರ ತದ್ಧಿತ ರೂಪ ಇಲ್ಲವೆ ಭಾವವಾಚಕ ನಾಮ. 'ದಂಪತ್ಯೋಃ ಭಾವಃ ದಾಂಪತ್ಯಂ।' ಸತಿ-ಪತಿಯರ ನಡುವಣ ಮಧುರ ಸಂಬಂಧ. ಅವರ ಸ್ನೇಹಮಯ ಜೀವನ, ಅವರ ಬಯಕೆ-ಆಕಾಂಕ್ಷೆಗಳೆಲ್ಲ ದಾಂಪತ್ಯ ಪದದಲ್ಲಿ ಅಭಿವ್ಯಕ್ತ ಅಂತರ್ಗತ."[೩೩] ಸತಿಪತಿಗಳಿಬ್ಬರಲ್ಲಿಯೂ ಅಹಂ ಭಾವನೆ ಇರದೇ ಸ್ನೇಹಜೀವಿಯಾಗಿ ಬದುಕಿದರೆ ದಾಂಪತ್ಯದಲ್ಲಿ ಬಿರುಕು ಬರಲು ಸಾಧ್ಯವಿಲ್ಲ. ದಾಂಪತ್ಯ ಎನ್ನುವುದು ಎರಡು ಹೃದಯಗಳ ವಿಶಾಲ ವ್ಯಾಪ್ತಿಯನ್ನು ಒಳಗೊಂಡಿದ್ದು, ಕುಟುಂಬದಲ್ಲಿ ಸತಿ-ಪತಿಗಳು ಕಾಣಸಿಗುವ ಎರಡು ಬಿಂಬಗಳು. ಹಾಗೂ ಸತಿ-ಪತಿಗಳನ್ನು ರಥದ ಎರಡು ಚಕ್ರಗಳಿಗೆ ಹೋಲಿಸುವುದು ಸೂಕ್ತವೆನಿಸುತ್ತದೆ. ಏಕೆಂದರೆ ಎರಡು ಚಕ್ರ ಸುಗಮವಾಗಿ ಸಾಗಿದರೆ ಸುರಕ್ಷತೆಯಿಂದ ಇರಲು ಸಾಧ್ಯ. ಒಂದು ಚಕ್ರ ತಪ್ಪಿದರೂ ಕುಟುಂಬ ಎಂಬ ರಥ ಅಲ್ಲೋಲ-ಕಲ್ಲೋಲವಾಗಲು ಯಾವುದೇ ಸಂದೇಹವಿಲ್ಲ.

'ಸತೀ' ಎಂಬುದಕ್ಕೆ 'ಜಾಯಾ' ಎಂಬುದು ಸಮಾನಾರ್ಥಕ ಪದ. ಸತಿಯು 'ಜಾಯಾ' ಎನಿಸಿಕೊಳ್ಳುವುದಕ್ಕೆ ಕಾರಣ ಉಂಟು. ಜಾಯಾಯಾಸ್ತದ್ಧಿ ಜಾಯಾತ್ವಂ ಯದಸ್ಯಾಂ ಜಾಯತೇ

---

೩೩. ದಾಂಪತ್ಯ ಸಂಪದ : ಶರಣಬಸಪ್ಪ ಕೋಲ್ಕಾರ, ಪು.೧೧೦

ಪುನಃ। ಪತಿಯು ಸತಿಯಲ್ಲಿ ಪುತ್ರರೂಪದಿಂದ ಮತ್ತೆ ಜನಿಸಿ ಬರುವುದರಿಂದ ಆಕೆ 'ಜಾಯಾ' ಎಂದು ಕರೆಯಿಸಿಕೊಳ್ಳುವುದು. 'ಜಾಯಾ' ಮತ್ತು ಪತಿ (ಮಡದಿ ಮತ್ತು ಯಜಮಾನ) ಎಂಬೆರಡು ಪದಗಳು ದ್ವಂದ್ವ ಸಮಾಸದಲ್ಲಿ ಸೇರಿಕೊಂಡಾಗ ಉಂಟಾಗುವ ರೂಪಗಳು ಮೂರು; 'ಜಾಯಾಪತೀ', 'ಜಂಪತೀ' ಮತ್ತು 'ದಂಪತೀ'. ಇವುಗಳಲ್ಲಿ ಕೊನೆಯದು ಹೆಚ್ಚು ಬಳಕೆಯಲ್ಲಿರುವ ರೂಪ"[೩೪] ಹೀಗೆ ದಾಂಪತ್ಯ ಎಂಬ ಪದ ತನ್ನದೇಯಾದ ವಿಶಿಷ್ಟ ಅರ್ಥವನ್ನು ಒಳಗೊಂಡು ಕುಟುಂಬದಲ್ಲಿ ನೆಲೆಗೊಂಡಿದೆ. ಕುಟುಂಬದಲ್ಲಿಯ ದಾಂಪತ್ಯದ ಸಾಫಲ್ಯವನ್ನು ಬೇಂದ್ರೆಯವರು ತಮ್ಮ ಸತಿಯನ್ನು ಒಲವಿನ ಬಾಳ ಗೆಳತಿಯನ್ನಾಗಿ ಆಹ್ವಾನಿಸುವ ಬಗೆ ಹೀಗಿದೆ:

> 'ಘಜಾರಗಟ್ಟಿ ಮುಟ್ಟೋಣ ಬಾ
> ಹಿಂದಿನ ಆಟಾ ಮುಗಿಸೋಣ
> ಮುಂದಿನ ಆಟಾ ನಡೆಸೋಣ ಬಾ'

ಕಣ್ಣು ಮುಚ್ಚಾಟದಲ್ಲಿ ಘಜಾರಗಟ್ಟಿಯನ್ನು ಮುಟ್ಟಿದವರು ಪಾರಾದಂತೆ. ಅದರಂತೆ ಜೀವನದಲ್ಲಿ ಧರ್ಮ, ಅರ್ಥ ಹಾಗೂ ಕಾಮವೆನ್ನುವ ಪುರುಷಾರ್ಥಗಳನ್ನು ಸಾಧಿಸಿದವರು ಬದುಕಿನ ಘಜಾರಗಟ್ಟಿಯನ್ನು ಮುಟ್ಟಿದಂತೆ. ಆದಕಾರಣ ಬೇಂದ್ರೆಯವರು ತಮ್ಮ ಹೆಂಡತಿಗೆ ಘಜಾರಗಟ್ಟಿಯನ್ನು ಮುಟ್ಟಲು ಕರೆ ನೀಡುತ್ತಿದ್ದಾರೆ. ಅಂದರೆ ಗ್ರಹಸ್ಥಾಶ್ರಮದ ಕೊನೆಯ ಆಟ ಮೋಕ್ಷ. ಜೀವಿಗಳ ಕಣ್ಣು ಮುಚ್ಚಿ ಸಂಸಾರಕ್ಕೆ ಕಳಿಸಿ ಮಾಯೆ ಎಂಬುದು ಬದುಕಿನಲ್ಲಿ ಆಟವಾಡಿಸುತ್ತದೆ. ಜೀವನದಲ್ಲಿ ಸಾಕಷ್ಟು ಅನುಭವಗಳನ್ನು ಹೊಂದಿ ಬೆಂದ ಬೇಂದ್ರೆಯವರು ದಾಂಪತ್ಯದ ಸಾರ್ಥಕತೆಯ ಬಗ್ಗೆ ತಮ್ಮದೇ ಆದಂತಹ ಮಹತ್ವಪೂರ್ಣ ವಿಚಾರಗಳನ್ನು ತಮ್ಮ ಸಾಹಿತ್ಯದಲ್ಲಿ ಒಡಮೂಡಿಸಿದ್ದಾರೆ.

'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ಹೇಳುವ ಜೇಡರ ದಾಸಿಮಯ್ಯನವರು ದಾಂಪತ್ಯದಲ್ಲಿ ಸತಿ-ಪತಿಗಳು ಒಂದಾಗಿ ಪರಸ್ಪರ ಅರಿತು ನಡೆಯುವ ದಾಂಪತ್ಯವು ಶಿವನಿಗೆ ಮೆಚ್ಚುಗೆಯಾಗುತ್ತದೆ ಎಂದು ಹೇಳುವರು. ಆದರೆ ಕಥನಗೀತೆಗಳಲ್ಲಿ ಅರಿತು ಬಾಳಿದರೂ ಕೂಡ ಅಂದಿನ ಸಾಮಾಜಿಕ ವ್ಯವಸ್ಥೆಯ ದಾಂಪತ್ಯ ಚಿತ್ರಣ ವಿಭಿನ್ನವಾಗಿದೆ ಎಂಬುದು ಕೆಲವೊಂದು ಕಥನಗೀತೆಗಳ ಮೂಲಕ ಸ್ಪಷ್ಟವಾಗುತ್ತದೆ.

---

೩೪. ದಾಂಪತ್ಯ ಸಂಪದ : ಶರಣಬಸಪ್ಪ ಕೋಲ್ಕಾರ, ಪು.೧೧೦

ಜನಪದ ಸಾಹಿತ್ಯದಲ್ಲಿ ತನ್ನ ಪತಿ ಬಡವನಾಗಿದ್ದರೂ ತನಗೆ ಪತಿ ಬಂಗಾರವೆಂದು ಹೇಳುವ ಜನಪದ ಮಹಿಳೆ ಬಡತನದಲ್ಲಿಯೇ ಸಿರಿತನ ಕಾಣುವ ಪರಿಯನ್ನು ಹೀಗೆ ಹೇಳುವಳು:

ಕೂಲಿ ಮಾಡಿದರೇನ ಕೋರಿ(ಕುವರಿ)ಹೆತ್ತರೇನ
ನನಗ ನನ ರಾಮು ಬಡವೇನ ಬಂಗಾರದ
ಮಾಲ ಇದ್ಹಾಂಗ ಮನಿಯಾಗ

ಹೀಗೆ ದಾಂಪತ್ಯ ತನ್ನದೇಯಾದ ವೈಶಿಷ್ಟ್ಯತೆಯನ್ನು ಹೊಂದಿದ್ದು ದಾಂಪತ್ಯ ಜೀವನದಲ್ಲಿ ಅಧಮ ದಾಂಪತ್ಯ, ಮಧ್ಯಮ ದಾಂಪತ್ಯ, ಉತ್ತಮ ದಾಂಪತ್ಯ, ಉತ್ತಮೋತ್ತಮ ದಾಂಪತ್ಯ ಎಂದು ನಾಲ್ಕು ಪ್ರಕಾರಗಳು ಕಂಡುಬರುತ್ತವೆ.

* **ಅಧಮ ದಾಂಪತ್ಯ :**

ಧರ್ಮ, ಅರ್ಥ, ಮೋಕ್ಷಗಳನ್ನು ಒಂದು ಮೂಲೆಗೆ ತಳ್ಳಿ ಪಶುಪಕ್ಷಿಗಳಿಗಿಂತಲೂ ಕಷ್ಟದ ಬದುಕನ್ನು ನೂಕುತ್ತ, ಹೊಡೆತ, ಜಗಳ, ಅಶ್ಲೀಲ ಬೈಗುಳಗಳಿಂದಲೇ ದಿನಚರಿ ಪ್ರಾರಂಭ. ಗಂಡನೆಂದರೆ ಹೆಂಡತಿಗೆ ಅಸಡ್ಡೆ, ಅಗೌರವ. ಹೆಂಡತಿಯೆಂದರೆ ಕಾಮದ ವಸ್ತು. ಅವಳ ಬೇಕು ಬೇಡುಗಳಿಗೆ ನಿರ್ಲಕ್ಷ ಹಾಗೂ ತಿರಸ್ಕಾರ. ಇಂತಹ ಬಾಳು ಅಧಃಪತನಕ್ಕೆ ಇಳಿಯುತ್ತದೆ. ಈ ತರಹದ ದಾಂಪತ್ಯ ಚಿತ್ರಣ ಪ್ರಾಚೀನ ಕಾಲದಿಂದಲೂ ಕಂಡುಬಂದಿವೆ. ಇಂದಿಗೂ ಕೂಡ ಕಾಣಸಿಗುತ್ತವೆ. ಈ ರೀತಿಯ ದಾಂಪತ್ಯದಿಂದ ಅಶಾಂತಿ, ಬದುಕಿನ ಬಗ್ಗೆ ನಿರಾಸೆ ಮುಂತಾದ ಕೆಟ್ಟ ಮಾರ್ಗಗಳು ಎದುರಾಗುತ್ತವೆ.

* **ಮಧ್ಯಮ ದಾಂಪತ್ಯ :**

ಈ ದಾಂಪತ್ಯದಲ್ಲಿ ಪತಿ-ಪತ್ನಿಯರಿಬ್ಬರೂ ಅರ್ಥಮಾಡಿಕೊಳ್ಳುವುದಕ್ಕಿಂತ, ಅನರ್ಥ ಅಪಾರ್ಥ ಅಧಿಕ. ಇದಲ್ಲದೇ ಆಚಾರ-ವಿಚಾರದಲ್ಲಿ ಸದಾ ಭಿನ್ನಾಭಿಪ್ರಾಯ. ಮದುವೆಯಾಗಿದೆ ಎಂಬ ಕಾರಣಕ್ಕಾಗಿ ಬೇಡದ ಬದುಕನ್ನು ದೂಡುತ್ತಾರೆ. ಈ ತರಹದ ದಾಂಪತ್ಯದಲ್ಲಿಯೂ ಸಹ ಮನಃಶಾಂತಿ ದೊರೆಯದೇ ಒತ್ತಾಯಪೂರ್ವಕ ಬದುಕನ್ನು ಸಾಗಿಸುತ್ತಾರೆ. ಆದರೆ ಇಂತಹ ಬದುಕಿನಿಂದ ದಾಂಪತ್ಯ ಎಂಬ ಪದಕ್ಕೆ ಧಕ್ಕೆ ಉಂಟಾಗುತ್ತದೆ.

*** ಉತ್ತಮ ದಾಂಪತ್ಯ :**

ಇದರಲ್ಲಿ ಇಬ್ಬರೂ ಹೊಂದಾಣಿಕೆಯಿಂದ, ಅರ್ಥ ಮಾಡಿಕೊಂಡು, ಗೌರವದಿಂದ ಅಚ್ಚುಕಟ್ಟಾಗಿ ದಾಂಪತ್ಯ ಜೀವನ ನಡೆಸುತ್ತಾರೆ. ಸುಖ-ದುಃಖ, ನೋವು-ನಲಿವು, ಸೋಲು-ಗೆಲುವುಗಳಿಗೆ ಒಬ್ಬರಿಗೊಬ್ಬರು ಸ್ಪಂದಿಸುತ್ತಾರೆ. ಸಮಾಜದಲ್ಲಿ ಆದರ್ಶ ದಂಪತಿಗಳಾಗಿ ಬದುಕುತ್ತಾರೆ.

*** ಉತ್ತಮೋತ್ತಮ ದಾಂಪತ್ಯ :**

ಆಚಾರ-ವಿಚಾರಗಳಲ್ಲಿ ಬೇಕು ಬೇಡಿಕೆಗಳಲ್ಲಿ ಸಮರಸವಾಗಿ ಏಕವಾಗಿರುತ್ತದೆ. ಹೃದಯಬಿಚ್ಚಿ, ಹೃದಯ-ಹೃದಯಗಳು ಒಪ್ಪಿ, ಅರಿತು ನಿರ್ಮಲವಾದ ಆನಂದವನ್ನು ಅನುಭವಿಸುತ್ತಾರೆ. ಹೀಗೆಂದಾಕ್ಷಣ ಭಿನ್ನಾಭಿಪ್ರಾಯ ಬರುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಹಾಗೆ ಬಂದಾಗ ವಿರಹದ, ವಿಯೋಗದ ಕಳವಳವನ್ನು ಅನುಭವಿಸುತ್ತಾರೆ ಹಾಗೂ ವಿವೇಕಯುತವಾದ ಹೊಂದಾಣಿಕೆಯಿಂದ ಮತ್ತೆ ಒಂದಾಗುತ್ತಾರೆ.

ಇಷ್ಟೆಲ್ಲಾ ದಾಂಪತ್ಯ ಕುರಿತು ವಿವಿಧ ಪ್ರಕಾರಗಳಿದ್ದು, ಅವು ತಮ್ಮದೇಯಾದ ಲಕ್ಷಣಗಳನ್ನು ಹೊಂದಿವೆ. ಇವುಗಳಲ್ಲಿ ಹೆಚ್ಚು ಉತ್ತಮ ದಾಂಪತ್ಯವನ್ನು ಹೊಂದಿ ಸಾಗಿದ ಚಿತ್ರಣವನ್ನು ಕಥನಗೀತೆಗಳಲ್ಲಿ ಕಾಣುತ್ತೇವೆ. ಆದರೆ ದುರಂತವೆಂದರೆ ಸಮಾಜದ, ಕುಟುಂಬದ ಕಟ್ಟುಪಾಡು ಆಚರಣೆಗಳು ದಾಂಪತ್ಯ ಜೀವನಕ್ಕೆ ಮುಳ್ಳಾಗಿ ಅವರ ದಾಂಪತ್ಯ ಜೀವನಕ್ಕೆ ಅಡ್ಡಿಯಾಗುತ್ತಿದ್ದ ವೆಂಬುದು ಕಂಡುಬರುತ್ತದೆ. ಇಂದಿನ ದಾಂಪತ್ಯ ಚಿತ್ರಣ ಅವಲೋಕಿಸಿದರೆ ಹೊಂದಾಣಿಕೆ, ನಂಬಿಕೆ, ವಿಶ್ವಾಸಗಳ ಕೊರತೆ ಎದ್ದು ಕಾಣತ್ತದೆ. ಕಾನೂನು ಕ್ರಮಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ.

ಜನಪದ ಕಥನಗೀತೆಗಳಲ್ಲಿ ಸತಿ-ಪತಿಗಳಿಗೆ ಸ್ವಾತಂತ್ರ್ಯವೆಂಬುದೇ ಇರಲೇ ಇಲ್ಲ. ಮುಕ್ತ ಮನಸ್ಸಿನಿಂದ ಮಾತನಾಡಲು ಅವಕಾಶದಿಂದ ವಂಚಿತರಾಗಿದ್ದರೂ ಮಾತನಾಡುವುದು ಅಷ್ಟೇ ಅಲ್ಲ ಒಬ್ಬರಿಗೊಬ್ಬರು ಸಂಪೂರ್ಣವಾಗಿ ನೋಡಲು ಸಹ ಸ್ವಾತಂತ್ರ್ಯದಿಂದ ಅನರ್ಹಳು. ಸಂಪ್ರದಾಯಗಳೊಡನೆ ಮತ್ತು ಸಮಾಜದ ನೀತಿ-ನಿಯಮಗಳಡಿಯಲ್ಲಿಯೇ ಈ ದಾಂಪತ್ಯ ಬದುಕು ಸಾಗಬೇಕಾಗಿತ್ತು. ಕೇವಲ ಮಹಿಳೆ ಕಾಮದ ವಸ್ತುವಾಗಿದ್ದಳು ಎನಿಸುತ್ತದೆ. ಗಂಡನಿಗೆ ಗೊತ್ತಿರದೇ ಕೊಂಡಕ್ಕೆ, ಕೆರೆಗೆ ಬಲಿಯಾದ ಮಹಿಳೆಯರನ್ನು ಕಥನಗೀತೆಗಳಲ್ಲಿ ಕಾಣುತ್ತೇವೆ. ಹೆಣ್ಣಿನ ತವರು, ಗಂಡನ ಮನೆಯಲ್ಲಿ ಅವರು ನಿರ್ಮಿಸಿದ ಬಂಧನದಲ್ಲಿ ಕಟ್ಟಳೆಗಳನ್ನು ತನ್ನ

ಜೀವನದ ಅವಿಭಾಜ್ಯ ಅಂಗಗಳೆಂದು ಭಾವಿಸಿ ಅದಕ್ಕೆ ಶರಣಾಗಿದ್ದಳು. ಆತ ದಂಡಿನ ಮೇಲೆ ವ್ಯಾಪಾರಕ್ಕೆಂದು ಹೋಗುವ ವಾಡಿಕೆ ಇತ್ತು. ಆತ ಮರಳಿ ಬಾರದೇ ಇದ್ದಾಗ ಇಂತಹ ಘಟನೆಗಳು ನಡೆಯುತ್ತಿದ್ದವು. ಅದರಲ್ಲೂ ಕುಟುಂಬವೇ ನಿಂತು ವಿಜೃಂಭಣೆಯಿಂದಲೇ ನಡೆಸುತ್ತಿದ್ದುದು ದುರಂತವಾಗಿದೆ. ಅಂತಹ ಕೆಲವೊಂದು ಘಟನೆಗಳನ್ನು ಕೆಲವೊಂದು ಕಥನಗೀತೆಗಳಲ್ಲಿ ಕಂಡುಬರುವ ದಾಂಪತ್ಯ ಚಿತ್ರಣದ ಮೂಲಕ ತಿಳಿಯಬಹುದಾಗಿದೆ.

ಭಾಗೀರಥಿ – ಮಹಾದೇವರಾಯ :

ಕೆರೆಗೆ ಹಾರ ಕಥನಗೀತೆಯಲ್ಲಿ ಭಾಗೀರಥಿ ಮತ್ತು ಮಹಾದೇವರಾಯನಲ್ಲಿ ಉತ್ತಮ ದಾಂಪತ್ಯ ಬದುಕು ಇತ್ತು. ಭಾಗೀರಥಿಯ ಗಂಡ ದಂಡಿಗೆ ಹೋಗಿರುತ್ತಾನೆ. ಗಂಡ ಮನೆಯಲ್ಲಿರದಾಗ ಭಾಗೀರಥಿಯನ್ನು ಕೆರೆಗೆ ಹಾರ(ಬಲಿ) ಕೊಡುವುದಾಗಿ ನಿರ್ಧರಿಸುತ್ತಾರೆ. ಸಮಾಜದ ಹಿತಕ್ಕಾಗಿ ಮೂಕಳಾಗಿ ಕೆರೆಗೆ ಹಾರವಾಗುತ್ತಾಳೆ. ದಂಡಿಗೆ ಹೋಗಿ ಬಂದ ಗಂಡ ಭಾಗೀರಥಿಯು ಕೆರೆಗೆ ಬಲಿಯಾಗಿರುವಂತಹ ಸುದ್ದಿ ಕೇಳಿ ಭಾಗೀರಥಿಗಾಗಿ ಪರಿತಪಿಸುತ್ತಾನೆ. ಗೋಗರೆಯುತ್ತಾನೆ. ಕೊನೆಗೆ ಆಕೆ ಹಾರವಾದ ಕೆರೆಗೆ ಹೋಗಿ ಹಾರುತ್ತಾನೆ. ಇವರಿಬ್ಬರ ಮಧ್ಯದಲ್ಲಿ ದಾಂಪತ್ಯದ ಬದುಕು ಎಷ್ಟು ಅನ್ಯೋನ್ಯವಾಗಿತ್ತು, ಆಳವಾದ ಪ್ರೀತಿಯಿತ್ತು ಎಂಬುದು ಇವರಿಬ್ಬರೂ ಕೆರೆಗೆ ಹಾರಿ ಪ್ರಾಣಬಿಟ್ಟದ್ದರಲ್ಲಿಯೇ ಮನವರಿಕೆಯಾಗುತ್ತದೆ. ಆದರೆ ಕುಟುಂಬ, ಸಮಾಜ ಅವರಿಬ್ಬರ ದಾಂಪತ್ಯ ಬದುಕಿನಲ್ಲಿ ಬೆಂಕಿ ಕಿಡಿಗಳಾಗಿದ್ದವು. ಕಾರಣ ಸೊಸೆಯಾದವಳು ಅತ್ತೆ–ಮಾವರಿಗಂಜಿ, ಸುತ್ತೇಳು ನೆರೆಗಂಜಿ, ಮತ್ತೆ ನಲ್ಲನ ದನಿಗಂಜಿ, ಜೊತೆಗೆ ಅತ್ತೆಯ ಮನೆಯವರು ಹತ್ತಾರೂ ಮಾತನಾಡಿದರೂ ತಿರುಗಿ ಉತ್ತರ ಕೊಡದೆ ಉತ್ತಮರ ಮಗಳು ಎಂದು ಜನರು ಮೆಚ್ಚುವಂತೆ ಬದುಕಬೇಕೆಂಬ ಆದರ್ಶ ಸತಿಯ ಧರ್ಮವಾಗಿತ್ತು. ಇಂತಹ ವಿಧಿ–ನಿಷೇಧದಿಂದಾಗಿಯೇ ಮಹಿಳೆಯರು ಪ್ರಶ್ನೆ ಮತ್ತು ಪ್ರತಿಭಟನೆಯನ್ನು ಕಸಿದುಕೊಂಡು ಸಮಾಜ ಆಕೆಯನ್ನು ಮೂಕಳನ್ನಾಗಿಸಿದೆ. ಇದರಿಂದಲೇ ಅನೇಕ ತ್ಯಾಗ, ಬಲಿದಾನದಂತಹ, ಸಹಗಮನದಂತಹ ದುರಂತಗಳು ನಡೆಯಲು ಕಾರಣವಾಗುತ್ತಿದ್ದವು. ಆಕೆ ತನ್ನ ನಿವೇದನೆಗಳನ್ನು ಹಂಚಿಕೊಳ್ಳಲು ಯಾರೂ ಇಲ್ಲದಷ್ಟು ಶೋಷಣೆಗೊಳಗಾಗಿದ್ದಳು. ಗಂಡನಲ್ಲಿ ಹೇಳಿಕೊಳ್ಳಬೇಕೆಂದರೆ ಆತ ಇಲ್ಲದಿರುವಾಗ ಆಕೆಯನ್ನು ಬಲಿಕೊಡಲು ನಿರ್ಧರಿಸಿ ಆಕೆಯನ್ನು ಅಸಹಾಯಕಳನ್ನಾಗಿ ಮಾಡುತ್ತಾರೆ. ಆಕೆಗೆ ಅನಿವಾರ್ಯವಾಗಿ ಕೆರೆಗೆ ಬಲಿಯಾಗಬೇಕಾದ ಸ್ಥಿತಿ ಒದಗಿ ಬರುತ್ತದೆ.

ಮದಗದ ಕೆಂಚವ್ವ – ಗೂಳೇಶ :

ಈ ಕಥನಗೀತೆಯಲ್ಲಿ ಕೆಂಚವ್ವ ಮತ್ತು ಗೂಳೇಶರು ದಂಪತಿಗಳು. ಇವರ ದಾಂಪತ್ಯ ಬದುಕು ಕೂಡಾ ಬಹಳ ಕಾಲ ಬಾಳುವುದಿಲ್ಲ. ಕೆರೆಗೆ ಬಲಿ ಕೊಡುವುದಕ್ಕಾಗಿಯೇ ಕೆಂಚವ್ವಳನ್ನು ಸೊಸೆಯಾಗಿ ಬರಮಾಡಿಕೊಂಡ ಕುಟುಂಬದವರು ಮಗನಾದ ಗೂಳೇಶನನ್ನು ಹೊನ್ನು ಸಂಪಾದಿಸಲು ಕಳುಹಿಸುತ್ತಾರೆ. ಕೆಂಚವ್ವಳ ಅಪ್ಪಣೆಯನ್ನು ಕೇಳಲು ಬಂದ ಗೂಳೇಶನಿಗೆ ಹೆಂಡತಿ ಹೇಳಿದ ಮಾತು ಎಂದರೆ: ಮದುವೆಯಾಗಿ ಅರಿಶಿನ ಮೈಕೈ ಮಾಸಿಲ್ಲ. ಬಡತನ ಬಂದರೆ ಅವ್ವ ಅಪ್ಪನಿಗೆ ಹೇಳಿ ಮುತ್ತು ರತ್ನಗಳನ್ನು ತರಿಸುತ್ತೇನೆ, ಹೋಗಬೇಡಿ ಎಂದು ತನ್ನ ಗಂಡನಲ್ಲಿ ನಿವೇದಿಸಿಕೊಳ್ಳುವಳು. ಆದರೆ ಪತಿ ಗೂಳೇಶನು ಅದನ್ನು ಸಂಪಾದಿಸಿಯೇ ತರುವೆನೆಂದು ದೇಶದ ಮೇಲೆ ಹೊರಟನು. ಇವನು ಹೋದ ನಂತರ ಸೊಸೆಯಾದ ಕೆಂಚವ್ವಳನ್ನು ಈಕೆಯ ಅತ್ತೆ–ಮಾವಂದಿರು ಕಟ್ಟಿಸಿದ ಕೆರೆಯಲ್ಲಿ ನೀರು ಪಾಲಾದಳು. ಕಥನಗೀತೆಯಲ್ಲಿ ಗೂಳೇಶ–ಕೆಂಚವ್ವಳ ದಾಂಪತ್ಯ ಸೊಗಸಾಗಿಯೇ ಮೂಡಿ ಬಂದಿದೆ. ಆದರೆ ಗೂಳೇಶನು ವ್ಯಾಪಾರಕ್ಕೆ ಹೋದಾಗ ಅತ್ತೆ–ಮಾವಂದಿರ ಮೋಸಕ್ಕೆ ಬಲಿಯಾದವಳು ಕೆಂಚವ್ವ. ಇಲ್ಲಿ ಕುಟುಂಬವು ಇವರ ದಾಂಪತ್ಯವನ್ನು ಸೃಷ್ಟಿಸಿ ಕೆಂಚವ್ವಳಿಗೆ ಅನ್ಯಾಯ ಮಾಡಿದೆ. ಕೆಂಚವ್ವ ಇಲ್ಲಿ ಅತ್ತೆ–ಮಾವಂದಿರ ಕುತಂತ್ರವನ್ನು ಅರಿಯದ ಮುಗ್ಧ ಮಹಿಳೆಯಾಗಿ ಕಾಣುತ್ತಾಳೆ.

ವೀರ ತಿಮ್ಮವ್ವ – ನಾಗಣ್ಣ :

ಈ ಕಥನಗೀತೆಯ ವೀರನಾದ ನಾಗಣ್ಣ ಜಂಪವ್ವಳ ಮಗ. ಈಕೆ ಹಿರಿಯಟ್ಟಿಯಲ್ಲಿ ಹಾಲು–ಮಜ್ಜಿಗೆ ಮಾರುವ ಕಾಯಕ ಮಾಡುತ್ತಿದ್ದಳು. ನಾಗಣ್ಣ ದನ, ಎಮ್ಮೆ, ಆಡು ಕಾಯುವ ಕಾಯಕದಲ್ಲಿದ್ದನು. ಈತನು ಮೇಯುತ್ತಿರುವ ದನಗಳ ಮೇಲೆ ಎರಗಿ ಬರುತ್ತಿರುವ ಹುಲಿಯನ್ನು ಎತ್ತಿಕೊಳ್ಳುವಷ್ಟು ಪರಾಕ್ರಮಿ ಆಗಿದ್ದನು. ಈತನನ್ನು ವಿವಾಹವಾಗಲು ಹಲವಾರು ಹೆಣ್ಣುಮಕ್ಕಳು ಇಷ್ಟಪಟ್ಟರೂ ನಾಗಣ್ಣ ಹರ್ತಿಕೋಟೆಯ ತಿಮ್ಮವ್ವಳನ್ನು ಬಯಸಿ ಆಗತಾನೇ ಬುದ್ಧಿ ಬೆಳೆಯುವಂತಹ ಸಂದರ್ಭದಲ್ಲಿ ತಿಮ್ಮವ್ವಳನ್ನು ಹೆಂಡತಿಯಾಗಿ ಸ್ವೀಕರಿಸಿಯೇ ಬಿಟ್ಟ. ಮದುವೆಯಾದ ಕೆಲವೇ ವರ್ಷಗಳಲ್ಲಿ ನಾಗಣ್ಣ ಸಾಣೆ ಕೆರೆಯ ಬಳಿ ಆದ ಲಡಾಯದಲ್ಲಿ ಭಾಗವಹಿಸಿ ತೀರಿಕೊಂಡ. ತಿಮ್ಮವ್ವ ತನ್ನ ಎರಡೂ ಮಕ್ಕಳನ್ನು ಬಿಟ್ಟು ಬಂಧು–ಬಳಗದವರನ್ನು ಲೆಕ್ಕಿಸದೇ ಕೊಂಡಕ್ಕೇರಿ ಮಹಾಸತಿಯಾಗಿಬಿಟ್ಟಳು.

ತಿಮ್ಮವ್ವಳನ್ನು ತಾನು ಇಷ್ಟಪಟ್ಟೇ ಮದುವೆಯಾದನು. ಆದರೆ ಆಕೆಯೊಂದಿಗೆ ಬದುಕಲು ಆತನಿಗೆ ಅದೃಷ್ಟವಿರಲಿಲ್ಲ. ಅಷ್ಟೇ ಅಲ್ಲದೆ ಆಕೆಯೂ ಕೂಡ ಆತನ ಮೇಲಿನ ಪ್ರೀತಿಯಿಂದ ಗಂಡನನ್ನು ಸ್ವರ್ಗದಲ್ಲಾದರೂ ಸೇರಬಹುದೆಂಬ ನಂಬುಗೆಯಿಂದಲೇ ಕೊಂಡಕ್ಕೇರಿ ಮಹಾಸತಿಯಾಗಿರಬೇಕು ಎನಿಸುತ್ತದೆ.

ನಾಗಣ್ಣನು ಸತ್ತ ಸುದ್ದಿ ತಿಳಿದ ತಿಮ್ಮವ್ವ ತನ್ನ ಎರಡೂ ಮಕ್ಕಳನ್ನು ಬಿಟ್ಟು, ಬಂಧು-ಬಳಗದವರನ್ನು, ತಂದೆ-ತಾಯಂದಿರನ್ನು ಲೆಕ್ಕಿಸದೇ ಕೊಂಡವೇರಿ ಮಹಾಸತಿಯಾಗಿ ಸಮಾಜದ ಕಣ್ಣಲ್ಲಿ ದೇವತೆಯಾಗಿ ನೆಲೆಸಿದಳೆಂಬುದನ್ನು ಕಂಡರೆ ಯಾರಿಗೆಯಾಗಲಿ ಅವರ ಅನ್ಯೋನ್ಯ ದಾಂಪತ್ಯದ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಆದರೆ ಪತಿ-ಪತ್ನಿಯರಿಬ್ಬರೂ ಎಷ್ಟೇ ಪ್ರೀತಿ-ವಿಶ್ವಾಸ-ನಂಬಿಕೆಯಿಂದ ಬಾಳ್ವೆ ನಡೆಸುತ್ತಿದ್ದರೂ ಸಹ ಸಾಮಾಜಿಕ ಪದ್ಧತಿಗಳು ಧುತ್ತೆಂದು ಎದುರಿಗೆ ಬಂದು ನಿಲ್ಲುತ್ತಿದ್ದವು. ಅದರ ಅಡಿಯಲ್ಲಿಯೇ ಸಾಗುವುದು ಅನಿವಾರ್ಯವಾದ ಕಾರಣ ತಿಮ್ಮವ್ವ ಕೊಂಡವೇರಿ ತಮ್ಮ ಉತ್ತಮ ದಾಂಪತ್ಯದ ಚಿತ್ರಣವನ್ನು ವೈಭವೀಕರಿಸಿದ್ದಾಳೆ.

ಗಂಡ ಯುದ್ಧಕ್ಕೆ ಹೋದಾಗ ದಂಪತಿಗಳಲ್ಲಿದ್ದ ಮೂಢತೆಯನ್ನು ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಕಾಣುತ್ತೇವೆ: ಗಂಡ ಯುದ್ಧಕ್ಕೆ ಹೋದಾಗ ಅದರಲ್ಲಿ ಮಡಿದು ವೀರಸ್ವರ್ಗವನ್ನು ಸೇರುವನು. ಅಲ್ಲಿ ಅವನನ್ನು ಸ್ವಾಗತಿಸಲು ಅಪ್ಸರೆಯರು ನಿಂತಿರುವರು. ಅದಕ್ಕಾಗಿ ಅವರು ಅವನನ್ನು ಸ್ವಾಗತಿಸುವ ಪೂರ್ವದಲ್ಲಿಯೇ ಕೊಂಡವೇರಿ ಸ್ವರ್ಗ ಸೇರಿ ಸ್ವಾಗತಿಸಬೇಕೆಂಬ ಪೂರ್ವಾಗ್ರಹಪೀಡಿತತನವನ್ನು ಕಾಣುತ್ತೇವೆ. ಈ ಸಂಗತಿಯನ್ನು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುವ ದಂಪತಿಗಳ ಚಿತ್ರಣವನ್ನು ಪಂಪ ಈ ಕೆಳಗಿನಂತೆ ವಿವರಿಸುವನು.

"ನಿಜಪ್ರಾಣೇಶ್ವರನ ಪರಿಚ್ಛೇದಮನರಿದು ತನ್ನ ಸಾವಂ ಪರಿಚ್ಛೇದಿಸಿ
ತಾಂ ಗಡನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲ ಮಾ
ಣ್ದಾಂಗಡಮಿರ್ಪೆನಂತಿನಿತು ಬೆಳ್ಳನೆ, ಮುನ್ನಮೆ ಪೋಗಿ ನಲ್ಮೆಗೆ
ಲ್ಲಂ ಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವನೋವೊ ಸ
ಗ್ಗಂಗಳೊಳಿರ್ಪ ದೇವಡಿತಿ ತೊಳ್ತರೊಳಳ್ತಯನಾಗಲೀವೆನೇ
ಎಂದು ಕೈದವಮಿಲ್ಲದ ನಲ್ಮೆಯಿಂ ನಾಲಗೆಯ ತುದಿಗೆ ತಂದು ನುಡಿದಳ್"[೩೫]

೩೫. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರ ಕುಮಾರ ಹಕಾರಿ, ಪು.೨೧೧

ತನ್ನ ಪತಿಯ ಸಾವಿನ ನಂತರ ಅಡುವ ಮಾತು ಇಲ್ಲಿ ಅಭಿವ್ಯಕ್ತವಾಗಿದೆ. ತನ್ನ ಗಂಡನು ದೇವಲೋಕದ ಸ್ತ್ರೀಯರನ್ನೂ ಸೇರುವ ಮೊದಲು ತಾನು ಹೋಗಿ ಅವನನ್ನು ಎದುರುಗೊಂಡು ಅದನ್ನು ತಪ್ಪಿಸುವೆನೆಂದು ನುಡಿಯುವುದನ್ನು ಕೇಳಿದರೆ ಅಂದಿನ ದಾಂಪತ್ಯ ಚಿತ್ರಣ ವಿಭಿನ್ನವಾಗಿತ್ತು ಎಂದೂ, ದಂಪತಿಗಳು ಸಮಾಜ ನಂಬಿಸಿದ ಮೋಕ್ಷದ ಹಾದಿಯನ್ನು ಹುಡುಕಿ ಹೋಗುತ್ತಿರುವ ದಾರುಣ ಚಿತ್ರಣ ಕಣ್ಣಿಗೆ ಕಟ್ಟುವಂತಿದೆ.

ಈ ಕಥನಗೀತೆಗಳಲ್ಲಿ ಗಂಡನನ್ನು ಸ್ವರ್ಗದಲ್ಲಿ ಕೂಡಿದರೆ ಮೋಕ್ಷ ದೊರಕುತ್ತದೆ ಎಂಬ ನಂಬಿಕೆಯನ್ನು ಬಲವಾಗಿ ನಂಬಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅದಕ್ಕಾಗಿಯೇ ಬಹುಪಾಲು ಮಹಿಳೆಯರು ಕೊಂಡವೇರಲು ತಾವೇ ಸ್ವತಃ ಸನ್ನದ್ಧರಾಗುತ್ತಿದ್ದರು. ಕೆಲವೊಂದು ಬಾರಿ ಕುಟುಂಬದವರು ತಡೆದರೂ ಕೂಡ ಯಾರ ಮಾತನ್ನೂ ಕೇಳದೇ ಗಂಡ ತೀರಿದ ಸುದ್ದಿಯ ತಕ್ಷಣವೇ ಹೆಂಡತಿ ಕೊಂಡ ಹೋಗಲು ನಿರ್ಧರಿಸಿ ಹೋಗುತ್ತಿದ್ದಳು.

ಕಾಡಸಿದ್ದಮ್ಮ-ಚಿತ್ರದುರ್ಗವನ್ನು ಆಳುವ ಚಕ್ರವರ್ತಿ :

ಈ ಕಥನಗೀತೆಯಲ್ಲಿ ದಾಂಪತ್ಯ ಬದುಕಿನ ಬಗ್ಗೆ ಇನ್ನೊಂದು ವಿಚಿತ್ರ ಸಂಗತಿಯನ್ನು ಕಾಣಬಹುದು. ಅದೇನೆಂದರೆ ಚಿತ್ರದುರ್ಗವನ್ನು ಆಳುವ ಚಕ್ರವರ್ತಿಗೆ ಐದಾರು ಜನ ಹೆಂಡತಿಯರಿದ್ದರು. ಆತನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಬೇರೊಂದು ಹುಡುಗಿಯನ್ನು ತರುವುದಾಗಿ ಯೋಚಿಸಿ ಹನ್ನೆರಡು ವರ್ಷದ ಬಾಲೆ ಸಿದ್ಧಮ್ಮಳನ್ನು ಮದುವೆಯಾಗುತ್ತಾನೆ. ಈ ಮದುವೆ ಸಿದ್ಧಮ್ಮಳ ಸವತಿಯರಿಗೆ ಇಷ್ಟವಿರುವುದಿಲ್ಲ. ಆದಕಾರಣ ಸಿದ್ಧಮ್ಮಳಿಗೆ ಊರ ಹೊರಗೊಂದು ಅರಮನೆಯನ್ನು ಕಟ್ಟಿಸಿ ಇಟ್ಟನು. ಸ್ವಲ್ಪ ದಿನಗಳ ನಂತರ ಸಿದ್ಧಮ್ಮ ಗರ್ಭಿಣಿಯಾದಳು. ಈಕೆ ಗರ್ಭಿಣಿಯಾದದ್ದು, ಬೇನೆ ತಿನ್ನುತ್ತಿರುವುದು ಸವತಿಯರಿಗೆ ಕೊಂಚವು ಸಹಿಸಿಕೊಳ್ಳಲಾಗುವುದಿಲ್ಲ. ಹಾಗಾಗಿ ಸೂಲಗಿತ್ತಿಯನ್ನು ಕರೆಸಿ ಸಿದ್ಧಮ್ಮಳಿಗೆ ಹೆರಿಗೆ ಮಾಡಿಸುವುದರ ನೆಪದಲ್ಲಿ ಹುಟ್ಟಿದ ಎರಡು ಮಕ್ಕಳನ್ನು ತಿಪ್ಪೆಗೆ ಬೀಸಾಡಿದರು. ಮಕ್ಕಳ ಬದಲಾಗಿ ಕಸಬರಿಗೆ, ಗುಂಡುಕಲ್ಲು ಇಡಿಸಿ ರಾಜನಿಗೆ ಹೇಳಿ ಕಳುಹಿಸಿದರು. ರಾಜನು ಅದನ್ನು ನೋಡಿ ಈಕೆಯನ್ನು ಕಾಡಿನಲ್ಲಿ ಬಿಟ್ಟು ಬರಲು ಅಪ್ಪಣೆ ನೀಡಿದನು. ಜೊತೆಗೆ ಕಾಡಿನಲ್ಲಿಯೇ ಆಕೆಯನ್ನು ಕೊಂದು ಬರಲು ತಿಳಿಸಿದನು. ಸಿದ್ದಮ್ಮಳನ್ನು ಕೊಲ್ಲಲು ಮನಸಾಗದ ಪ್ರಧಾನಿ ಹಾಗೆಯೇ ಬಿಟ್ಟು ಸುರಹೊನ್ನೆ ಮರದ ರಸವನ್ನು ತಂದು ರಕ್ತವೆನ್ನುವ ಹಾಗೆ ತೋರಿಸಿದನು.

ಇತ್ತ ತಿಪ್ಪೆಯಲ್ಲಿ ಬಿದ್ದ ಮಕ್ಕಳು ಹೂಗಾರ ಮಲ್ಲಣ್ಣಿಗೆ ಸಿಕ್ಕವು. ಒಂದು ದಿನ ರಾಜನ ಮುಂದೆ ಆ ಮಕ್ಕಳು ಬಂದು ಕಥೆಯನ್ನು ಹೇಳಿದವು. ಆ ಕಥೆಯನ್ನು ಕೇಳಿದ ರಾಜನಿಗೆ

ಸೂಲಗಿತ್ತಿಯರು, ಸವತಿಯರು ಸೇರಿ ಆಡಿದ ಪಾಪಕೃತ್ಯದ ಸತ್ಯದ ಅರಿವಾಯಿತು. ಅವರನ್ನು ಶಿಕ್ಷಿಸಿ ತಾನು ಅನೇಕ ಕಷ್ಟನಷ್ಟಗಳಿಗೆ ತುತ್ತಾಗಿ ಸಿದ್ದಮ್ಮಳಿಗಾಗಿ ಹಂಬಲಿಸಿದನು. ಪ್ರಧಾನಿ ಆಕೆಯನ್ನು ಕರೆತಂದನು. ಆಗ ರಾಜ ಮತ್ತು ಸಿದ್ಧಮ್ಮರಿಬ್ಬರೂ ಅನ್ಯೋನ್ಯ ಸತಿ–ಪತಿಗಳಾಗಿ ಜೀವನವನ್ನು ಸಾಗಿಸಿದರು.

ಆ ರಾಜನಿಗೆ ಮಕ್ಕಳಾಗದೇ ಇದ್ದರೆ ರಾಜಮನೆತನಕ್ಕೆ ಅರಸ ಇಲ್ಲದಾಗುತ್ತದೆ ಎಂತಲೋ ಅಥವಾ ಮೋಕ್ಷ ಪ್ರಾಪ್ತಿಯಾಗುವುದಿಲ್ಲ ಎಂಬುದರಿಂದಲೋ ಐದಾರು ಹೆಂಡತಿಯರನ್ನು ಮದುವೆ ಮಾಡಿಕೊಂಡು ತನ್ನ ಸಣ್ಣತನವನ್ನು ತೋರಿಸಿದಂತೆ ಕಾಣುತ್ತದೆ. ಮಕ್ಕಳಾಗಲಿಲ್ಲ ಎಂದು ಕಾಡಿಗೆ ಅಟ್ಟಿ ಕೊಲೆ ಮಾಡಿ ಬಾ ಎಂದು ಹೇಳಿದ್ದರಲ್ಲಿ ಮಹಿಳೆ ಮಕ್ಕಳಾಗದೇ ಇದ್ದರೆ ಎಷ್ಟೊಂದು ಕಷ್ಟಕ್ಕೆ ಗುರಿಯಾಗುತ್ತಿದ್ದಳು ಎಂದು ತಿಳಿದು ಬರುತ್ತದೆ. ಮತ್ತೊಂದೆಡೆ ಇಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರು ಎಂಬಂತಹ ಮಾತು ಸ್ಪಷ್ಟವಾಗುತ್ತದೆ. ತಮಗೆ ಸಿಗದ ತಾಯಿಯ ಭಾಗ್ಯ ಬೇರೆ ಯಾರಿಗೂ ಸಿಗಬಾರದು ಎಂಬುದು ಆ ಸವತಿಯರ ಆಶಯವಾಗಿತ್ತೆನಿಸುತ್ತದೆ ಅಥವಾ ಸಮಾಜದ ನಿಂದನೆಗೆ ಗುರಿಯಾಗಿ ತಮ್ಮೊಳಗೆ ಅಡಗಿರುವ ಸಂಕಟವನ್ನು ಹೊರಹಾಕಿದ್ದಾರೆ.

ಒಟ್ಟಿನಲ್ಲಿ ಮಹಿಳೆಯು ಮಕ್ಕಳಾಗದಾಗ ಪುರುಷ ಸಮಾಜ ಬಟ್ಟೆ ಬದಲಾಯಿಸುವ ಹಾಗೆ, ಚಪ್ಪಲಿ ಬದಲಾಯಿಸುವ ಹಾಗೆ ಮಹಿಳೆಯರನ್ನು ಕೂಡಾ ಬದಲಾಯಿಸುತ್ತಾ ತಮ್ಮ ಜೀವನವನ್ನು ತಮಗಿಚ್ಛೆ ಬಂದ ಹಾಗೇ ನಡೆಸುತ್ತಿದ್ದರು. ಇಷ್ಟೊಂದು ಮದುವೆಯಾದರೂ ಸಮಾಜ ಆತನಿಗೆ ಏನೂ ಹೇಳುವುದಿಲ್ಲ, ಪ್ರಶ್ನಿಸುವುದಿಲ್ಲ. ಅದೇ ಒಬ್ಬ ಮಹಿಳೆ ಪರಪುರುಷನೊಂದಿಗೆ ಮಾತನಾಡಿದರೇ ಆಕೆಯನ್ನು ನೋಡುವ ದೃಷ್ಟಿ ಬೇರೆಯಾಗುತ್ತದೆ. ಮದುವೆಯಾದರಂತೂ ನಿಂದನೆಗೆ ಒಳಗಾಗಿ ಚುಚ್ಚುವ ಮಾತುಗಳಿಗೆ ಬಲಿಯಾಗಿ ಕುಟುಂಬದಿಂದ ಸಮಾಜದಿಂದ ತಿರಸ್ಕೃತಳಾಗುತ್ತಾಳೆ. ಅಪರಾಧಿಯ ಹಾಗೆ ಜೀವನ ಕಳೆಯುವ ಸಂದಿಗ್ಧತೆ ಆಕೆಗೆ ಎದುರಾಗುತ್ತದೆ. ಇಂದಿಗೂ ಮಕ್ಕಳಾಗದೇ ಇದ್ದರೆ ಕುಟುಂಬ ಪುರುಷರನ್ನು ಇನ್ನೊಂದು ಮದುವೆಯಾಗಲು ಪ್ರೇರೇಪಿಸುತ್ತದೆ. ಅದೇ ಪುರುಷರಲ್ಲಿಯೇ ದೋಷವಿದ್ದರೂ ಮಹಿಳೆಗೆ ಇನ್ನೊಂದು ಮದುವೆ– ಯಾಗಲೂ ಪ್ರೇರೇಪಿಸುವುದಿಲ್ಲ. ಪ್ರೇರೇಪಿಸಿದರೂ ಅದು ಅತಿ ವಿರಳ. ಬದಲಾಗಿ ಸಮಾಜ, ಕುಟುಂಬ ಆಕೆಯನ್ನು ಮಾನಸಿಕವಾಗಿ ನಿಂದನೆಗೆ ಗುರಿ ಮಾಡುತ್ತದೆ. ಮಕ್ಕಳಾಗದೇ ಇದ್ದರೂ ದಂಪತಿಗಳು

ಅನ್ಯೋನ್ಯವಾದ ಬದುಕನ್ನು ಸಾಗಿಸುತ್ತಿದ್ದರೆ ಕುಟುಂಬ, ಸಮಾಜ ಅದಕ್ಕೆ ಹುಳಿ ಹಿಂಡುವುದರಲ್ಲಿಯೇ ತಮ್ಮ ಆಯುಷ್ಯ ಕಳೆದುಕೊಳ್ಳುತ್ತದೆ.

ಕಲಿಯುಗದ ಬಾಲೆ :

ಈ ಕಥನಗೀತೆಯಲ್ಲಿ ಎರಡು ಮಕ್ಕಳಾದ ಮಹಿಳೆಯೊಬ್ಬಳು ಗಂಡ ದಂಡಿಗೆ ಹೋದಂತಹ ಸಂದರ್ಭದಲ್ಲಿ ಬಾಲೆ ಪರ ಪುರುಷನೊಬ್ಬನನ್ನು ಅನೈತಿಕ ಸಂಬಂಧಕ್ಕೆ ಆಹ್ವಾನಿಸುತ್ತಾಳೆ. ಬಂದಂತಹ ಪರಪುರುಷನಿಗೆ ಬೇಕಾದ ಅಡುಗೆ ಮಾಡಿ ತಿನಿಸಿ ಸರಸ ಸಲ್ಲಾಪದಲ್ಲಿ ತಲ್ಲೀನರಾದಾಗ ಆಕೆಯ ಎರಡು ಮಕ್ಕಳು ತಾಯಿಯನ್ನು ಪ್ರಶ್ನಿಸಿದ್ದಕ್ಕೆ ಎರಡೂ ಮಕ್ಕಳನ್ನು ಕೊಲೆ ಮಾಡಿ ಬುಟ್ಟಿಗೆ ತುಂಬಿ ಹಿತ್ತಲಲ್ಲಿ ಹಾಕುತ್ತಾಳೆ. ನಂತರ ಈ ವಿಷಯ ಗಂಡನಿಗೆ ಕನಸಿನಲ್ಲಿ ತಿಳಿಯುತ್ತದೆ. ಗಂಡ ಮನೆಗೆ ಬಂದು ಮಕ್ಕಳೆಲ್ಲಿ ಎಂದು ವಿಚಾರಿಸಿದಾಗ ಆತನಿಗೆ ವಿಷಯ ಗೊತ್ತಾಗಿದೆ ಎಂದು ಅರಿತು ಗಂಡನಿಗೆ ಅನ್ನದಲ್ಲಿ ವಿಷ ಹಾಕಿ ಸಾಯಿಸುತ್ತಾಳೆ. ಇದನ್ನೆಲ್ಲಾ ಅರಿತ ಜನ ಅವಳನ್ನು ಶಪಿಸುತ್ತಾರೆ. ಹಾಗೆಯೇ ಶಿವನು ಸಹ ಅವಳನ್ನು ಶಪಿಸುವುದಲ್ಲದೇ ಸುಣ್ಣದ ಗುಂಡಿಗೆ ಹಾಕಿ ಸುಡುತ್ತಾನೆ. ಕಲಿಯುಗದ ಬಾಲೆ ಕಥನಗೀತೆಯಲ್ಲಿ ಹೆಣ್ಣೊಬ್ಬಳ ವಿಕೃತ ಕಾಮವನ್ನು ಚಿತ್ರಿಸುವುದರೊಂದಿಗೆ ಗಂಡ, ಮಕ್ಕಳ ಬಗ್ಗೆ ಕೊಂಚಷ್ಟು ಕನಿಕರ ಇಲ್ಲದೇ ಹೆಂಡತಿ, ತಾಯಿಯ ಕುಲಕ್ಕೆ ಕಳಂಕ ತಂದಿದ್ದಾಳೆ. ಕೇಡಿಗೆ ಕೇಡಾಗುತ್ತದೆ ಎಂಬುದನ್ನು ಶಿವನು ಆಕೆಯನ್ನು ಸುಣ್ಣದ ಗುಂಡಿಗೆ ಹಾಕಿ ಸುಡುವುದರ ಮೂಲಕ ತಿಳಿಸಲಾಗಿದೆ.

ಸತ್ತ ಮಕ್ಕಳು ತಂದೆಯ ಕನಸಿನಲ್ಲಿ ಹೋಗಿ ನಮ್ಮವ್ವ ಕೊಂದು ಕೊಟ್ಟಿಗೆ ಹಾಕಿದ್ದಾಳೆಂದು ತಿಳಿಸುತ್ತಾರೆ. ಆದರೆ ಇದು ಎಷ್ಟರಮಟ್ಟಿಗೆ ಸತ್ಯವೆಂಬುದು ತಿಳಿಯದು. ಆದರೆ ಹೆಂಡತಿ ಮಕ್ಕಳು ಸ್ವಪ್ನದಲ್ಲಿ ಬಂದ ಕಾರಣ ಅವರನ್ನು ಕಾಣಲು ತನ್ನ ಕೆಲಸವನ್ನು ಬಿಟ್ಟು ಅವರಿಗಾಗಿ ಜವಳಿ, ಸಿಹಿತಿಂಡಿ ತೆಗೆದುಕೊಂಡು ಬರುವ ಸನ್ನಿವೇಶದಿಂದ ಆತ ಹೆಂಡತಿ-ಮಕ್ಕಳ ಮೇಲೆ ಎಷ್ಟೊಂದು ಅಪಾರವಾದ ಪ್ರೀತಿ, ವಾತ್ಸಲ್ಯ ಇಟ್ಟಿದ್ದನೆಂಬುದು ತಿಳಿದುಬರುತ್ತದೆ. ಆದರೆ ಗಂಡನ ಪ್ರೀತಿಗೆ, ಮಕ್ಕಳ ವಾತ್ಸಲ್ಯಕ್ಕೆ ಮಸಿ ಬಳೆಯುವ ಕೆಲಸ ಮಾಡಿದವಳು ಕಲಿಯುಗದ ಬಾಲೆ.

ಗಂಡ ಮನೆಗೆ ಬಂದು ಮಕ್ಕಳನ್ನು ವಿಚಾರಿಸಿದಾಗ ಸುಳ್ಳು ಹೇಳಿ ಆತನಿಗೆ ಕಾಣದ ಹಾಗೆ ಅಂಗಡಿಗೆ ಹೋಗಿ ವಿಷವನ್ನು ತಂದು ಅನ್ನ ಮಾಡುವಾಗ ಅದರಲ್ಲಿ ಸೇರಿಸುತ್ತಾಳೆ.

ನಂತರ ಆತನಿಗೆ ಊಟಕ್ಕೆ ಬಡಿಸುವಳು. ಸ್ವಲ್ಪ ಹೊತ್ತಿನಲ್ಲಿಯೇ ಆತನಿಗೆ ಚಳಿಜ್ವರ ಬಂದವು. ಅದನ್ನು ಕಡೆಗಣಿಸಿ

> "ಸಳಿಜರ ಬಂದರೆ ಏನಾಯುತು ಗಂಡ
> ಕೊಟ್ಟೇಕ್ಕೆ ನಡಿಯಂದ್ಲು"[೩೬]

ಕಣ್ಣು ಹೋದವೆಂದರೆ, ಕಣ್ಣು ಹೋದರೆ ಏನಾಯ್ತು ಕೊಟ್ಟಗೆಗೆ (ದನದ ಹಟ್ಟಿ) ನಡಿಯೆಂದು ಹೇಳುತ್ತಾಳೆ. ಕೊಟ್ಟಗೆಯಲ್ಲಿ ಗಂಡ ಕಣ್ಣು ಕಾಣದೇ ತಡಕಾಡುತ್ತಿರುವಾಗ ಸತ್ತಮಕ್ಕಳು ಆತನ ಕೈಗೆ ಸಿಗುತ್ತವೆ. ಆಗ ಆತನ ದುಃಖ ಹೇಳ ತೀರದು. ಆಕೆಯನ್ನು ಬೈಯುತ್ತ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ಇಷ್ಟಕ್ಕೆ ಬಿಡದೆ ಆಕೆ ಪಕ್ಕದ ಮನೆಗೆ ಹೋಗಿ ಬೆಂಕಿಯನ್ನು ತಂದು ಕೊಟ್ಟಿಗೆಗೆ ಹಾಕುತ್ತಾಳೆ. ಇಲ್ಲಿ ತನ್ನ ಉತ್ತಮ ದಾಂಪತ್ಯವನ್ನು ತಾನೇ ಸುಟ್ಟುಕೊಳ್ಳುವಂತಹ ಇವಳು ಮಹಿಳಾ ಕುಲಕ್ಕೆ ಮಾರಕವಾಗುತ್ತಾಳೆ.

ಜನಪದರು ಕೊನೆಯಲ್ಲಿ ಶಿವ-ಪಾರ್ವತಿಯರನ್ನು ತಂದು ಬೆಂಕಿಯನ್ನು ಆರಿಸುವುದು ಮತ್ತು ಸತ್ತ ಮಕ್ಕಳಿಗೆ ಜೀವ ತುಂಬುವುದರ ಮೂಲಕ ಕಲಿಯುಗದ ಬಾಲೆಯ ಗಂಡನನ್ನು ಉಳಿಸಿ, ಆತ ಮತ್ತು ಮಕ್ಕಳಿಂದಲೇ ಆಕೆಯ ಮುಂಡವನ್ನು ಸೀಳಿಸಿ ಊರ ಮುಂದೆ ತೋರಣ ಕಟ್ಟುವುದರ ಮೂಲಕ ಒಳ್ಳೆಯತನಕ್ಕೆ ಒಳ್ಳೆಯದಾಗುವುದೆಂದು ಎತ್ತಿ ಹಿಡಿದಿದ್ದಾರೆ. ಕಲಿಯುಗದಲ್ಲಿ ಇಂತಹ ದುಷ್ಟ ಹೆಣ್ಣುಮಕ್ಕಳು ಇರುವರು. ಅದಕ್ಕಾಗಿ ಎಲ್ಲರನ್ನೂ ನಂಬಬೇಡಿ ಎನ್ನುವ ಕರೆಯನ್ನು ಸಮಾಜಕ್ಕೆ ನೀಡುತ್ತಾರೆ.

ಅತುಮವ್ವಿ :

ಅತುಮವ್ವಿ ಕಥನಗೀತೆಯಲ್ಲಿ ಗಂಡ ತನ್ನ ಹೆಂಡತಿ ಅತುಮವ್ವಿಯ ಬಗೆಗೆ ಸಂಶಯಪಟ್ಟು ಪತಿವ್ರತೆ ಎಂದು ಸಾಬೀತುಪಡಿಸಲು ಗುದ್ದಲಿ ಕಡಿಯದೆ ಹೆಡಗಲಿ ಹೊರದೆ ನಿಂತಲ್ಲಿ ಬಾವಿ ತೆಗೆಯಬೇಕು, ನಿಂತಲ್ಲಿ ಮನೆಯ ಮಾಡಬೇಕು, ಕತ್ತಿನಲ್ಲಿರುವ ಮಣಿನಾಗನ ತರಬೇಕು ಎಂಬ ಕೆಲವೊಂದು ಅಸಾಧ್ಯವಾದ ಕೆಲಸಗಳನ್ನು ಕೊಡುತ್ತಾನೆ.

ಈ ಎಲ್ಲ ಅಗ್ನಿಪರೀಕ್ಷೆಗಳನ್ನು ಎದುರಿಸುತ್ತಾಳೆ. ಇದರ ಮುಂದಾಳತ್ವ ವಹಿಸಿದವರು ಗೌಡ ಎಂಬುದನ್ನು ಮರೆಯುವಂತಿಲ್ಲ. ಇಷ್ಟೆಲ್ಲಾ ಆಗಿ ಮನೆಗೆ ಹೋದರೆ ಮತ್ತೊಂದು ನುಡಿಯನ್ನು ನುಡಿಯುತ್ತಾನೆ ಪತಿರಾಯ, 'ನೀ ತೆರೆಯಳಿದೀ ಮನಿಗೇ ಬರುಬೇಕು ಅಂದಾಗ

---

೩೬. ಜನಪದ ಕಥನಗೀತೆಗಳು : ಪಿ.ಕೆ. ಖಂಡೋಬಾ, ಪು.೩೩

ನೀ ಪತಿವ್ರತೆ ಅಂತ ನನಗನಿಸುತ್ತದೆ' ಎಂದು ಹೇಳುತ್ತಾನೆ. ಅಸಾಧ್ಯ ಕೆಲಸವನ್ನು ಮಾಡಿದರೂ ತೆರೆಯಳಿದು ಬರಬೇಕು ಎಂದು ಹೇಳುವ ಅತುಮವ್ವಿಯ ಗಂಡನ ಉದ್ದೇಶ ವರದಕ್ಷಿಣೆ ಅಥವಾ ಕನ್ಯಾಶುಲ್ಕ ಕಟ್ಟಲು ಆಕೆಗೆ ಹಿಂಸೆ ಕೊಡುತ್ತಿದ್ದರು ಎಂಬ ಸಂಶಯ ಮೂಡುತ್ತದೆ. ಏಕೆಂದರೆ ವರದಕ್ಷಿಣೆಗಾಗಿ ಮಹಿಳೆಯರು ಇಂದಿಗೂ ಶೋಷಣೆಗೊಳಗಾಗುತ್ತಿರುವುದನ್ನು ಕಂಡರೆ ಅಂದು ಹೆಮ್ಮರವಾಗಿಯೇ ಈ ಪಿಡುಗು ಇದ್ದೀತೆಂದು ತಿಳಿದುಬರುತ್ತದೆ. ದಂಪತಿಗಳು ಅನ್ಯೋನ್ಯವಾಗಿರಬೇಕಾದರೆ ಕನ್ಯಾಶುಲ್ಕವೆಂಬುದು ಪ್ರಮುಖ ಪಾತ್ರ ವಹಿಸುತ್ತಿತ್ತು ಎಂದು ಅರ್ಥವಾಗುತ್ತದೆ. ಇನ್ನೊಂದು ಅರ್ಥದಲ್ಲಿ ಪಾತಿವ್ರತ್ಯ ಎಂಬುದು ಹೆಣ್ಣಿಗೆ ಎಷ್ಟೊಂದು ಮುಳುವಾಗಿದ್ದಿತ್ತು. ಅದಕ್ಕೋಸ್ಕರ ಎಂತಹ ಸಂದಿಗ್ಧ ಪರಿಸ್ಥಿತಿಗಳಿಗೆ ಒಳಗಾಗಿ ಆಕೆಯ ಮೇಲೆ ಸುಳ್ಳು ಆಪಾದನೆಗಳನ್ನು ಹೇರಿ ಊರಿನ ಮುಖಂಡರು ಸೇರಿ ಶಿಕ್ಷೆ ವಿಧಿಸುವದರೊಂದಿಗೆ ದಂಡವನ್ನು ಕೂಡ ಕಟ್ಟುವಂತಹ ಪರಿಸ್ಥಿತಿ ಬಂದೊದಗಿರುವುದನ್ನು ಕಾಣುತ್ತೇವೆ. ಹೀಗಾದರೆ ದಾಂಪತ್ಯದಲ್ಲಿ ನಂಬಿಕೆ, ವಿಶ್ವಾಸ, ಪ್ರೀತಿಗೆ ಬೆಲೆ ಇಲ್ಲದಂತಾಗುತ್ತದೆ.

ಸೌಂಸೌತೇರು (ಸವತಿಯರು) :

ಇಬ್ಬರು ಹೆಂಡಿರಿಂದ ಆಗುವಂತಹ ಅನಾಹುತವನ್ನು ಈ ಕಥನಗೀತೆ ಅರಹುತ್ತದೆ. ಸಾವುಕಾರನಿಗೆ ಇಬ್ಬರು ಹೆಂಡತಿಯರು. ಅವರೇ ಸವತಿಯರು ಬಹಳ ದಿನದ ನಂತರ ಸಾಹುಕಾರನ ಮೊದಲ ಹೆಂಡತಿಗೆ ಪುತ್ರ ಸಂತಾನವಾಗುತ್ತದೆ. ಪುತ್ರನನ್ನು ನೋಡಿ ತಂದೆ-ತಾಯಿ ಹರುಷ ವ್ಯಕ್ತಪಡಿಸಿ ದೇವರು ಚಿಂತಿ-ಪರಿಹಾರ ಮಾಡಿದನು ಎನ್ನುತ್ತಾರೆ. ಮೇಲ್ನೋಟಕ್ಕೆ ಇಬ್ಬರೂ ಸವತಿಯರು ತುಂಬಾ ಅನ್ಯೋನ್ಯವಾಗಿರುತ್ತಾರೆ. ಒಂದು ಘಟನೆಯಿಂದ ಮಾತ್ಸರ್ಯ ಇತ್ತು ಎಂಬುದು ತಿಳಿದುಬರುತ್ತದೆ: ಮಕ್ಕಳಿದ್ದ ಮನೆಯಲ್ಲಿ ಎಣ್ಣೆ ಕಾಯಿಸಿ ಸ್ನಾನ ಮಾಡಿಸುವುದು ಸರ್ವೇ ಸಾಮಾನ್ಯ. ಆದ ಕಾರಣ ಮಗುವಿಗೆ ಎಣ್ಣೆಯನ್ನು ಕಾಯಿಸಲು ಔಡಲ ಕುಟ್ಟಿ ಒಲಿ ಮೇಲೆ ಇಡುತ್ತಾರೆ. ಹಿರಿಯ ಹೆಂಡತಿ ನೀರು ತರಲು ಹೋದಾಗ, ಸಣ್ಣ ಹೆಂಡತಿಯ ಹೊಟ್ಟೆಯಲ್ಲಿ ಬೆಂಕಿ ಬಿದ್ಹಂಗ ಆಗಿ ಕುದಿಯುವ ಎಣ್ಣೆಯಲ್ಲಿ ಆ ಹಸುಗೂಸನ್ನು ಹಾಕಿ ಹುಟ್ಟಿನಿಂದ ತಿರುವುತ್ತಾಳೆ. ಇದು ಹೆಣ್ಣಿನ ಕ್ರೂರತನಕ್ಕೆ ನಿದರ್ಶನವಾಗಿ ಕಂಡುಬರುತ್ತದೆ. ಮತ್ತೊಂದರ್ಥದಲ್ಲಿ ಸಮಾಜ ಆಕೆಗೆ ಮಕ್ಕಳಿಲ್ಲವೆಂದು ಚುಚ್ಚು ಮಾತುಗಳು ಆಕೆಯ ಮನಸ್ಸಿನ ಮೇಲೆ ಪರಿಣಾಮವಾಗಿದೆ. ಏನೇ ಆದರೂ ಏನೂ ಅರಿಯದ ಹಸುಗೂಸಿಗೆ ಶಿಕ್ಷೆ ವಿಧಿಸಿದ್ದು ಅಮಾನವೀಯವಾಗಿದೆ. ಮುಂದೆ ಹಿರಿಯಾಕಿ ನೀರ ಸಾಕ ಮಾಡಿ ಎಣ್ಣೆ ಬಸಿಲಾಕ ಇಬ್ಬರೂ ಕುಂತರು. ಔಡಲದ ಗಡಿಗ್ಯಾಗ ನೆತ್ತರ (ರಕ್ತ) ಹೊಂಟಿತು. ತಾಯಿ ನೋಡಿ ದಿಗಿಲಾಗಿ ಎದಿ ಎದಿ ಬಡಿದುಕೊಳ್ಳುತ್ತಾ ಸೌತಿಗೆ ಬೈಯುತ್ತಾ ಗೋಳಿಡುತ್ತಾಳೆ.

ಅಷ್ಟರಲ್ಲಿಯೇ ಸಾವುಕಾರ ಬಂದನು. ವಿಷಯ ಕೇಳಿದ ತಕ್ಷಣವೆ ಹತಿಯಾರದಿಂದ ಹೊಡೆದುಕೊಂಡನು. ಆಗ ಊರಿಗೆ ಊರೇ ಕೂಡಿತು. ಗೌಡ, ಕುಲಕರ್ಣಿ, ರೈತರು ಬಂದರು; ಪಂಚನಾಮ ಮಾಡಿ ಕಾಗದವನ್ನು ಬರೆದರು. ಒಯ್ದು ಠಾಣೆದವರ ಕೈಯಾಗ ಕೊಟ್ಟರು. ಫೌಜದಾರ, ತಾಲೂಕದಾರ, ಜವಾನ, ಕೊತ್ವಾಲ ಇವರೆಲ್ಲ ಸೇರಿ ಅವರನ್ನು ಕರೆದುಕೊಂಡು ಸರ್ಕಾರದ ಎದುರು ನಿಲ್ಲಿಸಿದರು. ಅಧಿಕಾರಿಗಳು ಎಲ್ಲ ಸಮಾಚಾರ (ಮಜಕೂರು) ಕೇಳಿಕೊಂಡು ಒಯ್ದು ಗಲ್ಲಿಗೇರಿಸಿ ಜೀವ ಹೊಡಿಸಿದರು. ಈ ಎಲ್ಲ ಅನಾಹುತಗಳಿಗೆ ಕಾರಣ ಬಹುಪತ್ನಿತ್ವವೆಂದೇ ಹೇಳಬಹುದು. ಆದ ಕಾರಣ ಜನಪದರು ಇಬ್ಬರು ಹೆಂಡಿರು ಇರಬಾರದು ಎನ್ನುವುದಕ್ಕೆ ಕಥನಗೀತೆಯ ಕೊನೆಯಲ್ಲಿ

> "ದಂಡೋತಿ ಊರಾದಪ ಭಾರ
> ಅರ್ಜುನಪ್ಪ ಮಾರಾಜ ಹೀಂಗ ಹೇಳತಾರ
> ತಾಸಿನೊಳಗ ನಾಕು ಜೀಂವ ಹೋದುಪೂರ
> ಎಂದೆಂದು ಮಾಡ್ಕೊಬಾರ್ದ್ದೊಇಬ್ಬರ್ಹೆಂಡರ"[೩೭]

ಎನ್ನುವದರೊಂದಿಗೆ ಬಹುಪತ್ನಿತ್ವವನ್ನು ವಿರೋಧಿಸುವ ನಿಲುವು ತೋರಿಸುತ್ತದೆ. ಮಕ್ಕಳಿಲ್ಲವೆಂಬ ಕಾರಣಕ್ಕೆ ಮತ್ತೊಂದು ಹೆಣ್ಣನ್ನು ಮದುವೆಯಾದರೆ ಸಮಾಜದಲ್ಲಿ ಇಬ್ಬರೂ ಮಹಿಳೆಯರಿಗೆ ಅನ್ಯಾಯವಾದ ಹಾಗೆ ಆದರೆ ಕುಟುಂಬ, ಸಮಾಜ ಹಾಗೆ ವಿಚಾರಿಸುವುದಿಲ್ಲ. ಇಂತಹ ಅನಾಹುತಗಳಿಂದಾದರೂ ಬಹುಪತ್ನಿತ್ವ ವಿವಾಹಕ್ಕೆ ತೆರೆಯೆಳೆಯಬೇಕೆಂಬ ಆಶಯವು ಇಲ್ಲಿ ವ್ಯಕ್ತವಾಗುತ್ತದೆ.

ಒಬ್ಬರಿಗಟ್ಟುಡುಗೆ :

ಮದುವೆಯಾದ ಹೆಣ್ಣನ್ನು ಗಂಡು ಕೆಲವೊಮ್ಮೆ ಕೆಣಕುವ, ವಶಪಡಿಸಿಕೊಳ್ಳಲು ಪ್ರಯತ್ನಿಸುವ ನಾನಾ ಬಗೆಯ ಹುನ್ನಾರಗಳನ್ನು ಮಾಡುತ್ತಾನೆ. ಅವನೊಡ್ಡುವ ಯಾವುದೇ ಆಸೆ-ಆಮಿಷಗಳಿಗೆ ಒಳಗಾಗದೇ ಪತಿಯ ಮೇಲಿನ ನಿಷ್ಠೆ, ದೃಢಮನಸ್ಸನ್ನು ಉಳಿಸಿಕೊಂಡವರು ಕೆಲವು ಲಲನಾಮಣಿಯರು ಅಂತಹ ಕಾಮುಕ ಗಂಡೊಬ್ಬನನ್ನು ಮುಲಾಜಿಲ್ಲದೇ ತರಾಟೆಗೆ ತೆಗೆದುಕೊಂಡಿದ್ದನ್ನು 'ಒಬ್ಬರಿಗಟ್ಟುಡುಗೆ' ಗೀತೆಯಲ್ಲಿ ಕಾಣುತ್ತೇವೆ. ಕುಡಿಯಲು ನೀರು ಕೇಳುವ ಸಂದರ್ಭ, ಅದಕ್ಕೆ ಹೆಣ್ಣಿನ ಪ್ರತ್ಯುತ್ತರ, ಆಸೆ-ಆಮಿಷಗಳನ್ನು

---

೩೭. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೧೭

ಹೆಣ್ಣಿಗೆ ತೋರಿಸುವ ರೀತಿಯಲ್ಲಿ ಆಕೆಯನ್ನು ಒಲಿಸಿಕೊಳ್ಳುವ ಪ್ರಯತ್ನವನ್ನು ಕಾಮುಕ ಮಾಡುವ ಕಥೆಯನ್ನು ಕಾಣುತ್ತೇವೆ.

ಕಾಮುಕ ಗಂಡು ಮದುವೆಯಾದ ಹೆಣ್ಣನ್ನು ಬಯಸಿ ಆಕೆಯೊಂದಿಗೆ ಒಂದರಗಳಿಗೆ ಇರಲು ಅಪೇಕ್ಷಿಸುತ್ತಾನೆ. ಆದರೆ ಆ ಹೆಣ್ಣು ತಾನು ಒಬ್ಬರಿಗೆ ಮಾತ್ರ ಸೇರಿದವಳು, ಅತ್ತೆ-ಮಾವ, ಬಂಧು-ಬಳಗ ಒಪ್ಪಿ ನನ್ನನ್ನು ತಂದಿರುವರು, ನಾನು ನನ್ನ ಪತಿಗೆ ಮಾತ್ರ ಸೀಮಿತ ಎಂದು ಕುಟುಂಬದವರನ್ನೆಲ್ಲಾ ನೆನೆದು ಕಾಮುಕನಿಗೆ ನಿಷ್ಠುರವಾಗಿ, ಮುಖಕ್ಕೆ ಹೊಡೆದ ಹಾಗೆ ಮಾತನಾಡಿ ತನ್ನ ದಾಂಪತ್ಯ ಜೀವನದ ಮೌಲ್ಯವನ್ನು ಎತ್ತಿ ಹಿಡಿದು, ಹಲವಾರು ಮಹಿಳಾ ಮಣಿಗಳಿಗೆ ಸ್ಫೂರ್ತಿಯಾಗಿ ನಿಲ್ಲುತ್ತಾಳೆ. ಎಷ್ಟೋ ಜನ ಮಹಿಳೆಯರು ಕಾಮುಕ ಗಂಡಿನ ಆಸೆ-ಆಮಿಷಗಳಿಗೆ ಬಲಿಯಾಗಿ ತಮ್ಮ ದಾಂಪತ್ಯ ಸುಖವನ್ನು, ಬದುಕನ್ನು ಹಾಳುಮಾಡಿಕೊಳ್ಳುತ್ತಿರುವವರಿಗೆ ಈ ಕಥನಗೀತೆ ಮಾದರಿಯಾಗಿದೆ. ಇನ್ನೊಂದರ್ಥದಲ್ಲಿ ಆ ಕಾಮುಕ ಮದುವೆಯಾದ ಹೆಣ್ಣುಮಗಳನ್ನು ಮೊದಲು ಪ್ರೀತಿಸಿ ಬಿಟ್ಟು ಮೋಸ ಮಾಡಿ ಆಕೆಯ ಮದುವೆಯ ನಂತರ ಈ ಅಸಹ್ಯ ವರ್ತನೆಗಳಿಂದ ನಡೆದುಕೊಂಡಿರಬಹುದು. ಏಕೆಂದರೆ ನನ್ನೂರ ಹಳ್ಳಿದಿಂದಾಚೆಯ ಘಟನೆಗಳನ್ನು ನೆನೆಸಿಕೊಳ್ಳಿ ಎಂದಾಗ ಆಕೆ ರೋಷದಿಂದ

"ನೆನೆವೆ ನನ್ನಪ್ಪನ ನೆನೆವೆ ನನ್ನವ್ವನ ನೆನೆವೆ ನನ್ನೇಳಬಳಗವ
ದೊರೆಮಗನೆ ನಿನ್ಯಾಕೆ ನೆನೆಯಲೊ ನನ್ನ ಹಳೆಗೆರವ"[೩೮]

ಎಂದು ಹಳೆಯ ಪಾದರಕ್ಷೆಗಳಿಗೆ ಆತನನ್ನು ಹೋಲಿಸುತ್ತಾಳೆ. ಜೊತೆಗೆ ನೀನು ನಾಯಿಯಾಗಿ, ಕತ್ತೆಯಾಗಿ, ಬೆಕ್ಕಾಗಿ ಹುಟ್ಟು ಎಂದು ಶಪಿಸುತ್ತಾಳೆ. ತನ್ನನ್ನು ಬೇರೆಯವರಿಗೆ ಧಾರೆ ಎರೆದು ಕೊಟ್ಟಿರುವರು. ಆ ದಾಂಪತ್ಯವನ್ನು ಕಾಪಾಡಿಕೊಳ್ಳಲು ಹವಣಿಸುವಿಕೆ ಇದರಲ್ಲಿ ಕಂಡು ಬರುತ್ತದೆ.

ಭಾರತೀಯ ಜೀವನ ಪರಂಪರೆಯಲ್ಲಿ ದಾಂಪತ್ಯ ಪ್ರೇಮಕ್ಕೆ ಅನನ್ಯವಾದ ಸ್ಥಾನವಿದೆ. ಆನಂದದ ರಸವಿದೆ. ಇದಕ್ಕೆ ಸಂಸಾರವೆಂಬ ಸಾಗರ ಸರಳವಾಗಿ ಹರಿಯುವಂತಹ ಶಕ್ತಿಯಿದೆ. ಆದ್ದರಿಂದ ಬಾಳಿನಲ್ಲಿ ಬರುವ ಬಡತನ, ಸಿರಿತನಗಳಿಗೆ ಚಿಂತಿಸದೇ ತಮ್ಮ ಜೀವನ ಪಾವನವಾಗಬೇಕೆಂಬ ಆಸೆಯನ್ನು ಕೂಡ ಹೊಂದಿರುತ್ತಾರೆ. ಕವಿ ಬೇಂದ್ರೆಯವರು ಹೇಳಿದ 'ಒಲವೇ ನಮ್ಮ ಬದುಕು' ಭಾರತೀಯ ದಂಪತಿಗಳ ಪರಮಾದರ್ಶವಾಗಿದೆ. ಭಾರತೀಯರಿಗೆ

---

೩೮. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೨೨

ವಿವಾಹವೊಂದು ಪವಿತ್ರ ಬಂಧನವಾಗಿದೆ. ಕೌಟುಂಬಿಕ ನೆಲೆಗೆ ದೈಹಿಕ, ಮಾನಸಿಕ, ಧಾರ್ಮಿಕ, ಸಾಂಸ್ಕೃತಿಕವಾದ ಸಂಬಂಧವಾಗಿದೆ.

"ಯಥಾ ವಾಯುಂ ಸಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ

ತಥಾ ಗೃಹಸ್ಥ ಮಾಶ್ರಿತ್ಯ ವರ್ತಂತೇ ಇತರಾಶ್ರಮಾಃ"[೩೯]

ಎಂದರೆ, ಯಾವ ರೀತಿ ವಾಯುವನ್ನು ಆಶ್ರಯಿಸಿ ಎಲ್ಲ ಜೀವಿಗಳೂ ಜೀವಿಸುತ್ತವೆಯೋ ಹಾಗೆಯೇ ದಾಂಪತ್ಯ ಜೀವನದ ಮೂಲಕ ಜೀವನಕ್ಕೆ ಸಾರ್ಥಕ್ಯ ಬರುತ್ತದೆ ಎಂಬ ವಿಚಾರ ಕಂಡುಬರುತ್ತದೆ. ಆದ್ದರಿಂದ ಪತಿ-ಪತ್ನಿಯರಿಬ್ಬರ ಹೊಂದಾಣಿಕೆ, ಪ್ರೀತಿ-ವಿಶ್ವಾಸ, ನಂಬಿಕೆ ಇವೆಲ್ಲವುಗಳಿಂದ ಸುಖೀ ಜೀವನ ನಡೆಸಲು ಸಾಧ್ಯ.

ಗಂಡು-ಹೆಣ್ಣುಗಳು ಪರಸ್ಪರ ಒಪ್ಪಿ ವಿವಾಹದ ಮೂಲಕ ಒಂದಾಗಿ ನಡೆಸುವ ಸಹಚರ್ಯ ಜೀವನವೇ ದಾಂಪತ್ಯ ಎಂದು ಹೇಳಲಾಗುತ್ತದೆ. ಆದರೆ ಕಥನಗೀತೆಗಳಲ್ಲಿ ಇದರ ತದ್ವಿರುದ್ಧವಾಗಿಯೇ ದಾಂಪತ್ಯ ಚಿತ್ರಣ ವ್ಯಕ್ತವಾಗುತ್ತದೆ. ಏಕೆಂದರೆ ಇಲ್ಲಿ ಮದುವೆಯಾಗುವ ಮಹಿಳೆಗೆ ಆಯ್ಕೆ ಮಾಡಿಕೊಳ್ಳುವ ಅಧಿಕಾರವಿರಲಿಲ್ಲ. ದಾಂಪತ್ಯವೆಂದರೇನು ಎಂದು ತಿಳಿದುಕೊಳ್ಳುವ ಮೊದಲೇ ಕೊಂಡಕ್ಕೇರುತ್ತಿದ್ದಳು. ಕಾರಣ ದಂಡಿಗೆ ಹೋದ ಗಂಡ ಮರಳಿ ಬಾರದಿದ್ದಾಗ, ಸತ್ತಸುದ್ದಿ ಅಥವಾ ಕೇಡಿನ ಸ್ವಪ್ನ ಕಂಡ ನಂತರ ಚಿತೆಗೆ ಹಾರುತ್ತಿದ್ದಳು. ಇದಲ್ಲದೆ ದಾಂಪತ್ಯದಲ್ಲಿ ಸುಖವನ್ನು ಪಡುತ್ತಾ ಪ್ರೀತಿ-ವಿಶ್ವಾಸದಿಂದ ಇರುವಂತಹ ದಂಪತಿಗಳನ್ನು ಸಮಾಜ ಮೂಢ ನಿರ್ಧಾರಗಳನ್ನು ತೆಗೆದುಕೊಂಡು ಅವರನ್ನು ಬೇರ್ಪಡಿಸಲು ಕಾರಣವಾಗುತ್ತಿತ್ತು. ಹೀಗೆ ಒಂದಲ್ಲಾ ಒಂದು ರೀತಿಯಿಂದ ಕಥನಗೀತೆಗಳಲ್ಲಿ ದಾಂಪತ್ಯ ಚಿತ್ರಣವೆನ್ನುವುದು ಅಷ್ಟೊಂದು ಮೌಲ್ಯಯುತವಾಗಿ ಕಂಡುಬಂದಿಲ್ಲವೆಂದೇ ಹೇಳಬಹುದು. ಅತ್ತೆಯ ಕುತಂತ್ರದಿಂದಲೋ, ನಾದಿನಿಯರ ಕುತಂತ್ರದಿಂದಲೋ ಕಥನಗೀತೆಗಳಲ್ಲಿ ಬರುವ ದಂಪತಿಗಳು ಎಷ್ಟೇ ಪ್ರೀತಿಯಿಂದ ಕೂಡಿದ್ದರೂ ಅಗಲುವ ಸಂದರ್ಭಗಳು ಕಂಡುಬರುತ್ತವೆ. ಹಾಗಾಗಿ ಕುಟುಂಬ ಸಮಾಜ ತೆಗೆದುಕೊಳ್ಳುವ ನಿರ್ಧಾರಗಳು ಅವರ ದಾಂಪತ್ಯದ ಮೇಲೆ ಪ್ರಭಾವ ಬೀರುತ್ತಿತ್ತು. ಕಾರಣ ಅಂದಿನ ಸಾಮಾಜಿಕ ವ್ಯವಸ್ಥೆಯಾಗಿದೆ.

ಧರ್ಮ, ಅರ್ಥ, ಕಾಮ, ಮೋಕ್ಷವನ್ನು ಬದುಕಿನಲ್ಲಿ ಮುಟ್ಟಲೇಬೇಕು ಎಂಬ ಹಠದಿಂದ ಯಾವ ಆಚರಣೆ, ನಂಬಿಕೆಗಳನ್ನು ವೈಚಾರಿಕವಾಗಿ ಅವಲೋಕಿಸದೇ ಹಿಂದಿನಿಂದ

೩೯. ದಾಂಪತ್ಯ ಸಂಪದ : ಶರಣಬಸಪ್ಪ ಕೋಲ್ಕಾರ, ಪು.೧೧೬

ನಂಬಿಕೊಂಡು ಬಂದ ಮೂಢ ಸಂಪ್ರದಾಯಗಳ ಬಲಿಗೆ ದಂಪತಿಗಳ ಬದುಕನ್ನು ಕುಟುಂಬದವರು ಅಧೋಗತಿಗೆ ಇಳಿಸುತ್ತಿದ್ದರು. ಅಂದರೆ ದಂಪತಿಗಳ ಆಸೆ, ಕನಸು, ಪ್ರೀತಿ, ವಾತ್ಸಲ್ಯಕ್ಕೆ ಬೆಲೆ ಸಿಗುತ್ತಿರಲಿಲ್ಲ. ಸಿಕ್ಕರೂ ಅದು ಶಾಶ್ವತವಾಗಿ ನೆಲೆ ನಿಲ್ಲಲು ಸಾಧ್ಯ-ವಾಗುತ್ತಿರಲಿಲ್ಲ. ಕಥನಗೀತೆಗಳಲ್ಲಿ ಮಹಿಳೆ ದಾಂಪತ್ಯದ ಬಗೆಗೆ ಶೀಲ ಅವಳ ಆಭರಣ. ಪ್ರೀತಿ ಅವಳ ಸಿಂಧೂರವಾಗಿ, ತ್ಯಾಗ ಎಂಬುದನ್ನು ತನ್ನ ಉಸಿರಂತೆ ಕಾಪಾಡಿಕೊಂಡು ಬಾಳ ನೌಕೆಯನ್ನು ಮುಗಿಸಿದ್ದಾಳೆ.

ಇದನ್ನೆಲ್ಲಾ ಹೇಳುವ ಉದ್ದೇಶವೇನೆಂದರೆ, ಕಥನಗೀತೆಗಳಲ್ಲಿ ಸತಿ-ಪತಿಗಳ ದಾಂಪತ್ಯ ಜೀವನ ಹೆಚ್ಚು ಕಾಲದವರೆಗೆ ಉಳಿಯುತ್ತಿರಲಿಲ್ಲ. ದಾಂಪತ್ಯ ಬದುಕು ಸಂಕುಚಿತ ವ್ಯಾಪ್ತಿಯನ್ನು ಒಳಗೊಂಡು, ಜೀವನ ಸುಖಕರವಾಗಿರುತ್ತಿದ್ದಿಲ್ಲ ಎಂದು ಸ್ಪಷ್ಟವಾಗುತ್ತದೆ.

ಅಧ್ಯಾಯ-೪

ಜನಪದ ಕಥನಗೀತೆಗಳಲ್ಲಿ ಹೆಣ್ಣು : ಸಾರ್ವಜನಿಕ ನೆಲೆ

ಅಧ್ಯಾಯ-೪

ಜನಪದ ಕಥನಗೀತೆಗಳಲ್ಲಿ ಹೆಣ್ಣು : ಸಾರ್ವಜನಿಕ ನೆಲೆ

ಸಮಾಜ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು ಹಲವಾರು ಸಂಸ್ಕೃತಿಗಳನ್ನು ಸಾರ್ವಜನಿಕ ವಲಯದಲ್ಲಿ ಗುರಿತಿಸಲಾಗಿದೆ. ಪ್ರಾಚೀನ ಕಾಲದಿಂದಲೂ ಸಮಾಜವು ವಿಭಿನ್ನ ನೆಲೆಗಳಿಂದ ಗುರುತಿಸಲ್ಪಟ್ಟು ವಿವಿಧ ಆಯಾಮಗಳಲ್ಲಿ ನಿರೂಪಿತವಾಗಿದೆ. ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ಜನಪದ ಕಥನಗೀತೆಗಳು ವಿಭಿನ್ನ ರೀತಿಯಲ್ಲಿ ಸಾಮಾಜಿಕ ನೆಲೆಯನ್ನು ಪ್ರತಿಬಿಂಬಿಸುತ್ತವೆ. ಕೆಲವೊಂದು ಕಥನಗೀತೆಗಳು ಊರಿನ ಚಿತ್ರಣವನ್ನು ನೀಡುತ್ತ ಅದು ನಶಿಸಿಹೋದ ಬಗೆ, ಆಳಿದ ರಾಜ ಮಹಾರಾಜರ ಬಗ್ಗೆ ತಿಳಿಸಿದರೆ, ಇನ್ನೂ ಕೆಲವೊಂದು ಊರಿನಲ್ಲಿಯ ಗೌಡ-ಶಾನುಭೋಗರ ಆಡಳಿತವನ್ನು ಮತ್ತು ಅವರ ಅಧೀನದಲ್ಲಿದ್ದ ಸಮಾಜದ ಚಿತ್ರಣವನ್ನು ತಿಳಿಸುತ್ತವೆ ಹಾಗೂ ಸಮಾಜದ ಕಾನೂನು ಕಟ್ಟಳೆಗೆ ಬಲಿಯಾದ ಸ್ತ್ರೀಯರ ದುರಂತ ಚಿತ್ರಣವನ್ನೂ ದಾಖಲಿಸುತ್ತವೆ. ಇಂತಹ ಘಟನೆಗಳನ್ನೊಳಗೊಂಡ ಕನ್ನಡ ಜನಪದ ಕಥನಗೀತೆಗಳು ಹಲವಾರು ದೊರಕುತ್ತವೆ. ಅಂತಹವುಗಳನ್ನು ಆಯ್ದುಕೊಂಡು ಸಾರ್ವಜನಿಕ ನೆಲೆಯಲ್ಲಿ ಮಹಿಳೆ ಹೇಗೆ ತಾರತಮ್ಯಕ್ಕೆ ಒಳಗಾಗಿದ್ದಳು ಎಂಬುದನ್ನು ವಿಶ್ಲೇಷಿಸಲಾಗಿದೆ.

ಪ್ರಾಯಶಃ ಸಾರ್ವಜನಿಕ ಕಾರ್ಯಗಳಲ್ಲೆಲ್ಲ ಬಹುಮುಖ್ಯವಾದುದು ತಟಾಕ (ಕೆರೆ) ನಿರ್ಮಾಣವೆನಿಸುತ್ತದೆ. "ಸತ್ತವನ ಪ್ರೇತವು ಬಹಳ ಬಾಯಾರಿಕೆಯಿಂದ ಬಳಲುವುದೆಂದೂ, ತಟಾಕ ನಿರ್ಮಾಣ ಮುಂತಾದ ಧರ್ಮ ಕಾರ್ಯಗಳಿಂದ ಅದರ ಬಾಯಾರಿಕೆ ಇಂಗುವುದಿಲ್ಲವೆಂದೂ ಅಂದಿನ ಜನರು ನಂಬಿದ್ದರು"[೧] ಎಂದು ಶಾಸನ ಉಲ್ಲೇಖಿಸುತ್ತದೆ. ಆದರೆ ಕನ್ನಡಿಗರ ಔದಾರ್ಯ ಪ್ರಮುಖವಾಗಿ ದೇವಸ್ಥಾನ ನಿರ್ಮಾಣದಲ್ಲಿ, ಕೆರೆ ನಿರ್ಮಾಣದಲ್ಲಿ ಎದ್ದು ಕಾಣುತ್ತದೆ. ಏಕೆಂದರೆ ಕೆರೆ-ದೇವಸ್ಥಾನಗಳನ್ನು ಕಟ್ಟಿಸಿದರೆ ಸಮಾಜ ಹಾಗೂ ತನ್ನ ತಂದೆ-ತಾಯಿಗಳ ಪ್ರಶಂಸೆಗೆ ಪಾತ್ರನಾಗಬಹುದು ಅಷ್ಟೇ ಅಲ್ಲದೇ ಇಂಥ ಕಾರ್ಯಗಳಿಂದ ಪುಣ್ಯವೂ ಲಭಿಸುತ್ತದೆ ಎಂದು ತಿಳಿದಿದ್ದರು. ಕೆರೆಗಳಿಗೆ ತಮ್ಮ ಹೆಸರುಗಳನ್ನೇ ಇಟ್ಟಂತಹ ಹಲವಾರು ದಾಖಲೆಗಳನ್ನು ಶಾಸನಗಳು ತಿಳಿಸುತ್ತವೆ. ಇದರಿಂದ ಕೆರೆಗಳಿಗೆ ಎಷ್ಟೊಂದು ಮಹತ್ವವನ್ನು ಕೊಡುತ್ತಿದ್ದರೆಂಬುದು ಕೂಡ ತಿಳಿದುಬರುತ್ತದೆ.

---

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಎಂ.ಚಿದಾನಂದಮೂರ್ತಿ, ಪು.೭೦೨

ಮಹಿಳೆ ಪ್ರಾಚೀನ ಕಾಲದ ಸಮಾಜದಲ್ಲಿ ಬಾಲ್ಯವಿವಾಹ, ವೈಧವ್ಯ, ಬಹುಪತ್ನಿತ್ವ, ಬಂಜೆತನ, ದೇವದಾಸಿ, ಮೂಢ ಆಚರಣೆ ಹೀಗೆ ಅನೇಕ ನೆಲೆಗಳಿಗೆ ಬಲಿಯಾಗಿ ಬಂಧನಕ್ಕೊಳಪಟ್ಟು ನೊಂದ-ಬೆಂದ ಮನಸ್ಸುಗಳ ಅನಾವರಣವನ್ನು ಇಲ್ಲಿ ಮಾಡಲಾಗಿದೆ. ವಾಸ್ತವದಲ್ಲಿ ಕೂಡ ಬಹುಪಾಲು ಮಹಿಳೆ ಸಾರ್ವಜನಿಕ ವಲಯದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೋವನ್ನು ಅನುಭವಿಸುತ್ತಾ ಸಾಗುತ್ತಿರುವಳು. ಆದ್ದರಿಂದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ವೈಜ್ಞಾನಿಕ ದೃಷ್ಟಿ ಅವಶ್ಯಕವಾಗಿದೆ.

ಮಹಿಳೆಯರ ಬದುಕು ನಿರಾಕರಣೆ, ಹಿಂಸೆ, ಆಚರಣೆ, ಶೋಷಣೆ, ದೌರ್ಜನ್ಯ ಮುಂತಾದ ಸಮಸ್ಯೆಗಳಿಗೆ ಆದಿಕಾಲದಿಂದಲೂ ಒಳಗಾಗುತ್ತಾ ಬಂದಿದೆ. ಸಾಮಾನ್ಯ ಮಹಿಳೆಯೊಬ್ಬಳು ತನ್ನ ಜೀವನದುದ್ದಕ್ಕೂ ಲಿಂಗಾಧಾರಿತ ಕೌಟುಂಬಿಕ ಹಾಗೂ ಸಾರ್ವಜನಿಕವಲಯದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಶ್ರಮ ವಹಿಸುತ್ತಿರುವಳು. ಸಮಾಜದ ಅವಿಭಾಜ್ಯ ಅಂಗವಾಗಿರುವ ಮಹಿಳೆಯರು ಅನುಭವಿಸುತ್ತಾ ಬಂದ ಸಮಸ್ಯೆಗಳು, ಬಿಕ್ಕಟ್ಟುಗಳು, ಕಾನೂನು-ಕಟ್ಟಳೆಗಳು ಮಾನಸಿಕವಾಗಿ ಮಹಿಳೆಗೆ ಶೋಷಣೆ ಮಾಡುತ್ತಾ ಬಂದಿವೆ. ಇದಕ್ಕೆ ಕಾರಣ ಸಮಾಜ ಎಂದರೆ ಅತಿಶಯೋಕ್ತಿಯಾಗಲಾರದು. ಮಹಿಳೆಗೆ ಮದುವೆಯಾದರೂ ಕಷ್ಟ; ಆಗದೇ ಇದ್ದರೂ ಕಷ್ಟ. ಮಕ್ಕಳಾದರೂ ಕಷ್ಟ; ಆಗದೇ ಇದ್ದರೂ ಕಷ್ಟ, ಹೆಣ್ಣುಮಗುವಾದರೊಂದು ಕಷ್ಟ; ಗಂಡು ಮಗುವಾದರೊಂದು ಕಷ್ಟ, ಮಾತನಾಡಿದರೂ ಕಷ್ಟ ಮಾತನಾಡದೇ ಇದ್ದರೂ ಕಷ್ಟ ಹೀಗೆ ಇತ್ಯಾದಿ ದ್ವಂದ್ವ ಸಮಸ್ಯೆ ಸವಾಲುಗಳಿಂದ ಮಹಿಳೆ ಸಮಾಜದಲ್ಲಿ ಬಂಧಿಸಲ್ಪಟ್ಟಿದ್ದಾಳೆ. ಹೀಗಾಗಿ ಒಂದಿಲ್ಲೊಂದು ಅಪವಾದ, ನಿಂದನೆ, ಹೊಡೆತಗಳಿಂದ ಶೋಷಣೆಗೆ ಗುರಿಯಾಗುತ್ತಿರುವಳು. ಆದ್ದರಿಂದಲೇ ಹಲವಾರು ನೆಲೆಯಲ್ಲಿ ಮಹಿಳೆ ಸಮಾಜದಲ್ಲಿ ಗುರುತಿಸಲ್ಪಡುತ್ತಾಳೆ. ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಪ್ರತಿಯೊಬ್ಬ ಮನುಷ್ಯನಿಗೂ ಸಂಸ್ಕಾರ ಅವಶ್ಯಕ. ಸಂಸ್ಕಾರ ನೀಡುವಲ್ಲಿ ಮಹಿಳೆಯ ಪಾತ್ರ ಬಹಳ ದೊಡ್ಡದು. ಕಥನಗೀತೆಗಳ ಮೂಲಕ ಸಾರ್ವಜನಿಕವಾಗಿ ಅವಳ ಪಾತ್ರ ಹೇಗಿತ್ತು ಎಂದು ಇಲ್ಲಿ ವಿಶ್ಲೇಷಿಸಲಾಗಿದೆ.

ಸಾರ್ವಜನಿಕ ವಲಯದಲ್ಲಿ ಬೇರೂರಿದ್ದ ಅನೇಕ ಅನಿಷ್ಟ ಸಂಪ್ರದಾಯಗಳು ಮಹಿಳೆಯರ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮವುಂಟು ಮಾಡಿದ್ದನ್ನು ಅನೇಕ ಕಥನಗೀತೆಗಳು ತಿಳಿಸುತ್ತವೆ. ಗಂಡನ ಜೊತೆ ಚಿತೆ ಏರಿ ತನ್ನ ಜೀವನವನ್ನೇ ಸುಟ್ಟುಕೊಳ್ಳುವ ಕ್ರೂರ ಪದ್ಧತಿ, ಆಚರಣೆಗಳಿಗೆ ಬಲಿಯಾದ ಮಹಿಳೆಯರು ಲೆಕ್ಕವಿಲ್ಲದಷ್ಟು. ಅಂಥವುಗಳ ಚಿತ್ರಣವನ್ನು ಒಂದೊಂದಾಗಿ ನೋಡುವುದಾದರೆ-

೪.೧. ಊರು – ಕೇರಿ :

ವ್ಯಕ್ತಿಯಿಂದ ಕುಟುಂಬ, ಕುಟುಂಬದಿಂದ ಸಮಾಜ, ಸಮಾಜದಿಂದ ರಾಷ್ಟ್ರ ನಿರ್ಮಾಣವಾಗಿ ಸಾರ್ವಜನಿಕ ವಲಯದಲ್ಲಿ ನೆಲೆ ನಿಲ್ಲುತ್ತದೆ. ಹೀಗೆ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ. ಇವುಗಳಲ್ಲಿ ಯಾವುದೇ ಒಂದು ಕೊಂಡಿ ತಪ್ಪಿದರೂ, ಅನಾರೋಗ್ಯಕರ ಪರಿಸರ ನಿರ್ಮಾಣವಾಗಿ ಇಡೀ ಸಾರ್ವಜನಿಕವಲಯದ ವ್ಯವಸ್ಥೆ ಸಡಿಲುಗೊಳ್ಳುತ್ತಾ ಕಲುಷಿತವಾಗುತ್ತಾ ಸಾಗುತ್ತದೆ.

ಒಂದು ಊರು ಹಲವಾರು ಕೇರಿಗಳನ್ನು ಒಳಗೊಂಡ ಜನಸಮುದಾಯಗಳು ನೆಲೆಸಿ ಜೀವನ ಸಾಗಿಸಿರುವಂತಹ ಪ್ರದೇಶವಾಗಿರುತ್ತದೆ. ಆ ಊರಿನಲ್ಲಿ ಹಲವಾರು ಸ್ತರದ ಜನಗಳು ವಾಸಿಸಿರುವುದನ್ನು ಅಂದೂ ಕಂಡೆವು, ಇಂದೂ ಕಾಣುತ್ತಿರುವೆವು. 'ಮಾನವ ಕುಲವೊಂದೇ' ಎಂದು ಮಾತನಾಡುತ್ತೇವೆ. ಆದರೆ ಹಲವಾರು ಕುಲವುಳ್ಳ ಊರನ್ನು ಇಂದಿಗೂ ಕಾಣುತ್ತೇವೆ. ಇದು ಸಾಮಾಜಿಕ ವ್ಯವಸ್ಥೆಯ ದುರ್ದೈವ.

ಶ್ರೇಣೀಕೃತವಾಗಿ ಜಾತಿ, ವರ್ಗ, ಮತಗಳ ಆಧಾರವಾಗಿ ಸಾಮಾಜಿಕ ಸಂರಚನೆಯಲ್ಲಿ ಹೇಗೆ ಒಡಕು ಉಂಟಾಗಿರುವುದೋ ಅದೇ ರೀತಿಯಾಗಿ ಲಿಂಗಾಧಾರಿತವಾಗಿ ತಾರತಮ್ಯದ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಪುರುಷ ವರ್ಗವು ತಮಗೆ ಇಷ್ಟಬಂದ ಹಾಗೆ ಮಹಿಳಾ ವರ್ಗವನ್ನು ನಿರ್ಮಿಸಿಕೊಂಡಿತ್ತು ಎಂಬುದಕ್ಕೆ ನಮಗೆ ಹಲವಾರು ಸಾಕ್ಷಿಗಳು ದೊರಕುತ್ತವೆ.

ಉದಾ: ಅನುಪಮಾ ನಿರಂಜನ ಅವರು 'ಮಾಧವಿ' ಕಾದಂಬರಿಯಲ್ಲಿ ಊಳಿಗಮಾನ್ಯ ಸಮಾಜದ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳನ್ನು ಕೊಳ್ಳುವುದು, ಮಾರುವುದು, ದಾನ ಮಾಡುವುದು ಸಾಧಾರಣ ಪದ್ಧತಿಯಾಗಿತ್ತೆಂದು ತಿಳಿಸುತ್ತಾರೆ. ಇದಲ್ಲದೇ ಯಯಾತಿ ತನ್ನ ಮಗಳನ್ನು ಬಾಡಿಗೆ ಕೊಟ್ಟುದುದನ್ನು, ಮಹಾಭಾರತದ ಉದ್ಯೋಗಪರ್ವದಲ್ಲಿ ಗಾಲವ ಋಷಿಯ ಕತೆಯಲ್ಲಿ ಚಿತ್ರತವಾಗಿದುದ್ದನ್ನು ಅರಿತು ಮಾಧವಿಯು ಊಳಿಗಮಾನ್ಯ ಸಮಾಜ ವ್ಯವಸ್ಥೆಯಲ್ಲಿ ಹೇಗೆ ಶೋಷಣೆಗೊಳಪಟ್ಟಿದ್ದಾಳೆಂಬುದನ್ನು ತಿಳಿಸುತ್ತಾ, ಮಹಿಳೆಯರು ಏನೂ ಪ್ರಶ್ನಿಸದೆ ಪ್ರತಿಭಟಿಸದೇ ಅಂದಿನ ಸಾಮಾಜಿಕ ವ್ಯವಸ್ಥೆಗೆ ಗುರಿಯಾಗಬೇಕಿತ್ತೆಂಬುದು ಈ ಕಾದಂಬರಿಯ ಮೂಲಕ ಸ್ಪಷ್ಟವಾಗುತ್ತದೆ. ಇದರ ಹಾಗೆಯೇ ಜನಪದ ಕಥನಗೀತೆಗಳಲ್ಲಿಯೂ ಸಹ ಅನೇಕ ಮಹಿಳೆಯರು ಸಾಮಾಜಿಕ ವ್ಯವಸ್ಥೆಗೆ ಬದ್ಧರಾಗಿ ಶೋಷಣೆಗೆ ಒಳಗಾಗಿದ್ದಾರೆ ಎಂಬುದು ತಿಳಿದುಬರುತ್ತದೆ. ತಮ್ಮ ತ್ಯಾಗ, ವಿಧೇಯತೆಗಳಿಂದ ಗಂಡಸರಿಗೆ ಶರಣಾಗತರಾದವರು ಮಾತ್ರ 'ಆದರ್ಶ' ಮಹಿಳೆಯರು ಎನಿಸಿಕೊಳ್ಳುತ್ತಿದ್ದರು ಎಂಬುದು ಮಾಧವಿ ಕಾದಂಬರಿಯಲ್ಲಿ

ನಿರೂಪಿತವಾಗಿದೆ. ಅದಕ್ಕಾಗಿಯೇ ಸಮಾಜದಲ್ಲಿ ಮಹಿಳೆಯರು ಶೋಷಣೆಗೆ ಒಳಗಾದರೂ ಪ್ರತಿಭಟಿಸಲು ಹೋಗುತ್ತಿರಲಿಲ್ಲ. ಹೋದರೂ ಅದನ್ನು ಸಾರ್ವಜನಿಕವಲಯದ ಎದುರಿಗೆ ವ್ಯಕ್ತಪಡಿಸುತ್ತಿರಲಿಲ್ಲ. ಇದರಿಂದ ಆಯಾ ಸಮಾಜದ ಸಾಂಸ್ಕೃತಿಕ, ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುತ್ತಾ ಬಂದಿದೆ ಎಂಬುದು ಸ್ಪಷ್ಟವಾಗುತ್ತದೆ.

ಪ್ರಾಚೀನ ಕಾಲದಲ್ಲಿ ಊರಿನ ಕೆರೆಗೆ ಮಹತ್ವವಾದ ಸ್ಥಾನ ಇತ್ತು. ಊರಿನ ಜನ ಸುಖವಾಗಿದ್ದರೆ ಅದರ ಪುಣ್ಯ ಕೆರೆ ಕಟ್ಟಿಸಿದವರಿಗೆ ಬರುತ್ತದೆ ಎಂದು ಸಮಾಜ ಆ ಕಾರ್ಯಕ್ಕೆ ಬಹಳಷ್ಟು ಮನ್ನಣೆ ನೀಡಲಾಗಿತ್ತು. ಅದಕ್ಕಾಗಿ ರಾಜ ಮಹಾರಾಜರು ಕೆರೆಯನ್ನು ಕಟ್ಟಿಸಲು ಮುಂದಾಗುತ್ತಿದ್ದರು. ಅಂತಹ ಉದಾಹರಣೆಗಳು ಇತಿಹಾಸದಲ್ಲಿ ಸಾಕಷ್ಟು ದೊರಕುತ್ತವೆ. ಕೆರೆಯನ್ನು ನಿರ್ಮಿಸುವ ಉದ್ದೇಶ ಶ್ಲಾಘನೀಯ. ಅದೇ ಕೆರೆಗೆ ಸೆಲೆ ಇಲ್ಲದಾದಾಗ ಗಂಗಾ ಮಾತೆ ಒಂದು ಹೆಣ್ಣನ್ನು ಬಲಿಕೊಡಿ ಎಂದು ಕೇಳುತ್ತಾಳೆ ಎಂಬುದು ಅತಿಶಯೋಕ್ತಿಯಾಗಿ ಕಂಡುಬರುತ್ತದೆ. ಆದರೂ ಮಹಿಳೆಯರು ಕಟ್ಟಿಸಿದ ಕೆರೆಗೆ ಬಲಿಯಾಗಲು ತಮ್ಮ ಬದುಕಿನ ದಾಹಕ್ಕೆ ನೀರೆರೆದು ಊರು-ಕೇರಿಯ ಹಿತಕ್ಕೆ ತಮ್ಮ ಜೀವವನ್ನು ಮುಡುಪಾಗಿಟ್ಟಿದ್ದರು.

ಕೆರೆಗೆ ಹಾರ ಕಥನಗೀತೆಯಲ್ಲಿ ಗೌಡನೊಬ್ಬನು ಕಟ್ಟಿಸಿದ ಕೆರೆಯು ಮತ್ತೆ ಮತ್ತೆ ಕಿತ್ತುಹೋಗುತ್ತಿದ್ದಿತು. ಅದು ನಿಲ್ಲಬೇಕಾದರೆ ಒಂದು ನರಬಲಿ ಆಗಬೇಕೆಂದು ಆದೇಶವಾಯಿತು. ಆಗ ಗೌಡನ ಕಿರಿಸೊಸೆಯು ತಾನಾಗಿಯೇ ಮುಂದೆ ಬಂದು 'ಕೆರೆಗೆ ಹಾರ'ವಾಗುತ್ತಾಳೆ. ಎಂದರೆ ಕೆರೆಗೆ ತನ್ನನ್ನು ಆಹಾರವಾಗಿ ಅಥವಾ ಬಲಿಯಾಗಿ ಅರ್ಪಿಸಿಕೊಳ್ಳುತ್ತಾಳೆ. ಶಾಸನವೊಂದರಲ್ಲಿ ಬಂದಿರುವ 'ಕೆಱೆಗೆ ಹಾರಂಗೊಟ್ಟರ್' ಎಂಬ ಉಕ್ತಿಯು ಬಂದಿದ್ದರೂ ಅದರ ಮಾತು ಸಂಪೂರ್ಣವಾಗಿ ಬೇರೆಯೇ ಆಗಿದೆ. ಏಕೆಂದರೆ ಅದರ ಹಿಂದೆ 'ಪಣಮಂ' ಎಂಬ ಮಾತು ಇದೆ. ಹಣವನ್ನು ಕೆರೆಗೆ ಆಹಾರವಾಗಿ, ಎಂದರೆ ಅದರ ದುರಸ್ತಿಗೆ, ಬದುಕಿಗೆ ಬಿಟ್ಟುಕೊಟ್ಟರು ಎಂದು ತಿಳಿಯಬೇಕು. ಹೊಸದಾಗಿ ನಿರ್ಮಾಣಗೊಂಡ ಅನೇಕ ಕೆರೆಗಳು, ಕೋಟೆಗಳೂ ನಿಲ್ಲಬೇಕಾದರೆ ನರಬಲಿಯನ್ನು ಅಪೇಕ್ಷಿಸುತ್ತಿದ್ದವು ಎಂದು ಈಗಲೂ ಕೆಲವು ಜನರು ನಂಬಿದ್ದಾರೆ. ಆದರೆ ಈ ವಿಷಯವನ್ನು ಕುರಿತು ಉಲ್ಲೇಖವು ಯಾವ ಶಾಸನದಲ್ಲಿಯೂ ದೊರಕಿಲ್ಲವೆಂದು ಮಾತ್ರ ಹೇಳಬಹುದು. "ವಿಜಯನಗರದ ಬಳಿ ಕೃಷ್ಣದೇವರಾಯನು ಕಟ್ಟಿಸಿದ ಕೆರೆಗಾಗಿ ಅರವತ್ತು ಜನರನ್ನು ಬಲಿಕೊಡಲಾಯಿತೆಂದು ಇಬ್ಬರು ಪ್ರವಾಸಿಗರ ಹೇಳಿಕೆಗಳಿವೆ. ಹೊಸದಾಗಿ ಕಟ್ಟಿಸಿದ

ಮಂದಿರಕ್ಕಾಗಿ ಅಥವಾ ಸೇತುವೆಗಾಗಿ ಬಲಿಯಾದ ವ್ಯಕ್ತಿಯು ಅಲ್ಲಿಗೆ ರಕ್ಷಕ ದೇವತೆಯಾಗುತ್ತಾನೆ ಎಂಬ ನಂಬಿಕೆ ಅನೇಕ ದೇಶಗಳಲ್ಲಿದೆ. ಆಧುನಿಕ ಯುಗದಲ್ಲಿಯೂ ಬಂಧಿತರನ್ನು ಅಥವಾ ಗುಲಾಮರನ್ನು ಸೇತುವೆಗಳ ಕೆಳಗೆ, ಪಟ್ಟಣದ ಹೆಬ್ಬಾಗಿಲಿನ ಕೆಳಗೆ ಅಥವಾ ಮಂದಿರಗಳ ಕೆಳಗೆ ಹೂಳುತ್ತಿದ್ದ ಸಂಪ್ರದಾಯವು ಈಚಿನವರೆಗೆ ಚೀನಾದಲ್ಲಿತ್ತೆಂದು ತಿಳಿದುಬರುತ್ತದೆ.[೨] ಆಧುನಿಕ ತಂತ್ರಜ್ಞಾನದ ಮುಂಚೂಣಿಯಲ್ಲಿರುವ ಚೀನಾದಲ್ಲಿ ಇಂಥ ಸಂಪ್ರದಾಯವಿರುವುದೆಂದರೆ ಎಷ್ಟೇ ವೈಚಾರಿಕತೆಯಿಂದ ಕೂಡಿದ ಸಮಾಜವಿದ್ದರೂ ಮೂಢ ಸಂಪ್ರದಾಯಗಳಿಂದ ದೂರವಾಗಿಲ್ಲ ಎಂಬುದು ತಿಳಿದುಬರುತ್ತದೆ.

ಒಂದು ಊರು ಅಥವಾ ಗ್ರಾಮ ಕೆರೆ, ಬಾವಿ, ಹಳ್ಳ, ಹೊಳೆ, ಕೋಟೆ, ಗಿಡ-ಮರ, ಪಂಚಾಯಿತಿ, ಗ್ರಾಮ ಪಂಚಾಯಿತಿ, ತಾಲೂಕ ಪಂಚಾಯಿತಿ, ಗುಡಿ-ಗೋಪುರ, ಮಠ-ಮಂದಿರಗಳನ್ನು ಒಳಗೊಂಡು ಹಲವಾರು ಸಂಪ್ರದಾಯಗಳನ್ನನುಸರಿಸಿ ಹಬ್ಬ ಹರಿದಿನಗಳನ್ನು ಮಾಡುತ್ತಾರೆ. ಯಾವುದೇ ಒಂದು ಗ್ರಾಮದಲ್ಲಿ ಏನಾದರೂ ಸಮಸ್ಯೆಯುಂಟಾದರೆ ಪಂಚಾಯಿತಿ ಕಟ್ಟೆ ಸೇರಿ ಪಂಚ ಮುಖಂಡರಿಂದ, ಊರಿನವರ ಸಮ್ಮುಖದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ರೂಢಿಯಲ್ಲಿತ್ತು. ತಪ್ಪಿತಸ್ಥರಿಗೆ ಶಿಕ್ಷೆ, ಬಹಿಷ್ಕಾರ, ದಂಡ ವಿಧಿಸುತ್ತಿದ್ದರು. ಜೊತೆಗೆ ಯಾವುದೇ ಸಮಾರಂಭವಿದ್ದರೂ ಡಂಗುರವನ್ನು ಬಾರಿಸುವುದು ರೂಢಿಯಲ್ಲಿತ್ತು. ಯಾವುದಾದರೂ ಕೆಲಸ-ಕಾರ್ಯ ಮಾಡಬೇಕೆಂದರೆ ಉತ್ತಮ ದಿನ, ನಕ್ಷತ್ರವನ್ನು ಕೇಳಲು ಜ್ಯೋತಿಷ್ಯರಿಗೆ ಮೊರೆ ಹೋಗುವ ಪದ್ಧತಿ ಇತ್ತು. ವಿಪರ್ಯಾಸವೆಂದರೆ ಈ ಪದ್ಧತಿ ಇಂದಿಗೂ ಸಮಾಜದಲ್ಲಿ ಜಾರಿಯಲ್ಲಿದೆ. ಕೆಲವೊಂದು ಜ್ಯೋತಿಷ್ಯಗಳ ಹೇಳಿಕೆಗಳಿಂದ ಮಾನಸಿಕವಾಗಿ ಮನುಷ್ಯ ದಿನದಿನಕ್ಕೆ ಕುಗ್ಗುತ್ತಾ ಹೋಗುತ್ತಾನೆ. ಈ ಅವಾಂತರದಿಂದ ಜನಪದ ಕಥನಗೀತೆಗಳಲ್ಲಿ ಮಹಿಳೆಯರ ಜೀವನ ದುರಂತಮಯವಾಗಿಯೇ ಮುಕ್ತಾಯವಾಗಿವೆ.

ಜನಪದರು ಬಹು ರೀತಿಯಲ್ಲಿ ಆಳಿ ಹೋದವರ, ಊರಿಗಾಗಿ-ನಾಡಿಗಾಗಿ ಜೀವ ತೆತ್ತವರ ಜೀವನ ಪರಾಕ್ರಮವನ್ನು ಸ್ಮರಣೆಯಲ್ಲಿಟ್ಟುಕೊಂಡು ಸತ್ಕಾರ್ಯ ಮಾಡಿದ ವೀರರ ಕಥೆಗಳನ್ನು ಹಾಡಿ ಸಮಾಜಕ್ಕೆ ತಿಳಿಸಿದ ಮಹನೀಯರಿವರು. ಸಾಮಾಜಿಕ ಜೀವನದ ರೀತಿ-ನೀತಿಗಳನ್ನು ಇತಿಹಾಸ ಕಾಲದ ಬದುಕಿನ ನೆನಪನ್ನು ಉಸಿರಾಡುವಂತೆ ಮಾಡುತ್ತಾರೆ. ಒಂದಲ್ಲ ಒಂದು ರೀತಿಯಲ್ಲಿ ಇನ್ನೂರು-ಮುನ್ನೂರು ವರ್ಷಗಳ ಹಿಂದೆ ಘಟಿಸಿ ಹೋದ

---

೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಎಂ. ಚಿದಾನಂದಮೂರ್ತಿ, ಪು.೫೦೬,೫೦೭

ಚರಿತ್ರೆಗಳನ್ನು ಜನಪದರು ಉಳಿಸಿಕೊಂಡು ಬಂದಿರುವ ಗ್ರಾಮಗಳ ಅಥವಾ ಊರಿನ ಸುತ್ತ ಮಾಸ್ತಿ-ವೀರಗಲ್ಲುಗಳು ಹೇರಳವಾಗಿ ಕಂಡುಬರುತ್ತವೆ.

ಮಹಾಸತಿಯ ಪತಿ ಮರಣ ಹೊಂದಿದ ಹಿನ್ನೆಲೆಯನ್ನು ಮಾಸ್ತಿ ಶಾಸನಗಳಲ್ಲಿ ಹೀಗೆ ಕಾಣಬಹುದು: ಊರಿನ ತುರುಗಳ ರಕ್ಷಣೆಯ ಹೋರಾಟದಲ್ಲಿ ವೀರನ ಮರಣವಾಗಿರುವುದು, ತನ್ನ ರಾಜನೋ ಪಾಳೆಯಗಾರನೋ ಅಥವಾ ಊರಿನ ಗೌಡನೋ ಇವರ ಪರವಾಗಿ ಆದ ಹೋರಾಟದಲ್ಲಿ ವೀರ ಮರಣ ಹೊಂದಿರುವುದನ್ನು, ಊರಳಿವಿನ ಘಟನೆಗಳಲ್ಲಿ ಕೊಳ್ಳೆ ಹೊಡೆಯುವವರನ್ನು ಎದುರಿಸಿ ಹೋರಾಡಿ ವೀರ ಮರಣ ಅಪ್ಪಿರುವುದನ್ನು ತಿಳಿದು-ಕೊಳ್ಳಬಹುದು. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರಲ್ಲಿಯ ವೀರತನಕ್ಕೆ ಅಗ್ರಗಣ್ಯ ಸ್ಥಾನ ಇತ್ತೆಂದು ತಿಳಿದುಬರುತ್ತದೆ.

ಹೀಗೆ ಪತಿಯು ಮಡಿದ ಸುದ್ದಿಯನ್ನು ಕೇಳಿ ಅದೆಷ್ಟೋ ಮಹಿಳೆಯರು ತಮ್ಮ ಜೀವನವನ್ನು ಬಲಿಕೊಟ್ಟಂತಹ ಹಲವಾರು ಘಟನೆಗಳನ್ನು ಕನ್ನಡ ಸಾಹಿತ್ಯದಲ್ಲಿ ಕಾಣುತ್ತೇವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಒಂದಲ್ಲಾ ಒಂದು ಕಷ್ಟವನ್ನು ಸಹಿಸಿಕೊಂಡು ಸಮಾಜದಲ್ಲಿ ತನ್ನ ಜೀವನವನ್ನು ರೂಪಿಸಿಕೊಂಡಿದ್ದಾಳೆ. ಆದ್ದರಿಂದ ಕಥನಗೀತೆಗಳಲ್ಲಿ ಸಮಾಜದ ಹಿತಕ್ಕಾಗಿ ಹೆಣ್ಣು ತನ್ನ ಜೀವನವನ್ನೇ ಮುಡುಪಾಗಿಟ್ಟವಳಂತೆ ತೋರಿದರೂ ಪುರುಷ ಪ್ರಧಾನ ವ್ಯವಸ್ಥೆಗೆ, ಅಂದಿನ ಸಾರ್ವಜನಿಕವಲಯದ ಕಟ್ಟುಪಾಡುಗಳಿಗೆ ಬಲಿಯಾಗಿರುವುದಂತೂ ದಿಟ.

ಎಲ್ಲ ಕಾಲಕ್ಕೂ ಸಮಾಜವು ಗಂಡು ಮಗುವಿನ ಜನನವನ್ನೇ ಬಯಸಿದಂತೆ, ಹೆಣ್ಣುಮಗುವಿನ ಜನನವನ್ನು ಅಷ್ಟಾಗಿ ಇಷ್ಟ ಪಡದೇ ಬಂದಿದೆ. ಹೆಣ್ಣಿನ ಬಗೆಗೆ ಎಂಥದೇ ವಿಶೇಷಣಗಳು ಸೃಷ್ಟಿಯಾಗಿದ್ದರೂ ಅದೇ ಸಮಾಜದ ಮನಸ್ಸಿನ ಒಂದು ಮೂಲೆಯಲ್ಲಿ ತಾತ್ಸಾರ ಭಾವನೆ ಉಳಿದುಕೊಂಡೇ ಬಂದಿದೆ. **ಉದಾ:** ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ ಅಂದರೆ ಎಲ್ಲಿ ನಾರಿಯರು ನೆಲೆಸಿರುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದು ಹೇಳುವ ಸಮಾಜ ಆಕೆಯನ್ನು ದ್ವಿತೀಯ ದರ್ಜೆಯವಳನ್ನಾಗಿಯೇ ಕಾಣುತ್ತದೆ. ಆದಕಾರಣ ಸಮಾಜ ಆಕೆಯನ್ನು ಹೊಗಳಿ ಹೊನ್ನ ಶೂಲಕ್ಕೇರಿಸುವುದರ ಬದಲು ಮನುಷ್ಯಳಂತೆ ಕಂಡು ಸ್ವತಂತ್ರ್ಯವಾಗಿ ಜೀವಿಸಲು ಬಿಟ್ಟರೆ ಸಾಕು ಎಂಬ ಧ್ವನಿ ಮಹಿಳಾ ಲೋಕದ್ದಾಗಿದೆ.

ಹೆಣ್ಣನ್ನು ಊರು-ಸಮಾಜ ಇವುಗಳ ರಕ್ಷಣೆಗಾಗಿ ಬಲಿ ಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ತಾನು ಸತ್ತ ನಂತರವೂ ತನ್ನ ಹೆಂಡತಿ ತನಗೆ ನಿಷ್ಠಳಾಗಿರಬೇಕು, ಮೋಕ್ಷ ಹೊಂದಬೇಕು ಎಂಬ ಸ್ವಾರ್ಥ ಸಮಾಜಿಕ ವ್ಯವಸ್ಥೆಯದ್ದಾಗಿತ್ತು. ಸತಿಪದ್ಧತಿಯಲ್ಲಿ ಇದು ಸ್ಪಷ್ಟವಾಗಿ ನಮಗೆ ಗೋಚರಿಸುತ್ತದೆ. ಇದರಂತೆಯೇ ಕೆರೆ, ಕೋಟೆ, ಕಿಲ್ಲೆ ಮುಂತಾದ ಕಥನ ಗೀತೆಗಳಲ್ಲಿ ಕೂಡಾ ಈ ಅಂಶವನ್ನು ಹೊರಹಾಕುತ್ತವೆ.

ಸ್ತ್ರೀಯರು ಊರು-ಕೇರಿಯ ಹಿತಕ್ಕಾಗಿ ಊರಿನಲ್ಲಿಯ ಕೆರೆ, ಬಾವಿ, ಕೋಟೆಗಳಿಗೆ ಬಲಿಯಾಗಿದ್ದಾರೆ. ಇಂದಿಗೂ ಕೆಲವೊಂದು ಕೆರೆಯ ಏರಿಯ ಮೇಲೆ ಗುಡಿ ಮತ್ತು ಮಂಟಪಗಳಿರುವುದನ್ನು ಕಾಣುತ್ತೇವೆ. ಸಮಾಜದ ಹಿತಕ್ಕಾಗಿ ತಮ್ಮನ್ನು ತಾವು ಬಲಿ ಕೊಟ್ಟುಕೊಳ್ಳುವ ಮಹಿಳಾ ವರ್ಗಗಳನ್ನು ಕೆಳಗಿನ ಕೆಲವೊಂದು ಕಥನಗೀತೆಗಳು ತಿಳಿಸುತ್ತವೆ.

ಊರಿನ ಹಿತಕ್ಕಾಗಿ ಪತಿಯೊಡನೆ ಕೊಂಡಹೋದ ಈರೋಬಿ :

ಶಂಕರಲಿಂಗರಾಯ ತನ್ನ ಹೆಂಡತಿ ಈರೋಬಿ ಬಾಣಂತಿಯೆಂದು ತಿಳಿದು ಘಟ್ಟದ ಕೆಳಗಲ ಹರಿವಾಣ ತರಲು ಹೋಗಿ ತೀರಿ ಹೋಗುತ್ತಾನೆ. ವೀರನಾದ ತನ್ನ ಪತಿ ಸತ್ತಿರಲಾರನೆಂದು ಭಾವಿಸಿ ಈರೋಬಿ ಸರಿಯಾದ ಗುರುತು ಸಿಗುವವರೆಗೆ ಧೈರ್ಯದಿಂದಿರುತ್ತಾಳೆ. ಮುಂದೆ ಒಂದು ದಿನ ಸತ್ತ ಗಂಡನ ಗುರುತು ಸಿಕ್ಕಿತು. ಆಗ ತಾನು ಪತಿಯೊಡನೆ ಕೊಂಡವೇರಲು ಸಿದ್ಧಳಾದಳು. ಬಂಧು-ಬಳಗದವರೆಲ್ಲಾ ಎಷ್ಟೇ ತಡೆದರೂ ಅದನ್ನು ಕೇಳದೇ ಕೊಂಡವೇರಲು ಸಿದ್ಧಳಾಗಿ ತನ್ನ ಮುತ್ತಿನಂಥ ಬಾಳು ಮಂಜುಗಡ್ಡೆಯಂತೆ ಕರಗಿ ಹೋಗುವಾಗ ಯಾರ ಒತ್ತಾಯಕ್ಕೂ ಮಣಿಯದೇ ತನ್ನ ಮಗುವನ್ನು ಬಿಟ್ಟು ಊರು-ಕೇರಿಯ ಹಿತಕ್ಕಾಗಿ ಕೊಂಡವೇರಿದಳು.

ಇಲ್ಲಿ ಈರೋಬಿ ಸ್ವಇಚ್ಛೆಯಿಂದ ಕೊಂಡವೇರುತ್ತಾಳೆ. ಕಾರಣ ತನ್ನ ಪತಿಯ ಮೇಲಿಟ್ಟ ಪ್ರೀತಿ ಇರಬಹುದು, ಸಮಾಜದ ನಿಂದನೆ ಮಾತುಗಳನ್ನು ಕೇಳಬಾರದೆಂದು-ಕೊಂಡಿರಬಹುದು ಅಥವಾ ತನಗೆ ಮೋಕ್ಷ ಸಿಗುವುದಿಲ್ಲವೆಂಬ ನಂಬಿಕೆಯೂ ಇರಬಹುದು. ಆಕೆಯ ಮನಃಸ್ಥಿತಿ ಮಾತ್ರ ಅಂದಿನ ಸಮಾಜದಲ್ಲಿಯ ಮೌಢ್ಯಾಚರಣೆ, ನಂಬಿಕೆಗಳಿಗೆ ಗಮನಕೊಟ್ಟಿತ್ತು ಎಂಬುದು ಆಕೆ ತೆಗೆದುಕೊಂಡ ನಿರ್ಧಾರದಿಂದ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಸಾರ್ವಜನಿಕ ವಲಯದ ಅಧೀನದಲ್ಲಿದ್ದು ಅದಕ್ಕೆ ಮಹತ್ವ ನೀಡಿದ್ದಳು ಎಂಬುದರ ಅರಿವು ಕೂಡ ಉಂಟಾಗುತ್ತದೆ. ಸಮಾಜದಲ್ಲಿ ಹೆಣ್ಣು ಅಧೀನಳಾಗಿಯೇ ಉಳಿದು ಬಂದಿದ್ದಾಳೆಂಬ ಸಮಸ್ಯೆಯನ್ನು ಸಮಾಜವಾದಿ ಚಿಂತಕರು ಪ್ರತಿಪಾದಿಸಲು ತೊಡಗಿದರೂ

ಸ್ಪಷ್ಟವಾದ ಸೈದ್ಧಾಂತಿಕ ಚೌಕಟ್ಟು ಲಭ್ಯವಾಗಿಲ್ಲ. ಸಮತಾ ಮನೋಭಾವವೇ ಇದಕ್ಕೆ ಉತ್ತರವಾಗಿದೆ.

ಊರಿನ ಹಿತಕ್ಕಾಗಿ ಕೋಟೆಗೆ ಬಲಿಯಾದ ಸಂಗಮ್ಮ :

ಇಲ್ಲಿ ಮಾವ ತನ್ನ ಸೊಸೆ ಸಂಗಮ್ಮಳನ್ನು ಕೋಟೆಗೆ ಬಲಿಕೊಡಲು ಪ್ರೇರೇಪಿಸುತ್ತಾನೆ. ಆಕೆ ತನ್ನ ಮಗುವನ್ನು ಜೋಪಾನವಾಗಿ ನೋಡಿಕೊಳ್ಳಿರಿ ಎಂದು ಎಲ್ಲರಿಗು ಹೇಳುತ್ತಾ ಕೋಟೆಗೆ ಬಲಿ ಆಗುವ ವಸ್ತುವನ್ನು ಈ ಕಥನಗೀತೆ ಒಳಗೊಂಡಿದೆ.

ಮನೆಯಲ್ಲಿ ಮಾವಯ್ಯನ ಮುಖ ಏಕೆ ಬಾಡಿದೆ ಎಂದು ಸಂಗಮ್ಮ ಕೇಳಿದ ತಕ್ಷಣ ಊರಿನ ಕೋಟೆ ಬಿರುಕು ಬಿಡುವ ಸಂದರ್ಭವನ್ನು ಹೇಳಲಾಗುತ್ತದೆ. ಸಂಗಮ್ಮಳನ್ನು ಬಲಿಕೊಡಲು ಮುಂದಾದಾಗ ಆಕೆ ಮಾವನಿಗೆ, ಅತ್ತೆಮ್ಮಳಿಗೆ, ಗೆಳತಿಯರಿಗೆ ತನ್ನ ಮಗ ಮಾಣಿಕರಾಯನನ್ನು "ತೊಟ್ಲಾಗ್ಹಾಕಿ ತೂಗಾರಿ ಬಟ್ಲಾಗ್ಹಾಕಿ ಉಣಸಾರಿ"[೩] ಎಂದು ಹೇಳುತ್ತಾ ಅಗಸಿಯನ್ನು ದಾಟಿದಳು. ಅಷ್ಟರಲ್ಲಿ ಸಂಗಮ್ಮಳ ತಾಯಿಗೆ ಕನಸೊಂದು ಬೀಳುವುದು, ಆಗ ಒಂದು ಗುಡ್ಡ ಇಳಿದು ದನಕಾಯೋ ಅಣ್ಣಂದಿರಿಗೆ, ಎಡಗುಡ್ಡ ಇಳಿದು ಕುರಿಕಾಯ ಅಣ್ಣಂದಿರಿಗೆ ಕ್ವಾಟೀ ಕಿಲ್ಲೇದ ಮೇಲೆ ಮಂದಿ ನೆರೆದಿರುವ ಕಾರಣವನ್ನು ಕೇಳುತ್ತಾಳೆ. ಆಗ ಅವರು ಗೌಡರ ಸೊಸೆ ಸಂಗಮ್ಮಳನ್ನು ಕೋಟೆಗೆ ಬಲಿ ಕೊಡುತ್ತಿರುವರೆಂದು ತಿಳಿಸುವರು. ಆಗ ಆಕೆಯ ಆಕ್ರೋಶ ವ್ಯಕ್ತವಾಗುತ್ತದೆ: ನಿಮ್ಮ ದನ ಸಾಯಲಿ, ನಿಮ್ಮ ಕುರಿ ಸಾಯಲಿ, ನಿಮ್ಮ ಬಡಗಿ ಮುರಿಯಲಿ ಎನ್ನುವದರೊಂದಿಗೆ ಹಡದವ್ವಳ ಮಾತೃ ವಾತ್ಸಲ್ಯ ಮಿಡಿಯುತ್ತದೆ. ಸಮಾಜಕ್ಕೆ ಶಪಿಸುತ್ತಾ ಅಲ್ಲಿಂದ ಮುನ್ನಡೆಯುತ್ತಾಳೆ.

ಹಡೆದವ್ವ ಮಗಳಿಗೆ ಆಗುವ ಅನ್ಯಾಯವನ್ನು ನೋಡುತ್ತಾ ನನ್ನ ಬೇಕಾದರೆ ಬಲಿ ಕೊಡಿ, ನನ್ನ ಮಗಳಿಗೆ ಬಿಡಿ ಎಂದು ತನ್ನ ಅಳಲನ್ನು ತೋರ್ಪಡಿಸುತ್ತಾಳೆ. ಆಗ ಮಗಳು ಸಂಗಮ್ಮ : ನನ್ನ ಹಣೆಬರಹ ಬರೆದ ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ನನಗೆ ಬಂದದ್ದನ್ನು ನಾನೇ ಅನುಭವಿಸುವೆ ಎಂದು ಸಮಾಜ ವಿಧಿಸಿದ ಶಿಕ್ಷೆಗೆ ಹಣೆಬರಹವೆಂದು ಅಸಹಾಯಕತೆ ತೋರ್ಪಡಿಸುತ್ತಾಳೆ. ನನ್ನ ಮಗ ಮಾಣಿಕರಾಯನನ್ನು ಜ್ವಾಕೀಲೆ ಜ್ವಾಪಾನ ಮಾಡಿರಿಯೆಂದು ಹೇಳಿದ ನಂತರ ಕಿಲ್ಲೆದೊಳಗೆ ಸಂಗಮ್ಮಳನ್ನು ಹಾಕಿ, ಆಕೆಯ ಮೇಲೆ ಮಣ್ಣನ್ನು ಎಳೆಯುವರು.

---

೩. ಜನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೮೩

ಸಂಗಮ್ಮಳನ್ನು ಬಲಿಕೊಟ್ಟ ನಂತರ : ಒಂದೇ ಒಂದು ಕಲ್ಲಿಗೆ ಹೊಂದಿತು. ಎರಡೇ ಎರಡು ಕಲ್ಲಿಗೆ ಏರಿತು, ಮೂರೇ ಮೂರು ಕಲ್ಲಿಗೆ ಮುಗಿಯಿತು. ಹೀಗೆ ಕೋಟೆ ಕಟ್ಟಡ ಸಂಪೂರ್ಣವಾಯಿತೆಂದು ಹೇಳುತ್ತಾರೆಯೇ ವಿನಃ ಒಂದು ಹೆಣ್ಣನ್ನು ಜೀವಂತ ಶವ ಮಾಡಿ ಹುಗಿದ ಬಗ್ಗೆ, ಆಕೆಯ ಜೀವನ ಮುಕ್ತಾಯ ಮಾಡಿದ ಬಗ್ಗೆ ಕೊಂಚಷ್ಟೂ ವಿಚಾರಿಸುವುದಿಲ್ಲ. ಇದಕ್ಕೆಲ್ಲಾ ಕಾರಣ ಸಮಾಜ ಸೃಷ್ಟಿಸಿದ ನಿಯಮಗಳು ಮತ್ತು ಊರಿನ ಹಿತಕ್ಕಾಗಿ, ಸ್ವಾರ್ಥಕ್ಕಾಗಿ ಮಹಿಳೆಯರನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಪದ್ಧತಿಗಳು, ಆಚರಣೆಗಳು ಬದಲಾದರೂ ಮೌಲ್ಯಗಳೊಂದಿಗೆ ಸ್ವಲ್ಪವಾದರೂ ಉಳಿದುಕೊಂಡೇ ಚಲಿಸುತ್ತಿರುತ್ತವೆ. ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಳನ್ನು ಗಮನಿಸುತ್ತಾ ಹೋದರೆ ಶತ-ಶತಮಾನಗಳಿಂದಲೂ ಸಾಮಾಜಿಕ ವ್ಯವಸ್ಥೆ ಸೃಷ್ಟಿಸುವ ಸಂದರ್ಭಗಳ ಒತ್ತಡಕ್ಕೆ ಬಾಗುತ್ತ, ಅಸಹಾಯಕತೆಯ ಸುಳಿಯಲ್ಲಿ ಸಿಲುಕಿ ನರಳುತ್ತಿರುವಳು. ಇಂದಿಗೂ ಮಹಿಳೆಯರ ಹಲವಾರು ಸಮಸ್ಯೆಗಳು ಕಣ್ಣ ಮುಂದೆಯೇ ಇದ್ದರೂ ಅಸಹಾಯಕರಾಗಿ ನಿಲ್ಲುವಂತಹ ಸ್ಥಿತಿ ಬಂದೊದಗಿದೆ.

ಪಾಂಡವರ ಮೇಲಿನ ಪದ ಕಥನಗೀತೆಯಲ್ಲಿ ಊರು-ಕೇರಿ :

ಈ ಕಥನಗೀತೆಯು ಭೂಮಿಯನ್ನು ನೆನೆಯುವುದರೊಂದಿಗೆ ಪ್ರಾರಂಭವಾಗಿ ಪಾಂಡವರ-ಕೌರವರ ಜೂಜಿನ ಪ್ರಸಂಗ, ದ್ರೌಪತಿಗೆ 'ವಸಾವಂತು' (ಓಕುಳಿ) ಆಡುವ ಬಯಕೆ, ಓಕುಳಿ ಆಡಲು ಪಾಂಡವರ ಒಪ್ಪಿಗೆ ಪಡೆದು, ಓಕುಳಿ ಆಡುವ ಸಂದರ್ಭದಲ್ಲಿ ಕೌರವ ಪುತ್ರ ದ್ರೌಪದಿಯ ರೂಪಕ್ಕೆ ಮನಸೋತು, ಆಕೆಯನ್ನು ಪಡೆದುಕೊಳ್ಳಬೇಕೆಂದು 'ಜೂಜಾಟ'ದ ವ್ಯೂಹ ರಚಿಸಿ, ಜೂಜಾಟದಿಂದ ಪಾಂಡವರು ತಮ್ಮದೆಲ್ಲವನ್ನು ಸೋತು ಕೊನೆಗೆ ದ್ರೌಪದಿಯನ್ನು ಒತ್ತೆಯಾಗಿಟ್ಟು ಸೋಲುತ್ತಾರೆ. ಇಂತಹ ಸಂದರ್ಭದಲ್ಲಿ ದ್ರೌಪದಿಯನ್ನು ಕೊಟ್ಟ ಮಾತಿನಂತೆ ಕೌರವರ ವಶಕ್ಕೆ ಒಪ್ಪಿಸಲು ಪಾಂಡವರು ಸಿದ್ಧರಾಗಿರುತ್ತಾರೆ. ದ್ರೌಪದಿಯು ಧರ್ಮ ಸಂಕಟಕ್ಕೆ ಸಿಲುಕಿ ಬಳಲುತ್ತ ಕೌರವರ ಮೋಸವನ್ನು ಖಂಡಿಸುತ್ತಾ ಇಂತಹ ಪರಿಸ್ಥಿತಿಯನ್ನು ತಂದೊಡ್ಡಿದ ದುರ್ಯೋಧನನನ್ನು (ದುರಿಯ) ನೆತ್ತರಿನಲ್ಲಿ ತುರುಬನ್ನು ಅದ್ದಿ ಕಟ್ಟುವುದಾಗಿ ಪ್ರತಿಜ್ಞೆಯನ್ನು ಮಾಡುತ್ತಾಳೆ.

ದುರ್ಯೋಧನನು ದ್ರೌಪದಿಯನ್ನು ಕರೆದುಕೊಂಡು ಹೋಗಲು ಬಂದ ಸಂಗತಿಗಳನ್ನು ಜನಪದರು ಆತನು ಮೋಸಗಾರ, ಕೃತ್ಯ ಎಸಗುವವನಾಗಿದ್ದರಿಂದ ಜನರು ಎಚ್ಚೆತ್ತುಕೊಳ್ಳಲು

ಸೂಚನೆಯನ್ನು ನೀಡುತ್ತಾರೆ:

ಅಂದುಲುದಾಗ ಅಗಸೂತಿ ಆನೆ ಮ್ಯಾಲೆ ಮೈಲೀಗೆ
ಅಗಸೂತಿ ಸೆರಗಾ ಹಿಡಿದಾನೆ
ಮಾದೀರ ಕೇರೀಗೆ ಹೋದಾನೆ ಹೊಲಿದುರುಳ
ಮಾದಿಗಿತ್ತಿ ಸೆರುಗಾ ಹಿಡಿದಾನೆ
ಹೊಲೇರ ಕೇರೀಗೆ ಹೋದಾನೆ ಹೊಲಿದುರುಳ
ಹೊಲತೀರ ಸೆರುಗಾ ಹಿಡಿದಾನೆ
ಒಕ್ಕಲೀರ ಕೇರ್‍ಯಾಗೆ ನಿಸ್ತ್ರೇನ್ನ ಮಃಕ್ಕಳಿರ
ನೀವೂನೆ ನಿಮ್ಮನಿಗುಳ ಹೋಗೀರಮ್ಮ – ಇಲ್ಲೊಬ್ಬ
ದುರಿಯೋನಾವ್ನೆ ದೊಂಬಿ ಬಲುದೊಂಬಿ
ಹಾರೊರ ಕೇರ್‍ಯಾಗೆ ನಾರ್ಥೆಣ್ಣ ಮಃಕ್ಕಳಿರ
ನೀವೂನೆ ನಿಮ್ಮನಿಗಳ ಹೋಗೀರಮ್ಮ – ಇಲ್ಲೊಬ್ಬ
ದುರಿಯೋನಾವ್ನೆ ದೊಂಬಿ ಬಲುದೊಂಬಿ"[೪]

ದುರ್ಯೋಧನ ಅಗಸೂತಿಯ ಸೆರಗನ್ನು ಹಿಡಿದಾಗ ಅವಳು ಮೈಲಿಗೀಲಿ ಮುಖಕ್ಕೆ ಹೊಡೆಯುತ್ತಾಳೆ. ಮಾದಿಗಿತ್ತಿ ಸೆರುಗ ಹಿಡಿದಾಗ ಕೊಂಬಿಯಿಂದ ಮುಖಕ್ಕೆ ಹೊಡೆಯುತ್ತಾಳೆ. ಹೊಲತೀರ ಸೆರಗು ಹಿಡಿದಾಗ ಹೆಂಟೆಯಿಂದ ಮುಖಕ್ಕೆ ಹೊಡೆಯುತ್ತಾಳೆ. ಮುಂದೆ ಒಕ್ಕಲಿಗರ ಕೇರಿಯಲ್ಲಿರುವ ನಿಸ್ತ್ರೇರ (ನಾರಿಯರ) ಮಕ್ಕಳೆ ನೀವು ನಿಮ್ಮ ಮನೆಗೆ ಹೋಗಿ ಸೇರಿಕೊಳ್ಳಿ ಇಲ್ಲಿ ದುರಿಯನು (ಕೆಟ್ಟವನು) ಬಂದಿದ್ದಾನೆ. ಆತ ಬಲು ಗಲಾಟೆ ಮಾಡುವಂತಹ ವ್ಯಕ್ತಿ ಇರುವನು ಎಂದ್ಹೇಳಿ ಮುಂದೆ ಹಾರೋರ ಕೇರಿಗೆ ಹೋಗಿ ನಾರಿಯರ ಮಕ್ಕಳೀರ ನೀವು ನಿಮ್ಮನೆಗಳಿಗೆ ಹೋಗಿ, ಇಲ್ಲೊಬ್ಬ ದುರಿಯ ಇದ್ದಾನೆ, ಎಂದ್ಹೇಳಿ, ಆತನ ದುರ್ನಡತೆಯ ಬಗೆಗೆ ಹೇಳುತ್ತಾ ಎಲ್ಲ ಜಾತಿಯ ಹೆಣ್ಣುಮಕ್ಕಳಿಗೂ ಎಚ್ಚರಿಕೆಯನ್ನು ನೀಡುತ್ತಾರೆ. ಇಲ್ಲಿ ತಿಳಿದು ಬರುವ ಇನ್ನೊಂದು ಅಂಶವೆಂದರೆ ಊರು-ಕೇರಿಯ ವಿಚಾರ. ಕೇರಿ ಎಂಬುದು ಇವತ್ತಿನ ದಿನಮಾನದಲ್ಲಿ ಅರ್ಥ ಸಂಕುಚಿತವಾಗಿದೆ. ಮೊದಲು ಕೇರಿ ಎಂಬುದನ್ನು ಎಲ್ಲ ಸಮುದಾಯ ಗಳಿಗೂ ಅನ್ವಯಿಸಿ ಬಳಸುತ್ತಿದ್ದರು ಎಂಬುದು ಮಾದೀರ ಕೇರಿ, ಹೊಲೆಯರ ಕೇರಿ, ಒಕ್ಕಲಿಗರ ಕೇರಿ, ಹಾರೋರ ಕೇರಿ ಎಂದು ಹೇಳುವಲ್ಲಿ ತಿಳಿದುಬರುತ್ತದೆ. ಕೇರಿ ಎಂಬುದು ಅರ್ಥ ವಿಸ್ತಾರವಾಗಿ ಒಂದೊಂದು ಜನಾಂಗದ ಬೀದಿಗೆ ಜಾತಿಯಾಧಾರಿತವಾಗಿ ಕರೆಯುತ್ತಿದ್ದರು

೪. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೨೦೧

ಎನಿಸುತ್ತದೆ. ಕೇರಿ ಎನ್ನುವುದಕ್ಕೆ ನಿಘಂಟಿನಲ್ಲಿ ಸಾಲು, ಹಾದಿ, ಒಂದರ್ಥವಾದರೆ ಇನ್ನೊಂದರ್ಥ ಪಗಡೆ ಹಾಸಿನಲ್ಲಿರುವ ಪಟ್ಟೆ ಎಂದಾಗುತ್ತದೆ. ಆದ್ದರಿಂದ ಕೇರಿ ಎನ್ನುವುದು ಪಗಡೆಯಾಟದ ಪಟ್ಟೆಯಿಂದಲೇ ಉದಯಿಸಿರಬಹುದು ಎನಿಸುತ್ತದೆ. ವಾಸ್ತವದಲ್ಲಿ ಕೇರಿ ಎಂದರೆ ಕೇವಲ ಕೆಳವರ್ಗದ ಜನರು, ಅಸ್ಪೃಶ್ಯರು ಎಂಬ ಭಾವನೆ ಉದ್ಭವಿಸುವ ಹಾಗೆ ಸಂಕುಚಿತವಾಗಿದೆ. ದ್ರೌಪದಿ ಪ್ರತಿಜ್ಞೆ ಮಾಡಿದಂತೆ ದುರ್ಯೋಧನನೊಂದಿಗೆ ಹೋಗಿ ಆತನನ್ನು ಸೋಲಿಸಿ, ಕರುಳು ಬಗೆದು ಆ ರಕ್ತದಲ್ಲಿ ತುರುಬನ್ನು ಅದ್ದಿ ಮುಡಿ ಕಟ್ಟುತ್ತಾಳೆ. ಇದರಿಂದ ಆಕೆಯಲ್ಲಿರುವ ಧೈರ್ಯ, ಮೋಸ ಕೃತ್ಯಗಳಿಗೆ ಪ್ರತ್ಯುತ್ತರ ನೀಡುವಂತಹ ದಿಟ್ಟತನಗಳೆಲ್ಲಾ ಮಹಿಳಾ ಲೋಕಕ್ಕೆ ಸ್ಫೂರ್ತಿದಾಯಕವಾಗಿವೆ.

ಊರಿನ ಉಳಿವಿಗಾಗಿ ಹೋರಾಡಿದ ರಾಮಿ :

"ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುಕ ಜನಕ
ಸಿಟ್ಟಿನ ಮಂದಿ ಬಂಟರ ಹಲಗಲಿ ಮುಟ್ಟಲಿಲ್ಲೊ ದಡಕ"[೫]

ಎಂಬ ಪಲ್ಲವಿಯೊಂದಿಗೆ ಪ್ರಾರಂಭವಾಗುವ ಹಲಗಲಿ ಬೇಡರ ಕಥನಗೀತೆ ಕತ್ತಿ ಹಿಡಿಯುವ ಜನ ಎನ್ನುವಲ್ಲಿ ಈ ಗ್ರಾಮದ ಬೇಡರು, ಶೂರರು, ದಿಟ್ಟರು, ಧೈರ್ಯಶಾಲಿಗಳು, ಸಿಟ್ಟಿನವರಾದ ಹಲಗಲಿ ಬೇಡರ ಬದುಕು ದಡ ಮುಟ್ಟಲಿಲ್ಲ ಎನ್ನುವ ವಿಷಾದದ ಖಿನ್ನತೆ ಧ್ವನಿ ವ್ಯಕ್ತವಾಗುತ್ತದೆ.

ಹಲಗಲಿ ೧೮೬೦ರ ಸುಮಾರು ಮುಧೋಳ ಸಂಸ್ಥಾನದಲ್ಲಿತ್ತು. ಹಲಗಲಿಯ ಅಂಥ ದೊಡ್ಡ ಗ್ರಾಮವೇನೂ ಅಲ್ಲ. ಅಂದು ಜಿಲ್ಲೆಯ ಸ್ಥಳವಾಗಿದ್ದ ಕಲಾದಗಿಯಿಂದ ಹಲಗಲಿ ಇರುವುದು ಐದು ಮೈಲಿ ದೂರದಲ್ಲಿದೆ. ಅಲ್ಲಿಯ ಗ್ರಾಮದ ಬಹಳಷ್ಟು ಜನ ಬೇಡರಾಗಿದ್ದರು. ಇವರು ಒಂದು ಬುಡಕಟ್ಟು ಮಾದರಿ ಗುಂಪಿಗೆ ಸೇರಿದವರಾಗಿದ್ದರು. ಇತರ ಹೊಲಗೆಲಸ ಮಾಡಿ ಬೇಟೆಯಾಡಿ ಜೀವನ ನಿರ್ವಹಣೆ ಇವರದಾಗಿತ್ತು. ಬೇಟೆಯಾಡುತ್ತ ಆಡುತ್ತ ದೂರ ದೂರ ಕಾಡಿನಲ್ಲಿಯೇ ಹೋಗಿ, ತಮಗೆ ಸರಿ ಕಂಡರೆ ಬೇರೆ ಕಡೆ ಉಳಿದು ಮತ್ತೆ ತಮ್ಮ ಮೂಲ ನೆಲೆಗೆ ತಿರುಗುವ ಒಂದು ರೀತಿಯ ಅರೆ ಅಲೆಮಾರಿ ಬಣ. ಈ ಕಾರಣಗಳಿಂದಾಗಿ ಅವರಿಗೆ ಶಸ್ತ್ರಾಸ್ತ್ರಗಳೆಂದರೆ ಅವರಿಗೆ ಜೀವನ ಸಂಗಾತಿಯೇ ಆಗಿದ್ದವು. ಆದಕಾರಣ ಹಲಗಲಿಯ ಬೇಡರಿಗೆ ನಿಶ್ಶಸ್ತ್ರೀಕರಣ ಕಾಯಿದೆಯಿಂದ ಶಸ್ತ್ರಗಳನ್ನು ಕೊಡದಿರುವುದಕ್ಕೆ ಪ್ರತಿಭಟಿಸಿ ನಿಂತರು. ಶಸ್ತ್ರಗಳು ಅವರಿಗೆ ತಮ್ಮ ಜೀವನ-ಬದುಕಿನ ನಿರ್ವಹಣೆಗೂ

೫. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರಕುಮಾರ ಹಕಾರಿ, ಪು.೨೯೬

ಆಧಾರವಾಗಿದ್ದವುಗಳನ್ನು ಕೊಟ್ಟರೆ ತಮ್ಮ ಪ್ರಾಣ ಹೋದಂತೆ ಎಂದುಕೊಂಡಿದ್ದರು. ಆದರೆ ಊರಿನಲ್ಲಿ ಶಸ್ತ್ರಾಸ್ತ್ರಗಳನ್ನು ಮುಚ್ಚಿಟ್ಟವರಿಗೆ ಮೂರು ವರ್ಷದ ಬೇಡಿ. ಬೇಡಿದ ತಕ್ಷಣ ಕೊಟ್ಟರೆ ವತನ ಕೊಡುವುವೆಂದು 'ಕಂಪನಿ' ಸರಕಾರ ಡಂಗುರವನ್ನು ಸಾರಿತು. ಗ್ರಾಮಗಳ ಬೀದಿ-ಬೀದಿಗಳಲ್ಲಿ ಡಂಗುರ ಸಾರಿದಾಗ ಕೆಲವು ಜನರಿಗೆ ಭಯವುಂಟಾಗಿ ಅಧಿಕಾರಿಗಳಿಗೆ ತಂದು ಒಪ್ಪಿಸಿದರು. ಕೆಲವರು ಒಂದೆರಡು ಕೊಟ್ಟಂತೆ ಮಾಡಿ ಮುಚ್ಚಿಟ್ಟರು. ಇದನ್ನು ತಿಳಿದ ಕೆಲವು ಚಾಡಿಕೋರರು ಅಧಿಕಾರಿಗಳಿಗೆ ಅವರು ಹುದುಗಿಟ್ಟ ಬಗೆಗೆ ಸುಳಿಗಳನ್ನು ನೀಡುವರು. ಆದ್ದರಿಂದ ಇಲ್ಲಿ ಬ್ರಿಟೀಷರ ವತನಗಿರಿಯಿಂದ ಹಣದ ಆಮಿಷಕ್ಕೆ ಒಳಗಾಗಿ ತಮ್ಮತನವನ್ನೇ ಮಾರುವಂತಹ ಜನರನ್ನು ಕಾಣುತ್ತೇವೆ.

ಸುದ್ದಿ ತಿಳಿದ ಅಧಿಕಾರಿಗಳು ಮನೆ ಮನೆ ಹೊಕ್ಕು ಶಸ್ತ್ರಾಸ್ತ್ರಗಳೊಂದಿಗೆ ಬೆಳ್ಳಿ-ರತ್ನಗಳನ್ನೆಲ್ಲವನ್ನು ತೆಗೆದುಕೊಂಡು ಹೋದರು. ಜನರೆಲ್ಲರೂ ಚಿಂತಾಕ್ರಾಂತರಾಗಿ ಹಲ್ಲು ಕಿತ್ತ ಹಾವಿನಂತಾದೆವಲ್ಲ ಎಂದು ವ್ಯಥೆಪಡುವರು. ಕಾಲ ಎನ್ನುವುದು ಎಷ್ಟು ಕಷ್ಟ ತಂದಿತಲ್ಲಾ, ದೇವರು ಎಂತಹ ಪಡಿಪಾಟ ತಂದನಲ್ಲ ಎನ್ನುತ್ತಾ ತಮ್ಮ ಅಸಹಾಯಕತೆಯನ್ನು "ಹಲ್ಲ ಕಿತ್ತಿದ ಹಾಂವಿನ ಪರಿಯು ನಮಗ ಆದಿತ್ ಅಲ್ಲಾ, ರಂಡಿ ಮುಸುಕ ಹಾಕಿ ತಿರಗಿದರ ನಮ್ಮ ಮಾನ ಉಳಿಯುವದಿಲ್ಲ."[೬] ಗಂಡ ಸತ್ತ ಮಹಿಳೆಗೆ ಅವಾಚ್ಯ ಶಬ್ದವನ್ನು ಬಳಸಲಾಗಿದೆ. ವಿಧವೆಯಾದವಳು ಒಂಬತ್ತು ದಿನದವರೆಗೂ ಯಾರ ಮುಖವನ್ನೂ ನೋಡಬಾರದೆಂಬ ನಿಷೇಧ ಇಂದಿಗೂ ಇದೆ. ಯಾಕೆಂದರೆ ಅಮಂಗಳೆ ಎಂಬ ಬಿರುದನ್ನು ಸಮಾಜ ಕೊಟ್ಟಿರುವುದು. ಸಮಾಜದಲ್ಲಿ ಗಂಡ ಸತ್ತ ವಿಧವೆಗೆ ಹಲವಾರು ಆಚರಣೆಗಳ ಮೂಲಕ, ಆಕೆಯನ್ನು ಕೆಟ್ಟದೃಷ್ಟಿಯಿಂದ ನೋಡುವುದು ಅಂದೂ ಇದೆ; ಇಂದೂ ಕೆಲಮಟ್ಟಿಗೆ ಗೋಚರಿಸುತ್ತದೆ. ಅದರಲ್ಲೂ ಕೆಲವೊಂದು ಸಮಾಜದಲ್ಲಂತೂ ಇದ್ದು ಸತ್ತ ಹಾಗೆ ಆಕೆಯ ಜೀವನ ನಿರೂಪಿತವಾಗುತ್ತದೆ. ಆದ್ದರಿಂದ ವಿಧವೆಯೆಂದರೆ ಮುಸುಕು ಹಾಕಿ ತಿರುಗುವಳು ಮುಖವನ್ನು ತೋರಿಸಲೂ ಅಸಹಾಯಕಳಾದವಳು ಎಂಬುದು ತಿಳಿದುಬರುತ್ತದೆ. ಜೊತೆಗೆ ತನ್ನ ಹೆಂಡತಿಯನ್ನೇ ಕೊಟ್ಟ ಹಾಗೆ ಆಯಿತು ಎನ್ನುವಲ್ಲಿ ತಮ್ಮ ಹೆಂಡತಿಯರನ್ನು ಕಾಪಾಡಿಕೊಳ್ಳಲು ಅಸಹಾಯಕ ಸ್ಥಿತಿಯೆಂದು ಒಂದರ್ಥವಾದರೆ, ಶಸ್ತ್ರಾಸ್ತ್ರಗಳನ್ನು ಅಧಿಕಾರಿಗಳಿಗೆ ಅರ್ಪಿಸಿದರ ಫಲವಾಗಿ ತಮ್ಮ ಜೀವ-ಜೀವನವೆಂದಿದ್ದವುಗಳನ್ನು ತಮ್ಮ ಹೆಂಡತಿಯರಿಗೆ ಹೋಲಿಸಿ ಹೇಳಿರಬಹುದೆಂಬರ್ಥವೂ ಆಗುತ್ತದೆ.

---

೬. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರ, ಪು.೩೮೦

ರೆಕ್ಕೆ ಕಿತ್ತ ಹಕ್ಕಿಯಂತೆ, ಅಸಹಾಯಕರಾದ ಸ್ಥಿತಿಯನ್ನು ನೋಡಿದರೆ ಶ್ರೀಮಂತರು, ಪಾಳೇಗಾರರು, ದೊರೆಗಳು ಯಾರಾದರೂ ವಿರೋಧ ವ್ಯಕ್ತಪಡಿಸಿದರೂ ಅವರ ಕೈಯಲ್ಲಿ ಉಳಿಯುತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದರೆ ಮುಧೋಳ ಸಂಸ್ಥಾನದ ಹಲಗಲಿಯ ಬೇಡರು ಇವೆಲ್ಲವನ್ನು ಧಿಕ್ಕರಿಸಿದರು. ಅದರಲ್ಲಿ ಪೂಜಾರಿ ಹನುಮ, ಬಾಲ ಜಡಗ, ರಾಮರು ನಾಲ್ಕು ಜನ ಸೇರಿ ಒಳಗೊಳಗೆ ಉಪಾಯವನ್ನು ಮಾಡಿದರು.

* ಒಮ್ಮೆ ಹೋದ ಜೀವ ಮರಳಿ ಬಾರದು ಎನ್ನುವ ಹಾಗೆ ಒಮ್ಮೆ ಕೈಯೊಳಗಿನ ಹತಾರ ಕೊಟ್ಟರೆ ನಮ್ಮ ಜೀವ ಹೋದ ಹಾಗೆ; ಅದಕ್ಕಾಗಿ ನಾವು ಕೊಡುವುದಿಲ್ಲ.
* ಸುತ್ತ-ಮುತ್ತಲಿನಲ್ಲಿರುವ ದೊರೆಗಳಿಗೆ, ಗೌಡರಿಗೆ, ದೇಸಾಯಿ, ವತನದಾರಿಗಳಿಗೆ ನಿಮ್ಮ ಜೊತೆಗೆ ನಾವು ಇರುತ್ತೇವೆ. ನಾವು ಹತಾರ ಕೊಡುವುದಿಲ್ಲವೆಂದು ಹೇಳಿ ಕಳುಹಿಸಿದರು.

ತಾವು ಈ ಮಾತಿಗೆ ತಪ್ಪುವುದಿಲ್ಲ ಎಂದುಕೊಂಡು ವಚನವಿತ್ತರು. ಅಷ್ಟರಲ್ಲಿ ಹತಾರಗಳನ್ನು ಕೇಳುವುದಕ್ಕೆ ಬಂದ ಸಿಪಾಯಿಯ ಕಪಾಳಕ್ಕೆ ಹೊಡೆದರು. ಆತ ನೆಲಕ್ಕೆ ಬಿದ್ದ ಕಾರಣ ತಮ್ಮ ಮೇಲಿನ ಸಿಪಾಯಿಗಳಿಗೆ ಸುದ್ದಿ ತಿಳಿಸಿದನು. ಆಗ ಪಕ್ಕದ ಹಳ್ಳಿಯಾದ ಕುಂದುರಗಿಯ ಗೌಡರಾದ ಕೃಷ್ಣನಾಯಕನನ್ನು ಬೇಡರ ಮನವೊಲಿಸಲು, ಸಂಧಾನ ಮಾಡಿಕೊಳ್ಳಲು ಕರೆಯಿಸಿದರು. ಗೌಡರು ಹಠ ಬಿಟ್ಟು, ನಿಮ್ಮ ಹತಾರಗಳನ್ನು ಸಾಹೇಬರ ವಶಕ್ಕೆ ಒಪ್ಪಿಸಿಬಿಡಿ ಎಂದು ಹೇಳಿದಾಗ ಹಲಗಲಿಯ ಬೇಡರ ಉತ್ತರ:

"ಹತಾರ ಕೊಡಲಿಕ ಹೆಂಗಸ್ ಆಗಿ ಬಳಿಯ್ ಇಟ್ಟಿಲ್ ಕೈಯಾಗ
ಯಾವ ಬಂದೀರಿ ಜೀವ ಹೋದರು ಕೊಡುದಿಲ್ಲ ಸುಮ್ಮನ ಹೋಗರಿ ಈಗ"

ಎಂದು ಸ್ವಾಭಿಮಾನಿಗಳಾಗಿ ಉತ್ತರವನ್ನು ಮುಖಕ್ಕೆ ಹೊಡೆದ ಹಾಗೇ ಕೊಟ್ಟರು. ಹೆಣ್ಣುಮಕ್ಕಳಾಗಿದ್ದರೆ ಹೆದರಿಸಿ, ಬೆದರಿಸಿ, ತೆಗೆದುಕೊಂಡು ಹೋಗಬಹುದು. ಎಂದು ಹೆಣ್ಣು ಶಾರೀರಿಕವಾಗಿ(ದಾರ್ಢ್ಯತೆ) ಪುರುಷರಿಗಿಂತ ಶಕ್ತಿಹೀನಳು ಎಂಬುದು ಕೆಲಮಟ್ಟಿಗೆ ಸರಿ ಎಂದರೂ ಮಾನಸಿಕವಾಗಿ ಕೂಡ ಪ್ರಬಲಳಾಗದೇ ಸಮಾಜದಿಂದ, ಶಿಕ್ಷಣದಿಂದ ವಂಚಿತಳಾಗಿದ್ದಳು. ಆದ್ದರಿಂದ ಪುರುಷರಿಗಿರುವಷ್ಟು ಧೈರ್ಯ, ಬಲ ಹೆಣ್ಣಿಗೆ ಇಲ್ಲವೆಂಬುದು ಅರ್ಥವಾಗುತ್ತದೆ. ಆಕೆ ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಬಂದ ನೋವುಗಳನ್ನು ತನ್ನ ಒಡಲಲ್ಲಿ ಧರಿಸಿಕೊಂಡೇ ಜೀವನ ಸಾಗಿಸುತ್ತಾ ಬಂದಿರುವಳು.

ಕುದುರೆ ಸಿಪಾಯಿಗಳಿಗೆ, ಹಲಗಲಿಗೆ ದಾಳಿ ಮಾಡಲು ಹುಕುಮ್ (ಅಪ್ಪಣೆ) ಕೊಟ್ಟನು ಅವರ ಮೇಲಾಧಿಕಾರಿ. ಸಿಪಾಯಿಗಳು ಊರಿಗೆ ಕಾಲಿಡುವಷ್ಟರಲ್ಲಿ ಹಲಗಲಿ ಬೇಡರು ರಭಸದಂತೆ ಗುಂಡು ಹಾರಿಸಿದರು. ಗುಂಡಿನ ಹೊಡೆತವನ್ನು ಹತ್ತಿಕ್ಕಲಾಗದ ಕಾರಣ ಒಂದು ಗುಂಡಿನ ಹತ್ತಿರ ಬಂದು ಬೇಗ ದಂಡನ್ನು ಕಳುಹಿಸಿ ಎಂದು ಪತ್ರ ಬರೆದು ಒಬ್ಬನೊಂದಿಗೆ ಕೊಟ್ಟು ಕಳುಹಿಸಿದರು. ಈ ಸುದ್ದಿ ಬಂದ ತಕ್ಷಣವೇ ತಂಡೋಪತಂಡ ಸೈನಿಕರು ನೇರವಾಗಿ ಹಲಗಲಿಯ ಮೇಲೆ ದಾಳಿ ಮಾಡಿದರು. ಈ ದಾಳಿಯಿಂದ ಊರಿನ ಜನರು ತತ್ತರಿಸಿದರು. ರಾತ್ರಿ ಹೊತ್ತು ಮೈ ಮರೆವಿನಿಂದ ಮಲಗಿರುವ ಹಲಗಲಿಯ ಜನರೆಲ್ಲಾ ಕಕ್ಕಾಬಿಕ್ಕಿಯಾಗಿ ಗುಂಡಿನ ಚಕಮಕಿಗೆ ಕೆಲವರು ದಿಕ್ಕೆಟ್ಟು ಹೋದರು, ಕೆಲವರು ಹೆಣವಾದರು, ಕೆಲವರು ಅಂಜದೆ ದಯೆ ತೋರದೆ ಸಿಕ್ಕಸಿಕ್ಕವರನ್ನು ಕಡಿದು ಹಾಕಿದರು.

ದಾಳಿಯ ಮಧ್ಯದಲ್ಲಿ ಹೆಬಲಕ್ ಸಾಹೇಬ ಊರ ಅಗಸಿಗೆ ಬಂದು ನಿಂತ. ಸುತ್ತಲೂ ಜನರ ದಂಡು ನಡುವೆ ಬೇಡರ ಗುಂಪು. ಆಗ ಹೆಬಲಕ್ ವ್ಯರ್ಥ ಸಾಯಬೇಡಿರಿ, ಶಸ್ತ್ರಾಸ್ತ್ರಗಳೆಲ್ಲವನ್ನು ತಂದು ಒಪ್ಪಿಸಿಬಿಡಿ, ನಿಮ್ಮನ್ನು ಕೊಲ್ಲುವುದಿಲ್ಲ. ನಿಮಗೆ ಕಾವಲು ಕೊಡುತ್ತೇವೆ ಎಂದು ಕರಾರು ಮಾಡಿಕೊಳ್ಳಲು ಬುದ್ಧಿ ಮಾತು ಹೇಳುವನು. ಇವನ ಮಾತಿನಲ್ಲಿ ಬೇಡರ ಗುಂಪಿಗೆ ನಂಬಿಕೆಯಿಲ್ಲ. ಆಗ ಜಡಗ ಎನ್ನುವ ವ್ಯಕ್ತಿ ಗುಡುಗಿ, ಲೇ ಇವರನ್ನು ನಂಬಬೇಡಿ, ಇವರು ವಿಶ್ವಾಸ ಘಾತಕರು, ನುಡಿದಂತೆ ನಡೆದವರಲ್ಲ. ಏನೋ ಪಿತೂರಿ ಮಾಡ್ತಾರೆ. ಇವತ್ತು ಮೋಸ ಮಾಡ್ತಾರಾ, ನಾಳೆ ದೇಶ ತಗೊಂಡ ಹೋಗ್ತಾರ ಹೊಡೀರಿ ಇವರನ್ನು ಎಂದನು. ಧಡಲ್ ಎಂದು ಒಂದೇ ಗುಂಡಿಗೆ ಹೆಬಲಕ್ ಹೆಣವಾದ. ಈ ಸುದ್ದಿಯನ್ನು ತಿಳಿದ ಸಾಹೇಬರು ಬೆಂಕಿ ಕಾರಿ ಇಡೀ ಊರನ್ನೇ ಲೂಟಿ ಮಾಡಲು ಮತ್ತು ಬೇಡರನ್ನು ಸೆದೆಬಡಿಯಿರಿಯೆಂದು ತಮ್ಮ ಸೈನಿಕರಿಗೆ ಸೂಚಿಸಿದ. ಮತ್ತೆ ಗುಂಡಿನ ಆರ್ಭಟ, ಮುನ್ನೂರು ಮಂದಿ ಸೈನಿಕರನ್ನು ಸೆದೆಬಡಿಯುತ್ತೇನೆ ಎಂದು ಹನುಮ ಗುಂಡು ಹಾರಿಸಿದನು. ಇನ್ನೊಂದು ಕಡೆ ಭೀಮ ಐನೂರು ಸೈನಿಕರನ್ನು ಸೆದೆಬಡಿಯತೊಡಗಿದನು. ಬಾಲ ಎನ್ನುವನು ಹತ್ತು ಸಿಪಾಯಿಗಳನ್ನು ಕಡಿದನು. ರಾಮನ ಕತ್ತಿಯಿಂದ ರಕ್ತದ ಕಾಲುವೆ ಹರಿಯಿತು. ಅವರು ಸಾವಿರಾರು ಜನ, ಸಿಪಾಯಿಗಳು, ಇವರು ನಾಲ್ಕೈದು ಜನ, ಒಬ್ಬೊಬ್ಬರಾಗಿಯೇ ಬಲಿಯಾದರು. ಆರು ಗುಂಡು ತಾಕಿ ಹನುಮ ನೆಲಕ್ಕೆ ಬಿದ್ದನು. ಅವನ ಸುತ್ತಲೂ ಜನರ ಆಕ್ರಂದನ. ಇದೇ ಸಮಯದಲ್ಲಿ ಏರಿ ಬರುತ್ತಿದ್ದ ಸವಾರರಲ್ಲಿ 'ರಾಮಿ' ಎನ್ನುವಾಕೆ ಮೂವರು ಸೈನಿಕರನ್ನು ಕತ್ತರಿಸಿದಳು. ಆರು ಕುದುರೆಗಳನ್ನು ಕೊಚ್ಚಿ ಹಾಕಿದಳು. ಪುರುಷರ ಸಮಾನ

ತಾನೂ ಕೂಡಾ ಹೋರಾಡಿ, ಶೌರ್ಯ ಪ್ರದರ್ಶಿಸಿ ಗುಂಡಿನ ಸಿಡಿತಕ್ಕೆ ಸಿಕ್ಕು ವೀರಮಹಿಳೆಯಾಗಿ ಸಾವನ್ನಪ್ಪಿದಳು.

'ರಾಮಿ' ಹನುಮ ನೆಲಕ್ಕೆ ಬಿದ್ದು ಜನ ಬೋರಾಡುತ್ತಿರುವಾಗಲೇ ಹೊರಗೆ ಬಂದು 'ಹತಾರ'ದಿಂದ ಮೂರು ಜನರನ್ನು ಕೊಲ್ಲುತ್ತಾಳೆ. ಅವಳಲ್ಲಿ ಉಕ್ಕಿದ ಈ ರೋಷ ಪ್ರಾಣದ ಹಂಗು ತೊರೆದಂತೆ ಕಾಣುವ ರೌದ್ರತೆಯನ್ನು ನೋಡಿದರೆ ಬೇಡರ ಗುಂಪಿನಲ್ಲಿದ್ದ ಹನುಮನಿಗೆ ವಿಶೇಷ ಸಂಬಂಧಿಯಾಗಿರಬೇಕು ಎನಿಸುತ್ತದೆ. ಆದರೂ ಮಹಿಳೆಯಾಗಿ ಹೋರಾಡಿದ್ದು ಶ್ಲಾಘನೀಯ.

ಇವರೆಲ್ಲಾ ಅಳಿದ ತಕ್ಷಣ ಸಿಪಾಯಿಗಳು ಊರೆಲ್ಲವನ್ನು ಲೂಟಿ ಮಾಡಿದರು. ಊರಲ್ಲಿರುವ ಮನೆ ಮನೆ ಹೊಕ್ಕು ಮುತ್ತು-ರತ್ನ, ಮಾಣಿಕ್ಯ, ಬೆಳ್ಳಿ, ಬಂಗಾರ, ಬಲಗಾಡಿ, ಕಡಗ, ಕಂಕಣ, ಡಾಬು, ತಮ್ಮ ಕೈಗೆ ಏನು ಎಟುಕುವುದೋ ಅವೆಲ್ಲವನ್ನು ಲೂಟಿ ಮಾಡಿದರು. ಇಷ್ಟೇ ಅಲ್ಲದೆ ಬಟ್ಟೆ-ಬರೆ, ದಿನಸಿ ಸಾಮಾನು, ಮಂಗಳಸೂತ್ರ ಮೊದಲಾದವುಗಳನ್ನು ದೋಚಿ ಇಡೀ ಹಲಗಲಿಗೆ ಬೆಂಕಿ ಹಚ್ಚಿದರು. ಅಲ್ಲಿದ್ದಲ್ಲಿಯ ಸಣ್ಣ ಕುರುಹುಗಳು ಸಹ ಸುಟ್ಟು ಹೋದವು. ಗುರುತು ಸಿಗದಷ್ಟು ಹಲಗಲಿ ಎಂಬ ಊರು ನಾಶವಾಗಿ ಉರಿದು ಬೂದಿಯಾಗಿ ಹೋಯಿತು.

ಹಲಗಲಿಯ ಬೇಡರು ತಮ್ಮ ಊರಿನ ಪ್ರದೇಶವನ್ನು, ಜನರನ್ನು ಕಂಪನಿ ಸಿಪಾಯಿಗಳಿಂದ ಆಗುವ ಅನ್ಯಾಯ, ಆಕ್ರಮಣಗಳಿಂದ ದೂರ ಮಾಡಬೇಕೆಂದು ಧೈರ್ಯಗುಂದದೇ ಹೋರಾಡಿದರೂ ಸಹ ಅವರ ಸೈನ್ಯದ ಒತ್ತಡಕ್ಕೆ ಸಿಲುಕಿ ತಮ್ಮ ಸಾವು ಕೂಡ ಸಂಭವಿಸಿತು. ಊರು ಅನ್ನುವುದು ಗುರುತೆ ಸಿಗದಷ್ಟು ಹಾಳಾಗಿ, ನಾಶವಾಯಿತು ಎಂದು ಹಲಗಲಿಯ ಬೇಡರು ಕಥನಗೀತೆಯಲ್ಲಿ ಆ ಊರಿಗಾಗಿ ಪುರುಷರೊಂದಿಗೆ ಮಹಿಳೆಯು ಹೋರಾಡಿದ ಬಗೆಗೆ, ಆಕೆಯ ದಿಟ್ಟತನದ ಬಗೆಗೆ ತಿಳಿಸಿಕೊಡುವುದರೊಂದಿಗೆ ಊರಿನ ನಾಶದ ಹಿಂದಿರುವ ಪಿತೂರಿಯನ್ನು ಕೂಡಾ ಅರಹುತ್ತದೆ.

೪.೨. ಗೌಡ – ಶಾನಭೋಗ :

ಮೊದಲು ಸಾರ್ವಜನಿಕವಲಯದಲ್ಲಿ ಗೌಡ, ಶಾನುಭೋಗ, ತಳವಾರ ಎಂದು ಮುಂತಾದ ಸರಕಾರದ ಪ್ರತಿನಿಧಿಗಳಿರುತ್ತಿದ್ದರು. ಸರಕಾರವೆಂದರೆ ಇವರೇ ಎಂದರೆ ತಪ್ಪಾಗದು. ಪ್ರಾಂತಾಡಳಿತವನ್ನು ರಾಜಮನೆತನದವರು ನೋಡಿಕೊಳ್ಳುತ್ತಿದ್ದರು. ಸಾಮ್ರಾಜ್ಯವು ರಾಜ್ಯ,

ನಾಡು ಹಾಗೂ ಗ್ರಾಮಗಳೆಂಬ ಆಡಳಿತ ಘಟಕಗಳನ್ನು ಹೊಂದಿತ್ತು. ಅರಸನು ನ್ಯಾಯಾಂಗ ವಿಚಾರಗಳಲ್ಲಿ ಪರಮಾಧಿಕಾರವನ್ನು ಪಡೆದಿದ್ದನು. ಪ್ರಾಂತಗಳಲ್ಲಿ ಪ್ರಾಂತಾಧಿಕಾರಿಯು ನ್ಯಾಯ ತೀರ್ಮಾನ ಮಾಡುತ್ತಿದ್ದನು. ಗ್ರಾಮಗಳು ಆಡಳಿತ ವ್ಯವಸ್ಥೆಯ ಕೊನೆಯ ಘಟಕಗಳಾಗಿದ್ದು, ಗ್ರಾಮಸಭೆಗಳು ಆಡಳಿತ ನಿರ್ವಹಿಸುತ್ತಿದ್ದವು. ಗೌಡ, ಕರಣಮ್ (ಶಾನುಭೋಗ), ತಳವಾರ ಗ್ರಾಮಾಡಳಿತದಲ್ಲಿ ನೆರವಾಗುತ್ತಿದ್ದರು.

ವಿಜಯನಗರ ಸಾಮ್ರಾಜ್ಯದಲ್ಲಿ ಸಮಾಜವು ಚಾತುರ್ವರ್ಣ ವ್ಯವಸ್ಥೆಯ ಮೇಲೆ ರೂಪಗೊಂಡಿತ್ತು. ಹೀಗಿದ್ದರೂ ಅನೇಕ ವೃತ್ತಿ ಆಧಾರಿತ ಜಾತಿ ವ್ಯವಸ್ಥೆ ಜಾರಿಯಲ್ಲಿತ್ತು. ಕುಶಲಕಲೆಗಾರರು, ನೇಕಾರರು, ಸಮಗಾರರು(ಚಮ್ಮಾರರು), ಬಡಗಿಗಳು ಅಧಿಕ ಸಂಖ್ಯೆಯಲ್ಲಿದ್ದರು. ಬಾಲ್ಯವಿವಾಹ, ಸಹಗಮನ ಮತ್ತು ದೇವದಾಸಿ ಪದ್ಧತಿಗಳು ರೂಢಿ-ಯಲ್ಲಿದ್ದವು. ಸಾಮಾನ್ಯವಾಗಿ ಏಕಪತ್ನಿತ್ವ ರೂಢಿಯಲ್ಲಿದ್ದರೂ ದೊರೆಗಳು ಮತ್ತು ಶ್ರೀಮಂತರು ಬಹುಪತ್ನಿಯರನ್ನು ಹೊಂದಿರುತ್ತಿದ್ದರು.

ಸಾರ್ವಜನಿಕ ವಲಯದಲ್ಲಿ ಮಹಿಳೆಯರನ್ನು ದೇವದಾಸಿಯಾಗಿ ಅಥವಾ ಬಸವಿಯಾಗಿ, ನಿಲ್ಲಿಸಿದ ಸಮಾಜದ ಚಿತ್ರಣಗಳು ಕಂಡುಬರುವುದು ದುರಂತವಾಗಿದೆ. ದೇವದಾಸಿಯಾದವಳು ಎಂದಿಗೂ ಮದುವೆಯಾಗುವಂತಿರಲಿಲ್ಲ. ಅವಳು ಯಾವತ್ತಿಗೂ ಸಾರ್ವಜನಿಕ ಸ್ವತ್ತು. ಬಯಸಿದವರಿಗೆಲ್ಲಾ ಭೋಗದ ವಸ್ತುವಾಗಿರುತ್ತಾಳೆ. ಮೊದಲು ಊರಿನ ಗೌಡರು, ಕುಲಕರ್ಣಿ, ಪಟೇಲ, ಶಾನುಭೋಗ, ಪೂಜಾರಿಗಳು ಆ ಮಹಿಳೆಯನ್ನು ಅನುಭೋಗಿಸುತ್ತಿದ್ದರು. ಮಹಿಳೆಯನ್ನು ದೇವದಾಸಿಯಾಗಿ ಬಿಡದಿದ್ದರೆ ನಿಮ್ಮ ವಂಶ, ಊರು, ಊರಿನ ಜನರನ್ನು ದೇವಿ ನಾಶ ಮಾಡಿಬಿಡುತ್ತಾಳೆ ಎಂದು ಹೆದರಿಸಿ ಅಸಹಾಯಕರನ್ನು ಬಲಿಯಾಗಿಸುತ್ತಿದ್ದರು. ಬಹುಪಾಲು ಈ ನೋವನ್ನು ಅನುಭವಿಸಿದವರು ದಲಿತರು, ಬಡವರೇ ಆಗಿದ್ದರು. ಇವೆಲ್ಲ ಸಂಗತಿಗಳನ್ನು ಅವಲೋಕಿಸಿದರೆ ಕಥನಗೀತೆಗಳಲ್ಲಿ ಹೆಚ್ಚು ಶೋಷಣೆಗೆ ಒಳಗಾದವರೆಂದರೆ ದಲಿತ ಮಹಿಳೆಯರಾಗಿದ್ದಾರೆ.

ಆಧುನಿಕ ಯುಗದಲ್ಲಿ ಒಂದೇ ರೀತಿಯಾದ ಪಂಚಾಯತ್ ರಾಜ್ ವ್ಯವಸ್ಥೆಗಳು ಇಲ್ಲ. ಸಂವಿಧಾನಕ್ಕೆ ೭೩ನೇ ತಿದ್ದುಪಡೆ ತಂದ ಮೇಲೂ ಇಡೀ ದೇಶದಲ್ಲಿ ಒಂದೇ ರೀತಿಯ ಪಂಚಾಯತ್‌ಗಳು ಬಂದಿಲ್ಲ. ಈಗಿನ ಪಂಚಾಯತ್ ವ್ಯವಸ್ಥೆ ಬರುವುದಕ್ಕೆ ಮುಂಚೆ ಅಂದರೆ ರಾಜ-ಮಹಾರಾಜರ ಕಾಲದಲ್ಲಿ ಹಳ್ಳಿಗಳಲ್ಲಿ ಇದ್ದ ವ್ಯವಸ್ಥೆ ಬಹುತೇಕ ಎಲ್ಲ ರಾಜ್ಯಗಳಲ್ಲಿ ಒಂದೇ ತೆರನಾಗಿತ್ತು. ಆ ವ್ಯವಸ್ಥೆಯನ್ನು 'ಪಂಚರ ಆಡಳಿತ' ಎಂದು ಕರೆಯುತ್ತಾರೆ.

ಇಂದಿಗೂ ಕೆಲವು ಪ್ರದೇಶಗಳಲ್ಲಿ ಆಧುನಿಕ ಪಂಚಾಯತ್‌ಗಳ ಆಡಳಿತ ವ್ಯವಸ್ಥೆಯನ್ನು ಅವರೇ ನಿಯಂತ್ರಿಸುತ್ತಾರೆ.

ಊರಿನ ಪಂಚರಿಗೆ ಆ ಊರಿನ ಎಲ್ಲ ಕುಟುಂಬಗಳಿಗೆ ಸೇರಿದ ಕೌಟುಂಬಿಕ ವಿವಾದ, ಜಗಳ, ಜಮೀನು ವಿವಾದ, ಧಾರ್ಮಿಕ ವಿವಾದ, ಸಾಮಾಜಿಕ ವಿವಾದ, ಹಣಕಾಸು ವಿವಾದಗಳ ಕುರಿತು ತೀರ್ಮಾನ ನೀಡುವ ಪರಮಾಧಿಕಾರ ಇವರಿಗಿತ್ತು. ಕೆಳಜಾತಿಯವರು, ಶ್ರೀಮಂತರು, ಮೇಲ್ಜಾತಿಯರು ಮಾತ್ರ ಇರುವ ಒಂದು ನ್ಯಾಯ ಪಂಚಾಯತಿ ಇರುತ್ತಿತ್ತು. ಜನರು ಈ ಪಂಚಾಯತ್ ಕೊಡುವ ತೀರ್ಪನ್ನು ವಿರೋಧಿಸದೇ ತೆಪ್ಪಗೆ ಒಪ್ಪಿಕೊಳ್ಳಬೇಕಿತ್ತು. ಇವೆಲ್ಲವುಗಳ ಸುಳಿಯಲ್ಲಿ ಸಿಕ್ಕು ಸಮಾಜದಲ್ಲಿ ಬಾಳಬೇಕಾದ ಪರಿಸ್ಥಿತಿ ಮಹಿಳೆಗೆ ಇತ್ತು. ಇದಕ್ಕೆ ಪ್ರತಿರೋಧ ಎಂಬಂತೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಿರಗೂರಿನ ಗಯ್ಯಾಳಿಗಳು ಎಂಬ ನೀಳ್ಗತೆಯಲ್ಲಿ (ಕಥೆಯಲ್ಲಿ) ದಾನಮ್ಮ ಗಂಡಸರು ಮಾಡುವ ಜಾತಿಗಳು, ಆಚಾರಗಳು, ಮದುವೆಗಳು, ಪಂಚಾಯ್ತಿಗಳು ಹೀಗೆ ಪ್ರತಿಯೊಂದು ಹೆಂಗಸರಿಗೆ ಹಿಂಸೆ ಕೊಡುವ ನೀಚತಂತ್ರ ಎಂಬುದನ್ನು ಕಂಡುಕೊಂಡು ನ್ಯಾಯದ ಪರ ಮುಂದಾಳತ್ವ ವಹಿಸಿ ಮಾತನಾಡಿದಾಗ ಮಹಿಳೆಯರೆಲ್ಲ ಆಕೆಗೆ ಕೈಜೋಡಿಸುವ ಸಂಗತಿ ಇಡೀ ಮಹಿಳಾ ಲೋಕಕ್ಕೆ ಮಾದರಿಯಾಗಿದೆ ಹಾಗೂ ಸಾರ್ವಜನಿಕ ವಲಯದಲ್ಲಿ ಸಾಮಾಜಿಕ ಬದಲಾವಣೆಯ ಹಂದರಕ್ಕೆ ವನಿತಾಕ್ರಾಂತಿಗೆ ದಾನಮ್ಮಳೇ ಮೂಲ ಕಾರಣವಾಗಿ ನಿಲ್ಲುತ್ತಾಳೆ.

ಗೌಡರು ಊರಿನ ಸಮಸ್ತ ಜವಾಬ್ದಾರಿಯನ್ನು ಹೊತ್ತ ಪ್ರಮುಖರು. ಇವರನ್ನು ಪಟೇಲ, ಧಣಿಕ ಎಂದು ಕರೆಯುತ್ತಾರೆ. ಗ್ರಾಮದ ಮುಖಂಡರಾದ ಗೌಡರು ಊರವರ ಅನುಕೂಲಕ್ಕಾಗಿ, ಪಶು-ಪಕ್ಷಿಗಳಿಗಾಗಿ ಕೆರೆ-ಬಾವಿ, ಕಾಲುವೆ ಕಟ್ಟಿಸುತ್ತಿದ್ದುದ್ದು ಸಾರ್ವಜನಿಕ ವಲಯದ ಹೊಣೆಗಾರಿಕೆಯಾಗಿದೆ. ಶಾನುಭೋಗರು ಎಂದರೆ ಊರಿನ ಸಮಸ್ತ ಜನರಿಗೆ ಜ್ಯೋತಿಷ್ಯವನ್ನು ಹೇಳುವಂತವರು. ಕಟ್ಟಿಸಿದ ಕೆರೆಗೆ ಜನರ ಭವಿಷ್ಯತ್‌ಕಾಲದ ಬಗೆಗೆ ಮೂಢನಂಬಿಕೆ ಬಿತ್ತರಿಸುವ ಕಾರ್ಯ ಇಂದಿಗೂ ಪ್ರಚಲಿತದಲ್ಲಿದೆ. ತಮ್ಮ ಭವಿಷ್ಯದ ಬಗೆಗೆ ಗೊತ್ತಿರದವರು ಇನ್ನೊಬ್ಬರ ಭವಿಷ್ಯದ ಬಗೆಗೆ ಹೆಚ್ಚಿನದಾಗಿ ಬಿತ್ತರಿಸುವವರು, ಜನರನ್ನು ಮೌಢ್ಯತೆಗೆ ಕೊಂಡೊಯ್ಯುವವರು, ಸಮಾಜವನ್ನು ಅಧೋಗತಿಗೆ ತರುವಲ್ಲಿ ಇವರೂ ಒಬ್ಬರು ಕಾರಣೀಭೂತರು. ಕಥನಗೀತೆಗಳಲ್ಲಿ ಜ್ಯೋತಿಷಿಗಳ ಹೇಳಿಕೆಗಳನ್ನು ಕೇಳಿ ಅದೆಷ್ಟೋ ಮಹಿಳೆಯರನ್ನು ಗೌಡರು, ಊರಿನ ಜನತೆ ಸೇರಿ ಬಲಿ ಕೊಟ್ಟುದುದನ್ನು ಕಾಣುತ್ತೇವೆ.

ಕಥನಗೀತೆಗಳಲ್ಲಿ ಇವೆಲ್ಲಾ ಒಡಮೂಡಲು ಕಾರಣ ಅಂದಿನ ಸಮಾಜದಲ್ಲಿ ಇಂತಹ ಘಟನೆಗಳು ಸಾಕಷ್ಟು ನಡೆಯುತ್ತಿರುವುದೇ ಆಗಿದೆ.

ಕೆರೆಯ ಸೆಲೆಗಾಗಿ ಹಿರಿಯ ಸೊಸೆ ಭಾಗೀರಥಿಯನ್ನು ಬಲಿ ಕೊಟ್ಟ ಮಲ್ಲನಗೌಡ :

ಕಲ್ಲನಕೆರೆ ಮಲ್ಲನಗೌಡ ಒಂದು ಕೆರೆಯನ್ನು ಕಟ್ಟಿಸುತ್ತಾನೆ. ಅದರಲ್ಲಿ ಬೊಗಸೆಯಷ್ಟು ಕೂಡಾ ನೀರಿಲ್ಲ. ಸಂಪ್ರದಾಯದಂತೆ ಜೋಯಿಸರಿಗೆ ಮೊರೆ ಹೋಗಿ ಹೊತ್ತಿಗೆ ತೆಗೆಸಿ ಕೇಳುತ್ತಾರೆ. ನೀರು ಬಾರದೆ ಇರುವುದಕ್ಕೆ ದೇವರು-ದಿಂಡಿರು, ದೆವ್ವ-ಭೂತಗಳ ಕಾಟವೇನೂ ಇಲ್ಲ. ಕೆರೆಯು ಹಾರ ಬೇಡುತ್ತಿದೆ. ಅದಕ್ಕಾಗಿ ಗೌಡರಿಗೆ ನಿಮ್ಮ ಹಿರಿಸೊಸೆ ಮಲ್ಲವ್ವಳನ್ನು ಹಾರಕೊಡಬೇಕು ಆಗ ನೀರು ಬರುತ್ತದೆ ಎಂದು ಹೇಳಿ ಕಳುಹಿಸಿದರು. ಮನೆಯಲ್ಲಿ ಈ ವಿಷಯ ಕುರಿತು ಚರ್ಚಿಸಲಾಯಿತು. ಆಗ ಹಿರಿ ಸೊಸೆಯನ್ನು ಕೊಟ್ಟರೆ ಹಿರಿತನಕ್ಕೆ ಯಾರೂ ಇಲ್ಲ. ಆದ್ದರಿಂದ ಕಿರಿಸೊಸೆ ಭಾಗೀರಥಿಯನ್ನು ಹಾರಕೊಡುವುದು ಎಂದು ನಿರ್ಣಯಿಸಲಾಯಿತೆಂದು ತಿಳಿದು ಬರುತ್ತದೆ.

ಈ ಕಥನಗೀತೆಯಲ್ಲಿ ಹಿರಿಸೊಸೆ ಮಲ್ಲವ್ವಳಾದರೂ ಇರಲಿ, ಭಾಗೀರಥಿಯಾದರೂ ಇರಲಿ ಕೆರೆಗೆ ಹಾರ ಕೊಡುವುದೆಂದರೆ ಗೌಡ ಶಾನುಭೋಗರು ಮಹಿಳೆಯರನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಯಾರಿಗೆ ಅನ್ಯಾಯವಾದರೂ ಕೂಡ ಅದು ಮಹಿಳೆಗೆ ಅನ್ಯಾಯ-ವಾದಂತೆಯೇ ಎಂಬುದರ ಅರಿವಿರಲಿಲ್ಲ. ತಮ್ಮ ಮಗನನ್ನೋ, ಅಳಿಯನನ್ನೋ ಅಥವಾ ತಾವೇ ಹಾರ ಹೋಗಬೇಕೆಂದು ಎಂದೂ ಯೋಚಿಸುವುದಿಲ್ಲ. ಕಾರಣ ಮಹಿಳೆಯರೆಂದರೆ ದ್ವಿತೀಯ ದರ್ಜೆಯವಳು. ಸಕಲ ಸಂಕಷ್ಟಗಳನ್ನು ಸಹಿಸಿಕೊಳ್ಳುವ ಸಾಕಾರಮೂರ್ತಿಯೆಂದು ತಿಳಿಯಲಾಗಿದೆ.

ಜನಪದ ಕಥನಗೀತೆಗಳಲ್ಲಿ ಸಮಾಜದ ಹಿತಕ್ಕಾಗಿ, ಒಳಿತಿಗಾಗಿ ಮನೆಯ ಯಜಮಾನರು ಊರಿನ ಗೌಡ-ಶಾನುಭೋಗರು ಮಹಿಳೆಯರನ್ನು ಬಲಿ ನೀಡುತ್ತಿದ್ದರು. ಆಗ ಮಹಿಳೆಯ ಸ್ವನಿರ್ಧಾರಕ್ಕೆ ಪ್ರಾಶಸ್ತ್ಯವಿರಲಿಲ್ಲ. ಊರಿನ ಗೌಡರು, ಮನೆಯ ಸದಸ್ಯರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿತ್ತು. ಗೌಡರು ಸೊಸೆಯರನ್ನು ಬಲಿ ನೀಡುವುದು ಕಥನಗೀತೆಗಳಲ್ಲಿ ನಿರೂಪಿತವಾಗಿದೆ. ಜೊತೆಗೆ ಮಹಿಳೆಯರನ್ನು ಗೌಡ-ಶಾನುಭೋಗರು, ಸಮಾಜ ನೋಡುವ ದೃಷ್ಟಿಕೋನವನ್ನು ಕೂಡ ಕಥನಗೀತೆಗಳಲ್ಲಿ ಕಾಣುತ್ತೇವೆ.

ಸರ್ಜಪ್ಪನಾಯಕನನ್ನು ಪ್ರೇರೇಪಿಸಲು ನಿಂಗಮ್ಮಳಿಗೆ ಹಣದ ಆಮಿಷ ತೋರಿಸಿದ ಗೌಡ-ಶಾನುಭೋಗರು:

ಸರ್ಜಪ್ಪನಾಯಕನ ಕಥನಗೀತೆಯನ್ನು ಎರಡು ರೀತಿಯಾಗಿ ಐತಿಹಾಸಿಕ ಕಥನಗೀತೆಗಳ ಸಂಗ್ರಹದಲ್ಲಿ ಕಾಣುತ್ತೇವೆ. ಸರ್ಜಪ್ಪನಾಯಕನ ಪದ-೧ ಎಂಬುದರಲ್ಲಿ ಆತನ ವ್ಯಕ್ತಿತ್ವ, ಧೀರತನ, ವೀರತನ ಕಂಡರೆ, ಸರ್ಜಪ್ಪನಾಯಕನ ಪದ-೨ರಲ್ಲಿ ಆತನ ಕೌಟುಂಬಿಕ ನೆಲೆಯನ್ನು ಕುರಿತು ಕಾಣುತ್ತೇವೆ. ಈ ಕಥನಗೀತೆಯಲ್ಲಿ ಮಹಿಳೆಯನ್ನು ಯಾವ ನೆಲೆಯಲ್ಲಿ ಗುರುತಿಸಿಕೊಂಡಿದ್ದಾರೆ ಎಂಬುದು ಮಹತ್ವವಾಗುತ್ತದೆ.

ಚಾವಡಿಗೆ ಚಂದುರಾಮನಾದ ಬೇಡರ ಹುಡುಗನಾದ ಸರ್ಜಪ್ಪನಾಯಕ ಹಾರುವರಿಗೆ ಕಡುವೈರಿ. ಬಡವರೆಂದರೆ ದಾನ ಮಾಡುವ ಕರುಣಾಮಯಿ ಈತ. ಹಾರೋರ ಹೆಂಡಿರನ್ನೆಲ್ಲಾ ಹಿಡಿದು ನೆಲಮಾಳಿಗೆಯೊಳಗೆ ಹಾಕಿದ್ದನೆಂದು ಉಲ್ಲೇಖ ಬರುತ್ತದೆ. ಕಾರಣ ಬಡವರನ್ನು, ದೀನ ದಲಿತರನ್ನು ಕೀಳಾಗಿ ಕಾಣುವ ಹಾರುವರು ಮಹಿಳೆಯರಿಗೆ, ಬಡವರಿಗೆ, ದೀನ-ದಲಿತರಿಗೆ ಹಿಂಸೆಯನ್ನು ಕೊಡುವುದರಿಂದ ಕೂಡಿ ಹಾಕಿರಬಹುದು ಎನಿಸುತ್ತದೆ. ಹಾರುವರಿಗೆ ಪಾಠ ಕಲಿಸಲು, ದೀನ-ದಲಿತ ಮಹಿಳೆಯರು ಮತ್ತು ಹಾರುವರ ಮಹಿಳೆಯರು ಎಲ್ಲರೂ ಒಂದೇ ಎಂದು ಪಾಠ ಕಲಿಸುವುದಕ್ಕೋಸುಗ ಮಾಡಿದ ಉಪಾಯವೆಂದೂ ಸಂಕೇತಿಸುತ್ತದೆ.

ಹಾರುವರು ಹಾಲು ಬಾನುಂಡು ಸಂಚು ಹೂಡಿದರು. ಅವರಲ್ಲಿ ಯಾರು ಯಾರು ಸೇರಿ ಮಸಲತ್ತು ಮಾಡುವರೆಂದು ಅವರ ಹೆಸರುಗಳನ್ನು ಕೂಡ ಕಥನಗೀತೆಯಲ್ಲಿ ತಿಳಿಸಲಾಗಿದೆ.

"ಶ್ಯಾನುಭೋಗ ವೆಂಕಣ್ಣ, ವಿಕಟ ಸುಬ್ಬಟರಾಯ
ಗೋವಿಂದರಾಯ ಕಲತಾರೋಸರುಜಪತಿ ಭೂಪ
ಕುಂತೇ ಮಸಲತ್ತು ಮಾಡುತ್ತಾರೋ"[೨]

ಗೌಡ ಶಾನುಭೋಗರು ಊರಿಗೆ ನ್ಯಾಯ ಹೇಳುವರು, ಊರಿನ ಹಿತಕ್ಕಾಗಿ ಶ್ರಮಿಸುವರು. ಆದರೆ ಇದು ಕೇವಲ ಬಾಹ್ಯವಾಗಿ ಮಾತ್ರ ಕಾಣುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಜನರ ಹಿತವನ್ನು ಬಯಸುವ ಸರ್ಜಪ್ಪನಾಯಕನ ವಿರುದ್ಧ ಊರಿನ ಮುಖಂಡರೇ ಒಳಸಂಚನ್ನು ಹೂಡಲು ಹವಣಿಸುತ್ತಿರುವರು. ಸರ್ಜಪ್ಪನಾಯಕನ ವಿರುದ್ಧ ಅಥವಾ ಅವನೆದುರಿಗೆ ನಿಂತು ಮಾತನಾಡುವಂತಹ, ಎದುರಿಸುವ ಶಕ್ತಿ ಇಲ್ಲದವರು

೨. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರ, ಪು.೩೨.

ಸರ್ಜಪ್ಪನಾಯಕ ಪ್ರೀತಿಸಿದ ಹೂವನಳ್ಳಿಯ ನಿಂಗಮ್ಮಳಿಗೆ ಹೊನ್ನಿನ ಆಸೆ-ಅಮಿಷ ತೋರಿಸಿ ಆತನನ್ನು ಮೋಸದಿಂದ ಹಿಡಿದುಕೊಂಡು ಬರಲು ಪ್ರೇರೇಪಿಸುವರು ಗೌಡ-ಶಾನುಭೋಗರು. ಆದರೆ ನಿಂಗಮ್ಮ, ಬಂಗಾರ, ದುಡ್ಡಿನ ಮೋಹಕ್ಕೆ ಒಳಗಾಗದೇ

"ಹಿಡಿಹೊನ್ನ ನಮಗೈತಿ ಬಗಸೊನ್ನೆ ನಮಗೈತೆ
ಜೋಳಿಗೆ ಹೊನ್ನ ನಮಗೈತೆ – ಗೋವಿಂದರಾಯಾ
ಸರುಜನ್ನ ಸೆರೆಯ ಕೊಡಲಾರೇ"[೮]

ಎಂದು ನಿಂಗಮ್ಮಳು ಧೈರ್ಯದಿಂದ ಗೌಡ-ಶ್ಯಾನುಭೋಗರಿಗೆ ಉತ್ತರಿಸಿದಳು. ಇದನ್ನು ಕೇಳಿದರೆ ಸರ್ಜಪ್ಪನಾಯಕನ ಮೇಲಿರುವ ಅಪಾರ ಪ್ರೀತಿ ಕಣ್ಣೆದುರಿಗೆ ಬಂದಂತಾಗುತ್ತದೆ. ಇಷ್ಟಕ್ಕೆ ಸುಮ್ಮನಿರದೇ ಗೌಡ-ಶಾನುಭೋಗರು ಭೂಮಿನೇ ಕೊಡತೀವಿ, ಕುದುರೆಯ ಕೊಡತೀವಿ, ಆನೆ, ಒಂಟೆ ಸಾಲುಗಳನ್ನು ಕೊಡತೀವಿ ಎಂದಾಗಲೂ ನಿಂಗಮ್ಮ ಪ್ರತಿಭಟಿಸುತ್ತಾಳೆ. ಆದರೆ ಗೌಡ-ಶಾನುಭೋಗರಾದ ಗೋವಿಂದರಾಯ, ಸುಬ್ಬರಾಯ, ವೆಂಕಣ್ಣ ಮುಂತಾದವರಿಂದ ಆಕೆಗೆ ಬೆದರಿಕೆಯ ಸೂಚನೆ ಬಂದದ್ದಿಂದಲೋ ಏನೋ ಆಕೆ ಅಮಲಿನ ಬಿಲ್ಲೆ (ಔಷಧವನ್ನು) ಹಾಕಿ ಹಾಲು ಕುಡಿಸಿ ಆತನ ಆಯುಧವನ್ನು ಗೌಡ-ಶಾನುಭೋಗರನ್ನು ಕರೆಯಿಸಿ ಕೊಟ್ಟು ಕಳುಹಿಸುತ್ತಾಳೆ. ಕೊಟ್ಟ ನಂತರ ಆಕೆಪಟ್ಟ ನೋವು ಆಕೆಯ ಪ್ರಲಾಪ ಕರುಳು ಮಿಡಿಯುವಂತಿದೆ.

"ಸಾವಿರಾಳ ಶಕುತ್ಯೋನ್ನ ಮೂರಾನೆ ಬಲದೋನ್ನ
ಸೆರೆಯನ್ನೆ ಕೊಟ್ಟೆ ಸರುಜನ್ನ – ಅಯ್ಯಯ್ಯೋ ಶಿವನೇ
ಸೆರೆಯನ್ನೇ ಕೊಟ್ಟೆ ಸರುಜನ್ನ ಎಂಬೂತ
ಆಗ ಭೋರಾಡಿ ಅಳತಾಳೇ"[೯]

ನಿಂಗಮ್ಮಳ ವೇದನೆಯ ಈ ಘಟನೆ ಅವಲೋಕಿಸಿದಾಗ ಆಕೆ ಸರ್ಜಪ್ಪನಾಯಕನ ಮೇಲಿಟ್ಟಿರುವ ಪ್ರೀತಿ-ವಿಶ್ವಾಸ-ನಂಬಿಕೆ ಅಪಾರ ಎಂಬುದು ಅರಿವಾಗುತ್ತದೆ. ನಂಬಿಕೆಗೆ ಪ್ರೀತಿ-ವಿಶ್ವಾಸಕ್ಕೆ ದ್ರೋಹ ಬಗೆದೆನಲ್ಲಾ ಎಂಬ ಪಾಪಪ್ರಜ್ಞೆ ಆಕೆಯನ್ನು ಕಾಡುತ್ತದೆ. ಅಂದಿನ ಸಮಾಜದ ಸ್ಥಿತಿಗೆ ಸಿಕ್ಕು ಅಸಹಾಯಕಳಾಗಿ ಆತನನ್ನು ಮೋಸದಿಂದ ಹಿಡಿದು ಕೊಟ್ಟಿರುವುದು ಕಂಡುಬರುತ್ತದೆ.

---

೮. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರ, ಪು.೫೩
೯. ಅದೇ, ಪು.೫೮

ನಿಂಗಮ್ಮಳನ್ನು ಒಂದು ಕಡೆ 'ತಾಯಿ' ಎಂದು ಉಲ್ಲೇಖಿಸಿದರೆ ಇನ್ನೊಂದೆಡೆ 'ಸೂಳೆ' ಎಂದು ಅವಾಚ್ಯ ಶಬ್ದದಿಂದ ಉಲ್ಲೇಖಿಸಲಾಗಿದೆ. ತಮಗೆ ತಿಳಿದ ಹಾಗೇ ಮಹಿಳೆಯರ ಹೆಸರನ್ನು ಕೂಡ ಉಪಯೋಗಿಸಿಕೊಳ್ಳುತ್ತಾ ತಮ್ಮ ತಮ್ಮ ಅಸ್ತ್ರವಾಗಿ ಆಕೆಯನ್ನು ಬಳಸಿಕೊಂಡವರು ಗೌಡ-ಶಾನುಭೋಗರು. ಒಮ್ಮೊಮ್ಮೆ ಸಮಾಜ ತಾಯಿ ಎಂದು ದೇವರ ಸ್ಥಾನಕ್ಕೆ ಕೊಂಡೊಯ್ದು ಜಾರಿಣಿ ಎಂದು ಕೆಳಮಟ್ಟಕ್ಕೆ ತಳ್ಳಿಬಿಡುತ್ತದೆ. ಆಕೆ ಜಾರಿಣಿ ಎನಿಸಿಕೊಳ್ಳಲು ಕಾರಣ, ಆಕೆಯ ಬದುಕಿನ ಹಿಂದಿರುವ ಸತ್ಯಾಸತ್ಯತೆಯನ್ನು ತಿಳಿದು ಆಕೆಯು ಸಮಾಜದಲ್ಲಿ ಬೆಳಕನ್ನು ಕಾಣುವ ಹಾಗೆ ಪ್ರೋತ್ಸಾಹಿಸಲು ಪ್ರಯತ್ನಿಸಬೇಕೇ ವಿನಃ ಅವಾಚ್ಯ ಶಬ್ದಗಳಿಂದ ಗುರುತಿಸಿದರೆ ಆಗದು.

ಸರ್ಜಪ್ಪ ನಾಯಕ ಮಬ್ಬಿನಿಂದ ಎದ್ದು ಎಷ್ಟೊತ್ತು ಮಲಗಿದೆನಲ್ಲ ನಾನು ಎಂದು ವ್ಯಥೆಪಡುತ್ತಾ ದೇವರಕೋಣೆಗೆ ಹೋಗಿ ಉಕ್ಕಿನ ಇಜಾರ ತೊಟ್ಟು, ತಿಲಕ ಇಟ್ಟು, ನಾಗರಾಯ್ಧವನ್ನು ಹುಡುಕುತ್ತಾನೆ. ಅದು ಕಾಣದ ಕಾರಣ ನಿಂಗಮ್ಮಳಿಗೆ ಎರಡು ಬಗೆದು ಮಾತನಾಡುತ್ತಾನೆ. ನನ್ನ ಅನ್ನವುಂಡು, ನನ್ನ ಬಟ್ಟೆ ತೊಟ್ಟು, ನನ ಮೇಲೆಯೇ ಎರಡು ಬಗೆದಲ್ಲೇ 'ಧೂಮಾರಿ ಲಮುಡಿ' ನನ್ನ ಆಯುಧವೆಲ್ಲಿದೆ ಕೊಡುಬಾರೇ ಎಂದು ರೋಷದಲ್ಲಿ ಕೇಳುತ್ತಾನೆ. ನಿಂಗಮ್ಮ ಗೊತ್ತಿಲ್ಲವೆಂದಾಗ ಸೂಜಿಯಷ್ಟು ಆಯುಧ ಸಿಕ್ಕಿದ್ದರೆ ಗುದ್ದಿ ಕೊಂದು ಬಿಡುತ್ತಿದ್ದೆ ನಿನ್ನ ಎಂದು ಆಕೆಯ ಮೇಲೆಯೇ ಎಗರಾಡುತ್ತಾನೆ. ನಿಂಗಮ್ಮ ಗೌಡ-ಶಾನುಭೋಗರ ಮತ್ತು ಸರ್ಜಪ್ಪನಾಯಕನ ಮಧ್ಯೆ ಸಿಲುಕಿ ಜೀವಿಸಿದ ಮಹಿಳೆ.

ಗೌಡ ಶಾನುಭೋಗರು ನಿಂಗಮ್ಮಳಿಂದ ಸರ್ಜಪ್ಪನಾಯಕನಿಗೆ ನೇಣು ಬಿಗಿಸಲು ಸಿದ್ಧ ಮಾಡಿದರು. ಶಾನುಭೋಗ ವೆಂಕಣ್ಣ, ವಿಕಟ ಸುಬ್ಬಟರಾಯ, ಗೋವಿಂದರಾಯ ಕೂಡಿ ಮಸಲತ್ತು ಮಾಡಿ ನಿಂಗಮ್ಮಳನ್ನು ಕರೆಸಿ ನೂಲ್ಹಗ್ಗ ಕೊಟ್ಟು ಸರುಜನ ಕೊರಳಿಗೆ ನೇಣು ಬಿಗಿ ಎಂದು ಹೇಳಿ ಮೋಜು ನೋಡುವರು.

ಗೌಡ-ಶಾನುಭೋಗರಿಂದ ಊರು-ಕೇರಿಯಲ್ಲಿ ಸರ್ಜಪ್ಪನಾಯಕನ ಮೆರವಣಿಗೆ :

ಊರಿನ ಒಡೆಯರು ಗಾಡಿಯ ತರಿಸಿ ಸರ್ಜಪ್ಪನಾಯಕನನ್ನು ಊರು-ಕೇರಿಯಲ್ಲಿ ಮೆರವಣಿಗೆ ಮಾಡಿ, ಬಣ್ಣದ ಚಾವುಡಿಗೆ ಬಂದರು. ಸಾವಿರಾಳು ಶಕ್ತಿ ಹೊಂದಿರುವ, ಮೂರಾನೆ ಬಲ ಹೊಂದಿರುವ ಸರುಜನು ನಮ್ಮ ಕೈ ಸೆರೆಯಾದನು ಎಂದು ಅಟ್ಟಹಾಸ ನಗೆ ಬೀರುವರಿವರು. ತದನಂತರದಲ್ಲಿ ಸರ್ಜಪ್ಪನಾಯಕ ತನ್ನ ಶಕ್ತಿಯಿಂದ ಹಗ್ಗವನ್ನು ಹರಿದು,

ಗಾಡಿಯನ್ನು ಒದ್ದದ್ದರಿಂದ ಆರು ಸಾವಿರದ ದಂಡು ಚೆದುರಿತು. ಆದರೆ ಮತ್ತೆ ಗಾಯವಾಗಿ ಬಿದ್ದು ಅವರ ಕೈ ಸೆರೆಯಾದನು.

ಗೌಡ-ಶಾನುಭೋಗರ ವಿರುದ್ಧ ಸ್ವಾಭಿಮಾನಿ ಸರ್ಜಪ್ಪನಾಯಕ :

ಗೌಡ-ಶಾನುಭೋಗರ ಕೈಯಲ್ಲಿ ಹಗ್ಗವನ್ನು ನೋಡಿದ ಸರುಜಪ್ಪ ನಿಮ್ಮ ಕೈಗೆ ನನ್ನ ಪ್ರಾಣ ಕೊಡಲಾರೆ ಎನ್ನುತ್ತಾ ತಾನೇ ಹಗ್ಗವನ್ನು ತೆಗೆದುಕೊಂಡು ನೇಣುಹಾಕಿಕೊಂಡು ಗಾಡಿಯನ್ನು

ಒದ್ದನು. ಇಲ್ಲಿ ಸರ್ಜಪ್ಪನಾಯಕನ ಸ್ವಾಭಿಮಾನ, ದಿಟ್ಟತನ, ಧೈರ್ಯ ಮೆಚ್ಚು-ವಂತಹದ್ದು. ಇಡೀ ಊರಿನಲ್ಲಿ ಗೌಡ-ಶಾನುಭೋಗರ ಕುತಂತ್ರ ಹೇಗೆ ಇರುತ್ತಿತ್ತು ಎಂಬುದನ್ನು ಅವರ ಬಯಲಿಗೆಳೆಯುತ್ತದೆ.

ಊರು-ಕೇರಿಗೆ, ದೇಶಕ್ಕೆ, ಸಮಾಜಕ್ಕೆ ಏನಾದರೂ ಒಳ್ಳೆಯ ಕೆಲಸ-ಕಾರ್ಯಗಳನ್ನು ಮಾಡಲು ಮುಂದಾದರೆ ಅಂತಹವರನ್ನು ಸಮಾಜ ಹತ್ತಿಕ್ಕಿ ಅವರ ಜೀವನವನ್ನೇ ಕೊನೆಯಾಗಿಸಿ, ಸಮಸ್ಯೆಗಳ ಸುಳಿಯಲ್ಲಿಯೇ ಬದುಕುವ ಹಾಗೇ ರೂಪಿಸುತ್ತದೆ. ಹೀಗಾದರೆ ಸಮಾಜದ ಉದ್ಧಾರ ಬರವಣಿಗೆ, ಮಾತಿನಲ್ಲಷ್ಟೇ ಎಂಬುದು ವೇದ್ಯವಾಗುತ್ತದೆ.

ಬಡ ಹುಡುಗನ ಮೇಲೆ ಗೌಡನ ಮಗಳ ದರ್ಪ :

ಈ ಕಥನಗೀತೆಯಲ್ಲಿ ಗೌಡನ ಮಗಳು ಗೊಲ್ಲರ ಹುಡುಗನನ್ನು ಪ್ರೀತಿಸಿ ತಿರಸ್ಕಾರಕ್ಕೆ ಒಳಗಾದಾಗ, ಗೊಲ್ಲರ ಹುಡುಗನನ್ನು ಕೊಲ್ಲಿಸಿ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಗೊಲ್ಲರ ಹಸುಗಳು ತಂದೆ-ಮಗಳನ್ನು ಕೊಂದು ಗೊಲ್ಲನನ್ನು ಬದುಕಿಸಿಕೊಳ್ಳುತ್ತವೆ. ಅಧಿಕಾರ ಮತ್ತು ಸಂಪತ್ತಿನಿಂದ ಪ್ರೀತಿಯನ್ನು ಪಡೆಯಲು ಸಾಧ್ಯವಿಲ್ಲ; ಸರ್ವನಾಶ ಖಂಡಿತ ಎಂಬುದನ್ನು ಈ ಕಥನಗೀತೆ ತಿಳಿಸುತ್ತದೆ. ಇನ್ನೊಂದು ಅಂಶವೆಂದರೆ, ಮೂಕಪ್ರಾಣಿಗೆ ಇರುವಂತಹ ವಿಚಾರಶಕ್ತಿ, ಪ್ರೀತಿ-ವಿಶ್ವಾಸ, ನಿಯತ್ತು, ನಂಬಿಕೆಯು ಮಾನವನಿಗೆ ಇಲ್ಲದಂತಾಗಿದೆ ಎಂಬುದು ಕೂಡ ತಿಳಿದುಬರುತ್ತದೆ.

ಒಂದು ಸಾಮಾನ್ಯ ಹೆಣ್ಣಿಗೂ, ಶ್ರೀಮಂತ ಹೆಣ್ಣುಮಗಳಿಗೂ ಇರುವಂತಹ ವ್ಯತ್ಯಾಸವನ್ನು ಇಲ್ಲಿ ಕಾಣುತ್ತೇವೆ. ಒಬ್ಬ ಸಾಮಾನ್ಯ ಬಡ ಸ್ತ್ರೀ ಪ್ರೀತಿಸದೇ ಇರದ ಹುಡುಗನಿಗೆ ಶಿರವ ಕಡಿಸುತ್ತೇನೆ, ಶಿರವನ್ನು ಮೆಟ್ಟಿ ನಾನು ತಣ್ಣೀರಿನಲ್ಲಿ ಸ್ನಾನ ಮಾಡುತ್ತೇನೆಂದು ಧೈರ್ಯ

ಮತ್ತು ದರ್ಪದಿಂದ ಹೇಳಲು ಸಾಧ್ಯವಿಲ್ಲ. ಏಕೆಂದರೆ ಗ್ರಾಮದ ಅಧಿಕಾರ, ಆಡಳಿತ ಗೌಡರದ್ದೇ ಇದ್ದ ಕಾರಣ ಬಯಲು ಸೀಮೆಯ ಗೌಡನ ಮಗಳು ಗೊಲ್ಲರ ಹುಡುಗನಿಗೆ.

"ನಾವಿನವಂದ ಆಡೂನಬಾ
ನಿನ್ನೊಂದಿಗೆ ಇನವಂದ
ಆಡಿದರೆ ಸರಿಹೋಯ್ತು
ಇನವಂದ ಆಡದೆ ಹೋದ್ರೆ
ನಿನ್ನ ಶಿರವ ಕಡಿಸೂವೆ
ನಿನ್ನ ಶಿರವಾನೆ ಮೆಟ್ಟಿಕೊಂಡು
ನಾ ತಣ್ಣೀರ ಮೀಯುತೀನಿ"[೧೦]

ಎಂದು ಇಷ್ಟೊಂದು ಧೈರ್ಯದಿಂದ ಮಾತನಾಡಲು ಕಾರಣ ತಾನು ಗೌಡನ ಮಗಳು ಏನೇ ಮಾಡಿದರೂ, ಏನೇ ಮಾತನಾಡಿದರೂ ಬೆಂಗಾವಲಾಗಿ ತನ್ನ ತಂದೆ(ಗೌಡ) ಇರುತ್ತಾನೆಂಬ ಅಹಂಕಾರವನ್ನು ಇಲ್ಲಿ ಕಾಣುತ್ತೇವೆ. ಹಣವಿದ್ದವರು, ಅಧಿಕಾರವಿದ್ದವರು ಏನೇ ಮಾತನಾಡಿದರೂ, ಹೇಗೆ ಮಾತನಾಡಿದರೂ, ಯಾವುದೇ ತಪ್ಪು ಮಾಡಿದರೂ ಮುಚ್ಚಿ ಹಾಕುವ ಶಕ್ತಿ ಅವರಿಗಿರುತ್ತದೆ. ಇವರ ವಿರುದ್ಧ ಪ್ರತಿಭಟಿಸಲು ಮುಂದೆ ಯಾರೂ ಬರುವುದಿಲ್ಲ. ಬಂದರೂ ಅವರ ಕೈಯಲ್ಲಿ ಉಳಿಯುವುದಿಲ್ಲವೆಂಬ ಸಾಮಾಜಿಕ ವ್ಯವಸ್ಥೆಯ ಚಿತ್ರಣ ಇಲ್ಲಿ ಕಂಡುಬರುತ್ತದೆ.

ಕೆರೆ ಉಕ್ಕಿ ಹರಿದಾಗ ಬಲಿ ಕೊಡಲು ಊರಲ್ಲಿ ಗರತಿಯನ್ನು ಹುಡುಕಿಕೊಂಡು ಹೋದ ಗೌಡರು :

ಕೆರೆಯಲ್ಲಿ ನೀರು ಬಾರದಿದ್ದಾಗ ಮಹಿಳೆಯನ್ನು ಹಾರ ಕೊಡುವಂತೆ ಹೊಳೆ-ನದಿಗಳಿಗೆ ನೆರೆ ಬಂದಾಗಲೂ ಆಹುತಿ ಕೊಡುವ ಪರಂಪರೆ ಇದ್ದುದನ್ನು 'ಗರತಿ ಗಂಗವ್ವ' ಕಥನಗೀತೆ-ಯಲ್ಲಿ ತಿಳಿದುಬರುತ್ತದೆ.

"ಮಲ್ಲಾಡಕ ಮಳೆಯಾಗಿ ಒಡ್ಲೊಡೆದು ಹಳ್ಳರಿದು
ನಮ್ಮೂರ ಮುಂದ ಹೊರಸೂಸಿ ಸೋ ಮಲಪಾರಿ
ಹೊರಚೆಲ್ಲಿ ಊರ ಹೊಕ್ಕಾಳ ॥ ಸೋ ॥"[೧೧]

೧೦. ಜನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೩೧
೧೧. ಅದೇ, ಪು.೪೪

ಮಲೆನಾಡಿಗೆ ಮಳೆಯಾಗಿ, ಒಡ್ಲೊಡೆದು, ಹಳ್ಳ ಹರಿದು, ಊರ ಕಟ್ಟಿ ಮಲಪಾರಿ ಹೊರಚೆಲ್ಲಿ ಊರ ಹೊಕ್ಕಿದ್ದಾಳೆ ಗಂಗಮ್ಮ ಅದನ್ನು ತಡೆಯಲು ಯಾರಾದರೂ ಪತಿವೃತೆ ಮಹಿಳೆಯರಿದ್ದರೆ ಬನ್ನಿ ಎಂದು ಹೇಳಲು ಗಂಗ್ಯಾಳದ ಗರತಿಗೆ ಏಳು ಕೊಪ್ಪರಿಗೆ ಹೊನ್ನ ಕೊಡತೇವು ಆನೆ ಅಂಬಾರಿ ವಾಲಗದಾರೂತಿ ಊರ ಓಣ್ಯಾಗ ವೈಭವೀಕರಿಸುವೆವು ಎಂದು ಊರ ಹಿರಿಯರು ಜೊತೆಗೆ ಗೌಡ ಡಂಗೂರ ಸಾರುತ್ತ ಬಂದನು. ಏನೆಂದರೆ "ಗರತಿಯಿದ್ದಾಕಿ ಹೊರಬೀಳ ಹಡೆದವ್ವ ಹೊಳೆಯಳೆದು ಊರ ಉಳಿಸೆಂದ"[೧೨] ಓಣಿ ಓಣಿ ತಿರುಗಿ ಊರ ಅಗಸಿಗೆ ಬಂದನು. ಅಷ್ಟರಲ್ಲಿ ಅಡುಗೆಯ ಮನೆಯಲ್ಲಿರುವ ಬಡವನ ಮಡದಿ ಗರತಿ ಇದನ್ನು ಕೇಳಿ ಬಾಗೀನ ಹೊತ್ತುಕೊಂಡು ಮಾವಯ್ಯನಿಗೆ, ನಾದಿನಿಗೆ, ನೆಗೆಣ್ಣಿಗೆ, ಮೈದುನರಿಗೆ, ತನ್ನರಸನಿಗೆ, ದೇವರಿಗೆ ಶರಣೆಂದು ಮಕ್ಕಳ-ಮನೆ ಬಗೆಗೆ ಜೋಪಾನಾವೆಂದ್ಹೇಳಿ

"ಊರ ದೈನರ ಕೂಡ ಊರ ಗೌಡನಕೂಡ
ಗರತಿ ಗಂಗವ್ವ ನಡೆದಾಳ । ಸೋ । ಹೊಳೆದಂಡೆ
ಮಲಪಾರಿ ಚೆಲ್ಲಿ ಹರಿಯೂಳ । ಸೋ ॥"[೧೩]

ಎನ್ನುತ್ತಾ ಊರಿನ ಮಹಾಜನರು ಹಾಗೂ ಗೌಡನ ಜೊತೆಗೂಡಿ ಅವರ ಹಿಂದೆ ಹೊರಟಳು.

ಹೊಳೆತಾಯಿ ಗಂಗವ್ವ ಕಿರಿಯಾಗಿ ಹರಿಯವ್ವ, ಮುತ್ತೈದೆ ಬಾಗೀನ ನಿನಗೀವೆ, ನಮ್ಮೂರ ಸಲಹವ್ವ ಎಂದು ಹೇಳುತ್ತಿರುವಾಗ ಗರತಿಗಂಗವ್ವಳನ್ನು ಕೊಚಗೊಂಡು ಒದ್ದಲಕ ಬಿದ್ದು ಹರಿದಳು. ಇದರಿಂದ ಗರತಿ ಗಂಗವ್ವ ಎಂಬ ಹೆಸರು ಬಂದಿತೆಂದು ಗೀತೆಯಲ್ಲಿ ಸ್ಪಷ್ಟವಾಗಿದೆ. ಇಲ್ಲಿ ಮಹಿಳೆಗೆ 'ಗರತಿ' ಎನ್ನುವ ಬಿರುದು ಕೊಟ್ಟಿರುವುದು ಕಂಡುಬರುತ್ತದೆ. ಅಲ್ಲದೇ ಪಾತಿವ್ರತ್ಯ ಎಂಬುದು ಮಹಿಳೆಯರಿಗೆ ಮಹತ್ವ ಎಂಬುದು ತಿಳಿದುಬರುತ್ತದೆ. ಅದೂ ಬಡವನ ಮಡದಿಯೇ ಊರ ಹಿತಕ್ಕಾಗಿ ಬಾಗೀನ ತೆಗೆದುಕೊಂಡು ಹೋಗುತ್ತಾಳೆಂದರೆ, ಬಡವರು ಗೌಡರು ಹೇಳಿದ ಹಾಗೇ ಕೇಳುವಂತಹ ಒತ್ತಡ ಪರಿಸ್ಥಿತಿ ಸಾಮಾಜಿಕ ವ್ಯವಸ್ಥೆಯಲ್ಲಿತ್ತು ಎಂಬುದು ಕೂಡ ತಿಳಿದುಬರುತ್ತದೆ.

ಇದಲ್ಲದೇ ಊರಿನ ಮುಖಂಡರು ಬಡತನದ ಜೊತೆಗೆ ಹೊನ್ನಿನ ಆಮಿಷ ತೋರಿಸಿ ಒತ್ತಾಯಪೂರ್ವಕವಾಗಿಯೇ ಕರೆದುಕೊಂಡು ಹೋಗುತ್ತಿದ್ದರು ಎನಿಸುತ್ತದೆ. ಮಳೆ ಹೆಚ್ಚಾದಾಗ ನೀರು ಹೊರ ಸೂಸುವುದು ಸಹಜ. ಅದನ್ನು ಹಿಂದೆ ಕಳುಹಿಸಲು ಯಾರಾದರೂ

೧೨. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೪೪
೧೩. ಅದೇ, ಪು.೪೬

ಮಹಿಳೆಯರನ್ನು ಕರೆತರಲು ಹೋಗುವುದು ಅಜ್ಞಾನ. ಊರಿನ ನಾಯಕರೇ ಇಂತಹ ಅಜ್ಞಾನದ ನಿಲುವುಗಳನ್ನು ತೆಗೆದುಕೊಂಡು ಆಡಳಿತ ನಡೆಸುವಾಗ ಸಾಮಾನ್ಯ ಜನತೆಯ ಸ್ಥಿತಿ ಅವರು ಹಾಕಿದ ತಾಳಕ್ಕೆ ಕತ್ತು ಅಲ್ಲಾಡಿಸುವುದಷ್ಟೇ ಆಗುತ್ತದೆ. ಪ್ರಗತಿಪರ ವಿಚಾರದಿಂದ ದೂರ ಉಳಿಯುತ್ತಾರೆ.

೪.೩. ಕಾನೂನು ಕಟ್ಟಳೆ :

"ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂದು ನುಡಿದ ಮನು, 'ಅನಾಶ್ರಯಾ ನ ಶೋಭಂತೇ ಪಂಡಿತಾ ವನಿತಾ ಲತಾಃ"[೧೪] ಎಂದು ಮಹಿಳೆಗೆ ಸ್ವತಂತ್ರ್ಯದ ಅಸ್ತಿತ್ವಕ್ಕೆ ತೆರೆ ಎಳೆದು ಸಮಾಜ ಕೆಲವೊಂದು ಕಾನೂನು ಕಟ್ಟಳೆಗಳನ್ನು ರೂಪಿಸಿತ್ತು. ಕೆಲವೊಂದು ಕಥನಗೀತೆಗಳಲ್ಲಿಯ ಕಾನೂನು ಕಟ್ಟಳೆಗಳು ವಿಚಿತ್ರವೆನ್ನಿಸುವಂತಿವೆ. ಆಧುನಿಕ ಯುಗದಲ್ಲಿ ಮಹಿಳೆ ಬಹುದೂರ ಸಾಗಿ ಬಂದಿದ್ದಾಳೆ ನಿಜ: ಆದರೆ ಇಂದಿಗೂ ಆಕೆ ಅನೇಕ ಬಗೆಯ ದೌರ್ಜನ್ಯ, ಕಿರುಕುಳಕ್ಕೆ ಒಳಗಾಗುತ್ತಿರುವಳು. ಹೀಗೆ ಸಂವಿಧಾನದಲ್ಲಿ ಆಕೆಯ ಪರವಾಗಿ ಕಾನೂನುಗಳಿದ್ದರೂ ಕೂಡ ಸಮಾಜದಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಅವಲೋಕಿಸುತ್ತಾ ಮನೆಯನ್ನು ಬಿಟ್ಟು ಹೊರಗಡೆ ಹೋಗಲು ಅಂಜುತ್ತಿರುವಳು. ಕಾರಣ ಹುರಿದು ಮುಕ್ಕುವ ಸಮಾಜ, ಕುಸಿಯುತ್ತಿರುವ ಸಾಮಾಜಿಕ ಮೌಲ್ಯಗಳು, ಹದಗೆಡುತ್ತಿರುವ ಪರಿಸರ, ಸದೃಢ ಸಮಾಜ ರೂಪಿಸುವಲ್ಲಿ ವಿಫಲವಾಗಿರುವ ದೃಶ್ಯ ಮಾಧ್ಯಮಗಳು ಇತ್ಯಾದಿ. ಅಂದು ಅನಾಗರಿಕ ಪ್ರಪಂಚದಲ್ಲಿ ಬೇರೂರಿದ್ದ ಕಾನೂನು-ಕಟ್ಟಳೆಗಳು ಇಂದೂ ನಾಗರಿಕ ಪ್ರಪಂಚದಲ್ಲಿದ್ದುಕೊಂಡು ಮಿತಿ ಮೀರಿ ಅನಾಗರಿಕರಾಗಿ ವರ್ತಿಸುವ ಸಮಾಜದ ಹಿನ್ನೆಲೆಯಲ್ಲಿ ಕೆಳಗಿನ ಕೆಲವೊಂದು ಕಥನಗೀತೆಗಳ ಒಳ ಸುರುಳಿಗಳನ್ನು ಇಲ್ಲಿ ಬಿಚ್ಚಿಡಲಾಗಿದೆ.

ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಅಟ್ಟಬೇಕೆಂಬ ಕಟ್ಟಳೆ:

ಸಾರ್ವಜನಿಕ ವಲಯದಲ್ಲಿ ವಿಚಿತ್ರವೆನಿಸುವ ಕಟ್ಟಳೆಯನ್ನು **ತೋಳನಿಗೆ ಬಲಿ** ಕಥನಗೀತೆಯಲ್ಲಿ ಕಾಣುತ್ತೇವೆ. ಕನ್ಯೆಗೆ ಮೈನೆರೆಯುವ ಮೊದಲೇ ಮದುವೆ ಮಾಡಬೇಕೆಂಬುದು ಒಂದು ಸಂಪ್ರದಾಯ. ಒಂದು ವೇಳೆ ಮುಂಚೆಯೇ ಮೈನೆರೆದರೆ ಕಣ್ಣಿಗೆ ಬಟ್ಟೆಕಟ್ಟಿ ಕಾಡಿಗೆ ಅಟ್ಟಬೇಕೆಂಬುದು ಒಂದು ಕಟ್ಟಳೆ. ತಂಗಿಯ ಮೇಲಿನ ಅತಿಯಾದ ಪ್ರೀತಿಯಿಂದ, ವಾತ್ಸಲ್ಯ, ಮಮತೆಯಿಂದ ಅಣ್ಣ ಯುಕ್ತ ಕಾಲಕ್ಕೆ ಮದುವೆ ಮಾಡದೇ ಇದ್ದಾಗ,

೧೪. ಮಹಿಳೆ-ಸಮಾಜ-ಕಾನೂನು : ಗೀತಾ ಕೃಷ್ಣಮೂರ್ತಿ, ಪು.೧೭

ಅವಳು ಮೈನೆರೆದಳು. ಆಗ ಅನಿವಾರ್ಯವಾಗಿ ಸಮಾಜದ ಕಟ್ಟಳೆಗೆ ತಲೆಬಾಗಿ ತನ್ನ ತಂಗಿಯನ್ನು ಕಾಡಿನಲ್ಲಿ ಬಿಟ್ಟು ಬರಬೇಕಾದಂತಹ ದುರಂತ ಕಾನೂನು ಪ್ರಸಂಗ ಇದರಲ್ಲಿದೆ.

ತಾಯಿಗೆ ಒಂದು ಗಂಡು, ಒಂದು ಹೆಣ್ಣು ಮಗು ಇರುತ್ತಾರೆ. ತಂಗಿಯನ್ನು ನನ್ನ ಹಾಗೇ ಸಾಕಬೇಕೆಂದು ಅಣ್ಣ ತಾಯಿಯಲ್ಲಿ ಕೇಳುತ್ತಾನೆ. ಆಗ ತಾಯಿ ಮೈನೆರೆಯುವ ಮೊದಲೇ ಸೋದರ ಮಾವನಿಗೆ ಕೊಟ್ಟು ಮದುವೆ ಮಾಡಬೇಕು ಎಂದಳು. ಇದಕ್ಕೆ ಮಗ ಕೊಡುವುದಿಲ್ಲವೆಂದು ತಾಯಿಯ ಮಾತಿಗೆ ಪ್ರತಿಭಟಿಸುತ್ತಾನೆ. ತಾಯಿ ಹೇಳಿದ ಮಾತು ಮಗ ಕೇಳದೇ ಇರುವಾಗ ತಂಗಿ ಮೈನೆರೆಯುತ್ತಾಳೆ. ಆಗ ತಾಯಿಗೆ ಕಷ್ಟ ಬಂದೊದಗುತ್ತದೆ. ಇನ್ನು ಮುಂದೆ ಆಕೆಯನ್ನು ಹೇಗೆ ಸಾಕಬೇಕೆಂದು ಮಗನಿಗೆ ಕೇಳುವಳು. ಆಗ ಏನು ಚಿಂತಿಸಬೇಡ, ತಂಗಿಯನ್ನು ನಾನು ಏನಾದರೂ ಸುಳ್ಳು ಹೇಳಿ ಕಾಡಿಗೆ ಬಿಟ್ಟುಬರುತ್ತೇನೆಂದು ಹೇಳುವ ಮಾತು ಹೀಗಿದೆ;

"ಕುಮಟೆಗ್ಹೋತೀನೇ ಹೊಚಪಂಜೀ ತರುತೀನಿ
ತಂಗೀ ಕಣ್ ಕಟ್ಟೇ ಬಿಡತೀನೇ
ತಂಗಿ ಕಣ್ ಕಟ್ಟೇ ಬಿಡುತೀನೆ ತಾಯಿ, ಕೇಲೆ
ಲದುಕಾಗೇ ಶಿಂತೇ ಬಿಡುಬೇಡ"[೧೫]

ಎಂದು ಹೇಳಿ ತಂಗಿಗೆ ಏನು ಸುದ್ದಿ ತಿಳಿಸದೇ ಅಜ್ಜಿ ಮನೆಯಲ್ಲಿ ಮದುವೆ ಇದೆ ಎಂದು ಸುಳ್ಳು ಹೇಳಿ ತಂಗಿಯನ್ನು ಕಾಡಿಗೆ ಕರೆದೊಯ್ಯುತ್ತಾನೆ. ನಡೆದು ನಡೆದು ಆಯಾಸವಾದ ಕಾರಣ ತಂಗಿಗೆ ನಿದ್ದೆ ಬರುವುದು. ಅಣ್ಣನ ತೊಡೆಯ ಮೇಲೆ ಒರಗುವಳು. ನಿದ್ದೆ ಹತ್ತಿರುವಾಗ ಅಣ್ಣ ದುಃಖಿಸುತ್ತಾ ಆಕೆಗೆ ಕಣ್ಣುಕಟ್ಟಿ ಮಲಗಿಸಿ ವ್ಯಥೆಪಡುತ್ತಾ ಹೋದನು. ಆದರೆ ಸಮಾಜದ ಕಟ್ಟಳೆಗೆ ಬಾಗಬೇಕಾದ ಅನಿವಾರ್ಯತೆ ಆತನಿಗೆ ಹಾಗೂ ಕುಟುಂಬಕ್ಕೆ ಇದ್ದಿತೆಂಬುದು ಈ ಸಮಾಜದ ಕಟ್ಟಳೆಯಿಂದ ತಿಳಿದುಬರುತ್ತದೆ. ತಂಗಿಗೆ ಸ್ವಲ್ಪ ಸಮಯದ ನಂತರ ಎಚ್ಚರವಾಗಿ;

"ಹರಹರಂದಾಲೇ 'ಶಿವ ಶಿವ'ಲೆಂದಾಲೇ
ನೆರಿಯೂ ಹುಲಿಗಲೇ ಬರತಿದವೋ
ನೆರಿಯೂ ಹುಲಿಗಲೇ ಬರುವಂತಾ ಹೊತ್ತೀಗೇ
ನನ್ನಣ್ಣ ಬಿಟ್ಟೇ ನಡೆದಿದನೇ"[೧೬]

೧೫. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೯೦
೧೬. ಅದೇ, ಪು.೯೬

ಎಂದು ಅಣ್ಣ ಕಾಣದೇ ಏನು ಮಾಡಬೇಕೆಂದು ಅರಿಯದೇ ಪ್ರಲಾಪಿಸುತ್ತಾ ಕುಳಿತಿರುವಾಗ ನರಿಯು ಬಂದು ಆಕೆಯ ಕುತ್ತಿಗೆಯನ್ನು ಮುರಿದು ತಿಂದಿತು. ಅಮಾನವೀಯ ಈ ಕಟ್ಟಳೆ ಮುಗ್ಧ ಹೆಣ್ಣನ್ನು ಬಲಿತೆಗೆದುಕೊಂಡಿತು. ಏನೂ ಅರಿಯದ ಆ ಹೆಣ್ಣು ಮಗುವನ್ನು ಮೋಸದ ಬಲೆಗೆ ಸಿಲುಕಿಸಿ ಕೊಂಡೊಯ್ಯುವಂತಹ ದುರಂತ ಚಿತ್ರಣ ಹಾಕಿದ ಕಟ್ಟಳೆಯನ್ನು ವಿರೋಧಿಸುವಂತೆ, ಪ್ರತಿಭಟಿಸುವಂತೆ, ಸಾರ್ವಜನಿಕ ನೆಲೆಯನ್ನು ಧಿಕ್ಕರಿಸುವಂತಹ ಉದ್ವೇಗ ಉಂಟಾಗುತ್ತದೆ. ಆದರೆ ಇದಕ್ಕೆಲ್ಲಾ ಅವಕಾಶವಿರದೆ ಸಾಮಾಜಿಕ ವ್ಯವಸ್ಥೆಗೆ ತಲೆಬಾಗಲೇ ಬೇಕಾದಂತಹ ಅನಿವಾರ್ಯತೆ ಇತ್ತೆಂಬುದು ತಿಳಿದುಬರುತ್ತದೆ.

ಅಂದು ನಿರ್ಜನ ಪ್ರದೇಶಕ್ಕೆ ಹೋಗಿ ಕಾಡಿನಲ್ಲಿ ಬಿಟ್ಟು ಬಂದರೆ ಇಂದು ನಿರ್ಜನ ಪ್ರದೇಶಕ್ಕೆ ಮಹಿಳೆಯನ್ನು ಕೊಂಡೊಯ್ದು ಹಿಂಸೆ, ಅತ್ಯಾಚಾರವೆಸಗಿ ಬಿಸಾಕುವಂತಹ ದುಃಸ್ಥಿತಿ ಬಂದೊದಗಿದೆ. ವಿಚಾರವಂತ ಪ್ರಾಣಿ ಕೂಡ ವಿಚಾರರಹಿತ ಪ್ರಾಣಿಗಿಂತ ಕ್ರೂರವಾಗಿ ಕಾಣುತ್ತಿರುವ ಸಮಾಜಕ್ಕೆ ಕುರುಡುತನ ಆವರಿಸಿದೆ.

ಈ ಕಥನಗೀತೆಯಲ್ಲಿ ಮಹಿಳೆಗೆ ಋತುಮತಿ ಸಂದರ್ಭವೇ ಶಾಪವಾಗಿ ಆಕೆಯ ಜೀವನಕ್ಕೆ ಮುಳ್ಳಾಗುತ್ತದೆ. ಹೆಣ್ಣು ಋತುಮತಿಯಾಗುವ ಮೊದಲೇ ಮದುವೆ ಮಾಡಬೇಕು ಇಲ್ಲದೇ ಹೋದರೆ ಏನಾಗುತ್ತದೆ ಎಂಬುದನ್ನು ಯಾಜ್ಞವಲ್ಕ್ಯ ಹೀಗೆ ಹೇಳುತ್ತಾನೆ, "ಹೆಂಗಸಿಗೆ ಋತುಮತಿಯಾಗುವ ಮೊದಲು ಮದುವೆ ಮಾಡಬೇಕು. ಇಲ್ಲದೇ ಹೋದರೆ ಅವಳು ಪ್ರತಿಬಾರಿ ಋತುಮತಿಯಾದಾಗಲೂ ತಂದೆ-ತಾಯಿಗಳಿಗೆ ಒಂದು ಭ್ರೂಣಹತ್ಯೆ ಮಾಡಿದ ಪಾಪ ಬರುತ್ತದೆ"[೧೭] ಎಂದು ಹೇಳುತ್ತಾನೆ. ಈ ವಿಧಿಯನ್ನು ಮಹಿಳೆಯ ಮೇಲೆ ಹೇರುವರು. ಇಲ್ಲಿ ನೈಸರ್ಗಿಕ ಕ್ರಿಯೆಯಾದ ಋತುಚಕ್ರ ಮಹಿಳೆಗೆ ಶಾಪವೆಂಬಂತೆ ಭಾಸವಾಗುತ್ತದೆ. ಬಹುಶಃ ಈ ಮುನಿಯ ಕಟ್ಟಳೆಯೇ ಕಥನಗೀತೆಗೆ ಪ್ರೇರಣೆಯಾಗಿರಬಹುದೆನಿಸುತ್ತದೆ. ಮಹಿಳೆಯ ಗರ್ಭ ದಲ್ಲಿರುವ ಮಗು ಹೆಣ್ಣು ಎಂದು ಗೊತ್ತಾದ ತಕ್ಷಣ ಅದನ್ನು ಚಿವುಟಿ ಹಾಕುವುದು ಪಾಪವಾಗುವುದಿಲ್ಲ. ಅದೇ ಮಹಿಳೆ ಋತುಮತಿಯಾಗುವ ಮೊದಲೇ ಮದುವೆ ಮಾಡಬೇಕೆಂಬುದು ಎಂತಹ ಕಟ್ಟಳೆ ಎಂಬುದನ್ನು ಕಂಡರೆ ಇಂತಹ ಕ್ರೂರ ಸಮಾಜದಲ್ಲಿ ಬದುಕಬೇಕಾಗಿರುವುದು ವಿಚಿತ್ರವೆನಿಸುತ್ತದೆ.

---

೧೭. ಮಹಾಸತಿ ಆಚರಣೆ : ಒಂದು ಅಧ್ಯಯನ : ಬಸವರಾಜ ಕಲ್ಗುಡಿ, ಪು.೨೮

ಜಾತೀಯತೆಯ ಕಾನೂನು-ಕಟ್ಟಳೆ :

'ಎಳೆಯನ ಕೆಂಗಪ್ಪ ಎಳಗನಾತಗರನಾಕಿ' ಕಥನಗೀತೆಯಲ್ಲಿ ಶತ ಶತಮಾನಗಳಿಂದ ತಾಂಡವಾಡುತ್ತಾ ಬಂದ ಜಾತಿ ವ್ಯವಸ್ಥೆಯ ಕಟ್ಟಳೆಗಳನ್ನು ದಾಟಿ ಬರಕೂಡದು ಎಂಬ ವಿಷಯ ಕಂಡುಬರುತ್ತದೆ. ಇಂದಿಗೂ ಕೂಡ ಅದು ಬೆಳೆದುಕೊಂಡು ಬಂದಿದೆ. ಸಮಾಜದಲ್ಲಿ ಭಿನ್ನಜಾತಿಯ ಗಂಡು-ಹೆಣ್ಣು ಪರಸ್ಪರ ಪ್ರೀತಿಸಿ ವಿವಾಹವಾಗುವುದು ಅಪರಾಧವೇ ಆಗಿದೆ. ಇವುಗಳ ಪರಿಣಾಮ ಹೆಚ್ಚು ದುರಂತವಾಗಿರುವುದನ್ನು ಕಾಣುತ್ತೇವೆ. ಬೇರೆ ಜಾತಿಯ ಹೆಣ್ಣನ್ನು ಪ್ರೀತಿಸಿದ ಉಚ್ಚಕುಲದ ಗಂಡು ಆ ಸಮಾಜದ ಕೋಪಕ್ಕೆ ಎರವಾಗಿ ಪ್ರಾಣ ಕಳೆದುಕೊಂಡ ಘಟನೆಯನ್ನು ಈ ಕಥನಗೀತೆ ಸಾರುತ್ತದೆ. ಇಲ್ಲಿ ಜಾತಿಯೆಂಬ ಕಾನೂನು ಜೀವವನ್ನೇ ಬಲಿ ತೆಗೆದುಕೊಳ್ಳುವ ಮಟ್ಟಿಗೆ ಹೋಗುತ್ತದೆ.

ಚಿಕ್ಕವನಾದ ಕೆಂಗಪ್ಪನು ಗಂಡುಕುರಿಯನ್ನು ಸಾಕಿದ್ದನು. ಎಳ್ಳು ಹೊಲದಲ್ಲಿ ಮಂಕು ಮನಸ್ಸು ಮಾಡಿಕೊಂಡು ದುರುಗಕ್ಕೆ ಹೋದನು. ಅಲ್ಲಿ ನೀರಿಲ್ಲ, ನೆರಳಿಲ್ಲ. ಹಾಗಾಗಿ ಮರದ ನೆರಳಿಗೆ ಉಸ್ ಎಂದು ಕುದುರೆಯನ್ನಿಳಿದು ನಿದ್ರೆ ಮಾಡುತ್ತಿರುವಾಗ ಏಳು ಮಂದಿ ಮಹಿಳೆಯರು (ಸೂಳೆಯರು) ನೀರಿಗೆ ಹೋಗಿ ಬರುವಾಗ ಯಾವ ಸೀಮೆಯವನಿವನು ನಮ್ಮ ಹಳ್ಳಿಯವನಲ್ಲ, ನಮ್ಮ ಗೌಡನಲ್ಲ ಎಂದಾಗ ತಾನು ಭದ್ರ ಚಿಕ್ಕಮ್ಮನ ಮಗ ಎಂದು ಹೇಳಿದನು. ಭದ್ರ ಚಿಕ್ಕಮ್ಮನ ಮಗನಾದರೇನಾಯಿತು. ಅರಮನೆಗೆ ಹೋಗೋಣವೆಂದು ಕರೆದರು. ಆಗ ಅವನು ಅರಮನೆಗೆ ಹೋಗೋಕೆ ನಮ್ಮದೇನು ನಂದಗೋಕುಲವಲ್ಲ ಮೇಲಾಗಿ ಬೇಡರ ಹುಡುಗಿ ನೀನು ಎನ್ನುವಲ್ಲಿ ಆತ ಆ ಏಳು ಮಂದಿ ಮಹಿಳೆಯರಲ್ಲಿ ಯಾರಾದರೂ ಒಬ್ಬರಿಗೆ ಹೇಳಿರುವ ಹಾಗೆ ಕಂಡುಬರುತ್ತದೆ.

"ಹಿಂದವರೆ ನಮ್ಮ ಹಿರಿಯೋರು – ಬೇಡರ ಹುಡುಗಿ
ನ್ಯಾಯವು ಬಂದಾವು ಕುಲದಲ್ಲಿ"[೧೮]

'ನೀನು ಬೇಡರ ಹುಡುಗಿಯಾಗಿರುವೆ. ನಿಮ್ಮ ಹಿರಿಯರಿಗೆ ನಮ್ಮ ಹಿರಿಯರಿಗೆ ಜಗಳವುಂಟಾಗುವ ಸಂಭವ ಬಂದೊದಗುತ್ತದೆ' ಎಂದು ಜಾತಿ ವ್ಯವಸ್ಥೆಯ ಕಟ್ಟುಪಾಡುಗಳನ್ನು ಆಕೆಗೆ ತಿಳಿಸುತ್ತಾನೆ. ಆದರೂ ಕೂಡ ಆಕೆ ಅಂಜದೇ ನ್ಯಾಯ ಏನಾದರೂ ಬಂದರೆ ಮಾಯ ಮಾಡುವುದು ಹೇಗೆ ಎಂಬುದನ್ನು ನಾನು ಅರಿತಿದ್ದೇನೆ ಹೋಗೋಣ ನಡೆಯೋ ಅರಮನೆಗೆ ಎಂದು ಮತ್ತೆ ತನ್ನ ಪ್ರೀತಿಯ ನಿವೇದನೆಯನ್ನು ಮಾಡಿಕೊಳ್ಳುವಳು. ಆದರೂ ಕೂಡ ಆತ

೧೮. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೩೨೪

ಒಪ್ಪದ ಕಾರಣ ನಾಗಳ ಹೂ, ಇಕ್ಕಳ ಹೂವನ್ನು ಹಾಸಿ ಸುತ್ತ ದೀವಿಗೆ (ದೀಪವನ್ನು) ಹಚ್ಚಿ ಕರೆದಳು. ಮುಂದೆ ಆತನಿಗೆ ಬೇಡತಿಯ ಸಂಗ ಬೇಡವೆಂದು ಸಮಾಜ ಹೇಳುತ್ತದೆ. ಆದರೂ ಕೈಬಿಡದ ಆತ ಆಕೆಗಾಗಿ ಮನೆಯನ್ನು ಕಟ್ಟಿಸುತ್ತಾನೆ. ಇದರಿಂದ ಇಬ್ಬರಲ್ಲಿಯೂ ಪ್ರೀತಿ ಇತ್ತು ಎಂಬುದರ ಸ್ಪಷ್ಟ ಚಿತ್ರಣ ದೊರಕುತ್ತದೆ. ಮುಂದೆ ಸಮಾಜ ಎಲ್ಲ ವಿವಾದವನ್ನು ಮಹಿಳೆಯರ ಮೇಲೆ ಹಾಕಿ ಉಚ್ಚ ಕುಲದವನಾದ ಕೆಂಗಪ್ಪನನ್ನು ಬಿಡಿ ಎಂದು ಮಹಿಳೆಯರನ್ನು ಬೈಗುಳಕ್ಕೆ ಗುರಿ ಮಾಡುತ್ತದೆ.

"ಬಿಡಿ ನಮ್ಮ ಈರನಾ ಬಿಡಿ ನಮ್ಮ ಸೂರನಾ
ಸೇರಕ್ಕಿ ಉಣ್ಣೊ ಚಲುವನ – ಕೆಂಗಪ್ಪನ
ಬಿಡಿರೇ ಬಳ್ಳಾರಿ ಬಸವೀರ"[೧೯]

ಇಲ್ಲಿ ಬಸವೀರ ಎಂದು ಕರೆಯುವಲ್ಲಿ ಇವರು ದೇವರ ಹೆಸರಿನಲ್ಲಿ ದೇವಾಲಯದ ಸೇವೆಗಾಗಿ ಮೀಸಲು ಬಿಟ್ಟ ಕನ್ಯೆ ಅಥವಾ ಜಾರೆ ಎಂಬರ್ಥವಾಗುತ್ತದೆ. ಈ ಕಟ್ಟಳೆಯನ್ನು ಮಾಡುವುದೇ ಸಮಾಜ ಅದನ್ನು ಧಿಕ್ಕರಿಸಿದರೆ ಆಕೆಯನ್ನು ದೂಷಿಸುತ್ತದೆ. ಮುಂದೆ ಅವಳ ಅಣ್ಣಂದಿರಿಗೆ ಕೆಂಗಪ್ಪ ಸಿಕ್ಕು ಸಾಯುತ್ತಾನೆ. ಈ ಸುದ್ದಿಯನ್ನು ತಿಳಿದ ಈತನ ಚಿಕ್ಕಮ್ಮ ಮಗನನ್ನು ಕಳೆದುಕೊಂಡು ಬೋರಾಡಿ ಅಳುತ್ತಾಳೆ. ಪ್ರೀತಿಯಲ್ಲಿ ಜಾತಿ ಅಡ್ಡ ಬಂದು ಮನುಷ್ಯತ್ವವನ್ನೇ ಮರೆತು ವರ್ತಿಸುವ ಸಾರ್ವಜನಿಕ ನೆಲೆ ಇಲ್ಲಿ ಬಿಂಬಿತವಾಗಿದೆ.

ಪಂಥದಲ್ಲಿ ಮಹಿಳೆಯನ್ನು ವಸ್ತುವಾಗಿ ಕಂಡ ಕಾನೂನು–ಕಟ್ಟಳೆ :

ಪಂಥದಲ್ಲಿ ಗೆದ್ದ ಬಪ್ಪಿಂಗ ಎಂಬ ಬ್ರಾಹ್ಮಣ ಯುವಕನ ತಂಗಿಯನ್ನು ಬಮ್ಮಿಂಗ ಎಂಬ ಹೊಲೆಯರ ಯುವಕ ಮದುವೆಯಾಗುತ್ತಾನೆ. ಆದರೆ ಬಪ್ಪಿಂಗನ ತಂಗಿ ಬಮ್ಮಿಂಗನೊಂದಿಗೆ ಬಾಳುವೆ ಮಾಡಲಾರದೇ ಬಾವಿಗೆ ಹಾರಿ ಪ್ರಾಣವನ್ನು ಕಳೆದುಕೊಳ್ಳುತ್ತಾಳೆ. ಕಾರಣ ಸಮಾಜದ ಚುಚ್ಚು ಮಾತುಗಳು, ಕಟ್ಟಳೆಗಳು ಅಡ್ಡಬಂದಿರಬಹುದು ಎನಿಸುತ್ತದೆ. ಸ್ನೇಹದಲ್ಲಿ ಜಾತಿಯೆಂಬ ಭೂತ ಅಡ್ಡ ಬರದಿದ್ದರೂ ವಿವಾಹ ಮತ್ತಿತರೆ ಕಾರ್ಯಕ್ರಮಗಳಲ್ಲಿ ಜಾತಿಯ ಕಟ್ಟುಪಾಡುಗಳು ಅಡ್ಡ ಬಂದು ಅನುಸರಿಸಲು ಸಾಧ್ಯವಾಗದ ಪರಿಸ್ಥಿತಿ, ಮಾನಸಿಕ ವೇದನೆ ಒದಗಿಬರುತ್ತದೆ. ಇವೆಲ್ಲಾ ನಡೆಯುವುದು ಸಾರ್ವಜನಿಕ ನೆಲೆಯಲ್ಲಿ ಎನ್ನುವುದನ್ನು ಮರೆಯುವಂತಿಲ್ಲ. ಜೊತೆಗೆ ಪಗಡೆಯಾಟ ಆಡುವ ಪೂರ್ವದಲ್ಲಿ ಇಬ್ಬರೂ ಸ್ನೇಹಿತರು ವಚನವನ್ನು ಪಡೆದು–ಕೊಂಡಿರುತ್ತಾರೆ. ಅದೇಂದರೆ: 'ನೀ ಸೋತರೇ ನಿನ್ನ ತಂಗಿಯನ್ನು ನನಗೆ ಕೊಡಬೇಕು, ನಾ

೧೯. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೩೨೫

ಸೋತರೆ ನನ್ನ ತಂಗಿಯನ್ನು ನಿನಗೆ ಕೊಡುತ್ತೇನೆ' ಎಂದು ಆಕೆಯನ್ನು ಒಂದು ವಸ್ತುವಾಗಿಯೋ, ಹಣವಾಗಿಯೋ ಬಳಸಿಕೊಂಡಿರುವುದು ಸಮಾಜವನ್ನು ಕಲುಷಿತಗೊಳಿಸಲು ಇದೂ ಕೂಡಾ ಒಂದು ಕಾರಣ. ಇಲ್ಲಿ ಕೌರವರು ಪಾಂಡವರು ದ್ರೌಪದಿಯನ್ನು ತಮ್ಮ ವಸ್ತುವಾಗಿಟ್ಟುಕೊಂಡು ಪಗಡೆಯಾಡಿದ ಸಂದರ್ಭವನ್ನು ನೆನಪಿಸುತ್ತದೆ. ಬಪ್ಪಿಂಗ(ಬ್ರಾಹ್ಮಣ)ನ ತಂಗಿ ಅತ್ತೆಯ ಮನೆಯಲ್ಲಿ ಊಟಕ್ಕೆ ಹೋಗುವುದಿಲ್ಲವೆಂದು 'ಒಂದಂಬು ತುತ್ತು ಕಲಿಸಿತು, ಕೈತಪ್ಪಿತು, ಎರಡಂಬು ತುತ್ತು ಬಾಯಿಗೆ ಹೋಗಲಿಲ್ಲ ಹೀಗೆ ತುತ್ತು ಹೋಗಲಿಲ್ಲವೆಂದು ಹೇಳುವಲ್ಲಿ ಆಕೆ ಕಷ್ಟವನ್ನು ಸಹಿಸಿಕೊಳ್ಳಲು ಆಗುತ್ತಿಲ್ಲವೆಂದು ಅರ್ಥೈಯಿಸಿಕೊಳ್ಳಬಹುದು. ತಾಯಿ ಮನೆಯಲ್ಲಿ ಹೊಟ್ಟೆ ಹಸಿವಾಗಿದೆ (ಕಷ್ಟ ಬಂದೊದಗಿದೆ) ಊಟ ಬಡಿಸೆಂದು ತಾಯಿಗೆ ಕೇಳಿದಾಗ ಆ ತಾಯಿ ಆಡಿದ ಮಾತು ಕೇಳಿದರೆ ಆಕೆ ಮಲತಾಯಿಯಾದರೂ ಇರಬಹುದು ಅಥವಾ ಮನಸ್ಸು ಅರಿಯದ ಮೃಗವಾಗಿರಬಹುದು ಎಂಬ ಸಂಶಯ ಆಕೆಯ ಈ ಮಾತಿನಿಂದ ಉಂಟಾಗುತ್ತದೆ:

"ಹೊಟ್ಟೆ ಹಸುವು ಆದರೆ
ಹಾದಿ ಮಣ್ಣು ತಿನ್ನವ್ವ
ಕೊಟ್ಟವನ ಮನೆಗೆ ಹೋಗವ್ವ"[೨೦]

ಎಂದು ಹೇಳಿ ಬಾಗಿಲನ್ನು ಮುಚ್ಚುವಳು. ಕುಟುಂಬದವರೇ ಆಕೆಯನ್ನು ಮದುವೆ ಮಾಡಿ, ಕಷ್ಟವೆಂದು ಬಂದರೆ ಮಣ್ಣು ತಿನ್ನು ಎಂದು ಹೇಳಿ ಕಳುಹಿಸುವ ತಾಯಿ, ತಾಯಿ ಕುಲಕ್ಕೆ ಅವಮಾನವಾಗಿ ಗೋಚರಿಸುವಳು. ಇಂತಹ ಕಾನೂನು, ಕಟ್ಟಳೆಗಳು ಮಗಳಿಗೆ ಏನು ಮಾಡಬೇಕೆಂದು ತಿಳಿಯದೇ ತಾಯಿಗೆ ಬೇಡವಾದ ಮಗಳಾದೇ ನಾನು ಇದ್ದು ಫಲವೇನು ಎನ್ನುತ್ತಾ ಬಾವಿಗೆ ಹಾರಿ ಪ್ರಾಣ ಕಳೆದುಕೊಂಡಳು. ಮಗಳಲ್ಲಿ ಆತ್ಮವಿಶ್ವಾಸದ ಕೊರತೆ, ಕುಟುಂಬ ಹಾಕಿದ ದಾರಿಯಲ್ಲೇ ನಡೆದರೂ ಅನ್ಯಾಯವಾಯಿತಲ್ಲಾ ಎಂಬ ಕೊರಗು ಸಮಾಜದ ಚುಚ್ಚು ಮಾತುಗಳಿಗೆ ನಿಲ್ಲಲಾಗದ ಪರಿಸ್ಥಿತಿ, ಒಂದರ ಮೇಲೊಂದು ಬೆಂಕಿಯ ಕಿಡಿಗಳು ತಾಗುತ್ತಲೇ ಇದ್ದಾಗ ಜೀವನವೇ ನಶ್ವರವೆನಿಸಿ ಪ್ರಾಣ ಕಳೆದುಕೊಳ್ಳಲು ಮುಂದಾಗುವರು. ಅದರ ಬದಲಾಗಿ ಬೆಂಕಿಯಿಂದ ಬೆಳಕಿದೆ. ಒಂದೊಂದು ಕಿಡಿಗಳು ಒಂದೊಂದು ಪಾಠವನ್ನು ಕಲಿಸುತ್ತವೆ. ಚುಚ್ಚು ಮಾತುಗಳಿರುವುದೇ ನಮ್ಮ ಏಳ್ಗೆಗಾಗಿ ಎಂದು ಆತ್ಮವಿಶ್ವಾಸ, ಧೈರ್ಯದಿಂದ ಜೀವನವನ್ನು ಎದುರಿಸುವ ಶಕ್ತಿಯನ್ನು ಪಡೆದುಕೊಳ್ಳುವುದು

೨೦. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೩೩೨

ಅವಶ್ಯಕವಾಗಿದೆ. ಅಂತಹ ಆತ್ಮವಿಶ್ವಾಸದೊಂದಿಗೆ ಬದುಕು ಸಾಗಿಸಬೇಕಾದಂತಹ ಅವಶ್ಯಕತೆ ಗೊತ್ತಿದ್ದು ಕೂಡ ಇಂದು ಎಷ್ಟೋ ಮಹಿಳೆಯರು ಧೈರ್ಯಗುಂದಿ ಪ್ರಾಣ ಕಳೆದುಕೊಳ್ಳುತ್ತಿರುವ ಹಲವಾರು ಘಟನೆಗಳನ್ನು ಕಾಣುತ್ತೇವೆ.

ಮಹಿಳೆ ನಾಲ್ಕು ಗೋಡೆಗೆ ಸೀಮಿತವಾದ ಕಾನೂನು-ಕಟ್ಟಳೆ:

ದಂಡು ಬಂತವ್ವಾ ದಂಡು ಕಥನಗೀತೆಯು ಊರಿನಲ್ಲಿ ಬೀಡುಬಿಟ್ಟರೆ ಊರೊಳಗಿನ ಹೆಣ್ಣುಮಕ್ಕಳನ್ನು ಸಂರಕ್ಷಿಸುವುದು ಊರಿನವರಿಗೆ ಸವಾಲೇ ಆಗುತ್ತಿತ್ತು. ದಂಡು ಬಂದಾಗ ಹೆಣ್ಣುಮಕ್ಕಳು ಹೊರಬರುವಂತಿರಲಿಲ್ಲ.

"ಹುಟ್ಟಿದ ಮಗಳವ್ವ ಕಟ್ಟಿಕಲ್ಲ ಇಳದಿಲ್ಲ ।
ಬ್ಯಾಡ ನನಗ ಮಗಳ ಹೊರಿಯಾಕ"[೨೧]

ಎಂದರೆ ಹುಟ್ಟಿದ ಹೆಣ್ಣುಮಕ್ಕಳು ಮನೆಯ ಕಟ್ಟೆಯನ್ನು ಬಿಟ್ಟು ಹೊರಗಡೆ ಹೋಗಲು ಅವಕಾಶವಿರಲಿಲ್ಲ. ಹೆಣ್ಣು ಮಗಳು 'ಬೇಡವೆಂದರೂ ದಂಡನ್ನು ನೋಡಲು ಅಗಸಿಗೆ ಬಂದು ನಿಂತಳು. ಆ ಸುಂದರವಾದ ಹುಡುಗಿಯನ್ನು ಕಂಡು ದಂಡಿನ ಅಧಿಕಾರಿಗಳು ಬಲಾತ್ಕಾರ-ದಿಂದ ಕೊಂಡೊಯ್ದು ಅತ್ಯಾಚಾರವೆಸಗಿ ಕೊಂದ ಅಮಾನವೀಯ ಘಟನೆಯೊಂದನ್ನು ಈ ಕಥನಗೀತೆಯಲ್ಲಿ ಕಾಣುತ್ತೇವೆ. ಹಿಂದೆಯಷ್ಟೇ ಅಲ್ಲ ಇಂದೂ ಸಹ ದೇಶದಲ್ಲಿ ಮಹಿಳಾ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದರೂ ಸಹ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಲಿವೆ.

ಕ್ಯಾತಗನಹಳ್ಳಿ ಗಿರಿಯಯ್ಯ ಹೇಳಿದ 'ಲೀಲಾವತಿ' ಎಂಬ ಜನಪದ ಕಥನಗೀತೆಯಲ್ಲಿ ಸ್ತ್ರೀಯೊಬ್ಬಳು ತನ್ನ ಬದುಕಿನ ಸಂಕಟ ಸಮಯದಲ್ಲಿ ಹೇಳಿಕೊಳ್ಳುವ ಮಾತುಗಳು ಹೀಗೆ ಬರುತ್ತವೆ:

'ಕುರುಡಾಗಿ ಕುಂಟಾಗಿ ವುಟ್ಟಿದ್ರೂನು ಗಂಡ್ಸಾಗಿವುಟ್ಬೇಕು
ಹೆಣ್ಣಾಗಿ ವುಟ್ಬಾರ್ದು ಈ ಭೂಮಿ ಮ್ಯಾಲ
ಹೆಣ್ಮಕ್ಳು ರೂಪಾಗಿ ವುಟ್ಟಿದ್ರೂನು ಕಷ್ಟ, ರೂಪಾಗಿ ವುಟ್ದೇವೋದ್ರೂನ ಕಷ್ಟ
ರೂಪಾಗಿ ವುಟ್ಟದ್ರ ಗಂಡಿಸ್ರಿಂದ ತಪ್ಪಿ ಕಂಡು ಬಾಳದೇ ಕಷ್ಟ
ರೂಪಾಗಿ ವುಟ್ದೆವೋದ್ರೆ ಇವಳೆಂತಾವಳಪ್ಪ ಗೂಬೆ ಇದ್ದಂಗೆ ಅವ್ಳ'[೨೨]

---

೨೧. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೩೪೫
೨೨. ಕತ್ತಾಲದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೩

ಅಂದರೆ ಈ ಭೂಮಿಯ ಮೇಲೆ ಹೆಣ್ಣುಮಗಳಾಗಿ ಹುಟ್ಟುವುದೇ ಪಾಪ. ಏಕೆಂದರೆ ಹೆಣ್ಣು ಹೇಗೇ ಇದ್ದರೂ ಒಂದಲ್ಲಾ ಒಂದು ಕಷ್ಟವನ್ನು ಅನುಭವಿಸುತ್ತಾಳೆ. ಇದು ಇಂದಿಗೂ ಸತ್ಯ ಸಂಗತಿ. ವಾಸ್ತವ ದಿನಮಾನದಲ್ಲಿ ಅತ್ಯಾಚಾರವೆಂಬುದು ಊಹಿಸಲಾರದಷ್ಟು ಕ್ರೂರ ಮತ್ತು ಎಣಿಸಲಾರದಷ್ಟು ದಾಖಲೆಗಳು, ಪ್ರಕರಣಗಳು ಸಂಭವಿಸುತ್ತವೆ.

"ನಮ್ಮ ದೇಶದಲ್ಲಿ ವರ್ಷಕ್ಕೆ ಕನಿಷ್ಠ ೪೩೦೦ ಅತ್ಯಾಚಾರ ಪ್ರಕರಣಗಳು ವರದಿಯಾಗುತ್ತವೆ. ಎಂದರೆ ದಿನಕ್ಕೆ ೧೨ ಅತ್ಯಾಚಾರ ಪ್ರಕರಣಗಳು ಅಥವಾ ಎರಡು ಗಂಟೆಗಳಿಗ ಒಂದರಂತೆ ಅತ್ಯಾಚಾರ ಪ್ರಕರಣ ನಡೆಯುತ್ತದೆ ಎಂದಾಯಿತು. ವರದಿಯಾದ ಪ್ರಕರಣಗಳಿಂದ ನಮಗೆ ಈ ಅಂಕಿ-ಅಂಶಗಳು ದೊರೆತಿರುವುದು. ವರದಿಯಾಗದೆಯೇ ಉಳಿದ ಪ್ರಕರಣಗಳು ಇನ್ನೆಷ್ಟೋ"[೨೩] ಎನ್ನುವಷ್ಟು ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ಹಾಗಾದರೆ ಮಹಿಳೆ ಸಾಮಾಜಿಕ ದೌರ್ಜನ್ಯಗಳಿಂದ ಮುಕ್ತಳಾಗುವುದು ಯಾವಾಗ ಎಂಬುದು ಪ್ರಶ್ನಾರ್ಹ. ಸ್ವರೂಪ ಬದಲಾಗಿ ದೌರ್ಜನ್ಯಗಳುಂಟಾಗುತ್ತಿವೆ ಹೊರತು ಅತ್ಯಾಚಾರ, ಅನಾಚಾರ, ದೌರ್ಜನ್ಯ, ಮಾನಸಿಕ ಹಿಂಸೆ, ದೈಹಿಕ ಹಿಂಸೆಗಳ ಬಲೆಯಲ್ಲಿ ಮಹಿಳೆ ಇಂದಿಗೂ ಒದ್ದಾಡುತ್ತಿರುವಳು. ಆ ಬಲೆಯಿಂದ ಯಾವಾಗ ಹೊರಗೆ ಬರುವುದೆಂದು ಎಂಬುದೆ ಯಕ್ಷಪ್ರಶ್ನೆಯಾಗಿದೆ.

ಕಾನೂನಿನ ಕಠಿಣ ಕ್ರಮಗಳ ಜೊತೆಗೆ ಸಮಾಜದ ಮನೋಭಾವವೂ ಬದಲಾದಾಗ ಮಾತ್ರ ಮಹಿಳೆ ಸಾರ್ವಜನಿಕ ವಲಯದಲ್ಲಿ ನಿರ್ಭಯವಾಗಿ ಓಡಾಡಲು ಸಾಧ್ಯ.

ಕಾಳಿಂಗನ ಶವದೊಂದಿಗೆ ಚೆನ್ನವ್ವಳ ಮದುವೆ ಮಾಡಿಸುವ ಕಾನುನೂ-ಕಟ್ಟಳೆ :

ಕರ್ತಿರಾಯನ ಮಗನಾದ ಹತ್ತು ವರ್ಷದ ಚಿಕ್ಕಪ್ರಾಯದ ಹುಡುಗ ಕಾಳಿಂಗ ಮಿರುಗನ ಬೇಟೆಗೆ ಹೊರಡುತ್ತಾನೆ. ಹೋಗುವಾಗ ಈತನ ತಾಯಿ ಬುತ್ತಿಯನ್ನು ಕಟ್ಟಿಕೊಡುತ್ತಾಳೆ. ಪ್ರಧಾನಿಗೆ ನನ್ನ ಮಗ ಇನ್ನೂ ಚಿಕ್ಕವನು ಬೇಟೆಯಾಡುವಾಗ ಅವನನ್ನು ಬಿಟ್ಟು ಇರಬೇಡಿ ಎಂದು ಹೇಳುತ್ತಾಳೆ. ಕಾಳಿಂಗ ಬೆನ್ನಿಗೆ ಬಾಣವ ಕಟ್ಟಿಕೊಂಡು, ಮಲ್ಲಿಗೆ ಗಿಡ ತಂದು ಮನೆಯ ಹಿಂದೆ ನೆಟ್ಟು, ಅದು ಚೆನ್ನಾಗಿ ಚಿಗಿತು ಫಲ ನೀಡಿದರೆ ನಿನ್ನ ಮಗ ಚೆನ್ನಾಗಿರುವನೆಂದು ತಿಳಿಯವ್ವಾ ಎಂದು ಹೇಳಿ ಹೊರಡುವನು. ಬೆಟ್ಟಕ್ಕೆ ಹೋದ ನಂತರ ಅಲ್ಲಿ ಮಂತ್ರಿಯರೆಲ್ಲರೂ ಚದುರಿದರು. ಆಗ ಮಲಗಿದ ಮಿರುಗ ಎದ್ದು ನಿಂತಿದ್ದಕ್ಕೆ ಜೊತೆಗೆ ಸಣ್ಣ ಸಣ್ಣ ಮಿರುಗ ಎದ್ದು ನಿಂತವು. ಕಾಳಿಂಗನು ಅವುಗಳನ್ನು ಬಾಣದಿಂದ ಹೊಡೆದು ಮಂತ್ರಿ

೨೩. ಮಹಿಳೆ ಸಮಾಜ ಕಾನೂನು : ಗೀತಾ ಕೃಷ್ಣಮೂರ್ತಿ, ಪು.೨೬

ಪ್ರಧಾನಿಯವರನ್ನು ಹತ್ತಿರಕ್ಕೆ ಕರೆದು ಹೊಡೆದಿರುವ ಮಿರುಗನನ್ನು ಊರಿಗೆ ಕಳಿಸಬೇಕು ಎನ್ನುತ್ತಾನೆ.

ಕರ್ತಿರಾಯ ಹಾಲು ಅನ್ನವನುಂಡು ವೀಳ್ಯೆ ಮೆಲ್ಲುವಾಗ ಪ್ರಧಾನಿ ಮಿರುಗನನ್ನು ಹೊತ್ತುಕೊಂಡು ತಂದು ಅವನ ಮುಂದಿಟ್ಟನು. ಆಗ ತಂದೆ ಎಷ್ಟು ಮಿರುಗ ಹೊಡೆದನು, ಎಷ್ಟು ಮರಿಗಳನ್ನು ಹೊಡೆದನು. ಈ ಪಾಪವನ್ನು ಎಲ್ಲಿ ಕಳೆಯೋಣ ಎನ್ನುತ್ತಾ ಪಾಪ ಪರಿಹಾರ ಮಾಡಿಕೊಳ್ಳಲು ಅಡವಿಯಲ್ಲಿರುವ ಈರಣ್ಣನ ಗುಡಿಗೆ ಹೋಗುವಾಗ ಕಾಡುಹಕ್ಕಿ ಇಕ್ಕಿದ ಮೊಟ್ಟೆಯನ್ನು ಸರ್ಪ ಹೋಗಿ ನುಂಗುತ್ತದೆ. ಇತ್ತ ಮಲಗಿದ್ದ ಹುಲಿ ಎದ್ದು ಕಾಳಿಂಗರಾಯನ ಮೈಮೇಲೆ ಎರಗಿದ ಕಾರಣ ಭೂಮಿಗೆ ಬಿದ್ದು ಮಡಿದನು.

ಸತ್ತ ಮಗನಿಗೆ ಮದುವೆ ಮಾಡಬೇಕೆಂದು ತಾಯಿ ಗೊಂಬೆ ಮಂಟಪಕ್ಕೆ ಹೊತ್ತುಕೊಂಡು ಹೋಗೆಂದು ಪ್ರಧಾನಿಗೆ ಹೇಳುವಳು. ಗೊಂಬೆ ಮಂಟಪಕ್ಕೆ ತಂದು ಮಡುಗಿದರು. ಕಾಳಿಂಗನ ತಾಯಿ ಪ್ರಧಾನಿಯನ್ನು ಕರೆದು ಹತ್ತು ಸಾವಿರ, ಮೇಲೊಂದು ಸಾವಿರ, ವಜ್ರದ ಪದಕ ಕೊಡುವೆನು ನನ್ನ ಮಗ ಸತ್ತವನಿಗೆ ಹೆಣ್ಣನ್ನು ಹುಡುಕಿಕೊಂಡು ಬಾ ಎಂದು ಹೇಳಿ ಹತ್ತು ಸಾವಿರ ಕೊಟ್ಟು ಕಳುಹಿಸಿದಳು. ಕೇರಿ-ಕೇರಿಯಲ್ಲಿ ಹೆಣ್ಣನ್ನು ಹುಡುಕುತ್ತಾ ಹೊರಟನು. ಕೇರಿಯಲ್ಲಿರುವ ಬಡಬ್ರಾಹ್ಮಣ ದುಡ್ಡಿಗೆ, ವಜ್ರ-ವೈಢೂರ್ಯಕ್ಕೆ ಮರುಳಾಗಿ ತನ್ನ ಮಗಳು ಚೆನ್ನವ್ವಳನ್ನು ಕೊಡಲು ನಿರ್ಧರಿಸಿ ಹಣ-ವಜ್ರ-ವೈಢೂರ್ಯವನ್ನು ಹೊತ್ತುಕೊಂಡು ಮನೆಗೆ ಹೋಗುವನು. ಬ್ರಾಹ್ಮಣಗಿತ್ತಿ ಮೂಟೆ ತಂದದ್ದನ್ನು ಕಂಡು ಎಲ್ಲಿ ಕಳ್ಳತನ ಮಾಡಿದಿರಿ ಎಂದು ಕೇಳಿದಾಗ ಬಡಬ್ರಾಹ್ಮಣ ಯಾರ ಮನೆಯ ನುಗ್ಗಿ ಕಳವು ಮಾಡಲಿಲ್ಲ. ಮಗಳು ಚಿಕ್ಕೋಳು ಚೆನ್ನವ್ವಳನ್ನು ಶವದ ಜೊತೆಗೆ ಮದುವೆ ಮಾಡಿಸುವ ವಿಚಾರವನ್ನು ಹೇಳಿದಾಗ, ಹಣದ ಗಂಟನ್ನು ಎಸೆದು "ಸತ್ತೋನಿಗೆ ಹೆಣ್ಣ ಕೊಡಲಾರೆ"[೨೪] ಎಂದು ಪ್ರತಿಭಟಿಸುವಳು. ಈಕೆಯ ಪ್ರತಿಭಟನೆಗೆ ಸಿಕ್ಕ ಪ್ರತಿಫಲ ಬ್ರಾಹ್ಮಣನ ಹೊಡೆತಗಳು, ಹೊಡೆಯುವ ಹೊತ್ತಿನಲ್ಲಿ ಚಿಕ್ಕವಳು ಚೆನ್ನಮ್ಮ ಓಡಿ ಬಂದು

"ನನ್ನವ್ವನ ನೀನೇಕೆ ಹೊಡದೀ
ನನ್ನಪ್ಪ ನಿನ್ನ ಸಾಲಸೋಲವ ತೀರಿಸಿಕೊಳ್ಳಿ
ತುಪ್ಪ ಅನ್ನವ ಸುಖವಾಗಿ ಉಣ್ಣಪ್ಪ
ನನ್ನವ್ವನ್ಯಾಕೆ ಹೊಡೆದಿಯೋ ನನ್ನಪ್ಪ"[೨೫]

---

೨೪. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೦೨
೨೫. ಅದೇ, ಪು.೧೦೨

ಎಂದು ಪ್ರಶ್ನಿಸುವಲ್ಲಿ ಚಿಕ್ಕವಳು ಚೆನ್ನವ್ವಳ ತಾಯಿಯ ಅಳಲು ಹೊಡೆತ ತಿನ್ನುವುದನ್ನು ಸಹಿಸಲಾರದೆ, ಅದಕ್ಕಾಗಿ ನಾನು ನಿನ್ನಿಚ್ಛೆಯಂತೆ ಮದುವೆಯಾಗುವೆ ನೀನು ಹಾಲು ತುಪ್ಪ ಅನ್ನ ಉಂಡು ಸುಖವಾಗಿರು ಎಂದು ಹೇಳುವಲ್ಲಿ ಆಕೆಯ ಸಂಕಟ, ಅಸಹಾಯಕತೆ, ಪ್ರತಿಭಟನೆ ಎಲ್ಲವೂ ಎದ್ದು ಕಾಣುತ್ತದೆ. ಆದರೆ ಏನು ಮಾಡಲು ಸಾಧ್ಯವಿಲ್ಲ. ಏಕೆಂದರೆ ಇದು ಕೂಡ ಒಂದು ಸಂಪ್ರದಾಯ, ಕಟ್ಟಳೆ. ಕಾರಣ ಗೊಂಬೆ ಮಂಟಪದಲ್ಲಿ ಇಟ್ಟ ಕಾಳಿಂಗ ಸರ್ಪವನ್ನು ಕಾಣಬಹುದು. ಆಗ ಚನ್ನವ್ವಳನ್ನು ಪ್ರಧಾನಿ ಕರೆದುಕೊಂಡು ಹೋಗಿ ಆಕೆಯ ಮಾವನ ಮುಂದೆ ನಿಲ್ಲಿಸಿದಾಗ:

> "ಏನಯ್ಯ ಪರದಾನಿ ಈ ಹೆಣ್ಣ ಎಲ್ಲಿ ತಂದ್ಯೋ
> ತಾಯಿ ತಂದೆರು ಇಲ್ಲವೇನೊ?
> ಇವಳ ಯಂಗೆ ಮುಂಡೆ ಮಾಡಾನೊ ಪರದಾನಿ
> ಮದುವೆ ಆದ ಮೇಲೆ ಒಡವೆ ಬಿಚ್ಚಿಕೊಂಡು
> ಅವರಪ್ಪನ ಮನೆಗೆ ಕಳುಹಾನಾ, ಪರದಾನಿ"[೨೬]

ಕರ್ತಿರಾಯ ಚಿಕ್ಕ ಚೆನ್ನವ್ವಳನ್ನು ನೋಡಿ ಕರುಣೆ ಬಂದು ಹೇಗೆ ಈಕೆಯನ್ನು ವಿಧವೆಯನ್ನಾಗಿ ಮಾಡಬೇಕೆಂದು ವಿಚಾರಿಸುತ್ತಾನೆ. ಆದರೆ ಸಾಮಾಜಿಕ ವ್ಯವಸ್ಥೆ, ಕಟ್ಟುಪಾಡುಗಳು ಆತನನ್ನು ಕಟ್ಟಿಹಾಕಿವೆ. ನಿರ್ಜೀವ ಗೊಂಬೆಗೆ ಮದುವೆ ಮಾಡಿಸುವ ಹಾಗೆ ಜೀವವಿರುವ ಮಹಿಳೆಯನ್ನು ಸಜೀವ ಶವದೊಂದಿಗೆ ಮದುವೆ ಮಾಡಿ ವಿಧವೆ ಪಟ್ಟ ಕಟ್ಟುವುದು ಮಹಿಳಾ ಲೋಕದ ಒಂದು ಸಾಮಾಜಿಕ ಸಮಸ್ಯೆ ಮತ್ತು ನಿರ್ಜಿವ ವಸ್ತುವಿಗೆ ಬೆಲೆ ಕೊಡುವಷ್ಟು ಮಹಿಳೆಗೆ ಸಿಗುವುದಿಲ್ಲವೆಂದು ತಿಳಿದುಬರುತ್ತದೆ.

ಎಂಬತ್ತು ಗಾವುದ ಅಡಿಕೆ ಚಪ್ಪರವನ್ನು, ಅರವತ್ತು ಗಾವುದ ಬಾಳೆಚಪ್ಪರವನ್ನು ಹಾಕಿಸಿ ವಿಜೃಂಭಣೆಯಿಂದ ಮದುವೆ ಮಾಡಿದರು. ನಂತರ ಅವರ ಬಂಡಿ ಬಂದು ಅಂಗಳದಲ್ಲಿ ನಿಂತಿದೆ. ಆಗ ಚೆನ್ನವ್ವಳಿಗೆ ಹಲವಾರು ಮಾತುಗಳ ಮೂಲಕ 'ಚಿಕ್ಕವಳೇ ಚೆನ್ನವ್ವ ಮಡಿ ಹೋಗೆ' ಎನ್ನುವುದನ್ನು ವಿಧವಿಧವಾಗಿ ಆಕೆಯೇ ಗಂಡನನ್ನು ಸಾಯಿಸಿದಳೇನೋ ಎಂಬಂತೆ ಮಾತನಾಡುವರು. ಗಂಡನ ತಿನ್ನೋಳಿಗೆ ಹೂವಿನ ಹಂಬಲ ಏಕೆ ಎಂದು ಸಮಾಜ ಆಕೆಗೆ ಕಾಳಿಂಗನನ್ನು ಕೊಂದು ಸಿಂಗಾರವಾಗುತ್ತಿರುವಳೆಂದು ಅಣಕಿಸುತ್ತದೆ ಹಾಗೂ 'ನೀ ಮುತ್ತೈದೆ ಹೋಗಿ ಮಡಿ ಅತ್ತೆ" ಎಂದು ಸಮಾಜ ಆಡುತ್ತದೆ. ಮುತ್ತೈದೆ ಪಟ್ಟಕಟ್ಟಿದ್ದು ಅದೇ ಸಮಾಜ,

---

೨೬. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೦೩

ಆಕೆಗೆ ವಿಧವೆಯೆನ್ನುವ ಪಟ್ಟ ಕಟ್ಟಿದ್ದು ಅದೇ ಸಮಾಜ. ಹಾಗಾಗಿ ಇದರಲ್ಲಿ ಚೆನ್ನವ್ವಳ ತಪ್ಪು ಸ್ವಲ್ಪವೂ ಕಂಡು ಬರುವುದಿಲ್ಲ. ಆದರೆ ಸಮಾಜದ ಕಟ್ಟಳೆಗೆ ಗುರಿಯಾಗುವುದು ಮಾತ್ರ ಆಕೆಗೆ ಅನಿವಾರ್ಯ. ಮುಂದೆ ಚೆನ್ನವ್ವಳಿಗೆ ಜನಪದರು ಜೋಗಿ ರೂಪದಲ್ಲಿ ಮನೆ ದೇವರಾದ ಬಸವಣ್ಣನನ್ನು ಸೃಷ್ಟಿಸಿ ಮುತ್ತೈದೆತನ ಎನ್ನುವುದು ಸ್ಥಿರವಾಗಲಿಯೆಂದು ಆಶೀರ್ವದಿಸಿದರು. ಆಗ ಕಾಳಿಂಗ ಎದ್ದು ಪಕ್ಕದಲ್ಲಿರುವ ಚೆನ್ನವ್ವಳನ್ನು ಕಂಡು ಎಲ್ಲಿಂದ ಬಂದೆ ಹೆಣ್ಣೆ ಎಂದು ಪ್ರಶ್ನಿಸುತ್ತಾನೆ. ಆಗ ಶಿವ-ಪಾರ್ವತಿ ಬಂದು ನಡೆದ ಸಂಗತಿಯನ್ನು ಹೇಳಿ ಸುಖವಾಗಿ ಬಾಳಿ ಎಂದು ಮಾಯವಾದರಂತೆ. ಸತ್ತವರು ಬದುಕುವುದು ಅಸಾಧ್ಯದ ಸಂಗತಿ ನಿಜ. ಇಲ್ಲಿ ಆಕೆಯ ಒಳ್ಳೆತನ, ಎಲ್ಲವನ್ನು ಸಹಿಸುವಂತಹ ಶಕ್ತಿ, ಆಕೆಯನ್ನು ಕಾಪಾಡಿತು ಎಂಬ ಪ್ರಜ್ಞೆ ಒಡಮೂಡುತ್ತದೆ. ದುಃಖಾಂತದಿಂದ ಪ್ರಾರಂಭವಾಗಿ ಸುಖಾಂತವನ್ನು ಬಿತ್ತರಿಸುವ ಕಥನಗೀತೆ ಮಹಿಳಾಲೋಕಕ್ಕೆ ಆಶಾಭಾವನೆ, ಹೊಸ ಮಾರ್ಗವುಂಟು ಎಂಬುವುದನ್ನು ಅರ್ಥಯಿಸುತ್ತದೆ. 'ತಾಳಿದವನು ಬಾಳಿಯಾನು' ಎಂಬ ನುಡಿ ಚೆನ್ನವ್ವಳ ಪಾತ್ರದಿಂದ ಸತ್ಯವೆನಿಸುತ್ತದೆ. ಕಷ್ಟಗಳನ್ನು ಆನಂದದಿಂದ ಸ್ವೀಕರಿಸಿದರೆ ಅದು ನಮ್ಮ ಯಶಸ್ಸಿಗೆ ದಾರಿದೀಪವಾಗುತ್ತದೆ.

ಲಕ್ಷ್ಮೀದೇವಿಯ ಶೀಲ ಪರೀಕ್ಷೆಗಾಗಿ ಆಕೆಯನ್ನು ತೂಕ ಮಾಡಿ ನೋಡುವ ಕಾನೂನು-ಕಟ್ಟಳೆ:

'ಗೊಲ್ಲರ ಕುಲದ ಹುಟ್ಟಿನ ಸಂದು' ಕಥನಗೀತೆಯಲ್ಲಿ ದ್ವಾರಕದಲ್ಲಿ ವಿಷ್ಣು, ಕಂಸಾಸುರನನ್ನು ಕೊಲ್ಲುವುದಕ್ಕೆ ಕೃಷ್ಣನ ಅವತಾರ ಎತ್ತಬೇಕಾಗುತ್ತದೆ. ಅದಕ್ಕಾಗಿ ನಾನು ಗೊಲ್ಲರ ಯಶೋಧಮ್ಮನ ಮನೆ ಸೇರಬೇಕು. ನಾನು ಅಲ್ಲಿಯೇ ದೊಡ್ಡವನಾಗಬೇಕು. ಗೋವರ್ಧನಗಿರಿಯಲ್ಲಿ ಒಬ್ಬ ಮಹಾರಾಜನಿರುವನು. ಅವನಿಗೆ ಮಗಳಾಗಿ(ಸತ್ಯಭಾಮೆ) ನೀ ಜನಿಸು. ನಾನು ಊರು ಮುಂದೆ ಒಬ್ಬ ಬಡವನಿರುವನು (ಜಾಂಬವಂತ) ಆತನ ಹೊಟ್ಟೆಯೊಳಗೆ ನಾನು ಜನಿಸುತ್ತೇನೆ. ಪ್ರಾಯಕ್ಕೆ ಬಂದ ಮೇಲೆ ಮುಂದಿನ ಕತೆ ಹೇಳುತ್ತೇನೆ ಎಂದು ಹೇಳಿ ಮಾಯದಿಂದ ಅವರ ಹೊಟ್ಟೆಯಲ್ಲಿ ಜನಿಸಿದರು.

ಒಂದಾನೊಂದು ದಿವಸ ರಾಜನ ಮಗಳು ಲಕ್ಷ್ಮೀದೇವಿ ಋತುಮತಿಯಾದಳು. ಆಕೆಯ ಸೂತಕವನ್ನು ಕಳೆದು, ಸ್ನಾನ ಮಾಡಿಸಿ, ತಲೆಬಾಚಿ, ಹೂ ಮುಡಿಸಿ, ಸಿಂತೋಳಗಿಟ್ಟರು (ತೂಕ ಮಾಡಲು).

"ಸೀಂತೊಳಗಿಟ್ಟೆ
ಒಂದೇ ಒಂದು ಮಲ್ಲಿಗೆ ಹೂವಿನ ತೂಕಕ್ಕಿದ್ದು ಲಕ್ಷ್ಮೀದೇವಿ"[೨೭]

೨೭. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೨೨

ಎನ್ನುವಲ್ಲಿ ಒಂದೇ ಒಂದು ಮಲ್ಲಿಗೆ ಹೂವಿನ ತೂಕವಿದ್ದವಳಿಗೆ ಮೇಲೆ ಮಹಡಿಯಲ್ಲಿ ಕಾವಲಿಟ್ಟರು. ಏಕೆಂದರೆ ಋತುಮತಿಯಾದ ನಂತರ ಆಕೆಯನ್ನು ತೂಕ ಮಾಡಿ, ಆಕೆಯ ಶೀಲ ಹಾಳಾಗಬಾರದೆಂಬುದಕ್ಕೆ ಕಾವಲಿಟ್ಟು, ಮಹಿಳೆಯರನ್ನು ಕಾಯುತ್ತಿದ್ದರೆಂಬುದರ ನಿದರ್ಶನ ಇಲ್ಲಿ ದೊರೆಯುತ್ತದೆ.

ವಿಷ್ಣುವು ಶ್ರೀಕೃಷ್ಣನ ಅವತಾರವೆತ್ತಿದ ಮೇಲೆ ಮಹಾಲಕ್ಷ್ಮೀದೇವಿಗೆ ಎಷ್ಟೇ ಕಾವಲು ಇದ್ದರೂ, ಆಕೆಯ ಹತ್ತಿರ ಬಂದು ಸಂಬಂಧವಿಟ್ಟುಕೊಂಡಿರುವುದರ ಫಲವಾಗಿ ಗರ್ಭಿಣಿಯಾಗುತ್ತಾಳೆ. ಆಗ ಮತ್ತೇ ಲಕ್ಷ್ಮಿಯನ್ನು ಸಿಂತೋಳಿಗಿಡುತ್ತಾರೆ. ಆಗ ಅವಳ ತೂಕ ಎರಡು ಮಲ್ಲಿಗೆ ಹೂವಿನ ತೂಕವಾಗಿರುತ್ತದೆ. ಇದರಿಂದ ಲಕ್ಷ್ಮೀಯು ಅಪವಾದ ಹೊತ್ತು ತಮ್ಮ ತಂದೆಯ (ಮಹಾರಾಜರಿಂದ) ತಿರಸ್ಕಾರಕ್ಕೆ ಒಳಪಟ್ಟು ನಿಂದನೆಯ ಮಾತುಗಳಿಗೆ ಒಳಗಾಗುವಳು. ಮಗಳು ಗರ್ಭಿಣಿಯಾದ ವಿಷಯವನ್ನು ತಿಳಿದ ತಂದೆ ಆಡಿದ ಮಾತುಗಳು ಹಾಗೂ ಮಗಳನ್ನು ಕಾಡಿಗೆ ಕಣ್ಣು ಕಟ್ಟಿ ಬಿಟ್ಟು ಬರಲು ಅಪ್ಪಣೆ ನೀಡಿದ ಪ್ರಸಂಗವು ಇಂತಿದೆ:

"ಅರಮನೆ ಸುತ್ತ ಬಿಸಗತ್ತಿ ಕಾವುಲಿದ್ರು
ಮೇಲ್ಮಾಡಿ ಮೇಲೆ ನನ್ನ ಮಗಳಿರೋದು
ಅಂತಾ ಸ್ಥಳದಲ್ಲಿ ಯಾವೋನು ಬರ್ಲಿಕ್ಕೆ ಸಾಧ್ಯವಿಲ್ಲ
ಇವುಳೆ ಎಲ್ಲಾದ್ರೂ ಕಾಡಿನಲ್ಲೋಗಿ
ಎಲ್ಲಾದ್ರು ಪ್ರವೇಶ ಮಾಡಿ
ಎರಡು ಮಲ್ಲಿಗೆ ಹೂವಿನ ತೂಕ ಆಗಿರಬೌದು
ಎರಡು ಮಲ್ಲಿಗೆ ಹೂವಿನ ತೂಕ ಆಗಿದ್ರೆ
ಅವಳು ನನಗೆ ಮಗಳಲ್ಲ ಅಂಗಿದ್ಮೇಲೆ
ಕಣ್ ಕಟ್ಟಿ ಕಾಡಿಗೆ ಬಿಟ್ ಬಿಡ್ರಿ ಅವುಳ್ನ
ಅಂತ ರಾಜ ಅಪ್ಪಣೆ ಮಾಡ್ದ"[೨೮]

ಇಲ್ಲಿ ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳನ್ನು ಹೇಗೆ ಸಾಕುತ್ತಿದ್ದರು ಮತ್ತು ಅವರ ತೂಕದ ಮೂಲಕ ಶೀಲವನ್ನು ನಿರ್ಧರಿಸೋದು ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಟ್ಟುಬರುತ್ತಿದ್ದಂತಹ ಅವೈಜ್ಞಾನಿಕ ಆಚರಣೆ (ಕಟ್ಟಳೆ) ಗೋಚರಿಸುತ್ತದೆ. ಇಲ್ಲಿ ಕೃಷ್ಣಪರಮಾತ್ಮನ ತಪ್ಪುಗಳ ಪರೀಕ್ಷೆ

೨೮. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೨೩.

ಮಾಡುವ ಸಂದರ್ಭವೇ ಕಂಡು ಬರುವುದಿಲ್ಲ. ಏಕೆಂದರೆ ಪುರುಷರು ಚಂದ್ರಾಮ ದೇವರು. ಎಷ್ಟೇಯಾಗಲಿ ಕಾನೂನು ಕಟ್ಟಳೆಗಳು, ಆಚರಣೆಗಳು ಇರುವುದು ಮಹಿಳೆಯರಿಗೆ ಮಾತ್ರವೇ ಎಂಬುದು ಸ್ಪಷ್ಟವಾಗುತ್ತದೆ. ಮುಂದೆ ಕಾಡಿಗೆ ಹೋಗುವುದನ್ನು ತಪ್ಪಿಸಲು ಲಕ್ಷ್ಮೀಗೆ ಉಪಾಯ ಹೇಳಿ ತಡೆಯುತ್ತಾನೆ ನಿಜ. ಆದರೆ ಸಮಾಜದಲ್ಲಿ ಮಹಿಳೆ ಹೊರುವ ಅಪವಾದದಿಂದ ದೂರಮಾಡಲು ಸಾಧ್ಯವಿಲ್ಲ. ಹೀಗೆ ಕಾನೂನು-ಕಟ್ಟಳೆಗಳು ಮಹಿಳೆಯರ ಶೋಷಣೆಗೆ ಗುರಿ ಮಾಡುವಂತಹವೇ ಇರುವುದನ್ನು ಕಾಣುತ್ತೇವೆ. ಋತುಮತಿ, ಪಾತಿವ್ರತ್ಯ, ಶೀಲಶಂಕೆ ಇತ್ಯಾದಿ ವಿಚಾರಗಳನ್ನು ಕುರಿತು ಮಹಿಳೆಯರ ಬದುಕಿನ ಮೇಲೆಯೇ ಕಟ್ಟಳೆಗಳನ್ನು ವಿಧಿಸಿ ಸಾಮಾಜಿಕ ನೆಲೆಯಲ್ಲಿ ಆಕೆಗೆ ಕೆಳಮಟ್ಟದ ಸ್ಥಾನವನ್ನು ಕಲ್ಪಿಸಲಾಗುತ್ತಿತ್ತು.

೪.೪. ತ್ಯಾಗ ಬಲಿದಾನ :

ತ್ಯಾಗ ಎಂದರೆ ಸಮರ್ಪಿಸು ಎಂದರ್ಥ. ಬಲಿದಾನ ಎಂದರೆ ಆಹುತಿ ಅಥವಾ ಬಲಿಯಾಗಿ ಅರ್ಪಿಸುವಿಕೆ(ನೈವೇದ್ಯ) ಎಂಬರ್ಥವುಂಟು. ಸಮಾಜ ಮಹಿಳೆಯನ್ನು ಬಲಿ ಕೊಡುವುದರ (ಕಷ್ಟಕ್ಕೆ ಸಿಲುಕಿಸು) ಮೂಲಕ ಊರಿನ ರಕ್ಷಣೆ, ಸಮಾಜಕ್ಕೆ ರಕ್ಷಣೆ ಮಾಡುತ್ತಿದ್ದರೆಂಬುದು ಹಲವಾರು ಕಥನಗೀತೆಗಳಲ್ಲಿ ಸತಿ-ಸಹಗಮನ, ಆತ್ಮಬಲಿದಾನದ ಗೀತೆಗಳ ಮೂಲಕ ಸ್ಪಷ್ಟವಾಗುತ್ತದೆ. ತ್ಯಾಗ ಬಲಿದಾನಕ್ಕೆ ಹೆಚ್ಚಿನ ಮಾನ್ಯತೆಯನ್ನು ನೀಡುತ್ತಿರುವುದಕ್ಕೆ ಕಥನಗೀತೆಗಳು ಸಾಕ್ಷಿಯಾಗಿವೆ.

ಆತ್ಮಬಲಿ ಅಥವಾ ಆತ್ಮಹತ್ಯೆ ವ್ಯಕ್ತಿಯು ಯಾವುದೋ ಒಂದು ಭಾವಾವೇಶದ ಘಳಿಗೆಯಲ್ಲಿ ತನ್ನ ಪ್ರಾಣ ಕಳೆದುಕೊಳ್ಳುವ ಕ್ರಿಯೆಯನ್ನು ಸೂಚಿಸುತ್ತದೆ. ಆದರೆ ಆತ್ಮಬಲಿಯು ಇನ್ನೊಂದು ರೀತಿಯಲ್ಲಿಯೂ ಚಾಲ್ತಿಯಲ್ಲಿತ್ತು. ಅದು ಸಾರ್ವಜನಿಕ ಒಪ್ಪಿಗೆಯ ಮೂಲಕ ನಡೆಯುವ ಆತ್ಮಬಲಿಯಾಗಿದೆ. ಈ ಪ್ರಕಾರದ ಆತ್ಮಬಲಿಯ ಘಟನೆಗಳು ಅಲೌಕಿಕವಾದ ಧಾರ್ಮಿಕ ನಂಬುಗೆಗಳಿಂದ ಪ್ರೇರಿತವಾದವುಗಳಾಗಿವೆ. "ಪ್ರಾಚೀನ ಹಾಗೂ ಮಧ್ಯಕಾಲೀನ ಜಗತ್ತಿನ ಒಂದಿಲ್ಲೊಂದು ಸಮಾಜದ ಸಂಸ್ಕೃತಿಯಲ್ಲಿ ಒಪ್ಪಿಗೆ ಹಾಗೂ ನಂಬಿಕೆಗಳ ಮೂಲಕ ಬೆಳೆದು ಬಂದಂತಹ ಆಚರಣೆಗಳಲ್ಲಿ ಈ ಆತ್ಮಬಲಿಯು ಕೂಡ ಪ್ರಧಾನವಾದ ಆಚರಣೆಯೇ ಆಗಿದೆ."[೨೯] ಸಮಾಜದಲ್ಲಿ ನಂಬಿಬಂದ ಆಚರಣೆಗಳಲ್ಲಿ ಆತ್ಮಬಲಿ ಎಂಬುದು ಎಷ್ಟೊಂದು ಪ್ರಧಾನವಾಗಿ ಬೆಳೆದುಬಂದು ಆವರಿಸಿಕೊಂಡಿತ್ತು ಎಂಬ ವಿಷಯ ಅರ್ಥವಾಗುತ್ತದೆ. ಮಹಿಳೆಯನ್ನು ಬಲಿಕೊಡುವುದರ ಮೂಲಕ ಅಥವಾ ತಾನೇ ಬಲಿಯಾಗುವಂತೆ

---

೨೯. ಮಹಾಸತಿ ಆಚರಣೆ: ಒಂದು ಅಧ್ಯಯನ : ಬಸವರಾಜ ಕಲ್ಗುಡಿ, ಪು.೧೦೩

ಪ್ರೇರೇಪಿಸುವ ಮೂಲಕ ಸಮಾಜ ಆಕೆಗೆ ಹುರಿದುಂಬಿಸುತ್ತಿತ್ತು ಮತ್ತು ಧರ್ಮದ ಚೌಕಟ್ಟಿನಲ್ಲಿ ಸಿಲುಕಿಸಿ ಸಂಕಷ್ಟಕ್ಕೆ ಈಡು ಮಾಡುತ್ತಿತ್ತು. ಕಥನಗೀತೆಗಳಲ್ಲಿ ಸತಿಪದ್ಧತಿ ಅತ್ಯಂತ ಪ್ರಚುರವಾಗಿ ಸಾಮಾಜಿಕ ಮನ್ನಣೆಯನ್ನು ಕೂಡ ಪಡೆದಿತ್ತು. ಸತಿಯಾದ ಹೆಣ್ಣು ಸತ್ತ ಗಂಡನೊಂದಿಗೆ ಸ್ವರ್ಗ ಸೇರಿ ಸರ್ವಸುಖವನ್ನು ಅನಂತಕಾಲ ಅನುಭವಿಸುತ್ತಾಳೆ ಎಂದು ನಂಬಿಸಲಾಗಿತ್ತು. ಒಲ್ಲದ ಹೆಣ್ಣುಗಳನ್ನು ಹಿಡಿದು ತಂದು ಚಿತೆಗೆ ದೂಡಲಾಗುತ್ತಿತ್ತು ಅಥವಾ ತಾವೇ ಸ್ವಇಚ್ಛೆಯಿಂದ ಚಿತೆಗೆ ಹೋಗುವ ಹಾಗೆ ಮಹಿಳೆಯನ್ನು ಪರೋಕ್ಷವಾಗಿ ಪ್ರೇರೇಪಿಸುತ್ತಿದ್ದರು.

ಕೆರೆಯಲ್ಲಿ ನೀರು ಬಾರದಿದ್ದಾಗ, ಹೊಳೆ-ಹಳ್ಳ-ನದಿಗಳಿಗೆ ನೆರೆ ಬಂದಾಗ, ಕೋಟೆ ಕಟ್ಟಡ ನಿಲ್ಲದಾದಾಗ ಮುಂತಾದ ಕಾರಣಗಳಿಗಾಗಿ ಮಹಿಳೆಯನ್ನು ಬಲಿ ಕೊಡುವ ಪದ್ಧತಿ ಪ್ರಾಚೀನ ಕಾಲದಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಇದಲ್ಲದೆ ಬಲಿಕೊಟ್ಟ ಮಹಿಳೆಯರನ್ನು ದೇವತೆಗಳೆಂದು ಪೂಜಿಸಿ ಗೌರವಿಸುವ ವಾಡಿಕೆ ಇತ್ತು. ವಾಸ್ತವದಲ್ಲಿ ಕೂಡ ತ್ಯಾಗ ಬಲಿದಾನದ ಮಹಿಳೆಯರನ್ನು ಪೂಜಿಸಿ ತಮ್ಮ ಹರಕೆಗಳನ್ನು ನಿವೇದಿಸಿಕೊಳ್ಳುವ ಸಮಾಜವು ಕಂಡುಬರುತ್ತದೆ.

ಕೆರೆ ಕಟ್ಟೆ, ಕೋಟೆಗಳಿಗೆ ಬಲಿಯಾದ ಮಹಿಳೆಯರ ಬಗ್ಗೆ ಹೇಳಬೇಕೆಂದರೆ, ಊರಿನ ಹಿತದೃಷ್ಟಿಯಿಂದ ಕೆರೆಯನ್ನು ಕಟ್ಟಿಸಿದ ಗೌಡನು, ಕೆರೆಗೆ ನೀರು ಬಾರದಿದ್ದಾಗ ಹಿರಿಯ ಸೊಸೆಯನ್ನು ಬಲಿಕೊಡುವ ಪ್ರಸಂಗವನ್ನು ಗುರುತಿಸಬಹುದು. ಇದಕ್ಕೆ ನಿದರ್ಶನವಾಗಿ ಕೆರೆಹೊನ್ನಮ್ಮ, ಹುಳಿಯೂರ ಕೆಂಚಮ್ಮ, ಮಲ್ಲಿಗೆ ಮಹಾದೇವಿ ಮುಂತಾದ ಸ್ತ್ರೀಯರು ಬಲಿಯಾದ ನೆಲೆಯನ್ನು ಕಥನ ಗೀತೆಗಳಲ್ಲಿ ಕಾಣುತ್ತೇವೆ.

ಈರೋಬಿ ತನ್ನ ಗಂಡ ಸತ್ತ ಸುದ್ದಿ ಕೇಳಿ ಕೊಂಡವೇರಲು ಸಿದ್ಧಳಾಗುತ್ತಾಳೆ. ಕುಟುಂಬದವರು ಎಷ್ಟೇ ಹೇಳಿದರೂ ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಿ ಕೊಂಡವೇರಲು ಮುಂದಾಗುತ್ತಾಳೆ. 'ಗಂಡ ಸತ್ತೋರಿಲ್ಲವೇನೇ ಮುಂಡೇರು' ಎಂದು ಅತ್ತೆಯೇ ಹೇಳಿದರೂ ಆಕೆ ಅವರ್‍ಯಾರ ಮಾತನ್ನೂ ಕೇಳಲು ಸಿದ್ಧವಿರಲಿಲ್ಲ. ಕಾರಣ ಗಂಡ ಸತ್ತು ಮುಂಡೆಯಾಗಿ ಸಮಾಜದಲ್ಲಿ ಬದುಕನ್ನು ಸಾಗಿಸುವುದು ಇದ್ದೂ ಸತ್ತ ಹಾಗೆ. ಜೀವನವನ್ನು ಸಾಗಿಸುವುದಕ್ಕಿಂತ ಕೊಂಡವೇರಿ ಮಹಾಸತಿ, ಪತಿವ್ರತೆಯೆಂದು ಎನಿಸಿಕೊಳ್ಳುವುದೇ ಲೇಸು ಎಂದು ತಿಳಿಯುತ್ತಿದ್ದರು ಎನ್ನುವುದಕ್ಕೆ ಈ ಈರೋಬಿಯ ಕಥನಗೀತೆಯೇ ನಿದರ್ಶನ.

ಸತಿಬಲಿ ಪದ್ಧತಿಯಷ್ಟೇ ಅಲ್ಲದೇ ಕೆಲವೊಂದು ದೇಶಗಳಲ್ಲಿ ಹಾಗೂ ಸಮಾಜದಲ್ಲಿ ಪತಿ ಬಲಿ ಹೋಗುವ ಉದಾಹರಣೆಗಳನ್ನು ಕೂಡ ಕಾಣುತ್ತೇವೆ. ಆದರೆ ಅವು ಕಂಡು ಬರುವುದು ವಿರಳ. ಆದರೂ ಪತಿಬಲಿ ಇದ್ದಿತ್ತೆಂಬುದಕ್ಕೆ ಒಂದು ಉದಾಹರಣೆಯನ್ನು ತಿಳಿಸಲಾಗಿದೆ.

ಉದಾ: "ಆಫ್ರಿಕಾದ ಕೆಲವು ಆದಿವಾಸಿಗಳಲ್ಲಿ ಕಂಡು ಬರುವ ಪದ್ಧತಿ ತುಂಬ ವಿಲಕ್ಷಣ. ಘಾನಾದ ಅಷಾಂಟಿ (Ashanti) ಪ್ರದೇಶದ ನ್ಯಾಚ್ಚೆಝು (Natchez) ಬುಡಕಟ್ಟಿನಲ್ಲಿ ಹೆಂಡತಿ ಸತ್ತರೆ ಅವಳ ಶವದ ಜೊತೆಗೆ ಗಂಡನಾದವನು ಚಿತೆಯೇರಬೇಕಾಗುತ್ತಿತ್ತು. ಆದರೆ ಇದು ಅವರಲ್ಲಿಯೇ ಸಾರ್ವತ್ರಿಕವಾಗಿರಲಿಲ್ಲ. ಈ ಬುಡಕಟ್ಟಿನ ಯಾವುದೇ ಒಬ್ಬ ವ್ಯಕ್ತಿಯ ಹೆಂಡತಿ ಅರಸು ಮನೆತನಕ್ಕೆ ಸೇರಿದವಳಾಗಿದ್ದರೆ ಅಥವಾ ಅರಸನ ಸೋದರಿಯಾಗಿದ್ದು ಅವಳು ಗಂಡನಿಗಿಂತ ಮೊದಲೇ ಸತ್ತಾಗ ಗಂಡನೂ ಅವಳ ಜೊತೆ ಉರಿಯಲ್ಲಿ ಹಾರಬೇಕಾಗುತ್ತಿತ್ತು. ಪಶ್ಚಿಮ ಆಫ್ರಿಕೆಯ ಆದಿವಾಸಿಗಳ ಜೀವನಕ್ರಮ ಪದ್ಧತಿಗಳನ್ನು ಕುರಿತು ಅಧ್ಯಯನ ಮಾಡಿದ ಎಂ.ಬಿ. ಎಲಿಸ್ ಆ ಗುಂಪುಗಳಲ್ಲಿದ್ದ ಈ ರೂಢಿಯನ್ನು ಗುರುತಿಸಿದ್ದಾರೆ"[೩೦] ಎಂಬುದು ಇದರಿಂದ ತಿಳಿದುಬರುತ್ತದೆ. ಆದರೆ ಕಥನಗೀತೆಗಳಲ್ಲಿ ಇಂತಹ ನಿದರ್ಶನಗಳು ಕಂಡು ಬರುವುದಿಲ್ಲ. ಬಹುಪಾಲು ಮಹಿಳೆಯರನ್ನೇ ತ್ಯಾಗ-ಬಲಿದಾನದಲ್ಲಿ ಬಂಧಿಸಲಾಗುತ್ತಿದ್ದ ಕಥಾನಕಗಳು ಕಂಡುಬರುತ್ತವೆ. ಅರಸನ ಸಹೋದರಿ ಅಥವಾ ಅರಸು ಮನೆತನಕ್ಕೆ ಸೇರಿದ ಮಹಿಳೆಯಾಗಿದ್ದರೆ ಮಾತ್ರ ಪತಿಬಲಿ ನಡೆಯುತ್ತಿತ್ತು. ಸಮಾಜದ ಎಲ್ಲ ಮಹಿಳೆಯರಿಗೆ ಈ ಪದ್ಧತಿ ಅನ್ವಯಿಸುತ್ತಿರಲಿಲ್ಲ ಎಂಬುದು ಕೂಡ ತಿಳಿಯುತ್ತದೆ. ಆದ್ದರಿಂದ ರಾಜಮನೆತನದ ಮಹಿಳೆ ಮತ್ತು ಸಾಮಾನ್ಯ ಮಹಿಳೆಯರನ್ನು ಕಾಣುವ ದೃಷ್ಟಿಕೋನವೇ ಬದಲಾಗಿತ್ತು ಎಂದು ಸ್ಪಷ್ಟವಾಗುತ್ತದೆ.

ಭಾರತದಲ್ಲಿ ಈ ಪದ್ಧತಿಯ ಅನುಸರಣೆಯಲ್ಲಿ ಕಂಡ ವಿಶ್ವದ ಯಾವ ಗುಂಪಿಗೂ ಕಡಿಮೆಯಿಲ್ಲಾ. ಪೂರ್ವ ಕಾಲದಿಂದಲೂ ವಿಧವೆಯರನ್ನು ಗಂಡನ ಶವದ ಜೊತೆ ಹೂಳುವ ಪದ್ಧತಿ ಎಲ್ಲ ಪ್ರದೇಶಗಳಲ್ಲೂ ಕಂಡುಬರುತ್ತದೆ. ಸತಿಪದ್ಧತಿಯ ಶೋಧನೆಯ ಗುಜರಾತದಲ್ಲಿ ದೊರೆತ ಆಧಾರಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು. "ಹರಪ್ಪಾದ ಲೋಥಾಲಿ ನಗರದ ಸ್ಮಶಾನ ಸ್ಥಳದ ಉತ್ಖನನದಲ್ಲಿ ದೊರೆತ ಅವಶೇಷಗಳ ಆಧಾರದಿಂದ ಈ ಮಾತನ್ನು ಖಚಿತ ಪಡಿಸಲಾಗಿದೆ. ಜೋಡು ಶವಗಳ ಸಮಾಧಿ ಪತ್ತೆಯಾಗಿರುವುದೇ ಇಲ್ಲಿಯ ವೈಶಿಷ್ಟ್ಯ.

---

೩೦. ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರಕುಮಾರ ಹಕಾರಿ, ಪು.೨೦೮

ಲಭ್ಯವಾಗಿರುವ ಹದಿನಾಲ್ಕು ಅಸ್ಥಿಪಂಜರಗಳಲ್ಲಿ ಆರು ಸತಿ ಪದ್ಧತಿಯ ಜೋಡಿಗಳೇ ಎಂದು ವಿಶ್ಲೇಷಿಸಲಾಗಿದೆ."[೩೧] ಸತಿ-ಪತಿಗಳಿಬ್ಬರ ಅಸ್ತಿಪಂಜರಗಳ ಆಧಾರದ ಮೇಲೆ ಗಂಡ ಸತ್ತನೆಂದರೆ ಸಮಾಜ ಆಕೆಯನ್ನು ಆತನೊಂದಿಗೆ ಈಕೆಯನ್ನು ಕೂಡ ಹೂಳುತ್ತಿತ್ತು. ಹಾಗಾಗಿ ಸಮಾಜದ ಆಚರಣೆಗೆ ಬಲಿಯಾಗಿ ತನ್ನ ಜೀವನವನ್ನು ಆತನೊಂದಿಗೆ ಕೊನೆಗಾಣಿಸುವ ದಾರುಣ ಚಿತ್ರಣ ಇಲ್ಲಿ ಕಂಡುಬರುತ್ತದೆ. ಇದಕ್ಕಿಂತಲೂ ಕ್ರೂರವಾದ ಸತಿಪದ್ಧತಿಯ ಆಚರಣೆಗಳನ್ನು ಆದಿವಾಸಿಗಳಲ್ಲಿ ಕಾಣಬಹುದು. ಅಲ್ಲಿ ಒಬ್ಬ ವ್ಯಕ್ತಿ ಮದುವೆ ಆಗದೆ ಸತ್ತು ಹೋದರೆ ತಕ್ಷಣವೇ ಒಬ್ಬ ಕನ್ಯೆಯನ್ನು ಹುಡುಕಿ ತಂದು ಅವಳು ಸತ್ತಂತಹ ವ್ಯಕ್ತಿಯ ಪರಲೋಕದ ಹೆಂಡತಿಯೆಂದು ಭಾವಿಸಿ ಅವಳನ್ನು ಬಲಿ ಕೊಡಲಾಗುತ್ತಿತ್ತು. ಆದ್ದರಿಂದ ಸತ್ತವನ ವಿಧವೆಯನ್ನು ಒತ್ತಾಯಪೂರ್ವಕವಾಗಿ ಬೆಂಕಿಗೆ ತಳ್ಳುತ್ತಿರುವಂತಹ ಆಚರಣೆಗಳು ಕೂಡ ಇದ್ದವು ಎಂಬುದು ತಿಳಿಯುತ್ತದೆ.

ಜನಪದ ಕಥನಗೀತೆಗಳಲ್ಲಿ ಮಹಿಳೆಯ ತ್ಯಾಗ ಬಲಿದಾನಗಳಿಗೆ ಸಂಬಂಧಿಸಿದ ಕಥನಗೀತೆಗಳದ್ದೇ ಸಿಂಹಪಾಲು. ಕಾರಣ ಜನಪದ ಸಮಾಜ ಸಮಷ್ಠಿ ಪ್ರಜ್ಞೆಯಿಂದ ಮೈ ತಾಳಿದುದು. ಸಮಾಜದ ಉನ್ನತಿಗಾಗಿ, ಹಿತಕ್ಕಾಗಿ ವ್ಯಕ್ತಿಯ ಸುಖ-ಸಂತೋಷಗಳು ಇಲ್ಲಿ ಗೌಣವಾಗುತ್ತವೆ. ಮಹಿಳೆಯನ್ನು ಕೆರೆ-ಕೋಟೆಗಳಿಗಾಗಿ ಬಲಿ ಕೊಡುವ ಪದ್ಧತಿ ಬಹಳ ಹಿಂದಿನಿಂದಲೇ ಆಚರಣೆಯಲ್ಲಿತ್ತು ಎಂಬುದನ್ನು ಹಲವಾರು ಕಥನಗೀತೆಗಳ ಮೂಲಕ ಹಾಗೂ ಶಾಸನಗಳ ದಾಖಲೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

ಕೆರೆಗೆ ಬಲಿಯಾದ ಬಾಣಂತಿ ಹುಳಿಯೂರು ಕೆಂಚಮ್ಮ:

ಜನಪದ ಸಾಹಿತ್ಯದಲ್ಲಿ ತ್ಯಾಗ ಬಲಿದಾನದ ಕಥೆಗಳ ಆಳ ಬಹಳ ದೊಡ್ಡದು. ಕೆರೆಯ ಕಟ್ಟಡ ಕುಸಿದಾಗ ಅದು ಬಸುರಿ-ಬಾಣಂತಿಯರನ್ನೇ ಬಲಿಕೊಟ್ಟು ಆಕೆಯನ್ನು ದೇವತೆಯಾಗಿ ಕಾಣುತ್ತಾ ಬಂದ ಸಮಾಜ ನಮ್ಮ ಕಣ್ಣೆದುರಿಗಿದೆ. ಕೆಂಚಮ್ಮಳು ಕೂಡಾ ಸಮಾಜದ ಹಿತಕ್ಕಾಗಿ ಕೆರೆಯನ್ನು ಕಟ್ಟಿಸುವ ಸಂದರ್ಭದಲ್ಲಿ ಬಲಿಯಾದ ಒಬ್ಬ ಮಹಿಳೆ. ಈಕೆಯ ಕಥೆಯ ಹಿನ್ನೆಲೆ ಇಂತಿದೆ:

ಕೆಂಚಮ್ಮ ಒಂಬತ್ತು ತಿಂಗಳು ತುಂಬಿ ಗಂಡು ಮಗುವಿಗೆ ಜನ್ಮ ನೀಡಿದಳು, ಮನೆಯಲ್ಲಿ ಎಲ್ಲರೂ ಸಡಗರ ಸಂಭ್ರಮಪಟ್ಟವರು. ಕೆಲವು ದಿನಗಳ ನಂತರ ಹರಕೆಯನ್ನು ಪೂರೈಸಲು

೩೧. ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರಕುಮಾರ ಹಕಾರಿ, ಪು.೨೦೯

ಗಂಗೆ ಪೂಜೆಗೆ ಹೋಗುವಳು. ಪೂಜೆ ಮಾಡುವ ಸಮಯದಲ್ಲಿ ಏರಿಯ ಕಲ್ಲು ಸಡಿಲಾಯಿತು. ತಕ್ಷಣ ಮಾವಯ್ಯ ಬಂದು ಸೊಸೆ ಕೆಂಚಮ್ಮಳಿಗೆ

"ಕಣ್ಣೀರು ಸೂಸ್ಯಾಡಿ ಅಳುಬೇಡ
ಏರಿ ಕಟ್ಟಿಸುವೆ ಏರಿಯ ನಿಲ್ಲುಸುವೆ
ಬಾವಿಗೆ ಬೊಮ್ಮದೇವರ ಕಡಿಸುವೆ – ಕೆಂಚ್ಚವ್ವ
ಬಾಲ ಎದ್ದನು ಮನೆಗ್ಹೋಗೆ"[೩೨]

ಎಂದು ಹೇಳಿ ಕಳುಹಿಸುವನು. ಇಲ್ಲಿ ಕೆಂಚಮ್ಮ ಕಣ್ಣೀರು ಸುರಿಸಲು ಕಾರಣ ಅಪಶಕುನವೆಂದು ತಿಳಿದಿರಬಹುದು ಅಥವಾ ಅದರಿಂದ ಜನರಿಗೆ ತೊಂದರೆಯಾಗುತ್ತದೆ ಎಂದುಕೊಂಡಿರಬೇಕು. ಮಾವ ತನ್ನ ಸೊಸೆಯನ್ನು ಏರಿ ನಿಲ್ಲಲು ಬಲಿಕೊಡಬೇಕೆಂದು ತಿಳಿದು ಕಣ್ಣೀರು ಸುರಿಸುತ್ತಾನೆ. ಈ ವಿಷಯ ಕೆಂಚಮ್ಮಳಿಗೆ ತಿಳಿದು ಗಂಗೆ ಪೂಜೆಯನ್ನು ಮುಗಿಸಿ ಮನೆಗೆ ಹೋಗಿ ದೇವಗನ್ನೆಯರು ಬಲಿ ಕೇಳಿದ ಪ್ರಸಂಗವನ್ನು ತನ್ನ ಗಂಡನಿಗೆ ತಿಳಿಸಿದಳು. ಆಗ ಇಬ್ಬರೂ ಶೋಕಪಡುತ್ತಾ ತನ್ನ ಗಂಡನಿಗೆ ನನ್ನ ತವರಿಗೆ ಪತ್ರ ಬರೆಯೆಂದು ಕೋರಿದಳು. ಪತ್ರವನ್ನು ನೋಡಿದ ತವರಿನವರಿಗೆ ಕೋಪ ಬಂದು ಕತ್ತಿ-ಕಠಾರಿಗಳನ್ನು ಹಿಡಿದು ಹುಳಿಯೂರಿಗೆ ಬಂದರು. ಕೆಂಚವ್ವ ತವರಿನವರೆಗೆಲ್ಲಾ ಸಮಾಧಾನಪಡಿಸಿ ತನಗೆ ಎಷ್ಟೇ ನೋವು ಸಂಕಟವಿದ್ದರೂ ತನ್ನ ಹರಕೆಯನ್ನು ತೀರಿಸಲು ತಾನು ಮಗುವಿನೊಂದಿಗೆ ಹುಳಿಯೂರು ಕೆರೆಗೆ ಹಾರವಾಗಬೇಕೆಂದು ಸೂಚಿಸಿದಳು.

ಅಂದಿನ ಸಮಾಜದಲ್ಲಿ ಮೂರು ತಿಂಗಳ ಬಾಣಂತಿ ಈಚೆಗೆ ಬಂದು ಕೆರೆಗೆ ಆಹುತಿಯಾದರೆ "ಪಟ್ಟಣಕ್ಕೆ ಪಂಜು ಹಿಡಿದಂಗೆ"[೩೩] ಎಂದು ಹೇಳುವಲ್ಲಿ ಬಾಣಂತಿಯಿಂದ ಪಟ್ಟಣಕ್ಕೆ ಬೆಳಕಾಗುತ್ತದೆ ಎಂದು ನಂಬಿದ್ದರು. ಬಾಣಂತಿಯನ್ನು ಬಲಿ ಕೊಡಲು ಒಂದು ಗಾಡಿಯಲ್ಲಿ ಹಣ್ಣು, ಒಂದು ಗಾಡಿಯಲ್ಲಿ ಚಿಗಣಿ, ಇನ್ನೊಂದು ಗಾಡಿಯಲ್ಲಿ ಒಡಗಾಯಿ ಇಟ್ಟುಕೊಂಡು ಹುಳಿಯೂರ ಕೆರೆಗೆ ಹೋಗುವರು. ಅಲ್ಲಿ ಕೆಂಚವ್ವ ಕೆರೆಯ ಗಂಗವ್ವಳನ್ನು ಪೂಜೆ ಮಾಡಿ ಒಂದು ಹೆಜ್ಜೆ ಮುಳುಗಿ ನೀರಿಗಿಳಿದಳು. ಪಿಲ್ಲಿ ತೆಗೆದು ಅವರತ್ತೆಗೆ ಕೊಟ್ಟು ಮುಂದೆ ಬರುವವಳಿಗೆ ತೆಗೆದಿಡು ಎಂದು ಕೊರಳಿನ ಸಮಕ್ಕೆ ಇಳಿದಳು. ಕೊರಳಿನ ಪದಕ ತೆಗೆದು ಅವರತ್ತೆಯ ಕೈಯೊಳಗೆ ಕೊಟ್ಟು ಅದೇ ಮಾತನ್ನು ಹೇಳುವಳು. ಇಲ್ಲಿ ಪದಕವೆಂದರೆ

---

೩೨. ಜನಪದ ಖಂಡ ಕಾವ್ಯಗಳು : ಜೀ.ಶಂ. ಪರಮಶಿವಯ್ಯ, ಪು.೪೩
೩೩. ಅದೇ, ಪು.೪೭

ಮುತ್ತೈದೆಗೆ ಸೀಮಿತವಾದ ತಾಳಿ ಎಂಬರ್ಥವುಂಟಾಗುತ್ತದೆ. ಮಾಂಗಲ್ಯ ತನ್ನ ಜಾಗವನ್ನು ತುಂಬುವ ಸ್ತ್ರೀಗೆ ತಲುಪಲಿಯೆಂದು ಹೇಳುತ್ತಾ ಮಗುವನ್ನು ಎತ್ತಿಕೊಂಡು ಹೇಳುವ ಮಾತು ಕರುಣಾಜನಕವಾಗಿದೆ.

"ಬಾಲಾನ ತೆಗೆದು ತೋರುತಾಳೆ-ಕೆಂಚವ್ವ
ಊರ ಮುಂದಿರುವ ಹುಣಸೇಯ ಮರಗಳಿಗೆ
ಬರಿದೊಟ್ಟಿಲ ತಂದು ತಗುಲಾಕಿ-ಕೆಂಚ್ಚವ್ವ
ಬರಿದೊಟ್ಟಿಲ ತಂದು ತಗುಲ್ಹಾಕಿ ಎನುತೇಳಿ
ಗಂಡಾಗೆ ಬುದ್ಧಿ ಹೇಳುತಾಳೆ"[೩೪]

ತಾನು ಹೋದ ನಂತರ ತನ್ನ ಗಂಡ ಇನ್ನೊಬ್ಬಳನ್ನು ಮದುವೆಯಾಗಿ ಸುಖವಾಗಿ ಇರಲಿ ಎಂದು ಆಶಿಸುತ್ತಾ, ತನ್ನ ಮಗುವಿಗೆ ಹುಣಸೆ ಮರಕ್ಕೆ ತೊಟ್ಟಿಲು ಕಟ್ಟಿ ಎನ್ನುವಲ್ಲಿ ಕೆಂಚವ್ವಳಿಗೆ ತನ್ನ ಮಗನ ಮೇಲಿರುವ ಅತಿಯಾದ ಪ್ರೀತಿ-ವಾತ್ಸಲ್ಯ, ತಾನು ಸತ್ತರೂ ತನ್ನ ಮಗುವಿನ ಬಗೆಗೆ ಇರುವ ಕಾಳಜಿಯಿಂದಾಗಿ ಎಂಬುದು ಸ್ಪಷ್ಟವಾಗುತ್ತದೆ. ಗಂಡನಿಗೆ ತನ್ನ ತಂಗಿ ಯರಿಕೆಂಚಿಯನ್ನು ಮದುವೆಯಾಗಿ ಅಂತಾ ಹೇಳುತ್ತಾ ಕೆರೆಗೆ ಆಹುತಿಯಾಗಿ ದೇವತೆಯಾಗಿ ಉಳಿದಳು.

ಮಹಿಳೆ ತನ್ನ ಆಹುತಿಯಾದರೂ ಕೂಡ ತನ್ನ ಪತಿ ಇನ್ನೊಂದು ಮದುವೆಯಾಗಲಿ ಎಂದು ಆಶಿಸುವಂತಹ ವಿಶಾಲ ಮನೋಭಾವ ಇಲ್ಲಿ ಕಂಡುಬರುತ್ತದೆ. ಆದರೆ ಗಂಡ ಸತ್ತರೆ ಅದೇ ಮಹಿಳೆಗೆ ಚಿತೆಗೆ ದೂಡುವ ಮೂಲಕ ಕೆಟ್ಟ ಸಂಪ್ರದಾಯಗಳನ್ನು ಹೇರುತ್ತ ಸಮಾಜ ಸಂಕುಚಿತವಾಗುತ್ತದೆ. ಸಮಾಜಕ್ಕೆ ಎಂದಿಗೂ ಒಳ್ಳೆಯದಾಗಲಿಯೆಂದು ಬಯಸುತ್ತಾ ಬಂದ ಮಹಿಳೆಗೆ ಸಮಾಜ ಆಕೆಗೆ ಶಾಪದ ಬರಿಗಳನ್ನೇ ಹಾಕುತ್ತಾ ಬಂದಿದೆ.

ಕೊಂಡಕ್ಕೆ ಬಲಿಯಾದ ಕಾಟವ್ವ :

ಸ್ವಸಂತೋಷದಿಂದ ಕೊಂಡಕ್ಕೆ ನಡೆದು ಪ್ರಾಣ ಕಳೆದುಕೊಳ್ಳುತ್ತಿದ್ದ ಸತಿಯರ ಜೊತೆಗೆ ಬೆಂಕಿಗೆ ಬೀಳದೆ ತಪ್ಪಿಸಿಕೊಳ್ಳುತ್ತಿದ್ದ ಸತಿಯರ ಪ್ರಯತ್ನವೂ ಕೂಡ ಇರುತ್ತಿತ್ತು ಎಂಬುದಕ್ಕೆ ಕೊಂಡದ ಕಾಟವ್ವ ಕಥನಗೀತೆ ಉದಾಹರಣೆಯಾಗಿದೆ. ಬೆಂಕಿಗೆ ಬೀಳಲು ಭಯ ಪಡುತ್ತಿದ್ದವರ ವಿಚಾರದಲ್ಲಿ ಊರ ಹಿರಿಯರು ಎಚ್ಚರ ವಹಿಸಿ ಆ ಹಿಂದಿನ ಒಂದೆರಡು ರಾತ್ರಿಗಳ ಮಟ್ಟಿಗೆ ಊರ ದಿಡ್ಡಿ ಬಾಗಿಲನ್ನು ಮುಚ್ಚಿಸುತ್ತಿದ್ದರು. ಒಮ್ಮೊಮ್ಮೆ ನಿಜವಾಗಿಯೂ ಬೆಂಕಿಗೆ ಹೋಗಬೇಕೆನ್ನುತ್ತಿದ್ದವರ ವಿಚಾರಕ್ಕೂ ಇದೇ ಕ್ರಮ ಜರುಗುತ್ತಿತ್ತು. ಆಗ ಕೆಂಡ

---

೩೪. ಜನಪದ ಖಂಡ ಕಾವ್ಯಗಳು : ಜೀ.ಶಂ. ಪರಮಶಿವಯ್ಯ, ಪು.೪೮

ಕೊಂಡವಾಗಲು ಇಚ್ಛೆಪಡದಿದ್ದವರನ್ನು ಹಳಿದು ತಾವು ಅನುಗಮನ ಮಾಡಿಯೇ ತೀರುವವರು ಎಂದು ಘೋಷಿಸಿಕೊಳ್ಳುತ್ತಿದ್ದರು. ಇದರ ಪ್ರಸ್ತಾಪ ಈ ಕೆಳಗಿನ ಸಾಲುಗಳಿಂದ ತಿಳಿಯುತ್ತದೆ.

"ವೋಡಿ ವೋದಾಳೆಂದು ರಾಡುಗಳ ಆಕುಸ್ತ
ವೋಡಿ ವೋಗೋರ ಮಗಳಲ್ಲ । ಸಿರಿಗೊಂಡ ಗೌಡ
ರಾಡ ಬಾಗಲ ತಗುಸಯ್ಯ
ಕದ್ದು ವೋದಾಳೆಂದು ದಿಡ್ಡಿಗಳ ಕಟ್ಟಿಸ್ತ
ಕದ್ದು ವೋಗೋರ ಮಗಳಲ್ಲ। ಸಿರಿಗೊಂಡ ಗೌಡ
ದಿಡ್ಡಿ ಬಾಗಾಲ ತಗುಸಯ್ಯ
ಕಿಚ್ಚಿಗಂಜ್ಯಾಳೆಂದು ಅಚ್ಚಡದ ತೆರೆ ಕಟ್ಟಿಸ್ದ
ಕಿಚ್ಚಿಗಂಜೋರ ಮಗಳಲ್ಲ। ಸಿರಿಗೊಂಡ ಗೌಡ
ಅಚ್ಚಡದ ತೆರೆಯಾ ತಗುಸಯ್ಯ"[೩೫]

ವುಲಿಕುಂಟೆ (ಹುಲಿಕುಂಟೆ) ಕಾಟವ್ವ ಆಡುವ ಮಾತುಗಳಲ್ಲಿ ತಾನು ಕೊಂಡಕ್ಕೆ ಬೀಳುವುದರ ಬಗೆಗೆ ಆತುರವು, ಹಾಗೆ ಬೀಳಲು ಹಿಂಜರಿಯುವವರ ಬಗೆಗಿನ ಹಳಿವು ಕಂಡುಬರುತ್ತದೆ. ಓಡಿ ಹೋಗುವಳು, ಕದ್ದು ಹೋಗುವಳು, ಕಿಚ್ಚಿಗಂಜುವಳು ನಾನಲ್ಲ, ದಿಡ್ಡಿಬಾಗಿಲು ತೆಗೆಸಿ ಎಂದು ಸ್ವಾಭಿಮಾನಿಯಾಗಿ, ಕಿಚ್ಚಿಗೆ ಹೋಗಲು ಸಿದ್ಧಳಾಗುವಳು. ಇದರಲ್ಲಿ ಆಕೆಯ ಮದುವೆಯ ಬಗೆಗೆ ಮತ್ತು ಪತಿ ಮುತ್ತಣ್ಣ ತೀರಿಕೊಂಡುದ್ದರ ಬಗ್ಗೆ ಕಾರಣ ಕಾಣುವುದಿಲ್ಲ. ಆದರೆ ಆಕೆಯ ಸಂಬಂಧಿಕರಾದ ತಂದೆ ಕರಿಯಣ್ಣ ತಮ್ಮ ಕಾಟಣ್ಣ, ಮೈದುನ ಸಿರಿಗೊಂಡಗೌಡ, ಅತ್ತೆ ನಾದಿನಿಯರ ಪ್ರಸ್ತಾಪ ಬರುತ್ತದೆ. ಇವರೆಲ್ಲರೂ ಕಾಟವ್ವಳನ್ನು ಕೊಂಡಕ್ಕೆ ಹೋಗಲು ವಿರೋಧಿಸುತ್ತಾರೆ. ತಡೆಯಲು ಪ್ರಯತ್ನಿಸುತ್ತಾರೆ. ಆದರೆ ಅವರ್‍ಯಾರ ಮಾತನ್ನು ಕೇಳದೆ ಸಿದ್ಧಳಾಗಿ ಕಾಟವ್ವಾ ಅಲಂಕಾರಯುತವಾಗಿ ಕೊಂಡಕ್ಕೆ ಹೋಗುವಳು. ಮಹಿಳೆಯನ್ನು ಕೊಂಡಕ್ಕೆ ಕಳುಹಿಸುವುದೆಂದರೆ ವಿಜೃಂಭಣೆಯಿಂದ ಕಳುಹಿಸುತ್ತಿದ್ದರು ಎಂಬುದು ಹಲವಾರು ಕಥನಗೀತೆಗಳಿಂದ ತಿಳಿದುಬರುತ್ತದೆ. ಅದೇ ರೀತಿಯಾಗಿ ಕಾಟವ್ವ

---

೩೫. ಸಾವಿರದ ಸಿರಿ ಬೆಳಗು : ಕೃಷ್ಣಮೂರ್ತಿ ಹನೂರು, ಪು.೩೯

ಸಾಂಪ್ರದಾಯಿಕ ನಿಲುವಿಗೆ ಪೂರಕವಾಗಿ ಅಂಜದೇ, ಅಳುಕದೇ ಪ್ರಾಣಾರ್ಪಣೆ ಮಾಡಿದ ಜೀವಂತ ಮಹಿಳೆ.

ಬಾರ್ಕೂರ ಹಿರಿಯಣ್ಣ ಸೆಟ್ರು ಕಥನಗೀತೆಯಲ್ಲಿ ನರ ಆಹುತಿ :

ಈ ಕಥನ ಗೀತೆಯಲ್ಲಿ ಹಡಗು ಚಲಿಸದೇ ಇದ್ದಾಗ, ಹಡಗಿನ ಆದೇಶದಂತೆ ಒಬ್ಬ ಹುಡುಗನನ್ನು ಬಲಿ ಕೊಡುವ ಪ್ರಯತ್ನ ಮಾಡಿದ್ದನ್ನು ಕಾಣುತ್ತೇವೆ. ಆದರೆ ಇಲ್ಲಿ ಆ ಹುಡುಗನ ಪೂರ್ಣ ಬಲಿಯಾಗದೇ ಅವನ ತೊಟ್ಟು ರಕ್ತದಿಂದಲೇ ಹಡುಗು ಸಂತುಷ್ಟ-ಗೊಂಡು ಚಲಿಸಿದ್ದನ್ನು ಅರುಹುತ್ತದೆ.

ಬಾರ್ಕೂರ ಹಿರಿಯಣ್ಣ ಸೆಟ್ರು ಮುತ್ತು-ರತ್ನ ತರಲು ಹೊರಟಿರುತ್ತಾರೆ. ಆಗ ಹಡಗು ಚಲಿಸುವುದಿಲ್ಲವಾದ ಕಾರಣ ಜೋಯಿಸರಿಗೆ ಕೇಳುವನು. ಜೋಯಿಸರು ಹಡಗು ನರ ಆಹುತಿ ಬೇಡುತ್ತದೆ ಎಂದು ತಿಳಿಸಿದರು. ಸೆಟ್ರು ತನ್ನ ಮಡದಿಗೆ ಹತ್ತು ಮಕ್ಕಳಲ್ಲಿ ಒಂದು ಮಗು ಕೊಡು ಎಂದು ಕೇಳುತ್ತಾನೆ. ಆಗ ಆಕೆ 'ಹಡುಗರ ಬಿದ್ಹೋಗಲಿ, ಮುರಿದ್ಹೋಗಲಿ' ನಾನು ನನ್ನ ಮಗನನ್ನು ಕೊಡುವುದಿಲ್ಲ ನನಗೆ ಮುತ್ತು-ರತ್ನ ಏನೂ ಬೇಡ ಎನ್ನುವಳು. ತಾಯಿಯ ಅಂತಃಕರಣವು ಮಕ್ಕಳೇ ನನಗೆ ಮುತ್ತು-ರತ್ನಗಳು ಇದ್ದ ಹಾಗೇ ಎನ್ನುವ ನಿಲುವು ವ್ಯಕ್ತವಾಗುತ್ತದೆ. ಮುಂದೆ ತಂಗಿ ಹೊನ್ನವ್ವಳ ಮನೆಗೆ ಹೋಗುವನು. ಎಂದೂ ಬಾರದ ಅಣ್ಣಯ್ಯ ಇಂದು ಕಾರಣವನ್ನು ಕೇಳಿದಾಗ ನಡೆದ ವಿಷಯವನ್ನೆಲ್ಲ ತಿಳಿಸುವನು. ಸೆಟ್ಟರ ತಂಗಿ ತನ್ನ ಮಗನನ್ನು ಸಿಂಗಾರ ಮಾಡಿ ಮಾವನ ಸಂಗಡ ಕಳಿಸುವಳು. ಅಳಿಯ ಮಾವನಿಗೆ ಮಾವಿನ ಹಣ್ಣು, ಚೂರಿ ಬೇಕು ಎಂದಾಗ ತರೆಸಿಕೊಂಡು ಹಡಗ ಹತ್ತಿ ಕುಳಿತರು. ಅಳಿಯ ಮಾವಿನಹಣ್ಣು ಅರಿವಾಗ (ಕೊಯ್ಯುವಾಗ) ಒಂದೇ ಬೆರಳು ಹರಿದು ರಕ್ತ ಸುರಿಯಲು ಆರಂಭಿಸಿತು. ಆಗ ಹಡಗು ಮುಂದೆ ಸಾಗಿತು. ಸೆಟ್ಟರಿಗೆ ಸಂತೋಷವಾಗಿ ತಂಗಿಯ ಮನೆಗೆ ಮುತ್ತು-ರತ್ನ ಹಡಗು ಕೊಟ್ಟು ತನ್ನ ಮನೆಗೆ ಹೊರಡುವನು. ಆಗ ಆತನ ಮಡದಿ:

"ಹಾದೀಲ್ ಹೋಪೋರ್ ಯಾರಾದ್
ನಮ್ಮನೇಗ್ ಬರಾಬೇಡಿ
ಗಂಡ್ಸ್ಯಾರೂ ಇಲ್ಲಿದ್‌ಮನೆ
ನಮ್ಮನೇಗ ಬರಾಬೇಡಿ"[೩೬]

೩೬. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೪೩

ತನ್ನ ಗಂಡ ಮಾಡಿದ ಅನ್ಯಾಯವನ್ನು ನೆನೆದು ಆಕೆ ಆತನಿಗೆ ಚುಚ್ಚು ಮಾತನಾಡಿರಬೇಕು. ಇದನ್ನು ಕೇಳಿ ಸಿಟ್ಟು ಬಂದು ಮರಳಿ ತನ್ನ ತಂಗಿಯ ಮನೆಗೆ ಬಂದು ಅಲ್ಲಿಯೇ ಅಣ್ಣ-ತಂಗಿ-ಅಳಿಯ ಮೂವರೂ ಒಟ್ಟುಗೂಡಿ ಇರುವರು.

ನರ ಆಹುತಿಯಂತೆ ಹೇಳಿದರೂ ಸಹಿತ ಪುರುಷನಾದ ಕಾರಣಕ್ಕೆ ಒಂದು ತೊಟ್ಟು ರಕ್ತಹರಿದಿದ್ದರಿಂದ ಹಡಗು ಚಲಿಸಿತು ಎಂಬ ಉಲ್ಲೇಖವಿದೆ. ಅದೇ ಸ್ತ್ರೀಯಾಗಿದ್ದರೆ ತನ್ನ ಜೀವನವನ್ನೇ, ಆಹುತಿಗೆ ಒಡ್ಡಬೇಕಾಗಿತ್ತು. ಸ್ತ್ರೀಯೆಂದರೆ ಆಕೆಯ ಜೀವನಕ್ಕೆ ಬೆಲೆಯಿಲ್ಲವೆಂದು ಪರಿಗಣಿಸಲಾಗಿದೆ.

ಕೋಟೆಗೆ ಬಲಿಯಾದ ಧರಣಿಯಮ್ಮ :

ಧರಣಿಯಮ್ಮಳು ಎಲ್ಲಿ, ಯಾವಾಗ ಕೋಟೆಗೆ ಬಲಿಯಾದಳು ಎಂಬುದರ ಬಗ್ಗೆ ತಿಳಿದು ಬರುವುದಿಲ್ಲ. ಇತಿಹಾಸ ಪ್ರಸಿದ್ಧ ಸ್ಥಳಗಳಲ್ಲಿ ಸಾಮಾನ್ಯವಾಗಿ ಎಲ್ಲ ಗ್ರಾಮಗಳ ಸುತ್ತಲೂ ಕೋಟೆ ಇರುವುದನ್ನು ಕಾಣುತ್ತೇವೆ. **ಉದಾ:** ಚಿತ್ರದುರ್ಗ, ಕಿತ್ತೂರುಗಳಲ್ಲಿ ಇತ್ಯಾದಿಗಳಲ್ಲಿ ಕಾಣಬಹುದು. ಗ್ರಾಮದ ಸುತ್ತ ಇರುತ್ತಿದ್ದ ಕೋಟೆಯಿಂದ ಕಾಣದ ಶತ್ರುಗಳ ದಾಳಿಯಿಂದ ಪಾರಾಗಬಹುದಿತ್ತು. ಈಗ ಊರಿನ ಸುತ್ತ ಕೋಟೆ ಕಟ್ಟುವ ಬದಲು ತಮ್ಮ ತಮ್ಮ ಮನೆಗೆ ರಕ್ಷಣೆಯನ್ನು ಮಾಡಲು ಬೇಲಿ(ಗೋಡೆ)ಗಳನ್ನು ಕಟ್ಟುತ್ತಾರೆ. ಏನೇ ಕಟ್ಟಿದರೂ ಇಂದು ದರೋಡೆ, ಸುಲಿಗೆ ಇತ್ಯಾದಿ ಪ್ರಕರಣಗಳು ಸಾಕಷ್ಟು ಸಂಭವಿಸುತ್ತಿವೆ. ಈ ಕಥನಗೀತೆಯಲ್ಲಿ ಧರಣಿಯಮ್ಮಳುನ್ನು ಕೋಟೆಯ ಭದ್ರತೆಗಾಗಿ ಬಲಿ ಕೊಡುವ ಪದ್ಧತಿ ಇದರ ವಸ್ತುವಾಗಿದೆ.

ಧರಣಿಯಮ್ಮನ ಬಲಿದಾನದಲ್ಲಿ ಹೇಮರಡ್ಡಿಯ ಸೊಸೆ ಧರಣಿಯಮ್ಮ ಸ್ವಪ್ರೇರಣೆ-ಯಿಂದ ಕೋಟೆಗೆ ಬಲಿಯಾಗಲು ಸಿದ್ಧವಾಗುವಳು. ಕೋಟೆ ಕಟ್ಟಿಸುವ ಹಿನ್ನೆಲೆಯೆಂದರೆ ರಟ್ಟೆಹಳ್ಳಿಯಿಂದ ವಡ್ಡರ ದ್ಯಾಮಣ್ಣನನ್ನ ಕರೆಸಿ ಕೋಟೆ ಕಟ್ಟಲು ಆರಂಭಿಸುವರು. ಆದರೆ ಗೋಡೆ ನಿಲ್ಲದೇ ಕುಸಿಯುತ್ತಿತ್ತು. ಹೊತ್ತಿಗೆ ತೆಗೆಸಿ ಜೋಯಿಸರನ್ನು ಕೇಳಿದರೆ ಕೋಟೆ ಬಲಿ ಕೇಳಿತೆಂಬ ಪ್ರತೀತಿ ಇದೆ. ಆಗ ಧರಣಿಯಮ್ಮಳನ್ನು ಬಲಿ ಕೊಡುವುದೆಂದು ಮಾವ ಹೇಮರೆಡ್ಡಿ ನಿರ್ಧರಿಸಿದನಂತೆ. ಇಲ್ಲಿ ಕೋಟೆ ಅಥವಾ ಗೋಡೆ ಕುಸಿಯಲು ಏನಾದರೂ ಬೇರೆ ಕಾರಣ ಇರಬಹುದು. ಕಟ್ಟುವ ರೀತಿ, ಸಾಮಗ್ರಿಗಳ ಕೊರತೆ, ಕಟ್ಟುವ ಚಾಣಾಕ್ಷತೆ ಸರಿಯಲ್ಲ-ದಿರಬಹುದು ಅಥವಾ ದುಷ್ಟ ಜನರು ಕಟ್ಟಿದ್ದನ್ನೇ ಕೆಡುವುತ್ತಲೂ ಇರಬಹುದು. ವೈಜ್ಞಾನಿಕವಾಗಿ ವಿವೇಚಿಸದೇ ಧರಣಿಯಮ್ಮಳನ್ನೇ ಬಲಿ ಕೊಡಲು ನಿರ್ಧಾರ ಮಾಡಿರುವುದು ಅಸಮಂಜಸ. ಜೋಯಿಸನ ಮೇಲಿನ ನಂಬಿಕೆ, ಸಮಾಜದ ನೀತಿ-ನಿಯಮ ಹೀಗೆ ಹಲವಾರು

ಕಾರಣಗಳಿಂದ ಮುಗ್ಧ ಮಹಿಳೆ ಧರಣಿಯಮ್ಮಳು ಬಲಿಯಾಗಲು ನಿರ್ಧರಿಸಿ ಊರ ಹಿತಕ್ಕಾಗಿ, ರಕ್ಷಣೆಗಾಗಿ ಪ್ರಾಣ ಕೊಡವುದು ಸರಿಯೆನಿಸಿ ಗಂಡನಿಗೆ ತನ್ನ ತಂಗಿಯನ್ನೇ ಮದುವೆ ಮಾಡಿಸಬೇಕೆಂದುಕೊಂಡಿದ್ದು ಧರಣಿಯಮ್ಮಳ ಒಳ್ಳೆಯತನ, ತ್ಯಾಗ. ನನಗೇನಾದರೂ ಚಿಂತೆಯಿಲ್ಲ, ಪರಹಿತವೇ ಅವಶ್ಯ ಎಂಬ ಸಮಾಜಪರ ನಿಲುವಿನೊಂದಿಗೆ ತ್ಯಾಗಮಯಿಯಾಗಿ ಚಿರಸ್ಥಾಯಿಯಾಗಿ ನಿಂತಳು.

ಧರಣಿಯಮ್ಮಳು ಕೋಟೆಗೆ ಬಲಿಯಾಗುವ ಹಿಂದಿರುವ ಕಥೆ ಎಂದರೆ, ದ್ಯಾಮಣ್ಣ ಹಾಗೂ ಅವನ ಸಂಗಡಿಗರು ಹಗಲೆಲ್ಲಾ ಕಟ್ಟಿದ ಕೋಟೆ ರಾತ್ರಿಯಾಗುತ್ತಿದ್ದಂತೆ ಬೀಳುವುದನ್ನು ಕಂಡು ಹೊತ್ತಿಗೆ ತೆಗೆಸಲು ಹೋದಾಗ ಪಂಡಿತನು ಹೊತ್ತಿಗೆ ತೆಗೆದು–

"ಕ್ವಾಟೆ ಕಿರು ಬೆರಳಬೇಡಿತಂತಾರು ॥
ಕಟ್ಟುವ ಕ್ವಾಟೇಗೆ ರೆಡ್ಡೆ
ನಿನ್ನ ಕಿರುಬೆರಳೆ ಬೇಕು ॥"[೩೭]

ಎಂದು ಕೋಟೆಯ ಭದ್ರತೆಗೆ ಗೌಡನ ಕಿರುಬೆರಳು ಬೇಕೆಂದಾಗ ಗೌಡನು ತನ್ನ ಕಿರುಬೆರಳನ್ನು ಕೊಡಲು ನಿರಾಕರಿಸುತ್ತಾನೆ. ಮತ್ತೆ ಹೊತ್ತಿಗೆ ತೆಗೆಸಿ ಕೇಳಿದಾಗ ಮಕ್ಕಳು ಅಥವಾ ಹೆಂಡತಿಯನ್ನು ಬಲಿ ಕೇಳುತ್ತದೆ. ಆಗ ತನ್ನವರ್‍ಯಾರನ್ನು ಬಲಿಕೊಡಲು ಒಪ್ಪದ ಹೇಮರೆಡ್ಡಿ ತನ್ನ ಸೊಸೆಯನ್ನು ಬಲಿ ಕೊಡಲು ನಿರ್ಧರಿಸುವನು. ಸೊಸೆ ಬೇರೆ ಮನೆಯಿಂದ ಬಂದವಳೆಂದು ತಿಳಿದು ಆಕೆ ಬಲಿ ಹೋದರೆ ತಮಗೇನು ನಷ್ಟವಿಲ್ಲವೆಂದು ಆಕೆಯನ್ನು ಬಲಿಕೊಡಲು ನಿರ್ಧರಿಸಿದನೆನಿಸುತ್ತದೆ. ಧರಣಿಯಮ್ಮಳನ್ನು ಬಲಿ ಕೊಡುವ ವಿಷಯವನ್ನು ಈಕೆಯ ಗಂಡ ರಂಗಣ್ಣನಿಗೂ ಹೇಳದೆ ಇರುವಂತಹ ಕ್ರೂರ ಮಾವ. ಆದ್ದರಿಂದ ಮಾವನ ಜೊತೆಗೆ ಹೋಗದಿರು ಎಂದು ಗೆಳತಿ ಹೇಳಿದರೂ ಧರಣಿಯಮ್ಮ "ಬಲಿನಾದರೂ ಕೊಡಲಿ, ಬಾವಿಗಾದರೂ ಅಕಲಮ್ಮ ಮುಂದಕಿಟ್ಟ ಕಾಲನ್ನೇ ನಾನು ಇಂದಕಿಡಲಾರನಮ್ಮ"[೩೮] ಎನ್ನುವಲ್ಲಿ ಆಕೆಯಲ್ಲಿಯ ದೃಢ ನಿರ್ಧಾರ, ಸ್ಪಷ್ಟ ನಿಲುವು, ಧೈರ್ಯ ಬಿಂಬಿತವಾಗುತ್ತದೆ. ಧರಣಿಯಮ್ಮಳಿಗೆ ತಾನು ಬಲಿಯಾಗುವ ವಿಷಯ ತಿಳಿದಿದ್ದ ಕಾರಣ ಪ್ರತಿಭಟಿಸಿದರೂ, ವಿರೋಧಿಸಿದರೂ ಏನು ಪ್ರಯೋಜನವಿಲ್ಲ ಎಂದು ಅರಿತು ಹಿರಿಯರು ಹಾಕಿದ ದಾರಿಯಲ್ಲಿ ನಡೆಯಲು ಸಿದ್ಧಳಾದಳು.

---

೩೭. ಜನಪದ ಕಥನಗೀತೆಗಳಲ್ಲಿ ಮಹಿಳೆ : ಒಂದು ಸಾಂಸ್ಕೃತಿಕ ಅಧ್ಯಯನ : ಎಂ.ಕೆ. ರುಕ್ಮಿಣಿ, ಪು.೧೮೧
೩೮. ಅದೇ, ಪು.೧೯೨

ಧರಣಿಯಮ್ಮಳ ಈ ಕಥೆಯನ್ನು ಕೇಳಿದಾಗ ಅನುಪಮಾ ನಿರಂಜನವರ ಪೌರಾಣಿಕ ಕಾದಂಬರಿಯಲ್ಲಿಯ 'ಮಾಧವಿ' ಇಲ್ಲಿ ನೆನಪಿಗೆ ಬರುತ್ತಾಳೆ. ನಿಯೋಗ ಪದ್ಧತಿಯ ಸುಳಿಯಲ್ಲಿ ಸಿಲುಕಿ ಮಾಧವಿ ತನ್ನ ಆಸೆ ಕನಸುಗಳಿಗೆ ಗೋಪುರ(ಸಮಾಧಿ) ಕಟ್ಟಿ ತಂದೆ ಯಯಾತಿ ಗಾಲವನಿಗೆ ದಾನ ಕೊಟ್ಟನೆಂದು ಮಾಧವಿಗೆ ಹೇಳಿದಾಗ ವಿರೋಧಿಸಬೇಕೆಂದರೂ ಅಸಹಾಯಕ ಸ್ಥಿತಿಯಲ್ಲಿ ಗಾಲವನ ಹಿಂದೆ ಹೊರಡಬೇಕಾಗುತ್ತದೆ. ಯಯಾತಿಗೆ ಮಾಧವಿ ಹೆಣ್ಣುಜೀವ ಆದ ಕಾರಣ ಹುಟ್ಟಿರುವಾಗಲೇ ಬೇಡವಾದ ಮಗು. ಇನ್ನು ಬೆಳೆದ ನಂತರ ನಾನು ಅವರಿಗೆ ಬೇಡವಾದ ಮಗಳಾಗಿ ಅಂದಿನ ಪುರುಷ ಸಮಾಜ ವ್ಯವಸ್ಥೆಯಲ್ಲಿಯೇ ಬದುಕನ್ನು ಕಳೆಯಬೇಕಾಗುತ್ತದೆ. ಹಾಗೆಯೇ ಧರಣಿಯಮ್ಮಳು ಸಾಮಾಜಿಕ ವ್ಯವಸ್ಥೆಗೆ ಬದ್ಧವಾಗಿ ಬದುಕನ್ನು ಕಂಡಳು. ಮುಂದೆ ಧರಣಿಯಮ್ಮ ತನ್ನ ಮಗುವನ್ನು ಹೊತ್ತುಕೊಂಡು ಗಂಗೆ ಪೂಜೆ ಮಾಡಿದಾಗ ಮಗು ಮತ್ತು ಆಕೆಯನ್ನು ಹೊತ್ತುಕೊಂಡು ಕೋಟೆ ಮುಚ್ಚಿತು. ಕೋಟೆ ತಾನೇ ಮುಚ್ಚಲು ಸಾಧ್ಯವೇ ಇಲ್ಲ. ಮಾವನೇ ಆಕೆ ಮತ್ತು ಮಗುವನ್ನು ಜೀವಂತ ಸಮಾಧಿ ಮಾಡಿ ಮೇಲೆ ಕೋಟೆ ಕಟ್ಟಿಸಿರಬೇಕು. ಧರಣಿಯಮ್ಮಳ ಸತ್ಯಕ್ಕೆ, ನ್ಯಾಯಕ್ಕೆ, ಸದ್ಗುಣಗಳಿಗೆ ಬಲಿಯಾದ ನಂತರ ಊರಿನ ಅವಸ್ಥೆ ಹದಗೆಟ್ಟಿತು. ಏಕೆಂದರೆ ಒಂದು ಹೆಣ್ಣಿನ ಅಳಲು-ಸಂಕಟ ಎಲ್ಲ ಪಾಪವನ್ನು ಹೊತ್ತು ಊರು ಉದ್ಧಾರ ಮಾಡುವೆವು ಎಂದರೆ ಆಗದು. ಆದ್ದರಿಂದ ಜನಪದರು ಊರು ಹಾಳಾದ ಬಗೆಯನ್ನು ಇಲ್ಲಿ ಅಭಿವ್ಯಕ್ತಪಡಿಸುತ್ತಾರೆ.

"ಏಮಾರಡ್ಡಿ ಪಟ್ನಾವೆ
ಪಾಳು ಪಟ್ನವೇ ಆಯ್ತು
ಏಮಾರೆಡ್ಡಿ ಗೋವುಗಳೇ
ನಿಲುಗಲ್ಲೆ ಆದಾವು॥
ಸತ್ಯವಂತೆ ಧರಣೆಮ್ಮ
ಕ್ವಾಟೇವಳಗಾದಳು"[೩೯]

ಹೇಮಾರೆಡ್ಡಿಯ ಪಟ್ಟಣವು ಹಾಳಾಗುವುದಕ್ಕೆ ಕಾರಣವೆಂದರೆ ಯಾರಿಗೆಯಾದರೂ ಕೇಡು ಬಯಸಬಾರದು. ಎಲ್ಲರ ಜೀವ, ಜೀವನ ಅಷ್ಟೇ ಎಂದೂ ತಿಳಿಯಬೇಕು. ಮಾವನ ಸ್ವಾರ್ಥ ಪರತೆ ಕೋಟೆಗೆ ಪರರ ಮನೆಯ ಹೆಣ್ಣು ಎಂದು ಎರಡು ಬಗೆದು ಬಲಿಕೊಡಲು ನಿರ್ಧರಿಸಿದ್ದರಿಂದ ಹೀಗೆ ಆಯಿತು. ಒಳ್ಳೆಯವರಿಗೆ ಒಳ್ಳೆಯದೆ ಆಗುವುದು ಕೇಡು

೩೯. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರು, ಪು.೧೮೨

ಬಯಸುವವರಿಗೆ ಕೇಡೆ ಉಂಟಾಗುತ್ತದೆ ಎಂಬ ನೀತಿಯನ್ನು ಈ ಕಥನಗೀತೆಯಿಂದ ತಿಳಿಯುತ್ತದೆ.

ಕೆರೆಗೆ ಬಲಿಯಾದ ಭಾಗಿರಥಿ :

ಕಲ್ಲನಕೇರಿಯ ಮಲ್ಲನಗೌಡ ಊರಿನ ಹಿತಕ್ಕಾಗಿ ಕೆರೆಯೊಂದನ್ನು ಕಟ್ಟಿಸುವನು. ಅದರಲ್ಲಿ ಕೊಂಚಷ್ಟು ಸೆಲೆಯಿಲ್ಲವಾದ ಕಾರಣ ಜ್ಯೋತಿಷಿಗಳ ಬಳಿಗೆ ಹೋಗಿ ಕೇಳುತ್ತಾನೆ. ಆಗ ನಿಮ್ಮ ಮನೆತನದ ಹಿರಿಯ ಸೊಸೆ ಮಲ್ಲವ್ವಳನ್ನು ಕೆರೆಗೆ ಹಾರ ಕೊಟ್ಟರೆ ನೀರು ಬರುವುದೆಂದು ಹೇಳುವನು. ಗೌಡನಿಗೆ ಏನು ಮಾಡಬೇಕೆಂದು ತೋಚದೆ ವಿಚಾರಿಸಿ ಹಿರಿ ಸೊಸೆಯನ್ನು ಕೊಟ್ಟರೆ ಹಿರಿತನಕ್ಕೆ ಯಾರಿಲ್ಲ; ಅದಕ್ಕಾಗಿ ಕಿರಿಯ ಸೊಸೆಯನ್ನು ಕೆರೆಗೆ ಹಾರವಾಗಿ ಕೊಡಬೇಕೆಂದು ನಿರ್ಧರಿಸುತ್ತಾರೆ. ಯಾರನ್ನೇ ಬಲಿಯಾಗಿ ಕೊಟ್ಟರೂ ಒಬ್ಬ ಮಹಿಳೆಗೆ ಶೋಷಣೆಯಾದಂತೆ. ಆಕೆಗೆ ಆಗಿರುವ ಶೋಷಣೆಯೇ ಇಡೀ ಸಮಾಜದ ತುಂಬಾ ಆವರಿಸುತ್ತದೆ. ತನಗೆ ಕೆರೆಗೆ ಹಾರವಾಗಬೇಕೆಂದು ಬಂದ ವಿಷಯವನ್ನು ತಿಳಿದು ಯಾರಿಗೂ ಗೊತ್ತಾಗದಂತೆ ಆಕೆಯ ಕಣ್ಣೀರು ಒಳಗೊಳಗೆ ನುಸುಳುತ್ತವೆ. ತವರಿನವರಿಂದಲೂ ತಿರಸ್ಕಾರಕ್ಕೊಳಪಡುತ್ತಾಳೆ. ಯಾರೂ ಕೂಡ ಆಕೆಯ ಕಷ್ಟವನ್ನು ಅರ್ಥ ಮಾಡಿಕೊಳ್ಳದಂತಹ ಹೀನ ಸಮಾಜ ಅಮಾಯಕ ಹೆಣ್ಣನ್ನು ಬಲಿ ಹೆಸರಿನಲ್ಲಿ ಜೀವನವನ್ನೇ ಕೊನೆಗೊಳಿಸುವುದು ದುರ್ದೈವದ ಸಂಗತಿಯಾಗಿದೆ. "ಭಾಗೀರಥಿಯು ಒಂದು ರೀತಿಯಲ್ಲಿ ಸ್ತ್ರೀ ಶೋಷಣೆಯಾಗಿ ಇಲ್ಲಿ ಬಿಂಬಿತವಾಗಿದೆ. ಮಲ್ಲನಗೌಡ ತನ್ನ ಊರಿನ ಸಮಷ್ಟಿ ಹಿತವನ್ನು ಕಾಪಾಡುವ ಉದ್ದೇಶವನ್ನು ಹೊಂದಿದ್ದರು. ಅದರ ಬಳಕೆಯಲ್ಲಿ ತನ್ನ ಸ್ವಾರ್ಥತನವನ್ನು ಮತ್ತು ಸ್ವೇಚ್ಛಾಚಾರವನ್ನು ತೋರಿಸಿದ್ದಾನೆ."[೪೦] ಸ್ತ್ರೀ ಶೋಷಣೆಯೊಂದಿಗೆ ಹಿರಿ ಸೊಸೆ-ಕಿರಿ ಸೊಸೆ ಎಂದು ಭೇದ ಭಾವ ತೋರಿಸಿ ಮಹಿಳೆ-ಮಹಿಳೆಯಲ್ಲಿಯೇ ದ್ವೇಷ ಹುಟ್ಟುವ ಹಾಗೆ ಮಾರ್ಪಡಿಸಿದ್ದಾನೆ ಮಲ್ಲನಗೌಡ.

೧೯೪೦ರಲ್ಲಿ ಬೆಟಗೇರಿ ಕೃಷ್ಣಶರ್ಮರು ಜಯ ಕರ್ನಾಟಕದಲ್ಲಿ 'ಕೆರೆಗೆ ಹಾರ' ಕಥನಗೀತೆಯನ್ನು ಮೊದಲು ಪ್ರಕಟಿಸಿದರು. ಅಲ್ಲಿಂದ ಮುಂದೆ ಈ ಕಥನಗೀತೆಯನ್ನು ಕುರಿತು ಹಲವಾರು ವಾಗ್ವಾದ, ವಿಮರ್ಶೆ ಪ್ರಕಟವಾಗುತ್ತಲೇ ಬಂದಿವೆ. ಕೆರೆಗೆ ಹಾರ ಕನ್ನಡದ ಜನಪ್ರಿಯ ಕಥನಗೀತೆ. ಇದರ ಪಾಠಾಂತರಗಳು ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲದೆ ನೆರೆಯ ಆಂಧ್ರದಲ್ಲಿಯೂ ಸಿಗುತ್ತವೆ. ಈ ಕಥನಗೀತೆಯ ಬರಹದ ಪಾಠಾಂತರದಲ್ಲಿ ಸಮಾಜದ ಒಂದು

---

೪೦. ಜಾನಪದ ಕರ್ನಾಟಕ ಸಂ.೨, ಸಂಚಿಕೆ.೨, ಜೂನ್ ೨೦೦೩, ಸುಮಂಗಲಾ ಬಿ. ಅತ್ತಿಗೇರಿ, ಪು.೮೭

ವರ್ಗದ ಉದಾರತೆ ಹಾಗೂ ತ್ಯಾಗ ಮನೋಭಾವನೆಗಳನ್ನು ಬಿಂಬಿಸಲಾಗಿದೆ. ಈ ಕಥೆ ಅನೇಕ ಪ್ರತಿವಾದಗಳನ್ನು ಒಡ್ಡುವ ಮೌಖಿಕ ರೂಪದ ಪಾಠಾಂತರಗಳು ದೊರೆಯುತ್ತವೆ. ಅಂತಹ ಒಂದು ವಿಶಿಷ್ಟ ಪಾಠಾಂತರದ ಬಗ್ಗೆ ಗಂಭೀರವಾದ ಅಧ್ಯಯನ ಮಾಡಿರುವ ಎಸ್.ಆರ್. ಗುರುನಾಥ ಅವರು 'ಕೆರೆಗೆ ಹಾರವಾದ ಬಂದಮ್ಮನ ಇತಿಹಾಸ' ಎನ್ನುವ ಪುಸ್ತಕ ಪ್ರಕಟಿಸಿದ್ದು ಅದರಲ್ಲಿ ಹಲವಾರು ಪ್ರಮುಖ ಪ್ರಶ್ನೆಗಳನ್ನು ಎತ್ತಿದ್ದಾರೆ.

ಕರ್ನಾಟಕವೂ ಸೇರಿದಂತೆ ಭಾರತದ ಹಲವಾರು ರಾಜ್ಯಗಳಲ್ಲಿ ಊರಿನ ಗೌಡರು ಅಥವಾ ಪಟೇಲರು ಕೆರೆ, ಕಟ್ಟೆ, ಕೊತ್ತಲಗಳನ್ನು ಕಟ್ಟಿಸುವುದು, ಅವುಗಳು ಸುಭದ್ರವಾಗಿ ನಿಲ್ಲದೇ ಇರುವುದು, ಅದಕ್ಕೆ ಹೊತ್ತಿಗೆ ತೆಗೆಸುವುದು, ಅದರಲ್ಲಿ ಗೌಡನ ಸೊಸೆಯನ್ನು ಬಲಿ ಕೊಡಬೇಕೆಂದು ತೀರ್ಮಾನಿಸುವುದು, ಕೊನೆಗೆ ಬಲಿ ಕೊಡುವುದು, ಅನಂತರ ಕೆರೆ ಕಟ್ಟೆ ಕೋಟೆ ಕೊತ್ತಲಗಳು ಸುಸೂತ್ರವಾಗುವುದು. ಇದು ತೀರಾ ಸಾಮಾನ್ಯ ಕಥೆ. ಈ ಸಂದರ್ಭಗಳಲ್ಲಿ ಗೌಡ ನಿಜವಾಗಿಯೂ ತನ್ನ ಸೊಸೆಯನ್ನು ಬಲಿ ಕೊಟ್ಟಿರಬಹುದೆ ಎಂಬ ಪ್ರಶ್ನೆ ಎದುರಾಗುತ್ತದೆ. ಗುರುನಾಥ ಅವರು ಇಂತಹ ಪ್ರಶ್ನೆಗಳನ್ನು ಅಧ್ಯಯನದುದ್ದಕ್ಕೂ ಸ್ಪಷ್ಟ ಆಧಾರಗಳೊಂದಿಗೆ ಸಾಬೀತು ಮಾಡಿದ್ದಾರೆ. ಇವರ ಅಧ್ಯಯನದಲ್ಲಿ ತಿಳಿದುಬಂದ ಸಂಗತಿಗಳೆಂದರೆ: ಆಂಧ್ರಪ್ರದೇಶದ ಗಡಿಭಾಗದಲ್ಲಿರುವ ಒಂದು ಗ್ರಾಮ; ಅದರ ಹೆಸರು 'ಎರಡು ಕೆರೆ'. ಈ ಗ್ರಾಮದ ಗೌಡ ಮರಿಗೌಡ. ಈತ ಕಟ್ಟಿಸಿದ ಕೆರೆಯೊಂದಕ್ಕೆ ತನ್ನ ಸೊಸೆಯನ್ನು ಬಲಿ ಕೊಡಬೇಕಾದ ಪ್ರಸಂಗ ಬಂದಿತು. ಗೌಡರು ಚಿಂತೆ ಮಾಡುತ್ತಾ ಇರುವಾಗ ಶಾನುಭೋಗರಿಗೆ ಸಲಹೆಯೊಂದನ್ನು ಕೇಳಿದರು. ಆಗ ಶಾನುಭೋಗರ ಸಲಹೆ ಹೀಗಿತ್ತು: ಗೌಡರ ಮನೆಯಲ್ಲಿ 'ತಿಮ್ಮ' ಎನ್ನುವ ಒಬ್ಬ ಜೀತದಾಳು ಇದ್ದ. ಅವನು ಗೌಡನನ್ನು ಅಪ್ಪ ಎಂದೇ ಕರೆಯುತ್ತಿದ್ದ. ಇದನ್ನು ಅರಿತಿದ್ದ ಶಾನುಭೋಗರು ತಿಮ್ಮ ಹೇಗಿದ್ದರೂ ನಿಮ್ಮ ಮಗನಂತೆ ಇರುವನು. ಹಾಗಾದರೆ ಅವನ ಹೆಂಡತಿ ನಿಮಗೆ ಸೊಸೆಯಾಗುವಳು. ಅವಳನ್ನೇ ಬಲಿಕೊಡಿ ಎಂದರು. ಇದು ಗೌಡರಿಗೂ ಒಪ್ಪಿಗೆಯಾಯಿತು. ಪರಿಣಾಮವಾಗಿ ತಿಮ್ಮನ ಹೆಂಡತಿಯಾದ ಬಂದಮ್ಮಳನ್ನು ಬಸುರಿಯಾಗಿದ್ದರೂ ಬಲಿ ಕೊಡಲಾಯಿತು. ನಂತರದ ದಿನಗಳಲ್ಲಿ ಬಂದಮ್ಮಳ ಬಲಿಯನ್ನು 'ತ್ಯಾಗ' ಎಂದು ಬಣ್ಣಿಸಲಾಯಿತು.

ಇದಿಷ್ಟು ಇತಿಹಾಸವನ್ನು ಲೇಖಕರು ಅತೀ ಶ್ರದ್ಧೆ ಹಾಗೂ ಶ್ರಮದಿಂದ ಶೋಧಿಸಿದ್ದಾರೆ. ಪ್ರಸ್ತುತ ಘಟನೆಗಳು ನಮ್ಮನ್ನು ದಿಙ್ಮೂಢರನ್ನಾಗಿಸುತ್ತದೆ. ಏಕೆಂದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತಿಮ್ಮನಂತಹವರನ್ನು ಎಂದಿಗೂ ತನ್ನ ಸಂಬಂಧಿ ಎಂಬುದಾಗಿ ಭಾವಿಸಲಾರದ

ವ್ಯವಸ್ಥೆಯೊಂದು, ತನಗೆ ಬಂದ ಕಷ್ಟದಿಂದ ಪಾರಾಗಲು ಅತ್ಯಂತ ಸುಲಭವಾಗಿ ಸಂಬಂಧವನ್ನು ಸೃಷ್ಟಿ ಮಾಡಿ ತಿಮ್ಮನ ಹೆಂಡತಿಯಂತಹ ಅಮಾಯಕರನ್ನು ಬಲಿ ನೀಡಿದ್ದು, ಹಾಗೆಯೇ ಬಲಿಯಾದ ಹೆಣ್ಣನ್ನು ಸ್ಮರಿಸುವ ಹಾಡುಗಳು ಕಾಲಾ ನಂತರದಲ್ಲಿ ಮೇಲ್ವರ್ಗದ ಹಿತಕ್ಕೆ ಬಲಿ ಬಿದ್ದು ಕಾಲ್ಪನಿಕ ಭಗೀರಥ ಬಂದದ್ದು. ಬಂದಮ್ಮನ ಹಾಡು ಬಹಳ ದಿನ ಆ ಊರಿನ ಜನರ ಬಾಯಲ್ಲಿ ಉಳಿಯಲೇ ಇಲ್ಲ. ಬಂದಮ್ಮನ ಬದಲಿಗೆ ಭಾಗೀರಥಿ ಬಂದಳು.

ಭಾಗೀರಥಿಯ ಈ ಆತ್ಮಬಲಿಯು ಸಮಾಜದ ಅಂತಃಕರಣವನ್ನು ಕಲಕಬಹುದು. ಆದರೆ ಸಮಾಜದ ಒಳಿತಿಗಾಗಿ ಅವಳ ತ್ಯಾಗ, ಆದರ್ಶ ಜನಪದ ಬದುಕಿನ ಮೌಲ್ಯವಾಗಿ ಗೋಚರಿಸುತ್ತದೆ. ಜೊತೆಗೆ ಹೀಗೆ ಪ್ರಾಣಾರ್ಪಣೆ ಮಾಡಿಕೊಂಡ ಹೆಣ್ಣನ್ನು ವೈಭವೀಕರಿಸುವುದು ಉಂಟು. ಇದಕ್ಕೆ ನಿದರ್ಶನವಾಗಿ ಜೀ.ಶಂ. ಪರಮಶಿವಯ್ಯನವರು ತಮ್ಮ ಗ್ರಂಥದಲ್ಲಿ ಹೇಳಿದ ಮಾತನ್ನು ಕಾಣಬಹುದು: "ಜನತೆಯ ಉಪಕಾರಾರ್ಥವಾಗಿ ಪ್ರಾಣಾರ್ಪಣೆ ಮಾಡಿದ ಹೆಣ್ಣಿನ ತ್ಯಾಗ ದೊಡ್ಡದು. ಪರರ ಒಳಿತಿಗಾಗಿ ಬಲಿ ಕೊಟ್ಟುಕೊಂಡವಳು ದೇವತೆಯೇ ಸರಿ" ಎಂದಿದ್ದಾರೆ. ಇದಕ್ಕೆ ಹೊರತಾಗಿ ಗಿರಡ್ಡಿ ಗೋವಿಂದರಾಜರು "ಕೆರೆಗೆ ನೀರು ಬಾರದ್ದಕ್ಕೆ ಭಾಗೀರಥಿ ಕಾರಣಳಲ್ಲ. ಆದ್ದರಿಂದ ಅವಳ ಹಾರ ಇದಕ್ಕೆ ನ್ಯಾಯ ಸಮ್ಮತ ಪರಿಹಾರವಾಗುವ ಪ್ರಸಂಗವಿಲ್ಲ"[೪೧] ಎಂಬ ಇವರ ಮಾತು ಸ್ವಾಗತಾರ್ಹ. ಈ ಎಲ್ಲ ಅಂಶಗಳನ್ನು ಅವಲೋಕಿಸಿದಾಗ ಭಾಗೀರಥಿಯು ಪುರುಷ ಕೇಂದ್ರಿತ ಸಮಾಜ ವ್ಯವಸ್ಥೆಗೆ ಸಿಕ್ಕು ಬಲವಂತವಾಗಿ ಕೆರೆಗೆ ಹಾರವಾಗಿದ್ದು ಸ್ಪಷ್ಟವಾಗುತ್ತದೆ.

ಮದಗದ ಕೆರೆಗೆ ಬಲಿಯಾದ ಕೆಂಚವ್ವ:

ಮದಗದ ಕೆಂಚವ್ವಳ ಕಥನಗೀತೆಯಲ್ಲಿ ಮಲ್ಲಯ್ಯಗೌಡನ ಮಗಳು ಮಲಕಮ್ಮ ಎಂಬುವಳಿರುತ್ತಾಳೆ. ಈಕೆ ದೂರದಿಂದ ನೀರನ್ನು ಹೊತ್ತು ತರಲಾರದೆ ತಂದೆಗೆ ಕೆರೆ-ಯೊಂದನ್ನು ಕಟ್ಟಿಸುವಂತೆ ಹೇಳಿದಳು. ಆಗ ತಂದೆ ರಟ್ಟೆಹಳ್ಳಿಯ ವಡ್ಡರ ದ್ಯಾಮಣ್ಣನನ್ನು ಹತ್ತು ಸಾವಿರ ವರಹಕ್ಕೆ ಒಪ್ಪಿಸಿಕೊಂಡು ಪೂಜೆ ಮಾಡಿ ಕೆಲಸ ಪ್ರಾರಂಭ ಮಾಡಿ ಹೊತ್ತು ಮುಳುಗುವ ಹೊತ್ತಿನಲ್ಲಿ ಗಂಗಮ್ಮ ಕಾಣಿಸಿಕೊಂಡಳು. ಕೆರೆ ಕಟ್ಟಿಸುತ್ತಿರುವ ಯಜಮಾನನ ಹೆಂಡತಿಯನ್ನು ಬಲಿಕೊಟ್ಟರೆ ಅಲ್ಲಿ ಬಹಳ ದಿನಗಳ ಕಾಲ ನಿಲ್ಲುತ್ತೇನೆಂದು ತಿಳಿಸಿದಳು. ಗೌಡ ದಿಗ್ಭ್ರಮೆಗೊಂಡು ಹೆಂಡತಿ ಕೊಟ್ಟರೆ ಬದುಕನ್ನು ತೂಗಿಸಿಕೊಂಡು ಹೋಗುವುದು ಕಷ್ಟ,

೪೧. ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು : ಗಾಯತ್ರಿ ನಾವಡ, ಪು.೮೯

ಮಗಳಾದರೆ ಕುಡಿ ಮುರಿದ ಹಾಗೆ ಎಂದು ವಿಚಾರಿಸಿ ಮಗನಾದ ಗೂಳೇಶನಿಗೆ ಸೊಸೆಯನ್ನು ತಂದು ಆಕೆಯನ್ನು ಕೆರೆಗೆ ಬಲಿ ಕೊಡಬೇಕೆಂದು ನಿರ್ಧರಿಸಿದರು. ಮಲ್ಲಯ್ಯಗೌಡನು ತನ್ನ ತಂಗಿಯ ಊರಿಗೆ ಮಗಳನ್ನು ಕೇಳಿ ನಿಶ್ಚಯಿಸಿಕೊಂಡು ಬಂದನು. ಮಾತುಕತೆಯ ನಂತರ ಗೂಳೇಶ ಮತ್ತು ಕೆಂಚವ್ವಳಿಗೆ ಮದುವೆಯಾಯಿತು. ಆಗ ಗೂಳೇಶನಿಗೆ ಲಗ್ನ ಮಾಡಿ ಮನೆತನ ಬಡವಾಗಿದೆ; ದೇಶದ ಮೇಲೆ ಹೋಗಿ ಸಂಪಾದಿಸಿ ಬಾ ಎಂದು ಹೇಳಿ ದುಡಿಯುವ ಕೈ ನಿನ್ನದಾಗಲಿ ಎಂದು ಆಶೀರ್ವದಿಸಿದರು.

ಹೆಂಡತಿ ಕೆಂಚವ್ವ ಇದಕ್ಕೆ ಒಪ್ಪದೇ ಇದ್ದರೂ ಗೂಳೇಶ ದೇಶದ ಮೇಲೆ ಹೊರಟನು. ಇವನು ಹೋದ ನಂತರ ಮನೆಯಲ್ಲಿ ಗಂಗೆಯ ಪೂಜೆ ಸಿದ್ಧತೆ ನಡೆದವು. ಕೆಂಚವ್ವ ಗರ್ಭಿಣಿಯಾದ ಕಾರಣ ಪೂಜೆಯನ್ನು ಕೊಂಚ ಮುಂದೆ ಹಾಕಲಾಯಿತು. ಮುಂದೆ ಒಂದು ಮಗುವಿನ ತಾಯಿಯಾದಳು. ಅತ್ತ ಮಾವಂದಿರೊಡನೆ ಗಂಗೆ ಪೂಜೆಗೆಂದು ಹೊರಟಳು. ಪೂಜೆಯಾದ ನಂತರ ಕೆಂಚವ್ವ ಉಕ್ಕಿ ಬಂದ ನೀರಿನ ಪಾಲಾದಳು. ಅವಳೇ ಕೆರೆಯ ಮೇಲೆ ದೇವತೆಯಾಗಿ ನೆಲೆಸಿದಳೆಂಬ ಪ್ರತೀತಿ ಇದೆ. ಕೆಂಚವ್ವ ಗಂಡ ಗೂಳೇಶನ ಕನಸಿನಲ್ಲಿ ಹೋಗಿ ಎಚ್ಚರಿಸಿದಳು. ಹಲವಾರು ಅಪಶಕುನಗಳ ಮಧ್ಯೆ ಕೆರೆಯ ಮುಂದೆ ಬಂದು ಕಣ್ಣೀರು ಸುರಿಸಿದನು. ಕೆಂಚವ್ವ ತಾನು ಕೆರೆಗೆ ಬಲಿಯಾಗುವ ಪೂರ್ವದಲ್ಲೇ ತೌರಿಗೆ ಹೋಗಿ ಗಂಡನಿಗೆ ತಂಗಿ ಕೆಂಚಿಯನ್ನು ಮದುವೆಗೆ ಗೊತ್ತು ಮಾಡಿ ಬಂದಿದ್ದಳು. ಅಂತೆಯೇ ಗೂಳೇಶ ಅವಳೊಂದಿಗೆ ಮದುವೆಯಾಗಿ ಜೀವನ ಮುಂದುವರೆಸಿದನು. ಕೆಂಚವ್ವ ಮದಗದ ಕೆರೆಗೆ ಬಲಿಯಾಗಿ ದೇವತೆಯಾದಳು. ಇಡೀ ಸಮಾಜಕ್ಕೆ, ಸ್ತ್ರೀ ಪಾತ್ರವೇ ಮುಖ್ಯವಾಗಿರುವ ಈ ಕಥನಗೀತೆಯಲ್ಲಿ ಕೆಂಚವ್ವಳ ತ್ಯಾಗ, ಪತಿಯ ಮೇಲಿರುವ ಪ್ರೀತಿ, ಕಾಳಜಿ ಕಣ್ಣಿಗೆ ಕಟ್ಟುವಂತೆ ಎದ್ದು ಕಾಣುತ್ತದೆ.

ಮದಗದ ಕೆಂಚವ್ವಳ ಕಥನಗೀತೆ ಹಾಗೂ ಮದಗದ ಕೆಂಚವ್ವಳ ಕಥಾಸಾರ ಎರಡನ್ನೂ ಅವಲೋಕಿಸಿದಾಗ ಕೆಂಚವ್ವಳ ಗಂಡನ ಹೆಸರು ಮಲ್ಲನಗೌಡರ ಮಗ ವೀರಬಸನಗೌಡ ಎಂದು ತಿಳಿದರೆ, ಮತ್ತೊಂದರಲ್ಲಿ ಗೂಳೇಶನೆಂದು ಹೆಸರಿಸಲಾಗಿದೆ. ಅದೇನೆ ಇದ್ದರೂ ಎರಡೂ ಕಥನಗೀತೆಗಳ ಆಶಯ ಒಂದೇ ಆಗಿರುವ ಕಾರಣ ಜನಪದರು ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಂಡು ಬಂದಿರಬಹುದೆನಿಸುತ್ತದೆ.

ಮಾವ ಕಟ್ಟಿಸಿದ ಕೆರೆಗೆ ಬಲಿಯಾದ ಸೊಸೆಯೊಬ್ಬಳ ಈ ಕಥೆ ಜನಪ್ರಿಯಾವಾಗಿದೆ ಮತ್ತು 'ಕೆರೆಗೆಹಾರ' ಕಥನ ಗೀತೆಯನ್ನೇ ಹೋಲುತ್ತದೆ. ಈ ಕಥೆಯನ್ನು ಹ.ಮು. ತಳವಾರ

ಅವರು ಬರೆದಿರುವ 'ಮದಗದ ಕೆಂಚಮ್ಮ'ಳ ಸಂಕ್ಷಿಪ್ತ ಕಥಾಸಾರ ಕೃತಿಯನ್ನು ಆಧರಿಸಿ ಮತ್ತು ಕೆಂಚಮ್ಮನ ಗುಡಿಯ ಪೂಜಾರಿಯ ಹೇಳಿಕೆಯನ್ನು ಆಧರಿಸಿ ಮದಗದ ಕೆಂಚಮ್ಮಳ ಕಥೆಯನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

ಕೆಂಚಮ್ಮಳನ್ನು ಬಲಿ ಕೊಡುವ ಕಥೆಯ ಹಿನ್ನೆಲೆ :

ಮಾಸೂರಿಗೆ ಬಂದ ಪುಟ್ಟನಗೌಡ್ರು, ಮಗಳು ಕೆಂಚಮ್ಮಳನ್ನು ಮಲ್ಲನಗೌಡ್ರ ಮನೆಗೆ (ಮಾಸೂರಿಗೆ) ಕೊಡಬೇಕೆಂದು ಆಸೆ ಇತ್ತು. ಆದರೆ ಅವರು ಶ್ರೀಮಂತರೆಂದು ಸುಮ್ಮನಿದ್ದರಂತೆ. ಮಲ್ಲನಗೌಡರಿಗೂ ಕೆಂಚಮ್ಮಳನ್ನೇ ಸೊಸೆಯಾಗಿ ಸ್ವೀಕರಿಸಬೇಕೆಂಬ ಆಸೆ ಇತ್ತು. ಇಬ್ಬರ ಆಸೆಯ ಮೇರೆಗೆ ವೀರಬಸನಗೌಡ (ಮಲ್ಲನಗೌಡನ ಹಿರಿ ಮಗ) ಮತ್ತು ಕೆಂಚಮ್ಮಳಿಗೆ ಮದುವೆ ಮಾಡಿದರು. ಮಕ್ಕಳು, ಸೊಸೆ ಕೆಂಚಮ್ಮ, ಹೆಂಡತಿಯರೊಡನೆ ಕಾಲ ಕಳೆಯುತ್ತಿರುವಾಗ ಬರಗಾಲ ಅಪ್ಪಳಿಸಿತು. ನೀರಿನ ಕೊರತೆ, ಆಹಾರದ ಕೊರತೆ ಕಂಡ ಮಲ್ಲನಗೌಡರು ಬಡವರಿಗೆ ಸಹಾಯ ಮಾಡಬೇಕೆಂದು ಕೆರೆ ಕಟ್ಟಿಸುವುದಕ್ಕೆ ಮುಂದಾದರು. ಈ ವಿಚಾರವನ್ನು ವೀರಬಸನಗೌಡ ಪ್ರಸ್ತಾಪಿಸಿದಾಗ, ಪ್ರತ್ಯೇಕ ಕೆರೆ ಕಟ್ಟಿಸದೆ ವಿಜಯನಗರದ ಅರಸ ವೀರನಪತಿ ಕೃಷ್ಣರಾಯನ ಅಧೀನರಾದ ಕೆಳದಿರಾಜ ಸದಾಶಿವನಾಯಕನು ಕಟ್ಟಿಸಿದ ಕೆರೆ ಬತ್ತಿದೆ. ಇದನ್ನೇ ಜೀರ್ಣೋದ್ಧಾರ ಮಾಡಿ ನೀರು ಬರುವಂತೆ ಮಾಡಿದರೆ ಪುಣ್ಯ ಬರುವುದು" ಎಂದು ಹೇಳಿದನು. ಇದಕ್ಕೆ ಒಪ್ಪಿ ಕೆರೆ ಮಣ್ಣು ತೆಗೆಸುತ್ತಾ ಹೋದಂತೆ ಗುಡಿಯ ಕಂಚಿನ ಕಳಸ ಸಿಕ್ಕಿತಂತೆ, ಗುಡಿ ಕಾಣಿಸಿತಂತೆ, ಪಾವಟಿಗೆಗಳು ಕಂಡವಂತೆ. ಇದನ್ನೆಲ್ಲ ಕಂಡರೆ ವಿಜಯನಗರಕ್ಕೆ ಸಂಬಂಧಿಸಿದಂತೆ ಕುರುಹುಗಳೇನಾದರೂ ಬರಬಹುದು ಎನಿಸುತ್ತದೆ. ಅದನ್ನು ವಿಜಯನಗರದ ವಿದ್ಯಾರಣ್ಯ ಅಂದರೆ ಮಾಧವಾಚಾರ್ಯರ ಕಾಲಕ್ಕೆ ಸ್ಥಾಪನೆಯಾಗಿ, ಹಕ್ಕ-ಬುಕ್ಕರೆಂಬ ಕರ್ತರು ಆಗಿಹೋದ ನಂತರ, ರಾಮರಾಜನ ವಂಶದ ವೀರನರಪತಿ ಕೃಷ್ಣರಾಯನ ಅಧೀನರಾದ ಸದಾಶಿವನಾಯಕನು ಈ ಕೆರೆಯನ್ನು ಕಟ್ಟಿಸಿದನೆಂದು ತಿಳಿಯಲಾಯಿತು. ಈ ಬಾವಿಯಲ್ಲಿಯ ಮಣ್ಣನ್ನು ಸಂಪೂರ್ಣ ತೆಗೆದರೂ ನೀರು ಬರದ ಕಾರಣ ಮಲ್ಲನಗೌಡರಿಗೆ ನಿದ್ರೆ, ಊಟವಿಲ್ಲದೇ ಅದೇ ವಿಚಾರದಲ್ಲಿ ಕುಳಿತರು.

ಕೆಂಚಮ್ಮಳನ್ನು ಕೆರೆಗೆ ಬಲಿ ಕೊಡಲು ಗಂಗೆ ಕೇಳಿದ ಪ್ರಸಂಗ:

ಮಲ್ಲನಗೌಡರು ಒಂದು ದಿನ ಇದ್ದಕ್ಕಿದ್ದಂತೆ, ಎದ್ದವರೆ ಈ ಅಪಕೀರ್ತಿಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಗಂಗೆಯನ್ನು ಕೇಳಿ, ನೀರು ಪಡೆಯಲು ನನ್ನ ಪ್ರಾಣವನ್ನಾದರೂ ಆಹುತಿ ಕೊಟ್ಟು ಪಡೆಯುತ್ತೇನೆಂದು ಖಡ್ಗ ಹಿಡಿದು ಗಂಗೆಯ ಕೆರೆಯ ಹತ್ತಿರ ಹೋಗಿ

ನಮಸ್ಕರಿಸಿ, ಬಗೆಬಗೆಯಾಗಿ ಕೇಳಿದರೂ ಪ್ರತ್ಯಕ್ಷವಾಗುವುದಿಲ್ಲ. ಆದಕಾರಣ ಕೈಯಲ್ಲಿರುವ ಖಡ್ಗವನ್ನು ಹಿಡಿದು ತಮ್ಮ ಶಿರಸ್ಸನ್ನು ಕಡಿದುಕೊಳ್ಳಲು ಮುಂದಾದರು. ಅಷ್ಟರಲ್ಲಿ ಗಂಗಾ ಮಾತೆ ಪ್ರತ್ಯಕ್ಷಳಾಗಿ "ನಿನ್ನ ಬಯಕೆ ಪೂರ್ಣವಾಗಬೇಕಾದರೆ ನಿನ್ನ ಹಿರಿಸೊಸೆ ಕೆಂಚಮ್ಮಳನ್ನು ಆಹುತಿ ಕೊಡಬೇಕು. ಏಕೆಂದರೆ ಕೆಳದಿರಾಜನು ಈ ಹಿಂದೆ ೧೦೧ ಕನ್ನಿಕೆಯರ ಬಲಿ ಕೊಡಲು ಸಿದ್ಧನಿದ್ದನು. ಅದನ್ನು ರೇಣುಕರು ಬಿಡಿಸಿ, ಒಬ್ಬ ಮಹಾ ಪತಿವ್ರತೆಯಿಂದ ಈ ಕೆರೆ ಜಲಮಯವಾಗುವುದು ಹಾಗೂ ಅವಳಿಗೆ ಜೀವನ ಮುಕ್ತಿ ದೊರಕುವುದೆಂದು ಹೇಳಿರುವರು. ಆದ್ದರಿಂದ ನೀನು ಅವಳನ್ನು ಹಾರ ಕೊಡಬೇಕೆಂದು ಕೇಳಿದಳು."[೪೨]

ಮಹಿಳೆಗೆ ಪಾತಿವ್ರತ್ಯ, ಮುಕ್ತಿ ಎಂದು ಹೇಳಿ ಅಮಾಯಕರನ್ನು ಬಲಿ ಕೊಟ್ಟು ಜನರನ್ನು ಮೌಢ್ಯತೆಗೆ ಗುರಿ ಮಾಡುವುದು ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಮಾರಕವಾಗಿದೆ.

ಮಲ್ಲನಗೌಡರು ಹಿರಿಸೊಸೆಯನ್ನು ಕೊಟ್ಟರೆ ಹಿರಿತನಕ್ಕೆ ಯಾರೂ ಇಲ್ಲ. ಮನೆಯ ಸಕಲ ಸಂಪತ್ತನ್ನು ಕೇಳು ದೇವಿಯೆಂದು ಕೇಳಿದಾಗ "ಅದು ಅಸಾಧ್ಯವಾದ ಕೆಲಸ. ಈ ಕೆರೆಯಲ್ಲಿ ರಾಕ್ಷಸರು ಮನುಷ್ಯರನ್ನು ತಿಂದು ನೀರು ಕುಡಿದಿದ್ದರಿಂದ ನಾನು (ಗಂಗೆ) ಸಹ ಮುಕ್ತಿ ಹೋಗದೇ ಉಳಿದಿದ್ದೇನೆ. ಹರ ಗಿರಿಜೆಯನ್ನು ಕೂಡಿಸಲು ಮನ್ಮಥ ಭಸ್ಮವಾದ ಲೋಕೋಪಕಾರಕ್ಕಾಗಿ. ಅದಕ್ಕಾಗಿ ಒಬ್ಬರ ಬಲಿಯಾದರೆ ದುಃಖಿಸಬಾರದು. ಅದು ಪುಣ್ಯದ ಕೆಲಸ" ಎಂದು ನುಡಿದಳು. ಗೌಡರು ಅದಕ್ಕೆ ಒಪ್ಪಿ ಕೆಂಚಮ್ಮಳನ್ನು ಕೆರೆಗೆ ಹಾರ ಕೊಡಲು ನಿಶ್ಚಯಿಸಿಕೊಂಡು. ದುಃಖಿಸುತ್ತಾ ಮನೆಗೆ ಬಂದು ಮಲಗಿದರು.

ಮಲ್ಲನಗೌಡ ಮಗ ಬಸನಗೌಡನನ್ನು ಕರೆದು ಪ್ರತಿ ವರ್ಷದಂತೆ ಮಲೆನಾಡಿಗೆ ಹೋಗಿ ಹಣ ಕೊಟ್ಟು ಬರಲು ತಿಳಿಸಿದನು. ಆಗ ಅವನು ನೇರವಾಗಿ ರಟ್ಟಿಹಳ್ಳಿಗೆ ಹೋಗಿ ಕೆಂಚವ್ವಳನ್ನು ನೋಡಿಕೊಂಡು ಹೋದನು. ಇವನು ಹೋದ ನಂತರ ಕೆಂಚಮ್ಮ ಗಂಡು ಮಗುವಿಗೆ ಜನ್ಮ ನೀಡಿದಳು. ಮಗುವಿಗೆ ಮಲ್ಲನಗೌಡರು ತಮ್ಮ ತಂದೆ ಹೊನ್ನೇಗೌಡರ ಹೆಸರನ್ನು ನಾಮಕರಣ ಮಾಡಿದರು.

---

೪೨. ಮದಗದ ಕೆಂಚಮ್ಮನ ಸಂಕ್ಷಿಪ್ತ ಕಥಾಸಾರ : ಹ.ಮು. ತಳವಾರ, ಪು.೭

ಮದಗದ ಕೆರೆಗೆ ಬಲಿಯಾಗುವಾಗ ಕೆಂಚಮ್ಮಳ ಪ್ರಲಾಪ :

ಮಾವನ ಮಾತನ್ನು ಕೇಳಿ ಕೆಂಚಮ್ಮ ತನ್ನ ಪತಿಯನ್ನು ನೆನೆ ನೆನೆದು ರೋಧಿಸಿದಳು. ತನ್ನ ಮಗುವನ್ನು ಕುರಿತು "ಮಗು ನಿನ್ನ ಹಣೆಯಲ್ಲಿ ನೀ ಹುಟ್ಟಿದ ಕೂಡಲೇ ತಾಯಿಯನ್ನು ಕೆರೆಗೆ ಹಾರ ಕೊಡಬೇಕೆಂದು ಬರೆದಿರುವುದೇ, ತಾಯಿ ಮಕ್ಕಳು ಅಗಲಬೇಕೆಂದು ಇರುವುದೇ, ತಾಯಿ ಇಲ್ಲದ ತಬ್ಬಲಿಯಾಗೆಂದು ವಿಧಿ ಲಿಖಿತವಿರುವುದೇ, ತಂದೆ–ತಾಯಿ–ಮಗ ಮೂವರು ಸೇರಬಾರದೆಂದು ಇರುವುದೇ, ನಿನ್ನ ತಂದೆಯವರು ಬಂದರೆ ಏನೆಂದು ಹೇಳುವೆ ಮಗು, ನನ್ನ ಒಬ್ಬನನ್ನೇ ಬಿಟ್ಟು ಹೋಗಿರುವಳೆಂದು ಹೇಳುವೆಯಾ, ಹೀಗೆ ಮಾಡುವುದಾದರೆ ಮೊದಲೇ ಏಕೆ ನನಗೆ ಜನ್ಮ ನೀಡಬೇಕಿತ್ತು ಎಂದು ಹೇಳುವೆಯಾ, ಕರುಣೆ ಇಲ್ಲದ ತಾಯಿ, ಮಗನ ಮೇಲೆ ಮಮತೆ ಇಲ್ಲದ ತಾಯಿ, ಎಂದು ಹೇಳುವೆಯಾ, ಹೇಳು ಮಗು, ಏನೆಂದು ಹೇಳುವೆ ಹೇಳು"[೪೩] ಎಂದು ಮಾಂಸದ ಮುದ್ದೆಯಂತಿರುವ ಅರಿಯದ ಮಗುವಿಗೆ ತನ್ನೊಳಗಿನ ನೋವನ್ನು ಹೇಳುವುದರೊಂದಿಗೆ ಮಗುವನ್ನು ತಬ್ಬಲಿ ಮಾಡಿ ಹೋಗುವೆನೆಂದು ಪ್ರಲಾಪಿಸುವಳು. ತಿಳುವಳಿಕೆಯುಳ್ಳ ಸಮಾಜದ ಜೊತೆಗೆ ಹೇಳಿಕೊಂಡರೆ ಯಾವ ಪ್ರಯೋಜನ ಇಲ್ಲ. ಏಕೆಂದರೆ ಒಂದು ಜೀವಕ್ಕೆ ಮಹತ್ವ ಕೊಡದೇ ತಮಗೆ ಒದಗಿ ಬಂದ ಹಣೆಬರಹ ಎಂದು ಹೇಳುವವರನ್ನು ಅದೆಷ್ಟೋ ಜನರನ್ನು ಕಾಣಬಹುದು. ಅದಕ್ಕಾಗಿ ಆ ಹಸುಳೆಯ ಮುಂದೆ ತನ್ನ ನೋವನ್ನು ತೋಡಿಕೊಳ್ಳುತ್ತಾ ತನ್ನ ಕುಟುಂಬ ನಶ್ವರವಾಗುವುದರ ಬಗೆಗೆ ವ್ಯಥೆಪಟ್ಟಳು.

ಕೆಂಚಮ್ಮ ಬಲಿಯಾದ ಬಗೆ :

ಬಂಗಾರದ ಒಳಲನ್ನು ಮಾವಯ್ಯ ಕೆರೆಯ ಹತ್ತಿರವೇ ಬಿಟ್ಟು ಬಂದು ಕೆರೆಯ ಏರಿಯ ಮೇಲೆ ಬಂದು ಬೇರೆ ಯಾರನ್ನೂ ಕಳಿಸಲು ಒಪ್ಪದೇಸ ಕೆಂಚಮ್ಮಳನ್ನು ಕಳುಹಿಸಲು ಮುಂದಾಗುತ್ತಾನೆ. ಕೆಂಚಮ್ಮ ಆಗ ತನ್ನನ್ನೇ ಕಳುಹಿಸುವ ಉದ್ದೇಶವನ್ನು ಅರಿತಳು. ಆದ ಕಾರಣ ಮಾವಯ್ಯ, ನಾನು ನಿರಾಕರಿಸುವುದಿಲ್ಲ, ನಿನ್ನ ಆಸೆಯನ್ನು ಈಡೇರಿಸುತ್ತೇನೆ. ನನ್ನ ಮಗುವನ್ನು ಸರಿಯಾಗಿ ಕಾಪಾಡು. ಮಗು ಇನ್ನು ಮುಂದೆ ಅಮ್ಮ ಇಲ್ಲವೆಂದು ಕೊರಗಬೇಡ, ಇವರೇ ನಿನಗೆ ತಂದೆ–ತಾಯಿ. ನನ್ನ ತಂದೆ–ತಾಯಿ ಬಂದು ಕೇಳಿದರೂ ಕೆರೆಗೆ ಆಹುತಿಯಾದೆನೆಂದು ಹೇಳಬೇಡ ಎಂದು ದುಃಖಿಸುತ್ತಾ ಮಾವಯ್ಯನಿಗೆ, ಅತ್ತೆಗೆ, ಕೂಡಿರುವ

---

೪೩. ಮದಗದ ಕೆಂಚಮ್ಮನ ಸಂಕ್ಷಿಪ್ತ ಕಥಾಸಾರ : ಹ.ಮು. ತಳವಾರ, ಪು.೧೨

ಜನಕ್ಕೆಲ್ಲಾ ನಮಸ್ಕಾರ ಮಾಡುತ್ತಾ ಕೆರೆಯಲ್ಲಿ ಇಳಿದಳು. ಆಗ ಜನರೆಲ್ಲರೂ ಕೆಂಚಮ್ಮಾ, ಕೆಂಚಮ್ಮಾ ಎಂದು ಕೂಗುತ್ತಾ ಕಣ್ಣೀರು ಗರೆದರು. ಅಂದಿನಿಂದ ಕೆಂಚಮ್ಮ ಬಡವರಿಗೆ ಹಿತವಾಗುವ ಕೆಲಸ-ಕಾರ್ಯಗಳನ್ನು, ಮಕ್ಕಳಿಲ್ಲದವರಿಗೆ ಮಕ್ಕಳನ್ನು, ಮದುವೆಯಾಗದವರಿಗೆ ಮದುವೆಯನ್ನು ನೆರವೇರಿಸುತ್ತಾ ಕೆರೆಯ ಏರಿಯ ಮೇಲೆ ಇಂದಿಗೂ ದೇವತೆಯಾಗಿ ಪೂಜೆಗೊಳಗಾಗಿರುವಳು.

ಕೆಂಚಮ್ಮಳ ವಾಣಿ :

"ನಿಮ್ಮ ಲಗ್ನ ಕಾರ್ಯಗಳಿಗೆ ಬೇಕಾಗುವ ಒಡವೆ, ಹಣವನ್ನು ತೆಗೆದುಕೊಂಡು ಹೋಗಿರಿ ಹಾಗೂ ನೀವು ಕೇಳಿದ ಅವಧಿಗೆ ತಕ್ಕಂತೆ ತಂದು ಮುಟ್ಟಿಸಿರಿ. ಒಂದು ವೇಳೆ ಹಣ ತಂದು ಮುಟ್ಟಿಸದಿದ್ದರೆ, ನಿಮ್ಮ ವಂಶವೇ ನಾಶವಾಗುತ್ತದೆ" ಎಂದು ಕೆಂಚಮ್ಮಳ ವಾಣಿ-ಯಾಗಿತ್ತು. ಇದು ಪ್ರಾಮಾಣಿಕತೆಯನ್ನು ಬಿತ್ತರಿಸುತ್ತದೆ. ಮತ್ತು ನುಡಿದಂತೆ ನಡೆದ ಶರಣರು ನೆನಪಿಗೆ ಬರುವರು. ಪ್ರಾಮಾಣಿಕವಾಗಿದ್ದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಅವರು ನಾಶವಾಗುತ್ತಾರೆ. ಅವರ ಕುಲವು ನಾಶವಾಗುತ್ತದೆ ಎಂಬುದನ್ನು ತಿಳಿಸುತ್ತದೆ.

ಕೆಂಚಮ್ಮಳ ವಾಣಿಗೆ ವಿರೋಧವಾಗಿ ನಡೆದದ್ದರ ಪರಿಣಾಮವಾಗಿ ಮಾದರ ದುರುಗಣ್ಣ ಕಲ್ಲಾದನು. ಕುದುರೆಯು ಕಲ್ಲಾಗಿ ನಿಂತದ್ದು. ಇದಕ್ಕೆ ಸಾಕ್ಷಿಯಾಗಿ ಇವೆರಡೂ ಕಲ್ಲುಗಳು ಇಂದಿಗೂ ಇವೆ.

ಮದಗದ ಕೆಂಚಮ್ಮಳ ದೇವಸ್ಥಾನ ಸ್ಥಾಪನೆ :

ಇದನ್ನು ೨೬.೦೨.೧೯೮೨ನೇ ಶುಕ್ರವಾರ ಪ್ರತಿಷ್ಠಾಪನೆ ಮಾಡಲಾಯಿತು. ಮದಗದ ಕೆರೆಯನ್ನು ವಿಜಯನಗರ ಅರಸ ವೀರನರಪತಿ ಕೃಷ್ಣದೇವರಾಯನ ಅಧೀನ ಕೆಳದಿ ಅರಸನಾದ ಸದಾಶಿವನಾಯಕನು ಕಟ್ಟಿಸಿದನೆಂದು ಅನೇಕ ನಾಟಕ, ದೊಡ್ಡಾಟಗಳಿಂದ ತಿಳಿದುಬರುತ್ತದೆ.

ಹೀಗೆ ಕಥನಗೀತೆಗಳಲ್ಲಿ ಮಹಿಳೆ ಬಲಿಯಾಗಲು ಹಲವಾರು ಕಾರಣಗಳಿದ್ದವೆಂಬುದು ಸೂಕ್ಷ್ಮವಾಗಿ ಅವಲೋಕಿಸಿದಾಗ ತಿಳಿದುಬರುತ್ತವೆ. ಅವುಗಳೆಂದರೆ:

- ಜ್ಯೋತಿಷ್ಯದ ಬಲೆಗೆ ಸಿಗುವುದು
- ಅನಕ್ಷರತೆ

- ವೈಚಾರಿಕ ಪ್ರಜ್ಞೆಯ ಕೊರತೆ
- ಮೂಢ ನಂಬಿಕೆಗಳು, ಸಂಪ್ರದಾಯಗಳು
- ಯಜಮಾನಿಕೆಯ ಸಂಸ್ಕೃತಿ

ಇತ್ಯಾದಿ ಕಾರಣಗಳಿಂದ ಮಹಿಳೆ ಕೆರೆಗೆ ಬಲಿಯಾಗುತ್ತಾಳೆ. ಇವೆಲ್ಲ ಅಂಶಗಳ ಕೊರತೆಯಿಂದ ಜನರು ಅಜ್ಞಾನದಲ್ಲಿ ಸಿಲುಕಿ ಸಾಮಾಜಿಕ ವ್ಯವಸ್ಥೆಯನ್ನು ವೈಚಾರಿಕ ನೆಲೆಯಲ್ಲಿ ಅಧ್ಯಯನ ಮಾಡುವುದರಿಂದ ಬಹಳ ದೂರವಿದ್ದರು. ಆದ್ದರಿಂದ ಕೆರೆ, ಕೋಟೆಗೆ ಬಲಿಯಾಗಲು ಮಹಿಳೆಯನ್ನು ಪ್ರಾಣಿಯಂತೆ ತಿಳಿದು ದೂಡುತ್ತಿದ್ದರು.

ನಾಡಿಗಾಗಿ, ಊರಿನ ರಕ್ಷಣೆಗಾಗಿ ಪರಕೀಯರ ವಿರುದ್ಧ ಹೋರಾಡಿ ಕಾಪಾಡಿಕೊಳ್ಳಲು ಪ್ರಯತ್ನಿಸಿ ತಮ್ಮ ಜೀವ, ಜೀವನವನ್ನೇ ತ್ಯಾಗ ಮಾಡಿದವರು ಐತಿಹಾಸಿಕ ನೆಲೆಯಲ್ಲಿ ಚಿರಸ್ಥಾಯಿಯಾಗಿ ನಿಂತವರು ವೀರರು, ವೀರ ಮಹಿಳೆಯರನ್ನು ಐತಿಹಾಸಿಕ ಕಥನಗೀತೆಗಳಲ್ಲಿ ಕಾಣುತ್ತೇವೆ. **ಉದಾ:** ಕಿತ್ತೂರ ಚೆನ್ನಮ್ಮ, ಸರ್ಜಪ್ಪನಾಯಕ, ಸಂಗೊಳ್ಳಿ ರಾಯಣ್ಣ, ಮಾಗಡಿ ಕೆಂಪೇಗೌಡ ಮುಂತಾದವರು ಪ್ರಮುಖರಾದವರು.

ಭಾರತ ದೇಶವನ್ನು ಸುತ್ತಾಡಿದ ಅನೇಕ ಪ್ರವಾಸಿಗರು ತಾವು ಪ್ರತ್ಯಕ್ಷ ಕಂಡ ಸತಿಪದ್ಧತಿಯ ಅನೇಕ ಪ್ರಸಂಗಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಆಳ್ವಿಕೆಯ ಅವಧಿಯಲ್ಲಿ (೧೬೫೮) ಬಂದ ಫ್ರಾನ್ಸ್ ದೇಶದ ಪ್ರವಾಸಿ ಫ್ರಾನ್ಸ್‌ಸ್ವಾಸ್ ಬೆರ್‌ನ್ಯೇನ್ ಒಂದು ಪತ್ರದ ವರದಿ ಸತಿಪದ್ಧತಿಯ ಕ್ರೌರ್ಯಕ್ಕೆ ಸಾಕ್ಷಿಯಾಗಿದೆ. ೧೬೬೩ರ ಸುಮಾರು ಈತ ಪ್ರತ್ಯಕ್ಷವಾಗಿ ನೋಡಿ ಬರೆದ ವರದಿ ಹೀಗಿದೆ: "ಚಿತೆಯಲ್ಲಿ ಬೀಳಲು ಮುಂದಾದ ಹೆಂಗಸನ್ನು ತಡೆಯುವುದಕ್ಕಾಗಲಿ ಅಥವಾ ಬ್ರಾಹ್ಮಣರ ಹಿಡಿತದಿಂದ ಆಕೆಯನ್ನು ಬಿಡಿಸುವುದಕ್ಕಾಗಲಿ ಯಾವ ಮೊಘಲ್ ಚಕ್ರವರ್ತಿಯೂ ಧೈರ್ಯ ಮಾಡಲಾರ. ಆದರೆ ಎಲ್ಲಿ ಸಾಧ್ಯವೋ ಅಲ್ಲಿ ಪೋರ್ಚುಗೀಸರು ಅನೇಕ ವಿಧವೆಯರನ್ನು ಬದುಕಿಸಿದ್ದಾರೆ. ಆ ಬಡಪಾಯಿ ಹೆಂಗಸರನ್ನು ಚಿತೆಗೆ ಆಹುತಿ ಮಾಡುವುದನ್ನು ಕಂಡಾಗ ನನಗೆ ರೋಷ ಉಕ್ಕಿ ಬಂದು..... ಪರಿತಪಿಸುತ್ತೇನೆ."[೪೪] ಎಂದು ಹೇಳುತ್ತಾನೆ.

ಈತನು ನೀಡಿದ ವರಿದಯ ಪ್ರಕಾರ ಶ್ರೇಣೀಕೃತ ವ್ಯವಸ್ಥೆಯಲ್ಲಿ ಬಡ ಮಹಿಳೆಯರು ಹಾಗೂ ಕಡಿಮೆ ಕುಲದಲ್ಲಿ ಜನಿಸಿದ ಮಹಿಳೆಯರನ್ನು ಸಮಾಜದಲ್ಲಿ ಚಿತೆಗೆ ಹಾರಲು

---

೪೪. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ: ದೇವೇಂದ್ರಕುಮಾರ ಹಕಾರಿ, ಪು.೨೩೫

ಪ್ರೇರೇಪಿಸುತ್ತಿದ್ದರು ಅಥವಾ ಸ್ವತಃ ಅವರೇ ಒತ್ತಾಯದಿಂದ ಚಿತೆಗೆ ಆಹುತಿ ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇಂತಹ ಕ್ರೂರ ಪದ್ಧತಿಯು ವಿದೇಶದವರಿಗೆ ಹಿಡಿಸದೇ ಹೋಯಿತು. ಏಕೆಂದರೆ ಪೋರ್ಚುಗೀಸರು ಅನೇಕ ವಿಧವೆಯರನ್ನು ಬದುಕಿಸಿದ್ದಾರೆ ಎಂಬುದರ ಮೂಲಕ ಹಾಗೂ ಫ್ರಾನ್ಸ್‌ಸ್ವಾಸ್ ಬೆರ್‌ನ್ಯೇನ್ ವರದಿಯ ಮೂಲಕ ಅವರು ಮಹಿಳೆಯರ ಮೇಲೆ ಎಷ್ಟು ಕಾಳಜಿ, ಮಾನವೀಯತೆಯನ್ನು ಹೊಂದಿದ್ದರೆಂಬುದು ತಿಳಿದುಬರುತ್ತದೆ. ಭಾರತೀಯರಲ್ಲೇ ಮಾನವೀಯತೆ, ಮಹಿಳಾಪರ ಕಾಳಜಿ ಕಂಡುಬರದೇ ಇರುವುದು ದುರಂತ.

ಸಾಮಾಜಿಕ ವ್ಯವಸ್ಥೆಯು ವಿವಿಧ ಆದರ್ಶ, ಉದ್ದೇಶ ಹಾಗೂ ಅವುಗಳನ್ನು ಈಡೇರಿಸಿಕೊಳ್ಳುವ ಕ್ರಮ, ನಿರೀಕ್ಷಿಸುವ ಪರಿಣಾಮ ಅಥವಾ ಫಲಿತಾಂಶಗಳೆಲ್ಲವನ್ನು ಒಳಗೊಂಡಿರುತ್ತದೆ. ಇವೆಲ್ಲವೂ ಸಮಾಜದ ಏಳ್ಗೆಗಾಗಿ, ವ್ಯಕ್ತಿತ್ವದ ಬೆಳವಣಿಗೆಗಾಗಿಯೇ ಎಂಬುದು ಪ್ರಶ್ನಾತೀತ. ಈ ಎಲ್ಲ ನೆಲೆಗಳಲ್ಲಿ ಸ್ತ್ರೀ ಪುರುಷರಿಬ್ಬರಿಗೂ ನಿಯಮಾವಳಿಗಳನ್ನು ಸಮಾನವಾಗಿ, ನ್ಯಾಯಯುತವಾಗಿ ಅನ್ವಯಿಸಲೆಂದು ರೂಢಿಸಲಾಗಿದೆ ಎಂದು ಸಾರಲಾಗಿದೆ. ಆದರೂ ಕೂಡಾ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ನಿಯಮಗಳಿಂದ ಆಯ್ಕೆ, ಒತ್ತಡಗಳು ಉಂಟಾಗುತ್ತಿವೆ. ಆದರೆ ಈ ಸಂಸ್ಥೆಗಳಲ್ಲಿ ಆಯ್ಕೆ ಬಹುಮಟ್ಟಿಗೆ ಪುರುಷ ಪರವಾಗಿ ಸ್ತ್ರೀ ವಿರೋಧವಾಗಿರುವುದು ಸ್ಪಷ್ಟವಾಗಿದೆ. ಹಿಂದೆ ಮತ್ತು ಇಂದೂ ಕೂಡ ಅಸಹಾಯಕ ಸ್ಥಿತಿಯಲ್ಲಿ ಸಿಕ್ಕು ಕಾನೂನು-ಕಟ್ಟಳೆಗೆ ಬಲಿಯಾದ ಮಹಿಳೆಯರನ್ನು ಕಾಣುತ್ತೇವೆ.

ಸಮಾಜದ ವ್ಯವಸ್ಥೆಯೆಂದರೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಆಡಳಿತಾತ್ಮಕ ಇತ್ಯಾದಿ ವ್ಯವಸ್ಥೆಗಳಿರಬಹುದು. ಮಾನವ ಸಮಾಜಜೀವಿ, ಸಂಘಜೀವಿಯಾದ ಕಾರಣ ಪ್ರತಿಯೊಬ್ಬರ ವ್ಯಕ್ತಿತ್ವ ನಿರ್ಮಾಣದಲ್ಲಿ ಎಲ್ಲ ವ್ಯವಸ್ಥೆ ಸಂಸ್ಥೆಗಳ ಪ್ರಭಾವ ಬೀರುತ್ತದೆ. ಸಮಾಜದ ವ್ಯವಸ್ಥೆಗಳು ಸಮಾನವಾಗಿದ್ದು, ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ಸಹಾಯಕವಾಗಿರಬೇಕೆ ಹೊರತು ದುಷ್ಪರಿಣಾಮ ಉಂಟು ಮಾಡುವಂತಹ ಮನೋಸ್ಥಿತಿ ಇರಬಾರದು. ಅಷ್ಟೇ ಅಲ್ಲದೇ ಮಾನವನು ಅವುಗಳನ್ನು ನ್ಯಾಯಯುತವಾಗಿ ಪಾಲಿಸುತ್ತಾ ಬಂದಾಗ ಮಾತ್ರ ಅದರ ಸಾರ್ಥಕತೆ ಉಂಟಾಗುತ್ತದೆ.

ಸಮಾಜದ ವಾತಾವರಣ ಮಾಲಿನ್ಯಗೊಳ್ಳುತ್ತಿರುವುದಕ್ಕೆ ಸಾಕಷ್ಟು ಘಟನೆಗಳು ದೊರಕುತ್ತವೆ. ಅಷ್ಟೇ ಅಲ್ಲದೆ ಮೇಲ್ವರ್ಗದವರು ಕೆಳವರ್ಗದ ಜನತೆಯನ್ನು ಶೋಷಣೆ ಮಾಡುತ್ತಾ ಬಂದಂತಹ ಅನೇಕ ದಾಖಲೆಗಳು ಸಿಗುತ್ತವೆ. ಮಹಿಳೆ ಸಮಾಜದಲ್ಲಿಯ

ನಿಂದನೆಗಳಿಗೆ ಗುರಿಯಾಗುತ್ತಿರುವುದು, ತಿಳಿದೋ, ತಿಳಿಯದೆಯೋ ಪುರುಷಪ್ರಧಾನ ಸಮಾಜದಲ್ಲಿ ಜೀವನ ಸಾಗಿಸುತ್ತಿರುವುದು ಶೋಚನೀಯ.

ಒಂದು ಜೀವವನ್ನು ಸೃಷ್ಟಿ ಮಾಡುವ ಶಕ್ತಿ ಮಹಿಳೆಗೆ ಇದೆ ಎಂದಾದರೆ ಅವಳಲ್ಲಿ ಖಂಡಿತವಾಗಿಯೂ ಅನಂತವಾದ ಶಕ್ತಿ ಇದೆ ಎಂದೇ ಅರ್ಥ. ಮಾತೃ ವಾತ್ಸಲ್ಯ, ಸಹನೆ, ಪ್ರೀತಿ, ತಾಳ್ಮೆ, ಆರೈಕೆ, ಸತ್ಕಾರ, ಸನ್ಮಾನ, ಸಾಂತ್ವನ ಮುಂತಾದ ಗುಣಗಳು ಆಕೆಯಲ್ಲಿ ಹುಟ್ಟಿನಿಂದಲೇ ಮೈಳೈಸಿಕೊಂಡು ಬಂದಿವೆ. ಸಮಾಜವು ಇರುವ ಪರಿಸ್ಥಿತಿಗಳು, ಕಟ್ಟು-ಪಾಡುಗಳಿಗೆ ಅಂಟಿಕೊಂಡೇ ಸಾಗುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಮಹಿಳೆ ಸ್ವಾವಲಂಬಿಯಾಗಿ ಜೀವನವನ್ನು ರೂಪಿಸಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ನಮ್ಮ ದೇಶದಲ್ಲಿ ಕೌಟುಂಬಿಕ ಪದ್ಧತಿ, ಸಂಸ್ಕೃತಿ, ಸಂಸ್ಕಾರಗಳು, ಕುಟುಂಬ ನಿರ್ವಹಣೆ ಮುಂತಾದ ಜವಾಬ್ದಾರಿಗಳನ್ನು ಹೊತ್ತು ಬಂದಿರುವ ಆಕೆಗೆ ಹಲವಾರು ನೀತಿ-ನಿಯಮಗಳು, ಕಟ್ಟುಪಾಡುಗಳನ್ನು ಸಮಾಜ ಹಾಕುತ್ತದೆ. ಇದರಿಂದಾಗಿ ಆಕೆ ಮನೆ, ಸಂಸಾರ, ಮಕ್ಕಳು, ಮನೆಯ ಕಟ್ಟುಪಾಡುಗಳು, ಹಬ್ಬ-ಹರಿದಿನ, ಸಂಸ್ಕಾರಗಳನ್ನು ಪಾಲಿಸುವಳು ಎಂದು ನಿರೂಪಿತವಾಗುತ್ತಾಳೆ. ಆದರೆ ಇಂದು ಕಾಲ ಬದಲಾಗಿದೆ. ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಣೆಗಾಗಿ ಸಮಾಜದಲ್ಲಿ ತಾನೂ ದುಡಿದು ಸಂಸಾರ ಸುಗಮವಾಗುವಲ್ಲಿ ಸಹಕರಿಸುತ್ತಿದ್ದಾಳೆ. ಅನಾದಿ ಕಾಲದಿಂದ ಹೊತ್ತು ಬಂದಂತಹ ಜವಾಬ್ದಾರಿಗಳೊಂದಿಗೆ ಪುರುಷರ ಸಮಾನವಾಗಿ ಹೊರಗಡೆ ದುಡಿಯಲು ತಾನು ಶಕ್ತಳು ಎಂಬುದನ್ನು ತೋರಿಸಿಕೊಟ್ಟಿದ್ದಾಳೆ ನಿಜ. ಆದರೆ ಪುರುಷರಿಗೆ ಸಿಗುತ್ತಿರುವ ಸಮಾನ ಅವಕಾಶಗಳು ಅವಳಿಗೆ ಇಲ್ಲವೆಂದೇ ಹೇಳಬಹುದು. ಏಕೆಂದರೆ ಬಹುಪಾಲು ಕುಟುಂಬಗಳಲ್ಲಿ ಮುಖ್ಯ ನಿರ್ಧಾರಗಳೆಲ್ಲವೂ ಮನೆಯ ಪುರುಷರದ್ದೇ ಆಗಿರುತ್ತದೆ ಹೊರತು, ಅವನೆದುರು ನಿಂತು ಮಾತನಾಡುವ ಶಕ್ತಿಯು ಕೂಡ ಇಲ್ಲದೇ ಮಾನಸಿಕವಾಗಿ ಕುಗ್ಗುತ್ತಿರುವ ಎಷ್ಟೋ ಮಹಿಳೆಯರನ್ನು ಕಾಣುತ್ತೇವೆ.

ಸಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಕೇವಲ ಒಂದು ಪರಿಕರ(ವಸ್ತು) ಎಂದು ಪರಿಗಣಿಸಲ್ಪಟ್ಟಿದ್ದಾಳೆ. ಆಡು, ಕುರಿ, ಕೋಳಿ, ಕೋಣಗಳನ್ನು ದೇವನಿಗೆ ಬಲಿ ಕೊಡುವಂತೆ ಮಹಿಳೆಯರನ್ನೂ ಬಲಿಪಶುವೆಂದೇ ಪರಿಗಣಿಸಿದೆ. ನಾಡಿನ, ಊರಿನ ಗ್ರಾಮದ ಅಭಿವೃದ್ಧಿಗಾಗಿ ಹೆಣ್ಣು ಬಲಿಯಾಗಿರುವಷ್ಟು ಬೇರೆ ಯಾವುದೇ ಪ್ರಾಣಿಗಳು ಬಲಿಯಾಗಿಲ್ಲವೆನಿಸುತ್ತದೆ. ಮಹಿಳೆಯು ಒಂಟಿತನ-ಅನಾಥಪ್ರಜ್ಞೆ, ಪ್ರತಿಭಟಿಸಲಾಗದ ಅಸಹಾಯಕತೆ, ಜನಪದ

ಸಮಾಜದಲ್ಲಿಯ ಅಸಮಾನತೆ, ಅಪಮೌಲ್ಯಗೊಂಡ ಸಾಮಾಜಿಕ ಆಚರಣೆಗಳೆಲ್ಲವು ತ್ಯಾಗ ಬಲಿದಾನದ ಹೆಸರಿನಲ್ಲಿ ಅನೇಕ ಮಹಿಳೆಯರ ಶೋಷಣೆಮಾಡಿವೆ ಎಂಬುದು ಬಿಂಬಿತ-ವಾಗುತ್ತದೆ.

ಮಹಿಳೆಯನ್ನು ಸಮಾಜದ ಹಿತಕ್ಕಾಗಿ ಬಲಿ ಕೊಡುವುದನ್ನು ರೂಢಿಸಿದರೆ, ಯಾವುದೇ ಮಹಿಳೆಯ ಬಲಿಯ ಹಿಂದೆ ಆಕೆಯ ತ್ಯಾಗ ಇರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಕಥನಗೀತೆಗಳಲ್ಲಿ ತ್ಯಾಗ-ಬಲಿ ಇವೆರಡೂ ಸಮತೂಕವಾಗಿ ಹೆಣ್ಣಿನ ಬಾಳಿನಲ್ಲಿ ನೆಲೆಸಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಹೆಣ್ಣು ಮತ್ತು ಗಂಡು ಇಬ್ಬರೂ ಜೀವನದ ಹಾಗೂ ಸಮಾಜದ ಎರಡು ಚಕ್ರಗಳಿದ್ದಂತೆ. ಎರಡೂ ಚಕ್ರಗಳು ಸರಿಯಾಗಿ ನಡೆದರೆ ಮಾತ್ರ ಸಮಾಜವೆಂಬ ರಥ ತೊಂದರೆಯಿಲ್ಲದೇ ಚಲಿಸುತ್ತದೆ. ಕುಟುಂಬ ನಿರ್ವಹಣೆಯ ಜವಾಬ್ದಾರಿಯನ್ನು ಕೇವಲ ಮಹಿಳೆಗೆ ವಹಿಸದೆ, ಸ್ತ್ರೀ-ಪುರುಷರಿಬ್ಬರೂ ಸಮಾನವಾಗಿ ಹಂಚಿಕೊಳ್ಳುವ; ಈ ಮೂಲಕ ಲಿಂಗ ಅಸಮಾನತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸುವುದು ಅತ್ಯಗತ್ಯ. ಮನೆಗೆಲಸಗಳು, ಕುಟುಂಬದ ಜವಾಬ್ದಾರಿ ಇತ್ಯಾದಿಗಳ ಹೆಚ್ಚುವರಿ ಹೊರೆಯಿಂದಾಗಿ ಮಹಿಳೆಯರಿಗೆ ಪುರುಷರಂತೆ ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಾಮಾಜಿಕ ವಲಯದಲ್ಲಿ ಮಹಿಳೆಯರ ಸಹಭಾಗಿತ್ವ ಕಡಿಮೆಯಾದಷ್ಟು ನಿಯಮ ರೂಪಿಸುವ ಸಂದರ್ಭಗಳಲ್ಲಿ ಅವರ ಪ್ರಾತಿನಿಧ್ಯವಿಲ್ಲದೆ, ಮಹಿಳೆಯರ ಹಕ್ಕುಗಳಿಗೆ ಧಕ್ಕೆಯಾಗುತ್ತಾ ಹೋಗುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಕಥನಗೀತೆಗಳು ಸ್ಪಷ್ಟಪಡಿಸುತ್ತವೆ. ಇಲ್ಲಿ ಗಂಡಿಗಿಂತ ಹೆಣ್ಣಿನ ಬಹುಮುಖಗಳ ಅನಂತದರ್ಶನ ಅನಾವರಣಗೊಂಡಿದೆ. ಅವುಗಳನ್ನು ಪ್ರಸ್ತಾಪಿಸುವುದರ ಮೂಲಕ ಅಂದಿನ ಸಮಾಜದಲ್ಲಿಯ ಹಾಗೂ ಇಂದಿನ ಸಮಾಜದ ಸ್ವರೂಪದಲ್ಲಿಯ ಬದಲಾವಣೆಗಳೊಂದಿಗೆ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ಸಮಾಜದ ಪಾತ್ರವನ್ನು ಕಥನಗೀತೆಗಳ ಮೂಲಕ ತಿಳಿಸಲಾಗಿದೆ.

ಅಧ್ಯಾಯ–೫

ಜನಪದ ಕಥನಗೀತೆಗಳಲ್ಲಿ ಹೆಣ್ಣು : ಆಚರಣಾತ್ಮಕ ನೆಲೆ

೫.೧. ದೈವಿಕ ಆಚರಣೆಗಳು

೫.೨. ತ್ಯಾಗದ ಆಚರಣೆಗಳು

೫.೩. ಬಲಿದಾನದ ಆಚರಣೆಗಳು

ಅಧ್ಯಾಯ – ೫

ಜನಪದ ಕಥನಗೀತೆಗಳಲ್ಲಿ ಹೆಣ್ಣು : ಆಚರಣಾತ್ಮಕ ನೆಲೆ

ಆಚರಣೆಗಳ ವ್ಯಾಪ್ತಿ ವಿಶಾಲವಾಗಿದ್ದು, ಆಚರಣೆಗಳು ಪ್ರಾಚೀನ ಕಾಲದಿಂದಲೂ ಸಮಾಜದಲ್ಲಿ ತನ್ನ ಛಾಪನ್ನು ಮೂಡಿಸಿಕೊಂಡು ಭದ್ರವಾದ ಬುನಾದಿಯನ್ನು ಹಾಕಿಕೊಂಡು ಬಂದಿವೆ. ಜನಪದ ಸಾಹಿತ್ಯದಿಂದಲೇ ಆಚರಣೆಗಳ ವ್ಯಾಪ್ತಿ ಬಹಳಷ್ಟು ದೊರಕುತ್ತದೆ. ಎಲ್ಲ ಸಂಪ್ರದಾಯಗಳಲ್ಲಿಯೂ ಕೂಡ ತಮ್ಮದೇಯಾದ ಆಚಾರ–ವಿಚಾರ, ನಡೆ–ನುಡಿ, ಸಂಪ್ರದಾಯಗಳನ್ನು ಜನಸಮೂಹವು ಆಚರಿಸಿಕೊಂಡು ಬಂದಿವೆ. ಆದ್ದರಿಂದ ಎಲ್ಲ ಆಚರಣೆಗಳನ್ನು ಒಪ್ಪಲೇಬೇಕಾದಂತಹ ಅವಶ್ಯಕತೆಯಿಲ್ಲವೆಂಬುದನ್ನು ನಾವು ವೈಜ್ಞಾನಿಕ ದೃಷ್ಟಿಕೋನದಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಕಾರಣ ಕೆಲವೊಂದು ಆಚರಣೆಗಳು ಇಡೀ ಸಮಾಜಕ್ಕೆ ಸಹಬಾಳ್ವೆ, ಸಂತೋಷ, ಸ್ಫೂರ್ತಿ ನೀಡಿದರೆ ಇನ್ನೂ ಕೆಲವೊಂದು ಆಚರಣೆಗಳು ಮಾರಕವಾಗಿ ನಿರೂಪಿತವಾಗುತ್ತವೆ. ಮಾನವನ ದುರ್ಬಲತೆಯಿಂದ ಮಾನವ ಕ್ಷೀಣಿಸುತ್ತಿದ್ದಾನೆ. ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವನು. ಕಥನಗೀತೆಗಳಲ್ಲಿ ನಮಗೆ ಹೆಚ್ಚು ಮೌಢ್ಯತೆಗೆ ಒಳಗಾಗಿ ಬೆಳೆದು ಬಂದ ಆಚರಣೆಗಳೇ ಸಿಗುತ್ತವೆ. ಊರಿನ ಹಿತಕ್ಕಾಗಿ ದೇವರ ಹೆಸರಿನಲ್ಲಿ ಅದೆಷ್ಟೋ ಅಮಾಯಕ ಹೆಣ್ಣುಮಕ್ಕಳು ಬಲಿಯಾಗಿರುವ, ದಾಖಲೆಗಳು ಸಿಗುತ್ತವೆ. ಅನಿಷ್ಟ ಆಚರಣೆ–ಸಂಪ್ರದಾಯಗಳಿಗೆ ಪ್ರಾಯಶಃ ಮಹಿಳೆಯರೇ ಬಹುಪಾಲು ಸಿಲುಕಿ ನರಳಿದವರು ಹಾಗೂ ನರಳುತ್ತಿರುವವರು ಎನಿಸುತ್ತದೆ. ಏಕೆಂದರೆ ಇಂದಿಗೂ ನಮಗೆ ಕೆಲವೊಂದು ಸಮಾಜದಲ್ಲಿ ಅನಿಷ್ಟ ಆಚರಣೆಗಳ ಸುಳಿಯಲ್ಲಿ ಸಿಕ್ಕು ನರಳುತ್ತಿರುವ ಬಹುತೇಕ ಮಹಿಳೆಯರು ಕಾಣಸಿಗುತ್ತಾರೆ.

ಕಥನಗೀತೆಗಳಲ್ಲಿ ಹೆಚ್ಚು ಸತಿಪದ್ಧತಿ ಆಚರಣೆಗಳು ಕಂಡು ಬರುತ್ತವೆ ಹಾಗೂ ಇದಕ್ಕೆ ಶಾಸನಗಳು ಕೂಡ ಸಾಕ್ಷಿಯಾಗಿವೆ. ಸಮಾಜದಲ್ಲಿ ತಲೆತಲಾಂತರದಿಂದ ರೂಢಿಯಲ್ಲಿರುವ ಮೂಢನಂಬಿಕೆಗಳು ಮಹಿಳೆಯನ್ನೇ ಹೆಚ್ಚು ಆವರಿಸಿವೆ. ಸಂಪ್ರದಾಯ ಮತ್ತು ನಂಬಿಕೆಗಳನ್ನು ಹುಟ್ಟು ಹಾಕುವುದು ಪ್ರಮುಖವಾಗಿ ಸಮಾಜದ ಪುರುಷ ಪ್ರಧಾನ ಪ್ರವೃತ್ತಿ. ಅದರಲ್ಲೂ ತಾನು ಬಲಿಯಾಗಬೇಕಾದ ಮೂಢ ನಂಬಿಕೆಗಳನ್ನು ಪೋಷಿಸಿಕೊಂಡ ಹೋಗುವುದು ಹೆಣ್ಣಿನ ಕರ್ತವ್ಯವಾಗಿ ಪರಿಗಣಿಸುವುದು ಸಮಾಜದ ವ್ಯವಸ್ಥೆಯ ವಿಪರ್ಯಾಸವೇ ಸರಿ. ತಾನು ಬಲಿಪಶುವಾಗುವ ಮೂಢನಂಬಿಕೆಗಳನ್ನು ನಿರಾಕರಿಸುವ, ಪ್ರತಿಭಟಿಸುವ ಬದಲು ಅವುಗಳನ್ನು ಪಾಲಿಸಿಕೊಂಡು ಹೋಗಬೇಕಾದ ಸಂದಿಗ್ಧ ಪರಿಸ್ಥಿತಿ ಸಮಾಜದಲ್ಲಿದೆ. ಉದಾ: "ಊಳಿಗಮಾನ್ಯ

ಪದ್ಧತಿ(ಸಮಾಜ ವ್ಯವಸ್ಥೆ)ಯಲ್ಲಿ ವಿಧವೆಯಾದ ಕೂಡಲೇ ಅವಳು ಹೊಸ ಒಡೆಯನನ್ನು ಒಪ್ಪಿಕೊಳ್ಳಬೇಕಾಗಿತ್ತು. ಚಾನ್ಸ್‌ನ್ಸ್‌ದ ಗೆಸ್ತೆ (Chansons Geste) ಕೃತಿಯಲ್ಲಿ ಸ್ಪೈನ್‌ನ ಜಮೀನ್ದಾರರನ್ನು ಕೊಂದು ಹಾಕಿದ ಚಾರ್ಲೆ ಮ್ಯಾಗ್ನೆ ಆ ಜಮೀನ್ದಾರರ ವಿಧವೆಯರನ್ನೆಲ್ಲಾ ತಾನೆ ಮದುವೆಯಾಗುವ ಪ್ರಸಂಗವಿದೆ. ರಾಜರುಗಳು, ಜಮೀನ್ದಾರರು, ಹುಡುಗಿಯರನ್ನು, ವಿಧವೆಯರನ್ನು ಕ್ರೂರವಾಗಿ ಕೊಲ್ಲುತ್ತಿದ್ದರೆಂದು ಹಲವು ಕಥನ ಕಾವ್ಯಗಳು ನಿರೂಪಿಸಿವೆ."[೧] ಊಳಿಗಮಾನ್ಯ ಪದ್ಧತಿಯ ಸಂದರ್ಭದಲ್ಲಿ ಮಹಿಳೆಯರ ಪರಿಸ್ಥಿತಿ ಶಾಪಗ್ರಸ್ತವಾಗಿತ್ತು. ಮಹಿಳಾ ಶೋಷಣೆಗೆ ಇನ್ನೊಂದು ಉದಾಹರಣೆ ಅನುಪಮಾ ನಿರಂಜನರ 'ಮಾಧವಿ' ಕಾದಂಬರಿ. ಈ ಕಾದಂಬರಿಯಲ್ಲಿಯೂ ಸಹಿತ ಯಯಾತಿ ಮಹಾರಾಜನು ಮಾಧವಿಯನ್ನು ತನ್ನ ಮಗಳು ಎಂದು ಕನಿಕರವಿಲ್ಲದೇ ಗಾಲವನಿಗೆ ದಾನವಾಗಿ ಕೊಡುತ್ತಾನೆ. ಗಾಲವ ಮಾಧವಿಯನ್ನು ಒಂದು ವಸ್ತು ಅಥವಾ ಭೂಮಿಯನ್ನಾಗಿ ತಿಳಿದು ಹರ್ಯಶ್ವ, ಉಶೀನರ, ದಿವೋದಾಸ ರಾಜರಲ್ಲಿ ಒಂದೊಂದು ಸಂವತ್ಸರ ಆಕೆಯನ್ನು ಇಟ್ಟು ಆಕೆಯಿಂದ ಒಂದೊಂದು ಮಗುವನ್ನು ಪಡೆದ ನಂತರ ತನಗೆ ಬೇಕಾದ ಗುರುದಕ್ಷಿಣೆಯನ್ನು ಪಡೆಯಲು ಮುಂದೆ ಹೋಗುತ್ತಿರುತ್ತಾನೆ. ಕೊನೆಗೆ ತನ್ನ ಗುರುವಾದ ವಿಶ್ವಾಮಿತ್ರನಲ್ಲಿ ಆಕೆಯನ್ನು ಕರೆದುಕೊಂಡು ಹೋದಾಗ ಆತನಿಂದಲೂ ಆಕೆಗೆ ಮಗುವೊಂದು ಜನಿಸುತ್ತದೆ. ಇಲ್ಲಿ ಇಡೀ ಪುರುಷ ಸಮಾಜ ತಮ್ಮ ಕಾಮತೃಷೆಗಾಗಿ ಆಕೆಯನ್ನು ಬಳಸಿಕೊಂಡ ನಿಕೃಷ್ಟ ಸಮಾಜ ಕಂಡುಬರುತ್ತದೆ. ಇಂತಹ ಪದ್ಧತಿ, ವ್ಯವಸ್ಥೆಗಳಿಗೆ ಸಿಲುಕಿ ಮಹಿಳೆಯರು ಜೀವಿಸುತ್ತಿದ್ದರು ಎಂಬ ಅರಗಿಸಲಾಗದ ಚಿತ್ರಗಳು ನಮ್ಮೆದುರಿಗೆ ಬಂದು ನಿಲ್ಲುತ್ತವೆ.

ಮನುಷ್ಯ ಹುಟ್ಟಿದಂದಿನಿಂದಲೇ ಕೆಲವೊಂದು ನಂಬಿಕೆಗಳನ್ನು, ಆಚರಣೆಗಳನ್ನು ಭದ್ರಪಡಿಸುತ್ತಾ ಮುನ್ನುಗ್ಗಿರುವನು. ಆದರೆ ಪ್ರಗತಿಪರವಾದ ಸಮಾಜದ ವಿಕಾಸಕ್ಕೆ ಅವು ಕುಂಠಿತವಾಗಿವೆ. ಆದ ಕಾರಣ ಅವುಗಳ ನಿರ್ಮೂಲನೆಯೊಂದಿಗೆ ವಿಕಾಸದ ಹಾದಿಗೆ ನಾಂದಿಯಾಗಬೇಕಾಗಿದೆ. ನಂಬಿಕೆಗಳಲ್ಲಿ ಮೌಢ್ಯತೆಯಿದ್ದರೆ ಮಾತ್ರ ಅದನ್ನು ಮೂಢ ನಂಬಿಕೆಯೆಂದು ಕರೆಯುವುದು ಸೂಕ್ತ. ಅಂತಹ ಕೆಲವೊಂದು ಆಚರಣೆಗಳು ಕಥನಗೀತೆ ಗಳಲ್ಲಿಯೂ ಕಂಡುಬರುತ್ತವೆ.

ರನ್ನನ ಅಜಿತ ಪುರಾಣದ ಒಂದು ಪದ್ಯದಲ್ಲಿ ಆಚರಣೆ ಕುರಿತು ಕೆಳಗಿನಂತೆ ಹೇಳಲಾಗಿದೆ:

---

೧. ಸಿಮೊನ್ ದ ಬೋವಾ : ದ ಸೆಕೆಂಡ್ ಸೆಕ್ಸ್ : ಎಚ್.ಎಸ್. ಶ್ರೀಮತಿ, ಪು.೭೦

"ಎರಡೆವಲಂ ಕುಲವಧುಗಾ
ಚರಿಸಲ್, ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾ
ಚರಣಂ ಮೇಣ ಶುಭಚರಿತದೆ
ಮರಣಂ ಮೇಣಳಿಪಿನಿಂದೆ ಬಾಬ್ಬುದು ದೊರೆಯೇ"[೨]

ಸಹಗಮನ ಎಂಬುದು ಶುಭ ಸಂಕೇತದ ಮರಣವಾಗಿದ್ದಿತು. ಸಾಮಾಜಿಕ ದೃಷ್ಟಿಯಲ್ಲಿ ಮಹಿಳೆ ಪ್ರಾಣ ತ್ಯಾಗ ಮಾಡಿಕೊಳ್ಳುವುದು ಪಾತಿವ್ರತ್ಯದ ಪ್ರತೀಕವಾಗಿ ಕಂಡುಬರುತ್ತದೆ. ಜನಮನ್ನಣೆ ಗಳಿಸಿದ ಶ್ರದ್ಧೆಯ ಆಚರಣೆಯಾಗಿತ್ತೆಂದು ಈ ಮೂಲಕ ತಿಳಿಯುತ್ತದೆ.

ತ್ಯಾಗ-ಬಲಿದಾನ-ದೈವಿಕ ಆಚರಣೆ ಎಂದು ಅಧ್ಯಯನದ ಉದ್ದೇಶದಿಂದ ವಿಭಾಗಿಸಿಕೊಂಡರೂ ಕೂಡ ಕೆಲವೊಂದು ಕಥನಗೀತೆಗಳಲ್ಲಿ ಒಂದಕ್ಕೊಂದು ಬೆಸೆದ ಕೊಂಡಿಯ ಹಾಗೇ ಜೋಡಣೆಯಾಗಿವೆ. ಈ ಮೂರು ಅಂಶಗಳು ಪ್ರಭಾವ ಬೀರುವುದು ಮಹಿಳೆಯ ಮೇಲೆ ಎಂಬುದು ಸ್ಪಷ್ಟವಾಗುತ್ತದೆ. ಕೆಲವೊಂದು ಕಥನಗೀತೆಗಳಲ್ಲಿ ತಾನೇ ಸ್ವತಃ ಊರಿನ ಹಿತಕ್ಕಾಗಿ ಕೆರೆ, ಕೋಟೆಗೆ ಬಲಿಯಾಗಲು ಮುಂದಾದರೆ ಅದು ಅವಳ ತ್ಯಾಗ ಎಂದು ನಿರೂಪಿತವಾದರೆ, ಊರಿನ ಜನತೆ ಅಥವಾ ಮಾವ, ಕುಟುಂಬದವರಿಂದ ಪರೋಕ್ಷವಾಗಿ ಕೆರೆ-ಕೋಟೆಗಳಿಗೆ ಬಲಿಯಾಗುವುದು ಬಲಿದಾನವೆಂದಾಗುತ್ತದೆ. ಇವೆರಡೂ ಘಟನೆಗಳು ಜರುಗಿದ ನಂತರ ದೇವರ ಸ್ವರೂಪಿಯಾಗಿ ನೆಲೆಸುವಳು. ಆದ ಕಾರಣ ಕಥನಗೀತೆಗಳಲ್ಲಿ ಇವು ಬಿಡಿಸಲಾಗದ ಬಂಧಗಳಾಗಿವೆ. ಕೆಲವೊಂದು ದೈವಿಕ ಆಚರಣೆಗಳು ವಿಭಿನ್ನತೆಯನ್ನು ಪಡೆದುಕೊಂಡಿದ್ದರೂ ತ್ಯಾಗ-ಬಲಿದಾನದಲ್ಲಿ ಮಾತ್ರ ಮಹಿಳೆ ದೇವತೆಯಾಗಿಯೇ ವೈಭವೀಕರಿಸಲ್ಪಟ್ಟಿರುವುದನ್ನು ಕಾಣುತ್ತೇವೆ.

ಮಹಾಸತಿಯು ವಧುವಿನ ರೀತಿಯಲ್ಲಿ ಅಲಂಕಾರ, ಮೆರವಣಿಗೆ, ಕೊಂಡಕ್ಕೆ ಧಾರೆಯೆರೆಯುವ ಸನ್ನಿವೇಶಗಳು ಆಚರಣಾತ್ಮಕವಾಗಿ ಕೆಲವೊಂದು ಕಥನಗೀತೆಗಳಲ್ಲಿ ಜನಪದರ ನಂಬಿಕೆಗಳನ್ನು ವಿವರಿಸುತ್ತವೆ ಅಲ್ಲದೇ ಆಕೆಯು ಪತಿಗೆ ನಿಷ್ಠಾವಂತ ಹೆಂಡತಿಯಾಗಿ, ಅತ್ತೆ ಮಾವಂದಿರಿಗೆ ಸತ್ಯವಂತೆ ಸೊಸೆಯಾಗಿ, ಇಡೀ ಊರಿಗೆ ದೇವರಾಗಿ ನಿರೂಪಿತವಾಗುತ್ತಾಳೆ. ದೇವತೆಯಾಗಿ ಇಂದಿಗೂ ಪೂಜೆಗೊಳಪಟ್ಟು ಹರಕೆಗಳನ್ನು ತೀರಿಸುವ ತಾಯಾಗಿ ಸಮಾಜದಲ್ಲಿ ನೆಲೆಸಿದ್ದಾಳೆ ಎಂಬುದಕ್ಕೆ ಜನಪದರು ನಾಗಮ್ಮಳಿಗೆ ಮೊರೆ ಹೋಗುವ ಸನ್ನಿವೇಶವನ್ನು ಕಥನಗೀತೆಯಲ್ಲಿ ಹೀಗೆ ಕಾಣಬಹುದು:

---

೨. ಜಾನಪದ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರಕುಮಾರ ಹಕಾರಿ, ಪು.೨೧೧

"ಲೋಕ ಲೋಕೆಲ್ಲ ಬಂದು ಪೂಜೆಯ ಮಾಡಿ
ಈಡಾಡಿ ಬಂದೊ ಈಡುಗಾಯಿ । ನಾಗವ್ವೆ
ಎರಚಾಡಿ ಬಂದೊ ಹಣ್ಣು ಫಲ
ಕಂದನ ಕೊಡಮ್ಮ ನನಗೊಂದು ನಾಗಮ್ಮ
ನಿನಗೆ ವೊಕ್ಕಲು ಆದೇವೊ
ಪುತ್ತುರನ ಕೊಡಮ್ಮ ನಮಗೊಂದು ನಾಗಮ್ಮ
ನಿನ್ನ ಚೆಲುವ್ಹೆಸರ ನಾವು ಕರದೇವು
ನಾಗಮ್ಮನೆಂದು ಕರೆದೇವು ನಾಗವ್ವ
ನಾಗಮ್ಮನೆಂದು ಕರದೇವು"[೩]

ಹೆಚ್ಚಾಗಿ ಮಹಾಸತಿಗೆ ಸಂಬಂಧಿಸಿದ ಕಥನಗೀತೆಗಳ ಕೊನೆಯಲ್ಲಿ ಊರಿನ ಜನತೆ ಇದೇ ಭಾವವನ್ನು ವ್ಯಕ್ತಪಡಿಸುವುದನ್ನು ಕಾಣುತ್ತೇವೆ. ಈಗಲೂ ಕೂಡ ಕೆಲವೊಂದು ಗ್ರಾಮಗಳಲ್ಲಿ ಹರಕೆ ಹೊತ್ತ ದೇವರ ಹೆಸರನ್ನೇ ಇಡುವುದು ವಾಡಿಕೆ ಇದೆ. ಕೆರೆಗೆ ಹಾರವಾದ, ಕೋಟೆಗೆ ಬಲಿಯಾದ ಸಮಾಜದ ಹಿತಕ್ಕಾಗಿ ತನ್ನ ಜೀವವನ್ನು ತ್ಯಜಿಸಿದ ಮಹಿಳೆಗೆ ದೇವತೆ ಎಂದು ಕೊಂಡಾಡಿಕೊಂಡು ಬಂದ ವಾಡಿಕೆ ಇದೆ. ಆತ್ಮಹತ್ಯೆಯ ಕಾರಣ ಅಥವಾ ಇತಿಹಾಸವನ್ನು ಗಮನಿಸುತ್ತಾ ಹೋದರೆ "ಆತ್ಮಹತ್ಯೆಯ ಕುರಿತಂತೆ ಎರಡು ರೀತಿಯ ಲಕ್ಷಣಗಳು ಪ್ರಧಾನವಾಗಿ ಎದ್ದು ಕಾಣುತ್ತೇವೆ. ಒಂದನೆಯದನ್ನು ಸ್ಥೂಲವಾಗಿ ಸಾಮಾಜಿಕ ಕಾರಣಗಳಿಗಾಗಿ ಮಾಡಿಕೊಂಡ ಆತ್ಮಹತ್ಯೆ ಎಂದೂ, ಎರಡನೆಯದನ್ನು ಧಾರ್ಮಿಕ ಕಾರಣಗಳಿಗಾಗಿ ಮಾಡಿಕೊಂಡ ಆತ್ಮಹತ್ಯೆ ಎಂದು ವಿಭಾಗಿಸಬಹುದು."[೪] ಇವೆರಡು ಕಾರಣಗಳು ತ್ಯಾಗ-ಬಲಿದಾನಕ್ಕೆ ಸಮೀಪವಾಗಿವೆ. ಏಕೆಂದರೆ ಮೊದಲನೇ ಲಕ್ಷಣದಲ್ಲಿ ಮಹಿಳೆ ಜೀವ ತನ್ನದು ಎಂದು ಹೇಳಲಾಗದೆ, ಸಮಾಜದ ನಿಮಿತ್ತಕ್ಕಾಗಿ ತ್ಯಾಗ ಮಾಡುತ್ತಾಳೆ. ಸಮಾಜದ ಹಿತವನ್ನು ಕಾಪಾಡುವುದು, ಸಮಾಜಕ್ಕೆ ತೊಂದರೆಯಾಗದಂತೆ ನೋಡಿ-ಕೊಳ್ಳುವುದು ಅವಳ ಧ್ಯೇಯವಾಗಿರುತ್ತದೆ. ಎರಡನೆಯದರಲ್ಲಿ ಬದುಕು ಎಂಬುದು ನಶ್ವರ. ಜೀವನವೆಂಬುದು ನೀರ ಮೇಲಿನ ಗುಳ್ಳೆಯಂತೆ. ಯಾವಾಗ ಬೇಕಾದರೂ ಅಂತ್ಯ-ಗೊಳ್ಳಬಹುದು. ಆದ್ದರಿಂದ ಈ ಬದುಕನ್ನು ಅನುಭವಿಸಲು ಬಂದ ದೇಹವನ್ನು ತೊರೆಯಬೇಕೆಂದು, ಸಮಾಜದಲ್ಲಿಯ ಕುಟುಂಬದವರು ಬಲಿ ಕೊಡಬೇಕೆಂದು

೩. ಮಹಾಸತಿ ಒಂದು ಆಚರಣೆ : ಬಸವರಾಜ ಕಲ್ಗುಡಿ, ಪು.೨೧೧
೪. ಅದೇ, ಪು.೧೧

ತೀರ್ಮಾನಿಸಿದ ಮೇಲೆ ಈ ಎಲ್ಲ ಆಲೋಚನೆಗಳು ಅವಳೊಡಲಲ್ಲಿ ಉದಯಿಸಿ ಬಲಿ-ಯಾಗುತ್ತಾಳೆ.

ಮೂಢ ನಂಬಿಕೆಗಳು ಸಮಾಜವನ್ನು ಕಟ್ಟಿ ಬೆಳೆಸಿಲ್ಲ ಹಾಗೂ ಅಭಿವೃದ್ಧಿಯತ್ತ ಕೊಂಡೊಯ್ದಿಲ್ಲ. ಆದರೂ ಸಮಾಜ ಇಂತಹವುಗಳಿಗೆ ಕಟ್ಟುಬಿದ್ದಿದೆ. ಇದರ ಪರಿಣಾಮವಾಗಿ ಮಹಿಳೆಯರ ಬದುಕು ದಿನದಿಂದ ದಿನಕ್ಕೆ ಭಯಾನಕವಾಗುತ್ತಿದೆ. ಕಾರಣ ಮಹಿಳೆಯರು ತಮ್ಮ ಅಳಲನ್ನು, ಭಾವನೆಗಳನ್ನು ಕೇಳುವಂತಹ ಜೀವವಿಲ್ಲದಾಗ ಕಣ್ಣಿಗೆ ಕಾಣಲಾರದ ದೇವರು ಹಾಗೂ ವಿವಿಧ ಆಚರಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅಸಹಾಯಕ ಸ್ಥಿತಿಯಿಂದ ಅದನ್ನೇ ಮುಂದುವರೆಸಿಕೊಂಡು ಬರುತ್ತಾರೆ.

ಉದಾ: "ಸ್ತ್ರೀಯರು ಮಕ್ಕಳಾಗದಿದ್ದಾಗ ಅಶ್ವತ್ಥ ಗಿಡ ಸುತ್ತುವುದು, ಕೊಂಡ ಹಾಯುವುದು, ದೇವಸ್ಥಾನದಲ್ಲಿ ತೊಟ್ಟಿಲು ಕಟ್ಟುವುದು ಮುಂತಾದ ಆಚರಣೆಗಳ ಮೂಲಕ ಸಮಾಧಾನ ಪಟ್ಟುಕೊಳ್ಳುತ್ತಾರೆ. ಸ್ತ್ರೀಯರನ್ನು ದೇವರೆಂದು ಪೂಜಿಸುವ ಸಮಾಜ ಇಂದಿಗೂ ಕೆಲವೊಂದು ದೇವರ ಗರ್ಭಗುಡಿಗಳಲ್ಲಿ ಪ್ರವೇಶವಿಲ್ಲ. ಆದರೆ ಹೆಚ್ಚು ದೇವರ ಹೆಸರಿನಲ್ಲಿ ಆಚರಣೆಗಳನ್ನು ಮಾಡುವುದು ಮಹಿಳೆಯರೇ. ಇದಕ್ಕೆ ಕಾರಣ ಸಂಪ್ರದಾಯ, ನಂಬಿಕೆಗಳೇ ಆಗಿವೆ. ನಂಬಿಕೆ ಎಂಬುದು ಯಾವುದೇ ವ್ಯಕ್ತಿ ಮತ್ತು ಸಮಾಜಕ್ಕೆ ಅತ್ಯವಶ್ಯಕವಾದ ಒಂದು ಮಾನಸಿಕ ಸ್ಥಿತಿಯಾಗಿದೆ. ಯಾವ ಆಚರಣೆ ನಂಬಿಕೆಗಳಿಂದ ವ್ಯಕ್ತಿಗೆ ಅಥವಾ ಸಮಾಜಕ್ಕೆ ತೊಂದರೆ ಉಂಟಾಗುವುದೋ ಅಂತಹವುಗಳು ಮೂಢ ನಂಬಿಕೆಗಳಾಗಿ ನಿರೂಪಿತವಾಗುತ್ತವೆ. ಅಂತಹವುಗಳನ್ನು ಕೈಬಿಟ್ಟು ವೈಚಾರಿಕ ಮನೋಭಾವಗಳನ್ನು ಅಳವಡಿಸಿಕೊಳ್ಳುವ ಅಗತ್ಯತೆ ಇದೆ.

ಪುರುಷ ಪ್ರಧಾನ ವ್ಯವಸ್ಥೆಯು ಆದಾಯದ ಎಲ್ಲ ಮೂಲಗಳನ್ನು ತನ್ನದಾಗಿಸಿಕೊಂಡು ಬಂದರೂ ಮಹಿಳೆಯನ್ನು ಆಚರಣೆಗಳ ಒಂದು ಭಾಗವನ್ನಾಗಿ ಮಾಡುವುದನ್ನು ಮರೆಯಲಿಲ್ಲ. ಆಚರಣೆಯ ನಂಬಿಕೆಯಲ್ಲಿ, ದೇವರ ಹೆಸರಿನಲ್ಲಿ ಪುರುಷನ ಭೋಗಕ್ಕೆ ದೇವದಾಸಿಯಾಗಿ ದೇಹವನ್ನು ಮಾರಿಕೊಂಡು ಬದುಕುವಂತಹ ಸ್ಥಿತಿಯನ್ನು ತಂದಿತು ಹಾಗೂ ಸತ್ತ ನಂತರ ಮೋಕ್ಷ ಸಂಪಾದಿಸಲು ತ್ಯಾಗ, ಬಲಿದಾನಗಳನ್ನು ಜೀವನದ ಮೌಲ್ಯವಾಗಿಸಿ, ಸಂಪ್ರದಾಯ, ಆಚರಣೆಗಳನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬಂದು ಸತ್ಯವಾಗಿಸಿದರೂ ಇವು ಮಹಿಳೆಯರಿಗೆ ಮಾರಕವಾಗಿ ನಿರೂಪಿತವಾದವು. ಎಷ್ಟೋ ದೇವತೆಗಳೆಂದು ಕರೆಯಿಸಿಕೊಳ್ಳುವ ದೇವರ ಹಿಂದೆ ಶೋಷಣೆಗಳು ಕೂಡ ನಡೆದಿವೆ. "'ಕೆರೆಗೆ ಹಾರ'ದ ಗೌಡನ ಸೊಸೆ ಕೆಳಜಾತಿ

ಮಹಿಳೆ ಹಾರವಾಗುವಂತೆ ಮಾಡಿ ಮೇಲ್ವರ್ಗದ ಮಹಿಳೆಯರನ್ನು ರಕ್ಷಿಸಿದವು. ಭಾಗೀರತಿ ಕೆಳಜಾತಿಯ 'ಬಂದವ್ವ' ಆಗಿದ್ದಳೆಂಬುದು ಗೊತ್ತಿರುವ ಸಂಗತಿ."[೫] ದಲಿತ ಮಹಿಳೆಯರು ಅಸಹಾಯಕರು, ಬಡವರು ಆಗಿರುವ ಕಾರಣ ಅವರನ್ನು ತಮಗೆ ಹೇಗೆ ಬೇಕೋ ಹಾಗೆ ಬಳಸಿಕೊಳ್ಳುತ್ತಿದ್ದರು ಎಂಬುದು ಇದರಿಂದ ತಿಳಿಯುತ್ತದೆ. ಹಲವಾರು ಗ್ರಾಮಗಳಲ್ಲಿ ಇಂದಿಗೂ ಕೂಡ ಬಂದವ್ವಳ ಪೂಜೆಯನ್ನು ಮಾಡಿಕೊಂಡು ಬರುತ್ತಿರುವುದು ಚಾಲ್ತಿಯಲ್ಲಿದೆ. ಸಮಾಜದಲ್ಲಿ ಇಂದು ದೇವತೆಯಾಗಿ ಕಂಡು ಬರುವ ಬಂದವ್ವ ಶೋಷಣೆ ಅನುಭವಿಸಿದ್ದಳು ಎಂಬ ಅರಿವು ಗೊತ್ತಿರದೇ ಪೂಜೆಗೊಳ್ಳುತ್ತ ಬಂದಿರುವಳು. ಹಿಂದಿನಿಂದಲೂ ಬೆಳೆದು ಬಂದ ರೂಢಿಗತ ಮೌಲ್ಯಗಳು, ಸಂಪ್ರದಾಯದ ಕಟ್ಟಳೆಯಲ್ಲಿ ಬಂಧಿತವಾದ ಈ ಸಮಾಜ ಸ್ತ್ರೀಯ ಅಧಃಪತನಕ್ಕೆ ಸ್ತ್ರೀಯೇ ಕಾರಣವಾಗುವಂತೆ ಪ್ರೇರೇಪಿಸುತ್ತದೆ; ಪ್ರಚೋದಿಸುತ್ತದೆ.

ಆಚರಣಾತ್ಮಕ ನೆಲೆಯು ಜನಪದ ಸಮುದಾಯಗಳ ಬದುಕು ಎಷ್ಟು ವಿಸ್ತೀರ್ಣತೆ-ಯನ್ನು ಹೊಂದಿದೆಯೋ ಅಷ್ಟೇ ಸಂಕೀರ್ಣತೆಯನ್ನು ಕೂಡ ಹೊಂದಿದೆ. ಒಂದು ಕಾಲ ಮತ್ತು ಸನ್ನಿವೇಶದಲ್ಲಿ ಆದಿವಾಸಿಗಳ ಮುಖ್ಯಸ್ಥನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದ ಘಟನೆ ನಂಬಿಕೆ ಮೂಲ. ಮುಂದೆ ಆ ಅನುಭವವನ್ನೇ ತಮ್ಮ ಸಮುದಾಯದ ಜೀವನದಲ್ಲಿ ಚಲಾವಣೆಗೆ ತರುತ್ತಾ ಹೋಗುತ್ತಾನೆ. ಅಂತಹ ನಂಬಿಕೆಗಳೇ ಮುಂದೆ ಆಚರಣೆಗಳಾಗಿ ಬದಲಾಗುತ್ತಾ ಹಿರಿಯರು ಹಾಕಿಕೊಟ್ಟ ಹಾದಿಯಲ್ಲಿ ಸಾಗುತ್ತಾ ಬರುವ ರೂಢಿ ನಡೆದುಕೊಂಡು ಬಂದಿದೆ.

ಫ್ರಾನ್ಸ್ ದೇಶದ ಪ್ರವಾಸಿ ಫ್ರಾನ್ಸ್‌ಸ್ವಾಸ್ ಬೆರ್ ಸ್ಟೀನ್ "ಒಮ್ಮೆ ಲಾಹೋರಿನಲ್ಲಿ ಸುಮಾರು ಹನ್ನೆರಡು ವರ್ಷ ವಯಸ್ಸಿನ ಅತಿ ಚೆಲುವೆಯಾದ ವಿಧವೆಯನ್ನು ನೋಡಿದೆ. ಕೊಂಡದಲ್ಲಿ ಬೀಳಬೇಕೆಂದಾಗ ಆಕೆಯ ಮುಖದ ಮೇಲೆ ಹೇಳತೀರದ ಭಯ-ಭೀತಿಗಳು ಎದ್ದು ಕಾಣುತ್ತಿದ್ದವು. ಅದು ಆಕೆಯ ಮನಸ್ಸಿನ ಸಂಕಟವಾಗಿತ್ತು. ಗಡಗಡನೆ ನಡುಗುತ್ತಿದ್ದ ಆಕೆ ಗೊಳೋ ಎಂದು ಅಳುತ್ತಿದ್ದಳು. ಆದರೆ ಬ್ರಾಹ್ಮಣರು ಬಿಟ್ಟಾರೆಯೇ? ಆಕೆಯನ್ನು ತನ್ನ ತೋಳಿನಲ್ಲಿ ಹಿಡಿದುಕೊಂಡ ಮುದುಕಿಯ ಸಹಾಯ ಪಡೆದು ಮೂರು-ನಾಲ್ಕು ಜನ ಬ್ರಾಹ್ಮಣರು ಬೆಂಕಿಗೆ ಬೀಳಲು ಹಿಂಜರಿಯುತ್ತಿದ್ದ ಆ ನತದೃಷ್ಟ ಬಾಲೆಯನ್ನು ಮುಂದಕ್ಕೆ ತಳ್ಳಿ ಸೌದೆಯ ಮೇಲೆ ಹಾಕಿದರು. ಓಡಿಹೋಗದಂತೆ ಕೈಕಾಲು ಕಟ್ಟಿದರು. ಕೊನೆಗೆ ಆ ಅರಿಯದ ಕಿಶೋರಿಯನ್ನು ಉರಿಯುವ ಜ್ವಾಲೆಯಲ್ಲಿ ಜೀವಸಹಿತ ಸುಟ್ಟರು. ಇದನ್ನು ನೋಡಿ ನನಗೆ

---

೫. ಮಹಿಳೆ ಮತ್ತು ಮೌಢ್ಯ : ವಸುಂಧರಾ ಭೂಪತಿ, ಪು.೩೫

ಸಹಿಸಲಾಗಲಿಲ್ಲ... ಈ ಜನರ ಮೂಢನಂಬಿಕೆಗಾಗಿ ಮರುಗಿದೆ”[೬] ಎಂದು ಹೇಳುತ್ತಾರೆ. ಇಲ್ಲಿ ಫ್ರಾನ್ಸ್ ದೇಶದ ಪ್ರವಾಸಿಗ ನಮ್ಮ ದೇಶದಲ್ಲಿ ಮೂಢನಂಬಿಕೆಯಿಂದಾಗುವ ಅನ್ಯಾಯವನ್ನು ಕಂಡು ಮರುಗುತ್ತಾನೆ. ಆದರೆ ನಮ್ಮ ದೇಶದಲ್ಲಿ ಆಚರಣೆ, ಸಂಪ್ರದಾಯ, ಪದ್ಧತಿ ಎಂದು ಮೌಢ್ಯತೆಗೆ ಒಳಗಾಗಿ ತಾವು ಮಾಡುವುದು ತಪ್ಪು ಎನ್ನುವುದನ್ನು ಅರಿಯದಷ್ಟು ಅಂಧಕಾರದಲ್ಲಿ ಮುಳುಗಿ ಹೋಗಿದ್ದಾರೆ. ವಿದೇಶಿಯರು ನಮ್ಮ ಭಾರತೀಯ ಆಚರಣೆಗಳನ್ನು ನೋಡಿ ನೊಂದುಕೊಂಡು ಸಹಿಸಿಕೊಳ್ಳಲಾಗಲಿಲ್ಲ ಎಂದು ಹೇಳುತ್ತಿರುವುದನ್ನು ಗಮನಿಸಿದರೆ, ಸಮಾಜ ಸಂಪ್ರದಾಯದ ಅಡಿಯಲ್ಲಿ ಸಿಲುಕಿ ತಾವು ಮಾಡುವುದು ತಪ್ಪು ಎಂಬ ಪ್ರಜ್ಞೆ ಇರದೇ ನತದೃಷ್ಟ ಆ ಬಾಲೆಯನ್ನು ಬೆಂಕಿಗೆ ತಳ್ಳುವುದು ನಮ್ಮ ಭಾರತೀಯ ಕುಲಕ್ಕೆ ಅವಮಾನವೆಂದು ಹೇಳಬಹುದು. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ಪಟ್ಟಪಾಡು ಈ ಉದಾಹರಣೆಯೊಂದರ ಮೂಲಕವೇ ಸ್ಪಷ್ಟಪಡಿಸಿಕೊಳ್ಳಬಹುದು. ಪರದೇಶದವರಿಗೆ ಇರುವಂತಹ ವೈಚಾರಿಕತೆ, ಮರಗುವಿಕೆ, ಮಾನವೀಯತೆ ನಮ್ಮಲ್ಲಿ ಇಲ್ಲವೆಂಬುದು ಅತ್ಯಂತ ನೋವಿನ ಸಂಗತಿ. ಇದಕ್ಕೆಲ್ಲ ಅಂತ್ಯ ಹಾಡಬೇಕಾದರೆ ಮಾನವ ಪ್ರಜ್ಞಾವಂತನಾಗಬೇಕಾದ ಅವಶ್ಯಕತೆ ಇದೆ.

ಸಹಗಮನ-ಅನುಮರಣ ಪದ್ಧತಿಯು ಕೆಲವೊಂದು ಧರ್ಮಗಳಲ್ಲಿ ಕಂಡುಬರುತ್ತದೆ. ಕೆಲವೊಂದರಲ್ಲಿ ಕಂಡು ಬರುವುದಿಲ್ಲ ಎನ್ನುವುದಕ್ಕೆ ಕೆಲವೊಂದು ಉದಾಹರಣೆಗಳಿವೆ. “ಋಗ್ವೇದದ ಮಂತ್ರ ಒಂದಕ್ಕೆ ಆಧುನಿಕರು ಮಾಡಿರುವ ಅರ್ಥವನ್ನು ವಿಷ್ಣುಧರ್ಮಸೂತ್ರ ಒಂದನ್ನು ಬಿಟ್ಟರೆ ಮತ್ತಾವ ಧರ್ಮಶಾಸ್ತ್ರದಿಂದಲೂ ಸಹಗಮನ ಪದ್ಧತಿಗೆ ಪ್ರಮಾಣ ಸಿಕ್ಕುವುದಿಲ್ಲ. “ಕ್ಯಾಥೈ” ಎಂಬ ವಾಯುವ್ಯ ಪ್ರಾಂತದ ಒಂದು ಜನಾಂಗದಲ್ಲಿ ಮಾತ್ರ ಈ ಪದ್ಧತಿಯಿದ್ದಿತೆಂದು ಸ್ಟ್ರಾಬೊ ಎಂಬ ಗ್ರೀಕ್ ಗ್ರಂಥಕಾರನು ಹೇಳುವನು. ಮಹಾಭಾರತದಲ್ಲಿ ವಸುದೇವನ ಹೆಂಡತಿಯರಾದ ದೇವಕೀ, ಭದ್ರಾ, ರೋಹಿಣೀ, ಮದಿರೆಯರು ಅಗ್ನಿಪ್ರವೇಶ ಮಾಡಿದರೆಂದೂ, ಕೃಷ್ಣನ ಪತ್ನಿಯರಲ್ಲಿ ರುಕ್ಮಿಣೀ, ಗಾನ್ಧಾರೀ, ಶೈಬ್ಯಾ, ಹೈಮವತೀ, ಜಾಮ್ಬವತಿಯರು ಸಹಗಮನ ಮಾಡಿದರೆಂದೂ, ಆದರೆ ಕೌರವರ ಹೆಂಡತಿಯರಾಗಲೀ, ಸತ್ಯಭಾಮೆಯಾಗಲೀ ಅಗ್ನಿಪ್ರವೇಶ ಮಾಡಲಿಲ್ಲವೆಂದೂ ಹೇಳಿದೆ. ಕೌಸಲ್ಯೆ, ಕೈಕಯೀ, ಸುಮಿತ್ರೆಯರು ದಶರಥನ ಮರಣಾ ನಂತರ ಸಹಗಮನ ಮಾಡಲಿಲ್ಲ. ರಾಮಾಯಣದ ಉತ್ತರ ಕಾಂಡದಲ್ಲಿ ಮಾತ್ರ ರಾವಣಪೀಡಿತಳಾದ ಒಬ್ಬ ಬ್ರಾಹ್ಮಣಿಯು ಸತಿಯಾದಳೆಂದು ಹೇಳಿದೆ. ಆದರೆ ಸ್ಮೃತಿಗಳು ಬ್ರಾಹ್ಮಣ ಸ್ತ್ರೀಯರು ಸಹಗಮನ ಮಾಡಕೂಡದೆಂದು ಸ್ಪಷ್ಟವಾಗಿ

---

೬. ಜಾನಪದ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರಕುಮಾರ ಹಕಾರಿ, ಪು.೨೩೫

ಹೇಳುವವು. ಮೇಧಾತಿಥಿಯು ಕೂಡ ಬ್ರಾಹ್ಮಣ ಸ್ತ್ರೀಯರಿಗೆ ಅನುಮರಣವು ಅಶಾಸ್ತ್ರೀಯ ಅಧರ್ಮವೆಂದು ಹೇಳುವನು."[೭]

ಮನು ಹೇಳಿದ ಮನುಸ್ಮೃತಿಯಲ್ಲಿ ಬ್ರಾಹ್ಮಣ ಸ್ತ್ರೀಯರು ಸಹಗಮನ ಮಾಡಕೂಡದೆಂದು ಹೇಳಿರುವುದನ್ನು ಅವಲೋಕಿಸಿದರೆ ಇವೆಲ್ಲ ಪದ್ಧತಿಗಳು ಕೆಳಜಾತಿಯ ಮಹಿಳೆಯರಿಗಷ್ಟೇ ಸೀಮಿತವಾಗಿದ್ದವೇನೋ ಎಂಬ ಸಂದೇಹ ಉದ್ಭವಿಸುತ್ತದೆ ಹಾಗೂ ಕೇವಲ ತಮ್ಮ ಧರ್ಮದ ಮಹಿಳೆಯರಷ್ಟೇ ಶ್ರೇಷ್ಠ. ಏನೇ ಆದರೂ ಅದು ಕೆಳಜಾತಿ-ಯವರಿಗೆಯೇ ಆಗಬೇಕೆಂದುಕೊಂಡು ಹೀಗೆ ಹೇಳಿರಬೇಕೆನಿಸುತ್ತದೆ. ಎಂತಹದೇ ಅನಿವಾರ್ಯ ಸಂದರ್ಭವಿದ್ದಾಗಲೂ ಬ್ರಾಹ್ಮಣ ಹಾಗೂ ಕ್ಷತ್ರೀಯ ಗಂಡುಗಳು ಶೂದ್ರ ಜಾತಿಯ ಮಹಿಳೆಯರನ್ನು ಪ್ರಥಮ ಹೆಂಡತಿಯೆಂದು ಪರಿಗಣಿಸಬಾರದೆಂದು ಮನುಸ್ಮೃತಿಯ ಅಧ್ಯಾಯ-೩ರಲ್ಲಿ ೧೪ನೇ ಸೂತ್ರದಲ್ಲಿ ಹೇಳಲಾಗಿದೆ. ಹಾಗಾದರೆ ಇಲ್ಲಿ ಶೂದ್ರ ಮಹಿಳೆಯರನ್ನು ಎರಡನೇ ಹೆಂಡತಿಯನ್ನಾಗಿ ಸ್ವೀಕರಿಸಬಹುದೆಂಬ ಅರ್ಥ ಇಲ್ಲಿ ಬರುತ್ತದೆ. ಸಮಾಜದಲ್ಲಿ ಪ್ರಥಮ ಹೆಂಡತಿಗೆ ಪ್ರಾಶಸ್ತ್ಯವಿರುವಾಗ, ಶೂದ್ರ ಮಹಿಳೆಯರನ್ನು ಸಮಾಜ ನಿಕೃಷ್ಟವಾಗಿ ಕಾಣಬೇಕೆಂಬ ಆಶಯವಿತ್ತು. ಮನುಸ್ಮೃತಿಯ ಅಧ್ಯಾಯ-೫ ೧೫೪ನೇ ಸೂತ್ರದಲ್ಲಿ ಮನು ಹೀಗೆ ಹೇಳುತ್ತಾನೆ: 'ಪತಿಯ ನಡತೆಯು ಚೆನ್ನಾಗಿಲ್ಲದಿದ್ದರೂ, ಅವನು ಕಾಮಾತುರನಾಗಿ ಅನ್ಯ ಹೆಂಗಸರಲ್ಲಿ ಮನಸ್ಸಿಟ್ಟರೂ, ದುರ್ಗುಣಿಯಾಗಿದ್ದರೂ, ಸಾಧ್ವಿಯಾದ ಹೆಂಡತಿಯು ಆ ತನ್ನ ಪತಿಯನ್ನು ದೇವರೆಂದು ಭಾವಿಸಿ ಅವನ ಸೇವೆ ಮಾಡಬೇಕು' ಎಂದು ಹೇಳುತ್ತಾನೆ. ಹೀಗೆ ಕಾಲದಿಂದ ಕಾಲಕ್ಕೆ ಈ ಮನುವಿನ ನಿಲುವನ್ನು ಪಾಲಿಸಿಕೊಂಡು ಬಂದು ಅದು ಹೆಮ್ಮರವಾಗಿ ನಮ್ಮ ಮುಂದೆ ನಿಂತಿದೆ ಎಂದರೆ ತಪ್ಪಾಗಲಾರದು.

ಸಹಗಮನ ಅನುಮರಣಗಳ ವರ್ಣನೆಯು ಅನೇಕ ಶಾಸನಗಳಲ್ಲಿಯೂ ಕಂಡುಬರುತ್ತವೆ. ಇದಕ್ಕೆ ಸಂಬಂಧಿಸಿದ ಉದಾಹರಣೆಗಳನ್ನೂ ಕಾಣಬಹುದು. ಯಶೋಮತಿ-ಯಂತಹ ಕೆಲವರು ರೋಗಿಯಾದ ಪತಿಯ ಮರಣಕ್ಕೆ ಮುಂಚೆಯೇ ಅಗ್ನಿ ಪ್ರವೇಶ ಮಾಡಿದರು. ಪತಿಯೊಡನೆ ಸತಿಯೇ ಅಲ್ಲದೆ ಇತರರೂ ಪ್ರಾಣಗಳನ್ನು ಅರ್ಪಿಸುತ್ತಿದ್ದರು. ಪ್ರಭಾಕರವರ್ಧನನು ಸತ್ತಾಗ ಅವನ ಸ್ನೇಹಿತರು, ಅಮಾತ್ಯರು, ಸೇವಕರೆಲ್ಲರೂ ಆತ್ಮಹತ್ಯೆ ಮಾಡಿಕೊಂಡರು. ಕಾಶ್ಮೀರ ಅನಂತರಾಜನ ರಾಣಿಯು ಸಹಗಮನ ಮಾಡಿದಾಗ ಅವಳ ಪಲ್ಲಕ್ಕಿ ಹೊರುವವರೂ, ಇತರ ಸೇವಕರೂ ಪ್ರಾಣ ತ್ಯಾಗ ಮಾಡಿದರು. ಸಹಗಮನ,

---

೭. ಭಾರತೀಯ ಸಂಸ್ಕೃತಿ : ಎಸ್. ಶ್ರೀಕಂಠಶಾಸ್ತ್ರಿ, ಪು.೧೭೨

ಅನುಮರಣ ಎರಡೂ ಒಂದೇ ಅರ್ಥವನ್ನು ಹೊಂದಿದ್ದು, ಗತಿಸಿದ ಪತಿಯೊಡನೆ ಸತಿಯು ಚಿತೆಯೇರುವುದು ಅಥವಾ ಒಬ್ಬರು ಸತ್ತ ರೀತಿಯಲ್ಲಿಯೇ ಮತ್ತೊಬ್ಬರು ಸಾಯುವುದು ಅಥವಾ ಸಂಕಲ್ಪದಂತೆ ವೀರನು ತನ್ನ ಒಡೆಯನೊಂದಿಗೆ ಪ್ರಾಣವನ್ನು ಒಪ್ಪಿಸುವಿಕೆ ಎಂದಾಗುತ್ತದೆ. ಇಲ್ಲಿ ಯಶೋಮತಿ ಅಗ್ನಿಪ್ರವೇಶ ಮಾಡುವುದು. ಜೊತೆಗೆ ಇತರರೂ ತಮ್ಮ ಪ್ರಾಣಾರ್ಪಣೆ ಮಾಡುವುದು, ಕಾಶ್ಮೀರದ ರಾಣಿಯು ಸಹಗಮನ ಮಾಡಿದಾಗ ಸೇವಕರು ಪ್ರಾಣತ್ಯಾಗ ಮಾಡುವುದು ಇವೆಲ್ಲಾ ಸಹಗಮನ ಅನುಮರಣಕ್ಕೆ ಉದಾಹರಣೆಗಳಾಗಿ ಕಂಡುಬರುತ್ತವೆ. ಅಂದು ಈ ಆಚರಣೆ ಮತ್ತು ಪದ್ಧತಿಗೆ ಜನ ಎಷ್ಟೊಂದು ಮಹತ್ವವನ್ನು ಕೊಡುತ್ತಿದ್ದರು ಎಂಬುದು ತಿಳಿದುಬರುತ್ತದೆ. ಮಹಿಳೆಯರಷ್ಟೇ ಅಲ್ಲದೇ ಪುರುಷರು ಕೂಡ ಈ ಪದ್ಧತಿಯನ್ನು ಪಾಲಿಸುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿವೆ.

"ಆದಿಮ ಜನರಲ್ಲಿದ್ದಂತೆ ಈಗಲೂ ಪುರುಷನಿಗೆ ಅಲೌಕಿಕ ಕಟ್ಟುಪಾಡುಗಳಿಲ್ಲ. ಹೆಣ್ಣು ಮಾತ್ರ ಧಾರ್ಮಿಕ ಮತ್ತು ಮಾಂತ್ರಿಕ ಶಕ್ತಿಗಳನ್ನು ಹೊಂದಿರುವವಳು. ಆಧುನಿಕ ಸಮಾಜಗಳಲ್ಲಿ ಗಂಡಿನ ತಪ್ಪು ನಡುವಳಿಕೆಗಳು ಅಷ್ಟೇನೂ ಗಗನ ಅಪರಾಧಗಳಲ್ಲ. ಅವನು ಇಚ್ಛೆಯಿಂದಲೇ ಹಾಗೆ ಮಾಡಿದ್ದರೂ, ಅವನಿಗೆ ಕ್ಷಮೆ ಇದೆ. ಸಮುದಾಯದ ನಿಯಮಗಳನ್ನು ಪಾಲಿಸದಿದ್ದರೂ ಅವನನ್ನು ಸಮುದಾಯ ಹೊರಹಾಕುವುದಿಲ್ಲ."[೮] ವಾಸ್ತವದಲ್ಲಿ ಕೂಡ ಸಮಾಜದಲ್ಲಿ ಪುರುಷರನ್ನು ಮೇಲ್ಮಟ್ಟಕ್ಕೇರಿಸುವ ಪ್ರಸಂಗಗಳು ಕಂಡು ಬರುತ್ತವೆ. ಹಾಗಾಗಿಯೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯು ಎಲ್ಲ ಅಪರಾಧಗಳಿಗೆ ಸೂತ್ರಧಾರಳೆಂದು ಪರಿಗಣಿಸಿ ಸಮುದಾಯದಲ್ಲಿ ಆಕೆಗೆ ಅಸ್ತಿತ್ವ ಇಲ್ಲದ ಹಾಗೆ ಶಿಕ್ಷೆಗೆ ಗುರಿ ಮಾಡಲಾಗುತ್ತಿದೆ. ಇಂತಹ ಘಟನೆಗಳ ಹಿನ್ನೆಲೆಯಲ್ಲಿ ಅವಲೋಕಿಸಿ ಮಹಿಳಾಲೋಕ ಮಹಿಳೆಯರನ್ನು ಶೋಷಣೆ ಮುಕ್ತಳಾಗಿ ಮಾಡಲು ಶ್ರಮಿಸುತ್ತಿದೆ. ಆದರೆ ಇಂದಿಗೂ ಕೂಡ ಅದರಿಂದ ಹೊರಬರಲು ಆಗುತ್ತಿಲ್ಲ.

ಇಲ್ಲಿ ಸಿಮೋನ್ ದ ಬೋವಾ ಅವರು ವಾಸ್ತವದಲ್ಲಿಯೂ ಕೂಡ ಮಹಿಳೆಯರಿಗೆ ವಿಧಿ-ನಿಷೇಧಗಳನ್ನು ಗ್ರಹಿಸಿ ಈ ರೀತಿ ಹೇಳಿದ್ದಾರೆ, ಪುರುಷರ ತಪ್ಪು ನಡುವಳಿಕೆಗಳು ಸಮಾಜದಲ್ಲಿ ಅಷ್ಟಾಗಿ ಅಪರಾಧವಾಗಿ ಕಂಡಬರುವುದಿಲ್ಲ. ಏಕೆಂದರೆ ಎಷ್ಟೇಯಾಗಲಿ ಅವನು ಗಂಡು ಮಗ ಎಂದು ಮೇಲಕ್ಕೇರಿಸಿ, ಮಹಿಳೆಯರು ತಗ್ಗಿಬಗ್ಗಿ ನಡೆಯಬೇಕು. ಧಾರ್ಮಿಕ ಆಚರಣೆಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ಪಾಲಿಸದಿದ್ದರೆ ಆಕೆಗೆ ಸಮಾಜ ಮಹತ್ವ

---

೮. ಸಿಮೋನ್ ದ ಬೋವಾ : ದ ಸೆಕೆಂಡ್ ಸೆಕ್ಸ್ : ಎಚ್.ಎಸ್. ಶ್ರೀಮತಿ, ಪು.೧೩೨

ಕೊಡುವುದಿಲ್ಲ. ಕೀಳಾಗಿ ಪರಿಗಣಿಸುತ್ತದೆ. ಆದರೆ ನಮಗೆ ಬೇಕಾಗಿರುವುದು ಯಾರೇ ಆಗಲಿ ಅಪರಾಧಗಳನ್ನು ಮಾಡಿದಾಗ ಅವರನ್ನು ದೂಷಿಸಿ ಬುದ್ಧಿ ಹೇಳಬೇಕೇ ವಿನಃ ಒಬ್ಬರ ಮೇಲೆಯೇ ನಿಷೇಧಗಳನ್ನು ಹೇರುವುದು ಸೂಕ್ತವಲ್ಲ.

"ಆದಿಪುರಾಣದಲ್ಲಿ(೩-೧೫)ವಿಧವೆಯೊಬ್ಬಳು ಗುರುಪಂಚಕವನ್ನು ನೆನೆಯುತ್ತಾ ಪ್ರಾಣ ಬಿಡುತ್ತಾಳೆ. ಇದು ಜೈನ ಧರ್ಮದ ವಿಧವೆಗೆ ಪ್ರತಿನಿಧಿಯಾದ ಪಾತ್ರ. ಜೈನಧರ್ಮವು ಸ್ತ್ರೀಯರಿಗೆ ಮೋಕ್ಷವಿಲ್ಲವೆಂದು ಹೇಳಿದ್ದರೂ ಅವರೂ ಅಣುವ್ರತಗಳನ್ನು ಪಡೆದು ಪುರುಷ ಜನ್ಮದಲ್ಲಿ ಹುಟ್ಟಿ ಮೋಕ್ಷವನ್ನು ಪಡೆಯಬಹುದೆಂದು ಸಾರಲಾಗಿದೆ."[೯] ಇದರಿಂದ ತಿಳಿದು ಬರುವುದೇನೆಂದರೆ, ಸ್ತ್ರೀ ಜನ್ಮಕ್ಕೆ ಪ್ರಾಶಸ್ತ್ಯವನ್ನು ಕೊಡದೆ ಪುರುಷರಾದವರಿಗೆ ಮಾತ್ರ ಮೋಕ್ಷ ಸಿಗುವುದೆಂಬ ತಪ್ಪು ಕಲ್ಪನೆ ಬಿತ್ತರಿಸಲಾಗಿದೆ. ಮಹಿಳೆಯನ್ನು ಅಪಾರ ನಿರ್ಲಕ್ಷ್ಯದಿಂದ ಹೀನವಾದ ದೃಷ್ಟಿಕೋನದಿಂದ ಕಂಡಿದ್ದಾರೆ ಎಂಬುದರ ಸ್ಪಷ್ಟ ಚಿತ್ರಣ ಕಂಡುಬರುತ್ತದೆ. ಮಹಿಳೆಗೆ ಸಮಾಜದಲ್ಲಿ ಗಂಡನಿಲ್ಲದೇ ಹೋದರೆ ವಿಧವೆ ಎಂಬ ಪಟ್ಟಕಟ್ಟಿ ಕೆಲವೊಂದು ಆಚರಣೆಗಳನ್ನು ಹೇರುತ್ತಿದ್ದರು. ಆಚರಣೆಗಳು ಮಹಿಳೆಯರಿಗೆ ಮಾನಸಿಕ ಖಿನ್ನತೆಗೆ ಒಳಗಾಗುವಂತೆ ಪ್ರೇರೇಪಿಸದೇ ಆತ್ಮಸ್ಥೈರ್ಯವನ್ನು ಮೂಡಿಸುವಂತಹವುಗಳಿದ್ದರೆ ಮಹಿಳಾ ಬದುಕಿಗೆ ಅನುಕೂಲಕರವಾಗಿದೆ. ಕೇವಲ ಮಹಿಳೆಯರಿಗೆ ಅಷ್ಟೇ ಆಚರಣೆಗಳನ್ನು ಹೇರಿರುವುದರಿಂದ ಇಲ್ಲಿ ಲಿಂಗ ತಾರತಮ್ಯ ಕಂಡುಬರುತ್ತದೆ. ಹೆಂಡತಿ ತೀರಿ ಹೋದಳೆಂದರೆ ಪುರುಷರಿಗೆ ಯಾವುದೇ ಆಚರಣೆಗಳು ಇಲ್ಲದೇ ಕಟ್ಟುಪಾಡುಗಳು ಇಲ್ಲದೇ ಮರುವಿವಾಹಕ್ಕೆ ಪ್ರೇರೇಪಿಸುತ್ತಾರೆ. ಎಷ್ಟಾದರೂ ಮದುವೆಯಾಗುವಂತಹ ಸ್ವಾತಂತ್ರ್ಯ ಆತನಿಗೆ ಒದಗಿಸಿದೆ. ಆತನಿಗೆ ಮಕ್ಕಳಿದ್ದರೆ ಆ ಮಕ್ಕಳ ಆರೈಕೆಗಾಗಿ ಇನ್ನೊಂದು ಮದುವೆಯಾಗಲು ಮುಂದಾಗುತ್ತಾರೆ. ಏನೇ ಆದರೂ ಮಹಿಳೆ ಭೋಗದ ವಸ್ತುವಾಗಿ ಕಂಡುಬರುತ್ತಾಳೆ.

ಚಾವುಂಡರಾಯ ಪುರಾಣವೊಂದರಲ್ಲಿ ವೈಧವ್ಯವ್ರತದ ಆಚರಣೆಯ ಪರಿಕಲ್ಪನೆ ಹೀಗೆ ಮೂಡಿಬರುತ್ತದೆ: "ವಿಧವೆಯಾದ ಹೆಣ್ಣಿನ ಮನಸ್ಸು ವ್ರತಾದಿಗಳ ಕಡೆಗೆ ತಿರುಗಿದಾಗ ಕಾಮತೃಷೆಯ ತೀವ್ರತೆ ಕಡಿಮೆ ಆಗಬಹುದೆಂಬ ದೂರದೃಷ್ಟಿ ಇಲ್ಲಿ ಕೆಲಸ ಮಾಡಿರಬೇಕು."[೧೦] ಗಂಡನನ್ನು ಕಳೆದುಕೊಂಡ ಮಹಿಳೆಯನ್ನು ಸಮಾಜದ ಶುಭ ಸಮಾರಂಭಗಳಿಂದ ದೂರವಿಡಲು ಪರಪುರುಷನನ್ನು ಕಂಡು ಮನಸ್ಸು ವಾಲದಿರಲಿ ಎಂಬುದಾಗಿತ್ತು. ಆದ್ದರಿಂದ ಸಂನ್ಯಾಸಿನಿಯನ್ನಾಗಿ ರೂಪಿಸಲು ವ್ರತಾಚರಣೆಗಳನ್ನು ಮಾಡಲು ವಿಧವೆಗೆ ಹೇಳಲಾಗುತ್ತಿತ್ತು

೯. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಬರಗೂರ ರಾಮಚಂದ್ರಪ್ಪ, ಪು.೫೮
೧೦. ಅದೇ, ಪು.೫೮

ಕಾರಣ ಗಂಡನನ್ನು ಕಳೆದುಕೊಂಡ ಹೆಂಡತಿ ಜೀವನದಲ್ಲಿ ಎಲ್ಲವನ್ನು ಕಳೆದುಕೊಂಡಂತೆ ಮಾಡಿ ಮೂಲೆಗುಂಪು ಮಾಡುವ ಸಂಪ್ರದಾಯ ಮೊದಲಿನಿಂದಲೂ ಕಂಡುಬಂದಿದೆ. ಈಗ ಕೆಲಮಟ್ಟಿಗೆ ಸುಧಾರಣೆ ಕಂಡಿರುವುದು ಸಮಾಧಾನದ ಸಂಗತಿ. ಆದರೂ ಕೂಡ ಸಭೆ ಸಮಾರಂಭಗಳಲ್ಲಿ ಆಕೆ ಪಾಲ್ಗೊಳ್ಳಲು ಇಂದಿಗೂ ಮುಂದೆ ಬರುವುದಿಲ್ಲ. ಹಾಗೇನಾದರೂ ಬಂದರೆ ಸಮಾಜದ ಚುಚ್ಚು ಮಾತುಗಳು, ಅವಮಾನಗಳು ಆಕೆಗೆ ಕತ್ತಿಯಿಂದ ಇರಿದಂತಾಗುತ್ತದೆ. ಸ್ವತಃ ವಿಧವಾ ಮಹಿಳೆಯರೇ ಶುಭ ಸಮಾರಂಭಗಳಲ್ಲಿ ಮುಂದಾಳತ್ವ-ವನ್ನು ವಹಿಸುವುದಿಲ್ಲ. ಕಾರಣ ತನ್ನನ್ನು ತಾನೇ ಕೀಳರಿಮೆ ಭಾವಗಳಿಂದ ನೋಡಿಕೊಂಡು ಎಲ್ಲಾ ವಿಧವೆಯರಿಗೆ ಪ್ರೇರಕರಾಗಿ ನಿಂತು ಬಿಡುತ್ತಾಳೆ.

ಜೈನ ಧರ್ಮವು ಗಂಡನನ್ನು ಕಳೆದುಕೊಂಡಿರುವ ವಿಧವೆ ಹೆಣ್ಣು ವ್ರತವನ್ನು ಆಚರಿಸಬೇಕು ಎಂಬ ಕಲ್ಪನೆಯಿದೆ. ಅದಕ್ಕೆ ನಿದರ್ಶನವೆಂಬಂತೆ "ರನ್ನನ 'ಅಜಿತ ತೀರ್ಥಂಕರ ಪುರಾಣ'ದಲ್ಲಿ ವಿಧವೆಯಾದ ಅತ್ತಿಮಬ್ಬೆಯ ಚಿತ್ರ ಮನೋಜ್ಞವಾಗಿ ಹೇಳಲ್ಪಟ್ಟಿದೆ. ಸಂತತಿಯನ್ನು ಕಾಪಾಡುತ್ತಾ, ವ್ರತಾಚರಣೆಗಳನ್ನು ಮಾಡುತ್ತಾ, ಜಿನ ಪ್ರತಿಮೆಗಳನ್ನು, ಜೈನ ಪುರಾಣಗಳನ್ನು ಬರೆಯಲು ಪ್ರೋತ್ಸಾಹಿಸುತ್ತಾ, ಹೀಗೆ ದಾನ-ಧರ್ಮಾದಿಗಳಲ್ಲಿ ಅತ್ತಿಮಬ್ಬೆಯು ತನ್ನ ಜೀವಿತ ಕಾಲವನ್ನು ಸವೆಸುತ್ತಾಳೆ. ಲಕ್ಕುಂಡಿ ಶಾಸನದಲ್ಲಿ ರನ್ನನ ಮಾತಿಗೆ ಪೋಷಕವಾಗಿ 'ದಾನ ಚಿಂತಾಮಣಿ ಅತ್ತಿಮಬ್ಬೆ'ಯ ಚಾರಿತ್ರ್ಯವನ್ನು ಕೊಂಡಾಡಿದೆ. "ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಈ ಪದ್ಧತಿಯನ್ನು ಕನ್ನಡತಿಯರು ಸ್ವಸಂತೋಷವಾಗಿ ಆಚರಿಸುತ್ತಿದ್ದರು."[೧೧] ಎಂದು ಚೆನ್ನಕ್ಕ ಎಲಿಗಾರ ಅವರು ಅಭಿಪ್ರಾಯ ಪಡುತ್ತಾರೆ. ವಿಧವೆಯಾದ್ದರಿಂದಲೇ ಅತ್ತಿಮಬ್ಬೆ ದಾನ-ಧರ್ಮ ಮಾಡುವುದರ ಮುಖಾಂತರ, ವೃತಾಚರಣೆಗಳನ್ನು ಮಾಡುತ್ತಾ, ಧರ್ಮದ ಪುರಾಣಗಳಿಗೆ ಪ್ರೋತ್ಸಾಹಿಸುತ್ತಾ ಹೀಗೆ ತನಗೆ ಸರಿ ಎನಿಸುವ ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿ ಜೀವನ ನಡೆಸುತ್ತಾ ಸಾವಿರಾರು ಮಹಿಳೆಯರಿಗೆ ನಾಯಕಿಯಾದಳು. ಇದಕ್ಕೆಲ್ಲ ಕಾರಣ ತನ್ನ ನೋವನ್ನು ಮರೆಯಲು ಸಮಾಜದ ವಿವಿಧ ಕಾರ್ಯಗಳಲ್ಲಿ ತೊಡಗಿರಬಹುದಾದ ಸಾಧ್ಯತೆಯಿದೆ. ಹಾಗೂ ವ್ರತಾಚರಣೆಗಳಿಗೆ ಮಹಿಳೆಯರು ಎಷ್ಟೊಂದು ತಲೆಬಾಗಿ ನಡೆಯುತ್ತಿದ್ದರು ಎಂಬುದರ ಕುರುಹು ಕೂಡ ಸಿಗುತ್ತದೆ. ಇನ್ನೊಂದು ವಿಚಿತ್ರದ ಸಂಗತಿಯೆಂದರೆ: "ಜನ್ನನ ಅನಂತನಾಥ ಪುರಾಣದಲ್ಲಿ ಚಂಡ ಶಾಸನನು ತನ್ನ ಗೆಳೆಯನ ಮಡದಿ ಸುನಂದೆಯನ್ನು ಕಾಮಿಸಿ ಅವಳು ಸತ್ತಾಗ ತಾನೂ ಅವಳ ಚಿತೆ ಏರಿ ಸಾಯುತ್ತಾನೆ." ಇಲ್ಲಿ ಪುರುಷ ಸಹಗಮನ ಮಾಡಿದ್ದನ್ನು ಕಾಣುತ್ತೇವೆ. ಇದು ಅವನಲ್ಲಿರುವ

---

೧೧. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಬರಗೂರ ರಾಮಚಂದ್ರಪ್ಪ, ಪು.೫೮-೫೯

ಒಂದು ಗುಣವೆಂದು ಕಂಡರೆ; ಗೆಳೆಯನ ಹೆಂಡತಿಯನ್ನು ಕಾಮಿಸಿದ್ದು ತಪ್ಪಾಗಿ ಕಂಡುಬರುತ್ತದೆ. ಆದ್ದರಿಂದ ಈತನ ಮೇಲೆ ಗೌರವವುಂಟಾಗಲು ಸಾಧ್ಯವಿಲ್ಲ. ಪರಸ್ತ್ರೀಯರನ್ನು ತಾಯಿಯ ಸಮಾನ ನೋಡಿದ, ನೋಡುವಂತಹ ವೀರರು ಈತನ ಮುಂದೆ ಶ್ರೇಷ್ಠರು ಎನಿಸಿಕೊಳ್ಳುತ್ತಾರೆ.

ವೈಧವ್ಯ ಪದ್ಧತಿಯು ಧರ್ಮದ ಪ್ರಕಾರ ಅನುಸರಣೆಯ ಆಚರಣೆಯಾದರೆ ಸಮಾಜ ಸುಧಾರಣೆಯ ದೃಷ್ಟಿಯಲ್ಲಿ ಇದು ಅರ್ಥಹೀನವಾದ ಆಚರಣೆಯಾಗಿದೆ. ಆದ್ದರಿಂದಲೇ ವಿಧವಾ ವಿವಾಹ ಕಾನೂನು ಜಾರಿಗೆ ಕಾರಣವಾಯಿತು. ಆದರೆ ಆಚರಣೆ-ಪದ್ಧತಿಗಳು ಇಂದಿಗೂ ಜೀವಂತವಾಗಿಯೇ ಇವೆ. "ಈ ಆಚರಣೆಯಲ್ಲಿ ಗಂಡ ಸತ್ತ ವಿಧವೆಯನ್ನು ತಲೆ ಬೋಳಿಸಿ, ರವಿಕೆ ತೊಡದಂತೆ ಮಾಡಿ, ಒಪ್ಪತ್ತು ಊಟ ನೀಡಿ, ಮಾಂಗಲ್ಯ-ಕುಂಕುಮ-ಬಳೆಗಳನ್ನು ತೆಗೆದು ಹಾಕಿ ಕ್ರೂರವಾದ ಶಿಕ್ಷೆಗಳನ್ನು ವಿಧಿಸುತ್ತಿದ್ದರೆಂಬುದು ಜನಜನಿತವಾದ ವಿಷಯವೇ ಆಗಿದೆ."[೧೨] ಒಬ್ಬ ಮಹಿಳೆಯನ್ನು ಅವಳ ವಿವಾಹ ಮತ್ತು ವೈವಾಹಿಕ ಸ್ಥಾನಮಾನದಿಂದ ಗುರುತಿಸುವುದು, ಗಂಡ ಸತ್ತಿದ್ದರೆ ಅವಳನ್ನು 'ವಿಧವೆ' ಎಂದು ಕರೆಯುವುದು ಅನಗತ್ಯ ಎನಿಸುತ್ತದೆ. ಅದರಲ್ಲೂ ಬ್ರಾಹ್ಮಣ ಸ್ತ್ರೀಯರಿಗೆ ತಲೆಬೋಳಿಸಿ ಇನ್ನೂ ಅವಮಾನ ಮಾಡುವಂತಹ ಆಚರಣೆಯನ್ನು ಕೂಡ ಕಾಣುತ್ತೇವೆ. ಹೂ-ಕುಂಕುಮ-ಮಾಂಗಲ್ಯ-ಬಳೆ-ಕಾಲುಂಗರ ಇವನ್ನು ಎಲ್ಲ ಧರ್ಮಗಳಲ್ಲಿಯೂ ಮಹಿಳೆ ತೆಗೆಯುವ ಆಚರಣೆ ಇದ್ದೇ ಇದೆ. ಆದ್ದರಿಂದ ಇಂತಹ ಶಿಕ್ಷೆಗಳನ್ನು ಅನುಭವಿಸುವ ಬದಲು ಸತ್ತ ಗಂಡನ ಜೊತೆಗೆ ಚಿತೆ ಹಾರಿ ಸತಿ-ಸಹಗಮನ ಆಚರಣೆ ಮೂಲಕ ಮಹಿಳೆ ಬಲಿಯಾಗುತ್ತಿದ್ದಳೇನೋ ಎನಿಸುತ್ತದೆ. ಇಂತಹ ಆಚರಣೆಗಳೆಲ್ಲವೂ ಒಂದರೊಳಗೊಂದು ಸೇರಿ ವಿವಿಧ ಪದ್ಧತಿಗಳಾಗಿ ಮಹಿಳೆಯನ್ನು ಅಮಾನವೀಯ ಆಚರಣೆಗಳಿಗೆ ಬಲಿಯಾಗುವಂತೆ ಮಾಡಿವೆ. ಇವನ್ನು ಕಿತ್ತು ಹಾಕುವಲ್ಲಿ ಕನ್ನಡ ಸಾಹಿತ್ಯದ ಪ್ರಸಿದ್ಧ ಲೇಖಕಿ ಎಂ.ಕೆ. ಇಂದಿರಾ ಅವರ ಕಾದಂಬರಿಗಳು ಕೂಡ ತಮ್ಮದೇಯಾದ ಕೊಡುಗೆಯನ್ನು ನೀಡಿವೆ. ೧೯-೨೦ನೇ ಶತಮಾನದಲ್ಲಿನ ಸಂಪ್ರದಾಯ ಮಡಿವಂತ ಕುಟುಂಬ ಜೀವನವನ್ನು ನಮ್ಮೆದುರಿಗೆ ನಿಲ್ಲಿಸುತ್ತದೆ. ಮಲೆನಾಡಿನ ಚಿಕ್ಕಹಳ್ಳಿಯೊಂದರಲ್ಲಿ, ಇನ್ನೂ ಸಾಮಾಜಿಕ ಮೌಢ್ಯಗಳ ನಡುವೆ ಜನಸಮುದಾಯ ಬದುಕುತ್ತಿದ್ದ ಕಾಲವದು. ಬಾಲ್ಯವಿವಾಹ ಪದ್ಧತಿ, ವಿಧವೆಯಾದ ಯುವತಿಯರ ಕೇಶ ಮುಂಡನ ಗೈಯ್ಯುವುದು ಹೀಗೆ ಇಂತಹ ಸಾಕಷ್ಟು ಅನಿಷ್ಟ ಸಂಪ್ರದಾಯಗಳ ವೈಭವವಿದ್ದ ಕಾಲವದು. ಆದರೂ ಕೂಡ ಕಾದಂಬರಿಯ ಕೆಲವು ಪಾತ್ರಗಳ ಮೂಲಕ (ದ್ರಾಕ್ಷಾಯಣಿ)

---

೧೨. ಮಹಿಳೆ ಮತ್ತು ಧರ್ಮ : ಶಿವಾನಂದ ಎಸ್. ವಿರಕ್ತಮಠ, ಪು.೧೩೫

ಸಂಪ್ರದಾಯವನ್ನು ಕಿತ್ತೊಗೆದು ಪ್ರಗತಿಪರ ನಿಲುವಿಗೆ ನಾಂದಿ ಹೇಳುತ್ತದೆ. ಕಾದಂಬರಿಗಳಷ್ಟೇ ಅಲ್ಲದೇ ಆಧುನಿಕ ಕಥನ ಕವನಗಳು ಕೂಡ ಪ್ರಗತಿಪರತೆಯನ್ನು ಸಾರುತ್ತವೆ.

ಉದಾ: ಬರಗೂರ ರಾಮಚಂದ್ರಪ್ಪನವರ 'ಮಾದಿಗರ ಹುಡುಗಿ' ಕಥನ ಕವನದಲ್ಲಿ ಬೆಟ್ಟದ ಮೇಲಿನ ಸೀತಮ್ಮನ ದೋಣೆ ಮತ್ತು ಬೆಟ್ಟದ ಕೆಳಗಿನ ಗಂಗಿಹಳ್ಳದ ನೀರನ್ನು ಮಾದಿಗರು ಮುಟ್ಟಿದರೆ ರಕ್ತಕಾರಿ ಸಾಯುಶ್ತಾರೆ, ಊರಿಗೆ ಕೇಡಾಗುತ್ತದೆ ಎಂಬ ನಂಬಿಕೆ ಊರಿನ ಜನತೆಯಲ್ಲಿ ಬೇರೂರಿದೆ. ಆದರೆ ಅಕ್ಷರ ಕಲಿತ ಮಾದಿಗರ ಹುಡುಗಿಯಾದ ಪುಟ್ಟಕ್ಕ ವೈಚಾರಿಕ ಮನೋಭಾವವನ್ನು ತಾಳಿ ನಾವೇಕೆ ನೀರನ್ನು ಮುಟ್ಟಬಾರದೆಂದು ಧೈರ್ಯದಿಂದ ನೀರನ್ನು ಮುಟ್ಟಿ ರಕ್ತಕಾರಲಿಲ್ಲ, ಜೀವ ಹೋಗಲಿಲ್ಲ ಎಂಬುದನ್ನು ಅಂಥ ಸಮಾಜದಕ್ಕೆ ಕನ್ನಡಿಯಾಗುತ್ತಾಳೆ. ಆದರೆ ಇನ್ನೊಂದು ಕೆಟ್ಟ ಘಟನೆ ಎಂದರೆ ಆ ಹುಡುಗಿ ಸ್ನಾನ ಮಾಡುವಾಗ ಊರಿನ ಮುಖಂಡ ನೋಡಿ ಆಕೆಯನ್ನು ಗದರಿಸಿ ಚಾವಡಿಗೆ ಕರೆದುಕೊಂಡು ಚಾಟಿ ಏಟನ್ನು ಕೊಟ್ಟು ಆಕೆಗೆ ರಕ್ತ ಸುರಿಯುತ್ತಿದ್ದರೂ ಯಾರೂ ಮುಂದೆ ಬಂದು ತಡೆಯಲಿಲ್ಲ. ಅದರ ಬದಲಾಗಿ ಸಮಾಜ ಆಕೆಗೆ :

"ಸಂಪ್ರದಾಯ ಸುಟ್ಟ ರಂಡೆ
ಊರ ಕೇಡು ಲೌಡಿ ಮುಂಡೆ
ಗಂಗಿಹಳ್ಳ ಮೀಯಲಿಕ್ಕೆ
ಇವಳಾದಳ ರಾಣಿ"

ಎಂದು ತಾವು ನಂಬಿ ಬೆಳೆಸಿಕೊಂಡು ಬಂದ ಅನಿಷ್ಟ ಆಚರಣಗಳೇ ಅವರಿಗೆ ಒಂದು ಜೀವಕ್ಕಿಂತ ಮುಖ್ಯವಾದವು. ಪುಟ್ಟಕ್ಕ ಸಮಾಜವನ್ನು ಅಜ್ಞಾನದಿಂದ ಜ್ಞಾನದೆಡೆಗೆ ಪ್ರಗತಿಪರ ಹೆಜ್ಜೆಗೆ ವಾಲಿಸಲು ಪ್ರಯತ್ನಿಸಿದರೆ ಅವಳ ಪರ ಯಾರೂ ನಿಲ್ಲುವುದಿಲ್ಲ. ಅದಕ್ಕಾಗಿಯೇ ಆಕೆ ಮನುಷ್ಯ ಜನ್ಮವನ್ನು ಹಳಿಯುತ್ತಾ ಜೀವವನ್ನು ಬಿಟ್ಟಳು. ಕೊನೆಗೆ ಕಥನ ಕವನದ ಆಶಯ ತುಂಬಾ ಮಹತ್ವದ್ದಾಗಿದೆ. ಮನುಷ್ಯರನ್ನು ಕೊಂದು ರಕ್ತವನ್ನು ಕುಡಿಯುವ ರಾಕ್ಷಸ ಅವತಾರದ ಚಾವಡಿ ನಾಶವಾಗಿ ಊರಿನ ಪ್ರತಿ ಹಟ್ಟಿಯಲ್ಲಿ ಪುಟ್ಟಕ್ಕನಂತಹ ಧೀಮಂತ ಮಹಿಳೆ ಹುಟ್ಟಿ ಇಡೀ ಊರೇ ಹೊಸದಾಗಿ ಹುಟ್ಟಿ ಬರಲಿ ಎಂಬ ಶೋಷಿತರ ಪರ ಧನಿಯೆತ್ತಿ ಸಮಾಜ ಸುಧಾರಣೆಗೆ ಸ್ಫೂರ್ತಿಯಾಗಿದೆ.

ಸ್ತ್ರೀಯರಿಗೆ ಜಾತಿ-ಕರ್ಮಗಳನುಸಾರವಾಗಿ ಹುಟ್ಟು ಸಂಸ್ಕಾರಗಳನ್ನು ಮನು ಈ ರೀತಿ ಪ್ರತಿಪಾದಿಸುತ್ತಾನೆ.

“ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ
ಪತಿಸೇವಾ ಗುರೌ ವಾಸೋ ಗೃಹಾರ್ಥೋಽಗ್ನಿ ಪರಿಕ್ರಿಯಾ”[೧೩] (೨-೭೨)

ಇಲ್ಲಿ ವೈದಿಕ ಸಂಸ್ಕೃತಿಯು ಮುಖ್ಯವಾಗಿರುವ ಕಾರಣ ಪತಿಯ ಸೇವೆ ಗುರುಕುಲ ವಾಸಕ್ಕೆ ಸಮನಾಗಿ ಗೃಹಕೃತ್ಯವು ಆಕೆಯ ಪಾಲಿಗೆ ಅಗ್ನಿಹೋತ್ರದ ಕ್ರಿಯೆಗಳಿದ್ದಂತೆ ಎಂದು ಹೇಳಿ ಮಹಿಳೆಯೆಂದರೆ ಹೀಗೆಯೇ ನಡೆದುಕೊಳ್ಳಬೇಕೆಂಬ ನಿಷೇಧವನ್ನು ಹಾಕುತ್ತಾನೆ. ಆ ನಿಷೇಧಗಳೇ ಇನ್ನೂ ತನ್ನ ಒಡಲಲ್ಲಿಟ್ಟುಕೊಂಡು ಉಳಿಸಿ ಬೆಳೆಸಿಕೊಂಡು ಬಂದಿವೆ. ಸಂಪೂರ್ಣವಾಗಿ ನಿರ್ನಾಮವಾಗಲು ಇನ್ನೂ ಹೆಚ್ಚು ಸಮಯಬೇಕಾಗಿದೆ.

ಮನುಷ್ಯ ಸಮಾಜಕ್ಕೆ ಹುಟ್ಟಿನಿಂದ ಒಂದು ಬಗೆಯ ಭಯವು(ಭೀತಿಯು) ಬೆನ್ನು ಹತ್ತಿದೆ. ಕಾರಣ ಪ್ರಪಂಚದಲ್ಲಿ ಆಗಾಗ ಕಾಣಿಸುವ ಬಿರುಗಾಳಿ, ಬೆಂಕಿ, ಸಿಡಿಲು, ಮಿಂಚು, ಸದ್ದು ಮುಂತಾದವುಗಳು ಆತನನ್ನು ಹೆದರಿಸಿದವು. ಇದರಿಂದ ಆತ ಭೂತ, ಪ್ರೇತ, ಪಿಶಾಚಿಗಳನ್ನು ನಂಬತೊಡಗಿದನು. ಇದು ಮನುಷ್ಯನ ದೌರ್ಬಲ್ಯವೆಂದೇ ಹೇಳಬೇಕು. ಏಕೆಂದರೆ ಈ ದೌರ್ಬಲ್ಯವೇ ಮನುಷ್ಯನನ್ನು ನಿಸ್ಸಹಾಯಕನನ್ನಾಗಿ ಮಾಡುತ್ತದೆ. ಜನಪದ ಕಥನಗೀತೆಗಳಲ್ಲಿಯೂ ಸಹ ಸಮಾಜದಲ್ಲಿ ಮೌಢ್ಯ, ನಂಬಿಕೆ, ಆಚರಣೆಗಳ ಮುಖಾಂತರ ಅಸಹಾಯಕ ಸ್ಥಿತಿಯಲ್ಲಿ ಮಹಿಳಾ ವಿನ್ಯಾಸಗಳು ಕಂಡುಬರುತ್ತವೆ. ಇದಕ್ಕೆ ಮೂಲ ಕಾರಣ ಜನರಲ್ಲಿರುವ ಅಜ್ಞಾನ. ಇದಕ್ಕೆ ಅಪವಾದವೆಂಬಂತೆ ಶಿಕ್ಷಿತರು ಕೂಡ ಮೌಢ್ಯತೆಗೆ ಒಳಗಾಗುತ್ತಿರುವುದು ಸಮಾಜದಲ್ಲಿ ದುರಂತವೇ ಸರಿ.

ಸಮಾಜದಲ್ಲಿ ಮಾನವರು ಹೇಗೆ ಆಚರಣೆ, ನಂಬಿಕೆ, ಸಂಸ್ಕಾರ, ಸಾಹಿತ್ಯ ಮುಂತಾದವುಗಳನ್ನು ಬಿತ್ತಿ ಹೋಗಿರುತ್ತಾರೋ ಅದನ್ನೇ ಆಧರಿಸಿ ಮುಂದಿನ ಪೀಳಿಗೆಯ ಸಮಾಜ ಮುಂದುವರೆಸಿಕೊಂಡು ಹೋಗುತ್ತದೆ. ಆದಕಾರಣ ಆಚರಣೆಯಾಗಲಿ, ಸಾಹಿತ್ಯವಾಗಲಿ, ಆಯಾ ಕ್ಷೇತ್ರಗಳಲ್ಲಿ ಸಮಾಜ ಪೂರಕವಾಗಿ ವೃದ್ಧಿಯಾಗುವಂತಹ ತಾತ್ವಿಕತೆಯನ್ನು ಭದ್ರಪಡಿಸಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆ ನಮ್ಮೆದುರಿಗಿದೆ. ಆ ಮಾರ್ಗವಾಗಿಯೇ ಶಿಕ್ಷಿತ ಸಮುದಾಯ ಸಾಮಾಜಿಕ ಚಿಂತನೆಯ ಹಿನ್ನೆಲೆಯಲ್ಲಿ ಅಭ್ಯಸಿಸಿ ವೈಜ್ಞಾನಿಕ ನೆಲೆಯಲ್ಲಿ ಭದ್ರವಾದ ಬುನಾದಿಯನ್ನು ಕಟ್ಟಬೇಕು. ಮಹಿಳೆ ಗೊಡ್ಡು ಸಂಪ್ರದಾಯ ಆಚರಣೆಗಳ ಸುಳಿಯಲ್ಲಿ ಇನ್ನೂ ಹೇಗೆ ಸಿಕ್ಕು ನರಳುತ್ತಿರುವಳು ಎಂಬುದನ್ನು ಪ್ರಸ್ತುತ ದಿನಮಾನದ ಒಂದು ಘಟನೆಯ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಈಗಲೂ ಮಹಿಳೆ

---

೧೩. ಮಹಿಳೆ ಮತ್ತು ಧರ್ಮ : ಶಿವಾನಂದ ಎಸ್. ವಿರಕ್ತಮಠ, ಪು.೫೮

ಮತ್ತು ಯುವತಿಯರು ಮುಟ್ಟಾದರೆ ಮನೆಯಿಂದ ಹೊರಗಿರುವ ಪದ್ಧತಿ ಜಾರಿಯಲ್ಲಿದೆ. ಚಿತ್ರದುರ್ಗ ಜಿಲ್ಲೆಯ ಹಲವು ಗೊಲ್ಲರ ಹಟ್ಟಿಗಳಲ್ಲಿ ಇನ್ನೂ ಜೀವಂತವಾಗಿದೆ. ದುರಂತವೆಂದರೆ ಸಮಾಜದ ಓರೆ-ಕೋರೆ ತಿದ್ದಿ ಅರಿವಿನ ದೀಪ ಹಚ್ಚುವ ಸ್ಥಳದಲ್ಲಿಯೇ ಮೌಢ್ಯತೆ ತಾಂಡವವಾಡುತ್ತಿರುವುದನ್ನು ಕಂಡರೆ ಖೇದವೆನಿಸುತ್ತದೆ. ಶಾಲೆಯ ಒಳಗಡೆ ಮಕ್ಕಳಿಗೆ ಪಾಠ. ವರಾಂಡದಲ್ಲಿ ಚಪ್ಪಲಿಗಳನ್ನು ತಲೆದಿಂಬು ಮಾಡಿಕೊಂಡು ತಟ್ಟೆಯ ಜೊತೆ ಒಬ್ಬಂಟಿಯಾಗಿ ಮಲಗಿರುವ ಮುಟ್ಟಾದ ಹೆಣ್ಣುಮಗಳಿಗೆ ಹೇರಿರುವ ಆಚರಣೆಯು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಗುಂಜಿನಗೂರು ಗೊಲ್ಲರ ಹಟ್ಟಿಯ ದೃಶ್ಯವು ಸಮಾಜದ ಮೌಢ್ಯ ಆಚರಣೆಗೆ ಹಿಡಿದ ಕನ್ನಡಿಯಾಗಿದೆ. ಹೆಣ್ಣುಮಗಳು ಮುಟ್ಟಾದ ಕಾರಣಕ್ಕೆ ಶಾಲೆಯ ಆವರಣದಲ್ಲಿ ಬಂದು ಮಲಗಿರುವುದು ಒಟ್ಟು ೫ ದಿನ. ಇಲ್ಲೇ ಚಳಿ-ಗಾಳಿಯ ಜೊತೆ ಇರಬೇಕಿದೆ. ಇಲ್ಲದಿದ್ದರೆ ಲಕ್ಷ್ಮಿನರಸಿಂಹಸ್ವಾಮಿ ಕೆಟ್ಟದ್ದು ಮಾಡುತ್ತಾನೆ ಅಂತ ಇಲ್ಲಿನ ಜನ ನಂಬಿ ಸಂಪ್ರದಾಯಕ್ಕೆ ಜೋತು ಬಿದ್ದಿದ್ದಾರೆ.

ಮಕ್ಕಳಾಗದಿದ್ದಾಗ ಅಶ್ವತ್ಥಗಿಡ ಸುತ್ತುವುದು, ಕೊಂಡ ಹಾಯುವುದು, ಮಾಂತ್ರಿಕರ ಬಳಿ ಹೋಗಿ ಅವರು ಕೊಡುವ ಹಿಂಸೆಗಳನ್ನು ಅನುಭವಿಸುವುದು, ದೆವ್ವ-ಭೂತ ದೇವರು ಬರುವುದು, ಮಾಟ-ಮಂತ್ರದಂಥ ನಂಬಿಕೆಗಳು ಒತ್ತಾಯದಿಂದ ಅವಳ ಮೇಲೆ ಹೊರಿಸಲಾಗುತ್ತದೆ. ಸಮಸ್ಯೆಗಳಿಂದ ಹೊರಬರುವ ಸಾಧ್ಯತೆ ಇಲ್ಲದಿರುವಾಗ ವ್ರತ, ನೇಮ, ಉಪವಾಸಗಳತ್ತ ಆಕರ್ಷಿತರಾಗುವವರು ಹೇಳಿಕೊಳ್ಳಲಾಗದ ಒತ್ತಡ, ದೌರ್ಜನ್ಯಗಳಿಗೆ ಬಲಿಯಾದಾಗ ಮನೋರೋಗ, ಮಾನಸಿಕ ಅಸ್ವಸ್ಥತೆಗೆ ಬಲಿಯಾಗುತ್ತಾರೆ.

ಮಹಿಳೆಯನ್ನು ನಡೆಸಿಕೊಳ್ಳುವ ರೀತಿಯಲ್ಲಿ ಬದಲಾವಣೆ ತರಲು ಸಾಧ್ಯವಾದರೆ ಕಂದಾಚಾರಗಳಿಂದ ಸ್ತ್ರೀಯರನ್ನು ರಕ್ಷಿಸಲು ಸಾಧ್ಯ. ಒಟ್ಟಾರೆ ನಮ್ಮ ಪರಂಪರಾಗತ ನಂಬಿಕೆಗಳಲ್ಲಿ ಸ್ತ್ರೀವಿರೋಧಿ ದೃಷ್ಟಿ-ಧೋರಣೆಗಳು ಎತೇಚ್ಛವಾಗಿ ತುಂಬಿಕೊಂಡಿವೆ. ಈ ನಂಬಿಕೆಗಳಿಗೆ ಕಡಿವಾಣ ಹಾಕಲು ಸಾಮಾಜಿಕ ಸಂರಚನೆಯಲ್ಲಿ ಮೂಲಭೂತ ಬದಲಾವಣೆ ತರಬೇಕಾಗಿದೆ ಅರ್ಥಾತ್ ಸ್ತ್ರೀಯರನ್ನು ನೋಡುವಂತಹ ದೃಷ್ಟಿಕೋನ ಬದಲಾಗಬೇಕಿದೆ. ಸ್ತ್ರೀಯರು ಕೂಡ ಸ್ವತಂತ್ರ್ಯವಾಗಿ ಒಳಿತು-ಕೆಡಕುಗಳ ಅವಲೋಕನವನ್ನು ಮಾಡಿ ಹೆಜ್ಜೆ ಇಡಬೇಕಾದ ಅನಿವಾರ್ಯತೆ ಇದೆ.

"ನರಬಲಿ ಒಂದು ಅಮಾನುಷ ಮೌಢ್ಯ. ಈ ವರುಷ ಕರ್ನಾಟಕದಲ್ಲಿ ನಡೆದ ಒಂದು ನರಬಲಿಯ ಪ್ರಕರಣವನ್ನು ಗಮನಿಸಿರಬಹುದು. ನೆಲದಾಳದಲ್ಲಿರುವ ನಿಧಿ ಹುಡುಕುವ

ಮೊದಲು ನಿಧಿ ಕಾಯುವ ಶಕ್ತಿಗಳನ್ನು ಸಂಪ್ರೀತಗೊಳಿಸಲು ನರಬಲಿ ಕೊಡುತ್ತಿದ್ದು, ಅದು ಇಂದಿನವರೆಗೂ ಅಲ್ಲಲ್ಲಿ ನಡೆಯುತ್ತಿದೆ. ನರಬಲಿಗೆ ಈಡಾಗುತ್ತಿದ್ದವರು ಬಡ ಮಹಿಳೆಯರು ಮತ್ತು ಮಕ್ಕಳು ಎಂದು ಬೇರೆ ಹೇಳಬೇಕಿಲ್ಲ"[೧೪] ವಾಸ್ತವದಲ್ಲಿಯೂ ಕೂಡ ನರಬಲಿ ಪದ್ಧತಿ ಉಳಿದುಕೊಂಡಿದೆ ಎಂಬುದು ಈ ಹೇಳಿಕೆಯ ಮೂಲಕ ಅರ್ಥವಾಗುತ್ತದೆ. ಹೀಗೆ ಆಚರಣೆಗಳಿಂದ ಮಹಿಳೆಯರ ಮೇಲೆ ವಿಭಿನ್ನ ರೀತಿಯಲ್ಲಿ ಮಾರಕವುಂಟಾಗುತ್ತಿದೆ.

ಕಥನಗೀತೆಗಳ ಅಧ್ಯಯನದ ಹಿನ್ನೆಲೆಯಲ್ಲಿ ಜನಸಮುದಾಯವು ಯಾವ ಯಾವ ಆಚರಣೆಗಳಿಗೆ ಒಳಗಾಗಿ ಮಹಿಳೆಯರು ಶೋಷಣೆಗೆ ಒಳಗಾಗುತ್ತಿದ್ದರು, ಯಾವುದನ್ನು ಹೆಚ್ಚು ನಂಬುತ್ತಿದ್ದರು. ಅದನ್ನು ಹೇಗೆ ಆಚರಣೆಯಾಗಿ ಚಾಲನೆಗೆ ತಂದರು ಎಂಬುದನ್ನು ಪರಿಗಣಿಸಿ ದೈವಿಕ ಆಚರಣೆ, ತ್ಯಾಗದ ಆಚರಣೆ, ಬಲಿದಾನದ ಆಚರಣೆಯೆಂದು ಮೂರು ವಿಭಾಗಗಳಲ್ಲಿ ಅಧ್ಯಯನದ ದೃಷ್ಟಿಯಿಂದ ಆಚರಣಾತ್ಮಕ ನೆಲೆಯನ್ನು ವಿಶ್ಲೇಷಿಸಲಾಗಿದೆ.

- ಜನ ಸಾಮಾನ್ಯರು ಬಲಿಯಾದ ವ್ಯಕ್ತಿಯನ್ನು ದೈವದ ಸ್ವರೂಪದಲ್ಲಿ ಕಂಡು ಆರಾಧಿಸುವುದು, ಪೂಜಿಸುವುದು ಮತ್ತು ತಾವು ನಂಬಿಕೊಂಡು ಬಂದ ಸಂಪ್ರದಾಯಗಳನ್ನು ಆಚರಣಾತ್ಮಕವಾಗಿ ತಮಗೆ ಸಂಕಷ್ಟಗಳು ಎದುರಾದಾಗ ದೇವರ ಹೆಸರಿನಲ್ಲಿ ಕೆಲವೊಂದು ಆಚರಣೆಗಳನ್ನು ಅನುಸರಿಸುವುದು ದೈವಿಕ ಆಚರಣೆಯಲ್ಲಿ ಕಂಡುಬರುತ್ತವೆ. ದೇವರೇ ತಮ್ಮ ಸಂಕಷ್ಟಗಳಿಗೆ ಕಾರಣೀಭೂತನು. ಅವುಗಳ ನಿವಾರಣೆ ದೇವರಿಂದ ಮಾತ್ರ ಸಾಧ್ಯ ಎಂಬ ಭಯ-ಭಕ್ತಿ ಮಾನವನಲ್ಲಿ ಬೇರೂರಿದೆ. ಆದಕಾರಣ ಅವುಗಳು ಇಂದಿಗೂ ಚಲಾವಣೆಯಲ್ಲಿರಲು ಕಾರಣವಾಗಿದೆ.

- ಸಮಾಜದ ಹಿತಕ್ಕಾಗಿ ತಮ್ಮ ಜೀವನವನ್ನು ಲೆಕ್ಕಿಸದೇ ತ್ಯಾಗಮಯ ಬುದ್ಧಿಯಿಂದ ತಮ್ಮ ಜೀವವನ್ನು ಕೊಡುವುದು ಅಥವಾ ಪ್ರಾಣಾರ್ಪಣೆ ಮಾಡುವುದು ತ್ಯಾಗದ ಸಂಕೇತವಾಗಿದೆ. ವ್ಯಕ್ತಿ ಹಿತಕ್ಕಿಂತ ಸಮಷ್ಟಿಯ ಹಿತವನ್ನು ಕಾಪಾಡಲು ಮುಂದಾಗಿರುವುದು ಅಂದಿನ ಸಮಷ್ಟಿಪ್ರಜ್ಞೆ ಇಡೀ ಸಮಾಜದ ತುಂಬಾ ಹೇಗೆ ಹರಡಿತ್ತು ಎಂಬುದು ಅವುಗಳ ಆಚರಣೆಯಿಂದ ತಿಳಿಯುತ್ತದೆ.

---

೧೪. ನಂಬಿಕೆ-ಮೂಢನಂಬಿಕೆ : ವೈದ್ಯ ಕಣ್ಣಿನಿಂದ : ಎಚ್.ಎಸ್. ಅನುಪಮಾ, Ladaiprakashanabasu.blogspot.in

- ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಶತಶತಮಾನದುದ್ದಕ್ಕೂ ಮಹಿಳೆಯ ಮೇಲೆ ಸವಾರಿ ಮಾಡಿರುವುದನ್ನು, ಅಧಿಕಾರ ಚಲಾಯಿಸುವುದನ್ನು ಕಾಣುತ್ತೇವೆ. ಆ ಕಾರಣದಿಂದ ಮುಗ್ಧ ಮನಸ್ಸಿನ ಮಹಿಳೆಯರ ಮನವನ್ನು ಅರಿತುಕೊಂಡು ಅಸಹಾಯಕರನ್ನಾಗಿ ಮಾಡಿ, ಊರಿನ ಅಥವಾ ಸಮಾಜದ ಉದ್ಧಾರದ ನೆಪದಲ್ಲಿ ಒತ್ತಾಯಪೂರ್ವಕವಾಗಿ ಕೆರೆ, ಕೋಟೆಗೆ ಮಹಿಳೆಯರನ್ನು ಪ್ರಾಣಿಗಳಂತೆ ಬಲಿ ಕೊಡುವುದನ್ನು ಬಲಿದಾನಾತ್ಮಕ ಆಚರಣೆಗಳಲ್ಲಿ ಕಾಣುತ್ತೇವೆ. ಇದರಲ್ಲಿ ಮಹಿಳೆ ಪ್ರತಿಭಟನೆ ತೋರಿದರೂ ಆಕೆಯ ಕೂಗನ್ನು ಕೇಳದ ಸಮಾಜ ಆಚರಣೆ ಎಂಬುದರಲ್ಲಿ ಆಕೆಯನ್ನು ಹತ್ತಿಕ್ಕಿ ಬಂಧಿಸಲಾಯಿತು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಈ ಮೂರು ನೆಲೆಯಲ್ಲಿ ಮಹಿಳೆ ಕಥನಗೀತೆಗಳಲ್ಲಿ ಹೇಗೆ ನೆಲೆಸಿದ್ದಳು ಎಂಬುದನ್ನು ಕೆಲವೊಂದು ಕಥನಗೀತೆಗಳಲ್ಲಿ ಕಂಡು ಬಂದ ಆಚರಣೆಗಳ ಮೂಲಕ ಕೆಳಗಿನಂತೆ ಸ್ಪಷ್ಟಪಡಿಸಲಾಗಿದೆ.

೫.೧. ದೈವಿಕ ಆಚರಣೆಗಳು :

ಮಾನವನಿಗೆ ಭಾಷೆ ದೇವರ ಕೊಡುಗೆಯೆಂದು ನಂಬಿದ ಜನಪದರು ಜಗತ್ತಿನ ಸೃಷ್ಟಿಕರ್ತ ದೇವರೇ ಎಂದು ಪ್ರತಿಪಾದಿಸುವರು. ಇತಿಹಾಸ ಪೂರ್ವದ ಮಂಜು ಮುಸುಕಿದ ಬದುಕಿನ ಅಜ್ಞಾತ ಕಾಲವೊಂದರಲ್ಲಿ ತಮ್ಮ ಸುತ್ತಲೂ ಇರುವ ವಿಸ್ಮಯ, ಭಯಗಳು ಮೈ ನಡುಗಿಸುವ, ನುಂಗಲು ಬಾಯ್ದೆರೆದ ಪ್ರಕೃತಿಯ ರುದ್ರ ಭೀಕರ ಶಕ್ತಿಗಳನ್ನು ರಹಸ್ಯಗಳನ್ನು ಅರ್ಥೈಯಿಸಿಕೊಳ್ಳಲಾಗದ ಜನಸಮುದಾಯವು ನೀರು, ಗಾಳಿ, ಮರ, ಗಿಡ, ಕಲ್ಲು, ಮಣ್ಣು, ಬೆಂಕಿ, ಭೂಮಿ ಒಂದೊಂದನ್ನೇ ತಮ್ಮ ಆರಾಧನಾ ದೇವರಾಗಿ ಅಳವಡಿಸಿಕೊಂಡು ಬಂದು, ಆಚರಣೆಗಳ ಪರಂಪರೆ ಮುಂದುವರೆಯಿತು. **ಉದಾ:** ಸಿಂಧೂ ನಾಗರಿಕತೆ ಜನರು ಪ್ರಕೃತಿಯನ್ನು ಆರಾಧಿಸುವರು.

ಜನರ ನಂಬಿಕೆಗಳು, ಸಂಪ್ರದಾಯಗಳು, ಪದ್ಧತಿಗಳು ಉತ್ತಮ ಸಮಾಜದ ದಾರಿ ದೀಪವಾದರೆ ಅವುಗಳನ್ನು ಅಳವಡಿಸಿಕೊಳ್ಳುವುದು ಸೂಕ್ತ. ಕೆಲವೊಂದು ಆಚರಣೆ (ಪದ್ಧತಿ) ಜನರನ್ನು ದಿಕ್ಕು ತಪ್ಪುವಂತೆ ಮಾಡುತ್ತದೆ. ಅದರಲ್ಲೂ ಮಹಿಳೆಯರಿಗೆ ವಿಧಿಸಿದಂತಹ ಆಚರಣೆಗಳು, ಪದ್ಧತಿಗಳು ಶಾಪದಂತೆ ಇನ್ನೂ ಅಂಟಿಕೊಂಡೇ ಇವೆ. ಅವುಗಳಿಂದ ಮುಕ್ತಿ ಹೊಂದಲು ಇನ್ನೂ ಸಾಧ್ಯವಾಗುತ್ತಿಲ್ಲ. ಇವುಗಳ ಹೆಸರಿನಲ್ಲಿ ಬಹಳಷ್ಟು ಮಹಿಳೆಯರು ಶೋಷಣೆಗೆ ಈಡಾಗುತ್ತಿರುವರು. ಪ್ರಾಚೀನ ಕಾಲದಿಂದಲೂ ಒಂದಿಲ್ಲೊಂದು ಆಚರಣೆಗಳಿಗೆ,

ಸಂಪ್ರದಾಯಗಳಿಗೆ ಬಲಿಯಾಗಿ ಮಹಿಳೆ ನೊಂದು-ಬೆಂದು-ಕಮರಿ ಹೋಗಿದ್ದಾಳೆ. ಹೀಗಿರುವಾಗ ಮಹಿಳೆಯನ್ನು ಕಥನಗೀತೆಗಳಲ್ಲಿ ಆಚರಣಾತ್ಮಕ ನೆಲೆಯಲ್ಲಿ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಮಹಿಳೆಯು ದೈವಿಕ-ತ್ಯಾಗ-ಬಲಿದಾನದ ಆಚರಣೆಗಳ ಹೆಸರಿನಲ್ಲಿ ಶೋಷಣೆಗೆ ಗುರಿಯಾದ ಕಥೆಗಳನ್ನು ಕಥನಗೀತೆಗಳಲ್ಲಿ ವ್ಯಕ್ತವಾದ ಸಂಗತಿಗಳ ಹಿನ್ನೆಲೆಯಲ್ಲಿ ವೈಚಾರಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಬುಡಕಟ್ಟು ಸಂಪ್ರದಾಯಗಳನ್ನು ಇಂದಿಗೂ ಕಾಡುಗೊಲ್ಲರು ಕಟ್ಟುನಿಟ್ಟಾಗಿ ಅನುಸರಿಸಿ-ಕೊಂಡು ಬರಲಾಗಿದೆ. ಅದರಲ್ಲೂ ಒಂದು ವಿಚಿತ್ರ ಸಂಪ್ರದಾಯವೆಂದರೆ ಹೆಣ್ಣುಮಕ್ಕಳು ಮೈ ನೆರೆದಂತಹ ವೇಳೆಯಲ್ಲಿ ಆಕೆಯನ್ನು ಹಟ್ಟಿಯಿಂದ ಹೊರಗೆ ಕಟ್ಟಿದ ಗುಡಿಸಲಲ್ಲಿ ಸೂತಕ ಕಳೆಯುವ ಮತ್ತು ಹತ್ತು ಹನ್ನೆರಡು ದಿನಗಳವರೆಗೆ ಅಲ್ಲಿಯೇ ಕೂರಿಸುವುದು ಒಂದು ಪದ್ಧತಿಯಾದರೆ; ಲಗ್ನವಾಗಿ ಮಕ್ಕಳನ್ನು ಪಡೆದಂತಹ ಸಂದರ್ಭದಲ್ಲಿ ಮೈಲಿಗೆ ಕಳೆಯುವವರೆಗೆ ಆ ಹೆಣ್ಣು ತನ್ನ ಮಗುವಿನೊಂದಿಗೆ ಹಟ್ಟಿಯಿಂದ ಆಚೆಯೇ ಇರಬೇಕು. ಇವುಗಳನ್ನು ಇಂದಿಗೂ ಕೆಲವೊಂದು ಸಂಪ್ರದಾಯಗಳಲ್ಲಿ ಕಾಣುತ್ತೇವೆ. ಈ ಆಚರಣೆ ಕಷ್ಟವೆನಿಸಿದರೂ ಕೂಡ ಪ್ರಾಚೀನವಾದ ಪ್ರಮುಖವಾದ ಆಚರಣೆಯೆಂದು ಪರಿಗಣಿಸಿ ಆಚರಿಸುವರು.

ಜನಪದರು ದೈವಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿರುವುದನ್ನು ನಾವು ಅವರ ಗೀತೆಗಳು, ಕಥೆಗಳು, ಗಾದೆಗಳು, ನಾಣ್ಣುಡಿಗಳ ಮೂಲಕ ಸಾಕಷ್ಟು ಕಾಣುತ್ತೇವೆ. ಇದಕ್ಕೆ ಮುಖ್ಯ ಕಾರಣ ದೇವರ ಬಗೆಗೆ ಇರುವ ಅವರ ಅಪಾರ ನಂಬಿಕೆ. ಸಾಹಿತ್ಯದಲ್ಲಿ ಕೂಡ ದೈವೀ ಪರಿಕಲ್ಪನೆಯನ್ನು ಬಹಳಷ್ಟು ಕಾಣುತ್ತೇವೆ. ಜನಪದರಿಗೂ-ದೇವರುಗಳಿಗೂ ಇರುವಂತಹ ನಂಟು ಬಿಡಿಸಲಾಗದ ಗಂಟು. ಪ್ರತಿ ಹೆಜ್ಜೆಯಲ್ಲೂ ದೇವರ ನೆನೆಯುವಿಕೆ ಕಾಣುತ್ತೇವೆ. ದೇವರುಗಳ ಕಥೆಗಳನ್ನು ಮಾನವನ ಕಥೆಗಳ ಸ್ವರೂಪದಲ್ಲಿ ಚಿತ್ರಿಸುತ್ತಾರೆ.

ಭಾರತೀಯ ಪರಂಪರೆಯ ಸಮಾಜದ ಚೌಕಟ್ಟಿನಲ್ಲಿ ಬಹಳ ಹಿಂದಿನಿಂದಲೂ ಮಹಿಳಾ ಸಮುದಾಯವು ಬೇರೆ ಬೇರೆ ಆಚರಣೆ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಶೋಷಣೆಗಳಿಗೆ ಒಳಗಾಗಿಯೇ ಬಂದಿದೆ. ನಂಬಿಕೆಗಳನ್ನು ಹೊರತುಪಡಿಸಿ ಬದುಕಿನ ಕಲ್ಪನೆಯೇ ಅಸಾಧ್ಯ. ಮಾನವನ ಬದುಕು ಎಷ್ಟು ಪ್ರಾಚೀನವೋ ನಂಬಿಕೆಗಳು, ಆಚರಣೆಗಳು ಕೂಡ ಅಷ್ಟೇ ಪ್ರಾಚೀನವಾದವು. ನಂಬಿಕೆಗಳು ಸಮುದಾಯದಲ್ಲಿ ಭಾವನಾತ್ಮಕವಾಗಿ ಬಿಂಬಿತವಾದರೆ, ಆಚರಣೆಗಳು ಕ್ರಿಯಾತ್ಮಕವಾಗಿವೆ.

ಸಾಮಾನ್ಯವಾಗಿ ಆಚರಣೆ ಎಂದರೆ ಜನ ಸಮುದಾಯದ ನಂಬಿಕೆಗಳು ಮತ್ತು ಸಂಪ್ರದಾಯಗಳು. ಇವೇ ಆಚರಣೆಗಳಾಗಿ ರೂಪ ತಾಳಿವೆ. ಆಚರಣೆಗಳು ಸಮುದಾಯದ ಒಂದು ಅಂಗವಾದ ಕಾರಣ ಪ್ರಾಚೀನ ಕಾಲದಿಂದಲೂ ಹಲವಾರು ಆಚರಣೆಗಳು ಹಲವಾರು ರೂಪಗಳಲ್ಲಿ ಮೈತಾಳಿವೆ. ಜನಪದರು ದೇವರ ಮೇಲೆ ಹೆಚ್ಚು ನಂಬಿಕೆಯನ್ನು ಹೊಂದಿದ್ದರ ಫಲದಿಂದ ಹಲವಾರು ದೈವಿಕ ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಜನಪದ ಸಮಾಜ ಪ್ರಧಾನವಾಗಿ ನಂಬಿಕೊಂಡು ಬಂದದ್ದು ಮನುಷ್ಯ ಪರವಾದ ದೇವರು-ಧರ್ಮವನ್ನು. ಇವರ ಧರ್ಮಕ್ಕೆ ಸಂಸ್ಥಾಪಕ, ಧರ್ಮಗ್ರಂಥಗಳಿಲ್ಲ. ಬದುಕಿನಲ್ಲಾಗುವ ಅನುಭವಗಳ ಮೂಲಕ ರೂಪಗೊಂಡ ನಂಬಿಕೆ, ಸಂಪ್ರದಾಯ, ಆಚರಣೆ ಮತ್ತು ಕಲ್ಪನೆಗಳೇ ಇವರ ಗ್ರಂಥಗಳೆಂದರೆ ತಪ್ಪಾಗಲಾರದು. ಅಷ್ಟೇ ಅಲ್ಲದೆ ಅವು ಪರಿವರ್ತನಾಶೀಲವೂ ಹೌದು. ಹಾಗೆಯೇ ಅವರು ಮೊದಲು ಪ್ರಕೃತಿಯನ್ನೇ ಪ್ರಧಾನವಾದ ದೈವವೆಂದು ನಂಬಿದವರು. ಇದರ ಹಿನ್ನೆಲೆಯಲ್ಲಿಯೇ ಇಕೋತಿ ದೇವಿ ಪುರಾಣ ಕಥನಗೀತೆ ನಿರ್ಮಿತವಾಗಿದೆ.

ಲೋಕಗಳ ಬಗ್ಗೆ ಜನಪದರು ಕೆಲವು ನಂಬಿಕೆಗಳನ್ನು ಹೊಂದಿರುವರು. ಲೋಕಗಳು ಹೇಗೆ ಹುಟ್ಟಿದವು ಎಂಬುದಕ್ಕೆ ಅವರದೇಯಾದ ಕಲ್ಪನೆಗಳಿವೆ. "ಪಾಪ-ಪುಣ್ಯ, ಸಾಮಾನ್ಯರು, ಅಸಾಮಾನ್ಯರು, ದುಷ್ಟರು, ದೇವರು ಈ ಮುಂತಾದ ಕಲ್ಪನೆಗಳಿಂದಲೇ ಅನಂತ ಲೋಕಗಳ ಕಲ್ಪನೆ ಹುಟ್ಟಿತೆಂದು ತೋರುತ್ತದೆ. ಜನಪದರ ಪೌರಾಣಿಕ ಕಲ್ಪನೆಯಂತೆ ಭೂಲೋಕ, ಪಾತಾಳಲೋಕ ಮತ್ತು ಸ್ವರ್ಗಲೋಕ ಎಂಬ ಮೂರು ಬಗೆಗಳನ್ನು ಕಾಣುತ್ತೇವೆ."[೧೫] ಜನಪದರು ತಾವು ವಾಸಿಸುವ ಲೋಕವನ್ನು ಭೂಲೋಕವೆಂದು, ತಮಗಿಂತ ಮೇಲೆ ಇರುವ, ತಮಗೆ ನಿಲುಕಲಾಗದ ಆಕಾಶವನ್ನು ಸ್ವರ್ಗಲೋಕವೆಂದೂ, ತಮಗಿಂತ ಕೆಳಗೆ ಇರುವ ತಾವು ಹೋಗಲು ಅಂಜುವ ಭೂಮಿ ಒಳಗಿನ ಆಳವನ್ನು ಪಾತಾಳ ಲೋಕವೆಂದೂ ನಂಬಿದ್ದರು. ಆದ್ದರಿಂದ ಸಕಲ ಜೀವರಾಶಿಗಳು ವಾಸಿಸುವ ಲೋಕ ಭೂಲೋಕ, ಅದರಲ್ಲಿ ಪುಣ್ಯ ಮಾಡಿದವರು ಸ್ವರ್ಗಕ್ಕೆ, ಪಾಪ ಮಾಡಿದವರು ಪಾತಾಳ ಲೋಕಕ್ಕೆ (ನರಕಕ್ಕೆ) ಹೋಗುವರೆಂಬ ಬಲವಾದ ನಂಬಿಕೆ ಅವರಲ್ಲಿ ಬೇರೂರಿತ್ತು. 'ಕಾಯಕವೇ ಕೈಲಾಸ' ಎಂಬ ಬಸವಣ್ಣನಂತಹ ಮೇಧಾವಿಗಳು ಅಂದಿನ ಸಾಮಾಜಿಕ ಪರಿಸರದಲ್ಲಿಯ ಸ್ವರ್ಗ-ನರಕಗಳ ಪರಿಕಲ್ಪನೆಯನ್ನು

---

೧೫ . ಕನ್ನಡ ಜನಪದ ಪ್ರಜ್ಞೆ: ವೀರಣ್ಣ ದಂಡೆ, ಪು.೧೭೨

'ಸತ್ಯ ನುಡಿಯುವುದೇ ದೇವಲೋಕ, ಮಿಥ್ಯ ನುಡಿಯುವುದೇ ಮರ್ತ್ಯಲೋಕ' ಎಂದು ಪ್ರತಿಪಾದಿಸಿದರು.

ಇಂದಿಗೂ ಕೂಡ ದೇವರನ್ನು ಕುರಿತು ಪ್ರಶ್ನೆಯು ನಿಗೂಢವಾಗಿರುವುದನ್ನು ಗಮನಿಸಿದಾಗ ಈ ಹೇಳಿಕೆಯು ನಿಜವಿರಬಹುದೆನಿಸುತ್ತದೆ. ಆದರೆ ಅಂದು ಆ ಮಾನವರ ಅಸಾಮರ್ಥ್ಯಕ್ಕೆ ಹೊರತಾದುದು ದೇವರ ಸಾಮರ್ಥ್ಯವೆಂದು ಹೇಳಿ ಹೋದರು. ಆದರೆ ಇಂದು ಅದು ವಿವಿಧ ನೆಲೆಯಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ. ಅನಂತರದಲ್ಲಿ ಇಂತಹ ಎಲ್ಲ ಅಂಶಗಳನ್ನು ಪುರಾಣಗಳಲ್ಲಿ, ಇತಿಹಾಸದಲ್ಲಿ, ಸಮಾಜದಲ್ಲಿ ಪುಷ್ಟಿಗೊಳಿಸಿರುವುದನ್ನು ಕಾಣುತ್ತೇವೆ. ಇದಲ್ಲದೇ "ಮಾನವನ ಸಾಮರ್ಥ್ಯ ಮೀರಿ ಉದ್ಭವಿಸಿದ ಪ್ರಶ್ನೆಗೆ ಉತ್ತರ ಕಾಣದೆ, ಅವನ ಅಸಹಾಯಕತೆಯ ಪ್ರತೀಕವಾಗಿ ದೇವರು ಸೃಷ್ಟಿಗೊಂಡನು. ಈ ಅಸಹಾಯಕತೆಯೇ ಸದ್ಭಾವನೆಯಾಗಿ ಮಾರ್ಪಟ್ಟು ತನ್ನ ಸಾಮರ್ಥ್ಯಕ್ಕೆ ಹೊರತಾದುದನ್ನು ದೇವರ ಸಾಮರ್ಥ್ಯವೆಂದು ಹೇಳಿ ಕಡೆಗಾದನು."[೧೬] ಪ್ರಕೃತಿಯ ಸೃಷ್ಟಿಯು ಹೇಗೆ ಆಯಿತು ಎಂದು ತಿಳಿಯುವಲ್ಲಿ ಅಸಹಾಯಕನಾದ ಮಾನವನು ಪ್ರಕೃತಿಯೇ ದೇವರೆಂದು ಭಾವಿಸಿ ಪೂಜೆ ಮಾಡುತ್ತಾ ಎಲ್ಲದರ ಸೃಷ್ಟಿಕರ್ತ ದೇವರೆಂದು ತಿಳಿದು, ಸಕಲವನ್ನು ದಯಪಾಲಿಸುವ ಸಾಮರ್ಥ್ಯ ಆತನಿಗಷ್ಟೇ ಸಾಧ್ಯ ಎಂದು ನಂಬುತ್ತಾ ಬಂದರು.

ಹೀಗೆ ಜನಪದರಲ್ಲಿ ದೈವಭಕ್ತಿಯ ವಿಚಾರಗಳ ವ್ಯಾಪ್ತಿ ವಿಶಾಲವಾಗಿದೆ. ಕಾರಣ ಜನಪದರು ದೇವರ ಮೇಲೆ ಇಟ್ಟಿರುವಂತಹ ನಂಬಿಕೆ, ಭಕ್ತಿ ಎಂದರೆ ತಪ್ಪಾಗಲಾರದು. ತಮ್ಮ ದಿನ ನಿತ್ಯದ ಜೀವನದಲ್ಲಿ ಪ್ರತಿದಿನವೂ ದೇವರನ್ನು ನೆನೆಯುತ್ತಾ ಕಷ್ಟ-ಕಾರ್ಪಣ್ಯಗಳನ್ನು ಹೇಳಿಕೊಳ್ಳುತ್ತ ಜೀವನ ನಡೆಸುತ್ತ ಬಂದಿರುವರು. ಪ್ರಕೃತಿಯಲ್ಲಿರುವ ಭೂಮಿ, ಆಕಾಶ, ಜಲ, ಮರ, ಕಲ್ಲು ಇತ್ಯಾದಿಗಳಲ್ಲಿ ದೇವರನ್ನು ಕಾಣುತ್ತಾ ಅಪಾರವಾದ ನಂಬಿಕೆಗಳನ್ನು ಹೊಂದಿ ಹಲವಾರು ಆಚರಣೆಗಳನ್ನು ಮಾಡುತ್ತಾ ಉಳಿಸಿ-ಬೆಳೆಸಿಕೊಂಡು ಬಂದಿದ್ದಾರೆ. ತಮ್ಮ ಇಷ್ಟ ದೈವಗಳನ್ನು ಅತ್ಯಂತ ಭಯ-ಭಕ್ತಿಯಿಂದ, ನೇಮ-ನಿಷ್ಠೆಯಿಂದ ಆರಾಧಿಸುವುದನ್ನು ಹಾಗೂ ಅಷ್ಟೇ ಸಲಿಗೆಯಿಂದ, ಆತ್ಮೀಯತೆಯಿಂದ, ಪ್ರೀತಿ-ವಾತ್ಸಲ್ಯದಿಂದ ದೇವರುಗಳನ್ನು ಕಾಣುತ್ತ ಬಂದಿರುವರು. ಅಂತಹ ಸಲುಗೆಯಿಂದ ದೇವಿ ಶಿವನ ಮದುವೆಯಾಗುವದನ್ನು ಕಲ್ಪಿಸಿ

---

೧೬. ಕನ್ನಡ ಜನಪದ ಪ್ರಜ್ಞೆ: ವೀರಣ್ಣ ದಂಡೆ, ಪು.೧೭೨

ಜನಪದರು ಅಡವಿ ಚುಂಚರ ಇಕೋತಿದೇವಿ ಪುರಾಣ ಎನ್ನುವಂತಹ ಕಥನಗೀತೆಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

ಇಕೋತಿದೇವಿ ಪುರಾಣ ಕಥನಗೀತೆಯಲ್ಲಿ ದೈವಿಕ ಆಚರಣೆ :

ಅಡವಿ ಚುಂಚರ ಬುಡಕಟ್ಟು ಸಮುದಾಯದ ಒಂದು ಪೌರಾಣಿಕ ಕಥನಗೀತೆ ಆಗಿದೆ. ಇವರು ಮೂಲತಃ ಆಂಧ್ರದ ಬೆಟ್ಟಗುಡ್ಡಗಳಿಂದ ಕರ್ನಾಟಕದವರೆಗೂ ಹರಡಿ- ಕೊಂಡವರು. ಇವರ ಮೂಲ ಕಸುಬು ಅಡವಿಯಲ್ಲಿ ದೊರಕುವ ಆಹಾರ ಸಾಮಗ್ರಿ ಸಂಗ್ರಹಣೆ ಮತ್ತು ಬೇಟೆ.

ಈ ಪುರಾಣವು ಅಡವಿ ಚುಂಚರು ಹೊಂದಿರುವ ಲೋಕದೃಷ್ಟಿಯನ್ನು ಕುರಿತು ಬಿಂಬಿಸುತ್ತದೆ. ಶಿವನನ್ನು ಕುರಿತು, ದೇವಿಯು ತನಗೊಂದು ಅಸ್ತಿತ್ವವಿದೆ. ಒಂದು ಹೆಸರು ಕೊಡು ಎಂದು ಬಗೆ ಬಗೆಯಾಗಿ ಕೇಳುವ ಬಗೆ ಸಂವಾದ ರೂಪದಲ್ಲಿದೆ. ಹಂತ ಹಂತವಾಗಿ 'ಧಣಿ' (ಶಿವ) ಇಕೋತಿದೇವಿಗೆ ಸವಾಲುಗಳ ಮೇಲೆ ಸವಾಲು ಹಾಕುತ್ತಾ ಪರೀಕ್ಷೆಗೆ ಒಡ್ಡುವ ಪರಿಯನ್ನು ವರ್ಣಿಸುತ್ತದೆ.

'ನನಗೊಂದು ಹೆಸರು ಕೊಡೋ ದೇವನೇ' ಎಂದು ಇಕೋತಿದೇವಿ ಶಿವನಲ್ಲಿ ಕೇಳುವ ಮುಖಾಂತರ ಪ್ರಾರಂಭವಾಗುತ್ತದೆ. ಆಗ ಶಿವನು ಯಾವ ಹೆಸರು ಹೊಳೆಯವಲ್ಲದು. ನಿನಗೆ ಹೆಸರು ಬೇಕೆಂದರೆ ಕೆಲವೊಂದು ಆಚರಣೆಗಳನ್ನು ಸವಾಲಾಗಿ ಸ್ವೀಕರಿಸು ಎಂದನು. ಅವೆಂದರೆ:

"ಹಗಲು ರಾತ್ರಿ ಮಾಡಿ ಬಾ
ರಾತ್ರಿ ಹಗಲು ಮಾಡಿ ಬಾ
ಕತ್ತಲು ಬೆಳಕು ಮಾಡು
ಬೆಳಕು ಕತ್ತಲು ಮಾಡು !"[೧೭]

ಹಗಲು ರಾತ್ರಿ ಮಾಡಲು ಸಾಧ್ಯವಿಲ್ಲ. ರಾತ್ರಿ ಹಗಲು ಮಾಡಲು ಸಾಧ್ಯವಿಲ್ಲ. ಶಿವನು ಹಾಕಿರುವ ಸವಾಲು ನೆರವೇರಿಸಲು ಅಸಾಧ್ಯವಾದದ್ದು, ಆದರೂ ಇನ್ನು ಕೆಲವೊಂದು ಸವಾಲುಗಳನ್ನು ಹಾಕುತ್ತಾನೆ ಶಿವನು :

"ಏಳು ಹೆಡೆ ಸರ್ಪದ ನಾಲಿಗೆ ಕೊಯ್ಕೊಂಡು ಬಾ
ಹಬ್ಬ ಹದಿನಾರು ವರ್ಷ ತಗೊಂಡ ಬಾ"

---

೧೭. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧

ಎಂದು ಹೇಳಿದ ಷರತ್ತುಗಳಿಗೆ ಒಪ್ಪಿ ಮಾಡಿದರೂ, ಹೆಸರು ಕೊಡದ ಶಿವನಿಗೆ 'ನೀನೇನು ಕೊಟ್ಟೆ ಹೆಸರುವಾ ಹಿಂದೂ ದಾಸರೀ ನನ್ನ ಹೆಸರು ನಾನೇ ಹೇಳ್ತಿನಿ ಕೇಳೋ' ಎಂದು ಭೂಮಿ ಕಂಪಿಸುವಂತೆ ನಾಟ್ಯವಾಡಿದಳು. ಇಕೋತಿದೇವಿ ತನಗೂ ಒಂದು ಅಸ್ತಿತ್ವವೆನ್ನುವುದು ಇದೆ. ಅದನ್ನು ಸಾದರಪಡಿಸಲು ಒಂದು ಅವಕಾಶ ಕೊಡು ಎಂಬುದನ್ನು ಹೀಗೆ ಹೇಳಿರಬಹುದು ಎನಿಸುತ್ತದೆ. ಒಬ್ಬ ಮಹಿಳೆ ತನ್ನನ್ನು ತಾನು ಗುರುತಿಸಿಕೊಂಡು ತನ್ನ ಅಸ್ತಿತ್ವವನ್ನು ಸಾದರಪಡಿಸಬಹುದೆಂಬ ಆಶಾಭಾವನೆಯನ್ನು ಇದರಲ್ಲಿ ಕಾಣುತ್ತೇವೆ.

ಈ ಕಥನಗೀತೆಯಲ್ಲಿ ಬರುವ ಅತಿಮಾನುಷ ಕಲ್ಪನೆಗಳು (ನಂಬಿಕೆಗಳು) :

→ ತನ್ನ ಹೆಸರನ್ನು ತಾನೇ ಹೇಳಿಕೊಂಡು ಉರಿಯುವ ಬೆಂಕಿಗೆ ಹಾರಿ ಕರಿಗುಬ್ಬಿಯಾಗಿ ಪಾರಾಗಿ ಹೊಗೆಯೊಳಗ ಹಾರಿ ಹೋದ ಸನ್ನಿವೇಶ.

→ ಗುಬ್ಬಿ ಅಡವಿಯಾಗ ಬಿದ್ದಾಗ ಆದ ಮಹಿಮೆ (ನಡೆದಾಡಿದಲ್ಲಿ ಭಂಡಾರ ಕುಂಕುಮದ ಹೆಜ್ಜೆ)

→ ಪಾರ್ವತಿ ಪರಮೇಶ್ವರರು ಭೂಲೋಕಕ್ಕೆ ಆಗಮಿಸಿ ಕೋಣಕ್ಕೆ ಜೀವ ತುಂಬಿದ ಸನ್ನಿವೇಶ.

→ ದೇವಗನ್ನೆಯರು ಏಳು ಮಂದಿ ಏಳು ರೀತಿ ಕೋಣವನ್ನು ತಿನ್ನಲು ಲೆಕ್ಕ ಹಾಕಿದರು.

→ ಪರಮೇಶ್ವರನ ಆಶೀರ್ವಾದದಿಂದಾದ ಪರಿಣಾಮಗಳೆಂದರೆ:

೧. ಕೋಣದ ಒಂದು ಕೋಡು ಪೂರ್ವಕ್ಕೆ, ಇನ್ನೊಂದು ಪಶ್ಚಿಮಕ್ಕೆ

೨. ಆಕಾಶ-ಭೂಮಿ ಒಂದಾಯಿತು

೩. ಕೋಣ ದೊಡ್ಡ ಗುಡ್ಡ ಆಯಿತು

೪. ಏಳು ಮಂದಿ ದೇವಗನ್ನೆಯರು ಮಲ್ನಾಡ ಸೇರಿದರು.

ಅಡವಿ ಚುಂಚರು ಕಾಡಿನಲ್ಲಿಯೇ ಹೆಚ್ಚು ವಾಸವಾಗಿರುವ ಕಾರಣ ಪ್ರಕೃತಿಯನ್ನೇ ಅವರು ದೇವರಂತೆ ತಿಳಿದು ಪರಮೇಶ್ವರನ ಆಶೀರ್ವಾದದಿಂದಾದ ಪರಿಣಾಮಗಳನ್ನು ಪ್ರಕೃತಿಗೆ ಹೋಲಿಸಿಕೊಳ್ಳುತ್ತಾರೆ. ಮುಖ್ಯವಾಗಿ ಜನಪದರು ಶಬ್ದಗಾರುಡಿಗರು ತಮಗೆ ಬೇಕಾದ ಹಾಗೇ ಶಬ್ದ ಚಮತ್ಕಾರವನ್ನು ಬಳಸಿ ಕಥೆಯನ್ನು, ಗೀತೆಯನ್ನು ಸೃಷ್ಟಿಸುವಂತಹ ಸೃಜನಶೀಲ ಶಕ್ತಿ ಅವರಲ್ಲಿದೆ. ಆದ್ದರಿಂದ ಅವರು ನಂಬಿ ಬಂದ ಅತಿಮಾನುಷ ಕಲ್ಪನೆಗಳಿಂದಲೇ ನಂಬಿಕೆಗಳು ಜನರಲ್ಲಿ ಬೇರೂರಿ ಮೌಖಿಕವಾಗಿ ಬೆಳೆದು ಬಂದು ಸಾಹಿತ್ಯದಲ್ಲಿ

ಒಡಮೂಡಿದವು. ಶಿವನಿಗೆ ಮರಳಿ ಸವಾಲನ್ನು ಹಾಕುತ್ತಾ 'ನೀನು ನೀಚ ಇದೀಯಾ, ನೀನೇನು ನನಗೆ ಹೆಸರು ಕೊಟ್ಟೆ ಎಂದು ಉದ್ಗಾರದಿಂದ ಗಂಧದ ಕಟ್ಟಿಗೆಯನ್ನು ಒಟ್ಟಿದಳು'. ಹೆಸರು ಇಲ್ಲದೇ ಇರುವ ಕಾರಣ ಸುಟ್ಟುಕೊಂಡು ಸಾಯಲು ಮುಂದಾದಳು. ಏಳು ಡ್ರಂ ಎಣ್ಣೆ ಸುರಿವಿಕೊಂಡು ನನ್ನ ಹೆಸರು 'ಹನ್ನೆರಡು ಕೋಸಿ ದುರ್ಗಾಮಾತೆ' ಹೋ ಎಂದು ಧಗ ಧಗ ಉರಿಯುವ ಬೆಂಕಿಗೆ ಹಾರಿದಳು.

ಬೆಂಕಿಗೆ ಹಾರಲು ಕಾರಣವೆಂದರೆ ಇಕೋತಿದೇವಿಗೆ ತನ್ನ ಅಸ್ತಿತ್ವವನ್ನು ಗುರುತಿಸದೆ ಇದ್ದದ್ದು. ಹಾಗಾಗಿ ತನ್ನನ್ನು ತಾನೇ ಗುರುತಿಸಿಕೊಂಡು ಉರಿಯುವ ಬೆಂಕಿಗೆ ಹಾರಿ ಸುಟ್ಟು ಹೋದಳು. ಇನ್ನೊಂದು ಅರ್ಥದಲ್ಲಿ ಅವಲೋಕಿಸಿದರೆ ದುರ್ಗಾಮಾತೆ ಎಂಬ ಮಹಿಳೆಗೆ ಯಾವುದೋ ಒಂದು ರೀತಿಯ ಶೋಷಣೆಯಾಗಿದೆ. ಅದನ್ನು ಈ ರೀತಿಯಾಗಿ ತೋರ್ಪಡಿಸಲಾಗಿದೆ ಎಂಬ ಗ್ರಹಿಕೆ.

ಕಟ್ಟೆ ಮಾರವ್ವ ಕಥನಗೀತೆಯಲ್ಲಿ ಆಚರಣೆ :

ಗ್ರಾಮ ಸಂಸ್ಕೃತಿಯ ಮಾರಿಯ ಗೀತೆಯನ್ನು ಕಲಿತು ಸಿರಿಯಜ್ಜಿ ಹಾಡಿರುವ ಈ ಕಥನಗೀತೆಯಲ್ಲಿರುವ ಆಚರಣೆಗಳೆಂದರೆ:

- ಕೋಣನ ಬಲಿ
- ಬೇವಿನ ಸೊಪ್ಪು ಸುತ್ತಿಕೊಂಡು ಬೆತ್ತಲೆ ಸೇವೆ
- ಬಾಯಿ ಬೀಗ
- ಸಿಡಿಯ ಸೇವೆ

ಇವೆಲ್ಲ ಆಚರಣೆಗಳ ಪ್ರಸ್ತಾಪವನ್ನು ಕಾಣುತ್ತೇವೆ. ಇವೆಲ್ಲವೂ ಬುಡಕಟ್ಟು ಸಂಸ್ಕೃತಿಯಲ್ಲಿ ಕಾಣುವುದಿಲ್ಲ. ಆದರೆ ಗ್ರಾಮೀಣ ನಾಗರಿಕತೆಗೆ ಸಿಲುಕಿರುವ ಬುಡಕಟ್ಟು ಸಮೂಹ ಮಾರಿ ಜಾತ್ರೆಗಳಲ್ಲಿ ಬೇವಿನುಡಿಗೆ, ಬಾಯಿ ಬೀಗ, ಸಿಡಿ ಮತ್ತು ಬಲಿ ಆಚರಣೆಗಳಲ್ಲಿ ಭಾಗವಹಿಸುವುದನ್ನು ಕಾಣುತ್ತೇವೆ. ನಾಲ್ಕು ತರಹದ ಆಚರಣೆಗಳ ಮುಖೇನ ಮಾರವ್ವ ದೇವತೆಯನ್ನು ಕಾಣುತ್ತಾರೆ. ಆಕೆಯನ್ನು ಸಂತೃಸಿದವು ಎಂಬ ಸಮಾಧಾನ ದೊರಕುತ್ತದೆ.

ಬೇವಿನ ಮರದಲ್ಲಿ ಮಾರವ್ವಳನ್ನು ಕಾಣುವ ಸ್ವರೂಪ :

"ಮಟ್ಟಮಧ್ಯನದಾಗ ವುಟ್ಟಿತು ಬೇವಿನಮರ
ವುಟ್ಟುತಲೆ ಕಾಯಿ ಜಗುವೂತ
ವುಟ್ಟುತಲೆ ಕಾಯಿ ಜಗುವೂತ ಮಾರಕ್ಕ

ವುಟ್ಟಾಳು ಬೇವಿನ ಮರದಾಗ
ಮೂಡ್ಯಾಳು ಬೇವಿನ ಮರದಾಗ"[೧೮]

ಎನ್ನುವಲ್ಲಿ ಜನಪದರು ಮಾರವ್ವಳ ಸ್ವರೂಪವನ್ನು ಬೇವಿನಮರದಲ್ಲಿ ಕಾಣುತ್ತಿದ್ದರು. ಇಂದಿಗೂ ಕೂಡ ಬೇವಿನಮರಕ್ಕೆ ಪೂಜಾ ವಿಧಿ-ವಿಧಾನಗಳು ನಡೆಯುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣ ಜನಪದರು ನಂಬಿದ ಪ್ರತಿಯೊಂದರಲ್ಲೂ ಕಾಣುವ ದೇವರ ಸೃಷ್ಟಿಯ ಪರಿಕಲ್ಪನೆ. ಅವರಿಗಾದ ಅನುಭವಗಳನ್ನು, ತಮಗೆ ತಿಳಿದ ವಿಷಯವನ್ನು ಗೀತೆಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಅದರ ಪ್ರತೀಕವಾಗಿಯೇ ಈ ಆಚರಣೆ-ಸಂಪ್ರದಾಯಗಳನ್ನು ಉಳಿಸಿ-ಬೆಳಿಸಿಕೊಂಡು ಹೋಗುವುದು ಕಂಡುಬರುತ್ತದೆ.

ಊರಿನಲ್ಲಿ ಮಾರಿದೇವತೆಯನ್ನು ಕುರಿತು ಕೆಲವೊಂದು ನಿಯಮಗಳನ್ನು ಅನುಸರಿಸುವುದರ ಮೂಲಕ ಜಾತ್ರೆಗೆ ಚಾಲನೆಯನ್ನು ನೀಡುತ್ತಾರೆ. ಅವು ಇಂತಿವೆ:

ಮಾರಿದೇವತೆಯ ಆಚರಣೆಗಳು : (ಋಗ್ವೇದದ ಅರಣ್ಯಕಗಳ ಯಜ್ಞಕ್ರಮವನ್ನು ಹೋಲುತ್ತವೆ)

- ಯಾವುದೇ ಗ್ರಾಮದ ಶಕ್ತಿದೇವತೆಯ ಜಾತ್ರೆ ಆಚರಣೆಯಲ್ಲಿ ಮೊದಲು ಧ್ವಜಾರೋಹಣವಾಗುತ್ತದೆ.
- ಪೂಜಾರಿ ಮತ್ತು ಊರ ಯಜಮಾನರು ಕಂಕಣಸ್ಥರಾಗುತ್ತಾರೆ.
- ಗುಡಿ ಅಥವಾ ದೇವಸ್ಥಾನದ ಮುಂದೆ ಆಳವಾದ ಗುಂಡಿ ತೋಡಿ ದೊಡ್ಡ ಸೌದೆಯ ತುಂಡು ಒಟ್ಟಿ ಬೆಂಕಿ ಹಾಕಲಾಗುತ್ತದೆ.
- ಕೊಂಡ ಹಾಯುವುದರೊಂದಿಗೆ ದೇವತೆಯ ಹೆಸರಿನಲ್ಲಿ ಕುರಿ, ಕೋಣ ಇತ್ಯಾದಿ ಪ್ರಾಣಿಗಳ ಬಲಿ ಕೊಡುವುದು.
- ದೇವತೆಯ ಹೆಸರಿನಲ್ಲಿ ಬಿಟ್ಟ ಪ್ರಾಣಿಗಳಿಗೆ ಜನಿಗೆ ಕುರಿ, ಕೋಣ ಎಂದು ಕರೆಯುವ ವಾಡಿಕೆ ಇದೆ. ಇಂತಹ ಪ್ರಾಣಿಗಳು ಎರಡು ವರ್ಷಗಳ ಕಾಲ ಸ್ವತಂತ್ರವಾಗಿ ಮೇಯ್ದು ತಿರುಗಲು ಬಿಡುವರು (ಯಜ್ಞಾಶ್ವಗಳಿದ್ದಂತೆ).

ಯಾವ ದೇವರು ಕೂಡ ಯಾವುದೇ ಪ್ರಾಣಿ ಬಲಿ, ನರಬಲಿಗಳನ್ನು ಕೇಳುವುದಿಲ್ಲ. ಇವನ್ನೆಲ್ಲಾ ಕೊಡುವುದಕ್ಕೆ ಮುಂದಾಗುವುದು ಜನರು. ದೇವರ ಹೆಸರಿನಲ್ಲಿ ಬಲಿ ಕೊಡುವುದರ ಮೂಲಕ ಆಚರಣೆ ಮುಂದುವರೆಸಿಕೊಂಡು ಬರುತ್ತಿದ್ದಾರೆ.

---

೧೮. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೨೮೦

ಹೀಗೆ ದೇವರ ಹೆಸರಿನಲ್ಲಿ ಕುರಿ, ಕೋಳಿ, ಕೋಣ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಬೆಳೆದು ಹೆಮ್ಮರವಾಗಿ ಬೆಳೆದು ಬಂದಿದೆ. ಪ್ರಾಣಿಬಲಿ ನಿಷೇಧಿಸಲಾಗಿದ್ದರೂ ಇನ್ನೂ ಹಲವಾರು ಸಂಪ್ರದಾಯಗಳ ಹಿನ್ನೆಲೆಯಲ್ಲಿ ಆಚರಣೆಗಳ ಮುಖಾಂತರ ಪ್ರಾಣಿಬಲಿ ನಡೆಯುತ್ತಿದೆ. ಏಕೆಂದರೆ ಬಲಿ ಕೊಡದಿದ್ದರೆ, ಆಚರಣೆ ನಿಲ್ಲಿಸಿದರೆ ದೇವಿಯಿಂದ ಏನಾದರೂ ಕೇಡುಂಟಾಗುತ್ತದೆ ಎಂಬ ಭಯದ ಭೀತಿಯಿಂದ ಬಲಿ ಕೊಡಲು ಮುಂದಾಗುತ್ತಾರೆ.

"ಮಾರಿ ಸಂಬಂಧದ ಎಲ್ಲ ಆಚರಣೆ ಮತ್ತು ಜಾತಿ ಸಂಘರ್ಷದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಕಥೆ ಇವೆಲ್ಲವೂ ಹಿಂಸೆಯ ಹಿನ್ನೆಲೆಯಲ್ಲೇ ಇದ್ದು, ಬಹುಶಃ ಯುದ್ಧಾನಂತರ ಗ್ರಾಮ ವಾತಾವರಣದಲ್ಲಿ ಜನ ಹಿಂಸೆಗೆ ಹೆದರದಂತೆ, ಅದರ ಗುಂಗಿನಲ್ಲೇ ಇರುವಂತೆ ಅಧಿಕಾರಶಾಹಿ ಇದನ್ನು ಬಳಕೆಗೆ ತಂದು ಕಾಯ್ದುಕೊಂಡು ಬಂದಂತೆ ಕಾಣಿಸುತ್ತದೆ. ಅದರಿಂದಲೇ ಮಾರಿದೇವತೆಯ ಕೊಂಡದ ಆಚರಣೆಗಳು, ಪ್ರಾಣಿಬಲಿ ಇವು ರಾಜ ಮಹಾರಾಜರ ಯಜ್ಞ ವಿಧಿ–ವಿಧಾನಗಳಂತೆ ಕಾಣಿಸುತ್ತವೆ."[೧೯] ಮಾರಿಗೆ ಕೊಡುವ ಕೋಣನ, ಕುರಿಯ ಬಲಿಯೇ ಗುಡ್ಡದಂತೆ ಬಿದ್ದಿತ್ತು ಎಂಬುದನ್ನು ಈ ಕಥನಗೀತೆಯಲ್ಲಿ ಕಾಣುತ್ತೇವೆ. ಅಂದರೆ ಮಾರಿದೇವತೆಗೆ ಕುರಿ–ಕೋಣಗಳನ್ನೇ ರಾಶಿರಾಶಿಯಾಗಿ ಬಲಿ ಕೊಡಲಾಗುತ್ತಿತ್ತು ಎಂದು ತಿಳಿಯುತ್ತದೆ.

ಮಾರಮ್ಮಳಿಗೆ ಕುರಿ–ಕೋಣ ಬಲಿ ಕೊಡುವ ಪದ್ಧತಿಯ ಬಗೆಗೆ ಒಂದು ಕಥೆ ಪ್ರಚಲಿತದಲ್ಲಿ ಇದೆ. ಸ್ವಲ್ಪ ವ್ಯತ್ಯಾಸಗಳುಂಟಾದರೂ ಅವುಗಳ ಆಚರಣೆ ಒಂದೇಯಾಗಿರುವುದು. ಒಬ್ಬ ಕೆಳವರ್ಗದ ವ್ಯಕ್ತಿ ಸುಳ್ಳು ಹೇಳಿ ಮೇಲುವರ್ಗದ ಕನ್ಯೆಯೊಬ್ಬಳನ್ನು ಮದುವೆಯಾಗುತ್ತಾನೆ. ಆಕೆ ಆತನನ್ನು ಮೊದಮೊದಲು ಉನ್ನತ ವರ್ಗದವನೆಂದು ಭಾವಿಸಿದ್ದಳು. ಒಂದು ದಿನ ಆತನ ತಾಯಿ ಮನೆಗೆ ಬಂದಳು. ಕೆಲವು ದಿನ ಮಗನ ಮನೆಯಲ್ಲಿದ್ದವಳಿಗೆ ಸೊಸೆಯು ಪ್ರತಿನಿತ್ಯ ತಯಾರಿಸುತ್ತಿದ್ದ ಸಸ್ಯಾಹಾರದ ಅಡುಗೆಯಿಂದ ಬೇಸರವಾಯಿತು. 'ಏನು ತಿಂದರೆ ಏನು, ಕುರಿ ಎತ್ತಿನ ನಾಲಿಗೆ ತಿಂದದ್ದಕ್ಕೆ ಯಾವುದು ಸಮ' ಎಂದಳು. ಆಗ ಸೊಸೆಗೆ ಗಂಡ ಮತ್ತು ಅತ್ತೆ ಕೆಳವರ್ಗದವರೆಂದು ಅರಿವಾಗುತ್ತದೆ. ಗಂಡನಿಗೆ ಶಾಪಕೊಟ್ಟು ಜೀವ ತೊರೆಯುತ್ತಾಳೆ. ಜೀವ ತೊರೆಯುವಾಗ ತಾನು "ಮಾರಿದೇವತೆಯಾಗಿ ತನಗೆ ಪ್ರತಿವರ್ಷ ಬಲಿಕೊಡುವ ಕೋಣವೇ ತನ್ನನ್ನು ನಂಬಿಸಿ ಮದುವೆಯಾದ ಗಂಡನಾಗಲಿ ಎಂದಳು."[೨೦] ಮಾರವ್ವದೇವಿ ತನ್ನ ಗಂಡ ಮತ್ತು ಅತ್ತೆ ಮಾಡಿದ ಮೋಸವನ್ನು ನೆನೆದು, ತಾನು ಕೆಳವರ್ಗಕ್ಕೆ

---

೧೯. ಸಾವಿರದ ಸಿರಿಬೆಳಗು: ಕೃಷ್ಣಮೂರ್ತಿ ಹನೂರ, ಪು.೨೭೯

೨೦. ಅದೇ, ಪು.೧೮

ಸೇರಿದೆನಲ್ಲಾ ಎಂಬ ಕೊರಗು ಒಂದು ಕಡೆ ಕಂಡರೆ, ಇನ್ನೊಂದು ರೀತಿಯಲ್ಲಿ ತನ್ನ ನಂಬಿಕೆಗೆ ಮೋಸ ಮಾಡಿದನಲ್ಲ ಎಂಬ ಕೊರಗು ಕಾಣುತ್ತದೆ. ಇಂದು ಮಾಂಸವನ್ನು ಕೆಳವರ್ಗ-ಮೇಲ್ವರ್ಗದವರೆಲ್ಲರೂ ಸೇವಿಸುವರು. ಆದರೆ ಅಂದು ಮಾಂಸ ಸೇವನೆ ಮಾಡುವವರೆಂದರೆ ಕೆಳ ಜಾತಿಯವರಷ್ಟೇ. ಆದ್ದರಿಂದ ಅಂಥವರನ್ನು ಕೆಳ ವರ್ಗದವರೆಂದು ಸರಳವಾಗಿ ಗುರುತಿಸಲಾಗುತ್ತಿತ್ತು. ವರ್ಗ ಸಂಘರ್ಷಗಳೆಂಬುವವು ಅಂದಿನಿಂದ ಇಂದಿನವರೆಗೂ ಚಾಲ್ತಿ-ಯಲ್ಲಿರುವುದಕ್ಕೆ ಇದೂ ಕೂಡಾ ಒಂದು ಉದಾಹರಣೆಯಾಗಿದೆ.

ತುಪ್ಪ ಹೊತ್ತುಕೊಂಡು, ಪುತ್ರರನ್ನು ಎತ್ತಿಕೊಂಡು ಚಿಕ್ಕವಲ್ಲರಳ್ಳಿ ಕೆರೆಗೆ ಸತ್ತಿಗತಿಯೆಂದು ನನ್ನಣ್ಣಗಳು ನಡೆದರು. ತಾಯಿ ಮಾರವ್ವಗ ಎರಕಳ್ಳಿ ಚಿಕ್ಕಣ್ಣ ಸೀರೆ ತಂದವನೇ ಉಡು ಬಾರೆ ಎನ್ನುತ್ತಾ ಮಾರವ್ವಳಿಗೆ ಸೀರೆ ತಂದ ಪರಿ. ಅದು ಮಾರವ್ವಳಿಗೆ ಇಷ್ಟವಾಗದೇ ಮುನಿಯುವ ಬಗೆಯನ್ನು ಕಾಣುತ್ತೇವೆ. ಮುಂದೆ ಮಾರವ್ವಳಿಗೆ ಕೆಂಪಂಚಿನ ಸೀರೆ, ಕರಿಯಂಚಿನ ಸೀರೆ, ಚಂದ್ರಾವಿ ಸೀರೆ ಉಡಿಸಿ ಪೂಜೆ ಮುಗಿಸಿ ಕೈಯನ್ನು ಮುಗಿದರು.

"ಅಪ್ಪಗೋಸಣ್ಣನ ಅಟ್ಟೀಯವುದಿಯಾಗ
ಲೆತ್ತನಾಡ್ಯಾಳೆ ಐದೊರಸ
ಲೆತ್ತನಾಡ್ಯಾಳ ಐದೊರಸ ಗೋಸಣ್ಣಾನ
ಅತ್ತೊರಸದ ಮರಿಯೆ ನನಗೆಂದು"[೨೧]

ಎಂದು ಮಾರವ್ವಾ ತನಗೆ ಬಲಿ ಕೊಡಬೇಕಾದ ಪ್ರಾಣಿ ಹೇಗಿರಬೇಕೆಂದು ತಿಳಿಸುವ ಬಗೆಯನ್ನು ಇಲ್ಲಿ ಕಾಣಬಹುದು. ಆದ್ದರಿಂದ ಕುರಿಯೆದ್ದು ಬರುವಾಗ ಕರ ಎತ್ತಿ ನೋಡುವಳು. ಕರಿಯಬೇವಿನ ಮರೆಯಾಗಿ ಗೋಸಣ್ಣನ ಕುರಿಯ ಹಿಂಡಿಗೆ ಅಡ್ಡ ಬಂದು ನಿಲ್ಲುವಳು. ಹಿಂಡೆದ್ದು ಬರುವಾಗ ಗುಂಡನೆತ್ತಿ ನೋಡುವಳು. ಕೊಂಬೆಬೇವಿನ ಮರದಾಗ ಸಿರಿಯಣ್ಣನ ಹಿಂಡಿಗೊಂದ ಆಳವನ್ನು ಕಳುಹಿಸುವಳು.

ಮಾರವ್ವ ತನಗೆ ಶೋಷಣೆಯಾದ ಹಿನ್ನೆಲೆಯಲ್ಲಿ ಪ್ರಾಣಿಬಲಿಯನ್ನು ಬೇಡುವುದರ ಮುಖಾಂತರ ತನ್ನ ಸೇಡು, ನೋವ, ಆಕ್ರೋಶವನ್ನು ಹೊರಹಾಕುವುದರ ಮೂಲಕ ಪ್ರತಿಭಟಿಸಿದ್ದಾಳೆ. ಮಾರವ್ವ ಸಮಾಜಕ್ಕೆ ಮುಖವನ್ನು ತೋರಿಸದೇ ಮುನಿಸಿಕೊಂಡಿರುವಳು.

---

೨೧. ಸಾವಿರದ ಸಿರಿಬೆಳಗು: ಕೃಷ್ಣಮೂರ್ತಿ ಹನೂರ, ಪು.೨೮೭

ಅವಳಿಗೆ ಸಮಾಧಾನವಾಗಬೇಕಾದರೆ ಇಡೀ ದೇಶ ಜನತೆ ಆಕೆಗೆ ಕೈಮುಗಿದು ಆಕೆಯ ಸಿಟ್ಟನ್ನು ಕಡಿಮೆ ಮಾಡಬೇಕೆಂದು ಹೇಳುವುದನ್ನು ಕಥನಗೀತೆಯಲ್ಲಿ ಹೀಗೆ ಹೇಳಲಾಗಿದೆ.

"ಅಸೆಗಲ್ಲಿನ ಮ್ಯಾಲೆ ಲೇಸಾಗಿ ಕುಂತವಳೆ
ದೇಸಾಕ ಮಾರಿತಿರುವ್ಯವಳೆ
ದೇಸಾಕ ಮಾರಿತಿರುವ್ಯವಳೆ ನಲ್ಲರಳ್ಳಿ
ಬಳೆಕಯ್ಯ ಮುಗುದಾರೆ
ಒಡ್ಡುಗಲ್ಲಿನ ಮ್ಯಾಲೆ ಗುಡ್ಡಾಗಿ ಕುಂತವಳೆ
ಗುಡ್ಡಾಕ ಮಾರಿ ತಿರುವ್ಯಾಳೆ
ಗುಡ್ಡಾಕ ಮಾರಿ ತಿರುವ್ಯಾಳೆ ಚಿಕ್ಕೇನಳ್ಳಿ
ದೊಡ್ಡೋರು ಕಯ್ಯೆತ್ತಿ ಮುಗುದಾರೆ"[೨೨]

ಮಾರಿಯನ್ನು ತಿರುವಿ ಮಾರವ್ವ ಚಿಕ್ಕೇನಳ್ಳಿಯ ಹತ್ತಿರ ಕಲ್ಲಿನಲ್ಲಿ (ಒಡ್ಡುಗಲ್ಲಿನ) ಗುಡ್ಡಕ್ಕೆ ಮುಖಮಾಡಿ ನೆಲೆಸಿರುವಳು. ಏಕೆಂದರೆ ಸಮಾಜದಿಂದಾಗಿರುವ ಶೋಷಣೆಗೆ ಒಳಪಟ್ಟು ಪ್ರತಿಭಟನೆ ಮಾಡಿದ ದಿಟ್ಟ ಮಹಿಳೆ ಇರಬಹುದು. ಅದಕ್ಕಾಗಿಯೇ ಇಂದಿಗೂ ಕೂಡ ಮಾರವ್ವ ದೇವತೆಯನ್ನು ಕಂಡರೆ ಭಯ-ಭಕ್ತಿ ಹೆದರಿಕೆಯಿಂದ ನಡೆದುಕೊಳ್ಳುತ್ತಿರುವರು. ಬಟ್ಟದುರುಬಿನ ಕರಿಮಾರಿ ತಾಯಿ ಮಾರಮ್ಮಳನ್ನು ಕಂಡರೆ ಸಳಿ(ಚಳಿಜ್ವರ)ಜರ ಬಿಟ್ಟು ಹೋಗುವವು ಎಂದು ವ್ಯಕ್ತಪಡಿಸುತ್ತದೆ.

ಮಾರಮ್ಮಳಿಗೆ ಕೋಣ ಬಲಿ ಕೊಡುವ ಆಚರಣೆ :

ಶುಕ್ರವಾರದ ದಿನ ಚುಕ್ಕೆ ಹುಟ್ಟೋ ಹೊತ್ತಿಗೆ ಚಿಪ್ಪುಗೊಡಲಿಯನ್ನು ಸಾಣೆ ಹಿಡಿಸ್ಯಾರೆ, ಗೌಡನ ಪಟ್ಟದ ಕ್ವಾಣ ಬಾಯಿ ಬಿಡುತಾವೆ. ಮಂಗಳವಾರದ ದಿನ ಮಾರ ಮಧ್ಯನದಾಗ ಗಂಡುಗೊಡಲಿಗೆ ಸಾಣೆ ಇಡಿಸಿದರು. ಗೋಸಣ್ಣಾನ ಕಂಬಿನ ಕುರಿಬಾಯಿ ಬಿಡುತಾನೆ.

ಚಿಕ್ಕನಲ್ಲರಳ್ಳಿ ಸೊಪ್ಪಿನ ಕೊನೆಯ ಮ್ಯಾಲೆ ಅಕ್ಕಿ ಹೊಂಬಾಳೆ, ರಾಯನಲ್ಲರಳ್ಳಿ ಬೇವಿನ ಕೊನೆಯ ಮ್ಯಾಲೆ ಕಾಯಿ ಹೊಂಬಾಳೆ, ಬೆಲ್ಲದಾರುತಿ ಗೌಡ ಈರಣ್ಣನ ಮನೆಯಿಂದ ಮಾರವ್ವಳ ಅಪೇಕ್ಷೆಯ ಮೇರೆಗೆ ಬರುತ್ತವೆ. ಪಡುವಲ ಕೇರಿಯಲ್ಲಿ ಅರುದಿಗೌಡನ ಮನೆಯಲ್ಲಿ ಅಕ್ಕಮಾರವ್ವ ಪಡುಲಕ್ಕಿಸೂಡಿ ಬರುವುದು ಸಡಗರದಿಂದ ನಡೆದಿದೆ. ಮುಂದಿನ ಕೇರಿಯಲ್ಲಿ

---

೨೨. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೨೮೭

ಜಂಬಾರವೇನಮ್ಮ ಸಂಬುಗೌಡರ ಮನೆಯಲ್ಲಿ ಅಕ್ಕಮಾರಿ ಅಂಗಾರಸೂಡಿ ಬರುತ್ತಾಳೆ ಎಂದು ಹೇಳುತ್ತಾ ಮಾರವ್ವ ಹುಟ್ಟಿ ಬರುವ ನೆಲೆಯನ್ನು ಇಲ್ಲಿ ಕಾಣಲಾಗಿದೆ. ಮುಂದೆ ಹುಟ್ಟಿ ಬಂದು ಹಟ್ಟಿ ಹಾಗೂ ನಾಡಗೌಡನಲ್ಲಿ ಮಾರವ್ವ ಬೇಡುವ ವಸ್ತುಗಳನ್ನು ತಿಳಿಸಲಾಗಿದೆ. ಆಕೆ ಬೇಡುವುದಿಲ್ಲ. ಆದರೆ ಜನರ ನಂಬಿಕೆಯಿಂದ ಆಕೆಯು ಮುತ್ತೈದೆ ವಸ್ತುಗಳನ್ನು ಬೇಡುವಳೆಂದು ಅವುಗಳನ್ನು ಊರಿನ ಗೌಡರಿಂದ ತರಿಸಿ ಅಲಂಕರಿಸುವರೆಂದು ತಿಳಿದು ಬರುತ್ತದೆ.

ಹಟ್ಟಿಗೌಡನನ್ನು ಮತ್ತು ನಾಡಗೌಡನನ್ನು ಮಾರಕ್ಕ ಬೇಡುವ ವಸ್ತುಗಳು :

- ಬೆಟ್ಟಿಗುಂಗುರ
- ಕೈಗೆ ಬಳೆ ಬಾಲಂದಿಗಳನ್ನು ಹಟ್ಟಿಗೌಡರ ಮಗ ತಂದನು.
- ಕಾಲಿಗುಂಗುರ
- ಕೈಗೆ ಬಳೆಗಳನ್ನು ನಾಡಗೌಡರ ಮಗ ತಂದನು.

ತಾಯಿ ಮಾರವ್ವ ದೇವಮಲ್ಲಿಕನಾರುತಿ ಕಟ್ಯಾಳೆ, ಸ್ವಾಮಿ ನಿಂಗಣ್ಣ ಒಳಗೆ ಕೇಳ್ಯಾನೇ ತಾಯಿ ನೀನ್ಯಾರ ಮಗಳೆಂದು ಆಗ ರೂಡಿಗೀಸ್ವರನ ಮಗಳು, ಸೃಷ್ಟಿಗೀಶ್ವರನ ಮಗಳೆಂದು ಮಾರಮದ್ಯನದಾಗ ತಾಯೆತ್ತಾವೋದಾಳೆಂದರೆ ;

"ಊರು ಲಾಲೂಸಿ ಬೆದಕೀದೆ
ಊರು ಲಾಲೂಸಿ ಬೆದಕೀದೆ ಬೇವೀನ
ಜೋಲಿನಾಗವಳೆ ಕಿಡಿಗಣ್ಣೆ
ಮಟ್ಟಮದ್ಯನದಾಗ ಸತ್ಯತ್ಲಗೋದಾಳು
ಅಟ್ಟಿಲಾಲೂಸಿ ಬೆದಕೀದೆ
ಅಟ್ಟಿಲಾಲೂಸಿ ಬೆದಕೀದೆ ಬೇವೀನ
ತೊಟ್ಟಿನಾಗವಳ ಕಿಡಿಗಣ್ಣೆ"[೨೩]

ಊರಿನ ಜನತೆ ಮಾರಮ್ಮ ದೇವತೆಯೆಂದು ಭಾವಿಸಿದ ಮೇಲೆ ಅವಳನ್ನು ಕಣಕಣದಲ್ಲೂ ಕಾಣುವರು. ಊರನ್ನೆಲ್ಲಾ ಹುಡುಕಿದರೆ ಮಾರಮ್ಮ ಬೇವಿನ ಗಿಡದ ಜೋಲಿಗೆ

೨೩. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೨೮೪

ಯಲ್ಲಿರುವಳು. ಮಠ-ಮಠ ಮಧ್ಯಾಹ್ನದಲ್ಲಿ ಸತ್ಯವಂತೆ ಎಲ್ಲಿ ಹೋದಳೆಂದು ಹುಡಕಿದರೆ ತೊಟ್ಟಿನಾಗ ಅವಳ ಕಿಡಿಗಣ್ಣೆ ಎಂದು ಮಾರಮ್ಮಳು ಜನಪದರ ದೃಷ್ಟಿಯಲ್ಲಿ ಎಲ್ಲಿ ಹೇಗೆ ನೆಲೆಸಿರುವಳು ಎಂಬುದನ್ನು ಕೆಲವೊಂದು ದೃಷ್ಟಾಂತಗಳ ಮೂಲಕ ಇಲ್ಲಿ ತಿಳಿಸುತ್ತಾರೆ.

ಜನಪದರು ಮಾರವ್ವಳನ್ನು ದೇವತೆಯೆಂದು ಮತ್ತು ಬೇಡಿದ ವರಗಳನ್ನು ದಯಪಾಲಿಸುವಳೆಂಬ ನಂಬಿಕೆ :

"ಆಲುವೊತ್ತುಕಂಡು ಬಾಲಾನೆತ್ತಿಕಂಡು
ತಾಯಿಗತಿಯೆಂದು ನಡೆದಾನೆ
ತಾಯಿಗತಿಯೆಂದು ನಡೆದಾನೆ ತಾಯವ್ವ
ನಮ್ಮಮ್ಯಾಲೇ ದಯವಿರಲಿ"[೨೪]

ಎಂದು ಮಾರವ್ವಳನ್ನು ಪೂಜಿಸಿ, ತಮಗೆ ಒದಗಿ ಬಂದ ಸಂಕಷ್ಟಗಳನ್ನು ದೂರ ಮಾಡುವಂತಹ ಶಕ್ತಿ ಈ ದೇವತೆಯಲ್ಲಿದೆ ಎಂದು ಆಕೆಯ ಆಶೀರ್ವಾದ ಸದಾ ಊರಿನ ಜನತೆಯ ಮೇಲಿರಲಿ ಎಂದು ಮೊರೆಯಿಡುತ್ತಾರೆ. ಜೊತೆಗೆ ಮಾರವ್ವಳಿಗೆ ಕೋಣ ಬಲಿಕೊಡುವ ಆಚರಣೆಯನ್ನು ನೆರವೇರಿಸುತ್ತಾರೆ. ಬಲಿ ಕೊಡಬೇಕಾದ ಕೋಣ ಹೇಗಿರಬೇಕು, ದೇವಿಯ ಮುಂದೆ ಹೇಗೆ ಕಡಿಸಬೇಕೆಂದು ಜನಪದರು ಈ ಕಥನಗೀತೆಯಲ್ಲಿ ಹೀಗೆ ಹೇಳಿದ್ದಾರೆ:

"ಅತ್ತುವರಸತುಪ್ಪುಂಡ ಕ್ವಾಣಾನ
ಜೊತ್ತು ಮಿಣಿಯಾಕೆ ಇಡಿಸ್ಯಾರೆ
ಜೊತ್ತು ಮಿಣಿಯಾಕೆ ಇಡಿಸ್ಯಾರೆ ಇಡಿಸೀರ
ಕ್ವಾಣಾನ ಸತ್ತ್ಯವ್ವನ ಮುಂದೆ ಕಡಿಸ್ಯಾರೆ
ಸತ್ತ್ಯವ್ವನ ಮುಂದೆ ಕಡಿಸ್ಯಾರೆ ಕ್ವಾಣಾನ
ನೆತ್ತೀನ ನೆಣವ ತಗುದಾರೆ
ನೆತ್ತೀನ ನೆಣವ ತಗುದಾರೆ ನಲ್ಲರಳ್ಳಿ
ಸತ್ತಿಗಬ್ಯಾರೆ ಜಗಜೋತಿ"[೨೫]

---

೨೪. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೨೮೪

೨೫. ಅದೇ, ಪು.೨೮೮

ಹತ್ತು ವರ್ಷದ ತುಪ್ಪ ಉಂಡ ಕೋಣವನ್ನು ಸರಪಳಿಯಿಂದ ಬಿಗಿದು, ಮಾರವ್ವಳಿಗೆ ಬಲಿ ಕೊಡಲು ನಿರ್ಧರಿಸಿ, ಸತ್ಯವ್ವಳಾದ ಮಾರವ್ವಳ ಮುಂದೆ ಕಡಿಸಿದರು. ಜೊತೆಗೆ ನೆತ್ತಿಯಲ್ಲಿನ ನೆಣವ (ಕೊಬ್ಬು/ತುಪ್ಪ) ತೆಗೆದು ಜಗತ್ತಿಗೆ ಜ್ಯೋತಿಯಾದ ನಲ್ಲರಳ್ಳಿ ಸತ್ತಿಗೆ(ಮಾರವ್ವದೇವಿ) ಮುಂದೆ ದೀಪವನ್ನು ಹಚ್ಚಿದ್ದಾರೆ. ಶಕ್ತಿದೇವತೆ ಮಾರವ್ವಳ ಮುಂದೆ ಕೋಣನ ಸಂಹಾರವಾದ ಮೇಲೆ ಅದರ ಮುಂಗಾಲನ್ನು ಕತ್ತರಿಸಿ ಬಾಯಿಗೆ ಇಟ್ಟು ಅದರ ಕೊಬ್ಬನಿಂದಲೇ ಉರಿಯುವ ದೀಪವನ್ನು ಕೋಣನ ರುಂಡದ ಮೇಲೆ ಇಟ್ಟಿರುತ್ತಾರೆ. ನಂತರ ತಾಯಿ ನಮ್ಮ ಮೇಲೆ ದಯವಿರಲಿಯೆಂದು ಬೇಡಿಕೊಳ್ಳುವರು.

ಮಾರವ್ವಳಿಗೆ ಕೋಣ ಬಲಿಕೊಟ್ಟ ನಂತರ ಜನತೆಗೆ ಒಳ್ಳೆಯದಾಗುತ್ತದೆ ಎಂಬುದಕ್ಕೆ ಮಕ್ಕಳ ದೃಷ್ಟಿಯನ್ನು ತೆಗೆದಳು ಎಂದು ಹೇಳುವಲ್ಲಿ ಸಾಬೀತಾಗುತ್ತದೆ.

"ಅಕ್ಕಮಾರಕ್ಕ ಮುತ್ತು ಮಡಲು ಕಟ್ಟಿ
ಮಕ್ಕಳ ಮ್ಯಾಲೆ ತೊಳೆದಾಳೆ
ಮಕ್ಕಳ ಮ್ಯಾಲೆ ತೊಳೆದಾಳೆ ಬೇವಿನ ಸೊಪ್ಪಿಲಿ
ಇಳಿಯನು ತಗುದಾಳೇ"[೨೬]

ಮಾರವ್ವ ಬೇವಿನ ಸೊಪ್ಪು, ಕಾಯಿಯಿಂದ ಮಕ್ಕಳ ಇಳಿಯನ್ನು (ದೃಷ್ಟಿಯನ್ನು) ತೆಗೆದಳು. ಮುಂದೆ ಮಾರವ್ವಳ ಅಪ್ಪಣೆಯ ಮೇರೆಗೆ ಒಂದೇ ಉಳಿಯ ಬಳಸಿ ಗುಡಿಯನ್ನು ಒಂದೇ ದಿನದಲ್ಲಿ ಕಡೆದರು. ಎರಡು ಉಳಿಯ ಬಳಸಿ ಮಾರಕ್ಕಳ ಮೂರ್ತಿಯನ್ನು ಎರಡೆರಡು ದಿನಕ್ಕೆ ಕಡೆದರು. ಇಂಥ ಸುಂದರವಾದ ಮಾರವ್ವಳ ಗುಡಿಯನ್ನು ಹೊಕ್ಕು ನೋಡೋಣ ಬನ್ನಿ, ನಂದಿಗೀಶ್ವರನ ಮಗಳಾದ ಅಂದುಳ್ಳ ಅಮ್ಮ ಮಾರವ್ವ ದೇವಿಯ ಸ್ವರೂಪವನ್ನು ನೋಡಲು ಬನ್ನಿ ಎಂದು ಜನಪದರು ಮಾರವ್ವ ದೇವಿಯ ಆಚರಣೆಗಳನ್ನು ಉಳಿಸಿಕೊಂಡು ಹೋಗೋಣವೆಂದು ಕರೆಯನ್ನು ಸಮಾಜಕ್ಕೆ ತಿಳಿಸುತ್ತಾರೆ. ಅಂದಿನಿಂದ ಮಾರವ್ವಳ ಪೂಜೆ ಆಚರಣಾತ್ಮಕವಾಗಿ ನಡೆಯುತ್ತಲೇ ಬಂದಿದೆ. ದೇವಿಯ ಮಹಾತ್ಮೆಯನ್ನು ಹೀಗೆ ಹೇಳುತ್ತಾರೆ:

ಬಂಡಿಹೂಡಿ ಮುಂದೆತ್ತು ಕಟ್ಟಿ, ಬಂಡೀಗೆ ಬಟ್ಟ ಇಟ್ಟು ಮಾರಕ್ಕನ ಬಂಡೆ ಬಾಳೆ ವನಗಳಿಗೆ ಹೋದವು. ಮಟ್ಟ ಮಧ್ಯಾಹ್ನದಲ್ಲಿ ಸತ್ತ್ಯೇನು ಬ್ರಮಿಸ್ಯಾಳೆ ತುಪ್ಪ ಸಕ್ಕರೆ, ಹಾಲು

---

೨೬. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೨೯೦

ಸಕ್ಕರೆ ಎಡಿಯಾಗಿ ಸತ್ತೀಗೆ ಸುತ್ತಲು ಮಾತಂಗಿರೊದಗ್ಯಾರೆ. ಬಾಪುರಿ ತೋಳನ್ನು ತಿರುವುತ್ತಾ ಆಕಾಶದುದ್ದಕ್ಕೂ ನಿಂತಳು (ನಿಂತು) ಚಿಕ್ಕೇನಳ್ಳಿಯ ಕಾತೇರಿಗೆ ವರವನ್ನು ಕೊಡುವಳು. ಅಂಬಾರದುದ್ದಕ್ಕೂ ಬಂದೀಯ ತೋಳ ತಿರುವುತ್ತಾ ರೆಂಬೇರಿಗೆ ವರವ ಕೊಡುತ್ತಾಳೆ. ಕೇರಿಯ ಹೊಕ್ಕು ಈರನ ಕರೆದಾಳೆ ಜೋಡಂಗಿಯಲ್ಲಿ ಇಡುದು (ಹಿಡಿದು) ದುರತೇರ್ನ (ದುಷ್ಟರನ್ನ) ಸೂರು ಸೂರಾಳ ವಡೆದಾಳೆ (ಹೊಡೆದಾಳೆ), ಸಂದಿ ಹೊಕ್ಕಾಳೆ ರಂಗನನ್ನ ಕರೆದಾಳೆ ಸಿಂಗಾರಿಬಿಲ್ಲ ಹಿಡಿದು ದುರುತೇರನ್ನ ತುಂಡು-ತುಂಡಾಗಿ ವಡೆದಾಳೆ.

ಮಾರವ್ವಳ ರೌದ್ರಾವತಾರವನ್ನು ನೋಡಿಯೇ ಕೋಟೆಯಲ್ಲಿ ದೆವ್ವ ಇವೆ ಎಂಬ ಭಯವನ್ನು ಜನರಲ್ಲಿ ಬಿತ್ತರಿಸಲಾಗಿದೆ ಎನಿಸುತ್ತದೆ. ದೆವ್ವ-ಭೂತಗಳಿರುವುದು ಮಿಥ್ಯವೆಂದು ಸಾರುವಾಗ ಕೋಟೆಯಲ್ಲಿ ದೆವ್ವ ಕುಳಿತಿರುವವುಯೆಂದು ಹೇಳಿ ಜನರಲ್ಲಿ ಭಯದ ಭೀತಿ ಹುಟ್ಟಿಸಿ ಬಲಿ ಕೊಡಲು ಪ್ರೇರೇಪಿಸುತ್ತಿದ್ದರೆಂಬುದು ಕೆಳಗಿನ ಸಾಲುಗಳ ಮೂಲಕ ತಿಳಿದುಬರುತ್ತದೆ.

> "ಕ್ವಾಟೆ ಕ್ವಾಟಿಗೆ ದೆವ್ವ ಆತುಕೊಂಡ್ಯೆದಾವೆ
> ಕ್ವಾಟಿಗ್ಗಾವುತಿಯ ಕೊಡಿರಣ್ಣ
> ಕ್ವಾಟಿಗ್ಗಾವುತಿಯ ಕೊಡಿರಣ್ಣ ಚಿಕ್ಕೇನಳ್ಳಿ
> ಆತುಕೊಂಡಿರುವ ಗರತೀಗೆ
> ಸಂದಿಸಂದಿಗೆ ದೆವ್ವವೊಂದಿಕೊಂಡ್ಯೆದಾವೆ
> ಸಂದಿಗಾವುತಿಯ ಕೊಡಿರಣ್ಣ
> ಸಂದಿಗಾವುತಿಯ ಕೊಡಿರಣ್ಣ ಚಿಕ್ಕೇನಳ್ಳಿ
> ವೊಂದಿಕೊಂಡಿರುವ ಗರತೀಗೆ"[೨೭]

ದೆವ್ವದ ಹೆಸರಿನಲ್ಲಿ ಕೋಟೆಗೆ ಸಂದಿಗೆ ಆಹುತಿಯನ್ನು ಬಲಿ ಕೊಡಿಯೆಂದು ಗರತಿಯರನ್ನೇ (ಮಹಿಳೆಯನ್ನೇ) ಆಹುತಿ ಕೊಡುತ್ತಿದ್ದರೆಂಬುದು ಇಲ್ಲಿ ಕಂಡುಬರುತ್ತದೆ. ಮಾರಮ್ಮ ದೇವಿಯ ಆಚರಣೆ ಜಾನಪದ ಆಚರಣೆಗಳಲ್ಲಿ ಒಂದಾಗಿದ್ದು, ಕರ್ನಾಟಕದ ಬಹುತೇಕ ಕಡೆಗಳಲ್ಲಿ ಅದರಲ್ಲೂ ಕೆಳವರ್ಗಗಳಿಂದ ಪೂಜೆಗೊಳ್ಳುತ್ತಿರುವ ಕೆಲವೊಂದು ಪುರಾಣಗಳ ಮೂಲಕ ಸ್ಪಷ್ಟಪಡಿಸಲಾಗುತ್ತದೆ.

---

೨೭. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೨೯೫

ಮಾರವ್ವಳ ಹೆಸರು ಶ್ರೀಬಾಲಗೌರಿಯಾಗಿದ್ದು ಈಕೆ ಬ್ರಾಹ್ಮಣರ ಕುಲದಲ್ಲಿ ಮುದ್ದಿನ ಮಗಳಾಗಿ ಜನಿಸಿದಳು. ಈಕೆಯ ಮನೆಯಲ್ಲಿ ಗಂಡುಮಕ್ಕಳಿಲ್ಲದ್ದನ್ನು ತಿಳಿದು ಮಾದಿಗರ ಹುಡುಗನೊಬ್ಬ ಬ್ರಾಹ್ಮಣನಂತೆ ನಂಬಿಸಿ ಇವರ ಮನೆಯನ್ನು ಸೇರಿರಬಹುದೆಂಬ ಪ್ರತೀತಿ ಇದೆ. ಇಲ್ಲಿ ಜಾತಿ ಬೇರೆಯಾಗಿದೆ. ಆದರೆ ಆತ ಆಕೆಯ ಪ್ರೀತಿಯನ್ನು ಪಡೆಯುವುದಕ್ಕೆ ಸುಳ್ಳು ಹೇಳಿ ಸೇರಿರಬಹುದು. ಇದಕ್ಕೆ ಆಕೆಯ ಒಪ್ಪಿಗೆಯೂ ಇರಬಹುದೆನಿಸುತ್ತದೆ. ಅವಳ ತಂದೆ-ತಾಯಿಯನ್ನು ಮೆಚ್ಚಿಸಿ ಮದುವೆ ಆಗಬಹುದೆಂಬ ಆಸೆ ಇಲ್ಲಿ ಕಂಡುಬರುತ್ತದೆ. ಪುರಾಣಗಳಲ್ಲಿ ಮಾರಮ್ಮಳಿಗೆ ಗೊತ್ತಿರದೇ ಆತ ಮನೆಯನ್ನು ಸೇರಿದನೆಂಬ ಉಲ್ಲೇಖವಿದೆ. ನಂತರ ಇಬ್ಬರೂ ಪ್ರೀತಿಸಿ ವಿವಾಹವಾದ ಬಹಳಷ್ಟು ದಿನಗಳ ನಂತರ ಕರಿಯಂಭಟ್ಟನ (ಹುಡುಗ) ತಾಯಿ ಈತನನ್ನು ಹುಡುಕಿಕೊಂಡು ಅದೇ ಗ್ರಾಮಕ್ಕೆ ಬಂದಳು. ಈ ವಿಚಾರವನ್ನು ತಿಳಿದ ಈತ ಆಕೆಯನ್ನು ಬ್ರಾಹ್ಮಣಳಂತೆ ನಟಿಸಲು ಹೇಳಿ ಮನೆಗೆ ಕರೆದೊಯ್ದನು. ಶ್ರೀಗೌರಿಯು ಅತ್ತೆಗೆ ಊಟ ಬಡಿಸಿದಳು. ಊಟ ಮಾಡುವಾಗ ಮಗನಿಗೆ ಊಟದ ರುಚಿಯನ್ನು ಕೇಳಿದ ತಾಯಿ 'ನಮ್ಮದೋ ಮದು ಕೋಣನ ಕರುವಿನ ಕಾಲಿನ ಬೆಲೆಯಿಲ್ಲ' ಎಂದು ಖಡಾಖಂಡಿತವಾಗಿ ನುಡಿದಳು. ಈ ಮಾತನ್ನು ಕೇಳಿದ ಶ್ರೀಗೌರಿಗೆ ಆಶ್ಚರ್ಯ ಉಂಟಾಗಿ ವಂಚಿಸಿ ಮೋಸ ಮಾಡಿದ ತಪ್ಪಿಗಾಗಿ ಬೆಂಕಿಗೆ ಆಹುತಿಯಾದಳು. ಆಹುತಿಯಾಗುವ ಮೊದಲು ಗಂಡನಿಗೆ ನಾನು ಮಾರಿಯಾಗಿ ಹುಟ್ಟುತ್ತೇನೆ. ನೀನು ಪಟ್ಟದ ಕೋಣನಾಗಿ ಹುಟ್ಟು. ಮಟ್ಟ ಮಂಗಳವಾರ ಸರಿ ರಾತ್ರಿಗೆ ಬಂದು ನಿನ್ನ ಬಲಿ ತೆಗೆದುಕೊಳ್ಳುತ್ತೇನೆಂದು ಹೇಳಿ ಕೆಂಡಮಂಡಲವಾದಳು. ಇಲ್ಲಿ ಶ್ರೀಬಾಲಗೌರಿಯಾಗಿದ್ದ ಮಹಿಳೆ ಮಾರಮ್ಮಳಾಗಿ ಹೇಗೆ ನಿರೂಪಿತವಾದಳು ಎಂಬುದನ್ನು ತಿಳಿಯುವುದರೊಂದಿಗೆ ಗಂಡನಿಂದ ಬಾಲಗೌರಿಗೆಯಾದ ನಂಬಿಕೆ, ವಿಶ್ವಾಸದ್ರೋಹದಿಂದ ವಂಚನೆ, ಶೋಷಣೆಗೆ ಈಡಾದ ಪ್ರಸಂಗವನ್ನು ತಿಳಿಯಬಹುದಾಗಿದೆ.

ಮಾರವ್ವಳ ಕುರಿತು ಭಟ್ಕಳದಲ್ಲಿ ಪ್ರಚಲಿತವಿರುವ ಪುರಾಣವನ್ನು (ಕಥೆಯನ್ನು) ಕೇಳಿದರೆ ಅದು ಭಿನ್ನವಾಗಿ ಕಾಣುತ್ತದೆ.

ಒಂದು ದಿನ ಮರದ ಕೆಲಸ ಮಾಡುವ ಆಚಾರಿಯ ಮನೆಯ ಮುಂದೆ ಆರು ವರ್ಷದ ಹುಡುಗಿಯೊಬ್ಬಳು ಕುಳಿತಿದ್ದಳು. ಆಚಾರಿಯ ಮನೆಯವರು ಬೆಳಗಿನ ಜಾವ ಎದ್ದು ಬಾಗಿಲು ತೆರೆದಾಗ ಹುಡುಗಿಯನ್ನು ಕಂಡು, ನೀನು ಯಾರು ಎಂದು ವಿಚಾರಿಸಿದರು. ಆಗ ಆಕೆ 'ನಾನು ಬ್ರಾಹ್ಮಣರ ಹುಡುಗಿ, ನನಗೆ ತಂದೆ-ತಾಯಿ ಯಾರೂ ಇಲ್ಲವೆಂದು' ಉತ್ತರಿಸಿದಳು. ಅವರಿಗೆ ಆಕೆಯ ಮೇಲೆ ಕರುಣೆ ಹುಟ್ಟಿ ಅವರ ಮನೆಯಲ್ಲಿಯೇ ಬೆಳೆಸಿದರು.

ಹೀಗೆ ಅವರ ಮನೆಯಲ್ಲಿ ವಾಸ ಮಾಡುತ್ತಿರುವಾಗ ಪ್ರತಿದಿನ ಒಬ್ಬ ಹುಡುಗ ಆಕೆಯನ್ನು ನೋಡಿ ನಗುತ್ತಾ ಹೋಗುತ್ತಿದ್ದನು. ಹೀಗೆ ಇಬ್ಬರೂ ಒಂದು ದಿನ ಮಾತನಾಡುತ್ತಿರುವಾಗ ಜನರ ಕಣ್ಣಿಗೆ ಬಿದ್ದರು. ವಿಷಯ ತಿಳಿದ ನಂತರ ಆಕೆಯ ಸಾಕು ತಂದೆಗೆ ಸುದ್ದಿ ತಿಳಿಸಿದರು. ಆಗ ಆಕೆಗೆ ಅವನಿಂದ ದೂರವಿರಲು ಹೇಳಿದಾಗ ಅದನ್ನು ತಿರಸ್ಕರಿಸಿ ಆತನನ್ನು ತಾನು ಮದುವೆಯಾಗುವುದಾಗಿ ತಿಳಿಸಿದಳು. ಆಗ ಹಠ ಹಿಡಿದರೆ ಸರಿಯಲ್ಲವೆಂದು ತಿಳಿದು ಆತನನ್ನು ಮನೆಗೆ ಕರೆದು ಜಾತಿಮತವನ್ನು ವಿಚಾರಿಸಿದರು. ಅವನು ತಾನು ಬ್ರಾಹ್ಮಣನೆಂದು ಹೇಳಿಕೊಂಡನು. ಇಬ್ಬರ ಜಾತಿಯು ಒಂದೇ ಆಗಿರುವುದರಿಂದ ಮದುವೆ ಮಾಡಿಕೊಟ್ಟರು. ಗಂಡನ ಮನೆಗೆ ಹೋದಾಗ ಅಲ್ಲಿಯ ಮನೆಯ ಒಂದು ಕೋಣೆ ಸದಾ ಬೀಗ ಹಾಕಿರುತ್ತಿತ್ತು. ಇದರಿಂದ ಆಕೆಗೆ ಪ್ರಶ್ನೆ ಕಾಡತೊಡಗಿತು. ಅದಕ್ಕೆ ಆತ ಒಂದು ದಿನ ಹೊರಗೆ ಹೋದಾಗ ಬೀಗ ಒಡೆದು ನೋಡಿದಳು. ಅಲ್ಲಿ ಗೋಡೆಯ ಮೇಲೆ ಒಂದೆರಡು ದನದ ಚರ್ಮವನ್ನು, ಡೋಲಿನ ಸಾಮಾನುಗಳನ್ನು ನೇತು ಹಾಕಿದ್ದರು. ಇದನ್ನು ಕಂಡು ಆಶ್ಚರ್ಯವಾಗಿ ಗಂಡ ಬಂದ ನಂತರ ವಿಚಾರಿಸಿದಳು. ಧರ್ಮ ಸಂಕಟಕ್ಕೆ ಕಟ್ಟುಬಿದ್ದ ಆತ ನಿಜವಾದ ತನ್ನ ಜಾತಿ ಕೊರಗ ಎಂದು ನುಡಿದನು. ತಕ್ಷಣ ಗಂಡನ ಮನೆ ಬಿಟ್ಟು ಸಾಕು ತಂದೆಯ ಮನೆಗೆ ಬಂದು, ಮಾರ್ಮಿಕವಾಗಿ ತಂದೆಯ ಹತ್ತಿರ: 'ಅಪ್ಪ ನಾಯಿ ಮುಟ್ಟಿದ ಮಡಕೆ ಹೇಗೆ ಶುದ್ಧ ಮಾಡಬಹುದು' ಎಂದು ಪ್ರಶ್ನಿಸಿದಳು. ಅದಕ್ಕೆ ಆತ 'ಮಡಕೆಯನ್ನು ಬೆಂಕಿಯಲ್ಲಿ ಸುಟ್ಟು ಅದಕ್ಕೆ ಪಂಚಗವ್ಯ ಹಾಕಿದರೆ ಶುದ್ಧವಾಗುತ್ತೆ' ಎಂದನು. ಅದನ್ನು ಕೇಳಿದ ಕ್ಷಣವೇ ಒಳಗೆ ಹೋಗಿ ಬೆಂಕಿ ಹಚ್ಚಿಕೊಂಡಳು. ತಾನು ಮಡಿಕೆ ತನ್ನ ಗಂಡ ನಾಯಿಯೆಂದು ಭ್ರಮಿಸಿದ ಹಾಗೆ ಗಂಡನ ಸಣ್ಣತನವನ್ನು ಮನಗಂಡು ತನ್ನ ಜೀವನವನ್ನು ಕೊನೆಗಾಣಿಸಿಕೊಂಡಳು. ಮೈಸುಡುತ್ತಿದ್ದ ಆಕೆಗೆ ಬೆಂಕಿಯ ಧಗೆಯನ್ನು ತಾಳಲಾರದೆ ಹೊರಗೆ ಓಡಿದಳು. ಓಡುತ್ತಾ ಕೊನೆಗೆ 'ಮುಸ್ವಜಾಲಿ' ಎಂಬ ಸಮುದ್ರಕ್ಕೆ ಬಿದ್ದು ಪ್ರಾಣ ಬಿಟ್ಟಳು. ಇಂದಿಗೂ ಕೂಡ ಆ ಸ್ಥಳವನ್ನು 'ಮಾರಿ' ಎಂದು ಕರೆಯುತ್ತಾರೆ. ಪ್ರತಿ ವರ್ಷದ ಮಾರಿ ಜಾತ್ರೆ ಮುಗಿದ ನಂತರ ಮಾರಿಯನ್ನು ತೆಗೆದುಕೊಂಡು ಹೋಗಿ ಮಾರಿಗುಂಡಿಯಲ್ಲಿ ಹಾಕಿ ಬರುವುದನ್ನು ಭಟ್ಕಳದ ಮಾರಿಯ ಕಥೆಯಿಂದ ತಿಳಿದುಬರುತ್ತದೆ. ಜಾತ್ರೆಯ ಆಚರಣೆ ಸಾಮಾನ್ಯವಾಗಿ ಇತರ ಕಡೆಯಂತೆಯೇ ನಡೆಯುತ್ತದೆ ಎಂದು ತಿಳಿದುಬರುತ್ತದೆ. ಮಾರಮ್ಮ ದೇವಿಯ ಆಚರಣೆ ಇಂದಿಗೂ ಕಂಡುಬರುತ್ತದೆ. ಮಾರಮ್ಮಳ ಕಥೆ ಹೆಚ್ಚು ಸತ್ಯದ ಸಮೀಪ ಕೊಂಡೊಯ್ಯುತ್ತದೆ. ಏಕೆಂದರೆ ಸಹಜ ಮಾನವ ಜೀವನದ ಘಟನೆಯಾಗಿ ನಿರೂಪಿತವಾಗುವುದರಿಂದ ಮಾರಮ್ಮಳ ಬದುಕಿನಲ್ಲಾದ ಸತ್ಯ ಘಟನೆಯ ಅನಾವರಣಗೊಂಡಿದೆ.

ಮಾರಮ್ಮದೇವಿಯ ಕಥೆಗಳನ್ನು ಕೇಳಿದಾಗ ಜಾತಿಯ ಭೇದಭಾವ ಕಂಡುಬಂದಿದೆ. ಪ್ರೀತಿಗಾಗಿ ತಮ್ಮ ಜೀವವನ್ನು ತೆಗೆದುಕೊಂಡ ಕಥೆಗಳನ್ನು ಕೇಳಿದರೆ, ಜಾತಿಗಾಗಿ ಮದುವೆಯ ಬಂಧನವನ್ನು ತೊರೆದು ಹೋದ ಕಥೆ ಇಲ್ಲಿ ವ್ಯಕ್ತವಾಗುತ್ತದೆ. ಅಂದಿನ ಸಮಾಜ ವ್ಯವಸ್ಥೆಯಲ್ಲಿ ಜಾತೀಯತೆಯ ವೈಭೋಗ ಎಂಬುದು ತಿಳಿದ ವಿಷಯ. ಇಂದಿಗೂ ಕೂಡ ಅದು ಹೆಮ್ಮರವಾಗಿ ಬೆಳೆದು ನಿಂತಿರುವುದನ್ನು ಕಾಣುತ್ತೇವೆ. ಜನಪದರು ಕಥೆಯನ್ನು ಆಧರಿಸಿ ಆಚರಣೆಯನ್ನು ನೆರವೇರಿಸುತ್ತಾ ಬಂದು ಭವಿಷತ್ಕಾಲದಲ್ಲಿಯೂ ಈ ಆಚರಣೆ ಮುಂದುವರೆಸಿಕೊಂಡು ಹೋಗುವುದರಲ್ಲಿ ಸಂಶಯವಿಲ್ಲ.

ತಂಬೂರಿ ಸಂಪ್ರದಾಯದ ರಾಮಾಯಣ ಕಥನಗೀತೆಯಲ್ಲಿ ಆಚರಣೆ :

ಸಮಾಜದಲ್ಲಿ ಮಕ್ಕಳಾಗದೇ ಇರುವಂತಹ ಮಹಿಳೆ ದೇವರಿಗೆ ಮೊರೆ ಹೋಗಿ ಹಲವಾರು ಆಚರಣೆಗಳನ್ನು ನೆರವೇರಿಸುತ್ತಾಳೆ. ಅಂತಹ ಆಚರಣೆಗಳಲ್ಲಿ ಈ ಕಥನಗೀತೆಯಲ್ಲಿ ಕಂಡುಬರುವ ಆಚರಣೆಯು ಕೂಡ ಒಂದಾಗಿದೆ. ಲಂಕಾಪತಿ ಪಟ್ಟಣದಲ್ಲಿ ರಾವಣನ ಮಡದಿ ಮಂಡೋದರಿ ತನಗೆ ಮಕ್ಕಳಾಗದ ಕಾರಣ ದೇವರನ್ನು ನೆನೆದು ರಾವಣನಿಗೆ ಹೀಗೆ ಹೇಳುತ್ತಾಳೆ :

"ನಾನು ಹುಟ್ಟಿ ಹನ್ನೆರಡೊರಸ ಲಗ್ನಾಗನ್ನೆರಡೊರಸ
ನಾನು ಲಗ್ನಾಗನ್ನೆರಡೊರಸ ತುಂಬಿತಲ್ಲ ಶಿವನೆ
ನಾನು ಲಗ್ನಾಗನ್ನೆರಡೊರಸ ತುಂಬಿತಲ್ಲ ಶಿವರಾಯ
ಒಟ್ಟು ಇಪ್ಪತ್ತನಾಲ್ಕೊರಸ ತುಂಬಿತಲ್ಲ ಶಿವನೆ
ಹಕ್ಕೀಗೆ ಮಕ್ಕಳು ಬೆಕ್ಕೀಗೆ ಮಕ್ಕಳು
ನನ್ನಂತ ಪಾಪಿಗೆ ಮಕ್ಕಳಿಲ್ಲವಲ್ಲ ಶಿವನೆ
ನನಗೊಂದು ಫಲ ನೀನು ಕೊಡಲಿಲ್ಲ ಶಿವುರಾಯ
ಕೊಡಪ್ಪ ಶಿವರಾಯ ನನಗೊಂದು ಫಲವ
ಕೊಡಪ್ಪ ಶಿವರಾಯ ನನಗೊಂದು ಫಲ ನೀನು"[೨೮]

ಎಂದು ತನಗೆ ಮಕ್ಕಳಾಗದ ಕಾರಣ ಶಿವನಲ್ಲಿ ಮೊರೆ ಹೋಗುತ್ತಾಳೆ. ಹಕ್ಕಿಗಳಿಗೆ, ಬೆಕ್ಕಿಗೆ ಮಕ್ಕಳ ಫಲವನ್ನು ನೀಡಿದ್ದೀಯಾ ನನ್ನಂತಹ ಪಾಪಿಗೆ ಮಕ್ಕಳಿಲ್ಲವಲ್ಲ ಎಂದು ಗೋಳಾಡುವಳು. ಮಹಿಳೆಗೆ ಮಕ್ಕಳಿಲ್ಲವೆಂದರೆ ಬಂಜೆ, ಪಾಪಿ, ನತದೃಷ್ಟೆಯೆಂದು ತನ್ನ

---

೨೮. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೯೦

ಹೆಣ್ತನದ ಬಗ್ಗೆ ತಾನೇ ತಾತ್ಸಾರ ಭಾವನೆಯನ್ನು ಕಾಣುತ್ತಾಳೆ. ಇಂತಹ ಭಾವನೆ ಬರಲು ಕಾರಣ ಸಮಾಜ; ಸಮಾಜದ ಚುಚ್ಚು ಮಾತುಗಳು. ಪುರಾಣದಲ್ಲಿಯೂ ಕೂಡ ಮಹಿಳೆ ಕಂಡುಂಡ ಕಷ್ಟಗಳು ನಮಗೆ ಕಂಡುಬರುತ್ತವೆ.

"ಆಡರ ತೊಡೆಯಲ್ಲಿ ನಾನು ಕಂದನ ನೋಡಿದ್ನಲ್ಲ
ನಾನು ಕರಕಳಕೋದರ ಮಕ್ಕಳುಳ್ಳವರು ಏನೇಳುತಾರೆ ಶಿವನೆ
ಬೇಡವೆ ಎಲೆ ಬಂಜೆ ಮುಟ್ಟಬೇಡವೆಲೆ ಹೆಣ್ಣೆ"[೨೯]

ಎಂದು ತನ್ನ ಅಳಲನ್ನು ತೋಡಿಕೊಳ್ಳುತ್ತಾಳೆ. ಮಕ್ಕಳನ್ನು ಕಂಡರೆ ಪ್ರೀತಿ ಇರುವ ಕಾರಣ ಮಕ್ಕಳನ್ನು ಕರೆದು ಮುದ್ದಾಡಿದರೆ ಮಕ್ಕಳುಳ್ಳವರು ಬಂಜೆ ನೀನು ಮುಟ್ಟಬೇಡ ಹೆಣ್ಣೆ ಎಂಬ ಹೀಯಾಳಿಕೆಯ ಮಾತುಗಳನ್ನಾಡುವರು ಎಂದು ತನ್ನ ವ್ಯಥೆಯನ್ನು ಬಿಚ್ಚಿಡುತ್ತಾಳೆ.

ಮಕ್ಕಳಾಗದ ಕಾರಣ ಮಕ್ಕಳ ಫಲವಿದೆಯೇ ಇಲ್ಲವೋ ಎಂದು ಜ್ಯೋತಿಷಿಗಳಿಗೆ ಕೇಳಲು ಸೂಚನೆ ನೀಡುತ್ತಾಳೆ ಮಂಡೋದರಿ. ಆರು ಹೊತ್ತಿನ ರೊಟ್ಟಿ ಮೂರು ಹೊತ್ತಿನ ರೊಟ್ಟಿ ಆರು ಮೂರೊಂಬತ್ತು ಹೊತ್ತಿನ ರೊಟ್ಟಿ ಬುತ್ತಿ ಹೊತ್ತುಕೊಂಡು ರಾವಣ ಶಿವನಲ್ಲಿ ನನ್ನಂತ ಪಾಪಿಗೆ ಫಲವೆಲ್ಲೋ ಶಿವನೇ ನನ್ನಂತ ಪಾಪಿಗೆ ನೀನು ಫಲವನ್ನು ಕೊಡಲಿಲ್ಲ. ವನವಾಸ ತಿರುಗೋಕೆ ಮಾಡಿದೆಲ್ಲ ಶಿವನೇ ಎಂದು ಬೇಗುದಿಯಲ್ಲಿ ಅಡವಿಗೆ ಹೊರಟನು ರಾವಣನು. ದಾರಿಯಲ್ಲಿ ಹೋಗುವಾಗ ಕಾಲೆಲ್ಲ ಸೋತು ಹೋಯಿತು. ಕೈಯಲ್ಲಿ ನಡೆದಾಗ ಕೈಯೆಲ್ಲ ಸೋತು ಹೋಯಿತು ಜೊತೆಗೆ ಹುಗುಚಿ ರಾಮುರಗತವಾಯಿತು. ಆದರೂ ದೇವರೂ ಸಿಗಲಿಲ್ಲ. ಮುಂದೆಲ್ಲಿ ಸಿಗುತ್ತಾರೆ ಶಿವನೇ ಎನ್ನುತ್ತಾ ತಲೆಯಲ್ಲಿ ನಡೆದನು, ತಲೆಯಲ್ಲಿ ಹುಗುಚಿ ಬಂತಲ್ಲ ಶಿವನೇ ಇನ್ನೆಲ್ಲಿ ನಾನೀಗ ನಡೆಯಾಲಿ ಎಂದು ಬೆನ್ನಲ್ಲಿ ಮೂರು ಉರುಳು ಉರುಳುತ್ತಾನೆ. ಬೆನ್ನೆಲ್ಲ ಕಿತ್ತೆದ್ದು ಹೋಗುತ್ತದೆ. ಮೈಯೆಲ್ಲಾ ರಾಮರಕ್ತ ಆಯಿತು. ಶಿವನೇ ನೀ ಕೊಡು ನನಗೊಂದು ಫಲಯೆಂದು ಕೂತುಕೊಂಡು ಬೇಡುತ್ತಿರುವಾಗ ಶಿವನು ಜೋಗಿ-ಜಂಗಮರ ವೇಷ ಧರಿಸಿ ರಾವಣನನ್ನು ವಿಚಾರಿಸುತ್ತಾನೆ. ತಾನು ಬಂದ ವಿಷಯವನ್ನು ಶಿವನಿಗೆ ತಿಳಿಸುತ್ತಾನೆ. ಜಂಗಮ ವೇಷದ ಶಿವನು ಮಾವಿನ ಹಣ್ಣನ್ನು ಕೊಟ್ಟು, ಗೊರಟೆ ಯಾರಿಗೆ ಕೊಡುತ್ತೀಯಾ, ಹಣ್ಣು ಯಾರಿಗೆ ಕೊಡುತ್ತೀಯಾ, ಎಂದು ಪ್ರಶ್ನಿಸುತ್ತಾನೆ. ಆಗ ರಾವಣ ನನ್ನ ಮಡದಿ ಮಂಡೋದರಿಗೆ ಹಣ್ಣನ್ನು ಕೊಡುತ್ತೇನೆ. ನಾನು ಗೊರಟೆಯ ರುಚಿಯನ್ನು ನೋಡುತ್ತೇನೆ ಎಂದು ಸುಳ್ಳು ಹೇಳುತ್ತಾನೆ. ಆಗ ಜಂಗಮ ಶಿವನು ನಿನ್ನಲ್ಲಿ

---

೨೯. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೯೦

ಒಳಗೊಂದು ಹೊರಗೊಂದು ಮಾತು ಇದೆ. ನೀನು ಮುಂದಿನ ಕಾಲಕ್ಕೆ ಸುಖ ಪಡುತ್ತೀಯಾ, ನೀನು ಹೊಟ್ಟೆಯಲ್ಲೊಂದು ಇಸ ಇಟ್ಟಿರುತ್ತೀಯಾ, ಬಾಯಲ್ಲಿ ಬೆಣ್ಣೆಯನ್ನು ತಿನ್ನುಸ್ತೀಯಾ ಅದರ ಫಲ ಮುಂದೆ ನೋಡುತೀಯಾ ಎಂದು ಹೇಳಿ ಹೋದನು. ಇತ್ತ ರಾವಣ ಪಟ್ಟಣಕ್ಕೆ ಬಂದು ಮಡದಿಗೆ ನಾನು ದೇವರ ಭಜನೆಗೆ ಹೋಗಿ ಬಂದೆ. ದೇವರ ಹತ್ತಿರ ವರ ತಂದಿದ್ದೇನೆ. ಆ ವರವನ್ನು ನಾವು ತಿನ್ನಬೇಕು. ಅದಕ್ಕಾಗಿ ನಾವು ಒಂದು ಪೂಜೆಯ ಮಾಡಬೇಕು ಎಂದು ಮಡಿಯಿಂದ ಎಲ್ಲವನ್ನು ಮಾಡುತ್ತಾರೆ. ರಾವಣ ಏನು ವಿಚಾರ ಮಾಡಿದನೆಂದರೆ ಮಡದಿಗೆ ಹಣ್ಣನ್ನು ಕೊಟ್ಟರೆ ಆಕೆಯ ಹೊಟ್ಟೆ ತುಂಬುತ್ತದೆ ಎಂದು ತಿಳಿದು ಹಣ್ಣೆಲ್ಲವನ್ನು ತಾನು ತಿಂದು ಗೊರಟೆಯನ್ನು ಆಕೆಗೆ ತಿನ್ನಲು ಕೊಡುತ್ತಾನೆ. ಮಂಡೋದರಿ ಗೊರಟೆಯ ಚೀಪಿ ಉಗಿದಾಗ ಅಲ್ಲಿ ಮಾವಿನ ಗಿಡವಾಗಿ ಏಳುತ್ತದೆ. ರಾವಣನಿಗೆ ಒಂಬತ್ತು ತಿಂಗಳು ತುಂಬುತ್ತದೆ. ತಿಂಗಳು ತುಂಬಿದ ಕೂಡಲೇ ಮೂಗಿನಲ್ಲಿ ರಾವಣ ಸೀನುವಾಗ ಹೆಣ್ಣು ಶಿಶು ಹುಟ್ಟುತ್ತಾಳೆ. ಆಗ ರಾವಣ ಸೀತಮ್ಮ ಎಂದು ಹೆಸರಿಟ್ಟು ಕರೆದನು. ಸೀತಮ್ಮ ಹುಟ್ಟಿದ ಗಳಿಗೆ ಸರಿಯಿಲ್ಲ, ಆ ಕೂಸನ್ನು ಬೇರೆಯವರಿಗೆ ಸಾಕಲು ಕೊಡಬೇಕು ಇಲ್ಲದಿದ್ದರೆ ತಂದೆ-ತಾಯಿಗೆ ಒಳ್ಳೆಯದಾಗುವುದಿಲ್ಲವೆಂದು ಜೋಯಿಸರು ಹೇಳಿ ಮಗುವನ್ನು ಬಿಟ್ಟು ಬರುವ ಮುನ್ನ ಕೆಲವೊಂದು ಆಚರಣೆಗಳನ್ನು ತಿಳಿಸುತ್ತಾರೆ: ಅಕ್ಕಸಾಲಿಗರ ಮನೆಗೆ ಹೋಗಿ ರನ್ನದ ತೊಟ್ಟಿಲು, ಚಿನ್ನದ ಒಳಲಿ ಮಾಡಿಸಬೇಕು ಒಂದರಲ್ಲಿ ಹಣ್ಣು ತುಂಬಿ, ಇನ್ನೊಂದರಲ್ಲಿ ಹಾಲು ಇಟ್ಟು, ಮತ್ತೊಂದು ಗಿಂಡಿಯಲ್ಲಿ ಬೆಣ್ಣೆ ತುಂಬಿ, ಬಡಿಗೆಯರ ಕೇರಿಗೆ ಹೋಗಿ ತೊಟ್ಟಲ ಮಾಡಿಸಿ, ಕಬ್ಬಿಣದ ಪೆಟ್ಟಿಗೆಯ ತಂದು, ಅದರಲ್ಲಿ ಕಂದನನ್ನು ಜೋ ಅಂತ ತೂಗುತ್ತಿರುವಾಗ ಕಂದನಿಗೆ ಬೇಗ ನಿದ್ದೆ ಬರುವುದು. ಆಗ ಬಿಟ್ಟು ಬರಬೇಕು ಎಂದಾಗ ಗಂಡ ಹೆಂಡತಿ ಸೇರಿ ತಾವು ಮಗಳನ್ನು ಹೆತ್ತು ಸಾಕಲಾಗದ ಕಾರಣ ತಾವು ಕೆಟ್ಟವರು ಎಂದು ತಮ್ಮನ್ನು ದೂಷಿಸಿಕೊಳ್ಳುತ್ತಾ ಬೇರೆಯವರಲ್ಲಿ ನೀನು ಚೆನ್ನಾಗಿ ಬದುಕೆಂದು ಹರಸುವರು:

"ನಮ್ಮ ಹೊಟ್ಟೇಲಿ ಹುಟ್ಟಿದ್ದಕ್ಕೆ ಶಿವನೆ
ನಮ್ಮ ಹೊಟ್ಟೇಲಿ ಹುಟ್ಟಿದ್ದಕ್ಕೆ ನಿನ್ನ
ಕೈಯಿನ ನೀರ ಕುಡಿಯಾಕೆ ಸೇವತಿ ಪಡನಿಲ್ಲ ಮಗಳೆ
ನಾವೇಯೆ ಕೆಟ್ಟಾರು ಚಿಂತೆಯಿಲ್ಲ ಮಗಳೆ
ನೀನು ಬೇರೆಯವರ ಕೈಲಿ ಬದುಕವ್ವ ಮಗಳೆ"[೩೦]

೩೦. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧೦೧

ಎಂದು ಮೂಢ ಆಚರಣೆ, ನಂಬಿಕೆಗೆ ಬಲಿಯಾಗಿ ರಾವಣ ಮತ್ತು ಮಂಡೋದರಿ ಸೇರಿ ಕಂದನಿಗೆ ಹಾಲನ್ನು ನೀರನ್ನು ಎರೆಯುತ್ತಾ, ಕುಪಚನ ತೊಡಿಸಿ ರನ್ನದ ತೊಟ್ಟಿಲಲ್ಲಿ ಮಲಗಿಸಿ ತೊಟ್ಟಿಲ ತೂಗುತ್ತಾರೆ. ಆಗ ಕಂದನಿಗೆ ನಿದ್ರೆಯು ಬರುತ್ತದೆ. ಆಗ ರಾವಣ ಹಾಳಾದ ಎಲೆ ಕಂದ ನನ್ನ ಹೊಟ್ಟೆಯಲ್ಲಿ ಹುಟ್ಟಿ ನೀನು ಬಾಳಿದ್ದೇನು ಎನ್ನುತ್ತಾ ನೀನು ಹುಟ್ಟಿ ಮೂರು ತಿಂಗಳು ಕಲಿಯುಗದಲ್ಲಿ ನೀನು ಕಲ್ಲಾಗಿಯಾದರೂ ಬಾಳು ಸೀತೆ. ಕೊಟ್ಟಿದ್ದ ಫಲವನ್ನು ಶಿವನು ಕಸಿದುಕೊಳ್ಳುತ್ತಿರುವನು. ಅದರಿಂದ ನಮಗೆಲ್ಲ ಬಹಳ ದುಃಖ ಆಗುತ್ತದೆ ಎಂದು ನೋವಿನಿಂದ ಮಗುವನ್ನು ಬಿಟ್ಟು ಪಟ್ಟಣಕ್ಕೆ ಪಯಣವನ್ನು ಬೆಳೆಸುತ್ತಾನೆ ರಾವಣ.

"ನೀನು ಗಂಡಾಗಿ ಹುಟ್ಟನಿಲ್ಲ ಹೆಣ್ಣಾಗಿ ಹುಟ್ಟದೆ
ಹೆಣ್ಣಾಗಿ ಹುಟ್ಟಿ ನೀನು ನಾಡನ್ನ ಪಡೆದೆ
ಹೆಣ್ಣಾಗಿ ಹುಟ್ಟಿ ನೀನು ನಾಡನ್ನ ಪಡೆನಿಲ್ಲ
ಇಲ್ಲದ್ರೆ ಕಲ್ಲಾಗಿ ಹೊಳೆಯಲ್ಲಿ ಹುಟ್ಟಬೇಕು"[೩೧]

ಎಂದು ಹೆಣ್ಣಿನ ಜನ್ಮವನ್ನು ಜರಿಯುತ್ತ ತುಂಬಿದ ಹೊಳೆಯಲ್ಲಿ ಕಬ್ಬಿಣದ ಪೆಟ್ಟಿಗೆಯಲ್ಲಿ ನಿನ್ನ ಬಿಡುತೀನಿ ಮಗಳೆ ನೀನು ಅಂಬಿಗರಿಗೆ ಅರಿಗೋಲಾಗಿ ಬೆಳೆದು ಬಾ ಮಗಳೆ ಎನ್ನುತ್ತಾನೆ. ಇದರ ಅರ್ಥವೆಂದರೆ ಸಮಾಜಕ್ಕೆ ದಾರಿ ತೋರುವವಳಾಗು ಎಂದಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೆಣ್ಣು ಸಮಾಜದಿಂದ ಎಷ್ಟೇ ಕಷ್ಟಗಳು ಎದುರಾದರೂ ಕಲ್ಲಿನ ಹಾಗೆ ಸಹಿಸಿಕೊಂಡು ಮೂಕವಾಗಿರಬೇಕು ಎಂಬುದು ತಿಳಿದುಬರುತ್ತದೆ.

ಇಲ್ಲಿ ಮಂಡೋದರಿ ಮತ್ತು ಸೀತೆ ಇಬ್ಬರೂ ಸಮಾಜದಿಂದ ಶೋಷಣೆಗೆ ಒಳಗಾದಂತಹ ಮಹಿಳೆಯರು. ಮಕ್ಕಳಾಗದ ಕಾರಣ ಮಂಡೋದರಿ 'ಬಂಜೆ' ಎಂದು ದೂಷಿಸಲ್ಪಟ್ಟರೆ, ರಾವಣ ಮಂಡೋದರಿಯರ ವ್ರತಾಚರಣೆಯಿಂದ ಜನಿಸಿದ ಸೀತೆ ಹುಟ್ಟಿದ ಗಳಿಗೆಯಿಂದಲೇ ಶೋಷಣೆಗೊಳಗಾಗಿರುವುದು ಜನರ ಅಜ್ಞಾನಕ್ಕೆ ಸಾಕ್ಷಿಯಾಗಿ ಕಂಡು ಬರುತ್ತದೆ.

ಮಳೆರಾಯನ ಹಾಡು ಕಥನಗೀತೆಯಲ್ಲಿ ಆಚರಣೆ :

ಮಳೆರಾಯನನ್ನು ಕುರಿತು ಜನಪದರಲ್ಲಿ ಹಲವಾರು ತ್ರಿಪದಿ, ಹಾಡುಗಳು, ಆಚರಣೆಗಳು ಇವೆ. ಸಕಲ ಜೀವರಾಶಿಗಳ ಬದುಕಿಗೆ ಕಾರಣವಾದ ಮಳೆ ಮೂಲಭೂತವಾದ

---

೩೧. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧೦೨

ಅಗತ್ಯಗಳನ್ನು ಪೂರೈಸುವ ಒಂದು ಮಹತ್ವದ ನಿಸರ್ಗಕ್ರಿಯೆಯಾಗಿದೆ. ಸಕಾಲಕ್ಕೆ ಮಳೆ ಬಂದರೆ ಬೆಳೆ, ಬೆಳೆ ಬಂದರೆ ಬದುಕು. ಆದರೆ ಮಳೆಗಾಲ ಬಂದರೂ ಮಳೆ ಬಾರದಿರುವುದಕ್ಕೆ ರೈತರು ಮಳೆರಾಯನಿಗೆ ಮೊರೆ ಹೋಗುತ್ತಾರೆ. ಅದಕ್ಕಾಗಿಯೇ ಕೆಲವೊಂದು ಆಚರಣೆಗಳನ್ನು ಮಾಡುತ್ತಾರೆ. **ಉದಾ:** ಮಳೆರಾಯನ ಮೆರವಣಿಗೆ, ಮಳೆರಾಯನ ಹಾಡು, ಕಂಬಳಿ ಬೀಸುವುದು, ತುಂಬಿದ ಕೊಡದ ಪೂಜೆ, ಕಪ್ಪೆ-ಒನಕೆ ಮೆರವಣಿಗೆ, ನವಧಾನ್ಯ ಪೂಜೆ, ಗುರ್ಜಿ ಪೂಜೆ ಮುಂತಾದವು.

ಮಳೆ ತಡವಾಗಿ ಬಂದರೆ ಅಂತಹ ಸಂದರ್ಭದಲ್ಲಿ ಜನರು ಕೆಲವೊಂದು ಆಚರಣೆಗಳ ಮೂಲಕ ದೇವರಲ್ಲಿ ಮೊರೆ ಹೋಗುವುದು ಪ್ರಾಚೀನ ಕಾಲದಿಂದಲೂ ನಡೆದು ಬಂದ ಪದ್ಧತಿಯಾಗಿದೆ. ಆದರೆ ಈ ಕಥನಗೀತೆಯಲ್ಲಿ ಮಳೆ ಬರುವುದು ತಡವಾದರೆ 'ಮಳೆರಾಯ ಯಾವ ಹೆಣ್ಣಿಗೆ ಮನಸೋತು ಪಗಡೆಯಾಡುತ್ತಾ ಕುಳಿತಿರುವನೋ' ಎಂದು ಜನಪದರು ಹೇಳುತ್ತಾ ಮಳೆರಾಯನನ್ನು ಧರೆಗೆ ಕರೆಯುತ್ತಿರುವುದು ಕಂಡುಬರುತ್ತದೆ.

"ಆರುಗಾವುದರಿಂದ ನಾರೀಗೆ ಮನೆವರುದ
ದಾಯನಾಡೋಳೆ ದೊರೆಮಗಳೆ ನಿನಗಾಗಿ
ಮೇವಾಗಿ ನಿಂತ ಮಳೆರಾಯ
ಗಂಜಿಯಚ್ಚಡದೋನೆ ಗಂಭೀರ ಮಳೆರಾಯ
ಎಂಡೀರಮನೆಬಿಟ್ಟು ವೊರಡಾನೆ ಲೋಕದಮ್ಯಾಲೆ
ನಿಂಬೇಣ್ಣಿಗೆ ಬಾಯಬಿಡತಾನೆ
ಸಾಲ್ಯದಚ್ಚಡದೋನೆ ಸಳಿಗಾಳಿಯ ಮಳೆರಾಯ
ಸೂಳೇಮನೆ ಬಿಟ್ಟು ವೊರಡಾನೆ ಲೋಕದಮ್ಯಾಲೆ
ಬಾಳೊಣಗಿ ಬಾಯ ಬಿಡುತಿದೆ"[೩೨]

ಮೊದಲನೆ ತ್ರಿಪದಿಯಲ್ಲಿ ಪಗಡೆಯಾಟ, ಹೆಣ್ಣಿನ ಮೋಹ ಎರಡಕ್ಕೂ ಸಂಬಂಧ ವಿರುವುದನ್ನು ತಿಳಿದು ಜನಪದರು ಮಳೆರಾಯ ಯಾವುದಾದರೂ ಹೆಣ್ಣಿನ ಮೋಹಕ್ಕೆ ಮರುಳಾಗಿ ಕುಳಿತಿರುವನೋ ಏನೋ ಎಂದು ಭ್ರಮಿಸಿ, ಮಳೆರಾಯನು ಸಹ ಕೇಡಿನ ಆಟವಾದ ಪಗಡೆಯಾಟದಲ್ಲಿ ಮುಳುಗಿರಬಹುದೇನೋ ಎಂದು ಆತಂಕದಿಂದ ಮಳೆರಾಯನನ್ನು ಕರೆಯುತ್ತಿದ್ದರು. ಮಳೆರಾಯ ಪಗಡೆಯಾಟ ಆಡುವುದಕ್ಕೆ ಕುಳಿತಿರುವುದು

---

೩೨. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೪೬೪,೪೬೫.

ಸೂಳೆಯ ಮನೆಯಲ್ಲಿ. ಆದಕಾರಣ ಮಳೆಬರುವ ಸಾಧ್ಯತೆ ಕಡಿಮೆ ಎಂದು ಪ್ರಪಂಚವನ್ನು ನಡೆಸುವ ಶಿವನನ್ನು ಪ್ರಾರ್ಥಿಸಿ ಮಳೆಯನ್ನು ತರಬೇಕೆಂದೂ, ಪ್ರಪಂಚವೆಲ್ಲ ಅನ್ನಕ್ಕೆ ಬಾಯಿ ಬಿಡುತ್ತಿದೆಯೆಂದು ಕೇಳಿಕೊಳ್ಳುತ್ತಾರೆ.

ಜನಪದರು ಮಳೆಯನ್ನು ಕರೆತರುವುದು ಜನ ಮೆಚ್ಚುಗೆಯಾಗಿದೆ. ಆದರೆ ಮಳೆರಾಯನು ಪಗಡೆಯಾಡುತ್ತಾ ಸೂಳೆ ಮನೆಯಲ್ಲಿ ಕುಳಿತಿರುವನು ಎಂದು ಹೇಳುವಲ್ಲಿ ಅತೀಶಯೋಕ್ತಿ ಆಗಿದೆ. ಮಳೆ ಬರದೇ ಇದ್ದರೂ ಮಹಿಳೆಯೇ ಅದಕ್ಕೆ ಕಾರಣೀಭೂತಳೆಂದು ಕಥನಗೀತೆಯ ಮೂಲಕ ತಿಳಿಯುತ್ತದೆ. ಅಷ್ಟೇ ಅಲ್ಲದೆ ಕಾಣದ ಶಿವನನ್ನು ಪ್ರಾರ್ಥಿಸಿ ಮಳೆಯನ್ನು ತರಬೇಕೆಂದೂ ಪ್ರಪಂಚದ ಕಾಳಜಿಯನ್ನು ಜನರ ಮುಂದೆ ಬಿಚ್ಚಿಡುತ್ತಾರೆ.

ಕೆರೆಗೆ ನೀರು ಇಲ್ಲದಾಗ ಬಂಜೆಕೆರೆ ಎಂದು, ಮಳೆ ಬರದೇ ಇರದಿರುವುದಕ್ಕೆ ಹೆಣ್ಣಿನ ಮೋಹಕ್ಕೆ ವಶವಾಗಿ ಕುಳಿತಿರಬಹುದೆಂದು ನೈಸರ್ಗಿಕ ಕ್ರಿಯೆಗೂ ಹೆಣ್ಣನ್ನು ದೂಷಿಸುತ್ತಾ, ಮಳೆ ಬರದೇ ಇರುವುದಕ್ಕೆ ಪರೋಕ್ಷವಾಗಿ ಹೆಣ್ಣೆ ಕಾರಣ ಎಂಬಂತೆ ನೋಡಲಾಗಿದೆ.

ಕೆರೆ–ಕಟ್ಟೆ, ನದಿಗಳಿಗೆಲ್ಲ ಸ್ತ್ರೀಯರ ಹೆಸರನ್ನೇ ನಾಮಕರಣ ಮಾಡಿರುವ ಜನಪದರು ಮಳೆಯನ್ನು ಮಾತ್ರ ಪುರುಷನ ಹೆಸರಿನಲ್ಲಿಯೇ ಹೆಸರಿಸಿದ್ದಾರೆ. ಭೂಮಿಯನ್ನು ಹೆಣ್ಣಿಗೆ, ಮಳೆಯನ್ನು ಗಂಡಿಗೆ ಹೋಲಿಸಲು ಹಲವಾರು ಕಾರಣ ಮತ್ತು ನಂಬಿಕೆಗಳಿರಬಹುದು. “ಭೂಮಿಯ ಫಲಸಮೃದ್ಧಿಗೆ ಕಾರಣವಾಗುವ ಮಳೆಯು ಪುರುಷ ಸ್ವರೂಪದಲ್ಲೇ ಇರಬೇಕು. ನೀರಿನ ಗರ್ಭದಿಂದಲೇ ಎಲ್ಲ ಸೃಷ್ಟಿ ಎಂಬುದನ್ನು ಜಗತ್ತಿನ ಎಲ್ಲ ಭಾಗದ ಆದಿಯ ಸಮೂಹ ನಂಬಿದಂತೆ ಕಾಣುತ್ತದೆ.”[೩೩] ಪ್ರಾಯಶಃ ಮಳೆ ಮತ್ತು ಭೂಮಿಯಿಂದಲೇ ಪುರುಷ–ಸ್ತ್ರೀ ಎನ್ನುವಂತಹ ಹೆಸರು ಸೃಷ್ಟಿಯಾಗಿರುವ ಹಾಗೆ ಕಾಣುತ್ತದೆ. ಅದೇನೆ ಇರಲಿ ನಿಸರ್ಗ ಪ್ರತಿಯೊಬ್ಬ ಮನುಷ್ಯನಿಗೂ ಅವಶ್ಯಕ. ಆದಕಾರಣ ಮಳೆ ಬರುವುದು ತಡವಾದರೆ ಹಲವಾರು ಆಚರಣೆಗಳು ರೂಢಿಯಲ್ಲಿರುವುದು ಸಾಮಾನ್ಯ. “ಭಾರತವಂತೂ ಸಂಪೂರ್ಣ ವ್ಯವಸಾಯ–ವನ್ನೇ ನಂಬಿ ಬದುಕಿದ ದೇಶವಾದುದರಿಂದ ಮಳೆಯನ್ನು ದೇವತೆಯೆಂದೇ ಕರೆದು, ವೇದಕಾಲದ ಪ್ರಮುಖ ದೇವತೆಯಾಗಿದ್ದ ಇಂದ್ರ (ದೇವತೆಗಳಒಡೆಯ/ಶ್ರೇಷ್ಠ) ನಿಗೂ ಮಳೆಗೂ ಸಂಬಂಧವನ್ನು ಕಲ್ಪಿಸಲಾಗಿದೆ. ಇದರಿಂದ ರೈತರು ಮಳೆಯ ತುರ್ತು ಇದ್ದಾಗಲೆಲ್ಲ ಇಂದ್ರನನ್ನೇ ಪ್ರಾರ್ಥಿಸುತ್ತಾರೆ.”[೩೪] ಅಷ್ಟೇ ಅಲ್ಲದೆ ಇಡೀ ಜಗತ್ತಿಗೆ ಶ್ರೇಷ್ಠವಾದ ಮಳೆಯನ್ನು

೩೩. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೧೫

೩೪. ಅದೇ, ಪು.೪೫೫

ಜನಪದರ ದೇವತೆಗಳ ಒಡೆಯನೆಂದು ಕರೆದು ಪೂಜಿಸುತ್ತಾ, ಆಚರಿಸುತ್ತಾ ಬಂದಿದ್ದಾರೆ. ಮಳೆರಾಯ ಮುನಿದು ಮಳೆಗರೆಯದಿದ್ದರೆ ನಾನಾ ಬಗೆಯ ಪೂಜೆ-ಪುನಸ್ಕಾರ, ಆರಾಧನೆ ಮುಂತಾದ ಆಚರಣೆಗಳನ್ನು ಮಾಡುತ್ತ ಬಂದಿದ್ದಾರೆ.

ಪ್ರಾಕೃತಿಕ ಭಾಗವಾದ ಮಳೆ ಜಗತ್ತಿನ ಎಲ್ಲ ಜನಾಂಗಗಳನ್ನು ಕೂಡ ಪ್ರಭಾವಿಸಿದೆ. ಪುರಾತನ ಕಾಲದಿಂದಲೂ ಜಗತ್ತಿನಾದ್ಯಂತ ಮಳೆಯ ಕುರಿತ ಆಚರಣೆಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತೇವೆ. ಪುರಾತನ ಸಂಸ್ಕೃತಿಗಳಲ್ಲಿ ನದಿ ದೇವತೆಗಳು ಇದ್ದ ಹಾಗೇ ಮಳೆದೇವತೆಗಳೂ ಇದ್ದರು. ಅವರು ಆಕಾಶದಲ್ಲಿ ವಾಸಿಸುತ್ತಿದ್ದರು ಎಂಬ ನಂಬಿಕೆ ಇತ್ತು. ರೋಮನ್‌ರ ಪ್ರಕಾರ ಜುಪಿಟರ್ ಫ್ಲುವೀಯಿಸ್ ಎಂಬ ಮಳೆ ದೇವರು ಇದ್ದು, ಈತ ತನ್ನ ಕೈಗಳಿಂದ ಮತ್ತು ಗಡ್ಡದಿಂದ ನೀರು ಸುರಿಸುತ್ತಾನೆ ಎಂದು ಕಲ್ಪಿಸಲಾಗಿದೆ, ಇದು ನಂಬಲಸಾಧ್ಯವಾದದ್ದು. ಆದರೆ ಆ ಸಮಾಜ ನಂಬಿಕೊಂಡು ಬಂದ ಕಲ್ಪನೆ ಇದಾಗಿದೆ.

ಇನ್ನು ಮಳೆಯಾಗುವ ಸಂದರ್ಭದಲ್ಲಿ ಗುಲಾಮರನ್ನು ಬಲವಂತವಾಗಿ ಸುಡುವುದರ ಮೂಲಕ ಮಳೆಯನ್ನು ಒಲಿಸಿಕೊಳ್ಳುವ ಆಚರಣೆಗಳು ಚೈನಾ ದೇಶದಲ್ಲಿ ರೂಢಿಯಲ್ಲಿದ್ದವು. ಉತ್ಖನನವೊಂದರಲ್ಲಿ ದೊರಕಿರುವ ಮೂಳೆಯ ಮೇಲಿನ ಉಲ್ಲೇಖವೊಂದನ್ನು ಚರಿತ್ರೆಕಾರ ಎಫ್. ಕರೋವ್ಕಿನ್ ಹೀಗೆ ದಾಖಲಿಸಿದ್ದಾರೆ: "ಭೂಮಿಯ ಮೇಲೆ ಮಳೆಯಾಗಲೆಂದು ನಾವು ಗುಲಾಮನೊಬ್ಬನನ್ನು ಸುಡುತ್ತಿದ್ದೇವೆ."[೩೫] ಜಲಕ್ಷಾಮ, ಪ್ರವಾಹಗಳ ಭಯದಿಂದ ಜನರು ಈ ಪದ್ಧತಿಗಳನ್ನು ಆಚರಣೆಗೆ ತಂದಿದ್ದರೆಂದು ತಿಳಿಯಬಹುದಾಗಿದೆ. ಮಳೆ ತರಿಸುವುದಕ್ಕಾಗಿ ಪ್ರಾಚೀನ ಟ್ಯೂಟನ್‌ರು ಬೆತ್ತಲೆಯಾದ ಹುಡುಗಿಯ ಮೇಲೆ ನೀರನ್ನು ಸುರಿಸುವ ವಿಧಿಯೊಂದನ್ನು ಆಚರಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಮಳೆ ಬರದೆ ಇರುವುದಕ್ಕೆ ನಿಸರ್ಗ ಕಾರಣವಾದರೂ ಮಹಿಳೆಯರನ್ನೇ ಆಚರಣೆಗಾಗಿ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.

ವಾತಾವರಣದಲ್ಲಿರುವ ನೀರಾವಿಯು ತಂಪು ಪಡೆದುಕೊಂಡು ಮತ್ತೆ ದ್ರವರೂಪಕ್ಕೆ ಬಂದು ಭೂಮಿಯ ಮೇಲೆ ಬೀಳುವ ಪ್ರಕ್ರಿಯೆಯೇ ಮಳೆ. ಸಮುದ್ರ, ಮಹಾಸಾಗರಗಳ ನೀರು ಆವಿಯಾಗಿ ಆಕಾಶ ತಲುಪಿ ಅಲ್ಲಿ ಮೋಡಗಳ ರೂಪದಲ್ಲಿ ಸಂಗ್ರಹವಾಗುತ್ತದೆ. ಮೋಡಗಳ ಸಾಂದ್ರತೆ ಹೆಚ್ಚಿ ಮತ್ತು ಅಲ್ಲಿನ ವಾತಾವರಣ ತಂಪಾದಾಗ ಮೋಡಗಳ ತೇವಾಂಶ ಹನಿಗೂಡಿ ಭೂಮಿಯನ್ನು ಸೇರುತ್ತದೆ. ನೆಲದ ಮೇಲೆ ಹೀಗೆ ಬಿದ್ದ ನೀರು ಹಳ್ಳ, ನದಿಗಳ ಮೂಲಕ ಮತ್ತೆ

---

೩೫. The History of the Ancient World : Korvtin :, p.119

ಸಾಗರವನ್ನು ಸೇರುತ್ತದೆ. ಜೊತೆಗೆ ನೆಲದ ಮೇಲಿನ ಮರಗಿಡಗಳು ಸಹ ಗಣನೀಯ ಪ್ರಮಾಣದಲ್ಲಿ ತೇವಾಂಶವನ್ನು ವಾತಾವರಣಕ್ಕೆ ಸೇರಿಸುತ್ತವೆ. ಹೀಗೆ ಈ ಜಲಚಕ್ರದ ಮೂಲಕ ಮಳೆ ಬರುತ್ತದೆ. ಇದರಲ್ಲಿ ಏನಾದರೂ ವ್ಯತ್ಯಾಸವಾದಾಗ ಮಾತ್ರ ಮಳೆ ಬರುವುದು ಕಡಿಮೆಯಾಗುತ್ತದೆ. ಈ ಸತ್ಯವನ್ನು ಅರಿಯದೇ ಮಳೆಬಾರದಿರುವುದಕ್ಕೆ ಮಹಿಳೆ ಕಾರಣ ಎಂದು ಹೇಳುವುದು ತಪ್ಪು ಗ್ರಹಿಕೆ.

ಬಂಜೆ ಹೊನ್ನಮ್ಮ ಕಥನಗೀತೆಯಲ್ಲಿ ಆಚರಣೆ :

ಪ್ರಾಚೀನ ಕಾಲದಿಂದಲೂ ಮಹಿಳೆ ಈ ಬಂಜೆ ಎಂಬ ಪದದಿಂದ ಕಳಂಕಿತಳಾಗಿ ಬದುಕನ್ನು ಸಾಗಿಸುತ್ತಾ ಬಂದಿರುವಳು. ಇದರ ಪರಿಣಾಮವಾಗಿ ಎಂದೆಂದಿಗೂ ಬಂಜೆ ಎಂಬ ಶಬ್ದದಿಂದ ಮುಕ್ತಳಾಗಿಸು ಎಂದು ತನ್ನ ವೇದನೆಯನ್ನು ಹೀಗೆ ಹೇಳಿಕೊಳ್ಳುತ್ತಾಳೆ:

"ಕಂದನ ಕೊಡು ಶಿವನೇ ಬಂಧನ ಪಡಲಾರೆ
ಹಂಗಿನ ಬಾನ ಉಣಲಾರೆ
ಮರ್ತ್ಯದಾಗ ಬಂಜೆಂಬ ಶಬುದ ಹೊರಲಾರೆ"

ಎಂದು ಜನಪದ ಮಹಿಳೆ ಶಿವನಲ್ಲಿ ತನ್ನ ನೋವನ್ನು ನಿವೇದಿಸುತ್ತಾ ಈ ಲೋಕದಲ್ಲಿ 'ಬಂಜೆ' ಎಂಬ ಶಬ್ದವನ್ನು ಹೊತ್ತು ಸಮಾಜದ ಬಂಧನದೊಳಗೆ ಬಾಳಲಾರೆ. ಅದರಿಂದ ಮುಕ್ತಿ ದೊರಕಿಸು ಎಂದು ಕೇಳುತ್ತಿರುವಳು.

ಬಂಜೆ ಎನ್ನುವಂತಹ ಶಬ್ದ ಮಹಿಳೆಗೆ ಮಾತ್ರ ಸೀಮಿತ. ಸ್ತ್ರೀಯರು ಮಕ್ಕಳನ್ನು ಹೆರುವ ಯಂತ್ರವೆಂದು ಅನೇಕರು ತಿಳಿದಿರುವರು. ಮದುವೆಯಾಗಿ ವರ್ಷದಲ್ಲಿಯೇ ಮಕ್ಕಳನ್ನು ಪಡೆಯಬೇಕು. ಇಲ್ಲದಿದ್ದರೆ ಆಕೆಗೆ ಬಂಜೆ, ಗೊಡ್ಡಿ ಎಂದು ಪಟ್ಟಕಟ್ಟಿ, ಬಿರುದುಗಳನ್ನು ನೀಡಿ ಪುರುಷರಿಗೆ ಬೇರೊಂದು ಮದುವೆಯನ್ನು ಮಾಡಲು ಮುಂದಾಗುವರು. ಅದರಲ್ಲಿ ಪದೇ ಪದೇ ಹೆಣ್ಣುಮಕ್ಕಳ ಜನನವಾದರಂತೂ ಆಕೆಯನ್ನು ಕಾಣುವಂತಹ ದೃಷ್ಟಿಯೇ ಬದಲಾಗುತ್ತದೆ. ಬಂಜೆತನಕ್ಕೆ ಶಬ್ದ ಸಮಾಜದಲ್ಲಿ ನಡೆಸಿಕೊಂಡು ಬಂದಿರುವ ಆಚರಣೆ, ಕತೆ, ಕಾವ್ಯಗಳಲ್ಲಿ ಕ್ರೂರ ಚಿತ್ರಣವನ್ನು ಬಿಂಬಿಸುತ್ತದೆ. ಹೊನ್ನಮ್ಮ ಕಥನಗೀತೆಯಲ್ಲಿ ಬಂಜೆ ಎನ್ನುವಂತಹ ಕಳಂಕ ಹೊತ್ತು ಮಕ್ಕಳಿಗಾಗಿ ಹಂಬಲಿಸುವ, ಚುಚ್ಚು ಮಾತುಗಳನ್ನು ಕೇಳಿ ಬಂಜೆ ಎನ್ನುವಂತಹ ಶಾಪದಿಂದ ಮುಕ್ತಿಯನ್ನು ಬಯಸುವ ಅದೆಷ್ಟೋ ಮಹಿಳೆಯರನ್ನು ನಾವು ಕಾಣುತ್ತೇವೆ. ಮಕ್ಕಳಾಗದ ಮಹಿಳೆ ಗಂಡನ ಮನೆಯಲ್ಲಿ ಅತ್ತೆ ಮಾವಂದಿರಿಂದ, ಕುಟುಂಬದ ಸದಸ್ಯರಿಂದ, ಸಮಾಜದ ನೆರೆ-ಹೊರೆಯವರಿಂದ ದೂಷಿಸಲ್ಪಡುತ್ತಾಳೆ. ವೈಜ್ಞಾನಿಕ ಸತ್ಯವನ್ನು ಹುಡುಕುವ ಬದಲು ಆಕೆಯಲ್ಲಿಯೇ ದೋಷವಿದೆ ಎಂದು ಮನಗಾಣುವರು. ಅಷ್ಟೇ

ಅಲ್ಲದೆ ಗಂಡಿಗೆ ಮತ್ತೊಂದು ಮದುವೆಯನ್ನು ಮಾಡಿ ಮಕ್ಕಳನ್ನು ಪಡೆಯುವ ಹಂಬಲ ಕಂಡುಬರುತ್ತದೆ. ಮಕ್ಕಳಿಲ್ಲವೆಂಬ ಕೊರಗು ಆಕೆಯಲ್ಲಿಯೂ ಕಾಡುತ್ತಿರುತ್ತದೆ. ಅದಕ್ಕೆ ನೋವನ್ನು ಅನುಭವಿಸುತ್ತಿರುತ್ತಾಳೆ. ಆದರೆ ಸಮಾಜ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಗಾಯದ ಮೇಲೆ ಬರೆ ಎಳೆದು ಮತ್ತಷ್ಟು ಗಾಯ ಮಾಡುತ್ತದೆ. ಆದರೂ ಕೂಡ ಧೈರ್ಯಗುಂದದೇ ಸಮಾಜದ ಆಚರಣೆಗಳಿಗೆ ತಲೆಬಾಗಿ ದೇವರ ನೆನೆದು ವಿವಿಧ ಆಚರಣೆಯನ್ನು ನೆರವೇರಿಸುತ್ತಾ ಬರುತ್ತಾಳೆ.

ಬಂಜೆತನದಲ್ಲಿ ಹೆಣ್ಣಿನ ಪಾಲು ಎಷ್ಟು ಇರುವುದೋ ಗೊತ್ತಿಲ್ಲ. ಬಹುಪಾಲು ಮಹಿಳೆಯರನ್ನೇ ಸಮಾಜ ದೂಷಿಸುತ್ತದೆ, ಗುರಿ ಮಾಡುತ್ತದೆ. ಗೊರವರ ಕಥೆಗಳಲ್ಲಿ ಗಂಡನ್ನು 'ಬಂಜೆ' ಎಂದು ಕರೆದದ್ದು ಇದೆ. ಆದರೂ ಕೂಡಾ ಸಾಮಾಜಿಕವಾಗಿ ತಿರಸ್ಕಾರಕ್ಕೆ ಒಳಗಾಗುವವಳು ಮಾನಸಿಕ ವೇದನೆ ಅನುಭವಿಸುವಳು ಮಹಿಳೆ. ತಿರಸ್ಕಾರಕ್ಕೆ ಒಳಗಾದಾಗ ಮಹಿಳೆಯಲ್ಲಿ ಕೆಲವೊಂದು ಬಾರಿ ಕ್ರೂರ ಮತ್ತು ಒರಟಾದ ವರ್ತನೆಗಳು ವ್ಯಕ್ತವಾಗುತ್ತಿರುತ್ತವೆ. ಇಂತಹ ವೇದನೆ, ಬಂಜೆತನ ನಿವಾರಣೆಗೆ ಆಚರಣೆ, ಮುಂತಾದ ಅಂಶಗಳನ್ನು ಈ ಕಥನಗೀತೆಯಲ್ಲಿ ಕಾಣುತ್ತೇವೆ.

ಏಳು ಜನ ಅಕ್ಕತಂಗಿಯರಿರುತ್ತಾರೆ. ಕೊನೆಯವಳು ಹೊನ್ನಮ್ಮ. ಈಕೆಗೆ ಮಕ್ಕಳಾಗಿರುವುದಿಲ್ಲ. ಸಮಾಜದ ಕುಟುಂಬದ ಮಾತುಗಳಿಂದ ಮಾನಸಿಕವಾಗಿ ಕುಗ್ಗುತ್ತಾಳೆ. ಅಕ್ಕಂದಿರೆಲ್ಲ ಹೊನ್ನಮ್ಮಳಿಗೆ ಮಕ್ಕಳಾಗಬೇಕಾದರೆ ಕೆಲವು ನಿಯಮಗಳನ್ನು ಪಾಲಿಸಬೇಕು ಎನ್ನುತ್ತಾರೆ. ಅವುಗಳೆಂದರೆ:

ಬಾವಿಯ ತೆಗೆಸಿ ಸೀಬೆ(ಒಂದು ಬಗೆಯ ಮರ ಮತ್ತು ಅದರ ಹಣ್ಣು)ಯ ಹಾಕಿಸಬೇಕು ಎಂದ ತಕ್ಷಣವೇ ಹೊನ್ನಮ್ಮ ಒಡ್ಡರನ್ನು ಕರೆಯಿಸಿ ಹಿಡಿಹೊನ್ನು ಕೊಟ್ಟು ಬಾವಿಯನ್ನು ತೆಗೆಸಿದಳು. ಹಣ್ಣು-ಹಂಪಲವನ್ನು ಹಾಕಿದಳು.

ಗೋವು-ದನಗಳು ಬಂದು ಬಂಜೆ ಕಟ್ಟಿಸಿದ ಬಾವಿ ಇದು ಇಲ್ಲಿಯ ನೀರು ಕುಡಿದರೆ ನಾವು ಬಂಜೆಯರಾಗುತ್ತೇವೆ. ನಮ್ಮ ಮಕ್ಕಳು ಬಂಜೆಯರಾಗುತ್ತಾರೆ ಎಂದು ಹಿಂದಕ್ಕೆ ಹೋಗುವುದನ್ನು ಹೊನ್ನಮ್ಮ ನೋಡಿದಳು. ಇದಲ್ಲದೇ ಮೂಡಲ ಸೀಮೆಯಿಂದ ಬಂದ ಹಕ್ಕಿ-ಪಕ್ಷಿ ಹಣ್ಣು-ಹಂಪಲವನ್ನು ತಿಂದರೆ ಬಂಜೆಯರಾಗುತ್ತೇವೆಂದು, ನಮ್ಮ ಮಕ್ಕಳು ಬಂಜೆಯರಾಗ್ತಾರೆಂದು ಗಿಣಿಗಳು ಹಿಂದಕ್ಕೆ ಹೋಗುವುದನ್ನು ಹೊನ್ನಮ್ಮ ನೋಡುತ್ತಾಳೆ. ಆ

ಕಾರಣ ಗಂಗಮ್ಮಳನ್ನು ಪೂಜೆ ಮಾಡಿದರೆ ಹೊನ್ನಮ್ಮಳಿಗೆ ಒಳ್ಳೆಯದು ಎಂದು ಸೂಚನೆ ಸಿಕ್ಕಾಗ, ಗಂಗವ್ವಳನ್ನು ಪೂಜೆ ಮಾಡಲು ಮುಂದಾಗುತ್ತಾಳೆ.

"ಗಂಗವ್ನ ಮಾಡಿದರೆ । ಸು । ಬಂಜೆತನ ಹರುದತೆ । ಸು ।
ಹಂಗಂದೆ ಹೊನ್ನಮ್ಮ । ಸು । ಅಟ್ಟಕೆ ಹಾಕ್ಯಾಳೆ । ಸು।
ಹತ್ತು ಕಾಲೇಣಿಯ । ಸ । ಪಟ್ಟೆಸೀರೆ ತೆಗದಳೆ ।ಸು।
ತಟ್ಟೀಗೆ ಮಡಿಗ್ಯಾಳೆ । ಸು । ನೆಲಗಳ ಬಳಿದಳೆ
ಮೈಯನೆ ತೊಳುದಳೆ । ಸು । ಮಡಿಗಳ ಉಟ್ಟಳೆ
ಚಿಗಳಿ ತಂಬಿಟ್ಟಿನುಂಡೆ । ಸು । ಬೇಗದಲ್ಲಿ ಮಾಡ್ಯಾಳೆ
ಬೇಗದಲ್ಲಿ ಮಾಡಿನ್ನ । ಸು । ಅಕ್ಷತೊಂಗನೂಲು
ಗಂಧ ಚಂದ್ರಗಳು । ಸು । ತಟ್ಟೀಗೆ ಇಟ್ಟಳೆ
ಊದುಕಡ್ಡಿ ಇಟ್ಟು । ಸು । ಹಣ್ಣು ಕರಪೂರಗಳ
ಬೇಗದಲ್ಲಿ ಇಟ್ಟಳೆ । ಸು । ತಗಂಡೆ ಹೊರಟಳೆ
ಗಂಗವ್ವ ಪೂಜೆಯ । ಸು । ಮಾಡ್ಯಾಳೆ ಹೊನ್ನಮ್ಮ"[೩೬]

ಹೀಗೆ ಗಂಗವ್ವಳನ್ನು ಪೂಜೆ ಮಾಡಲು ಮಡಿಯುಡಿಯಲ್ಲಿ, ನೈವೇದ್ಯ ತೆಗೆದುಕೊಂಡು ಹೋದಳು. ಇಷ್ಟೆಲ್ಲಾ ನೇಮ ನಿತ್ಯ ಆಚರಣೆಗಳನ್ನು ಮಾಡಿದರೂ ಕೂಡ ಗಂಗೆ ಬತ್ತಿ ಹೋದಳು. ಆಗ ತನ್ನ ಬಗ್ಗೆ ತನ್ನ ಜನ್ಮದ ಬಗ್ಗೆ ಕೀಳರಿಮೆ ಭಾವ, ತಾತ್ಸಾರ ಮನೋಭಾವ ಕಾಣಿಸಿಕೊಳ್ಳುತ್ತದೆ. ಆದಕಾರಣ ಜನಪದರು ಹೆಣ್ಣು ಜನ್ಮವನ್ನು ಕುರಿತು ಹಳಿಯುತ್ತಾರೆ.

"ಏನು ಕರ್ಮ ಮಾಡಿದ್ದೆ । ಸು । ಏನು ಪಾಪ ಮಾಡಿದ್ದೆ । ಸು ।
ಹಾಳಾದ ಪಾಪಿ ಜನ್ಮ । ಸು । ಯಾತಕೋ ಶಿವರಾಯ । ಸು ।"[೩೭]

ಎಂದು ದೇವರಲ್ಲಿ ಮೊರೆ ಹೋಗಿ ತನ್ನ ಹೆಣ್ಣಿನ ಜನ್ಮ ಪಾಪಿ ಜನ್ಮ ಅದಕ್ಕಾಗಿ ಈ ಜನ್ಮ ಬೇಡವೆಂದು ತನ್ನ ಗೋಳನ್ನು ಶಿವನಲ್ಲಿ ತೋಡಿಕೊಳ್ಳುತ್ತಾಳೆ. ಮನುಷ್ಯರು ಮನುಷ್ಯತ್ವವನ್ನು ಕಡೆಗಣಿಸಿ ಕ್ರೂರಿಯಾಗಿ ವರ್ತಿಸಿದಾಗ ದೇವರಲ್ಲಿ ಮೊರೆ ಹೋಗುವುದು ಸಾಮಾನ್ಯ ಹಾಗಾಗಿ ಹೊನ್ನಮ್ಮಳು ಕೂಡ ಶಿವನಲ್ಲಿ ಮೊರೆ ಹೋಗಿರುವಳು. ಮಕ್ಕಳಿಲ್ಲವೆಂಬ ನೋವನ್ನು

---

೩೬. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೦೮
೩೭. ಅದೇ, ಪು.೧೦೮

ಮರೆಯಬೇಕೆಂದುಕೊಂಡ ಹೊನ್ನಮ್ಮ ಅಕ್ಕಂದಿರ ಮಕ್ಕಳಲ್ಲಿ ಪ್ರೀತಿಯನ್ನು ಕಾಣಲು ಹೋದ ಆಕೆಗೆ ಅಪಮಾನದ ಸನ್ಮಾನ ಉಂಟಾಗುತ್ತದೆ.

ಅಕ್ಕಂದಿರ ಮಕ್ಕಳನ್ನು ನೋಡಲು ಹೋದ ಹೊನ್ನಮ್ಮಳಿಗಾದ ಅವಮಾನ :

ಹೊನ್ನಮ್ಮ ತನ್ನರಮನೆಗೆ ಬಂದು ತಟ್ಟೆಯ ಇಟ್ಟು, ಅಕ್ಕಂದಿರ ಮಕ್ಕಳಿಗೆ ಅಂಗಿ, ಕುಲಾವಿ (ಕುಂಚಿಗಿ) ತುದಿಕಾಲ್ (ಕಾಲು ಕುಬಸ) ಬೇಕಾದ ಸಾಮಾನುಗಳನ್ನು ತರಲು ಹೋದಳು. ಕಡಲೆ ಬೆಲ್ಲದ ಜೊತೆಗೆ ಮಕ್ಕಳ ಬಟ್ಟೆಬರೆಗಳನ್ನು ತೆಗೆದುಕೊಂಡು ಆತುರದಿಂದ ಅಕ್ಕಂದಿರ ಮಕ್ಕಳನ್ನು ನೋಡಲು ಓಡೋಡಿ ಹೋಗುವಳು. ಆರು ಜನ ಅಕ್ಕಂದಿರು ಏಳು ಸುತ್ತಿನ ಕಲ್ಲುಬಾವಿಗೆ ನೀರಿಗೆ ಬಂದು ಹೀಗೆ ಮಾತನಾಡುತ್ತಾರೆ :

"ನಮ್ಮ ಬಂಜ್ಹೊನ್ನಿ ಬರುತಾಳೆ ಮಕ್ಕಳ ಮಡಗಲಬೇಕು
ಬಂಜೆ ತಂದ ತಿಂಡಿ ಮಕ್ಕಳು ತಿಂದರೆ
ನಾವು ಬಂಜೇರು ಆಗುತಿವಿ ನಮ್ಮ ಮಕ್ಕಳು ಬಂಜೇರು ಆಗುತಾರೆ"[೩೮]

ಎಂದು ತಾವೇ ಮಾತನಾಡಿಕೊಂಡು ಅರಮನೆಗೆ ಬಂದು ಕೊಡಗಳ ಇಳುವಿ ಮಕ್ಕಳನ್ನು ವಾಡೆ ಮಾಡಿಗೆ ತುಂಬಿ (ಬಚ್ಚಿಟ್ಟು) ಬಾಗಿಲಲ್ಲಿ ಬಂದು ನಿಲ್ಲುವರು. ಆಗ ಹೊನ್ನಮ್ಮ ಬಂದು ಮಕ್ಕಳನ್ನು ಕೇಳಿದರೆ, ಮಕ್ಕಳು ಆಟವಾಡುವುಕ್ಕೆ ಹೋಗಿದ್ದಾರೆ ಎಂದು ಅಕ್ಕಂದಿರು ಸುಳ್ಳು ಹೇಳುವರು. ಆಗ ಹೊನ್ನಮ್ಮ ಮಕ್ಕಳನ್ನು ಹುಡುಕಿಕೊಂಡು ಹೋಗುತ್ತಾಳೆ. ಕಾರಣ ಮಕ್ಕಳ ಮೇಲಿರುವ ಅಪಾರ ಪ್ರೀತಿ.

ಮಕ್ಕಳನ್ನು ಹುಡುಕಲು ಹೋದ ಹೊನ್ನಮ್ಮ :

ಮಕ್ಕಳನ್ನು ಹುಡುಕಿಕೊಂಡು ಗುಡ್ಡಾರಣ್ಯಗಳಿಗೆ ಹೋದಳು. ಅಲ್ಲಿ ಸಿಗಲಿಲ್ಲವಾದ ಕಾರಣ ಅಕ್ಕಂದಿರಲ್ಲಿ ಬಂದು ನಿಮ್ಮ ಮಕ್ಕಳು ಸಿಗಲಿಲ್ಲ ಎನ್ನುತ್ತಾಳೆ. ಆಗ ಅವಳ ಅಕ್ಕಂದಿರು:

"ಮೂಲೇಲಿ ಇದ್ದಂಥ ಒನಕೆಯಮಂಡಿಯ
ಬೇಗದಲಿ ತಕ್ಕಂಡು ಕಣಕಾಲ (ಮೊಣಕಾಲು ಮುರಿದರು)
ಮೊಣಕೈಯ ಮುರಿದರು ಕೊರಕಲಿಗೆ ಎಸೆದರು"[೩೯]

---

೩೮. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೦೮,೧೦೯

೩೯. ಅದೇ, ಪು.೧೦೯

ಕಂದನನ್ನು ಕಾಣದ ನೊಂದ ಖಾಲಿ ಮಡಿಲಿಗೆ ಬಂಜೆ ಎಂಬ ಹಣೆಪಟ್ಟಿಯನ್ನು ಕಟ್ಟಿ ಅಕ್ಕಂದಿರೆಲ್ಲ ಸೇರಿ ಹೊನ್ನಮ್ಮಳಿಗೆ ಚಿತ್ರಹಿಂಸೆಯನ್ನು ಕೊಡುತ್ತಾರೆ. ನಮ್ಮ ಹಿಂದೂ ಪರಿಕಲ್ಪನೆಯಲ್ಲಿ ಮದುವೆಯಾದ ಹೆಣ್ಣಿಗೆ ಮಕ್ಕಳಾಗದಿದ್ದರೆ ಆ ವಂಶಕ್ಕೆ ಸದ್ಗತಿಯಿಲ್ಲ. ಮಕ್ಕಳಾಗದಿರುವುದಕ್ಕೆ ಪೂರ್ವ ಜನ್ಮದ ಪಾಪ ಕರ್ಮಗಳೇ ಕಾರಣವೆಂದು ನಂಬಲಾಗಿದೆ. ಹೆಣ್ಣು ಗರ್ಭಿಣಿಯಾಗದಿರಲೂ ಗಂಡನೇ ಕಾರಣವಾಗಿದ್ದರೂ ಸಮಾಜ ಆತನನ್ನು 'ಬಂಜ' ಎಂದು ಕರೆಯುವುದಿಲ್ಲ. ಹೆಣ್ಣನ್ನೇ ದೂಷಿಸುವುದು.

ಹೊನ್ನಮ್ಮ ಬಂಜೆ ಎನ್ನುವ ನೋವಿನೊಂದಿಗೆ ದೇಹಕ್ಕೂ ಕೂಡ ಶಿಕ್ಷೆ ಕೊಟ್ಟು ರೊಚ್ಚಿಗೇಳುವಂತೆ ಮಾಡುವುದರಿಂದ ಹೊನ್ನಮ್ಮ ಅಕ್ಕಂದಿರ ಮಕ್ಕಳಿಗೆ ಹುಳು ಹುಪ್ಪಡಿಗಳು ಆಗಲಿಯೆಂದು ಶಾಪವನ್ನು ನೀಡುವಳು. ಕ್ಷಣಮಾತ್ರದಲ್ಲಿ ಅದು ನಿಜವಾಗುತ್ತದೆ. ಆಗ ಆಕೆಯ ರೋಧನ ಮನ ಕಲಕುವಂತೆ ವ್ಯಕ್ತವಾಗಿದೆ.

ಹೊನ್ನಮ್ಮಳ ರೋದನ ಮತ್ತು ಗಂಡು ಮಗುವಿಗೆ ಜನ್ಮ ನೀಡಿದ ಬಗೆ :

'ಇವರ ವಾಡೇಲಿದ್ದ ಮಕ್ಕಳು ಹುಳುತೇಯ ಹೋಗಲಿ' ಎಂದು ಶಾಪ ಹಾಕುತ್ತಾ ಅರಣ್ಯ ಮಧ್ಯದಲ್ಲಿ ಕೊರಗುತ್ತಾ ಮಲಗಿರುವಾಗ ಶಿವ-ಪಾರ್ವತಿ ಈರೊಂಬತ್ತು ಕೋಟಿಗೆ ಪಡಿದಾನ ಅಳಕೊಂಡು ಚಂಚರಣೆ ಬರುವಾಗ ಪಾರ್ವತಿದೇವಿ ಯಾರಿಗೋ ಬಹಳ ಕಷ್ಟ ಬಂದಿದೆ ಶಿವನೆ ಹೋಗೋನ, ನೀವು ಬರದಿದ್ದರೆ ನಿಮ್ಮ ಪಾದದ ಮೇಲೆ ನಾಲಗೆ ಹರಕೊಂಡು ಪ್ರಾಣವ ಬಿಡುತ್ತೇನೆ ಎನ್ನುವಳು. ಆಗ ಶಿವನು "ಹಾಳಾದ್ದೆಂಗ್ಸಿನಕುಟ್ಟೆ ಒಂದೀಗೆ ಬರಬಾರ್ದು" ಅಂದುಕೊಂಡು ವೇಗವಾಗಿ ಬರುತ್ತಾನೆ. ಶಿವ-ಪಾರ್ವತಿ ಬಂದು ಹೊನ್ನಮ್ಮಳ ಕಷ್ಟವನ್ನು ಕೇಳಿ ನಿನಗೆ ಒಂದು ಗಂಡುಮಗುವಿನ ಫಲವಿದೆ. ಆದರೆ ಹನ್ನೆರಡು ವರ್ಷ ಆದ ಮೇಲೆ ಮಗುವನ್ನು ಕೊಯ್ದು ಅಡುಗೆ ಮಾಡಿ ನಮಗೆ ಊಟಕ್ಕೆ ಇಡಬೇಕು ಎಂದಾಗ ಹೊನ್ನಮ್ಮಳು ತಕ್ಷಣವೇ ಒಪ್ಪುತ್ತಾಳೆ. ಆದರಾಗಲಿ ಶಿವನೆ ಬಂಜೆತನ ಎಂಬ ಕಳಂಕ ಅಳಿಸಲಿ ನನಗೆ ಎಂದು ಭಾಷೆಯನ್ನು ಕೊಡುವಳು. ನಂತರ ಶಿವನು ಹಣ್ಣನ್ನು ಕೊಟ್ಟು ಪೂಜೆ ಮಾಡಲು ಹೇಳಿ ಹೋಗುವನು. ಒಂಬತ್ತು ದಿವಸ ಪೂಜೆ ಮಾಡಿ ಹಣ್ಣನ್ನು ತಿಂದು ಗಂಡುಮಗುವಿಗೆ ಜನ್ಮ ನೀಡುವಳು.

ಕಷ್ಟವೆಂಬುದು ಇದ್ದ ಹಾಗೆಯೇ ಇರುವುದಿಲ್ಲ. ಶ್ರೀಮಂತರು ಬಡವರಾಗಬಹುದು, ಬಡವರು ಶ್ರೀಮಂತರಾಗಬಹುದು. ಕಷ್ಟಗಳಿಗೆ, ನಿಂದನೆಗಳಿಗೆ ಹೆದರಿ ಬದುಕಬೇಕಾಗಿಲ್ಲ. ಅವರಿಗೂ ಕೂಡಾ ಮುಂದೆ ಒಳ್ಳೆಯ ಭವಿಷ್ಯವಿದ್ದೇ ಇದೆಯೆಂಬ ಆಶಾಭಾವನೆ ಇದರಲ್ಲಿದೆ.

ಬಂಜೆ ಎಂದು ಹೀಯಾಳಿಸಿ ಹೆಣ್ಣು ಜೀವವನ್ನು ಕೊಂದ ಘಟನೆ ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಸಣ್ಣಪ್ಪನ ಹಟ್ಟಿಯಲ್ಲಿ ನಡೆದಿದೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಕಂಪಿಕೆರೆ ಗ್ರಾಮದ ವಾಸಿ ದಾಸಪ್ಪ ಎಂಬುವವರ ಮಗಳು ಕಮಲಮ್ಮ. ಈಕೆಗೆ ಮದುವೆಯಾಗಿ ಐದು ವರ್ಷವಾದರೂ ಮಕ್ಕಳಾಗಿರಲಿಲ್ಲ. ಜೊತೆಗೆ ವರದಕ್ಷಿಣೆಯನ್ನು ತರುವಂತೆ ಗಂಡನ ಮನೆಯವರು ಕಿರುಕುಳ ನೀಡುತ್ತಿದ್ದರು. ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ ಗುಂಡಿನಿಂದ ಆಕೆಯನ್ನು ಬಲಿ ತೆಗೆದುಕೊಂಡರು ಎಂದು ಪೊಲೀಸ್ ಇಲಾಖೆಯಲ್ಲಿ ದಾಖಲಾಗಿದೆ. (ಜನೇವರಿ ೧೧, ೨೦೧೩ one india kannada)

ಕಥನ ಗೀತೆಯಲ್ಲಿ ಅಷ್ಟೇ ಅಲ್ಲದೆ ವಾಸ್ತವದಲ್ಲೂ ಮಹಿಳೆ ಬಂಜೆತನದಿಂದ ಶೋಷಣೆಗೊಳಗಾಗುತ್ತಿರುವುದಕ್ಕೆ ಇಂತಹ ಹಲವಾರು ಉದಾಹರಣೆಗಳು ಸಾಕ್ಷಿಯಾಗಿವೆ.

೫.೨. ತ್ಯಾಗದ ಆಚರಣೆಗಳು :

ಸಾಮಾನ್ಯವಾಗಿ ತ್ಯಾಗ ಎಂದರೆ ಒಳ್ಳೆಯ ಉದ್ದೇಶಕ್ಕಾಗಿ ಬಿಟ್ಟದ್ದು, ತ್ಯಜಿಸಿದ್ದು, ಅರ್ಪಿಸಿದ್ದು, ಕೋರಲು(ಮುಡಿಪು) ಕೊಡು ಎಂದರ್ಥವಾಗುತ್ತದೆ. ಕಥನಗೀತೆಗಳಲ್ಲಿ ಮಹಿಳೆಯರು ಊರಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯೊಂದಿಗೆ ಜೀವನವನ್ನು ಮುಡುಪಾಗಿಟ್ಟು ತಮ್ಮ ಜೀವವನ್ನು ತ್ಯಜಿಸಿದ ಘಟನೆಗಳನ್ನು ಕಾಣುತ್ತೇವೆ. ಮುಂದೆ ಅವರೇ ಊರಿಗೆ ಮಹಾಸತಿಯರಾಗಿ ರೂಪಿಸಲ್ಪಡುತ್ತಾರೆ. ಇಂತಹ ತ್ಯಾಗದ ಆಚರಣೆಗಳಿಗೆ ಸಂಬಂಧಿಸಿದಂತೆ ಹಲವಾರು ನಿದರ್ಶನಗಳು ಕೂಡ ಕಂಡುಬರುತ್ತವೆ.

ಸಿದ್ಧೇಶ್ವರ ಪುರಾಣದಲ್ಲಿ ಮಹಾಸತಿಯಾಗಲು ಹೊರಟ ಒಬ್ಬ ಸ್ತ್ರೀಯ ಚಿತ್ರಣವನ್ನು ಕಾಣುತ್ತೇವೆ. ಅದೇಂದರೆ; ತನ್ನ ಗಂಡ ಎಲ್ಲೋ ಮಡಿದ ಸುದ್ದಿ ಕೇಳಿದಾಗ ಅದನ್ನು ಖಚಿತಪಡಿಸಿಕೊಂಡು ಅರಸನ ಅಪ್ಪಣೆ ಪಡೆದು ಚಿತೆಯೇರಲು ಹೊರಡುವಳು. ಆಕೆ ಚಿತೆಗೆ ಹೋಗುವಾಗಿನ ಚಿತ್ರಣವನ್ನು, ಆಚರಣೆಯನ್ನು ಕೆಳಗಿನ ವರ್ಣನೆಯ ಮೂಲಕ ತಿಳಿಯಬಹುದು.

ಮುತ್ತೈದೆಗೆ ಶುಭ ಸಂಕೇತದ ವಸ್ತುಗಳಾದ ತಲೆಯಲ್ಲಿ ದಂಡೆ, ಅರಿಶಿನ ಬಣ್ಣದ ಸೀರೆ, ಆಭರಣಗಳನ್ನು ಧರಿಸಿ ಸರ್ವಾಲಂಕೃತಳಾಗಿ ಕೊಂಡಕ್ಕೋಗುವ ಆಚರಣೆಯ ವರ್ಣನೆ ಹೀಗಿದೆ:

> "ಪರಿಪರಿಯ ಪುಷ್ಪಮಾಲಾ ಲೇಪನಗಳು
> ಪರಿದಲಂಕರಿಸಿ ಜಂಬೀರಫಲಮಂ ಪಿಡಿದು

ತರೆದೆ ಮತ್ತೊಂದು ಕಯ್ಯೊಳಗೆ ಕೈಪಿಡಿವಿಡಿದು ಘನವೀರನಾದದಿಂದೆ
ಉರುತರಗೊಳಾರ್ದು ಬೀದಿಯೊಳು ಕುಣಿದಾಡುತ್ತ
ಬರುತೆ ಪುರುಜನದ ಸಂದಣಿಯಿಂದ ವಾದ್ಯಂಗ
ಉರು ಘೋಷದಿಂದೆ ಕಂಡಾನಂದದಿಂದೆ ಸಿದ್ಧೇಂದ್ರಂಗೆ ವಂದಿಸಿದಳು"

ವಿವಿಧ ಬಗೆ ಬಗೆಯ ಬಣ್ಣಗಳ ಹೂಗಳ ಮಾಲೆ, ಶ್ರೇಷ್ಠವಾದ ನಿಂಬೆಯ ಹಣ್ಣನ್ನು ಹಿಡಿದು, ಮತ್ತೊಂದು ಕೈಯಲ್ಲಿ ಕೈಪಿಡಿ(ಕನ್ನಡಿ)ಯನ್ನು ಹಿಡಿದು 'ಗೆಜ್ಜೆಯ ನಾದದಿಂದ ಊರಿನೊಳಗೆ, ಬೀದಿಯೊಳಗೆ ಕುಣಿದಾಡುತ್ತಾ ಬರುತ್ತಿರುವಾಗ ಪುರ ಜನರ ಸಂಭ್ರಮದಿಂದ ಗುಂಪಾಗಿ ವಾದ್ಯಗಳನ್ನು ನುಡಿಸುತ್ತಿದ್ದರು. ಇದನ್ನು ಕಂಡು ಸಂತೋಷದಿಂದ ಸಿದ್ಧೇಂದ್ರಂಗೆ ನಮಸ್ಕರಿಸಿ ಚಿತೆಯೇರಲು ಮುಂದಾಗುತ್ತಿರುವ ದೃಶ್ಯ ಕಂಡುಬರುತ್ತದೆ. ಇದರಿಂದ ಮಹಿಳೆ ಸತಿ ಹೋಗುವಾಗಿನ ಆಚರಣೆಗಳು ಹೇಗಿದ್ದವು ಎಂಬುದು ತಿಳಿಯುತ್ತದೆ.

ಈ ಆಚರಣೆಯ ಮೂಲಕ ಮಹಿಳೆಗೆ ಚಿತೆಯೇರುವುದು ಸಾಮಾನ್ಯವಾಗಿದ್ದಿತು ಎಂಬುದು ತಿಳಿದುಬರುತ್ತದೆ. ಜನಪದರು ಸ್ವಭಾವತಃ ಸಂಪ್ರದಾಯನಿಷ್ಠರು ಹಾಗೂ ಹಿರಿಯರ ಪರಂಪರಾಗತ ಸಂಪ್ರದಾಯ(ಆಚರಣೆಗಳು) ಪರಮ ಪ್ರಮಾಣವೆಂದು ನಂಬಿರುವಂತಹವರು. ಆಚರಣೆಗಳನ್ನು ಪ್ರಶ್ನಿಸುವಂತಹ ಶಕ್ತಿಯಿಂದ ಹಿಂದುಳಿದ ಮುಗ್ಧರು. ಪರಿಪಾಲನೆಯಷ್ಟೇ ತಮ್ಮ ಕರ್ತವ್ಯವೆಂದು ನಂಬಿದವರು. ಕಾರಣ ಅಶಿಕ್ಷಿತ ಸಮುದಾಯ ಹಾಗೂ ಸರ್ವಕಾಲಕ್ಕೂ ಸರ್ವರಿಗೆ ಶಿಕ್ಷಣ ದೊರಕದೇ ಇರುವುದು. ಆದ್ದರಿಂದ ಪ್ರತಿಯೊಬ್ಬ ಮಾನವನಿಗೆ ಶಿಕ್ಷಣ, ಜ್ಞಾನ, ಅರಿವಿನ ಅವಶ್ಯಕತೆ ಇದೆ. ವೈಜ್ಞಾನಿಕವಾಗಿ ವಿಚಾರಿಸಿದಾಗ ಸರಿ–ತಪ್ಪುಗಳನ್ನು ತೂಗಿ ನೋಡುವ ಪ್ರಜ್ಞೆ ಬೆಳೆದು ಸತ್ಯದ ಸಾಕ್ಷಾತ್ಕಾರವಾಗುವುದಕ್ಕೆ ಸಹಾಯಕವಾಗುತ್ತದೆ. "ವಿಜ್ಞಾನ ಬದಲಾಗುತ್ತದೆ ನಿಜ. ಅದಕ್ಕೆ ಕಾರಣ ಹೊಸ ಸತ್ಯ ಬೆಳಕಿಗೆ ಬರುವುದರಿಂದ, ಸಾಂಪ್ರದಾಯಿಕ ಜ್ಞಾನ ಬದಲಾಗುವುದಿಲ್ಲ. ಕಾರಣ ಅದನ್ನು ಬದಲಾಯಿಸಲು ಯಾರೂ ಪ್ರಯತ್ನಿಸುವುದಿಲ್ಲ. ಜ್ಞಾನವನ್ನು ಮಾನವ ತಾನೇ ಕಂಡುಕೊಳ್ಳುತ್ತಾನೆ. ಯಾರಿಂದಲೂ ಬರಲು ಸಾಧ್ಯವಿಲ್ಲ. ನಮ್ಮ ಕಣ್ಣು, ಕಿವಿ, ಮಿದುಳಿನ ಕ್ರಿಯೆಯಿಂದ ಜ್ಞಾನದ ಅರಿವಾಗುತ್ತದೆ."[೪೦] ಮಾನವನಲ್ಲಿ ಮೌಢ್ಯತೆಯಿದ್ದಾಗ ಯಾವುದೇ ಸರಿಯಾದ ಆಯ್ಕೆ, ನಿರ್ಧಾರವನ್ನು ತೆಗೆದುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಲು ಆಗದು. ಆದ್ದರಿಂದ ಜ್ಞಾನವೆಂಬುದು ಬಹುಮುಖ್ಯ ಪಾತ್ರ ವಹಿಸುತ್ತದೆ. ಆದರೆ ದುರಂತವೆಂದರೆ ಬಹುಪಾಲು ಮಹಿಳೆಯರೇ ಮೌಢ್ಯತೆಗೆ ಹೆಚ್ಚು ಒಳಗಾಗುತ್ತಿರುವುದು. ಕಾರಣ ಅವರಲ್ಲಿರುವ ಮಾನಸಿಕ ಖಿನ್ನತೆ, ಅಂಜಿಕೆ, ತಪ್ಪು ಗ್ರಹಿಕೆ

---

೪೦. ಮಹಿಳೆ ಮತ್ತು ಮೌಢ್ಯ : ವಸುಂಧರಾ ಭೂಪತಿ, ಪು.೬

ಇತ್ಯಾದಿಗಳಿಂದ ಹೊರಬರಬೇಕಾದರೆ ಮಹಿಳೆಯರಲ್ಲಿ ಆತ್ಮಸ್ಥೈರ್ಯ, ಆತ್ಮಬಲ ತುಂಬಬೇಕು. ಮೌಢ್ಯತೆಯಿಂದ ಮುಕ್ತವಾಗಿಸಲು ಪ್ರಾಥಮಿಕ ಶಿಕ್ಷಣದ ಪಠ್ಯದಲ್ಲಿಂದಲೇ ಅವರಿಗೆ ಪ್ರೇರೇಪಿತ-ವಾಗುವಂತಹುಗಳ ಅಧ್ಯಾಯಗಳನ್ನು ಅಳವಡಿಸಬೇಕು.

ಮೌಢ್ಯತೆಯಿಂದ ಮುಕ್ತರಾಗಲು ಕೆಲವೊಂದು ಬುದ್ಧನ ನುಡಿಗಳು ಕೂಡ ಪ್ರೇರೇಪಿತವಾಗಲಿವೆ: "ಯಾವ ವಿಷಯವಾಗಲೀ ನಮ್ಮ ಕಿವಿಗೆ ಬಿದ್ದಿವೆಯೆಂಬುದಕ್ಕಾಗಿ ಅಥವಾ ಅದು ಸಂಪ್ರದಾಯವೆಂಬ ಕಾರಣಕ್ಕಾಗಿ ನೀವೇ ಅದನ್ನು ಕಲ್ಪಿಸಿಕೊಂಡಿದ್ದೀರೆಂಬ ಕಾರಣಕ್ಕಾಗಿ ನಂಬಬೇಡಿ. ಅಥವಾ ನಿಮ್ಮ ಅಧ್ಯಾಪಕರು ಹಾಗೂ ಹಿರಿಯರ ಮೇಲಿನ ಗೌರವಕ್ಕೋಸ್ಕರ ಅವರು ಹೇಳಿದ್ದನ್ನೆಲ್ಲ ನಂಬಬೇಡಿ. ಪ್ರತಿಯೊಂದನ್ನು ಸರಿಯಾಗಿ ಪರೀಕ್ಷಿಸಿ, ವೀಕ್ಷಿಸಿ, ಆಲೋಚಿಸಿ ನೀವೇನು ಮಾಡಬೇಕೆಂಬುದನ್ನು ನಿರ್ಧರಿಸಿ"[೪೧] ವೈಜ್ಞಾನಿಕ ಸತ್ಯವನ್ನು ಕಾಣಬೇಕಾದರೆ ತೌಲನಿಕವಾಗಿ ಪರೀಕ್ಷಿಸಿ ಅರ್ಥೈಯಿಸಿಕೊಂಡು ಮುಂದಿನ ಹೆಜ್ಜೆ ಇಡಬೇಕೆನ್ನುವುದು ಬುದ್ಧನ ಈ ನುಡಿಗಳಿಂದ ಸ್ಪಷ್ಟವಾಗುತ್ತದೆ. ಆದರೆ ಕಥನಗೀತೆಗಳಲ್ಲಿ ಕಂಡುಬರುವ ಮಹಿಳಾ ಲೋಕ ಈ ವೈಚಾರಿಕ ಮನೋಭಾವದಿಂದ ದೂರಸರಿದಿದ್ದರು ಎಂಬುದಕ್ಕೆ ಕೆಳಗೆ ವಿಶ್ಲೇಷಣೆಗೊಳಪಡಿಸಿದ ಕಥನಗೀತೆಗಳೆ ಸಾಕ್ಷಿಯಾಗಿವೆ.

ನಾಗವ್ವ ಕಥನಗೀತೆಯಲ್ಲಿ ಆಚರಣೆ:

ವಿವಾಹಕ್ಕೆ ಮೊದಲೇ ಎಳೆಯ ವಯಸ್ಸಿನಲ್ಲೇ ಕೊಂಡವನ್ನೇರುವ ದಾರುಣ ಚಿತ್ರಣ ನಾಗವ್ವ ಕಥನಗೀತೆಯಲ್ಲಿ ಕಾಣುತ್ತೇವೆ. ಕಾಡುಗೊಲ್ಲರ ಹಟ್ಟಿಯಲ್ಲಿ ಹುಟ್ಟಿದ ನಾಗವ್ವಳನ್ನು ನವಿಲೂರಿನ ಮುತ್ತನ ಮಗ ಚೆಂದಯ್ಯನಿಗೆ ಮದುವೆ ಮಾಡಿಸಲು ಕೇಳುತ್ತಾರೆ. ಸೀರೆ ಉಡಲು ಅರಿಯದ ಮಗುವನ್ನು ಕೊಡಲು ಹಿರಿಯರು ಮೊದಲು ವಿರೋಧಿಸಿದರೂ ನಂತರದಲ್ಲಿ ಮದುವೆಗೆ ಒಪ್ಪಿ, ಮದುವೆಯ ಸಿದ್ಧತೆಗಳನ್ನು ಆಚರಣಾತ್ಮಕವಾಗಿ ಮಾಡುತ್ತಾರೆ. ಆದರೆ ಆ ಸಮಯದಲ್ಲಿ ಕೆಲವೊಂದು ಅಪಶಕುನಗಳು ಉಂಟಾಗುತ್ತವೆ. ಜನಪದ ಸಮಾಜದಲ್ಲಿ ಏನಾದರೂ ಶುಭ ಕಾರ್ಯಗಳಾಗುವಾಗ ಅಪಶಕುನಗಳಾದರೆ ಅವರ ದೃಷ್ಟಿಯಲ್ಲಿ ಕೇಡಿನ ಸಂಕೇತವಾಗಿ ಕಂಡುಬರುತ್ತದೆ. ಆದರೂ ಕೂಡ ಈ ಕಥನಗೀತೆಯಲ್ಲಿ ಮದುವೆ ಆಚರಣೆಯನ್ನು ಮುಂದುವರೆಸಿರುತ್ತಾರೆ.

---

೪೧. ಮಹಿಳೆ ಮತ್ತು ಮೌಢ್ಯ : ವಸುಂಧರಾ ಭೂಪತಿ, ಪು.೭

ನಾಗವ್ವಳಿಗೆ ಮದುವೆ ಶಾಸ್ತ್ರಗಳ ಸಿದ್ಧತೆಗಳಲ್ಲಾದ ಅಪಶಕುನಗಳು:

ಮದುವೆ ಶಾಸ್ತ್ರಗಳಲ್ಲಿ ಬಳೆ ತೊಡಿಸುವುದು ಒಂದು ಪದ್ಧತಿ ಹಾಗಾಗಿ ನಾಗವ್ವಳಿಗೆ ಬಳೆ ತೊಡಸಿಕೊಳ್ಳಲು ಕರೆಯುವರು.

"ಹಟ್ಟಿಗೆ ಬಳೆ ಬಂದೊ ತೊಟ್ಟುಕೊಳ್ಳೇ ನಾಗವ್ವ

ಬಟ್ಟುಳದಾಗ್ಹೊನ್ನ ಅಳಕೊಳೆ । ನವಿಲೂರ

ಬಟ್ಟ ಮುತ್ತಿನಂಥ ಬಳೆಯ ತೊಡುಬಾರೆ"[೪೨]

ಬಳೆಯನ್ನು ಇಡಲು ಬಳೆಗಾರರು ಬಂದಿದ್ದಾರೆ ಎಂದು ಆಕೆಯನ್ನು ಕರೆದು ಬಳೆಯನ್ನು ತೊಡಲು ಕೂಡಿಸುತ್ತಾರೆ. 'ಬಟ್ಟುಳದಾಗ್ಹೊನ್ನ ಅಳಕೊಳೆ' ಎನ್ನುವಲ್ಲಿ ಬಳೆಗಳನ್ನೇ ಬಂಗಾರಕ್ಕೆ ಹೋಲಿಸಿದ್ದಾರೆ. ಜನಪದರು ಬಳೆ ತೊಟ್ಟುಕೊಳ್ಳುವಾಗ ಬಲಗಡೆ ಸೀತರು, ಬೆಕ್ಕೆರಡು ಸೀತವು, ಇತ್ತ ನವಿಲೂರಿನಲ್ಲಿ ಚೆಂದಯ್ಯ ಮದುವಣಿಗನಾಗಿ ಉಗುರೆಣ್ಣೆ ಮೀಯುವಾಗ ತಂಗಿ ಚೆಲುವಮ್ಮ ಬಂದು ಬೇಡರು ತಮ್ಮ ಆಡನ್ನು ಹೊಡೆದ ಸುದ್ದಿಯನ್ನು ಹೇಳುತ್ತಾಳೆ. ಹಸಿಮೈಯಲ್ಲೇ ಕಾಡಿಗೆ ಹೋಗಿ ಆಡುಗಳನ್ನು ಬೇಡರಿಂದ ಬಿಡಿಸಿಕೊಂಡು ಬರುತ್ತಾನೆ. ಬರುವಾಗ ಕುಂಟಾಡಿನ ಮರಿ ಕಾಣಿಸುವುದಿಲ್ಲ. ಮರಳಿ ಕಾಡಿನಲ್ಲಿ ಹುಡುಕಿ ಬರುವಾಗ ಸೀಗೆಯ ಮಳೆಯಲ್ಲಿ ಅಡಗಿದ್ದ ಬೇಡರು ಚೆಂದಯ್ಯನನ್ನು ಕೊಲ್ಲುತ್ತಾರೆ. ಆಗ ಕೊಂಡಕ್ಕೆ ಹೋಗಲು ನಾಗವ್ವ ಸ್ವನಿರ್ಧಾರ ಮಾಡುತ್ತಾಳೆ. ಅಂದರೆ ಕೊಂಡಕ್ಕೆ ಹೋಗುವ ಆಚರಣೆ ಮೊದಲಿನಿಂದಲೂ ಅಂದಿನ ಸಮಾಜದಲ್ಲಿ ನಡೆದುಕೊಂಡು ಬಂದಿದೆ. ಇದನ್ನು ತಾನು ನೆರವೇರಿಸಲೇ ಬೇಕು ಎಂದುಕೊಂಡು ತನ್ನ ಜೀವವನ್ನು, ಜೀವನವನ್ನು ತ್ಯಾಗ ಮಾಡುವ ನಿರ್ಧಾರ ಕೈಗೊಂಡು ಆಚರಣಾತ್ಮಕವಾಗಿ ಕೊಂಡವೇರುತ್ತಾಳೆ.

ಕೊಂಡವೇರಲು ನಾಗವ್ವಳ ನಿರ್ಧಾರ :

ಮದುವೆಯಾಗದೇ ಇದ್ದರೂ ಕೂಡ ನಾಗವ್ವ ಚೆಂದಯ್ಯನನ್ನು ಪತಿ ಎಂದು ಸ್ವೀಕರಿಸಿಬಿಟ್ಟಿದ್ದಳು. ಅವನೇ ತೀರಿಹೋದ ಮೇಲೆ ಸಮಾಜದಲ್ಲಿ ಬಾಳುವುದು ತರವಲ್ಲವೆಂದು ಕೊಂಡವೇರಲು ಸಿದ್ಧಳಾದಳು.

ಕೊಂಡವೇರುವ ಆಚರಣೆ :

ಕೊಂಡಕ್ಕೆ ಹೊರಡುವ ಮೊದಲು ಸಮಾಜ ಕೆಲವೊಂದು ವಿಧಿ-ವಿಧಾನಗಳ ಮೂಲಕ ನೆರವೇರಿಸುವುದನ್ನು ಕಥನಗೀತೆಯಲ್ಲಿ ತಿಳಿಸಲಾಗಿದೆ.

---

೪೨ . ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೩

"ಕಿಚ್ಚಿನ ಸುತ್ತ ನುಚ್ಚಕ್ಕಿ ಹಸೆಹುಯ್ದು
ಮುತ್ತೀನ ಕಳಸ ನಡುವಿರಿಸಿ । ನಾಗವ್ವನ
ಕಿಚ್ಚಿಗೆ ಧಾರೆ ಎರೆದರು
ಕೊಂಡದಸುತ್ತ ಕೆಂಡದ ಹಸೆಹುಯ್ದು
ಬಂಗಾರದ ಕಳಸ ನಡುವಿರಿಸಿ । ನಾಗವ್ವನ
ಕೊಂಡಕ್ಕೆ ಧಾರೆ ಎರೆದಾರು"[೪೩]

ಇಡೀ ಸಮುದಾಯ ಒಪ್ಪಿಯೇ ಆಕೆಯನ್ನು ಕೊಂಡಕ್ಕೆ ಧಾರೆ ಎರೆಯುವ ಆಚರಣೆಯನ್ನು ವೈಭವಯುತವಾಗಿಯೇ ನಡೆಸುತ್ತಾರೆ.

ಕೊಂಡವೇರುವ ಮೊದಲು ಕಿಚ್ಚಿನ ಸುತ್ತ ನುಚ್ಚಕ್ಕಿ ಹಾಕಿ ಮುತ್ತಿನ ಕಳಸವನ್ನು ನಡುವೆ ಇಟ್ಟು, ಕೊಂಡದ ಸುತ್ತ ಕೆಂಡ ಹಾಕಿ ಬಂಗಾರದ ಕಳಸ ನಡುವೆ ಇರಿಸಿ, ನಾಗವ್ವ ಕೊಂಡಕ್ಕೇರುವಾಗ ಅವರಪ್ಪ ಬಂದು ನೂರ ಕೊಟ್ಟೇನು ಇರು ಮಗಳೇ ಎಂದರೆ; ಅವರವ್ವ ಹೊನ್ನು ಕೊಟ್ಟೇನು ಇರು ಮಗಳೇ ಎಂದಳು. ಆಗ ನಾಗವ್ವ 'ನೂರ ಕೊಟ್ಟರೆ ನನ್ನ ಕೊಪ್ಪಿನ ಬೆಲೆಯಿಲ್ಲ, ನೀ ಹೊನ್ನಕೊಟ್ಟರೆ ನನ್ನ ವಾಲೆಯ ಬೆಲೆಯಿಲ್ಲ, ನಾ ಕೊಂಡ ಹತ್ತೋದು ಲೇಸು, ನಾನು ಒಡಗಿಚ್ಚು ಹತ್ತುವುದೇ ಲೇಸು' ಎಂದು ಪ್ರತ್ಯುತ್ತರ ಕೊಟ್ಟು ಕೊಂಡಕ್ಕೆ ಹಾರುವಳು. ಆಕೆ ಕೊಂಡಕ್ಕೆ ಹಾರಿದ ನಂತರದ ಸನ್ನಿವೇಶವನ್ನು ಕಂಡು:

"ಹೆಣ್ಣೀಗೆ ಮಣ್ಣು ಬಿದ್ದೊ ಕಣ್ಣಿಗೆ ಸತ್ತೆ ಬಿದ್ದೊ
ಸಣ್ಣ ಸೀರೆಮ್ಯಾಲೆ ಕಿಡಿಬಿದ್ದೊ । ನಾಗವ್ವನ
ಹೆಣೆಗಂಟು ನಲುಗಿ ಉರಿದ್ಹೋದೊ"[೪೪]

ಎಂದು ಹೆಣ್ಣಿನ ಬಾಳು ಮಣ್ಣಿನ ಪಾಲಾಯ್ತು. ಮುತ್ತಿನಂತಹ ಕಣ್ಣಿಗೆ ಸತ್ತೆ ಬಿದ್ದು ಕುರುಡಾಯಿತು. ಇಲ್ಲಿ ಸತ್ತೆ ಎಂದರೆ ಪೊದೆ ಎಂದು ಒಂದರ್ಥವಾದರೆ ಇನ್ನೊಂದು ಅಧಿಕಾರ ಬಲ ಅಥವಾ ಪ್ರಭುತ್ವ ಎಂದೂ ಆಗುತ್ತದೆ. ಅಧಿಕಾರ ಬಲವಿರುವವರ ಕೈಯಲ್ಲಿ ಮಹಿಳೆ ಅಸಹಾಯಕಳಾಗಿ ಹೀಯಾಳಿಸಲ್ಪಡುತ್ತಾಳೆ. ಸೀರೆಯ ಮೇಲೆ ಹೂ ಚೆಲ್ಲುವ ಬದಲು ಕಿಡಿ ಹತ್ತಿತು. ಈ ಕಿಡಿ ಇಡೀ ದೇಹಕ್ಕೆ ತಾಗಿ ನಲುಗಿ ಉರಿದು ಹೋಯಿತು. ನಾಗವ್ವಳ ಜೀವ(ದೇಹ)ವು ಕೂಡ ಕಿಚ್ಚಿನಲ್ಲಿ ಉರಿದು ಹೋಯಿತು ಎಂದು ಹೃದಯಾಘಾತ

೪೩. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೫

೪೪. ಅದೇ, ಪು.೧೬

ಸನ್ನಿವೇಶವನ್ನು ತಿಳಿಸಿದ್ದಾರೆ. 'ಸತ್ತು ಬೇರೆ ಲೋಕದಲ್ಲಿರುವ ಗಂಡನೊಡನೆ ಸೇರಲಿ' ಎಂಬ ನಂಬಿಕೆಯಿಂದ ಆಚರಣೆ ಬೆಳೆದುಬಂದಂತಿದೆ. ಮೃತದೇಹ ಮಣ್ಣಿನಲ್ಲಿಯೇ ಲೀನವಾಗುತ್ತದೆ ಎಂಬ ಸತ್ಯವನ್ನು ಅರಿಯದ ಮುಗ್ದತೆ ಇಲ್ಲಿ ಕಂಡುಬರುತ್ತದೆ. ಚಿಕ್ಕದಾದರೂ ಬಹಳ ಮುಖ್ಯವಾದ ಗೀತೆ ಇದು. ಏಕೆಂದರೆ ನಂಬಿಕೆಯೆಂಬ ಬುನಾದಿ ಹಾಕಿ ಅದರ ಮೂಲಕ ಆಚರಣೆಗಳನ್ನು ಚಾಲ್ತಿ ತಂದು ಆಚರಣೆಗಳ ಹೆಸರಲ್ಲಿ ಸತ್ತ ಗಂಡ ಪರಲೋಕದಲ್ಲಿರುವನು. ಅವನನ್ನು ಸೇರುವಳೆಂಬ ಕಲ್ಪನೆಯನ್ನು ಮಹಿಳೆಯರ ಮೇಲೆ ಬಿತ್ತರಿಸಲಾಗಿತ್ತು. ಅದೇ ಆಚರಣೆಗಳನ್ನು ಜನಪದರು ಕಥೆಯಾದರಿಸಿ ಹಾಡಿನ ರೂಪದಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಮೌಢ್ಯ ಆಚರಣೆಗಳು ಅಂದಿನ ಸಮಾಜದಲ್ಲಿ ಎಷ್ಟು ಮನ್ನಣೆಯನ್ನು ಗಳಿಸಿದ್ದವು ಎಂಬುದನ್ನು ಕೂಡ ಇಲ್ಲಿ ಕಾಣುತ್ತೇವೆ.

ವೀರ ತಿಮ್ಮವ್ವ ಕಥನಗೀತೆಯಲ್ಲಿ ಆಚರಣೆ :

ವೀರತಿಮ್ಮವ್ವ ಕಥನಗೀತೆಯು ಹಿರಿಯೂರು ತಾಲೂಕಿನ ಹಿರಿಯಟ್ಟಿ ಮದನಕುಂಟೆ ಮತ್ತು ಯರಬಳ್ಳಿ ಗ್ರಾಮಗಳ ಕಡೆ ಹೆಚ್ಚು ಪ್ರಚಲಿತವಿದೆ. ಈ ಹಾಡನ್ನು ಹಾಡಿದವರು ಮದನಕುಂಟೆ ಗ್ರಾಮದ ಶಾಂತಮ್ಮ ಮತ್ತು ಕರಿಯಮ್ಮ ಈರ್ವರೂ ಗೊಲ್ಲ ಮತಸ್ಥರು.

ಹರ್ತಿಕೋಟೆ ತಿಮ್ಮವ್ವಳ ಊರು, ಹಿರಿಯಟ್ಟಿ ಆಕೆಯ ಗಂಡನಾದ ನಾಗಣ್ಣನ ಊರು. ಹಿರಿಯಟ್ಟಿಯ ಹಾಲು ಮಾರುವ ಜಂಪವ್ವಳ ಮಗ ಈ ನಾಗಣ್ಣ. ಈತನು ದನ, ಎಮ್ಮೆ, ಆಡು ಕಾಯುವ ಕಾಯಕದಲ್ಲಿರುತ್ತಾನೆ. ದನಗಳ ಮೇಲೆ ಎರಗಿ ಬರುವ ಹುಲಿಯನ್ನು ಎತ್ತಿ ಕುಕ್ಕುವಷ್ಟು ವೀರ, ಪರಾಕ್ರಮಿ. ಈತನನ್ನು ಮದುವೆಯಾಗಲು ಅನೇಕ ಸ್ತ್ರೀಯರು ಬಯಸಿದರೂ ಕೂಡಾ ನಾಗಣ್ಣ ತಿಮ್ಮವ್ವಳನ್ನು ಬಯಸಿ ಸಂಪ್ರದಾಯಯುಕ್ತವಾಗಿ ಮದುವೆಯಾದ. ಕೆಲವೇ ವರ್ಷಗಳಲ್ಲಿ ನಾಗಣ್ಣ, ಸಾಣೆ ಕೆರೆಯ ಬಳಿ ಆದ ಯುದ್ಧದಲ್ಲಿ ಭಾಗವಹಿಸಿ ತೀರಿ ಹೋದ.

ಈ ಕಥನಗೀತೆಯು ನಾಗಣ್ಣನ ವೀರತ್ವ(ಶೌರ್ಯ)ದ ಬಗೆಗೆ, ಯುದ್ಧದ ವರ್ಣನೆ, ಮದುವೆ ಸಿದ್ಧತೆ, ಅಪಶಕುನಗಳು, ನಾಗಣ್ಣ ಮಡಿದ ಸುದ್ದಿ, ತಿಮ್ಮವ್ವ ಕೊಂಡ ಹೋಗುವ ಸಂದರ್ಭವನ್ನು ಚಿತ್ರಿಸುತ್ತದೆ. ವೀರ ತಿಮ್ಮವ್ವ ತನ್ನ ಮಕ್ಕಳನ್ನು, ಬಂಧು-ಬಳಗ, ತಂದೆ-ತಾಯಂದಿರನ್ನು ಬಿಟ್ಟು ಕೊಂಡವೇರುವ ಮುನ್ನ ನೆರವೇರಿಸುವ ಶಾಸ್ತ್ರ ಸಂಪ್ರದಾಯಗಳೆಂದರೆ:

"ಅಳ್ಳಿಗೆಳತೇರು ಕೊಳ್ಳೀರಿ ನಿಮ್ಮಿಳ್ಯಾವ
ಒಳ್ಳೊಳ್ಳೆ ಸೌದೆ ಬರಬೇಕು । ಬೈಗಿನ ಕಡೆಯ

ಉಳ್ಳಿಗುಗ್ರಿಯ ತಿನಬೇಕು

ಅಟ್ಟಿಯ ಗೆಳತೇರು ಕೊಟ್ಟೇನು ನಿಮಗೀಳ್ಯಾವ

ಗಟ್ಟ್ಯನ್ನ ಸೌದೆ ಬರಿಬೇಕು ! ಬೈಗಿನ ಕಡೆಯ

ರೊಟ್ಟಿ ಗುಗ್ರಿಯ ತಿನಬೇಕು"[೪೫]

ಸರ್ವಾಲಂಕೃತಳಾಗಿ ಅನುಗಮನಕ್ಕೆ ಸಿದ್ಧವಾಗುತ್ತಿದ್ದ ಸತಿ ಮೊದಲು ನಾಲ್ಕೈದು ದಿನಗಳಲ್ಲಿ ಊರಿನ ಬೀದಿಗಳಲ್ಲಿ ಮೆರವಣಿಗೆ ಹೋಗುವ ಸಂದರ್ಭದಲ್ಲಿ ಮನೆ ಮನೆಗೆ ಹೋಗಿ ವೀಳ್ಯ ಹಂಚಿ, ಗಟ್ಟಿ ಕಟ್ಟಿಗೆಯನ್ನು ತೆಗೆದುಕೊಂಡು ಕೊಂಡದ ಬಳಿ ಬನ್ನಿಯೆಂದು ಹೇಳಿ ಬರುತ್ತಿದ್ದಳು. ಬೆಳಗಿನ ಜಾವದಲ್ಲಿ ರೊಟ್ಟಿ-ಹುರಳಿ-ಗುಗ್ರಿ ತಿನ್ನುವ ಆಚರಣೆಯನ್ನು ಕಾಣುತ್ತೇವೆ.

ಕೊಂಡಕ್ಕೋಗುವಾಗ ತಿಮ್ಮವ್ವಳ ಮನೆಯವರು ಆಕೆಗೆ ಸೀರೆ ತರುವ ಪದ್ಧತಿ ಇತ್ತು ಎಂಬುದು ಈ ಹೇಳಿಕೆಯ ಮೂಲಕ ಅರ್ಥವಾಗುತ್ತದೆ.

"ಕುಣಿವಾ ಕಂಬಳೆಂಚು ಮೆರೆವಾ ಪಟ್ಟೆ ಸೀರೆ

ಕೊಂಡಕ್ಕೋಗಲುವಾಗ ಚಂದ್ರಾಗಾವಿ ಬಣ್ಣ ತಂದರು

ತಿಮ್ಮವ್ವನ ತೌರವರು"[೪೬]

ಕುರಿಯ ತುಪ್ಪಟದಿಂದ ಮಾಡಿದ ಕಂಬಳಿಯ ಅಂಚು ಇರುವ ಹಾಗೆ ಕೆಂಪು ಬಣ್ಣದ ರೇಶ್ಮೆ ಸೀರೆಗೆ ಅಂಚನ್ನು ಹೊಂದಿರುವ ಸೀರೆಯನ್ನು ತೌರಿನವರು ಕೊಂಡಕ್ಕೇರುವಾಗ ತರುವಂತಹ ಪದ್ಧತಿ ಇತ್ತು. ಆದಕಾರಣ ತಿಮ್ಮವ್ವಳ ತವರಿನವರು ಚಂದ್ರಗಾವಿ ಸೀರೆಯನ್ನು ತಂದರು. ಆಳವಾದ ಕೊಂಡವನ್ನು, ಒಂಬತ್ತು ಅಂಗುಲಗಳ ಅಳತೆಯಷ್ಟು, ಬೆಟ್ಟದಂತಾ ಕೊಂಡಕ್ಕೆ ಬೆಳ್ಳಿನೋಟದಂತಹ ಕಲ್ಲುಗಳನ್ನು ಮಾವ ಕಾಟಯ್ಯಾ ಕಡಿಸಿದನು. ತಿಮ್ಮವ್ವ ಕೊಂಡಕ್ಕೋಗುವಾಗ ಸಂದನೋರು ಚಂದ್ರಕುಲದವರು ಮಲಗಿರಲಿಲ್ಲ. ಏಕೆಂದರೆ ಕೊಂಡಕ್ಕೆ ಕಳುಹಿಸುವ ಆಚರಣೆಗಳ ಯೋಜನೆಯಲ್ಲಿಯೇ ನಿರತರಾಗಿದ್ದರು.

---

೪೫. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೩೪

೪೬. ಅದೇ, ಪು.೩೪

ಇವೆಲ್ಲ ಸತಿಸಹಗಮನವಾಗುವ ಸಂದರ್ಭದಲ್ಲಿ ಮಾಡುತ್ತಿದ್ದ ಆಚರಣೆಗಳಾಗಿವೆ. ಕಿಚ್ಚು ಮಾಡುವವರು ಹೆಚ್ಚಾಗಿ ಮಾಡಿರಿ 'ಒಡಲ ಕಿಚ್ಚಿಗೆ ಈ ಕಿಚ್ಚು ಕಿರಿಯದು' ಎಂದು ಅತ್ತಿಮರ, ಆಲದಮರವನ್ನು ಕಡಿಸುವಳು. ಇಲ್ಲಿ ತಿಮ್ಮವ್ವ ಕೊಂಡಕ್ಕೆ ಹೋಗಬೇಕಾಗಿರುವಂತಹ ಸಂದರ್ಭ ಆಕೆಯ ಒಡಲಿಗೆ ಅರ್ಥಾತ್ ಆಂತರಿಕ ದೇಹಕ್ಕೆ ಕಿಚ್ಚು ಹಚ್ಚಿದ ಹಾಗೆ ಆಗಿದೆ. ಆದ ಕಾರಣ ಆಕೆಯ ಒಡಲೆಂಬ ಕಿಚ್ಚು ಆಗಲೇ ಸುಟ್ಟು ಹೋಗಿದೆ. ಇನ್ನೂ ಬಾಹ್ಯ ದೇಹವನ್ನು ಸುಟ್ಟುಕೊಳ್ಳಲು ಅಂಜುವುದಿಲ್ಲ ಎಂಬ ನಿಲುವು ಕಂಡುಬರುತ್ತದೆ. ಹಾಗಾಗಿ ಧೈರ್ಯದಿಂದ ಕಿಚ್ಚನ್ನು ಏರುತ್ತಾಳೆ. ತದನಂತರ ಕೊಂಡದ ಸುತ್ತ ಒಂದು ನಿಂಬೆಯ ಮರವನ್ನು ನೆಡುತ್ತಾರೆ. ಮಾಸ್ತಿ ಕಟ್ಟೆಯ ಕಲ್ಲನ್ನು ಹತ್ತಿ ತಿಮ್ಮವ್ವ ಕೆಡಲಿಲ್ಲ. ಕಲಿಯಾಗಿ ಅರ್ತಿಯ ದಿಕ್ಕೆಲ್ಲವನ್ನು ಮೆಚ್ಚಿಸಿದಳು ಎಂದು ಕಥನಗೀತೆ ಅರಹುತ್ತದೆ.

ಪ್ರಾಚೀನ ಪೀಳಿಗೆ ಇಹಲೋಕದ ಹಾಗೆ ಪರಲೋಕ ಇದೆ ಎಂದು ನಂಬಿದ್ದರು. ತಾನು ಮಡಿದ ನಂತರ ಅಥವಾ ಸತ್ತಮೇಲೆ ತನ್ನ ಪ್ರೇಯಸಿಯು ಇನ್ನೊಬ್ಬನ ವಶವಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೇ ಇದಕ್ಕೆ ಕಾರಣ. ಮಹಿಳಾ ಲೋಕದ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಅಂದು ಪುರುಷ ಪ್ರಧಾನ ವ್ಯವಸ್ಥೆ ಇರುವ ಕಾರಣ ಇದು ನಿಜವಿರಬಹುದೆನಿಸುತ್ತದೆ. ಪತಿಯ ಜೊತೆಯಲ್ಲಿ ಅವನ ವಿಧವೆಯನ್ನು ಸುಡುವ ಪದ್ಧತಿಯು ಪ್ರಾಚೀನ ಭಾರತದಲ್ಲಿ ಅಷ್ಟೇ ಅಲ್ಲದೆ ವಿದೇಶಗಳಲ್ಲಿಯೂ ಇದ್ದಿತು. **ಉದಾ:** ಚೀನಾದಲ್ಲಿ ವಿಧವೆಯು ಮತ್ತೆ ವಿವಾಹವಾಗುವುದು ಪಾಪವೆಂದು ನಂಬಿದ್ದರು. ಗಂಡನ ಸಾವಿನ ನಂತರ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದವರ ಗೌರವಾರ್ಥವಾಗಿ ಚಕ್ರವರ್ತಿಯು ತೋರಣ (ಹೆಬ್ಬಾಗಿಲು) ಗಳನ್ನು ಕಟ್ಟಿಸುತ್ತಿದ್ದನು. ಸಮಾಜ ಗಂಡ ಸತ್ತ ಹೆಣ್ಣುಮಕ್ಕಳನ್ನು ಕಾಣುವ ರೀತಿ, ಅನುಸರಿಸುವ ಆಚರಣೆ, ವಿಧವೆಯನ್ನು ಪಾಪಿಯೆಂದು ಕರೆಯುವ ಪರಿಯಿಂದಾಗಿ ಎಲ್ಲದಕ್ಕೂ ಮಹಿಳೆಯರನ್ನೇ ಹೊಣೆಗಾರರನ್ನಾಗಿ ಮಾಡುತ್ತಿರುವುದು ತಿಳಿದುಬರುತ್ತದೆ. ಹುಟ್ಟು-ಸಾವು ಮಾನವನಿಗೆ ಖಚಿತವೆಂದ ಮೇಲೆ ಈ ಎಲ್ಲಾ ಆಚರಣೆ, ವ್ಯವಸ್ಥೆಗಳನ್ನು ಮಾಡಿ ಹೋದ ಮಾನವರಿಗೆ ಚಿರಂಜೀವಿ ಸ್ಥಾನ ದೊರಕಿ ಇಂದು ಬದುಕಿ ಉಳಿದಿಲ್ಲ. ಹಾಗಾದರೆ ಒಂದು ಜೀವಕ್ಕೆ ಆಚರಣೆಯ ನೊಗವನ್ನು ಹೊರಿಸಿ ತನ್ನದಲ್ಲದ ತಪ್ಪಿಗೆ ಗುರಿ ಮಾಡಿ ನೋಯಿಸಿದರೆ ಸಂತೋಷ ಸಿಗುವುದಿಲ್ಲ. ಒಂದು ಕುಟುಂಬವನ್ನು ಬಿಟ್ಟು ಇನ್ನೊಂದು ಕುಟುಂಬಕ್ಕೆ ಬಂದು ಸದಾ ಅದರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಮಹಿಳೆಯರಿಗೆ ಸಿಗಬೇಕಾದದ್ದು ಪ್ರೀತಿ, ವಾತ್ಸಲ್ಯ, ಮಮತೆ, ಕರುಣೆ, ನಂಬಿಕೆ ಇವೆಲ್ಲಕ್ಕಿಂತ ಮುಖ್ಯವಾಗಿ ಸಮಾನತಾ ಮನೋಭಾವ ದೊರಕಬೇಕು. ಅಂದಾಗ ಮಾತ್ರ ಕುಟುಂಬಕ್ಕೆ, ಮನಸ್ಸಿಗೆ ಸಂತೋಷ ಸಿಗಲು ಸಾಧ್ಯ. ಭಾರತ

ದೇಶದ ಇಂಥ ವಿಷಯಗಳ ಕುರಿತು ಮಹಿಳೆಯರ ಸ್ಥಿತಿಗತಿ ಕಂಡು ವಿದೇಶಿಯನಾದ ಅಬ್ಬೆದುಬಾಯನು ತನ್ನ ಕೃತಿಯಲ್ಲಿ ದಾಖಲಿಸಿದ್ದಾನೆ. ಇದರ ಮೂಲಕ ಭಾರತ ದೇಶದ ಜನತೆ ಅಂಧಕಾರದಲ್ಲಿ ಮುಳುಗಿದ್ದರು ಎಂಬುದು ಕಂಡುಬರುತ್ತದೆ.

"ಫ್ರಾನ್ಸಿನ ಅಬ್ಬೆದುಬಾಯನು ೧೭೯೨ ರಲ್ಲಿ ಕ್ರಿಶ್ಚಿಯನ್ ಮಿಶನರಿಯಾಗಿ ಭಾರತಕ್ಕೆ ಬಂದನು. ಪಂಚ ಭಾಷೆಯಲ್ಲಿ ಈತ 'ಭಾರತದ ಜನರ ಜೀವನ ವಿಧಾನ'ವೆಂಬ ಕೃತಿ ಬರೆದನು. ಅದರಲ್ಲಿ ವಿಧವೆಯ ಸ್ಥಿತಿಗತಿ ಹಾಗೂ ಸಹಗಮನ ಪದ್ಧತಿಯ ಬಗ್ಗೆ ವಿಸ್ತಾರವಾಗಿ ಹೇಳಿದ್ದಾನೆ. ಬೆಂಕಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದ ಸ್ತ್ರೀಯರನ್ನು ದೇವರೆಂದು ತಿಳಿಯವುದರಿಂದ ಜನರು ಎಲ್ಲ ಕಡೆಯಿಂದ ಬಂದು ಅದಕ್ಕೆ ಬಲಿಯನ್ನು ಕೊಟ್ಟು ತಮ್ಮ ರಕ್ಷಣೆಗಾಗಿ ಪ್ರಾರ್ಥಿಸುತ್ತಾರೆ."[೪೭] ಬೆಂಕಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದ ಸ್ತ್ರೀಯರನ್ನು ದೇವತೆಯೆಂದು ತಿಳಿದು ಜನರು ತಮ್ಮ ರಕ್ಷಣೆಗಾಗಿ ಆಕೆಯಲ್ಲಿ ಪ್ರಾರ್ಥಿಸುವುದೆಂದರೆ ಅರ್ಥಸಮ್ಮತವಾಗದು. ಕಾರಣ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳದ ಸ್ಥಿತಿಯಲ್ಲಿ ಆಚರಣೆಯ ಹೆಸರಲ್ಲಿ ಬಲಿಯಾದ ಆಕೆ ನಂಬಿ ಬಂದ ಜನತೆಯನ್ನು ರಕ್ಷಣೆ ಮಾಡುತ್ತಾಳೆಂದರೆ ನಂಬಲಸಾಧ್ಯ.

ವಿಧವೆಯರು ಸಹಗಮನವಾಗಲು ಜೀವನದ ಕಷ್ಟಗಳು ಅಥವಾ ಸಂದರ್ಭದ ಒತ್ತಾಯ, ಹರಕೆ, ಪ್ರಾರ್ಥನೆ, ಆಚರಣೆಗಳ ಹೆಸರಲ್ಲಿ ನಡೆಯುವ ಸಂಪ್ರದಾಯಗಳೇ ಕಾರಣ. ಸಹಗಮನಕ್ಕೊಳಗಾದವರನ್ನು ದೇವರೆಂದು ತಿಳಿದು ಪ್ರಾರ್ಥನೆ ಮಾಡುವುದು ಕಂಡುಬರುತ್ತದೆ. ವಿಧವೆಯರಿಗೆ ಇನ್ನೊಂದು ಕ್ರೂರ ಶಿಕ್ಷೆ ಎದುರಾಗುವುದೆಂದರೆ ವಿಧವೆಯಿಂದ ಸಹಗಮನ ವಾಗದೆ ಇರುವುದಕ್ಕೆ ಕೆಲವೇ ಸೂಚನೆಗಳು ಸಿಕ್ಕರೆ ಅವಳ ಬಂಧುಗಳು ಅವಳನ್ನು ಒತ್ತಾಯಪಡಿಸಿ ನಂಬಿಸಿ ಬೆಂಕಿಗೆ ಬೀಳುವಂತೆ ನಿಶ್ಚಯಿಸುತ್ತಾರೆ. ಕೆಲವು ಬಾರಿ ಅವರು ವಿಧವೆಗೆ ಮತ್ತು (ಮದ) ಬರಿಸುವ ಮದ್ದನ್ನು ಕೊಡುವ ಮಟ್ಟಕ್ಕೆ ಹೋಗುತ್ತಾರೆ. ಇಲ್ಲಿ ಕುಟುಂಬದ ಬಂಧುಗಳು ಆಕೆಯನ್ನು ಒತ್ತಾಯಪಡಿಸುವಲ್ಲಿ ತಮ್ಮ ಕುಟುಂಬಕ್ಕೆ ಆಕೆಯ ಸಾವಿನಿಂದ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಬಲವಾಗಿ ಬೇರೂರಿರುವ ಕಾರಣ ಆಕೆಯನ್ನು ಒತ್ತಾಯಪೂರ್ವಕವಾಗಿ ಅಥವಾ ಮೋಸದಿಂದ ಬಲಿ ಮಾಡುತ್ತಿದ್ದರು ಎಂಬ ಸ್ಪಷ್ಟ ಚಿತ್ರಣ ಕಂಡುಬರುತ್ತದೆ. ಮಹಿಳೆ ಸಮಾಜದಲ್ಲಿ ವಿಧವೆಯಾದ ನಂತರ ಬಾಳಬೇಕೆಂದರೆ ತಲೆ ಬೋಳಿಸುವುದು, ಬ್ರಹ್ಮಚರ್ಯ ಅನುಸರಿಸುವ ಪದ್ಧತಿ ಇತ್ತು. ಇವೆರಡೂ ಪಾಲಿಸದಿದ್ದರೆ ಚಿತೆಗೆ ಹಾರುವ ಪದ್ಧತಿ ರೂಢಿಯಲ್ಲಿರುವುದು ಪ್ರಾಚೀನ ಇತಿಹಾಸದಲ್ಲಿ ಕಂಡುಬರುತ್ತದೆ.

---

೪೭. ಮಹಾಸತಿ ಆಚರಣೆ: ಒಂದು ಅಧ್ಯಯನ : ಬಸವರಾಜ ಕಲ್ಗುಡಿ, ಪು.೧೩೬

ಸಮಾಜದಲ್ಲಿ ತಲೆ ಬೋಳಿಸಿಕೊಂಡು ಅಸ್ಪೃಶ್ಯಳಾಗಿ ಬದುಕುವುದಕ್ಕಿಂತ ಚಿತೆಗೆ ಹಾರುವುದೇ ಲೇಸೆಂದು ಪ್ರಾಯಶಃ ಭಾವಿಸುತ್ತಿದ್ದರು. ಇಲ್ಲವೇ ಕೆಲವು ಮಹಿಳಾ ಮಣಿಗಳು ಬ್ರಹ್ಮಚರ್ಯ-ವನ್ನು ಆಚರಿಸುವುದರಲ್ಲಿ ವಿಫಲರಾಗಿ ಚಿತೆಗೆ ಹಾರುತ್ತಿದ್ದರು.

"ಅಥರ್ವಣವೇದದ ಕಾಲದಲ್ಲಿ ವಿಧವೆಯು ಗಂಡನ ಶವದ ಪಕ್ಕದಲ್ಲಿ ಮಲಗಿ ಕೊಳ್ಳುತ್ತಿದ್ದಳು. ಮಲಗಿರುವ ಅವಳನ್ನು ಉಳಿದವರು ಕೆಳಗಿಳಿದು ಬಾ ಎಂದು ಕರೆದು ತನ್ನ ಮಕ್ಕಳು ಮತ್ತು ಐಶ್ವರ್ಯದೊಡನೆ ಸುಖವಾಗಿ ಅವಳು ಬಾಳಲೆಂದು ಪ್ರಾರ್ಥನೆ ಮಾಡುತ್ತಿದ್ದರು. ಬಹುಶಃ ವಿಧವೆಯನ್ನು ಅವಳ ಗಂಡನ ತಮ್ಮನಿಗೆ ಕೊಟ್ಟು ವಿವಾಹವನ್ನು ಮಾಡುತ್ತಿದ್ದರು"[೪೮](ಕ್ರಿ.ಶ.೪೫೦-೧೧೫೦). ವಿಧವೆಯನ್ನು ಸಾಂತ್ವನಿಸುವ, ಎಲ್ಲ ಕಷ್ಟ-ನೋವುಗಳನ್ನು ಸಹಿಸಿಕೊಂಡು ಮಕ್ಕಳೊಂದಿಗೆ ಕುಟುಂಬದಲ್ಲಿ ಸಂತೋಷದಿಂದ ಬಾಳುವಂತಹ ಶಕ್ತಿಯನ್ನು ಕೊಡು ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು ಎಂಬುದು ಕಂಡುಬರುತ್ತದೆ. ಏಕೆಂದರೆ ವಿಧವೆಯನ್ನು ಸಮಾಜದಲ್ಲಿ ಯಾರೂ ಮದುವೆಯಾಗಲು ಮುಂದೆ ಬರುತ್ತಿರಲಿಲ್ಲವೆಂಬುದು ಸ್ಪಷ್ಟ. ಆದ್ದರಿಂದ ಆಕೆಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನ ಸಿಗುವುದಿಲ್ಲ ಎಂಬುದು ತಿಳಿದ ವಿಷಯ. ಆದಕಾರಣ ಗಂಡನ ತಮ್ಮನಿಗೆ ಕೊಟ್ಟು ವಿವಾಹ ಮಾಡುತ್ತಿದ್ದರು ಎಂಬುದಕ್ಕಿಂತ ಗಂಡನಿಲ್ಲದೇ ಸಮಾಜದಲ್ಲಿ ಬದುಕಬೇಕಾದ ಸ್ಥಿತಿಯನ್ನು ವಿವರಿಸುತ್ತಿರುವ ಹಾಗಿದೆ. ಇದರೊಂದಿಗೆ ಸಿರಿಸಂಪತ್ತಿನ ಆಸೆಯನ್ನು ತೋರಿಸಿ ಮಕ್ಕಳನ್ನು ಸಾಕಿ-ಸಲಹಬೇಕಾದ ಜವಾಬ್ದಾರಿಯನ್ನು ಆಕೆಗೆ ಮನದಟ್ಟಾಗುವಂತೆ ತಿಳಿಸುತ್ತಿದ್ದರು.

ಮಹಿಳೆ ಸತ್ತ ಗಂಡನ ಪಕ್ಕದಲ್ಲಿ ಮಲಗಬೇಕಾದರೆ ಆಕೆ ಗಂಡನಿಲ್ಲದೇ ಸಮಾಜದಲ್ಲಿ ಎಷ್ಟೊಂದು ನಿಕೃಷ್ಟ ಬದುಕನ್ನು ಸಾಗಿಸಬೇಕಿತ್ತು ಎಂಬುದರ ಸುಳಿವು ಇದರಿಂದ ಕಂಡುಬರುತ್ತದೆ. ವಾಸ್ತವದಲ್ಲಿ ಗಂಡ-ಹೆಂಡತಿಯರ ಮಧ್ಯೆ ವ್ಯಾಮೋಹವಿದ್ದಾಗಲೂ ಸತ್ತ ಗಂಡನ ಜೊತೆ, ಹೆಂಡತಿಯ ಜೊತೆಗೆ ಹೋಗುವ ಘಟನೆಗಳನ್ನು ಕಾಣುವುದಿಲ್ಲ. ಆದ್ದರಿಂದ ಅಂತಹ ಅನಿಷ್ಟ ಆಚರಣೆಗಳು ಕೆಲವು ಮಟ್ಟಿಗೆ ದೂರ ಸರಿದಿವೆ ಅನ್ನಿಸಿದರೂ ವಿಧವೆಯಾದ ಹೆಣ್ಣು ಸಾಮಾಜಿಕ ಆಚರಣೆಗಳಿಗೆ ಬದ್ಧಳಾಗಿರುವುದಕ್ಕೆ ಇಂದಿಗೂ ಜೀವಂತ ಸಾಕ್ಷಿಗಳಿವೆ. ಕುರುಡು ಸಮಾಜದಲ್ಲಿ ವಿಧವೆಯ ಬಾಳಿನ ಸ್ಥಿತಿ-ಗತಿಯನ್ನು ಅರ್ಜುನ ಗೊಳಸಂಗಿಯವರು 'ವಿಧವೆ ಮತ್ತು ಇತರ ಏಕಾಂಕ ನಾಟಕಗಳು' ಕೃತಿಯ 'ವಿಧವೆ' ನಾಟಕದಲ್ಲಿಯ ಆಶಾಳ

---

೪೮. ಎಂ. ಚಿದಾನಂದಮೂರ್ತಿ: ಚಿದಾನಂದ ಸಮಗ್ರ ಸಂಪುಟ.೧, ಪು.೩೪೬,೩೪೭

ಪಾತ್ರದ ಮೂಲಕ ಹೆಣ್ಣಿನ ಬಾಳಲ್ಲಿಯ ಗೋಳು, ವಿಧವೆ ಊರ ಮಂದಿಯ ಮಾತಿಗೆ ಆಹಾರವಾಗುವ ಪರಿಯೊಂದಿಗೆ ಮಹಿಳೆ ಸಮಾಜದಲ್ಲಿ ಅನುಭವಿಸುತ್ತಿರುವ ವಾಸ್ತವದ ಬದುಕಿನ ಗೋಳಿನ ಕಥೆಯನ್ನು ಬಿಚ್ಚಿಟ್ಟಿದ್ದಾರೆ.

ಸಹಗಮನವಾಗುವವರೆಗೂ ಸಹಗಮನಕ್ಕೆ ಸಬಂಧಿಸದ ಭಾವಗಳು, ನಂಬಿಕೆಗಳು, ಆಚರಣೆಗಳು ಪುಷ್ಟಿಗೊಳ್ಳುತ್ತಾ ಸಾಗುತ್ತವೆ. ಇಡೀ ಸಹಗಮನದ ಆಚರಣೆ ಮದುವೆ ಕಾರ್ಯಕ್ರಮದ ಹಾಗೆ ವಿಜೃಂಭಣೆಯಿಂದ ವಧುವಿನಂತೆ ಅಲಂಕಾರಭೂಷಿತಳಾಗಿ ಕೊಂಡಕ್ಕೆ ಹೋಗುವುದನ್ನು ಕಾಣುತ್ತೇವೆ ಮತ್ತು ಸಹಗಮನವಾದ ಸತಿಯು ಊರ ಜನತೆಗೆ, ಸಮಾಜಕ್ಕೆ ದೇವರಾಗಿ ಜನರ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸುವ ದೇವತೆಯಾಗಿ ಗೋಚರಿಸಲ್ಪಡುತ್ತಾಳೆ. ಅಂತಹ ಮಹಾಸತಿ ತ್ಯಾಗಮಯಿ ಗೀತೆಯಲ್ಲಿ ಜನರ ಪರಭಾವ, ವಿರೋಧ ಭಾವದೊಂದಿಗೆ ಆಚರಣೆಗಳು ಹೇಗೆ ಜರುಗುತ್ತಿದ್ದವು ಎಂಬುದನ್ನು ಬಸವರಾಜ ಕಲ್ಗುಡಿ ಅವರ ಮಹಾಪ್ರಬಂಧವಾದ ಮಹಾಸತಿ ಅಚರಣೆ: ಒಂದು ಅಧ್ಯಯನ ಕೃತಿಯಲ್ಲಿ ಮಹಾಸತಿ ಗೀತೆಯ ಸ್ವರೂಪವನ್ನು ಹೀಗೆ ತಿಳಿಸಿದ್ದಾರೆ:

ಮಹಾಸತಿ ಗೀತೆಯ ಸ್ವರೂಪ

ಅ.ಸಂ.	ಭಾವ	ವಿರೋಧಿ ಭಾವ	ಕ್ರಿಯೆ
೧.	ಸತಿಯನ್ನು ಮದುವೆ ಮಾಡಬಹುದು ಎಂದು ಕೆಲವರ ಅಭಿಪ್ರಾಯ	ಸತಿಯನ್ನು ಮದುವೆ ಮಾಡಿ ಕೊಡಕೂಡದು ಎಂದು ಕೆಲವರ ಅಭಿಪ್ರಾಯ	ಮದುವೆ ಆಗಿಯೇ ಬಿಡುವುದು
೨.	ಬೆಟ್ಟದಾಗಿರುವ ಬ್ರಾಹ್ಮಣನು ಲಗ್ನವ ಮಾಡಮ್ಮ, ಚೆನ್ನಾಗಿ ಇರುವೂದು ಎಂದು ಶಕುನವ ಹೇಳುವುದು	ಬಾಗಿಲಿನ ಗವುಳಿ, ಹಲ್ಲಿಗಳು ಬೇಡವೆಂದು ಶಕುನ	ಮದುವೆ ನಿಶ್ಚಯವಾಗಿಯೇ ತೀರುವುದು
೩.	ಹೋರಾಟ ಮಾಡುವ ವ್ಯಕ್ತಿಗೆ ಹೆಣ್ಣು ಕೊಡಬೇಕಾದ ಅನಿವಾರ್ಯತೆ	ಇಂಥ ವ್ಯಕ್ತಿಗೆ ಹೆಣ್ಣನ್ನು ಮದುವೆ ಮಾಡಕೂಡದೆನ್ನುವ ದುಃಖತಪ್ತ ಭಾವ	ಮದುವೆ ಮತ್ತು ವೀರನ ಸಾವು
೪.	ಕೊಂಡದ ಸಿದ್ಧತೆ ಮುಂತಾದ ಕ್ರಿಯೆಗಳು ಸಹಗಮನ ಅನಿವಾರ್ಯವೆನ್ನುವರ ಭಾವಕ್ಕೆ ಪೂರಕ	ಸಹಗಮನ ಬೇಡವಾಗಿತ್ತು ಎನ್ನುವ ಬಂಧುಗಳ ಆಶಯ	(ಸಹಗಮನ)
೫.	ಇಡೀ ಸಹಗಮನದ ಆಚರಣೆಯ ಕ್ರಿಯೆ, ಕೆಂಡದೊಡನೆ ಧಾರೆ, ಮದುವೆ, ಸ್ವರ್ಗದಲ್ಲಿ ಗಂಡನೊಡನೆ ಮತ್ತೇ ಸೇರುವುದು ಎನ್ನುವ ವೈದಿಕ ನಂಬಿಕೆಯ ಭಾವವನ್ನು ಒಪ್ಪುವಂಥದ್ದು	ಮಹಾಸತಿ ದಹನವಾದ ನಂತರ ದೈವತ್ವವಾಗುವುದು. ಫಲವತ್ತುತನವನ್ನು ಕೊಡುವ ಮಾತ್ರ ದೈವತ್ವವಾಗುವುದು.	ಈ ಘಟ್ಟದಿಂದ ವಿರೋಧಿ ಭಾವವನ್ನು ಪ್ರಧಾನವಾಗಿ ಮಾಡಿಕೊಂಡ ಕ್ರಿಯೆಗಳೇ ಮುಖ್ಯ

ಈ ಸ್ವರೂಪದ ಪಟ್ಟಿಯ ಮೂಲಕ ಪರ ಹಾಗೂ ವಿರೋಧಿ ಭಾವವುಳ್ಳ ಜನತೆಯನ್ನು ಕಾಣುತ್ತೇವೆ. ಬಹುಪಾಲು ಕಥನಗೀತೆಗಳಲ್ಲಿ ಇದೇ ತರಹದ ಭಾವಗಳು ಒಡಮೂಡಿವೆ. ಇದರಿಂದ ತಿಳಿದು ಬರುವುದೇನೆಂದರೆ, ಸತಿ ಆಚರಣೆಯನ್ನು ಕೆಲವರು ಸಮ್ಮತಿಸುವರು, ಕೆಲವರು ವಿರೋಧಿಸುವರು. ಆದರೆ ವಿರೋಧಭಾವ ಕ್ರಿಯೆಯಾಗಿ ಜನರ ಮುಖೇನ ಜರುಗಿಬಿಡುವಂತಹ ಚಿತ್ರಣವನ್ನು ಚಿತ್ರಿಸುತ್ತದೆ. ನಂಬಿಕೊಂಡು ಬಂದ ಆಚರಣೆಗಳಿಗೆ ಬದ್ಧರಾಗುವ ಅನಿವಾರ್ಯತೆ ಒಂದು ಕಡೆ ಇದ್ದರೆ, ಅದನ್ನು ವಿರೋಧಿಸುವ ಭಾವಗಳು ಮತ್ತೊಂದು ಕಡೆ ನಿರೂಪಿತವಾಗುತ್ತವೆ. ಆದರೆ ಇವೆರಡರ ಮಧ್ಯದಲ್ಲಿ ನಡೆಯುವುದು ಕ್ರಿಯೆಯೇ ಆಗಿದೆ. ಎಷ್ಟೇ ಏನೇ ತಡೆಯಲು ಸೂಚನೆಗಳು ದೊರಕಿದರೂ ಮದುವೆ, ಸಾವು, ಸಹಗಮನ, ನಡೆದೇ ತೀರುವವು.

ಹೀಗೆ ಸತಿಸಹಗಮನಕ್ಕೆ ಸಂಬಂಧಿಸಿದಂತೆ ನಂಬಿಕೆಗಳು ತಾತ್ವಿಕ ನೆಲೆಗಟ್ಟಿನಲ್ಲಿ ಪುಷ್ಟಿಗೊಳ್ಳುತ್ತಾ ಹೋಗುತ್ತವೆ. ಸತ್ತ ಗಂಡನ ಜೊತೆಗೆ ಇವಳು ಬೆಂಕಿಯಲ್ಲಿ ಬೀಳುವುದರ ಮೂಲಕ ಆತನ ಜೊತೆಗೆ ಸ್ವರ್ಗವನ್ನು ಸೇರುವಳು ಎಂಬ ಅಚಲವಾದ ನಂಬಿಕೆಯೊಡನೆ ಆಚರಣೆಯುಕ್ತವಾಗಿ ಪದ್ಧತಿ ಜರುಗುವುದು. ಬಹುಪಾಲು ಮಾಸ್ತಿಕಲ್ಲುಗಳಲ್ಲಿಯೂ ಕೂಡ ಈ ಧೋರಣೆಯೇ ಅಭಿವ್ಯಕ್ತವಾದುದನ್ನು ಕಾಣುತ್ತೇವೆ. ಮಹಿಳೆ ದೈವತ್ವದ ಸ್ವರೂಪವೆಂದು ಕೊಂಡಾಡುವುದು, ಆಚರಿಸುವುದು ಇವುಗಳಿಂದ ತಿಳಿದುಕೊಳ್ಳಬಹುದ

ತಾಡಿನಾಗಮ್ಮ ಕಥನಗೀತೆಯಲ್ಲಿ ಆಚರಣೆ :

ನಾಗಮ್ಮ ಎಲಿಯೋರ ಕುಲದಲ್ಲಿ ಹುಟ್ಟಿದವಳು. ಬಣ್ಣ ಉಡುವುದನ್ನು ಅರಿಯದ ವಯಸ್ಸು ನಾಗಮ್ಮಳದು. ಇಂಥ ಸ್ಥಿತಿಯಲ್ಲಿ ತಾಡಿ ವಡ್ಡಗೆರೆಯ ಸಿರಿವಂತ ಗೌಡರು ವಡವೆ ವಸ್ತುಗಳೊಡನೆ ಗಾಡಿ ಹೂಡಿಕೊಂಡು ನಾಗಮ್ಮಳನ್ನು ಕೇಳಲು ಬಂದರು. ಅವರು ಸಿರಿವಂತರಿರುವ ಕಾರಣ ನಾಗಣ್ಣನಿಗೆ ಮಗಳನ್ನು ಕೊಡಲು ನಿರ್ಧರಿಸಿದರು. ಕೊನೆಗೂ ಅಪಶಕುನಗಳ ಮಧ್ಯೆ ಮದುವೆ ನೆರವೇರಿತು. ಎಲಿಯೋರ ಕುಲದವಳು, ಬಸಳೆನೋರ ಕುಲದವಳಾಗಿ ವಡ್ಡಗೆರೆಗೆ ಸೊಸೆಯಾಗಿ ಜೀವನ ನಡೆಸಲು ಬಂದಳು.

ನಾಗಣ್ಣ ತನ್ನ ಕಾಯಕದಿಂದ ಕೈಯಲ್ಲಿ ಚಿಪ್ಪಗೊಡಲಿ ಹಿಡಿದು ಕಾಡಿಗೆ ಹೊರಟು ಮುಂದೆ ಅಲ್ಲಿಂದ ದಂಡು ಸೇರಿ ದಳವಾಯಿ ಆದ. ಇತ್ತ ನಾಗಣ್ಣನ ತಂದೆ ಈರಗ್ಯಾತರಾಯ ಹರಕೆ ಹೊತ್ತಂತೆ ಮನೆ ದೇವರಿಗೆ ಕಂಚಿನ ಘಂಟೆಯನ್ನು ಮಾಡಿಸಿದ. ಕಂಚಗಾರ ಲೋಹವನ್ನು ತೆಗೆದಿಟ್ಟುಕೊಂಡಿದ್ದರಿಂದ ಇವರಿಬ್ಬರಿಗೂ ಮನಸ್ತಾಪದ ಕದನ ಏರ್ಪಟ್ಟಿತು.

ಕದನದಲ್ಲಿ ಕಂಚುಗಾರನಿಗೆ ಪೆಟ್ಟಾಯಿತು. ಇದೇ ಸಂದರ್ಭದಲ್ಲಿ ನಾಗಣ್ಣ ಕಾರಣಾಂತರಗಳಿಂದ ದಂಡಿನಲ್ಲಿ ಮಡಿದನು. ಈ ಸುದ್ದಿಯನ್ನು ಜೂಲಿನಾಯಿಯ ಮುಖಾಂತರ ತಿಳಿದುಕೊಂಡು ತನ್ನ ಗಂಡನ ಜೊತೆಯಲ್ಲಿ ಸ್ವರ್ಗ ಸೇರಬೇಕೆಂದು ತನ್ನ ಸಂಬಂಧಿಕರಿಗೆಲ್ಲಾ 'ಹೊಂಡಕ್ಕೆ ಕಲ್ಲು ಕಡಿಯಿರಿ' ಎಂದು ಕೇಳಿಕೊಳ್ಳುವಳು. ತಾನೇ ಸ್ವತಃ ಆಚರಣಾತ್ಮಕವಾಗಿ ಕೊಂಡ ಹೋಗುವ ಉದ್ದೇಶವನ್ನು ಸಂಬಂಧಿಕರಿಗೆಲ್ಲ ತಿಳಿಸುವುದರಿಂದ ನಮಗೆ ತಿಳಿಯುವುದೇನೆಂದರೆ, ನಿದ್ರೆಯಷ್ಟೇ ಅನಿವಾರ್ಯ ಸಾವು ಹೇಗೋ ಹಾಗೆಯೇ ಆಚರಣೆಗಳು ಮಾನವನಿಗೆ ಅನಿವಾರ್ಯವಾಗಿದ್ದವು ಎಂಬ ಸತ್ಯ ಅನಾವರಣಗೊಳ್ಳುತ್ತದೆ. ಇದಕ್ಕೆಲ್ಲ ಕಾರಣ ಆಚರಣೆ-ಗಳನ್ನು ಜೀವನದ ಮೌಲ್ಯಗಳೆಂದು ನಂಬಿಕೊಂಡು ಸಮಾಜ ವೈಜ್ಞಾನಿಕತೆಯಿಂದ ದೂರ ಉಳಿದಿದ್ದರು.

ತಂದೆ-ತಾಯಿ, ಬಂಧು-ಬಳಗದವೆಲ್ಲರೂ ನಾಗಮ್ಮ ಚಿಕ್ಕವಳಿರುವ ಕಾರಣ ಹಾಲು ಅನ್ನ ಉಂಡು ಆಡುವ ಮಕ್ಕಳಲ್ಲಿ ಇರು ರಾಜ್ಯವ ಕೊಡುವೆವು. ಕೊಂಡಕ್ಕೆ ಹೋಗಬೇಡೆಂದು ಗೋಗರೆದರೂ ನಾಗವ್ವ ಕೇಳದೆ ಹೀಗೆ ನುಡಿದಳು:

"ಕಿಚ್ಚು ಕೊಡದಿದ್ದಾರೆ ಕಿತ್ತುಕಂಬೆನು ನಾಲಿಗೆ
ಪಚ್ಚೆದ ಕಲ್ಯಾಣಿ ಪ್ರಜೆಯಾಣೆ । ಬಸಳೇನೋರ
ತೊಟ್ಟಲಾಗಾಡೋ ಮಗನಾಣೆ ।"[೪೯]

ಎಂದು ತಾನೇ ಸ್ವತಃ ಕಿಚ್ಚಿಗೆ ಹೋಗಲು ಮುಂದಾಗಿ ಕೊಡದಿದ್ದರೆ ನನ್ನ ನಾಲಿಗೆಯನ್ನು ಕಿತ್ತುಕೊಳ್ಳುತ್ತೇನೆ. ತನ್ನ ನುಡಿಯು ಸತ್ಯವೆಂದು ಜನರ ಮೇಲೆ, ತೊಟ್ಟಿಲಲ್ಲಿ ಆಡುವ ಮಗನ ಮೇಲೆ ಆಣೆಯಿಟ್ಟು ಹೇಳುವಳು. ಬಳಗದವರಿಗೆಲ್ಲರಿಗೂ ಅಡಿಗೆ ಮಾಡಿ ಬಡಿಸಿದಳು. ದೊಡ್ಡ ಸಂತರ್ಪಣೆಯೇ ವಡ್ಡಗೇರೆಯಲ್ಲಿ ನಡೆಯಿತು. ವಧುವಿನಂತೆ ಸಿಂಗಾರ ಮಾಡಿಕೊಂಡು ಕೊಂಡದ ಸುತ್ತ ಕಟ್ಟಿಸಿದ್ದ ತೆರೆಯನ್ನು ತೆಗೆಸಿ ಕಿಚ್ಚಿಗಂಜುವಂತಹವಳಲ್ಲ, ದಿಡ್ಡಿಬಾಗಿಲನ್ನು ತೆಗಿಸಯ್ಯ ಈರಗ್ಯಾತರಾಯ ಎಂದು ದಿಟ್ಟತನದಿಂದ ಹೇಳುತ್ತಾಳೆ.

---

೪೯. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೭೧

ಕೊಂಡಕ್ಕೋಗುವಾಗ ತವರಿನವರು ತರುವ ಸೀರೆ :

ಕುಣಿವಾಗ ಕುಚ್ಚೀನ ಸೀರೆ, ಮೆರಿವಾಗಂಚಿನ ಸೀರೆ, ಕೊಂಡಕ್ಕೆ ಹೋಗುವಾಗ ಚಂದ್ರಗಾವಿನ ಸೀರೆಯನ್ನು ತರುವ ಸಂಪ್ರದಾಯವಿತ್ತು. ಆದಕಾರಣ ತವರಿನವರು ಕೊಂಡಕ್ಕೆ ಹೋಗುವ ಆಚರಣೆಯಲ್ಲಿ ಚಂದ್ರಗಾಯಿ ಸೀರೆಯನ್ನು ನಾಗಮ್ಮಳಿಗಾಗಿ ತಂದರು.

ಕೊಂಡಕ್ಕೋಗುವ ಮುನ್ನ ನಾಗವ್ವಳು ಮಾಡಿದ ವಿಧಿ–ವಿಧಾನ :

ಕೊಂಡಕ್ಕೆ ಹೋಗುವ ಮುನ್ನ ಬಾಹ್ಯವಾಗಿ ನಾಗಮ್ಮ ಬಂಧು–ಬಳಗಕ್ಕೆಲ್ಲ ಧೈರ್ಯ ನೀಡುತ್ತಾ ಮನದಲ್ಲೇ ಕೊರಗುತ್ತಾಳೆ.

- ತಾಳಿಯ ಸರ ಹರಿದು ತಾಯಿಯ ಕೈಗೆ ಕೊಟ್ಟು, ತಾಯಮ್ಮಳಿಗೆ ಅಳಬೇಡವೆಂದು ಧೈರ್ಯ ಹೇಳಿದಳು.

- ಮುತ್ತಿನ ಸರ ಹರಿದು ಅತ್ತೆಯ ಕೈಗೆ ಕೊಟ್ಟು, ಆಕೆಗೆ ಧೈರ್ಯ ಹೇಳಿದಳು. ಇಷ್ಟೆಲ್ಲಾ ಧೈರ್ಯವನ್ನು ನಾಗವ್ವ ತೆಗೆದುಕೊಂಡರೂ ಕೂಡ ಮನದಾಳದ ನೋವು ಈ ಕೆಳಗಿನಂತೆ ವ್ಯಕ್ತವಾಗುತ್ತದೆ.

> "ಅಂಬಾರದುದ್ದಾಕ ಉರಿಯೆದ್ದೇಳುತಾವೆ
> ನಾನೆಂಗೋಗಾಲೋ ಸಿವಸಿವನೆ । ಏ ಸಿವನೇ
> ಗಂಡಾನ ಪ್ರಾಣ ತಿರುವಯಾ"[೫೦]

ಧಗಧಗ ಉರಿಯುವ ಬೆಂಕಿಯನ್ನು, ಉರಿಯನ್ನು ಕಂಡು ಗಂಡನ ಪ್ರಾಣ ಮರಳಿ ಕಳಿಸಿಕೊಟ್ಟರೇ ತಾನು ಈ ಕೊಂಡಕ್ಕೋಗುವುದರಿಂದ ತಪ್ಪಿಸಿಕೊಳ್ಳಬಹುದೆಂದು ಶಿವನಲ್ಲಿ ಮೊರೆಯಿಡುತ್ತಾಳೆ. ಯಾರೇ ಆಗಲಿ ಉರಿಯುವ ಬೆಂಕಿಯನ್ನು ಕಂಡರೆ, ಹರಿಯುವ ಜಲವನ್ನು ಕಂಡರೆ ದೂರ ಸರಿದು ನಿಲ್ಲುತ್ತಾರೆ. ಅಂತಹದರಲ್ಲಿ ನಾಗವ್ವಳ ಒಳಗುದಿ ಮಾನವ ಸಹಜ ಗುಣವಾಗಿದೆ. ಆದರೆ ಅದನ್ನು ತೋರಿಸಿಕೊಳ್ಳದೇ ಕೊಂಡಕ್ಕೆ ಹೋಗಿ ಜನರ ಕಣ್ಣಿಗೆ ದೇವರಾಗಿ ಜನ್ಮ ತಾಳುತ್ತಾಳೆ. ಒಂದು ಕಡೆ ಆಕೆಯ ಧೈರ್ಯ ಮೆಚ್ಚುವಂತೆ ಕಂಡರೆ ಇನ್ನೊಂದೆಡೆ ಸಮಾಜದ ಆಚರಣೆಗೆ ಪ್ರತಿಭಟಿಸಲಾರದೆ ನಿಸ್ಸಹಾಯಕಳಾಗಿ ತನ್ನ ಪ್ರಾಣವನ್ನು ತ್ಯಾಗ ಮಾಡಿದಂತಹ ಅಮಾಯಕ ಮಹಿಳೆ ತಾಡಿನಾಗಮ್ಮ. ಆಕೆ ತನ್ನ ಗಂಡನ ಪ್ರಾಣ ಮರಳಿ ಬರಬಾರದೇ ಎಂದು ಗೋಳಿಡುವಾಗಲೇ ಅಲ್ಲಿ ನೆರೆದ ಜನತೆ ಹೀಗೆ ಹೇಳುತ್ತದೆ:

---

೫೦. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೭೭.

"ತಿರುಗೇನೆ ಕೊಡುವಾಗ ತಿರುಪತಿ ಅಲ್ಲಮ್ಮ
ವೊಂಡದಾಗವನೆ ನಿಮ್ಮ ಪುರುಸ । ನಾಗಮ್ಮ
ನೋಡಿಕೊಳ್ಳೆ ನಿಮ್ಮ ಪುರಸಾನ
ತಿರುಗೇನೆ ಕೊಡುವಾಕ ತಿರುಪತಿ ಅಲ್ಲಮ್ಮ
ವಾಮದಾಗವನೆ ನಿಮ ಪುರುಷ । ನಾಗಮ್ಮ
ನೋಡಿಕೊಳ್ಳೇ ನಿಮ್ಮ ಪುರುಸಾನ"[೫೧]

ಎಂದು ಮೌಢ್ಯಾಚರಣೆಯ ಮೂಲಕ ನಾಗಮ್ಮಳಿಗೆ ತನ್ನ ಗಂಡನು ಹೊಂಡದಲ್ಲಿ ಇರುವವನು, ವಾಮದಲ್ಲಿರುವನು ಎಂದು ಸ್ವರ್ಗಕ್ಕೋಗುವೆಯೆಂದು ಸಮಾಜ ಆಕೆಯನ್ನು ನಂಬಿಸಿ ಹೊಂಡಕ್ಕೆ ಕರೆದೊಯ್ಯುತ್ತಿದ್ದರೆಂದು ತಿಳಿದುಬರುತ್ತದೆ. ಕುಟುಂಬದವರು, ಸಂಬಂಧಿಕರು ಕೊಂಡಕ್ಕೆ ಹೋಗುವುದನ್ನು ನಿರಾಕರಿಸಿದರೂ ಸಮಾಜ ಮಾತ್ರ ಗಂಡನಾದವನು ಹೊಂಡದಲ್ಲಿರುವನು, ನಿನ್ನ ಕೇಡಿನಲ್ಲಿರುವನೆಂದು ನಂಬಿಸುತ್ತಿರುವುದನ್ನು ಕಾಣುತ್ತೇವೆ. ಜೊತೆಗೆ ಕಥನಗೀತೆಯಲ್ಲಿ ಜಯಮಂಗಳಾ ನಿತ್ಯಶುಭಮಂಗಳಾ ಎಂದು ಹೇಳುತ್ತಾ ಹೊಂಡದ ಸುತ್ತ ನಿಂಬೆಯ ಗಿಡವನ್ನು ಹಚ್ಚುತ್ತಾರೆ. ಕಾರಣ ಆಕೆಯ ಹಾಗೂ ಆಕೆಯ ಗಂಡನ ಸಂರಕ್ಷಣೆಗೆ ಎನಿಸುತ್ತದೆ. ಹಾಗೂ ಅದರ ಮೇಲೆ ಗುಡಿಕಟ್ಟಿ, ರಂಗೋಲಿ ಇಟ್ಟು ಈಶ್ವರನ ಮಗಳು ಮಹಾಲಕ್ಷ್ಮಿ ನಾಗಮ್ಮಳನ್ನು ದೇವರ ಸ್ವರೂಪಿಯಾಗಿ ಕಾಣುತ್ತಾರೆ. ತಳಿರು-ತೋರಣಗಳನ್ನು ಕಟ್ಟುತ್ತಾರೆ. ಒಂದು ಹೆಣ್ಣಿಗೆ ಶೋಷಣೆ ಮಾಡಿ ತಳಿರು-ತೋರಣ ಕಟ್ಟಿದರೇನು ಪ್ರಯೋಜನ. ಬದಲಾಗಿ ಆಕೆಯ ಜೀವ, ಜೀವನಕ್ಕೆ ತಳಿರು-ತೋರಣಗಳನ್ನು ಕಟ್ಟಿ ಜೀವನ ಬೆಳಕಾಗುವ ಹಾಗೆ ರೂಪಿಸಬೇಕು.

ಕಥನಗೀತೆಯಲ್ಲಿ ಬರುವ ಸಾಲುಗಳಿಂದ ಅಂದಿನ ಜನ ಎಷ್ಟು ಮೂಢರಾಗಿದ್ದರು ಎಂಬುದರ ಸ್ಪಷ್ಟ ಚಿತ್ರಣ ಕಂಡುಬರುತ್ತದೆ. ನಾಗಮ್ಮ ಪಟ್ಟೆಯ ಸೀರೆಯುಟ್ಟು, ಮುತ್ತಿನಂಥ ಕುಂಕುಮ ಇಟ್ಟು, ವೀರಕೊಂಡಕ್ಕೆ ಕೊಲೆಯಾದಳು. ಅಂತಹ ವೀರಗೊಂಡಕ್ಕೆ ಕೊಲೆಯಾದ ಮಹಾಸತಿಗೆ ಆರುತಿಯನ್ನು ಎತ್ತಿರೆಂದು ಆಕೆಯ ಸಾವು ಶುಭ ಸಂಕೇತವಾಗಿ ವೀರ ಪ್ರಧಾನವಾಗಿ ಕಂಡುಬಂದಿದೆ.

"ಪಟ್ಟೇದ ಸೀರುಟ್ಟು ಮುತ್ತಿನ ಬಟ್ಟಿಟ್ಟು ಅಕ್ಕ
ಈರಗೊಂಡಾಕ ಕೊಲೆಯಾದಳು । ಅಕ್ಕ ನಾಗಮ್ಮಾಗೆ

---

೫೧. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೭೭

ಆರುತಿಯಾನೆತ್ತೀರಿ ಜಯ ಮಂಗಳಾ ರಾಮ ಸುಭಮಂಗಳಾ ।
ಸಾಲ್ಯರ ಸೀರುಟ್ಟು ದಾದಿನ ಬಚ್ಚಿಟ್ಟು ತಾಯಿ
ಈರಗೊಂಡಾಕ ಕೊಲೆಯಾದಳು । ವಡ್ಡಗೇರಿ
ತಾಯಿ ನಾಗಮ್ಮಾಗಾರುತಿಯಾ ನೆತ್ತೀರಿ
ಜಯ ಮಂಗಳಾ ರಾಮ ಸುಬಮಂಗಳಾ।
ಗಂಜೀಯ ಸೀರುಟ್ಟು ಗಂದಾದ ಬಟ್ಟಿಟ್ಟು
ತಂಗೀರುಗೊಂಡಾಕ ಕೊಲಿಯಾದಳು । ವಡ್ಡಗೇರಿ
ತಂಗಿ ನಾಗಮ್ಮಗಾರುತಿಯನೆತ್ತೀರಿ
ಜಯ ಮಂಗಳಾ ರಾಮ ಸುಬಮಂಗಳಾ।"[೫೨]

ತಾಡಿನಾಗಮ್ಮ ಕೊಲೆಯಾದಳು ಎಂದು ತಾವೇ ಜನಪದರು ಹೇಳುತ್ತಿದ್ದಾರೆ. ಆದರೆ ಅದು ಕೊಲೆಯಂತೆ ಅವರಿಗೆ ಕಾಣಿಸುತ್ತಿರಲಿಲ್ಲ ಎನಿಸುತ್ತದೆ. ಬದಲಾಗಿ ಹಿಂಸೆಯನ್ನು ಪಡುತ್ತಿರುವ ಆ ಮಹಾತಾಯಿಗೆ ಆರತಿಯೆತ್ತಿ ಕೊಂಡಕ್ಕೆ ಕಳುಹಿಸುತ್ತಿದ್ದರು. ತಾವು ಮಾಡುವಂತಹ ಕೆಲಸ ತಪ್ಪು, ಅನ್ಯಾಯವೆಂಬುದರ ಅರಿವೇ ಇಲ್ಲದೆ ಆಚರಣೆಗಳಿಗೆ ಮರುಳಾಗಿ ನಡೆಸುತ್ತಿದ್ದರು. ಇದಕ್ಕೆಲ್ಲ ಕಾರಣ ಅವರಲ್ಲಿರುವ ಅನಕ್ಷರತೆ ಮತ್ತು ಅಂಧಾನುಕರಣೆಯಾಗಿದೆ.

೫.೩. ಬಲಿದಾನದ ಆಚರಣೆ :

ಸಾಮಾನ್ಯವಾಗಿ ಆಚರಣೆಯನ್ನು ನಾವು ಸಂಪ್ರದಾಯ ಎಂದು ಕರೆಯುತ್ತೇವೆ. ಸಂಪ್ರದಾಯ ಎಂದರೆ ಸಾಮಾಜಿಕ ವ್ಯವಸ್ಥೆ ಎಂದು ಕರೆಯಬಹುದು. ಅಥವಾ ಆಚರಣೆ ದೃಷ್ಟಿಕೋನಗಳು ಮತ್ತು ಧೋರಣೆಗಳ ಒಂದು ಗುಂಪು ಎಂತಲೂ ಕರೆಯಬಹುದು. ಸಂಪ್ರದಾಯವೆಂದರೆ ಅಭ್ಯಾಸ, ಪರಿಪಾಠ, ಚಾಳಿ, ರೂಢಿ, ವಾಡಿಕೆ, ಅನುಷ್ಠಾನ, ಬಳಕೆ, ಪದ್ಧತಿ, ಆಚರಣೆ ಎಂಬ ಹಲವು ಅರ್ಥಗಳನ್ನು ಹೊಂದಿದೆ. ಮದುವೆ, ಹಬ್ಬ-ಹರಿದಿನ, ಜಾತ್ರೆ, ಮಹೋತ್ಸವ ಇತ್ಯಾದಿ ಸಂಪ್ರದಾಯಗಳ ಅಡಿಯಲ್ಲಿ ನಡೆಯುತ್ತವೆ. ಇಂತಹ ಆಚರಣೆಗಳು ಸಮಾಜಕ್ಕೆ ಸಂತೋಷವನ್ನು ನೀಡುವ ಕಾರಣ ಇವುಗಳನ್ನು ಆಚರಿಸಲು ಯಾವುದೇ ತೊಂದರೆಯುಂಟಾಗುವುದಿಲ್ಲ. ಆದರೆ ಕೆಲವೊಂದು ಆಚರಣೆಗಳು ಕ್ರೂರ, ಬಲಿ ರೂಪದಲ್ಲಿ ನಡೆಸಲಾಗುತ್ತದೆ. ಇಂತಹ ಆಚರಣೆಗಳು ಕಥನಗೀತೆಗಳಲ್ಲಿ ಹೇರಳವಾಗಿ ದೊರಕುತ್ತವೆ. ಜನಪದ ಬದುಕಿನಲ್ಲಿ 'ಬಲಿ'ಗೆ ಒಂದು ವಿಶಿಷ್ಟವಾದ ಸ್ಥಾನವನ್ನು ಕಲ್ಪಿಸಲಾಗಿದೆ. ಒಂದೊಂದು

---

೫೨. ಕತ್ತಾಲ ದಾರಿ ದೂರ : ಕೃಷ್ಣಮೂರ್ತಿ ಹನೂರ, ಪು.೭೯

ಉದ್ದೇಶಕ್ಕಾಗಿ, ಸಂದರ್ಭಗಳಿಗಾಗಿ ಬಲಿಕಾರ್ಯವು ನಡೆಯುತ್ತಲೇ ಬಂದಿದೆ. ಬಲಿ ಪದ್ಧತಿ ಅತೀಯಾದ ನಂಬಿಕೆ ಮತ್ತು ಭಯದಿಂದ ಹುಟ್ಟಿ ಆಚರಣೆಯಾಗಿ ಮಾರ್ಪಟ್ಟಿದೆ. ದುಷ್ಟಶಕ್ತಿಗಳಿಂದ ಕುಟುಂಬಕ್ಕೆ, ಸಮಾಜಕ್ಕೆ, ಊರಿಗೆ ಅಪಾಯವಾಗದಿರಲಿ ಎಂಬ ನಂಬಿಕೆಯಿಂದ ಆಚರಣೆ ರೂಢಿಯಲ್ಲಿ ಬಂದಿದೆ. ವಿವಿಧ ಸಂದರ್ಭಗಳಲ್ಲಿ ಪ್ರಾಣಿ-ನರಬಲಿಗಳನ್ನು ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದಿದ್ದಾರೆ. ಅದರಲ್ಲಿ ಈ ಮಹಿಳೆಯರು ಕೂಡ ಪ್ರಾಣಿಗಳಂತೆ ಬಲಿಯಾಗಿ ಆಚರಣೆಯೆಂಬ ಘೋರ ಕಂದಕದಲ್ಲಿ ಸಿಲುಕಿ ಬಂದವರು ಅನೇಕರು. ಅವರ ಆಚರಣಾತ್ಮಕ ನೆಲೆಯನ್ನು ಕಥನಗೀತೆಗಳಲ್ಲಿ ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ.

ಬಲಿ ಎಂದರೆ ನಾಮ ಪದದಲ್ಲಿ ಯಜ್ಞಪಶು, ಬಲಿಪಶು, ಆಹುತಿಯಾದ ಪ್ರಾಣಿ, ಆಹುತಿಯಾದ ವ್ಯಕ್ತಿ, ಆಹುತಿ ಕೋರಲಾದವನು ಎಂಬ ಅರ್ಥಗಳಿವೆ. ಕಥನಗೀತೆಗಳಲ್ಲಿ ಬಹುಪಾಲು ಮಹಿಳೆಯರೇ ಬಲಿಪಶುಗಳಾಗಿದ್ದರು ಎಂಬುದನ್ನು ಕೆಲವೊಂದು ಕಥನಗೀತೆ-ಗಳಲ್ಲಿ ಕಂಡುಬರುವ ಆಚರಣೆಗಳ ಹಿನ್ನೆಲೆಯ ಮೂಲಕ ತಿಳಿದುಕೊಳ್ಳಬಹುದು.

ಈರೋಬಿ ಕೊಂಡಕ್ಕೆ ಬಲಿಯಾಗುವ ಆಚರಣೆ :

ಈರೋಬಿ ಕೊಂಡಕ್ಕೆ ಹೋಗುತ್ತಿರುವಾಗ ಕುಟುಂಬದವರು ಯಾವ ಯಾವ ವಸ್ತುಗಳನ್ನು ಹಿಡಿದುಕೊಂಡು ಹೋಗುತ್ತಿದ್ದರು ಎಂದು ಕೆಳಗಿನ ಪಟ್ಟಿಗಳ ಮೂಲಕ ತಿಳಿಯಬಹುದು.

- ಅಪ್ಪನ ಕೈಯಲ್ಲಿ ಒಡಗಿಚ್ಚು, ತುಪ್ಪ
- ತಾಯಿಯ ಕೈಯಲ್ಲಿ ಹಾಲಿನ ಕೊಡ
- ಅಕ್ಕನ ಕೈಯಲ್ಲಿ ಅಕ್ಕಿ
- ಅಣ್ಣನ ಕೈಯಲ್ಲಿ ಹಲಸಿನ ಹಣ್ಣು, ಮಾವಿನ ಹಣ್ಣು
- ನಾದಿನಿಯ ಕೈಯಲ್ಲಿ ಹರಳೆಣ್ಣೆ
- ಅತ್ತಿಗೆಯ ಕೈಯಲ್ಲಿ ಎಳನೀರು
- ಇತರರ ಕೈಯಲ್ಲಿ ಅರಿಷಿನ-ಸೀಗೆಕಾಯಿ ಮುಂತಾದವು.

ಈರೋಬಿ ಕೊಂಡಕ್ಕೆ ಹೊರಡುವಾಗ ಸಮಾಜ, ಕುಟುಂಬ ಆಕೆಯನ್ನು ಬಲಿ ಕೊಡಲು ನಿರ್ಧರಿಸಿ ಎಲ್ಲರ ಕೈಯಲ್ಲೊಂದೊಂದು ಸಾಮಗ್ರಿಗಳನ್ನು ಹಿಡಿದು ಈರೋಬಿಯನ್ನು ಕೊಂಡಕ್ಕೆ ಕಳುಹಿಸುವ ನಿಮಿತ್ತ ಆಚರಣೆಗಳನ್ನು ನಡೆಸುತ್ತಿದ್ದರು. ಮುಂದೆ ಮುಂದೆ ಈರೋಬಿ

ಕೊಂಡದ ಹಾದಿ ಹಿಡಿದು ಹೊರಟಿರುವಳು. ಆಕೆಯ ಹಿಂದೆ ಕಳಸವನ್ನು ಹಿಡಿದು ಜನ ಸಾಲು ಸಾಲಾಗಿ ಹೊರಟಿರುವರು. ಜೊತೆಗೆ ಈರೋಬಿಯ ಬಂಧು-ಬಳಗದವರು, ಊರಿನ ಸಮಸ್ತ ಜನತೆ ಹೊರಟಿದೆ. ಒಮ್ಮೆ ತನ್ನ ಪಕ್ಕದಲ್ಲಿದ್ದ ಗೆಳತಿಯ ಕೈಯಲ್ಲಿದ್ದ ನಿಲುಗನ್ನಡಿಯನ್ನು ಹಿಡಿದು ತನ್ನನ್ನು ತಾನೇ ನೋಡಿಕೊಳ್ಳುತ್ತಾಳೆ. ಆಕೆ ನೋಡಿಕೊಳ್ಳುತ್ತಿರುವುದು ತನ್ನ ಶೃಂಗಾರವನ್ನೋ ಅಥವಾ ಈ ಸಮಾಜಕ್ಕೆ ಬಲಿಯಾಗುತ್ತಿರುವ ನತದೃಷ್ಟ ಅಸಹಾಯಕ ಮಹಿಳೆಯನ್ನೋ ಎಂಬುದು ಅರ್ಥವಾಗದು. ಮುಂದೆ ಈಚಲದ ಗರಿ ಹಿಡಿದು ತಿರುಗಿಸುತ್ತಾಳೆ. ಸ್ವಲ್ಪ ದೂರದಿಂದ ಕೊಂಡ ಕಾಣುತ್ತದೆ. ಕೊಂಡಕ್ಕೋಗುವಾಗ ಆಕೆಯಲ್ಲಿ ಏನಿದ್ದವು. ಎಂಥ ಸಡಗರವಿತ್ತು ಎಂಬುದನ್ನು ಈರೋಬಿಯ ಕಥನಗೀತೆಯಲ್ಲಿ ಹೀಗೆ ಹೇಳಲಾಗಿದೆ:

"ಕೊಂಡಕೋಗೋಳ ಕೈಲಿ ಹನ್ನೆರಡು ನಿಂಬೆಹಣ್ಣು
ಹನ್ನೆರಡುದುರುಬು ಕರುವಲ್ಲೆ ಈರೋಬಿ
ಕೊಂಡಕ್ಹೋಗೋದೆ ಸಡಗರ"[೫೩]

ಕೊಂಡಕ್ಕೆ ಹತ್ತಿರ ಹೋಗುತ್ತಿರುವ ಈರೋಬಿಯು ನಿಂಬೆಯ ಹಣ್ಣನ್ನು ಅತ್ತ-ಇತ್ತ ಚೆಲ್ಲಾಡುತ್ತಾ ರಂಬೆ ತೋಳನ್ನು ತಿರುವುತ್ತಾ ಬಂದವರ ಮುಂದೆ ಮೆರೆದಳು ಎಂದು ಹೇಳುತ್ತಾರೆ. ಆದರೆ ಇಲ್ಲಿ ನಿಂಬೆಯ ಹಣ್ಣನ್ನು ಚೆಲ್ಲಾಡಿದ ಹಾಗೇ ಆಕೆಯ ಬಾಳು ಕೂಡ ಛಿದ್ರವಾಗಿರುವ ಸಂಕೇತವಾಗಿ ಕಂಡುಬರುತ್ತದೆ. ಆಕೆ ಗಂಡನಿಲ್ಲದೇ ಮೆರೆಯುತ್ತಿರುವಳು ಎಂಬ ಅಣಕ ಇಲ್ಲಿ ಕಂಡುಬರುತ್ತದೆ. ಮುಂದೆ ಈರೋಬಿ ಕಳಸವನ್ನು ಹೊತ್ತುಕೊಂಡು ವೇಗವಾಗಿ ಮುನ್ನಡೆಯುತ್ತಾಳೆ.

"ಕಳಸ ಹೊತ್ತುಕೊಂಡು ಬಂದಾಳೀರೋಬಿ
ಕೊಂಡಾ ಮೂರು ಸುತ್ತು ಬಳಸ್ಯಾಳು ಈರೋಬಿ
ಕಳಸವ ಮಡಗಿ ಕೈಯೆತ್ತಿ ಮುಗಿದಳು ಈರೋಬಿ
ಕೊಂಡಕೆ ಮುಂದಾಗಿ ನಡೆದಾಳು"[೫೪]

ಕೊಂಡದ ಒಳಗೆ ಕೆಂಡ, ಗುಂಡಿಯ ಸುತ್ತ ದುಂಡುಮಲ್ಲಿಗೆ, ರಂಗವಲ್ಲಿ, ಕುಂಕುಮವನ್ನು ಕೂಡ ಎರಚಲಾಗಿದ್ದು, ಕೊಂಡದ ಸುತ್ತ ಆಲ, ಅರಳೆ, ಅತ್ತಿ, ಚಂದನದ ಕಟ್ಟಿಗೆಗಳನ್ನು

---

೫೩. ಜನಪದ ಕಥನಗೀತೆಗಳು : ಪಿ.ಕೆ. ಖಂಡೋಬಾ, ಪು.೪೨
೫೪. ಅದೇ, ಪು.೪೩-೪೪.

ಒಟ್ಟಿಲಾಗಿದೆ. ಅದರ ಸುತ್ತ ಕಳಸ ಹೊತ್ತು ಮೂರು ಸುತ್ತನ್ನು ಹಾಕಿ ಕಳಸವನ್ನು ಇಟ್ಟು ಕೈಯೆತ್ತಿ ಕೈಮುಗಿದು ಕೊಂಡಕ್ಕೆ ಹಾರಿ ಬೆಂಕಿಯಲ್ಲಿ ಉರಿದು ಹೋಗುವಳು. ಹೋಗುವ ಪೂರ್ವದಲ್ಲಿ ಶಾಪವೊಂದನ್ನು ನೀಡುತ್ತಾಳೆ. ಅದೇನೆಂದರೆ:

"ಹಟ್ಟಿಕಲ್ಲು ಅಡಗಲಿ, ಕೊಟ್ಟಿಗೆ ಬರಿದಾಗಲಿ,
ಹಿಂಡೆಮ್ಮೆ ಸಾಲು ಅಡಗಲಿ
ನನಗೋಳು ನಿಮ್ಮೆಣ್ಣಿಗೆ ಮಡಿಗಿರಲಿ"[೫೫]

ಎಂದು ಹೇಳುವ ಆಕೆಯ ಶಾಪ ಇಡೀ ಸಮಾಜಕ್ಕೆ ಕೊಟ್ಟ ಹಾಗೆ ಇದೆ. ಇದರಿಂದಲೇ ಅರ್ಥವಾಗುತ್ತದೆ ಆಕೆ ತಾನಾಗಿಯೇ ಚಿತೆಗೆ ಹೋಗಲು ಮುಂದಾಗಿಲ್ಲ. ಸಾಮಾಜಿಕ ಒತ್ತಡಕ್ಕೆ ಮಣಿದು ಆಚರಣೆ ಸಂಪ್ರದಾಯವೆಂಬ ನಂಬಿಕೆಗೆ ತನ್ನನ್ನು ತಾನು ಬಲಿಕೊಟ್ಟು ಕೊಂಡಿರುವುದು. ಅಷ್ಟೇ ಅಲ್ಲದೆ ಅವಳ ಸಾಮಾಜಿಕ ಆಚರಣೆಯ ವಿರೋಧಿ ಮಾತುಗಳು ತುಂಬಾ ಮಾರ್ಮಿಕವಾಗಿ ಮೂಡಿಬಂದಿವೆ.

ಕೆರೆಗೆ ಬಲಿಯಾದ ಸ್ತ್ರೀಯರಲ್ಲಿ ಅಣಜಿ ಹೊನ್ನಮ್ಮಳು ಒಬ್ಬಳು. ಅಣಜಿ ಎಂಬ ಊರಿನ ಗೌಡನ ಸೊಸೆ ಮಲ್ಲನಗೌಡನ ಹೆಂಡತಿ. ಹೊನ್ನಮ್ಮಳ ಮಾವ ಕೆಂಚನಗೌಡನ ಕನಸಿನಲ್ಲಿ, ಮನೆದೇವರಾದ ಎಲ್ಲಮ್ಮಳು ಬಂದು ಕೆರೆಯೊಂದನ್ನು ಕಟ್ಟಿಸುವಂತೆ ಹೇಳಿದಾಗ ಗೌಡ ಕೆರೆಯನ್ನು ಕಟ್ಟಿಸಿದ. ದುರಂತವೆಂದರೆ ಆ ಕೆರೆಯಲ್ಲಿ ನೀರು ಬರದೇ ಇರುವುದು ಹಾಗೂ ಕೆರೆಯ ಏರಿ ಕುಸಿಯುತ್ತಿರುವುದು. ಅದಕ್ಕಾಗಿ ಹೊತ್ತಿಗೆಯನ್ನು (ಶಾನಭೋಗರಲ್ಲಿ) ತೆಗೆಸಿ ಕೇಳಿದಾಗ ಕೆರೆಯ ಭದ್ರತೆಗಾಗಿ ಬಲಿಯೊಂದನ್ನು ಕೊಡಬೇಕೆಂದು ಬಂದಿತು. ತನ್ನ ಹೆಂಡತಿ, ಮಗ, ಮಗಳನ್ನು ಕೊಡಬೇಕೆಂದರೆ ತನ್ನ ವಂಶದ ಬಗ್ಗೆ ವಿಚಾರ ಮಾಡುತ್ತಾ ಸೊಸೆಯಾದ ಹೊನ್ನಮ್ಮಳನ್ನೇ ಕೊಡಲು ನಿರ್ಧರಿಸಿದನು. ದೇವರನ್ನು ನಿರ್ಮಿಸಿದ್ದು ಮಾನವರೆಂದ ಮೇಲೆ, ಯಾವ ದೇವರೂ ಬಂದು ಬಲಿ ಕೇಳುವುದಿಲ್ಲ, ಕೆಟ್ಟದ್ದನ್ನು ಬಯಸುವುದಿಲ್ಲ. ದೇವರನ್ನು ಉನ್ನತ ಸ್ಥಾನದಲ್ಲಿರಿಸಿದ್ದೇವೆ ಎಂದ ಮೇಲೆ ಈ ಅನಿಷ್ಟ ಆಚರಣೆಗಳಿಗೆ ಕಾರಣಳಾಗುವಂತೆ ರೂಪಿಸುವುದು ತಪ್ಪು ಗ್ರಹಿಕೆ. ಮನುಷ್ಯನ ಒಳ್ಳೆಯ ಗುಣಗಳೇ ದೇವರ ಸ್ಥಾನಕ್ಕೆ ಕರೆದೊಯ್ಯುತ್ತವೆ ಎಂಬ ಪರಿಕಲ್ಪನೆ ಜನಮಾನಸದಲ್ಲಿ ಬಿತ್ತರಿಸಬೇಕು.

ಮುಂದೆ ಒಂದು ದಿನ ಬಲಿಯಾಗುವ ಪ್ರಸಂಗ ಒದಗಿ ಬಂದೇಬಿಟ್ಟಿತು. ತನ್ನ ಗಂಡನಿಲ್ಲದ ಕಾರಣ ಆತನನ್ನು ನೆನೆ ನೆನೆದು ದುಃಖಿಸುತ್ತಾ ಅತ್ತೆ-ಮಾವನೊಂದಿಗೆ ಗಂಗೆ

---

೫೫. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ: ದೇವೇಂದ್ರ ಕುಮಾರ ಹಕಾರಿ, ಪು.೨೨೭

ಪೂಜೆಗೆ ಹೊರಟಳು. ಪೂಜೆ ಮಾಡುವಂತಹ ಸಮಯದಲ್ಲಿ "ಕೈ ಹಚ್ಚಿ ಮೂರು ಹಿಡಿ ಮಣ್ಣು ತಗೆದುದೇ ತಡ, ಪ್ರವಾಹದಂತೆ ನೀರು ನುಗ್ಗಿ ಬಂದಿತು. ಐದು ಕೊಡಗಳನ್ನು ತುಂಬಿ ಹೊನ್ನವ್ವ ಪೂಜೆ ಮಾಡಿದಳು."[೫೬] ಇಲ್ಲಿ ನಂಬಲಸಾಧ್ಯವಾದಂತಹ ಘಟನೆಯನ್ನು ಕಾಣುತ್ತೇವೆ. ಯಾಕೆಂದರೆ ಹೊನ್ನಮ್ಮ ಕೆರೆಯಲ್ಲಿ ಕೈ ಇಟ್ಟಾಗಲೇ ನೀರು ಉಕ್ಕಿ ಬಂದಿತೆಂಬುದು ಕೇವಲ ಕಲ್ಪನೆಯೆನಿಸುತ್ತದೆ. ನೀನು ಪೂಜೆ ಮಾಡಿದರೆ ನೀರು ಉಕ್ಕಿ ಬರುತ್ತದೆಯೆಂದು ಜನರು ಆಕೆಯಲ್ಲಿ ನಂಬಿಕೆಯನ್ನು ಭದ್ರಪಡಿಸಲು ಹೀಗೆ ಹೇಳಿರಬೇಕು. ಉದ್ದೇಶಪೂರ್ವಕವಾಗಿ ಹೊನ್ನಮ್ಮಳನ್ನು ಬಲಿ ಕೊಡಲು ಮಾನಸಿಕವಾಗಿ ಆಕೆಯನ್ನು ಗಟ್ಟಿಗೊಳಿಸುವುದಕ್ಕೆ ಈ ಸಂದರ್ಭವನ್ನು ಸೃಷ್ಟಿಸಿದ ಹಾಗೆ ಕಾಣುತ್ತದೆ.

ಮೊದಲು ಬಲಿ ಎನ್ನುವುದು ಆಚರಣಾತ್ಮಕವಾಗಿ ನಡೆಯುತ್ತಿದ್ದರೆ ವಾಸ್ತವದಲ್ಲಿ ವರದಕ್ಷಿಣೆಯ ಕಿರುಕುಳಕ್ಕಾಗಿ, ಗಂಡನ ಕಿರುಕುಳಕ್ಕಾಗಿ ಇತ್ಯಾದಿ ಕಾರಣಗಳಿಗಾಗಿ ಮಹಿಳೆ ಕೆರೆಗೋ, ಬಾವಿಗೋ, ರೇಲ್ವೆಯ ಹಳಿಗೋ ಹೀಗೆ ಮುಂತಾದವುಗಳೊಳಗೆ ಬಿದ್ದು ತನ್ನ ಪ್ರಾಣವನ್ನು ತ್ಯಾಗ ಮಾಡುವಂತಹ ಹಲವಾರು ಘಟನೆಗಳನ್ನು ನಾವು ದಿನನಿತ್ಯ ಕಾಣುತ್ತೇವೆ. ಅತ್ತೆ-ಮಾವ ಗಂಡನಿಂದಲೇ ಆಹುತಿಯಾದ ಎಷ್ಟೋ ಮಹಿಳೆಯರ ಕ್ರೂರ ಬದುಕಿನ ಚಿತ್ರಣಗಳೂ ಮನಕಲುವಂತೆ ದಾಖಲಾಗಿವೆ. ಅದು ಇಡೀ ಸಮಾಜವೆಲ್ಲ ಒಪ್ಪಿ ವೈಭವಯುತವಾಗಿ ನೆರವೇರಿಸುತ್ತಿದ್ದಂತಹ ಆಚರಣೆಗಳು ಸ್ವರೂಪದಲ್ಲಿ ಬದಲಾವಣೆಯಾಗಿ ಸ್ವಲ್ಪ ಭಿನ್ನತೆಯನ್ನು ಕಂಡುಕೊಂಡಿವೆ. ಕಾನೂನು ಮಹಿಳೆಪರ ಇದ್ದಾಗಲೂ ಇಂತಹ ಘಟನೆಗಳು ಮುಚ್ಚಿಹೋಗುತ್ತವೆ. ಪತ್ರಿಕೆಯಲ್ಲಿ, ಸಮಾಜದಲ್ಲಿ ಮತ್ತು ಕಣ್ಣ ಮುಂದೆಯೇ ಅನ್ಯಾಯ ನಡೆಯುತ್ತಿದ್ದರೂ ಕೈಕಟ್ಟಿ ಕೂಡಬೇಕಾದ ಅನಿವಾರ್ಯತೆ ಒದಗಿಬಂದಿದೆ. ಯಾಕೆಂದರೆ ಉಳ್ಳವರು ಹೇಗೆ ಬೇಕಾದರೂ, ಏನೂ ಬೇಕಾದರೂ ಮಾಡಿದರೂ ಶಿಕ್ಷೆಯಿಂದ ಪಾರಾಗುವ ಪರಿ ಅವರಿಗೆ ತಿಳಿದಿರುತ್ತದೆ. ಪದೇ ಪದೇ ಬಲಿಯಾಗುವುದು ಬಡವರು, ದೀನ-ದಲಿತರು, ಅಸಹಾಯಕರುಗಳೇ. ಆದ್ದರಿಂದಲೇ ಸಮಸ್ಯೆಗಳು ಸಮಸ್ಯೆಗಳಾಗಿಯೇ ಇವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ತ್ಯಾಗದ ಸಂಕೇತವಾಗಿ ಬಲಿ ಹೋಗಿರುವ ಮಹಿಳೆಯರ ಮಾಸ್ತಿಗೀತೆಗಳು, ಆಚರಣೆಗಳು ಸಾಕಷ್ಟು ಇವೆ. "ದೇವಲೋಕವನ್ನು ಸೂಚಿಸುವ ಪಟ್ಟಿಕೆಯಿರುವ ಕೆಲವು ಮಾಸ್ತಿ ಕಲ್ಲುಗಳು ಇರುವ ಸ್ಥಳಗಳಲ್ಲಿ ಆಚರಣೆ ಹಬ್ಬಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ.

೫೬. ಜನಪದ ಕಥನಗೀತೆಗಳಲ್ಲಿ ಮಹಿಳೆ : ಒಂದು ಸಾಂಸ್ಕೃತಿಕ ಅಧ್ಯಯನ : ಎಂ.ಕೆ. ರುಕ್ಮಿಣಿ, ಪು.೧೬೯

ಮಾಸ್ತಿಯ ಬಗ್ಗೆ ಹಬ್ಬ, ಪೂಜೆ ಆಚರಣೆಗಳು ಇರುವ ಕಡೆಯಲ್ಲೆಲ್ಲ ಕಲ್ಲಿನಲ್ಲಿ ಮಾಸ್ತಿಯೇ ಪ್ರಧಾನವಾದ ದೈವ."[೫೭] ಹೀಗೆ ಸತಿ ಹೋಗಿರುವ ಮಹಿಳೆಯರನ್ನು ಊರಿನಲ್ಲಿ ಇಂದಿಗೂ ಕೂಡ ಆಚರಣೆಯುಕ್ತವಾಗಿ ಹಬ್ಬ-ಹರಿದಿನ ಜಾತ್ರೆ, ಮಹೋತ್ಸವಗಳಲ್ಲಿ ದೇವರ ಸ್ವರೂಪಳಾದ ಮಾಸ್ತಿಗೆ ತಮ್ಮ ಬೇಡಿಕೆಗಳನ್ನು ನೆರವೇರಿಸಲು ಕೇಳಿಕೊಳ್ಳುತ್ತಾರೆ. ಉಡಿ ತುಂಬುತ್ತಾರೆ, ತೊಟ್ಟಿಲು ಕಟ್ಟುತ್ತಾರೆ, ಹರಕೆ ಹೊತ್ತುಕೊಳ್ಳುತ್ತಾರೆ. ಈ ರೀತಿಯಾಗಿ ಇಡೀ ಊರಿಗೆ ಮಾತೃದೇವತೆಯಾಗಿ ಮಹಿಳೆ ನೆಲೆಸಿದ್ದಾಳೆ.

ಶಾಸನದಲ್ಲಿ "ವೀರ ಚಿತ್ರಿತನಾಗಿದ್ದರೆ ಅವನು ಇಲ್ಲಿ ಅಪ್ರಧಾನ, ಎಲ್ಲೋ ಚಿಕ್ಕದಾಗಿ ಕೆತ್ತಲ್ಪಟ್ಟಿರುತ್ತಾನೆ. ಗಂಡನೊಬ್ಬ ಅಪ್ರಧಾನವಾಗಿ, ಗೌಣವಾಗಿ ಬಿಟ್ಟು ಸ್ತ್ರೀ ದೈವತ್ವವೇ ಮಾತೃದೈವವಾಗಿ ಪ್ರಾಮುಖ್ಯತೆಯನ್ನು ಪಡೆದ ಸಾಂಸ್ಕೃತಿಕ ಸ್ವರೂಪದ ವಿಶಿಷ್ಟತೆಯನ್ನು ವಿದ್ವಾಂಸರು ಗುರುತಿಸಿದ್ದಾರೆ."[೫೮] ಊರಿನ ತಾಯಿ, ದೇವಿ ಎಂದೆಲ್ಲಾ ಸಾಂಸ್ಕೃತಿಕ ನೆಲೆಯಲ್ಲಿ ವಿಶಿಷ್ಟತೆಯನ್ನು ಮೆರೆದ ಜನತೆ ದೇವಿಗಾದ ಹಿಂದಿನ ಅನ್ಯಾಯ, ಶೋಷಣೆಯನ್ನು ಮೆಲುಕು ಹಾಕುವುದೇ ಇಲ್ಲ. ಹೀಗೆ ದೈವ ಸ್ವರೂಪಿಯಾಗಿ ಹೋದ ಅದೆಷ್ಟೋ ಮಹಿಳೆಯರ ಜೀವನದ ಹಿಂದೆ ನೈಜ ಸತ್ಯಗಳು, ಆಕೆಯ ವೇದನೆಗಳು, ಸಂಕಟಗಳು ಆಕೆಯೊಂದಿಗೆ ಮುಚ್ಚಿಹೋಗಿವೆ.

ಕೊಂಡದ ಕಾಟವ್ವ ಕಥನಗೀತೆಯಲ್ಲಿ ಆಚರಣೆ :

ಕಾಟವ್ವ ತನ್ನ ಪತಿಯನ್ನು ಕಳೆದುಕೊಂಡ ನಂತರ ಆಕೆ ಕೊಂಡಕ್ಕೆ ನಡೆಯುವ ವಿವರಗಳು ಹೆಚ್ಚಾಗಿವೆ. ಈ ಕಥನಗೀತೆಯ ಸಾಲುಗಳು ಹುಲಿಕುಂಟೆಯಲ್ಲಿನ ಕೊಂಡದ ಸ್ಥಳವನ್ನು ಕುರಿತು ಹೇಳುತ್ತದೆ. ಈ ಸ್ಥಳಕ್ಕೆ ಇಂದಿಗೂ ಪೂಜೆ, ಹರಕೆಗಳು, ಸಲ್ಲುತ್ತವೆ. ಹುಲಿಕುಂಟೆ ಗ್ರಾಮ ಹಿಂದಿನ ಕಾಲಕ್ಕೆ ನಿಡುಗಲ್ಲು ಪಾಳೆಯ ಪಟ್ಟಿಗೆ ಸೇರಿತ್ತು. ತುಮಕೂರು ಜಿಲ್ಲೆಯ ಪಾವಗಡ ನಲವತ್ತಾರ ಶಾಸನದಲ್ಲಿ ವೆಂಕಟಪತಿರಾಯನು ಹೊಟ್ಟಯಾಳನಾಯಕನಿಗೆ ದೊಡ್ಡೇರಿ, ಸಿರಾ, ತುರುವೇಕೆರೆ, ಹಿರಿಯೂರು, ಹರ್ತಿಕೋಟೆ ಗ್ರಾಮಗಳೂ ಸೇರಿಕೊಳ್ಳುತ್ತವೆ. ಕಾಟವ್ವ ಕೊಂಡಕ್ಕೆ ಹೋಗುವ ಸಂದರ್ಭದಲ್ಲಿ ನಿಡುಗಲ್ಲು ಪಾಳೆಯಗಾರನ ಅಪ್ಪಣೆಯನ್ನು ಪದ್ಧತಿಯ ಪ್ರಕಾರ ಪಡೆಯುತ್ತಾರೆ. ಈ ವಿಚಾರ ಗೀತೆಯಲ್ಲಿ ಕಂಡುಬರುತ್ತದೆ. ಈ ಐತಿಹ್ಯದಿಂದ ತಿಳಿದುಬರುವುದೇನೆಂದರೆ, ಹುಲಿಕುಂಟೆ ಗ್ರಾಮ ಪಾಳೆಯಗಾರರ ಪಟ್ಟಿಗೆ ಸೇರಿತ್ತು. ಪಾಳೆಯಗಾರರ ಅಪ್ಪಣೆಯ ಮೇರೆಗೆ ಆಚರಣೆ-ಪದ್ಧತಿಗಳು ನಡೆಯುತ್ತಿದ್ದವೆಂಬ

---

೫೭. ಮಹಾಸತಿ ಆಚರಣೆ : ಒಂದು ಅಧ್ಯಯನ : ಬಸವರಾಜ ಕಲ್ಗುಡಿ, ಪು.೨೧೨
೫೮. ಅದೇ, ಪು.೨೧೨

ಕುರುಹು ಸಿಗುತ್ತದೆ. ಆಚರಣೆಗಳು ಆಡಳಿತ ವರ್ಗದಿಂದಲೇ ನಡೆಸಲ್ಪಡುತ್ತಿದವು ಎಂಬ ಸತ್ಯ ಇದರಿಂದ ಮನದಟ್ಟಾಗುತ್ತದೆ.

ಕಾಟವ್ವ ಕೊಂಡದ ಪಾಲಾಗುವುದನ್ನು, ಈಕೆಯ ಗಂಡನ ಮನೆ ವುಲಿಕುಂಟೆ (ಹುಲಿಕುಂಟೆ) ಎಂದು ಈ ಕೆಳಗಿನ ಸಾಲುಗಳಿಂದ ತಿಳಿದುಬರುತ್ತದೆ.

"ಅಸು ಮಗಳು ಕಾಟಮ್ಮ ಬಸುವಾನೇರಿಕೊಂಡು
ಎಸಳೂಮಲ್ಲಿಗೆ ಮುಡಕಂಡು
ಎಸಳೂಮಲ್ಲಿಗೆ ಮುಡಕಂಡು ವುಲಿಕುಂಟೆ
ಸೊಸಿ ಬೇವಿನ್ಯಾಗ ಮೆರುದಾಳೆ"[೫೯]

ಕಾಟವ್ವ ಮದುಮಗಳಾಗಿ ಸಿಂಗರಿಸಿಕೊಂಡು ವುಲಿಕುಂಟೆ ಗ್ರಾಮದಲ್ಲಿ ಜೀವನವನ್ನು ನಡೆಸಲು ಸೊಸೆಯಾಗಿ ಬಂದಳು ಎಂಬುದನ್ನು ತಿಳಿಸುತ್ತದೆ. ಕಾಟವ್ವ ಕೊಂಡಕ್ಕೆ ಬಿದ್ದ ಸ್ಥಳ ಹುಲಿಕುಂಟೆ ಗ್ರಾಮದಿಂದ ಎರಡು ಮೈಲಿ ದೂರದಲ್ಲಿದೆ ಎಂಬುದನ್ನು ಕೃಷ್ಣಮೂರ್ತಿ ಹನೂರವರು ಸಂಪಾದಿಸಿದ 'ಸಾವಿರದ ಸಿರಿಬೆಳಗು' ಕೃತಿಯೊಳಗೆ ಕೊಂಡದ ಕಾಟವ್ವನ ಗೀತೆಯ ಪೂರಕ ಸಾರಾಂಶದಲ್ಲಿ ಉಲ್ಲೇಖಿಸಲಾಗಿದೆ. ಬಸವರಾಜ ಕಲ್ಗುಡಿಯವರ 'ಮಹಾಸತಿ ಆಚರಣೆ ಒಂದು ಅಧ್ಯಯನ' ಕೃತಿಯಲ್ಲಿ ಕೊಂಡದ ಕಾಟವ್ವಳ ಸ್ಥಳ ಬೆಳಗೆರೆಯಿಂದ ಸುಮಾರು ೩-೪ ಮೈಲಿ ದೂರದಲ್ಲಿದೆ ಎಂದು ಉಲ್ಲೇಖಿಸಿದ್ದಾರೆ.

ಕಾಟವ್ವಳ ಮದುವೆಯ ಸಿದ್ಧತೆಯ ಮಧ್ಯೆ ಎಷ್ಟೇ ಅಪಶಕುನಗಳು ಅಡ್ಡ ಬಂದರೂ ಮದುವೆ ನೆರವೇರುತ್ತದೆ. ಒಂದು ಮಗುವಾಗುವಷ್ಟರಲ್ಲಿ ಆಕೆಯ ಗಂಡ ಮುತ್ತಣ್ಣ ತೀರಿಕೊಳ್ಳುತ್ತಾನೆ. ಆಗ ನಾಗವ್ವ ಕೊಂಡಕ್ಕೆ ಹೋಗುವ ನಿಶ್ಚಯವನ್ನು ಮಾಡಿಕೊಳ್ಳುತ್ತಾಳೆ. ಈ ಸುದ್ದಿಯನ್ನು ತಿಳಿದ ಅವಳ ಅಣ್ಣ ಕಾಟಣ್ಣ ನೋಡಲು ಬಂದು ಎಷ್ಟೇ ತಡೆದರೂ ಆಕೆ ತನ್ನ ನಿರ್ಧಾರವನ್ನು ಬದಲಾಯಿಸುವುದಿಲ್ಲ. ಕೊಂಡಕ್ಕೆ ಹೋಗುವ ಮುನ್ನ ತನ್ನ ಕಂದನನ್ನು ಮುದ್ದಾಡಿ ಬರುವ ಚಿತ್ರಣ ಕುರುಳು ಮಿಡಿಯುವಂತೆ ಅಭಿವ್ಯಕ್ತವಾಗಿದೆ. ಇದರಿಂದ ಆಕೆಗೆ ಕೊಂಡ ಹೋಗಲು ಇಚ್ಛೆಯಿಲ್ಲವೆಂದು ತಿಳಿದುಬರುತ್ತದೆ.

ಕೊಂಡಕ್ಕೆ ಹೋಗುವಾಗ ಕಾಟವ್ವ ಕೈಗೊಳ್ಳುವ ಆಚರಣೆ :

"ನಿಂಬೀಯ ಅಣ್ಣ ಅಂಬಾರಕೀಡಾಡುತ
ಬಂದೀಯ ತೋಳ ತಿರುವೂತ

---

೫೯. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೩೮

ಬಂದೀಯ ತೋಳ ತಿರುವೂತ ಮುತ್ತಣ್ಣಾನ
ರೆಂಬೆ ಕೊಂಡಾಕ ನಡೆದಾಳೆ
ಕಾಕೀಯ ಅಣ್ಣ ಆಕಾಸಕೀಡಾಡುತ
ಬಾಪುರಿ ತೋಳ ತಿರುವೂತ
ಬಾಪುರಿ ತೋಳ ತಿರುವೂತ ಮುತ್ತಣ್ಣಾನ
ಕಾತೆ ಕೊಂಡಾಕ ನಡೆದಾಳೆ"[೬೦]

ಕಾಟವ್ವ ಧರಿಸಿರುವ ಆಭರಣಗಳನ್ನು ವೈಭವೀಕರಿಸುತ್ತಾ, ನಿಂಬೆಯ ಹಣ್ಣು ಹಿಡಿದುಕೊಂಡು ಬಂದೀಯ ತೋಳನ್ನು ತಿರುವುತ್ತ ಮುತ್ತಣ್ಣನ ರೆಂಬೆ ಎಂದರೆ ಹೆಂಡತಿ ಕಾಟವ್ವ ಆಕಾಶಕ್ಕೆ ನಿಂಬೆಯ ಹಣ್ಣಿನ ಮುಖತೋರುತ್ತಾ ಕೊಂಡಕ್ಕೆ ನಡೆದಳು. ಕಾಕೀಯ ಹಣ್ಣು ತೆಗೆದುಕೊಂಡು ಬಾಪುತಿ ತೋಳು ತಿರುವುತ್ತಾ ಕಾಟವ್ವ ಕೊಂಡಕ್ಕೆ ನಡೆದಳು. ಇಲ್ಲಿ ಆಕಾಸಕೀಡಾಡುತ, ಅಂಬಾರಕೀಡಾಡುತ ಎನ್ನುವಲ್ಲಿ ಕಾಟವ್ವ ಲಿಂಬೆಹಣ್ಣನ್ನು ಕೈಯಲ್ಲಿ ಇಟ್ಟುಕೊಂಡು ಕೊಂಡಕ್ಕೆ ಹೋಗುವಾಗ ಎಡಕ್ಕೆ, ಬಲಕ್ಕೆ, ಎಸೆಯುತ್ತಾ, ಮೇಲೆ ಆಕಾಶಕ್ಕೆ ಎಸೆಯುತ್ತಾ ಹೋಗುವ ಪದ್ಧತಿ ಇತ್ತೆಂದು ಜನಪದರ ಹೇಳಿಕೆ, ಆಚರಣೆ ಮೂಲಕ ಸ್ಪಷ್ಟವಾಗುತ್ತದೆ.

ಮಹಿಳೆ ಇಷ್ಟೆಲ್ಲಾ ಸಂಪ್ರದಾಯ-ಆಚರಣೆಗೆ ಪೂರಕವಾಗಿಯೇ ನಡೆದರೂ ಅದೇ ಸಮಾಜ ಆಕೆಯನ್ನು ಇನ್ನೊಂದು ರೀತಿಯಲ್ಲಿ ತೆಗಳುತ್ತದೆ :

"ಗಂಡಾಸಿಲ್ಲದ ಗಂಬೀರೆಯ ನೋಡೀರಿ
ಗಂದಾದ ಬಾವಿಯವಳ ಮನಿಮುಂದೆ
ಗಂದಾದ ಬಾವಿಯವಳ ಮನಿಮುಂದೆ ಕಾಟಮ್ಮ
ಗಂಡನಿದ್ದರಿನ್ನೆಷ್ಟು ಮೆರದೀಯೆ
ಪುರುಸಾ ಇಲ್ಲದೋಳ ಸರಸಾವನೋಡೀರೆ
ಅರಸಿಣದ ಬಾವಿಯವಳ ಮನಿಮುಂದೆ
ಅರಸಿಣದ ಬಾವಿಯವಳ ಮನಿಮುಂದೆ ಕಾಟಮ್ಮ
ಪುರಸಾನಿದ್ದರೆಷ್ಟು ಮೆರದೀಯೆ"[೬೧]

೬೦. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೫೦
೬೧. ಅದೇ, ಪು.೫೦

ಇಂತಹ ಮಾತುಗಳನ್ನು ಕೇಳಿದರೆ ಸಮಾಜದಲ್ಲಿ ಮಹಿಳೆ ಹೇಗಿದ್ದರೂ ಚುಚ್ಚು ಮಾತುಗಳನ್ನು ಆಡುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಕಾಟವ್ವ ಕೊಂಡಕ್ಕೋಗುವಾಗಿನ ಆಚರಣೆ-ಯನ್ನು ತಿಳಿಸುತ್ತಾ ಅದೇ ಕಾಟವ್ವಳಿಗೆ ಗಂಡನಿಂದ ದೂರಾದ ನೋವಿನಲ್ಲಿಯೇ, ಸಮಾಜದ ನಿಂದನೆಗಳು ಮತ್ತಷ್ಟು ಲೋಕ ತ್ಯಜಿಸುವ ಹಂತಕ್ಕೆ ತಲುಪುತ್ತದೆ.

ಹೆಣ್ಣಿಗೆ ಮದುವೆಯಾದರೂ ಕಷ್ಟ, ಆಗದೇಯಿದ್ದರೂ ಕಷ್ಟ, ಮಕ್ಕಳಾದರೂ ಕಷ್ಟ, ಆಗದೇ ಇದ್ದರೂ ಕಷ್ಟ, ಗಂಡಯಿದ್ದರೊಂದು ಕಷ್ಟ, ಸತ್ತರೊಂದು ಕಷ್ಟ ಎನ್ನುವುದರಲ್ಲಿ ಮಹಿಳೆಗೆ ಎಷ್ಟು ಸಂಕಷ್ಟಗಳ ಮಧ್ಯೆ ಆಕೆಯ ಜೀವನ ಸಾಗುತ್ತದೆ ಎಂಬುದರ ಅರಿವುಂಟಾಗುತ್ತದೆ. ಕೊಂಡಕ್ಕೆ ಹೋಗುವಾಗ ಮದುಮಗಳಂತೆ ಸಿಂಗರಿಸಿಕೊಂಡು ಹೋಗು-ವವರನ್ನು ಸಾಕಷ್ಟು ಕಥನಗೀತೆಗಳಲ್ಲಿ ಕಾಣುತ್ತೇವೆ. ಅದನ್ನು ನೋಡಿದಾಗ ಅದೊಂದು ಸಾಮಾಜಿಕ ಆಚರಣೆಯಾಗಿರಬಹುದು ಎನಿಸುತ್ತದೆ. ಅದೇ ಸಮಾಜ ಕೊಂಡಕ್ಕೆ ಹೊರಡುವ ಕಾಟವ್ವಳಿಗೆ ಪುರುಷ ಇಲ್ಲದವಳು, ಗಂಡ ಇಲ್ಲದವಳು ಗಂಧ, ಅರಿಶಿನ, ಮಾರುದ್ದ ಜಡೆ, ಹೂವು ಮುಡಿದುಕೊಂಡು ಅಲಂಕೃತಳಾಗಿರುವುದನ್ನು ಕಂಡು ಇನ್ನೂ ತನ್ನ ಗಂಡ ಬದುಕಿದ್ದರೆ ಎಷ್ಟು ಅಲಂಕೃತ ಳಾಗಿರುತ್ತಿದ್ದಳೇನೋ, ಎಷ್ಟು ಮೆರೆಯುತ್ತಿದ್ದಳೋ ಎಂದು ಸಮಾಜದಲ್ಲಿ ಮಹಿಳೆಗೆ ಚುಚ್ಚಿ ಮಾತನಾಡುವರು.

ಅಷ್ಟೇ ಅಲ್ಲದೆ ಕೊಂಡದ ಸುತ್ತ-ಮುತ್ತ ನಿಂತು ತುರುಬಿಗೆ ಆಯುಧವ ಹಾಕಿ ಕಾಟಮ್ಮಳನ್ನು ತೆರವು ಕೊಡು ಎಂದು ತಡೆದ ಘಟನೆ ಕಥನಗೀತೆಯಲ್ಲಿ ಕಂಡುಬರುತ್ತದೆ. ಇದರಿಂದ "ಕೊಂಡಕ್ಕೆ ಹೋಗುವಾಗ ತೆರುವು (Bride's Price) ಕೊಡುವ ಪದ್ಧತಿ ಇತ್ತೆಂದು ತಿಳಿದುಬರುತ್ತದೆ. ಕಾಟವ್ವಳಿಗೆ ತೆರವಿಕೊಟ್ಟು ಹೋಗು ಎಂದು ಅಲ್ಲಿ ನೆರೆದ ಜನ ಆಕೆಗೆ ಕೇಳಿರಬಹುದು. ಅದಕ್ಕೆ ಪ್ರತ್ಯುತ್ತರವಾಗಿ ಕಾಟವ್ವ ತೆರವೀಗೆಡೆಯಾಕೆ ಬಡವಾರೇನು ಮಾವುಗಳು ಸೆರಗೊಡ್ಡಿ ಬೇಡೋ ಇರಿಯಣ್ಣ ನಮ್ಮಾವುಗಳು ಹಿಡಿಹೊನ್ನು ಸೂರೆ ಬಿಡುತ್ತಾರೆ ಎನ್ನುತ್ತಾ ಕೊಂಡಕ್ಕೆ ಹೋದಳು. ಮಹಿಳೆ ಕೊಂಡಕ್ಕೆ ಹೋಗುವುದಲ್ಲದೇ ಸಮಾಜ ರೂಪಿಸಿದ ತೆರವನ್ನು ಕೊಡಬೇಕಾದಂತಹ ಪದ್ಧತಿ ಬಹಳ ನಿಕೃಷ್ಟವಾದ ನಿಯಮವಾಗಿದೆ. ಆಕೆ ತನ್ನ ಜೀವವನ್ನು ಲೆಕ್ಕಿಸದೇ ಕೊಂಡಕ್ಕೇರುತ್ತಿರುವಾಗ ಸಮಾಜ ಆಕೆಯಿಂದ ತೆರಿಗೆ ನಿರೀಕ್ಷೆ ಮಾಡುತ್ತಿರುವುದು ಮನುಷ್ಯನಿಗಿಂತ ದುಡ್ಡು ಅಥವಾ ಮೌಢ್ಯ ಪದ್ಧತಿಯೇ ಹೆಚ್ಚಾಗಿ ಕಂಡುಬರುತ್ತದೆ.

"ಕಣ್ಣಾಗ ಸೆದೆಬಿದ್ದು ಎಣ್ಯಾಕ ನೊಣಬಿದ್ದು
ಸಣ್ಣ ಸೀರ್‍ಯಾಕ ಕಿಡಿಬಿದ್ದು
ಸಣ್ಣ ಸೀರ್‍ಯಾಕ ಕಿಡಿಬಿದ್ದು ಕಾಟಮ್ಮನ
ಎಣೆಗಂಟಿಂದೇ ಉರುದಾವು
ತುಪ್ಪದಾಗ ನೊಣಬಿದ್ದು ಕಣ್ಣಾಗಸೆದೆಬಿದ್ದು
ಪಟ್ಟೇದ ಸೀರ್‍ಯಾಗ ಕಿಡಿಬಿದ್ದು
ಪಟ್ಟೇದ ಸೀರ್‍ಯಾಗ ಕಿಡಿಬಿದ್ದು ಕಾಟಮ್ಮನ
ವುಟ್ಟಾ ಸೀರೆಯಿಂದೆ ಉರುದಾವೆ"[೬೨]

ಕೊಂಡಕ್ಕೆ ಹೋದ ಮೇಲೆ ಕಾಟವ್ವಳ ಸೀರೆಗೆ ಕಿಡಿಬಿದ್ದು ಕಣ್ಣೊಳಗೆ ಸೆದೆಬಿದ್ದು, ಉರಿಯುತ್ತಾ ಹೋಗುತ್ತಾಳೆ. ಜೀವಂತ ದೇಹವನ್ನು ಆಚರಣೆಯ ಹೆಸರಿನಲ್ಲಿ ಸುಡುವ, ದಹಿಸುವ ರೀತಿ ಮೌಢ್ಯಾಚರಣೆಯಾಗಿದೆ. ಅಷ್ಟೇ ಅಲ್ಲದೆ ಕಾಟವ್ವ ಕಟ್ಟಿಗೆಯಲ್ಲಿ ಸುಟ್ಟು ಬೇಯುತ್ತಿರುವಾಗಿನ ಸನ್ನಿವೇಶವನ್ನು ಕಂಡು ಜನಪದ ಶೈಲಿಯಲ್ಲಿ ಗೀತೆ ರೂಪಿಸಿದ ಜನಪದರು ತುಂಬಾ ಪ್ರವೀಣರು.

"ಸಣ್ಣಾ ತುಗ್ಗರಿಮರ ಗಿಣ್ಣೊಡೆದು ಬೇವಾಗ
ಸಣ್ಣಾಮಗಳು ಕಾಟಮ್ಮ ಮೆರಿವಾಗ
ಸಣ್ಣಾಮಗಳು ಕಾಟಮ್ಮ ಮೆರಿವಾಗ ಅಗ್ಗುಣಿದೇವಿ
ಸಣ್ಣಾಗೆ ನಗುವಾ ನಗುತಾಳೆ"[೬೩]

ತುಗ್ಗರಿಮರ ಬೆಂಕಿಯಲ್ಲಿ ಉರಿದು ಬೇಯುವಾಗ, ಕಾಟಮ್ಮಳು ಕೂಡಾ ಉರಿದು ಬೇಯುತ್ತಿರುವಳು. ಆದರೆ ಜನಪದರು ಇದು ಒಂದು ಆಚರಣೆಯಾದ ಕಾರಣ ಕಾಟಮ್ಮ ಮೆರೆಯುವಾಗ ಎಂದು ವೈಭವೀಕರಿಸಿ ಉಲ್ಲೇಖಿಸಿದ್ದಾರೆ. ಕಾಟವ್ವಾ ಮೆರೆಯುವಾಗ ಅಗ್ನಿದೇವಿ ಎಂದರೆ ಬೆಂಕಿ ಸಣ್ಣ ನಗುವನ್ನು ಬೀರುತ್ತಿರುವಳು ಎಂಬ ನಂಬಿಕೆ ಅವರಲ್ಲಿ ಬೇರೂರಿದೆ.

ಇಲ್ಲಿ ಮಹಿಳೆಯನ್ನು ಆಚರಣೆ ಮೂಲಕ ಬೆಂಕಿಯಲ್ಲಿ ಸುಟ್ಟು ಆಕೆಯ ಜೀವನವನ್ನು ನೋಡಿ ಬೆಂಕಿಯು ಅಣಕಿಸುವಂತೆ ನಿರೂಪಿತವಾಗಿದೆ. ಆದ್ದರಿಂದ ಆಕೆಯ ದೇಹ ಸುಟ್ಟು

---

೬೨. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೫
೬೩. ಅದೇ, ಪು.೫೧

ಹೋದ ಮೇಲೆ ಆಕೆ ಶಿವನ ಅರಮನೆಯನ್ನು ಸೇರಿದಳೆಂಬ ಅಂಧ ನಂಬಿಕೆ ಅವರಲ್ಲಿ ಬೇರೂರಿದೆ.

"ಅಗಲನ್ನ ಕೊಂಡಾಕ ಜಗುಲಿ ಮುಚ್ಚಲಗಲ್ಲು
ರೇವಣ್ಣನೆಂಬೋ ಕುದರೀಯ
ರೇವಣ್ಣನೆಂಬೋ ಕುದುರೀಯ ಏರಿಕಂಡು
ವೋದಾಳೆ ಕಾಟವ್ವ ಸಿವನರುಮನಿಗೆ"[೬೪]

ದೇವರಲ್ಲಿ ಇಟ್ಟಿರುವಂತಹ ನಂಬಿಕೆ, ಇಹಲೋಕದಾಚೆ ಪರಲೋಕವಿದೆ. ಅಲ್ಲಿ ಶಿವನೊಂದಿಗೆ ದೇವಾನು ದೇವತೆಗಳು ವಾಸಿಸುವರೆಂಬ ದೃಢವಾದ ನಂಬಿಕೆ ಬೇರು ಊರಿರುವುದರಿಂದ ಕಿಚ್ಚಿಗೆ ಹೋದ ಕಾಟವ್ವಳನ್ನು ಶಿವನು (ರೇವಣ್ಣನೆಂಬ ಕುದುರೆ ಏರಿ ಶಿವನರಮನೆಗೆ ಹೋದಳೆಂದು) ಬಂದು ತನ್ನ ಅರಮನೆಗೆ (ಸ್ವರ್ಗಕ್ಕೆ) ಕರೆದುಕೊಂಡು ಹೋದನೆಂದು ಜನಪದರು ನಂಬಿಕೊಂಡು ಆಚರಣೆ ಮೂಲಕ ಆಕೆಯನ್ನು ದೇವರ ಸನ್ನಿಧಿಗೆ ಕಳುಹಿಸಿದೆವೆಂಬ ಸಮಾಧಾನ ಅವರಿಗುಂಟಾಗಿರಬಹುದು. ಕೊನೆಯಲ್ಲಿ ಕಂದಯ್ಯನಿಗೆ ಏಳ್ಗೆಯನ್ನು ಕೊಟ್ಟು ಕಾಪಾಡು ಎಂಬ ಆಶಯದೊಂದಿಗೆ ಈ ಕಥನಗೀತೆ ಮುಕ್ತಾಯ-ವಾಗುತ್ತದೆ.

ರಾಬರ್ಟ್ ಸೋದಿ (Robert Southey) ಎನ್ನುವವರು The Curse of Kehama London (1810) ದಲ್ಲಿ ಸತಿಯ ಆಚರಣೆಯನ್ನು ಕುರಿತು ಪದ್ಯ ರೂಪದ ಸಾಲುಗಳನ್ನು ಬರೆದಿದ್ದಾರೆ. ಕೊಂಡದ ಆಚರಣೆಗೆ ಇದೊಂದು ಉತ್ತಮ ನಿದರ್ಶನವಾಗಿದೆ. ಆ ಪದ್ಯ ರೂಪವು ಕೆಳಗಿನಂತಿದೆ.

ಕೊಂಡಕ್ಕೆ ಕೂತಾಗಿನ ಸಾಲುಗಳು :

"Woe! Woe! for Azla takes her seat
Upon the funeral pire!
Camly the whole terrific pomp survey'd
As on her lab the while
The lifeless head saladai of Aravalan was laid
At once on every side

೬೪. ಸಾವಿರದ ಸಿರಿಬೆಳಗು : ಕೃಷ್ಣಮೂರ್ತಿ ಹನೂರ, ಪು.೫೧

The Circling torchehs drop
At once on every side
The fragrand oil is pourd
At once on every side
The rapid flames rush up"[೬೫]

ತನಗೆ ಒದಗಿ ಬಂದ ಪಾಡನ್ನು ಕುರಿತು ವ್ಯಥೆಪಡುತ್ತಾ, ಉದ್ಗಾರದಿಂದ ಅಜಿಯಾ ಬೆಂಕಿಯಿಂದ ಆವರಿಸಲ್ಪಟ್ಟ ಕೊಂಡದ ಮೇಲೆ ತನ್ನ ಸ್ಥಾನವನ್ನು ಅಲಂಕರಿಸುತ್ತಾಳೆ. ಆಕೆಯ ಭಯಂಕರವಾದ ಆ ಅಂತ್ಯಕ್ರಿಯೆಯ ವೈಭವನ್ನು ಇಡೀ ಸಮೂಹ ಶಾಂತವಾಗಿ ವೀಕ್ಷಿಸಿತು. ಆಕೆ ತನ್ನ ತೊಡೆಯ ಮೇಲೆ ಅರವಳಿಸಿ ನಿರ್ಜೀವವಾದ ತಲೆಯನ್ನು ಇಡಲಾಯಿತು. ತಕ್ಷಣವೇ ಉರಿವ ಕೊಳ್ಳಿ ಸುತ್ತಲೂ ಬಿದ್ದವು. ಸುತ್ತಲೂ ಸುತ್ತುತ್ತಿರುವ ದೀಪದ (ಬೆಳಕಿನ ಕಿರಣ) ಬೆಳಕು ಪ್ರತಿ ಕಡೆಯಲ್ಲೂ ಬೀಳುತ್ತಿವೆ. ಪ್ರತಿ ಬದಿಯಲ್ಲೂ ಪರಿಮಳಯುಕ್ತ ತೈಲವನ್ನು ಸುರಿಯಲಾಯಿತು. ನಂತರ ಕ್ಷಿಪ್ರವಾದ, ಪ್ರಜ್ವಲಿಸುವ ಜ್ವಾಲೆ ಭುಗಿಲೆದ್ದವು.

ಅವಳು ಕೊಂಡಕ್ಕೆ ಬೀಳುವ ಮುನ್ನ :

"They strip ornaments away
Bracelet and antilet, ring and chain and zone
Around her neck they leave
The marriage knot alone"[೬೬]

ಅವಳ ಕುತ್ತಿಗೆಯ ಸುತ್ತ ಇರುವ ಮದುವೆಯ ಗಂಟುಗಳನ್ನು ಮಾತ್ರ ಬಿಟ್ಟು, ಉಳಿದ ಆಭರಣಗಳಾದ ಕಂಕಣ (ಬಳೆ), ಕಣಕಾಲು (ಕಾಲಕಡಗ), ಉಂಗುರ ಮತ್ತು ಶೃಂಖಲೆ (ಸರಪಣಿ), ನಡುಕಟ್ಟುಗಳೆಲ್ಲವನ್ನು ತೆಗೆಯಿಸಿ ಆಕೆಯನ್ನು ಕೊಂಡಕ್ಕೆ ಹೋಗಲು ಸಿದ್ಧ ಮಾಡುತ್ತಿದ್ದರು. ಈ ಪದ್ಧತಿಯನ್ನು ಪತಿ ಮರಣ ಹೊಂದಿದ ಸಂದರ್ಭದಲ್ಲಿ ಇಂದಿಗೂ ಮಾಡಲಾಗುತ್ತದೆ. ಶವಸಂಸ್ಕಾರ ಮಾಡುವಾಗ ಎಲ್ಲವನ್ನು ತೆಗೆಯುತ್ತಾರೆ ಹಾಗಾಗಿ ಆಕೆ ಜೀವಂತ ಶವವಾಗಿ ಕಂಡುಬರುತ್ತಾಳೆ.

---

೬೫. ಮಹಾಸತಿ ಆಚರಣೆ : ಒಂದು ಆಧ್ಯಯನ : ಬಸವರಾಜ ಕಲ್ಗುಡಿ, ಪು.೧೩೯
೬೬. ಅದೇ, ಪು.೧೩೯

ಸಹಗಮನ ಮಾಡುವವಳು ಮೆರವಣಿಗೆ ಹೊರಟಾಗ :

> "With Symphony, and dance, and song
> Their kindered and their friends come on
> The dance of sacrifice, the funeral song,
> And next the victim slaves in long array
> Richly bedight to grace the fetal day
> Move onward to their death"[೬೭]

ಅವರ ಕುಲದವರು, ಸ್ನೇಹಿತರು ಸೇರಿ ಸ್ವರಮೇಳದ ಜೊತೆಗೆ ಹಾಡು, ನೃತ್ಯವನ್ನು ಮಾಡುತ್ತ ಹೋಗುವರು. ಆ ಗೀತೆ ಶವಸಂಸ್ಕಾರದ್ದಾಗಿದ್ದು (ಉತ್ತರಕ್ರಿಯೆ), ನೃತ್ಯ ಆಹುತಿ(ಬಲಿ) ಕೊಡುವುದಾಗಿದೆ. ಮತ್ತು ಮಹಿಳೆ ಚಕ್ರವ್ಯೂಹದಲ್ಲಿ ಸಿಕ್ಕ ಬಲಿಪಶುವಾಗಿದ್ದಾಳೆ.

ಸಿರಿವಂತಿಕೆಯಿಂದ ಗುಲಾಮಳಾಗಿ ಅಲಂಕೃತಳಾದ ಸೊಬಗಿನಿಂದ ಕೂಡಿದ ಆ ದಿನವು ಮನಕಲಕುವ, ವಿನಾಶಕಾರಕ ದಿನವಾಗಿತ್ತು. ಅವಳು ಸಾವಿನ ಕಡೆಗೆ ಚಲಿಸುವಂತೆ ಭಾಸವಾಗುತ್ತಿತ್ತು. ಈ ವಿದ್ಯಮಾನಗಳನ್ನು ನೋಡಿದಾಗ ಸತಿಪದ್ಧತಿಯ ಆಚರಣೆ ದೇಶದಲ್ಲಿ ಅಷ್ಟೇ ಅಲ್ಲದೆ ವಿದೇಶಿ ಬರಹಗಾರರಿಗೂ ತಲುಪಿರುವಂತಹ ಸಂಗತಿ ತಿಳಿದುಬರುತ್ತದೆ.

ಕೆಂಪೆಗೌಡ ಕಥನಗೀತೆಯಲ್ಲಿ ಬಿಮ್ಮಣಸೆಯ ಬಲಿ:

ಮೂವತ್ಮೂರು ಜನಸಂಖ್ಯೆಯ ಅರಮನೆ; ಒಕ್ಕಲುತನದ ಕೂಡು ಕುಟುಂಬ ನಂಜೇಗೌಡರದ್ದು. ನಂಜೇಗೌಡರ ಮಗ ತಿಮ್ಮೇಗೌಡನಿಗೆ ಹೆಣ್ಣು ಹುಡುಕಲು 'ಏಳುಜತೆ ಪಾದರಕ್ಷೆ ಸವೆದರೂ; ಮನೆಯಲ್ಲಿರುವ ಹಣವೆಲ್ಲ ಖರ್ಚಾದರೂ 'ಒಕ್ಕಲುತನಕ್ಕೆ' ಹೆಣ್ಣು ಸಿಗಲಿಲ್ಲವಯ್ಯ ಎನ್ನುತ್ತಾರೆ. ಅಂದರೆ ಇಲ್ಲಿ ಹೆಣ್ಣನ್ನು ಒಕ್ಕಲುತನಕ್ಕೆ ಮಾತ್ರ ಸೀಮಿತದವಾದಂತೆ ಕಾಣಲಾಗುತ್ತದೆ ಹಾಗೂ ಮಹಿಳೆಯನ್ನು ವ್ಯಾಪಾರಕ್ಕೆ ಇಟ್ಟಿರುವ ವಸ್ತುವಾಗಿ ಕಾಣುತ್ತಾರೆ. ಮುಂದೊಂದು ದಿನ ನಂಜೇಗೌಡನ ಹೆಂಡತಿ ಕುಪ್ಪಮ್ಮ ತಾಯಿ. ಯಲಹಂಕಕ್ಕೆ ಹೋಗಿ-ರುವಾಗ ಹರಿಯಮ್ಮಳನ್ನು ನೋಡಿ ಮದುವೆ ಮಾಡುತ್ತಾಳೆ. ಆಗ ಕುಪ್ಪಮ್ಮ ಗರ್ಭಿಣಿ ಆಗಿರುತ್ತಾಳೆ. ಶುಕ್ರವಾರದಂದು ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ಅವನೇ ಕೆಂಪೇಗೌಡ.

---

೬೭. ಮಹಾಸತಿ ಆಚರಣೆ : ಒಂದು ಅಧ್ಯಯನ : ಬಸವರಾಜ ಕಲ್ಗುಡಿ, ಪು.೧೩೯

ಮುಂದೆ ನಂಜೇಗೌಡನ ಮನೆತನಕ್ಕೆ ಬಡತನ ಒದಗಿಬರುತ್ತದೆ. ಮೂವತ್ತೂರ ಜನರನ್ನು ಹೊಂದಿದ ಕುಟುಂಬದಲ್ಲಿ ಮೂರೇ ಜನ ಉಳಿಯವರು. (ಕುಪ್ಪಮ್ಮ-ಹರಿಯಮ್ಮ ಮಗು ಕೆಂಪೇಗೌಡ) ತಿಥಿ ಮಾಡಲು ಹಣವಿಲ್ಲದಷ್ಟು ಬಡತನವಿರುವ ಕಾರಣ ಅಣ್ಣೋಜಿ-ತಮ್ಮೋಜಿಯಲ್ಲಿ ಸಾಲವನ್ನು ಪಡೆದು ತಿಥಿ ಮಾಡುತ್ತಾರೆ. ಸಾಲಗಾರರ ಕಿರುಕುಳವನ್ನು ತಾಳದೇ ಹರಿಯಮ್ಮ ಕಷ್ಟವನ್ನು ಪಡುತ್ತಾಳೆ. ತವರಿನವರ ವರ್ತನೆ ತೆಗೆದು ಬಡತನ ಬಂದಾಗ ತವರಿಗೆ ಹೋಗಬಾರದು ಎಂಬ ನಿಲುವನ್ನು ತಾಳಿ ಮಾಗಡಿಯ ಧರ್ಮದ ಚಾವಡಿಯ ಮೇಲೆ ವಾಸವಾಗಿ ಉಣ್ಣುವುದಕ್ಕೆ ಅನ್ನ, ತೊಡುವುದಕ್ಕೆ ಬಟ್ಟೆ ಇಲ್ಲದಿದ್ದರೂ ಮೈದುನ ಕೆಂಪೇಗೌಡನನ್ನು ಸಾಕುತ್ತಾಳೆ. ಜೊತೆಗೆ ಹಾರುವರ ಮನೆಗೆ ಕೆಂಪೇಗೌಡನಿಗೆ ಜೀತಕ್ಕೆ ಹೋಗಬೇಡ ಎನ್ನುವ ಹರಿಯಮ್ಮಳ ಸ್ವಾಭಿಮಾನವೇ ಕೆಂಪೇಗೌಡನಲ್ಲಿ ಬೆಳೆದು ಬಂದಿದೆ ಎನ್ನಬಹುದು.

ಕೆಂಪೇಗೌಡ ಹಾರುವರ ಮನೆಯಲ್ಲಿ ಪಡುವ ಕಷ್ಟವನ್ನು, ಅಣ್ಣೋಜಿ-ತಮ್ಮೋಜಿ ಕಂಡ ಸ್ವಪ್ನವನ್ನು (ಕೂಲಿ ಇರುವ ಕೆಂಪೇಗೌಡನಿಗೆ ದೊರೆತನ ಬರುವುದೆಂಬ), ೧೨ ವರ್ಷದ ನಂತರ, ಮರಳಿ ಕೆಂಪೇಗೌಡ ಮನೆಗೆ ಬಂದು, ಈಚಲ ಬರಲು ಹುಡುಕಲು ಹೋಗಿ ಕೆಂಪೇಗೌಡನಿಗೆ ಸಿರಿತನ ಬಂದ ಪ್ರಸಂಗವನ್ನು ವಿವರಣೆಗೆ ಒಳಪಡಿಸಲಾಗಿದೆ. ಮುಂದೆ ಕೆಂಪೇಗೌಡನಿಗೆ ಆಲಮೇಲಮ್ಮಳೊಂದಿಗೆ ಮದುವೆ ಏರ್ಪಡುತ್ತದೆ. ಆಲಮೇಲಮ್ಮ ಇಬ್ಬರೂ ಹೆಣ್ಣುಮಕ್ಕಳಿಗೆ ಜನ್ಮ ನೀಡುವಳು. ಒಂದು ದಿನ ರಂಗಧಾಮನ ಪೂಜೆಗೆ ಹೋದಾಗ ಕೆಂಪೇಗೌಡನಿಗೆ ಮಂತ್ರಿಗಳು ಹೂವಿನಲ್ಲಿ ಬಿಳಿಯ ಕೂದಲ ತೋರಿಸುತ್ತಾ ರಂಗಧಾಮನು ಮುದುಕನಾದನೆಂದು ಮುದಿಯನಾದ ರಂಗಧಾಮ ಗಂಡುಮಕ್ಕಳ ವರವನ್ನು ಹೇಗೆ ತಾನೇ ಕೊಡುವನು ಎಂದು ಅಪಹಾಸ್ಯ ಮಾಡುವರು. 'ಅಯ್ಯ ಸೋಮೇಶ್ವರನ ಗುಡಿಯ ಕಟ್ಟಿಸು' ಗಂಡಮಕ್ಕಳಾಗುತ್ತವೆ ಎಂಬ ಮಾತನ್ನು ಕೇಳಿ ತಕ್ಷಣವೇ ಹೂವನ್ನು ನೆಲಕ್ಕೆ ಹಾಕಿ ಕಾಲಿನಿಂದ ಹೊಸೆದು ಹೋದನು. ಸಮಾಜದ ನೀಚಬುದ್ಧಿಯನ್ನು ಕೇಳಿ ಹೂವನ್ನು ಹೊಸೆಯುವುದರ ಮೂಲಕ ತನ್ನ ಸಿಟ್ಟನ್ನು ತೋರಿಸಿದ್ದಾನೆ. ನಂತರ ತನಗೆ ಮಕ್ಕಳಾಗುತ್ತವೆ ಎಂಬ ಅಭಿಲಾಷೆಯಿಂದ ಸೋಮನಾಥನ ಗುಡಿಯನ್ನು ಕಟ್ಟಿಸುತ್ತಾನೆ. ಆದರೆ ಅರ್ಧರಾತ್ರಿಯಲ್ಲಿಯೇ ರಂಗಧಾಮನ ದೃಷ್ಟಿ ತಗಲಿ ಬೆಳಗಾಗೋ ಹೊತ್ತಿಗೆ ಗುಡಿ ಬಿದ್ದಿದ್ದನ್ನು ಕಂಡು ಆ ಗುಡಿ 'ಬಿಮ್ಮನಸೆ'ಯನ್ನು ಬಲಿಯನ್ನು ಕೇಳಿತಂತೆ. ದೇವರು ಅಥವಾ ಗುಡಿ ಯಾವುದನ್ನೂ ಬೇಡುವುದಿಲ್ಲ, ಕೇಳುವುದಿಲ್ಲ. ಜನರೇ ಇಂತಹ ಅನಾಚಾರವನ್ನು ಸೃಷ್ಟಿಸಿ ಬೇರೆಯವರ ಜೀವನಕ್ಕೆ ಮುಳುವಾಗುತ್ತಾರೆ. ಹಾರುವವರಿಗೆ ಮೊದಲೇ ಕೆಂಪೇಗೌಡನನ್ನು ಕಂಡರೆ

ಆಗುತ್ತಿರಲಿಲ್ಲ. ಆದಕಾರಣ ಸುಳ್ಳು ಹೇಳಿ ಆತನ ಹೆಂಡತಿಯನ್ನು ಬಲಿ ಕೊಡಿಸಿರಬೇಕು ಎನಿಸುತ್ತದೆ.

ಹೀಗೆ ಆಚರಣೆಗಳು ಮಹಿಳೆಯರ ಜೀವ, ಜೀವನದ ಮೇಲೆ ಪ್ರಭಾವ ಬೀರಿ ತನ್ನನ್ನೇ ತಾನು ಅರಿಯದ ಪರಿಸ್ಥಿಗೆ ಈಡಾಗಿದ್ದರೂ. ಪ್ರಸ್ತುತ ದಿನಮಾನದಲ್ಲಿ ತ್ಯಾಗ-ಬಲಿದಾನಗಳ ಆಚರಣೆಗೆ ಅಂತ್ಯದೊರಕಿದೆ. ಕುಟುಂಬ ಹಾಗೂ ಸಮಾಜದಲ್ಲಿ ತ್ಯಾಗಮಯಿಯಾಗಿ, ದೈವಿಕ ಆಚರಣೆಗೆ ತುತ್ತಾಗಿ ಬದುಕುತ್ತಿರುವುದು ವಿಪರ್ಯಾಸ. ಆದ ಕಾರಣ ಆಚರಣೆಗಳನ್ನು ಶೋಧನೆಗೊಳಪಡಿಸಿ ತಾತ್ವಿಕ ನೆಲೆಗಟ್ಟಿನಲ್ಲಿ ರೂಪಿಸುವುದು ಸೂಕ್ತ.

ಅಧ್ಯಾಯ-೬

ಜನಪದ ಕಥನಗೀತೆಗಳಲ್ಲಿ ಮೌಲ್ಯ ಪ್ರತಿಪಾದನೆ

೬.೧. ಪುರುಷ ಮೌಲ್ಯ ಪ್ರತಿಪಾದನೆ

೬.೨. ಸ್ತ್ರೀ ಮೌಲ್ಯ ಪ್ರತಿಪಾದನೆ

೬.೩. ಸ್ಥಾಪಿತವಾದ ಸಾರ್ವಕಾಲಿಕ ಸಾಮಾಜಿಕ ಮೌಲ್ಯಗಳು

ಅಧ್ಯಾಯ – ೬

ಕನ್ನಡ ಜನಪದ ಕಥನಗೀತೆಗಳಲ್ಲಿ ಮೌಲ್ಯ ಪ್ರತಿಪಾದನೆ

ಸಾಮಾನ್ಯವಾಗಿ ಮೌಲ್ಯವೆಂದರೆ ಉಪಯುಕ್ತವಾದ, ಬೆಲೆಯುಳ್ಳ, ಗೌರವಿಸಲ್ಪಡುವ ಎಂದರ್ಥವಾಗುತ್ತದೆ. ಮೌಲ್ಯಗಳು ಮನುಷ್ಯನನ್ನು, ಸಮಾಜವನ್ನು ಸುಧಾರಿಸಿಕೊಳ್ಳಲು ಸಹಾಯಕ ವಾಗುತ್ತವೆ. ಬಾಳಿನಲ್ಲಿ ವ್ಯಕ್ತಿಯ ಅಸ್ತಿತ್ವವನ್ನು, ವಾಸ್ತವತ್ವವನ್ನು ರೂಪಿಸಲು ದಾರಿದೀಪವಾಗಿವೆ. ಮೌಲ್ಯಗಳಿಲ್ಲದ ವ್ಯಕ್ತಿ ಸಮಾಜದಲ್ಲಿ ಗೌರವವನ್ನು ಗಳಿಸಲಾರ. ಗಳಿಸಿದರೂ ಅದು ತಾತ್ಕಾಲಿಕವಾಗಿ ಮಾತ್ರ ಮೌಲ್ಯಗಳಿಂದೊಡಗೂಡಿದ ವ್ಯಕ್ತಿ ಚಿತೆಯೇರಿದ ನಂತರವೂ ಆತನ ಹೆಸರು, ಗೌರವ, ಮನ್ನಣೆ ಇವೆಲ್ಲ ಶಾಶ್ವತವಾಗಿ ನೆಲೆಯೂರುತ್ತವೆ.

ಸಾಮಾನ್ಯವಾಗಿ ಸಂವಹನ ಸಂದರ್ಭದಲ್ಲಿ ಮೌಲ್ಯಯುತ ಮಾತುಗಳನ್ನು ಅನೇಕ ಬಾರಿ ಕೇಳಿರುತ್ತೇವೆ. ಜೊತೆಗೆ ಉತ್ತಮ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಇಚ್ಛಿಸುತ್ತೇವೆ. ಮಾತು ಮೌಲ್ಯಯುತವಾಗಿದ್ದರೆ ವಿಚಾರವಂತರು, ಗೌರವಿಸಲ್ಪಡುವರು ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತೇವೆ. ಆದಕಾರಣ ಮೌಲ್ಯವೆಂಬುದನ್ನು ಪ್ರತಿಯೊಬ್ಬರು ಅಳವಡಿಸಿ-ಕೊಳ್ಳುವುದು ಸೂಕ್ತ.

ಮೌಲ್ಯ ಎಂಬ ಪದವು ನ್ಯಾಯ-ಅನ್ಯಾಯಗಳು, ಹಿಂಸೆ-ಅಹಿಂಸೆಗಳು, ಸತ್ಯ-ಅಸತ್ಯಗಳು, ಧರ್ಮ-ಅಧರ್ಮಗಳು, ವ್ಯಷ್ಟಿ-ಸಮಷ್ಟಿಗಳು, ಒಳಿತು-ಕೆಡಕು ಹೀಗೆ ಹಲವಾರು ಅಂಶಗಳ ಬಗೆಗೆ ತಿಳಿಸುತ್ತದೆ. ಉತ್ತಮ ನಾಗರಿಕರಾಗಲು, ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಮಾನವನಿಗೆ ಮೌಲ್ಯಗಳು ಅತ್ಯಮೂಲ್ಯವಾಗಿವೆ. ವಾಸ್ತವದಲ್ಲಿ ಮೌಲ್ಯಗಳ ಅಪಮೌಲ್ಯೀಕರಣವಾಗುವುದನ್ನು ನೋಡಿದರೆ ಖೇದವೆನಿಸುತ್ತದೆ. ಮನುಷ್ಯನು ಉದಾತ್ತ ಗುರಿಯನ್ನು ಸಾಧಿಸುವಲ್ಲಿ ಮೌಲ್ಯಗಳು ಅತ್ಯಂತ ಸಹಾಯಕವಾಗುವುದರಿಂದ ಮಾನವನ ಬದುಕಿನಲ್ಲಿ ಮೌಲ್ಯಗಳ ಪಾತ್ರ ಪ್ರಮುಖ ವಾದುದಾಗಿದೆ.

ಸಂಸ್ಕೃತಿಯೊಡನೆ ಬೆಸೆದುಕೊಂಡ ಮೌಲ್ಯಗಳನ್ನು ಪ್ರತಿ ಸಂಸ್ಕೃತಿಯ ಮೂಲಕ ಕಟ್ಟಿಕೊಳ್ಳುವ ಅವಶ್ಯಕತೆಯನ್ನು ಕೂಡ ಮೌಲ್ಯ ಪ್ರತಿಪಾದನೆಯಲ್ಲಿ ಪ್ರಮುಖವಾಗಿದೆ. ಹಾಗೆಂದರೆ ಪ್ರತಿ ಸಂಸ್ಕೃತಿ ಎಂದರೇನು ಎಂಬ ಸಂಶಯ ಭಾವ ಉದ್ಭವಿಸುತ್ತದೆ. "ಪ್ರತಿ ಸಂಸ್ಕೃತಿಯ ಅನೇಕ ಸಂಗತಿಗಳು ಸಮುದಾಯಗಳ ಬಾಳಿನಲ್ಲಿ ಈಗಾಗಲೇ ಇದ್ದು ಅವನ್ನು ಕಂಡುಕೊಳ್ಳುವುದು; ಅವುಗಳ ಜೊತೆ ವರ್ತಮಾನ ಪ್ರಜ್ಞೆಯೂ ಸಮಾಜವಾದಿ

ಸಂವೇದನೆಯೂ ಆಧುನಿಕವಾದ ವಿಚಾರವೂ ಬಿರುಕಿಲ್ಲದಂತೆ ಬೆಸೆದುಕೊಳ್ಳುವುದರ ಬಗ್ಗೆ ಚಿಂತಿಸುವುದು"[೧] ಎಂದರ್ಥ. ಹೀಗೆ ಪ್ರತಿ ಸಂಸ್ಕೃತಿಯ ನೆಲೆಯು ವೈಚಾರಿಕ ನೆಲೆಯಲ್ಲಿ ಸೂಕ್ಷ್ಮವಾಗಿ ಸಮುದಾಯಗಳ ಬದುಕನ್ನು ಅರ್ಥಮಾಡಿಕೊಂಡು ಶೋಧಿಸುವ ಕಾರ್ಯ ಇಲ್ಲಿ ನಡೆಯುತ್ತದೆ. ಹಾಗೆಯೇ ಕನ್ನಡ ಜನಪದ ಕಥನಗೀತೆಗಳಲ್ಲಿ ಕಂಡು ಬಂದ ಅಂಧಕಾರದ ಮೌಲ್ಯಗಳನ್ನು ಕೆಡಹುತ್ತ ಹೊಸ ಸಮುದಾಯ ರೂಢಿಸಿಕೊಂಡು ಸಮಾನ ನೆಲೆಯನ್ನು ಕಟ್ಟಿಕೊಳ್ಳುವ ಮುಖಾಂತರ ಹೊಸ ಆಲೋಚನೆಯತ್ತ ಹೆಜ್ಜೆ ಹಾಕಬೇಕಾಗಿದೆ. ಆದ್ದರಿಂದ ಇವುಗಳಲ್ಲಿ ಕಂಡು ಬಂದ ಮೌಲ್ಯಗಳನ್ನು ಬಿರುಕಿಲ್ಲದೆ ಚಿಂತನೆಗೈಯುವುದರ, ಗಮನಿಸುವುದರ ಮೂಲಕ ಪ್ರಗತಿಗೆ ನಾಂದಿಯಾಗಲು ಪ್ರತಿ ಸಂಸ್ಕೃತಿಯ ನೆಲೆ ಸಹಾಯವಾಗುತ್ತದೆ.

ಜನರು ಪ್ರಧಾನ ಸಂಸ್ಕೃತಿಯಲ್ಲಿ ಹುದುಗಿರುವ ಹಲವು ಮೌಲ್ಯಾದರ್ಶಗಳನ್ನು ತಮ್ಮಲ್ಲಿ ರೂಢಿಸಿಕೊಂಡು ಬಂದಿರುತ್ತಾರೆ. ಅಂತಹ ಮೌಲ್ಯಾದರ್ಶಗಳನ್ನು ಪ್ರತಿಸಂಸ್ಕೃತಿಯ ನೆಲೆಯಲ್ಲಿ ಅವಲೋಕನ ಮಾಡಿನೋಡುವುದು ಸೂಕ್ತವಾದ ಮಾರ್ಗವಾಗಿದೆ. ಏಕೆಂದರೆ ಪ್ರಭುತ್ವಗಳು ಅಧಿಕಾರ ಶಕ್ತಿಯಿಂದ ಹೇರಲ್ಪಟ್ಟ ಹಲವಾರು ಅರ್ಥರಹಿತ ಮೌಲ್ಯಗಳು ಕಥನಗೀತೆಗಳಲ್ಲಿ ಕಂಡುಬರುತ್ತವೆ. ಅಂತಹ ಮೌಲ್ಯಗಳನ್ನು ಗುರುತಿಸಿ ಅವುಗಳನ್ನು ಸಂಕುಚಿತಗೊಳಿಸಿ ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಪಾತ್ರ ವಹಿಸುತ್ತಿರುವ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಾರ್ಯವನ್ನು ಇಲ್ಲಿ ಮಾಡಲಾಗಿದೆ. ಹಾಗೂ ಹೊಸ ಮೌಲ್ಯಗಳಿಗೆ ಭದ್ರಬುನಾದಿ ಹಾಕಿ ಚಾಲನೆ ನೀಡಲು ಪ್ರಯತ್ನಿಸಲಾಗಿದೆ. ಒಟ್ಟಿನಲ್ಲಿ ಮೌಲ್ಯಗಳು ಪ್ರಾಚೀನ ಕಾಲದಿಂದಲೂ ಹಲವಾರು ರೀತಿಯಲ್ಲಿ ರೂಪಿಸಲ್ಪಟ್ಟಿದ್ದು, ಅವುಗಳಲ್ಲಿ ಕೆಲವು ಸರ್ವಕಾಲಿಕ ಯೋಗ್ಯವಾಗಿ ಬಿಂಬಿತವಾದರೆ, ಇನ್ನೂ ಕೆಲವು ಶಾಸನಬಾಹಿರ ಆಗಿ ಬಿಂಬಿತವಾಗುತ್ತವೆ. ಸಮಕಾಲಿಕ, ಉಪಯುಕ್ತವಾಗುವ ಮೌಲ್ಯಗಳನ್ನು ವಿಶ್ಲೇಷಿಸುವುದರೊಂದಿಗೆ ಶಾಸನಬಾಹಿರ ಆಗಿರುವಂತಹ ಕೆಲವೊಂದು ಕಥನಗೀತೆಗಳಲ್ಲಿಯ ಮೌಲ್ಯಗಳನ್ನು ಕೂಡ ಇಲ್ಲಿ ವಿವರಿಸಲಾಗಿದೆ.

ಸತ್ಯ, ಅಹಿಂಸೆ, ಆಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಮುಂತಾದ ಆದರ್ಶಗಳಿಗೆ ಮಾನವೀಯ ಮೌಲ್ಯಗಳೆಂದು ಕರೆಯುತ್ತೇವೆ. ಮೌಲ್ಯಗಳಲ್ಲಿ ಶಾರೀರಿಕ, ಆರ್ಥಿಕ, ಧಾರ್ಮಿಕ, ಚಾರಿತ್ರಿಕ, ಬೌದ್ಧಿಕ, ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳು ಸರ್ವಶ್ರೇಷ್ಠವೆನಿಸಿಕೊಳ್ಳುತ್ತವೆ.

---

೧. ಮರದೊಳಗಣ ಕಿಚ್ಚು : ರಹಮತ್ ತರೀಕೆರೆ, ಪು.೧೮೮

ಮನುಷ್ಯನ ಆತ್ಯಂತಿಕ ಗುರಿಯಾದ ಮೋಕ್ಷವನ್ನು ಸಂಪಾದಿಸುವಲ್ಲಿ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳು ಅತ್ಯವಶ್ಯವಾಗಿರುವ ಕಾರಣ ಇವು ಸರ್ವಶ್ರೇಷ್ಠ ಮೌಲ್ಯಗಳಾಗಿ ಗೋಚರಿಸುತ್ತವೆ.

ಆಧ್ಯಾತ್ಮಕ್ಕೂ ನೈತಿಕ ಮೌಲ್ಯಗಳಿಗೂ ಅನ್ಯೋನ್ಯವಾದ ಸಂಬಂಧವಿದೆ. ಆಧ್ಯಾತ್ಮ ವೆಂದರೆ ಬರೀ ಆತ್ಮ ಸೃಷ್ಟಿ ಮತ್ತು ಪರಮಾತ್ಮನನ್ನು ಕುರಿತು ಚಿಂತಿಸುವುದಷ್ಟೇ ಅಲ್ಲ, ಮನುಷ್ಯನು ನೈತಿಕ ಜೀವನ ನಡೆಸುತ್ತ ಪರಮ ತತ್ವವನ್ನು ಅರಿಯುವುದಾಗಿದೆ. ಪಾಶ್ಚಾತ್ಯ ಆಧ್ಯಾತ್ಮವಾದಿಗಳು ಸದಾಚಾರ ಅಥವಾ ನೈತಿಕತೆಯನ್ನು ಆಧ್ಯಾತ್ಮವೆನ್ನುತ್ತಾರೆ. ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳದ ಆಧ್ಯಾತ್ಮ ಅಪೂರ್ಣ. ಹಾಗೆಯೇ ಆಧ್ಯಾತ್ಮವಿಲ್ಲದ ನೈತಿಕ ಮೌಲ್ಯಗಳೂ ವ್ಯರ್ಥವೆನಿಸುತ್ತವೆ. ಆಧ್ಯಾತ್ಮ ಮತ್ತು ನೈತಿಕ ಮೌಲ್ಯಗಳು ಪರಸ್ಪರ ಪೂರಕವಾಗಿದ್ದು, ಆತ್ಮ ಸಾಕ್ಷಾತ್ಕಾರದ ಮೊದಲ ಮೆಟ್ಟಿಲು ನೈತಿಕತೆಯಾಗಿದೆ. ಮಾನವನಲ್ಲಿ ನೈತಿಕತೆ ಒಂದಿದ್ದರೆ ಮೌಲ್ಯಗಳು ಅದರ ಹಿಂದೆ ಇದ್ದೇ ಇರುತ್ತವೆ.

ವಾಸ್ತವ ದಿನಮಾನದಲ್ಲಿ ಸಾಮಾಜಿಕ ಮೌಲ್ಯಗಳನ್ನು ಪುನರ್ ವಿಮರ್ಶೆಗೆ ಒಳಪಡಿಸಿ ನೋಡುತ್ತಿರುವುದು ಮಹಿಳಾ ಸಾಹಿತ್ಯದಲ್ಲಿ ಆದಂತಹ ಒಂದು ಅಪೂರ್ವ ಬೆಳವಣಿಗೆಯೇ ಎನ್ನಬಹುದು. ಪ್ರಾಚೀನ ಕಾಲದಲ್ಲಿ ಮಹಿಳೆಯ ಮೇಲೆ ವಿಧಿಸಲಾಗಿದ್ದ ಹಲವಾರು ಮೌಲ್ಯಗಳು ಇಂದು ಸವೆದು, ಅವರನ್ನು ಸಂಪ್ರದಾಯ–ಪರಂಪರೆ–ಮೂಢ ನಂಬಿಕೆಗಳೆಂಬ ಸಂಕೋಲೆಯೊಳಗಿಂದ ಬಿಡುಗಡೆಗೊಳಿಸುವ ಶಕ್ತಿ, ಶ್ರೇಯಸ್ಸು ಮಹಿಳಾ ಸಾಹಿತ್ಯಕ್ಕೆ ಸಲುತ್ತದೆ. ಜನಪದ ಕಥನಗೀತೆಗಳಾದ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಕಥನಗೀತೆ ಗಳಲ್ಲಿಯೂ ಮೌಲ್ಯಗಳು ಅನಾವರಣವಾಗಿರುವುದನ್ನು ಕಾಣುತ್ತೇವೆ. ಆದರೆ ಅವು ಭಿನ್ನ ರೀತಿಯಲ್ಲಿ ಕಂಡು ಬರುತ್ತವೆ. ಅವುಗಳನ್ನು ಕೆಲವೊಂದು ಕಥನಗೀತೆಗಳ ಮೂಲಕ ಇಲ್ಲಿ ವಿಮರ್ಶಿಸಲಾಗಿದೆ.

ಜನಪದ ಸಾಹಿತ್ಯದಲ್ಲಿ ಪುರಾಣಕ್ಕೆ ಸಂಬಂಧಿಸಿದಂತೆ ಹಲವಾರು ಮಹಿಳಾ ಪಾತ್ರಗಳನ್ನು ಕಾಣಬಹುದು. ಇವು ರಾಮಾಯಣ–ಮಹಾಭಾರತ ಕಾವ್ಯಗಳಲ್ಲಿ ಬರುವ ಪಾತ್ರಗಳಾಗಿವೆ. ಜೊತೆಗೆ ಸಾಮಾನ್ಯ ಜನರ ಬದುಕಿನ ನೆಲೆಗೆ ಹೆಚ್ಚು ಹತ್ತಿರದ ಸಂಬಂಧವನ್ನು ಪಡೆದುಕೊಂಡು ಚಿತ್ರಿತವಾಗಿವೆ. ಪೌರಾಣಿಕ ಅಂಶಗಳು ಶಿಷ್ಟ ಸಾಹಿತ್ಯದಲ್ಲಿ ಬರುವ ಪೌರಾಣಿಕ ಅಂಶಗಳಿಗಿಂತ ಭಿನ್ನಾಗಿದ್ದು, ಬೀಜವೃಕ್ಷ ನ್ಯಾಯದಂತೆ ಬಿಂಬಿತವಾಗಿ ಮೂಲವನ್ನು ಹುಡುಕುವುದು ಕಷ್ಟವೆನಿಸುತ್ತದೆ. ಕರ್ನಾಟಕದಾದ್ಯಂತ ಮಹಾಭಾರತ, ರಾಮಾಯಣ, ಭಾಗವತಕ್ಕೆ ಸಂಬಂಧಿಸಿ– ದಂತೆ ಕಥೆ, ಕಥನಗೀತೆಗಳನ್ನು ಕಾಣಬಹುದು. ಜನಪದರ ದೃಷ್ಟಿಯಲ್ಲಿ ರಾಮಾಯಣ, ಮಹಾಭಾರತಗಳೆರಡು ಗೋಳಿನ ಕಥೆಗಳಾಗಿದ್ದವು ಎನ್ನುವುದಕ್ಕೆ

ಜನಪದ ಗೀತೆಯೊಂದರಲ್ಲಿ ಹೀಗೆ ಹೇಳುತ್ತಾರೆ, "ರಾಮಾಯಣ ಕೇಳಿ ಕಣ್ಣೀರ ಕೋಡಿ ಹರಿದಾವು, ಮಹಾಭಾರತವ ಕೇಳಿ ದುಃಖ ಉಮ್ಮಳಿಸಿ ಬಂತು."[೧] ಹೀಗಾಗಿ ಜನಪದರು ತಮ್ಮ ಬದುಕಿನಲ್ಲಿ ಕಂಡುಂಡ ಕಷ್ಟ-ನಷ್ಟಗಳನ್ನು, ನೋವು-ನಿರಾಸೆಗಳನ್ನು ಸರಿಪಡಿಸಿಕೊಳ್ಳಲು ಪೌರಾಣಿಕ ಕಥೆಗಳಲ್ಲಿ ಬರುವ ಕೆಲವೊಂದು ಸ್ತ್ರೀ ಪಾತ್ರಗಳನ್ನು ಆಧಾರವಾಗಿಟ್ಟುಕೊಳ್ಳುತ್ತ ಬಂದಿದ್ದಾರೆ.

ಉದಾ: ಸೀತಾಮಾತೆ, ಸುಭದ್ರೆ, ಕೊಂತೆಮ್ಮ ಇತ್ಯಾದಿ. ಜನಪದರು ಹುಟ್ಟಿನಿಂದ ಕಥಾಪ್ರೀಯರಾದ ಕಾರಣ ಪೌರಾಣಿಕ ಕೃತಿಗಳಲ್ಲಿ ಬರುವ ಕಥೆ, ಸನ್ನಿವೇಶ, ಪಾತ್ರಗಳನ್ನು ತಮಗೆ ಬೇಕಾದಂತೆ ಬದಲಾಯಿಸಿಕೊಳ್ಳುತ್ತಾ ಬಂದಿದ್ದಾರೆ. ಜನಸಾಮಾನ್ಯರ ಹಾಗೆಯೇ ಪೌರಾಣಿಕ ವ್ಯಕ್ತಿಗಳು ಬಾಳಿ ಬದುಕಿದ್ದರು ಎಂಬುದರ ಅರಿವುಂಟಾಗುತ್ತದೆ. ಅಲ್ಲದೇ ಭಾರತೀಯ ಜೀವನ ಮೌಲ್ಯಗಳಲ್ಲಿರುವ ದೃಢವಾದ ನಂಬಿಕೆಗಳನ್ನು ಇವು ಸಾರುತ್ತವೆ. ರಾಮ, ಲಕ್ಷ್ಮಣ, ಸೀತೆ, ಕರ್ಣ, ಧರ್ಮರಾಯ, ಕುಂತಿ, ದ್ರೌಪದಿ, ಅರ್ಜುನ, ಅಭಿಮನ್ಯು ಮುಂತಾದ ಸ್ತ್ರೀ-ಪುರುಷ ಪಾತ್ರಗಳ ವೀರ, ತ್ಯಾಗ, ಶೀಲದ ಗುಣ ಹಾಗೂ ಅವರ ಆದರ್ಶಗಳು ಜನಪದರ ಮೇಲೆ ಗಾಢವಾದ ಪರಿಣಾಮವನ್ನು ಬೀರಿದವು ಎಂಬುದಕ್ಕೆ ಜನಪದರು ಸೃಷ್ಟಿಸಿದ ಸಾಹಿತ್ಯವೇ ಸಾಕ್ಷಿ.

ಪೌರಾಣಿಕ ಕಥನಗೀತೆಗಳಲ್ಲಿ ಗೊಂಡ ಮಾಯಣ, ವಾಲ್ಮೀಕಿ ರಾಮಾಯಣ, ತಂಬೂರಿಯವರ ರಾಮಾಯಣ ಎಂಬುದನ್ನು ಕಾಣುತ್ತೇವೆ. ಗೊಂಡರಾಮಾಯಣವು ಅತ್ಯಂತ ಸರಳವಾಗಿ ಮುನ್ನಡೆಯುತ್ತಾ ಕಂಡದ್ದು ಕಂಡ ಹಾಗೆ ಹೇಳುವ ಬಗೆಯನ್ನು ಕಾಣುತ್ತೇವೆ. ಇಲ್ಲಿ ಗೊಂಡರಾಮಾಯಣದ ದಶರಥನು ವಾಲ್ಮೀಕಿಯ ದಶರಥನಂತೆಯೇ ಬೇಟೆಗೆ ಹೊರಡುವ ಸಂದರ್ಭವನ್ನು ಕಾಣುತ್ತೇವೆ. ಕಾರಣ ಪ್ರಾಣಿಗಳನ್ನು ಬೇಟೆಯಾಡಿ ತಂದು ಅಡುಗೆ ಮಾಡುವುದಕ್ಕೆ ದಶರಥನು ಕೋವಿಯನ್ನು ಹಿಡಿದು ಹೊರಟಿರುವಾಗ ಕೆರೆಯಲ್ಲಿ ನೀರು ಕುಡಿಯುತ್ತಿರುವ ಆನೆಗೆ ಗುಂಡು ಹಾರಿಸುತ್ತಾನೆ. ಆಗ ಆನೆ ಶಾಪ ಕೊಡುತ್ತದೆ. "ನಿನ್ನ ಮಗನಿಂದಲೇ ನೀನು ಸಾಯುತ್ತೀಯೆ"[೨] ಎಂದಾಗ ದಶರಥನು ನನಗಿನ್ನೂ ಮಗನೇ ಹುಟ್ಟಿಲ್ಲ. ಇನ್ನು ಸಾಯುವುದೆಲ್ಲಿಂದ ಬಂತು ಎಂದು ಉದಾಸೀನತೆಯಿಂದ ಮಾತನಾಡುತ್ತಾನೆ.

---

೧. ಜನಪದ ಕಥನಗೀತೆಗಳಲ್ಲಿ ಮಹಿಳೆ : ಒಂದು ಸಾಂಸ್ಕೃತಿಕ ಅಧ್ಯಯನ : ಎಂ.ಕೆ. ರುಕ್ಮಿಣಿ, ಪು.೨೨೪

೨. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.xxxiii

ವಾಲ್ಮೀಕಿ ರಾಮಾಯಣದಲ್ಲಿ ದಶರಥ ಆನೆಯೆಂದು ಭ್ರಮಿಸಿಕೊಳ್ಳುವುದು ಮುನಿಕುಮಾರ ಎನಿಸಿದ ಶ್ರವಣಕುಮಾರನನ್ನು. ಅಂದಿನ ಕಾಲದಲ್ಲಿ ಬ್ರಾಹ್ಮಣರಲ್ಲದವರು (ಕ್ಷತ್ರಿಯರು) ತಪಸ್ವಿಗಳಾಗಲು ಅವಕಾಶವಿರಲಿಲ್ಲ. ಹಾಗೆ ಬಯಸಿದವರಿಗೆ ರಾಜರು ಯಾವುದೋ ವಿಧದಲ್ಲಿ ಕೊಲ್ಲುತ್ತಿದ್ದರು ಎಂಬುದನ್ನು ಶ್ರವಣಕುಮಾರನ ಹತ್ಯೆ, ಶಂಬೂಕನ ಹತ್ಯೆ ಇವುಗಳ ಮುಖಾಂತರ ತಿಳಿದುಕೊಳ್ಳಬಹುದು.

ಉದಾ: ಶ್ರವಣಕುಮಾರನ ಹತ್ಯೆ : ದಶರಥ ಮಹಾರಾಜನಿಗೆ ಬೇಟೆಯಾಡುವ ಹವ್ಯಾಸ. ಆತನು ಕತ್ತಲಲ್ಲಿ ಬಾಣ ಪ್ರಯೋಗ ಮಾಡುವ ಶಬ್ದವೇದಿ ವಿದ್ಯೆಯನ್ನು ಕಲಿತಿದ್ದನು. ಒಂದು ದಿನ ಸಂಜೆ ಬೇಟೆಗೆಂದು ಅರಣ್ಯಕ್ಕೆ ಹೋಗಿದ್ದ. ನದಿಯ ದಡದಲ್ಲಿ ಮೃಗವು ನೀರು ಕುಡಿಯಲು ಬರುವುದನ್ನು ದಾರಿ ಕಾಯುತ್ತಾ ಕುಳಿತಿರುವಾಗ ಅದೇ ಸಮಯಕ್ಕೆ ಶ್ರವಣಕುಮಾರನು ತನ್ನ ಕುರುಡು ತಂದೆ-ತಾಯಿಯರನ್ನು ಕಾವಲಿಯಲ್ಲಿ ಕುಳಿಸಿಕೊಂಡು ಹೆಗಲ ಮೇಲೆ ಹೊತ್ತುಕೊಂಡು ಬಂದನು. ಒಂದು ಮರದ ಅಡಿಯಲ್ಲಿ ಅವರನ್ನು ಇಳಿಸಿ ನೀರು ತರುವುದಕ್ಕೆಂದು ಕೊಡ ಹಿಡಿದುಕೊಂಡು ನದಿ ತೀರಕ್ಕೆ ಹೋದ. ನದಿಯ ನೀರು ಕೊಡದೊಳಗೆ ಸೇರುವಾಗ ಶಬ್ದವು ಹೊರಬಂತು. ಮತ್ತೊಂದು ದಡದಲ್ಲಿದ್ದ ದಶರಥನು ಇದು ಮೃಗವೇ ಇರಬೇಕೆಂದು ಶಬ್ದವೇದಿ ಬಾಣಪ್ರಯೋಗ ಮಾಡಿದನು. ಅದು ನೇರವಾಗಿ ಶ್ರವಣಕುಮಾರನಿಗೆ ಬಂದು ತಾಕಿತು. ತಂದೆ-ತಾಯಿಯನ್ನು ದೇವರಂತೆ, ಹೂವಿನಂತೆ ಹೊತ್ತು ಪುಣ್ಯ ಸ್ಥಳವನ್ನೆಲ್ಲ ಸುತ್ತಿ ರಕ್ಷಿಸುತ್ತಾ ಬಂದ ಶ್ರವಣಕುಮಾರ ಮರೆಯಾದನು. ತದನಂತರ ದಶರಥನು ನಡೆದ ವಿಷಯವನ್ನೆಲ್ಲ ಶ್ರವಣಕುಮಾರನ ತಂದೆ-ತಾಯಿಗೆ ತಿಳಿಸಿದನು. ಅಪಾರವಾಗಿ ನೊಂದ ವೃದ್ಧರು ನಿನಗೂ ಮುಂದೆ ಪುತ್ರ ವಿಯೋಗವಾಗಲಿ ಎಂದು ಶಾಪ ಕೊಟ್ಟರು. ದಶರಥನು ತನ್ನ ಮುಪ್ಪಿನ ಕಾಲದಲ್ಲಿ ವನವಾಸದಲ್ಲಿದ್ದಂತಹ ಮಕ್ಕಳನ್ನು ನೆನಯುತ್ತ ಪ್ರಾಣ ಬಿಡಬೇಕಾಯಿತು.

ಇದರಿಂದ ನಮಗೆ ತಿಳಿಯುವುದೇನೆಂದರೆ, ಅಜ್ಞಾನವೆಂಬ ಅಂಧಕಾರದಲ್ಲಿ ಮನುಷ್ಯ ಮುಳುಗಿ ಎಂದಿಗೂ ಮುಂದೆ ಹೆಜ್ಜೆ ಇಡಬಾರದು. ಕಂಡದ್ದು ಸರಿಯೋ ತಪ್ಪೋ ಎಂದು ಸೂಕ್ಷ್ಮಾವಲೋಕನದಿಂದ ನೋಡಿ ಸುಜ್ಞಾನದ ಪ್ರಕಾಶದಲ್ಲಿ ಜಾಗ್ರತೆಯಿಂದ ನಿರಂತರವಾಗಿ ಮುನ್ನಡೆದು ಆನಂದ ಹಂದರವನ್ನು ತಲುಪಬೇಕು. ನಾವು ಮಾಡುವ ಪ್ರತಿಯೊಂದು ಕರ್ಮಗಳಿಗೂ ಒಳ್ಳೆಯ, ಕೆಟ್ಟ ಫಲಗಳೆಂದು ಇದ್ದೇ ಇರುತ್ತವೆ. ಆದಕಾರಣ ನಮ್ಮ ಸಕಲ ಸದ್ಗುಣಗಳು ಉತ್ತಮ ಭವಿಷ್ಯದತ್ತ ಕೊಂಡೊಯ್ಯುತ್ತವೆ. ಎಂಬುದನ್ನು ಅರಿತು ಬಾಳಬೇಕು.

ಇನ್ನೊಂದು ರೀತಿಯಲ್ಲಿ ಅವಲೋಕಿಸಿದರೆ ಶ್ರವಣಕುಮಾರನನ್ನು ರಾಜ ದಶರಥ ಮೊದಲೇ ತಯಾರಿಯಿಂದ ಹೊಂಚು ಹಾಕಿ ಬೇಟೆಯಾಡಿದನು ಎನಿಸುತ್ತದೆ. ಏಕೆಂದರೆ ಬ್ರಾಹ್ಮಣನಲ್ಲದ ಶ್ರವಣಕುಮಾರನು ಶಬ್ದವೇದಿ ವಿದ್ಯೆಯಲ್ಲಿ ಮೇಲಿರುವ ಕಾರಣ ಆತನನ್ನು ಕೊನೆಗಾಣಿಸುವ ಹುನ್ನಾರ ಇರಬೇಕು.

ಮಹಿಳೆಯ ಮೌಲ್ಯಗಳನ್ನು ಅವಲೋಕಿಸಿದಾಗ ಪ್ರತಿಯೊಂದು ಹಂತಗಳಲ್ಲಿ ಮಹಿಳೆಯನ್ನು ಪುರುಷನ ಅಧೀನದಲ್ಲಿರಿಸಿ ಆಕೆಯ ಅಸ್ತಿತ್ವ ಮತ್ತು ಸ್ವತಂತ್ರವನ್ನು ದೂರಿರಿಸಿದ್ದವು. ತ್ಯಾಗ, ಸೇವೆ ಇತ್ಯಾದಿ ಅಂಶಗಳನ್ನು ಅನುಸರಿಸಿಕೊಂಡು ಬಾಳುವುದೊಂದೇ ಸ್ತ್ರೀ ಮೌಲ್ಯವಾಗಿತ್ತು. ಇಂತಹ ಪರಂಪರೆಯಲ್ಲಿ ಮೌಲ್ಯದ ಸೃಷ್ಟಿ ಹೇಗಿದೆ ಎಂಬುದನ್ನು ಲಕ್ಷ್ಮೀಶನು ಕಟ್ಟಿಕೊಟ್ಟ ಸೀತೆಯನ್ನು ಇಲ್ಲಿ ಉದಾಹರಿಸಬಹುದು. 'ಜೈಮಿನ ಭಾರತ'ದ ಸೀತಾ ಪರಿತ್ಯಾಗದ ಸಂದರ್ಭಕ್ಕೂ ಕಾಳಿದಾಸನ 'ರಘುವಂಶ'ದಲ್ಲಿನ ಅದೇ ಸನ್ನಿವೇಶಕ್ಕೂ ಹೆಚ್ಚಿನ ವ್ಯತ್ಯಾಸವೇನಿಲ್ಲ. ಇವರು ಇಬ್ಬರಿಗೂ ಮೂಲವಾಗಿರುವ ವಾಲ್ಮೀಕಿಯ ರಾಮಾಯಣದಲ್ಲಿ ಸೀತೆ ತನ್ನನ್ನು ತ್ಯಜಿಸಿದ ರಾಮನು ತನಗೆಸಗಿದ ಅನ್ಯಾಯವನ್ನು ಕೋಪ, ದುಃಖಗಳಿಂದ ಹೊರ ಹಾಕಿ ಕೊನೆಯಲ್ಲಿ ರಾಮನು ಅಪಕೀರ್ತಿಗೆ ಹೆದರಿ ತನ್ನನ್ನು ತ್ಯಜಿಸಿದನು, ಅವನ ಪತ್ನಿಯಾದ್ದರಿಂದ ತಾನೂ ಅವನಿಗೆ ಅಪಕೀರ್ತಿಯು ಬರದಂತೆ ವರ್ತಿಸಬೇಕಾದ್ದು ತನ್ನ ಧರ್ಮವೆಂದು ಆ ತ್ಯಕ್ತ ಸ್ಥಿತಿಯನ್ನು ಒಪ್ಪಿರುವುದಾಗಿ ತನ್ನ ಸಂದೇಶದಲ್ಲಿ ಹೇಳಿದ್ದಾಳೆ.[೪] ಇಲ್ಲಿ ಸೀತೆಯ ಸ್ಥಿತಿ ಕರುಣಾಜನಕವಾಗಿ ವ್ಯಕ್ತವಾಗಿದೆ. ಏಕೆಂದರೆ ತನ್ನಲ್ಲಿ ಯಾವ ತಪ್ಪೂ ಇಲ್ಲವೆಂದು ಅರಿತಿದ್ದರೂ ಸಮಾಜದ-ಗಂಡನ ನಿಂದನೆಗೆ ಒಳಗಾಗುತ್ತಾಳೆ. ರಾಮನಿಗೆ ಅಪಕೀರ್ತಿ ಬರಲು ತಾನೇ ಕಾರಣಳೆಂದುಕೊಂಡು ತನ್ನ ದುಃಖ, ತನಗಾದ ಅನ್ಯಾಯವನ್ನೆಲ್ಲ ಹತ್ತಿಕ್ಕಿ, ತಾನು ರಾಮನ ಪತ್ನಿಯಾಗಿರುವ ಕಾರಣ ಆತನಿಗೆ ಅಪಕೀರ್ತಿ ಬರದ ಹಾಗೇ ನೋಡಿಕೊಳ್ಳಬೇಕಾದದ್ದು ಧರ್ಮ ಎಂದು ತನ್ನನ್ನೇ ದೂಷಿಸಿಕೊಳ್ಳುತ್ತಾಳೆ. ಇಲ್ಲಿ ತನ್ನ ತಪ್ಪಿಲ್ಲದಿದ್ದರೂ ದುಃಖ-ಕಷ್ಟಗಳಿಗೆ ಗುರಿಯಾಗುವುದು ಮಾತ್ರ ಸೀತೆಯಾಗಿದ್ದಾಳೆ.

ಅದೇ ಲಕ್ಷ್ಮೀಶನು ಮುಂದೆ "ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ, ಕಡು ಪಾತಕಂಗೈದು ಪೆಣ್ಣಾಗಿ ಸಂಭವಿಸಿದೊಡಲಂ ಪೊರೆವುದೆನ್ನೊಳಪರಾಧಮುಂಟು"[೫] ಎಂದು ಸೀತೆಯು ತಾನು ಮಹಿಳೆಯಾಗಿ ಹುಟ್ಟಿರುವುದು, ಬದುಕಿರುವುದು ಪಾಪ, ತಪ್ಪು. ರಾಘವ (ರಾಮ)ನಲ್ಲಿ ಏನೂ ತಪ್ಪಿಲ್ಲ ಎಂದು ತನ್ನ ಸ್ತ್ರೀತ್ವದ ಬಗೆಗೆಲ್ಲ ತಾನೇ ಜವಾಬ್ದಾರಳೂ,

೪. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೨೪೦,೨೪೧
೫. ಅದೇ, ಪು.೨೪೧

ಕಾರಣಳೂ ಎಂಬ ಸಮಾಜಪರ ಮೌಲ್ಯವನ್ನು ಪಾಲಿಸಿ ಸೀತಾಮಾತೆ ಎಂದೆನಿಸಿಕೊಂಡಿದ್ದಾಳೆ. ಇಂದಿಗೂ ಕೂಡ ಎಲ್ಲರ ಹೊಗಳಿಕೆಗೆ ಪಾತ್ರಳಾಗಿದ್ದಾಳೆ. ಇದೆಲ್ಲಾ ಸಿಗಬೇಕಾದರೆ ತನ್ನ ನೋವು-ಸಂಕಟ ಹತ್ತಿಕ್ಕಿಕೊಂಡು ಬದುಕಿದಾಗ ಮಾತ್ರ ಸಾಧ್ಯ. ಇಲ್ಲದಿದ್ದರೆ ಆಕೆ ಸಮಾಜದ ಕಣ್ಣಿಗೆ ರಾಕ್ಷಸಿಯಾಗಿ ಕಂಡು ಬರುತ್ತಾಳೆ.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯ ಮೌಲ್ಯಗಳು ಅನೇಕ ಶತಮಾನಗಳವರೆಗೆ ಪ್ರಾಚೀನ ಕಾಲದಿಂದ ಬಂದಂತಹ ರೀತಿಯಲ್ಲಿಯೇ ನೆಲೆಯೂರಿದ್ದವು. "ಸಾಂಸ್ಕೃತಿಕವಾಗಿ ಸಮಾಜವು ಸ್ಥಿತ್ಯಂತರವನ್ನು ಮೌಲ್ಯ ವಿಘಟನೆಯನ್ನು ಹೊಂದುವಂತಹದ್ದು ಭಾರತದ ನವೋದಯದ ಕಾಲದಲ್ಲಿ"[೬] ಎಂಬುದನ್ನು ಅವಲೋಕಿಸಿದಾಗ ಇದರ ಪೂರ್ವದಲ್ಲಿ ಸಂಪ್ರದಾಯದ ಸುಳಿಯಲ್ಲಿ ಶ್ರೇಣೀಕೃತ ವ್ಯವಸ್ಥೆಗಳೊಂದಿಗೆ ಮಹಿಳೆಯು ಸಿಲುಕಿಯೇ ಜೀವನವನ್ನು ಸಾಗಿಸುತ್ತಿದ್ದಳೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಸ್ತ್ರೀ ಸುಧಾರಣಾ ಚಳುವಳಿಯು ತಲೆಯೆತ್ತಿ ಸ್ತ್ರೀ ಸಂಬಂಧಿತವಾದ ಪುರಾತನ ಮೌಲ್ಯಗಳು ಪ್ರಶ್ನಿತವಾಗತೊಡಗಿ, ಅವುಗಳನ್ನು ಪ್ರಶ್ನಿಸುತ್ತ, ಅವುಗಳಿಂದಾಗುವ ಪೂರಕ ಹಾಗೂ ಮಾರಕ ಅಂಶಗಳನ್ನು ವಿಶ್ಲೇಷಿಸತೊಡಗಿದವು.

ಪುರಾತನ ಮೌಲ್ಯಗಳನ್ನು ಪ್ರಶ್ನಿಸುವ ಕಾಲ ಏಕೆ ಒದಗಿ ಬಂದಿಂತೆಂದರೆ ವೈಚಾರಿಕತೆ, ಶಿಕ್ಷಣದ ಅರಿವು ಹೀಗೆ ಹಲವಾರು ಪ್ರಗತಿಪರ ವಿಚಾರಗಳು ಮಾನವನನ್ನು ಕಾಡತೊಡಗಿದಾಗ ಪರಿಹಾರವನ್ನು ಹುಡುಕಲು ಪ್ರಯತ್ನಿಸಿದವು ಎನಿಸುತ್ತದೆ. ಅಂದಿನಿಂದ ಮೌಲ್ಯಗಳನ್ನು ಹೊಸ ಆಯಾಮಗಳಲ್ಲಿ ಅರ್ಥೈಸಿಕೊಳ್ಳಲು ಹೆಜ್ಜೆಯಿಟ್ಟಿರಬಹುದು. ಹಾಗೂ ಒಂದು ಕಾಲದ ಕೆಲವೊಂದು ಪ್ರಧಾನ ಮೌಲ್ಯಗಳು ಮತ್ತೊಂದು ಕಾಲಕ್ಕೆ ಅಪ್ರಧಾನವಾದಾಗ ಸಮಾಜದಲ್ಲಿ ಹಲವಾರು ಪ್ರಶ್ನೆಗಳು ಕಾಡತೊಡಗಿ ಅವುಗಳ ಸುಧಾರಣೆಗೆ ಹವಣಿಸುತ್ತಾರೆ.

ಜನಪದ ಸಮಾಜದಲ್ಲಿನ ಮೌಲ್ಯಗಳು ಶಿಷ್ಟ ಸಮಾಜದ ಮೌಲ್ಯಗಳಿಗಿಂತ ಭಿನ್ನವಾಗಿ ಕಂಡುಬರುತ್ತವೆ. ವ್ಯಕ್ತಿ ನಿಷ್ಠವಾಗಿರದೇ, ಸಮಷ್ಟಿನಿಷ್ಠವಾಗಿರುತ್ತವೆ. ಇವು ವೈಚಾರಿಕ ಪ್ರಗತಿಪರ ಧೋರಣೆಗಳಿಂದ ವಂಚಿತವಾಗಿ ಕೇವಲ ಸೀಮಿತ ಸಂಪ್ರದಾಯ ವಲಯದಲ್ಲಿ ಸೆರೆಹಿಡಿದು ಬಂಧಿಸಲಾಗಿರುತ್ತವೆ. ಮಹಿಳೆಯನ್ನು ಬಲಿಕೊಡುವುದು ಸಮಾಜದ ಹಿಡಿತದಲ್ಲಿದ್ದು, ಹಾಗಾಗಿ ಅವಳ ಜೀವದ ಮೇಲೆ ತಮ್ಮ ಹಕ್ಕನ್ನು ಚಲಾಯಿಸುತ್ತಿದ್ದರು. ಜನಪದರು ಅಂದಿನ ಸಮಾಜ ವ್ಯವಸ್ಥೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದರಲ್ಲದೇ ಅವುಗಳನ್ನು ಸಂಪೂರ್ಣ ಪಾಲಿಸಿಕೊಂಡು ಬಂದಿದ್ದರು.

---

೬. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ : ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಪು.೨೩೯

ಕೆರೆ–ಕಟ್ಟೆ–ಕೋಟೆ ಕುಸಿದಾಗ ಕೆಲವೊಂದೆಡೆ ಹಿರಿ ಸೊಸೆ ಬಲಿಯಾಗುವುದು ಕಂಡುಬಂದರೆ, ಕೆಲವೊಂದೆಡೆ ಕಿರಿ ಸೊಸೆ ಬಲಿಯಾಗುವುದನ್ನು ಕಾಣುತ್ತೇವೆ. ಇದರೊಂದಿಗೆ ಕೆಳಜಾತಿಯ ಮಹಿಳೆಯರನ್ನೇ ಹೆಚ್ಚು ಗುರಿಮಾಡುತ್ತಿದ್ದರು ಎಂಬುದು ಕೂಡ ಕಂಡುಬಂದಿದೆ. ಆದರೆ ಇವೆರಡರ ಆಶಯ ಕೂಡ ಒಂದೇಯಾಗಿರುತ್ತದೆ. ಅದೇನೆಂದರೆ 'ಬಲಿಕೊಡುವುದು'. ಇದಕ್ಕೆಲ್ಲ ಕಾರಣ ವ್ಯವಸ್ಥಿತ ಸಮಾಜದ ಮೌಲ್ಯಗಳಿಗೆ ಬದ್ಧರಾಗಿ ಮಹಿಳೆಯರು ತಮ್ಮತನವನ್ನು ಸಮಾಜಕ್ಕಾಗಿ ಮೀಸಲಿಡುತ್ತಾರೆ. ಹೀಗೆ ಮಹಿಳೆಯರು ಕೆಲವೊಂದು ಸಂಗತಿಗಳೊಂದಿಗೆ ಹೇಗೆ ಹೊಂದಿಕೊಂಡಿದ್ದರು ಎನ್ನುವದಕ್ಕಿಂತ ಸಮಾಜ ಆಕೆಗೆ ನಿರ್ಬಂಧಿಸಿದ ಮೌಲ್ಯಗಳನ್ನು ಹಾಗೂ ಇಂದು ಇರಬೇಕಾದ ಮೌಲ್ಯಗಳನ್ನು ತಿಳಿಸಲಾಗಿದೆ.

ಅಂದಿನ ಸ್ತ್ರೀಗಿದ್ದ ಮೌಲ್ಯಗಳು	ಇಂದಿನ ಸ್ತ್ರೀಗಿರಬೇಕಾದ ಮೌಲ್ಯಗಳು
ಪ್ರಜ್ಞೆ	ಸ್ವಪ್ರಜ್ಞೆ
ಚಾರಿತ್ರ್ಯತೆ(ಪಾತಿವ್ರತ್ಯ)	ವೈಚಾರಿಕತೆ, ಪ್ರೌಢತೆ
ಪರಲೊಕದಲ್ಲಿ ಮೋಕ್ಷ ಸಂಪಾದನೆ	ಇಹಲೋಕದಲ್ಲಿ ಮೋಕ್ಷ ಸಂಪಾದನೆ
ವಿನಯತೆ	ಪ್ರಜ್ಞಾತ್ಮಕ ವಿನಯ
ಅವಲಂಬನೆ	ಸ್ವಾವಲಂಬನೆ
ಆಚರಣೆ, ಪದ್ಧತಿಗಳ ಪಾಲನೆ	ಸೈದ್ಧಾಂತಿಕತೆ
ಅರ್ಪಣಾಭಾವ	ಸಮಾನತೆಯ ಭಾವ
ಮೂಢನಂಬಿಕೆ	ವೈಜ್ಞಾನಿಕ ನಂಬಿಕೆ
ಭಯಮಿಶ್ರಿತ ಭಕ್ತಿ	ಭಯಮುಕ್ತ ಭಕ್ತಿ
ಕೊಂಡವೇರುವುದು	ಮರುವಿವಾಹ

ಹೀಗೆ ಇನ್ನೂ ಅನೇಕ ಮೌಲ್ಯಗಳು ಸ್ತ್ರೀಗೆ ಸಂಬಂಧಿಸದಂತಹವುಗಳನ್ನು ಕಾಣಬಹುದು. ಕಥನಗೀತೆಗಳಲ್ಲಿ ಬರುವ ಮಹಿಳೆ ಸಮಾಜದ ವ್ಯವಸ್ಥೆಯ ವಿರುದ್ಧ ಏನನ್ನೂ ಪ್ರಶ್ನಿಸದೇ ಪರರ ಮೇಲೆ ಅವಲಂಬನೆಯಾಗಿ ತನ್ನ ಚಾರಿತ್ರ್ಯವನ್ನು ಆಚರಣೆ–ಪದ್ಧತಿಗಳ ಮೂಲಕ ತೋರ್ಪಡಿಸಿ ಭಯಪೂರಿತ ಭಕ್ತಿಯೊಂದಿಗೆ ಮೋಕ್ಷ ಸಂಪಾದನೆಯೊಂದೇ ತನ್ನ ಗುರಿಯೆಂದು ತಿಳಿದು ಬದುಕಿದ ಹಾಗಿದೆ. ಆದರೆ ವಾಸ್ತವದಲ್ಲಿ ಶಿಕ್ಷಣ, ಸ್ವಪ್ರಜ್ಞೆ, ವೈಚಾರಿಕತೆ,

ಪ್ರೌಢತೆ, ಸಮಾನತೆ, ಸ್ವಾವಲಂಬನೆಯೊಂದಿಗೆ ಬದುಕನ್ನು ಕಟ್ಟಿಕೊಳ್ಳುವ ಅವಶ್ಯಕತೆ, ಅನಿವಾರ್ಯತೆ ಇದೆ. ಆದ ಕಾರಣ ಮಹಿಳೆಯರೂ ಎಷ್ಟೋ ಕಷ್ಟಗಳ ಸುಳಿಯಲ್ಲಿ ಸಿಲುಕಿದರೂ ಆಶಾಭಾವನೆಯೊಂದಿಗೆ ಹೆಜ್ಜೆಯನ್ನಿಟ್ಟು ದಿಟ್ಟತನದಿಂದ ಬಾಳಲು ಮುನ್ನುಗ್ಗಬೇಕು.

ಈ ಮೇಲಿನ ಮೌಲ್ಯಗಳ ಪಟ್ಟಿಯು ಅಂದಿನ ಮಹಿಳೆ ಯಾವ ಮೌಲ್ಯಗಳಿಂದ ವಂಚಿತಳಾಗಿ ತನ್ನ ಬದುಕನ್ನು ಅಂತ್ಯಗೊಳಿಸಿಕೊಂಡು ಕ್ರೂರ ಬದುಕಿನಲ್ಲಿ ಬಾಳಿದಳು ಎಂಬುದನ್ನು ಕೂಡ ಮಹಿಳೆ ವೈಚಾರಿಕವಾಗಿ ಗ್ರಹಿಸಬೇಕು.

ಭಾರತೀಯ ಸಾಂಪ್ರದಾಯಿಕ ಹಾಗೂ ಸಾಮಾಜಿಕ ಮೌಲ್ಯಗಳು ಕನ್ನಡ ಸಾಹಿತ್ಯದಲ್ಲಿ ಹೇರಳವಾಗಿ ದೊರಕುತ್ತವೆ. ಅದರಲ್ಲಿ ಜನಪದ ಕಥನಗೀತೆಗಳು ಕೂಡ ಒಂದಾಗಿದ್ದು, ಇಲ್ಲಿಯೂ ಕೆಲವೊಂದು ಸಾಂಪ್ರದಾಯಿಕ ಮೌಲ್ಯಗಳು ದೊರಕುತ್ತವೆ. ಅವುಗಳನ್ನು ಸ್ತ್ರೀ ಮತ್ತು ಪುರುಷ ಮೌಲ್ಯಗಳ ನೆಲೆಯಲ್ಲಿ ಚರ್ಚಿಸಲಾಗಿದೆ.

ಕಾಲಕಾಲಕ್ಕೆ ಸಾಹಿತ್ಯದಲ್ಲಿ ಮೌಲ್ಯಾರಾಧನೆ ಸಮೃದ್ಧವಾಗಿಯೇ ಬೆಳೆದು ಬರುತ್ತಿದೆ. ಆದರೆ ಆದರ್ಶಗಳ ಪಾಲನೆ ಸಮಾಜದಲ್ಲಿ ಇಂದು ನಾಪತ್ತೆಯಾಗಿರುವುದು ವಿಪರ್ಯಾಸವೇ ಸರಿ. ಇದಕ್ಕೆಲ್ಲ ಕಾರಣ ಸಮಾಜ ಅಪಮೌಲ್ಯದ ಆಗರವಾಗಿದೆ. ಹಾಲಾಹಲದ ನಡುವೆಯೂ ಅಮೃತ ಬಿಂದುವನ್ನು ಹುಡುಕುವಂತಹ ಮನಸ್ಥಿತಿಯನ್ನು ಬೆಳೆಸಿಕೊಂಡರೆ ಮೌಲ್ಯಗಳು ಸಂವರ್ಧನೆಯನ್ನು ಪಡೆಯುತ್ತವೆ. ಆ ಮೂಲಕ ಮಾನವರು ಕೂಡ ಬೆಳೆಯುತ್ತಾರೆಂಬುದನ್ನು ಅರಿತು ಮೌಲ್ಯಗಳನ್ನು ತಮ್ಮ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಮೌಲ್ಯಗಳು ಎಲ್ಲ ಕಾಲ ಘಟ್ಟಗಳಲ್ಲಿಯೂ ಕೂಡ ಕಂಡುಬರುತ್ತವೆ. ಆದರೆ ಅವುಗಳಲ್ಲಿ ಕೆಲವೊಂದು ಕಾಲಕ್ಕೆ ತಕ್ಕಂತೆ ಅಪ್ರಸ್ತುತ ಎನ್ನಿಸಬಹುದು. ಇದಕ್ಕೆಲ್ಲ ಕಾರಣ ಅರ್ಥಹೀನ ಮೌಲ್ಯಗಳ ಆಡಂಬರ. ಎಂದರೆ ಮೌಲ್ಯಗಳಿಂದಾಗುವ ದುಷ್ಪರಿಣಾಮಗಳಿಂದ ಬಹುಪಾಲು ಸ್ತ್ರೀಯರು ಕಥನಗೀತೆಗಳಲ್ಲಿ ಅರ್ಥಹೀನ ಮೌಲ್ಯಗಳಿಗೆ ತುತ್ತಾಗಿದ್ದಾರೆ (ಬಲಿಯಾಗಿದ್ದಾರೆ) ಹಾಗೂ ಕಾಲಾನಂತರ ಹುಟ್ಟಿಕೊಂಡಂತಹ ಕಥನಗೀತೆಗಳಲ್ಲಿ ಕೆಲವು ಸಮಾಜಪರ ನಿಲುವನ್ನು ಹೊಂದಿರುವಂತಹ ಕಥನಗೀತೆಗಳನ್ನು ಕಾಣುತ್ತೇವೆ. ಹಾಗಾಗಿ ಎರಡೂ ಮೌಲ್ಯಗಳನ್ನು ಕ್ರೋಢೀಕರಿಸಿ ಇಲ್ಲಿ ವಿಶ್ಲೇಷಣೆಯನ್ನು ಮಾಡಲಾಗಿದೆ.

ಮೌಲ್ಯವು ಬದುಕಿನ ಬಾಹ್ಯ ಬಣ್ಣದ (ರಂಗುರಂಗಿನ) ಹೊದಿಕೆ (ಬಟ್ಟೆ)ಯಾಗಬಾರದು. ಏಕೆಂದರೆ ನೋಡಲು ಅಥವಾ ಕೇಳಲು ಎಷ್ಟೇ ಆಕರ್ಷಣೀಯವಾಗಿ ಕಂಡರೂ ಆಂತರಿಕ ಬಣ್ಣದ ಹೊದಿಕೆ ಶುದ್ಧವಿದ್ದಾಗ ಮಾತ್ರ ಅದಕ್ಕೊಂದು ಬೆಲೆ ಬರುವುದು. ಅದಕ್ಕಾಗಿ ಮೌಲ್ಯಗಳು ಎಂದಿಗೂ ನಮ್ಮ ರಕ್ತಕಣದಲ್ಲಿ ಸೇರುವಂತೆ ಅವುಗಳನ್ನು ಬೆಳೆಸಿಕೊಳ್ಳಬೇಕು.

"ದ್ವೀಪಗಳನ್ನು ದಾಟುವುದು ನಮ್ಮ ಕಾಲದ ಸವಾಲು. ಈ ಸವಾಲನ್ನು ಎದುರಿಸುತ್ತ, ಉತ್ತರ ಹುಡುಕುತ್ತಾ ಹೋದಂತೆ ಪರಂಪರೆಯೂ ಬೆಳೆಯುತ್ತದೆ; ಪ್ರಗತಿಪರ ಪ್ರಜ್ಞೆಯೂ ತೀವ್ರವಾಗುತ್ತದೆ. ಈ ಪ್ರಜ್ಞೆಯ ಪರೀಕ್ಷೆಯಲ್ಲಿ ಪರಂಪರೆಯ ನೆಲೆ ಮತ್ತು ಪರಂಪರೆ ಪ್ರಜ್ಞೆಯ ಪರೀಕ್ಷೆಯಲ್ಲಿ ಪ್ರಗತಿಯ ನೆಲೆಗಳು ಪರಸ್ಪರ ಗೆದ್ದು ನಿಂತಾಗ ರೂಪಗೊಳ್ಳುವ ಹೊಸ ವಿನ್ಯಾಸದಲ್ಲಿ ಹೊಸ ಮನುಷ್ಯ ಹೊಳೆಯತೊಡಗುತ್ತಾನೆ."[೭] ಈ ಮಾತುಗಳು ಅಕ್ಷರಶಃ ಸತ್ಯ. ಹಲವಾರು ಮೌಲ್ಯಗಳ ಮಧ್ಯದಲ್ಲಿ ನಾವು ಇದ್ದೇವೆ. ಎಲ್ಲ ಮೌಲ್ಯಗಳಲ್ಲಿ ನಾವು ಉತ್ತರವನ್ನು ಹುಡುಕುತ್ತಾ ಹೋದಂತೆ, ತೌಲನಿಕವಾಗಿ ಅಧ್ಯಯನ ಮಾಡಿದಂತೆ ನಮ್ಮ ಹೊಸ ಸಮಾಜದ ಪರಂಪರೆಯೂ ಮುಂದುವರೆಯುತ್ತದೆ ಹಾಗೂ ಪ್ರಗತಿಯ ಪ್ರಜ್ಞೆ ಕೂಡ ವೇಗವಾಗುತ್ತಾ ಹೋಗುತ್ತದೆ. ಹಲವಾರು ಉತ್ತಮ ಮೌಲ್ಯಗಳಿಂದ ಮನುಷ್ಯ ಹೊಸ ವಿನ್ಯಾಸದ ಬದುಕಿಗೆ ಹೆಜ್ಜೆಯಿಟ್ಟರೆ ಅಲ್ಲಿಂದ ಹೊಸ ಮನುಷ್ಯ, ಮನುಷ್ಯನ ಬದುಕು ಪ್ರಜ್ವಲಿಸಿ ಮುಂದಿನ ಕಾಲಕ್ಕೆ ನಾಂದಿಯಾಗುತ್ತದೆ.

"ಗಂಡು ಮೌಲ್ಯ ನಿರ್ಧಾರದ ಹೊಣೆಯನ್ನು ಹೆಂಗಸಿಗೆ ವಹಿಸುತ್ತಾನೆ. ಆಕೆ ನ್ಯಾಯಾಧಿಪತಿ. ಗಂಡು ಅನ್ಯವನ್ನು ವಶಪಡಿಸಿಕೊಳ್ಳಲಷ್ಟೇ ಕಲ್ಪಿಸಿಕೊಳ್ಳುವುದಿಲ್ಲ. ಅವಳಿಂದ ಸಮ್ಮತಿಯನ್ನು ಪಡೆಯುವುದೂ ಅವನ ಗುರಿ. ಹಾಗೆಯೇ ಇತರ ಗಂಡಸರು, ಸಹಚರರು ಕೂಡ ತನ್ನನ್ನು ಒಪ್ಪಿಕೊಳ್ಳಬೇಕೆಂಬ ತುಯ್ದಾಟ ಅವನಲ್ಲಿ ಯಾವಾಗಲೂ ಇರುತ್ತದೆ. ಹೊರಗಿನವರೊಬ್ಬರು ತನ್ನ ಬದುಕನ್ನು ಮೌಲ್ಯಮಾಪನ ಮಾಡಬೇಕೆಂದು ಆತ ಬಯಸುತ್ತಾನೆ."[೮] ಸಮಾಜದಲ್ಲಿ ತಮ್ಮ ಬದುಕನ್ನು ಮೌಲ್ಯಯುತವಾಗಿ ರೂಪಿಸಿ–ಕೊಳ್ಳಬೇಕೆಂಬುದು ಇದ್ದೇ ಇರುತ್ತದೆ. ಆದರೆ ಸನ್ನಿವೇಶ ಸಂದರ್ಭಗಳಿಗನುಗುಣವಾಗಿ ಬದುಕು ವಿಭಿನ್ನ ರೀತಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಮೇಲಿನ ಹೇಳಿಕೆಯ ಹಿನ್ನೆಲೆಯಲ್ಲಿ ಗಂಡು ತನ್ನ ಕುಟುಂಬ ವರ್ಗದ ಎಲ್ಲ ಮಹಿಳೆಯರು ಕೂಡ ಉತ್ತಮ ಚಾರಿತ್ರ್ಯ, ಸಂಸ್ಕಾರವಂತ ಕುಟುಂಬದವರೆಂಬ ಹೆಗ್ಗಳಿಕೆಗೆ ಪಾತ್ರರಾಗಬೇಕೆಂದುಕೊಂಡು ಅವರಿಗೆ ಹೇಗೆ ಇರಬೇಕೆಂಬ

೭. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಬರಗೂರ ರಾಮಚಂದ್ರಪ್ಪ, ಪು.೧೦

೮. ಸಿಮೊನ್ ದ ಬೋವಾ: ದ ಸೆಕೆಂಡ್ ಸೆಕ್ಸ್ : ಎಚ್.ಎಸ್. ಶ್ರೀಮತಿ, ಪು.೧೨೬

ಹೊಣೆಯನ್ನು ಅವರ ಮೇಲೆ ಹೇರುತ್ತಾರೆ ನಿಜ. ಆದರೆ ಇಡೀ ಸಮಾಜದಲ್ಲಿರುವ ಕುಟುಂಬದವರನ್ನು ತಮ್ಮ ಕುಟುಂಬದವರ ಹಾಗೇ ಕಾಣದಿರುವುದು ಶೋಚನೀಯ. ಏಕೆಂದರೆ ಯಾವುದೇ ಮಹಿಳೆಗೆ ಶೋಷಣೆಯಾದರೂ ಮಹಿಳಾ ಸಮೂಹಕ್ಕೆ ಆಗುವ ಅನ್ಯಾಯವೆಂದು ತಿಳಿಯದೇ ತಮ್ಮ ನಡವಳಿಕೆ, ವಕ್ರದೃಷ್ಟಿಯಿಂದ ಸಮಾಜದ ಮೌಲ್ಯವನ್ನು ಕಲುಷಿತ ಮಾಡುವಲ್ಲಿ ಪಾಲುದಾರರಾಗುತ್ತಾರೆ. ಹೀಗೆಂದ ಮಾತ್ರಕ್ಕೆ ಎಲ್ಲ ಪುರುಷ ಸಮಾಜವು ಹೀಗೆ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಕೆಲವೊಂದು ಕುಟುಂಬದಲ್ಲಿಯ ಮಹಿಳೆಯರ ಯಶಸ್ಸಿಗೆ ಪುರುಷರೇ ಕಾರಣರೆಂಬುದನ್ನು ಮರೆಯುವಂತಿಲ್ಲ. ಮರೆತರೆ ಸ್ತ್ರೀ ಕುಲಕ್ಕೆ ಅವಮಾನ.

ಜನಪದ ಮಹಿಳೆ ತಾನು ಕಂಡುಂಡ ಅನುಭವಗಳನ್ನು, ತನ್ನ ಮನಸ್ಸನ್ನು ಮುಕ್ತವಾಗಿ ಅಭಿವ್ಯಕ್ತಿಸಿದ್ದಾಳೆ. ಆಕೆ ತನ್ನ ದೈನಂದಿನ ಬದುಕಿನಲ್ಲಿ ಎದುರಿಸಿದ ಸಂಕಟಕ್ಕೆ, ಸಮಸ್ಯೆಗೆ, ಸಂಘರ್ಷಕ್ಕೆ ನೀಡಿದ ಪ್ರತಿಕ್ರಿಯೆಯಾಗಿ ಕಥನಗೀತೆಗಳು ಕಾಣಿಸಿಕೊಂಡಿವೆ. ಕಥನಗೀತೆಗಳಲ್ಲಿ ಸ್ತ್ರೀಯ ಮೌಲ್ಯಗಳು ಹಲವಾರು ನೆಲೆಯಲ್ಲಿ ಪ್ರತಿಪಾದಿತವಾಗುತ್ತವೆ. ಸ್ತ್ರೀ ಸಂಬಂಧಿತ ಕೆಲವೊಂದು ಕಥನಗೀತೆಗಳಲ್ಲಿ ತ್ಯಾಗ-ಬಲಿದಾನ, ಮೋಕ್ಷ ಸಂಪಾದನೆ ಮೌಲ್ಯಗಳಾಗಿ ಕಂಡು ಬಂದರೆ, ಕೆಲವೊಂದರಲ್ಲಿ ಆಚರಣೆಗಳು ಮೌಲ್ಯಗಳಾಗಿ ಪ್ರತಿಪಾದಿತವಾಗಿವೆ. ಇನ್ನೂ ಕೆಲವೊಂದರಲ್ಲಿ ಪಾತಿವ್ರತ್ಯ, ಆದರ್ಶ, ಸತ್ಯ, ಮಾನವೀಯತೆ, ಧರ್ಮಪಾಲನೆ ಮುಂತಾದವುಗಳು ಮೌಲ್ಯಗಳಾಗಿ ಪ್ರತಿಪಾದಿತವಾಗಿವೆ. ಪುರುಷ ಮೌಲ್ಯಪ್ರತಿಪಾದನೆಗಿಂತ ಭಿನ್ನವಾಗಿದ್ದು, ಕಥನಗೀತೆಗಳಲ್ಲಿ ತನ್ನದೇಯಾದಂತಹ ಛಾಪನ್ನು ಮೂಡಿಸಿವೆ. ವಾಸ್ತವದಲ್ಲಿ ಇವುಗಳಲ್ಲಿರುವ ಕೆಲವೊಂದು ಮೌಲ್ಯಗಳು ಕುಂಠಿತವಾಗಿವೆ. ಕೆಲವೊಂದು ಇನ್ನೂ ಉಳಿದುಕೊಂಡಿವೆ. ಕಾರಣ ಅವುಗಳ ಹಿಂದಿರುವ ಸಾಮಾಜಿಕ ಹುನ್ನಾರ, ಜನರಲ್ಲಿದ್ದ ಅನಕ್ಷರತೆ. ಆದರೆ ಕೆಲವೊಂದು ಕಥನಗೀತೆಗಳಲ್ಲಿಯ ಮೌಲ್ಯಗಳು ಇಂದಿಗೂ ಅವಶ್ಯಕವಾಗಿವೆ. ಹಾಗಾಗಿ ಎರಡೂ ಆಯಾಮಗಳಲ್ಲಿ ಕೆಳಗಿನಂತೆ ಸ್ತ್ರೀ ಮೌಲ್ಯ ಪ್ರತಿಪಾದನೆಯನ್ನು ಕೆಲವೊಂದು ಕಥನಗೀತೆಗಳ ಮೂಲಕ ವಿಶ್ಲೇಷಿಸಲಾಗಿದೆ.

ಕಥನಗೀತೆಗಳಲ್ಲಿ ಅಭಿವ್ಯಕ್ತವಾದ ಮಹಿಳಾಪರ ಮೌಲ್ಯಗಳು :

- ಆತ್ಮಬಲಿದಾನದಲ್ಲಿ ಅವಳಿಗಿದ್ದ 'ನಿಷ್ಠೆ'
- ಪಾತಿವ್ರತ್ಯ
- ಬಾಳಿನ ಬಗೆಗೆ ಇರುವ ಗೌರವ, ಶ್ರದ್ಧೆ, ತ್ಯಾಗ, ತಾಳ್ಮೆ ಇತ್ಯಾದಿ

- ಮುಗ್ಧತೆ, ಊರಿನ ಹಿತ
- ಕುಟುಂಬದ ಮರ್ಯಾದೆ
- ಬಲಿಪದ್ಧತಿ ಆಚರಣೆ
- ಎದೆಗಾರಿಕೆ
- ಮಾತೃ ಹೃದಯ
- ಹೊಂದಾಣಿಕೆ ಇತ್ಯಾದಿ

ಕಥನಗೀತೆಗಳಲ್ಲಿ ಮಹಿಳೆ ಬಲಿಯಾಗಲು ಪ್ರಮುಖ ಕಾರಣಗಳು :

- ಜ್ಯೋತಿಷ್ಯದ ಮೇಲೆ ಅಪಾರವಾದ ನಂಬಿಕೆ
- ಅನಕ್ಷರತೆ
- ವೈಚಾರಿಕ ಪ್ರಜ್ಞೆಯ ಕೊರತೆ
- ನಂಬಿಕೆ–ಸಂಪ್ರದಾಯಗಳು
- ಯಜಮಾನಿಕೆಯ ಸಂಸ್ಕೃತಿ ಇತ್ಯಾದಿ

ಹೀಗೆ ಹಲವಾರು ಮೌಲ್ಯಗಳು ಸ್ತ್ರೀಯ ಅಸ್ತಿತ್ವವನ್ನು ನುಂಗಿ ಹಾಕಿದ್ದವು ಎನ್ನುವುದನ್ನು ಕೆಲವೊಂದು ಕಥನಗೀತೆಗಳು ಇದನ್ನು ಸ್ಪಷ್ಟಪಡಿಸುತ್ತವೆ.

೬.೧. ಸ್ತ್ರೀ ಮೌಲ್ಯ ಪ್ರತಿಪಾದನೆ :

ನಾಗವ್ವ ಕಥನಗೀತೆಯಲ್ಲಿ ಅಭಿವ್ಯಕ್ತವಾದ 'ಮೋಕ್ಷ ಸಂಪಾದನೆ' :

ನಾಗವ್ವಳ ಕಥನಗೀತೆಯಲ್ಲಿ ಏನೂ ಅರಿಯದ ಬಾಲೆಯನ್ನು ಚಂದಯ್ಯನಿಗೆ ಕೊಟ್ಟು ಮದುವೆ ಮಾಡಲು ಸಿದ್ಧರಾಗಿ ಶಾಸ್ತ್ರಗಳನ್ನು ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಚಂದಯ್ಯನ ತಂಗಿ ಆಡನ್ನು ಬೇಡರು ಹೊಡೆದ ಸುದ್ದಿಯನ್ನು ಹೇಳುತ್ತಾಳೆ. ಹಸಿಮೈಯಲ್ಲೇ ಹೋಗಿ ಬೇಡರ ಕೈಗೆ ಸಿಕ್ಕು ಸಾವನ್ನಪ್ಪುತ್ತಾನೆ. ಆಗ ನಾಗವ್ವ ಪತಿಯೊಡನೆ ಕೊಂಡಕ್ಕೆ ಹೋಗಲು ಸಿದ್ಧಳಾಗುತ್ತಾಳೆ. ಇಲ್ಲಿ ನಾಗವ್ವಳಲ್ಲಿರುವ ಒಂದು ಮೌಲ್ಯ ಎದ್ದು ಕಾಣುತ್ತಿದೆ. ಅದೇನೆಂದರೆ: ತಾನು ತನ್ನ ಪತಿಯೊಡನೆ ಕೊಂಡಕ್ಕೆ ಹೋಗಲೇ ಬೇಕು ಅಂದಾಗ ಮಾತ್ರ ನನಗೆ **ಮೋಕ್ಷ** ಸಿಗುತ್ತದೆ ಎಂಬ ನಂಬಿಕೆ ಅವಳಲ್ಲಿ ಬೇರೂರಿದೆ. ಆದ್ದರಿಂದ ಅನೇಕ ಮಹಿಳೆಯರು ಸಮಾಜ ಒಪ್ಪಿದ ಮೌಲ್ಯದೊಡನೆ ತಮ್ಮ ಜೀವನವನ್ನು ಸವೆಸಿ ಮೌಲ್ಯವನ್ನು ವೈಭವೀಕರಿಸಿದಂತಹ ಉದಾಹರಣೆಗಳು ನಮಗೆ ಹೇರಳವಾಗಿ ದೊರಕುತ್ತವೆ. ಇಲ್ಲಿ ಆಕೆ

ಕುಟುಂಬ, ಸಮಾಜ ಕಟ್ಟಿದ ಮೌಲ್ಯದ ಬಲಿಯಲ್ಲಿ ಸಿಕ್ಕು ಅವುಗಳನ್ನು ಆದರ್ಶಗಳಾಗಿ ಸ್ವೀಕರಿಸಿದಳೇ ಹೊರತು ಆ ಬಲಿಯಿಂದ ಪಾರಾಗಲು ಪ್ರಯತ್ನಿಸಲೇ ಇಲ್ಲ. ಕಾರಣ ಅಂದಿನ ಸಾಮಾಜಿಕ ವ್ಯವಸ್ಥೆ ಸೃಷ್ಟಿಸಿದ ಸ್ತ್ರೀ ಮೌಲ್ಯಗಳಿಗೆ ಬದ್ಧರಾಗಿರಬೇಕಾದ ಅನಿವಾರ್ಯತೆ ಎಂಬುದು ಸುಸ್ಪಷ್ಟ.

ಹುಳಿಯೂರು ಕೆಂಚಮ್ಮಳಲ್ಲಿದ್ದ ತ್ಯಾಗ ಮನೋಭಾವ :

ಹುಳಿಯೂರಿನ ಏರಿಯ ಕಟ್ಟಡ ಕುಸಿದಾಗ ಬಾಣಂತಿಯಾದ ಕೆಂಚಮ್ಮ ಸ್ವತಃ ತಾನೇ ಬಲಿಯಾಗಲು ಮುಂದಾಗುತ್ತಾಳೆ. ಆಕೆಯ ತ್ಯಾಗದಿಂದ ಕಟ್ಟಡ ಕುಸಿಯದೇ ನಿಲ್ಲುತ್ತದೆ ಎಂಬ ಮೂಢನಂಬಿಕೆ ಬೇರೂರಿದೆ ವಿನಃ ಬದಲಾಗಿ ಆ ಕಟ್ಟಡ ಏಕೆ ಕುಸಿಯುತ್ತಿದೆ ಎಂಬುದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿವೇಚಿಸುವುದಿಲ್ಲ. ಕಾರಣ ಅವರಲ್ಲಿ ಲೌಕಿಕ ಜ್ಞಾನದ ಕೊರತೆ ಇದ್ದಿತು. ಕೆಲವು ಮಹಿಳೆಯರಲ್ಲಿ ಇದು ಕಂಡು ಬಂದರೂ ಪ್ರತಿಭಟಿಸಲು ಹಿಂಜರಿ-ಯುತ್ತಿದ್ದಳು. ಆದ ಕಾರಣ ಇಲ್ಲಿ ಬಲಿಯಾಗುವುದು ಒಂದು 'ಮೌಲ್ಯ' ಎಂದು ನಿರೂಪಿತವಾಗುತ್ತದೆ.

ಮುತ್ತೈದೆ ಚೆನ್ನಮ್ಮ ಕಥನಗೀತೆಯಲ್ಲಿ 'ಪಾತಿವ್ರತ್ಯ' ಪ್ರತಿಪಾದನೆ :

ಈ ಕಥನಗೀತೆಯಲ್ಲಿ ಕತ್ತೂರಿ ಮದರಂಬಿಯ ದಂಪತಿಗಳಿಗೆ ಪಾಪ-ಫಲಗಳಿಂದ ಮಕ್ಕಳಾಗಿರುವುದಿಲ್ಲವೆಂದು ಗಿರಿಮಲ್ಲಯ್ಯನಲ್ಲಿ ಸಂತಾನ ಬೇಡುವರು. ಮಲ್ಲಯ್ಯನು ಫಲ ನೀಡಲು ಸಮ್ಮತಿಸಿ ಹನ್ನೆರಡು ವರ್ಷ ಆಯುಷ್ಯ ಉಳ್ಳ ಮತಿಭ್ರಷ್ಟನನ್ನು ಕೊಡಲೆ ಎಂದು ಪ್ರಶ್ನಿಸಲಾಯಿತು. ಅದಕ್ಕೆ ಮದರಂಬಿ "ಮುಂಜಾನೆ ಹುಟ್ಟಿ ಸಂಜೆಗೆ ಸಾಯಲಿ. ಬಂಜೆಯೆಂಬುವ ಶಬ್ದ ಬಿಡಿಸಿದರೆ ಸಾಕು"[೯] ಎಂದು ಕೇಳಿಕೊಳ್ಳುತ್ತಾಳೆ. ಆಗ ಒಂದು ಗಂಡು ಮಗುವಿಗೆ ಜನನ ನೀಡುತ್ತಾಳೆ. ಅದರ ಹೆಸರು ಕಾಳಿಂಗ. ಕಾಳಿಂಗ ಹೆಚ್ಚು ಕಾಲ ಬದುಕುವುದಿಲ್ಲವೆಂಬ ಸತ್ಯ ಜೋಯಿಸರಿಂದ ಗೊತ್ತಾಗುತ್ತದೆ. ಹಾಗಾಗಿ ಕಾಳಿಂಗ ಮದುವೆಯಾಗದೇ ಸತ್ತ ಕಾರಣದಿಂದ ಅವನ ತಾಯಿ ಹಾಳು ಮಣ್ಣು ತಂದು ಗೊಂಬೆ ಮಾಡಿ ಮದುವೆಯ ಶಾಸ್ತ್ರ ಮುಗಿಸಿ ಶವವನ್ನು ಸುಡುವಂತೆ ಹೇಳುವಳು. ಆದರೆ ತಂದೆ ಅದಕ್ಕೆ ಒಪ್ಪದೇ ನಮ್ಮಲ್ಲಿ ಹೊನ್ನು ಇದೆ. ಹೊನ್ನು ಕೊಟ್ಟು ಆಗೋಮಕ್ಕೆ ಹೆಣ್ಣು ತರಬೇಕೆಂದು ಪ್ರಧಾನಿಗೆ ಹೇಳಿ ಡಂಗುರ ಹೊಡೆಸುತ್ತಾನೆ. ಊರಿನ ಜನರೆಲ್ಲರೂ ತಮ್ಮ ತಮ್ಮ ಮಕ್ಕಳಿಗೆ ಮಸಿ ಬಳಿದು ಬೀಗ ಹಾಕಿ ಒಳಗೆ ಕುಳಿತುಕೊಳ್ಳುವರು. ಆದರೆ ಚನ್ನಮ್ಮಳ ತಂದೆ ಹೊನ್ನಿಗೆ

೯. ಆಯ್ದ ಜನಪದ ಕಥನ ಗೀತೆಗಳು : .ಎಂ.ಎಸ್. ಸುಂಕಾಪುರ, ಪು.ix

ಆಸೆಪಟ್ಟು ಸುಂದರಿಯಾದ ಚೆನ್ನಮ್ಮಳನ್ನು ಪಲ್ಲಕ್ಕಿಯಲ್ಲಿ ಕಳುಹಿಸಿಕೊಡುತ್ತಾನೆ. ಅಲ್ಲಿ ಮದುವೆಯ ಎಲ್ಲ ಶಾಸ್ತ್ರಗಳನ್ನು ಮುಗಿಸಿ ಚೆನ್ನಮ್ಮಳಿಗೆ ಮದರಂಬಿ ಹೋಗಲು ಅಪ್ಪಣೆ ನೀಡುತ್ತಾನೆ. ಆಗ ಚೆನ್ನಮ್ಮ ಹಣಕ್ಕೆ ಆಸೆಪಟ್ಟು ತನ್ನನ್ನು ಕೊಟ್ಟ ಅವರ ಮುಖವನ್ನು ನೋಡುವುದಿಲ್ಲ ಎಂದು ತವರಿನ ಬಗ್ಗೆ ತಾತ್ಸಾರ ಭಾವನೆ ತಾಳುತ್ತಾಳೆ. ನನ್ನ ಪತಿಯೊಡನೆ ನನ್ನನ್ನು ಕಳುಹಿಸಿ ಕೊಡಿ ಅತ್ತೆಮ್ಮ ಎಂದು ಬೇಡುವಳು. ಮುಂದೆ ಚೆನ್ನಮ್ಮ ದೈವ ಕೃಪೆಯಿಂದ ಕಾಳಿಂಗನನ್ನು ಬದುಕಿಸಿಕೊಂಡು ಮುತ್ತೈದೆಯಾಗುವುದು ಬಿಂಬಿತವಾಗಿದೆ. ಇದು ಆಕೆಯಲ್ಲಿರುವ ನಿಷ್ಠೆಯನ್ನು, ಪಾತಿವ್ರತ್ಯವನ್ನು ಎತ್ತಿ ಹಿಡಿಯುತ್ತದೆ. ಇಲ್ಲಿ ಆಗೋಮ ಮತ್ತು ಪಾತಿವ್ರತ್ಯ ಎಂಬುದು ಮೌಲ್ಯವಾಗಿ ಮೂಡಿ ಬಂದಿದೆ. ದುಃಖಾಂತದಿಂದ ಕೊನೆ-ಯಾಗಬೇಕಾದ ಈ ಕಥನಗೀತೆಯನ್ನು ಜನಪದರು ಸುಖಾಂತವಾಗಿ ರೂಪಿಸಿದ್ದಾರೆ. ಪಾತಿವೃತ್ಯ ಎಂಬ ಮೌಲ್ಯವನ್ನು ಎತ್ತಿಹಿಡಿಯಲು, ಅದರ ಮಹತ್ವವನ್ನು ಸಾರಲು ಹೀಗೆ ಮಾಡಲಾಗಿದೆ ಎಂಬ ಭಾವ ವ್ಯಕ್ತವಾಗುತ್ತದೆ. ಪಾತಿವೃತ್ಯ ಎಂಬ ಮೌಲ್ಯವನ್ನು ಕೇವಲ ಮಹಿಳೆಯರಿಗಷ್ಟೇ ಸೀಮಿತಗೊಳಿಸಿರುವುದು ಸಮಂಜಸವೆನಿಸದು.

ಉದಾ: ಪ್ರಸ್ತುತ ದಿನಮಾನದಲ್ಲಿ ಪತಿವ್ರತೆ ಎಂದು ಸಾಬೀತುಪಡಿಸಲು ಮಹಿಳೆ ಬೆತ್ತಲಾಗಬೇಕೆಂಬ ತೀರ್ಮಾನವನ್ನು ತೆಗೆದುಕೊಂಡ ಪಂಚಾಯಿತಿಯ ಒಂದು ನಿದರ್ಶನ ಹೀಗಿದೆ: ಮಹಾರಾಷ್ಟ್ರದ ನಂದೂರ್‌ಬಾರ್ ಸಮೀಪದ ಕುಂಜಾರವಾಡ ಗ್ರಾಮದಲ್ಲಿ ಜಾತಿ ಪಂಚಾಯಿತಿ ಮುಖಂಡರು ವಿಚಿತ್ರವಾದ ಆದೇಶವನ್ನು ನೀಡಿದ್ದಾರೆ. ಅದೇನೆಂದರೆ ಪಂಚಾಯಿತಿಯ ಮುಖಂಡರ ಸಮ್ಮುಖದಲ್ಲಿ ಬೆತ್ತಲೆಯಾಗಿ ಓಡಾಡಬೇಕು ಇಲ್ಲವೇ ನೀನು ಪವಿತ್ರಳಾಗಿರುವುದನ್ನು ಸಾಬೀತುಪಡಿಸಲು ಮಗುವಿನ ಕೈಗೆ ಬಿಸಿ ಕೊಡಲಿ ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ಒಪ್ಪದ ಮಹಿಳೆಯ ಮೇಲೆ ನಿರಂತರ ಒತ್ತಡ ಹೇರಿದ್ದಾರೆ. ಆಕೆ ಇದನ್ನು ನಿರಾಕರಿಸಿ ತವರು ಮನೆಗೆ ಹೋಗಿದ್ದು, ಅಲ್ಲಿಗೂ ಬಂದು ಜಾತಿ ಪಂಚಾಯಿತಿ ಮುಖಂಡರು ಒತ್ತಡ ಹೇರಿದ್ದಾರೆ. ಇದರಿಂದ ನೊಂದ ಮಹಿಳೆ ಸಂಘಟನೆಯೊಂದರ ಮೊರೆ ಹೋಗಿ ಅವರ ನೆರವಿನಿಂದ ಪೊಲೀಸರಿಗೆ ದೂರು ನೀಡಿದ್ದಾಳೆ. (೨-೩-೨೦೧೬. ೨೦:೨೧. Kannada Dunia)

ಕೆಲವು ಸಮುದಾಯಗಳಲ್ಲಿ ತಮ್ಮ ತಮ್ಮಲ್ಲೇ ಪಂಚಾಯಿತಿ ಮುಖಂಡರನ್ನು ನೇಮಿಸಿಕೊಳ್ಳುತ್ತಾರೆ. ಹಿರಿಯರು ಸಮುದಾಯಕ್ಕೆ, ಸಮಾಜಕ್ಕೆ ಮಾರ್ಗದರ್ಶನ ನೀಡಲಿ, ಅದರಿಂದ ಸಮುದಾಯ, ಸಮಾಜಕ್ಕೆ ಒಳಿತಾಗುತ್ತದೆ ಎಂಬ ಕಾಳಜಿ, ಉದ್ದೇಶ ಇದರ ಹಿಂದೆ

ಇರಬಹುದು. ಆದರೆ ಇಂತಹ ಘಟನೆಗಳಿಂದಾಗಿ ಕೇಳಿದರೆ ಮಹಿಳೆ ಪ್ರಾಚೀನ ಕಾಲದಲ್ಲಿ ಅನುಭವಿಸಿದ ನೋವು-ಸಂಕಟಗಳು ಇಂದಿಗೂ ಬೇರೂರಿವೆ. ಆಚಾರ-ವಿಚಾರ, ಸಂಪ್ರದಾಯಗಳು ಭಿನ್ನವಾಗಿರಬಹುದು ಅಷ್ಟೇ. ಆದರೆ ಅದೇ ನೋವು, ಸಂಕಟ, ಸಾಮಾಜಿಕ ಚೌಕಟ್ಟುಗಳು ಇಂದಿಗೂ ವಿಜೃಂಭಿಸುತ್ತಿವೆ. ಅನ್ಯಾಯವಾದಾಗ, ಸಮಸ್ಯೆ ಎದುರಾದಾಗ ಇಂದು ಮಹಿಳಾ ಸಂಘಟನೆಗೆ, ಪೊಲೀಸರಿಗೆ ಮೊರೆ ಹೋಗಬಹುದು. ಆದರೆ ಅವು ಕೂಡ ಎಷ್ಟರಮಟ್ಟಿಗೆ ಆಕೆಗೆ ನ್ಯಾಯ ಒದಗಿಸಿಕೊಡುತ್ತವೆಯೋ ತಿಳಿಯದು. ಜೊತೆಗೆ ಆಕೆಯ ಬೆಂದು ಹೋದ ಮನಸ್ಸಿಗೆ ಎಷ್ಟು ನೆಮ್ಮದಿ ಸಿಗುತ್ತದೆ ಎಂಬುದು ಮುಖ್ಯವಾಗುತ್ತದೆ. ಆದಕಾರಣ ಸಮಾಜದಲ್ಲಿರುವ ಪ್ರತಿಯೊಬ್ಬ ಮಾನವನು ಉತ್ತಮ ಮೌಲ್ಯಗಳನ್ನು ಹೊಂದಿದರೆ ಮಾತ್ರ ಪ್ರತಿಯೊಬ್ಬರು ಸಮೃದ್ಧ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದೇ ಅಪಮೌಲ್ಯಗಳ ಸುಳಿಯಲ್ಲಿ ಸಿಕ್ಕು ಜೀವನವನ್ನು ಸಾಗಿಸುವುದೇ ಮುಂದುವರಿಯುತ್ತದೆ. ಮೌಲ್ಯಗಳೇ ಜೀವನದ ಆಭರಣಗಳು, ಐಶ್ವರ್ಯ ಎಂಬುದನ್ನು ಅರಿತು ಜೀವನವನ್ನು ಸಾಗಿಸುವುದು ಸೂಕ್ತ ಎಂಬ ಅರಿವು ಮೂಡಬೇಕಾದ ಅವಶ್ಯಕತೆ ಇದೆ. ಕಾನೂನಿಗಿಂತ ದೊಡ್ಡದಾದದ್ದು ಮನುಷ್ಯತ್ವ ಎಂಬುದನ್ನು ಅರಿಯುವುದು ಪ್ರಮುಖವಾಗಿದೆ.

ಜೋಗಿಹಾಡು ಕಥನಗೀತೆಯಲ್ಲಿ ಕುಂತಿಯ ಸದ್ಗುಗಣಗಳ ಪ್ರತಿಪಾದನೆ:

ಪಾಂಡುರಾಜ ಸಾಯುವಾಗ ಆತನ ಮಕ್ಕಳು ಚಿಕ್ಕವರಿದ್ದರು. ಇಂತಹ ಸಮಯದಲ್ಲಿ ದಾಯಾದಿಯಾದ ಧೃತರಾಷ್ಟ್ರನು ಕೇಡು ಬಗೆದು ದೊಡ್ಡವರಾದ ಮೇಲೆ ಮುಂದೆ ಪಾಂಡವರ ಮಕ್ಕಳು ದಾಯಾದಿತನಕ್ಕೆ ಬರುವರೆಂದು ತಿಳಿದು ಒಂದೇ ರಾತ್ರಿಯಲ್ಲಿ ಕುಂತಿಯನ್ನು ಮತ್ತು ಆಕೆಯ ಮಕ್ಕಳನ್ನು ಅರಮನೆಯಿಂದ ಗಡಿಪಾರು ಮಾಡಿದನು. ಆಗ ಕೊಂತ್ಯಮ್ಮ ಮಕ್ಕಳನ್ನು ಅಡವಿ ವನವಾಸಕ್ಕೆ ಕರೆದುಕೊಂಡು ಬಂದಳು.

ಕೊಟ್ಟಣವ ಕುಟ್ಟಿ (ಕುಟ್ಟುವ ಕೆಲಸ) ಬ್ರಾಹ್ಮಣರ ಮನೆಯಲ್ಲಿ ಗಂಜಿಗಾಗಿ ದುಡಿಯುವಳು. ಬ್ರಾಹ್ಮಣರು ನಮ್ಮಲ್ಲಿ ದೊರೆತನ ಬರುವಾಗ ಅರಮನೆಯೊಳಗೆ ಒಣ ಚಾಕರಿ ಮಾಡುತ್ತಿದ್ದರು. ಪಾಂಡವರು ಹುಲ್ಲೆ (ಜಿಂಕೆ) ಕೊಂದ ಪಾಪಕ್ಕೆ ಸಿಲುಕಿ ಮೃತಪಟ್ಟಿದ್ದರಿಂದ ನನಗೆ ಈ ಬಡತನ ಬಂದಿದೆಯೆಂದು ಕಣ್ಣೀರು ಸುರಿಸುತ್ತಾ –

> "ಸಿರಿಯ ಸಂಪತ್ತಿನಿಂದ
> ದೊರೆತಾನ ಆಳುತ್ತಿದ್ದ ಕಾಲದಲಿ

ದಾನ ಧರ್ಮವ ನಾನು

ಮಾಡುತ್ತಿದ್ದೆನು ಶಿವನೆ

ಈಗ ಬಡಸ್ತನ ಬಂದಿತ್ಯನುತಂದು"[೧೦]

ತನಗೆ ಬಡತನ ಒದಗಿ ಬಂದ ಪರಿಯನ್ನು ಕೊಂತ್ಯಮ್ಮ ಬಿಚ್ಚಿಡುತ್ತಾಳೆ. ಇರುವುದಕ್ಕೆ ಮನೆಯಿಲ್ಲದೇ ಕುಂಬಾರ ಗುಂಡಯ್ಯನ ಹಾಳು ಗೋಡಿಯ ಒಳಗೆ ಮೂರು ಹೆಂಟೆಯನಿಟ್ಟು, ಅದರ ಮೇಲೆ ಹಳೆಯ ಬಕ್ಕರೆ(ರೊಟ್ಟಿ)ಯನ್ನು ಮಡಗಿ ತೆಳ್ಳನೆ ಗಂಜಿಯನ್ನು ಕಾಯಿಸುತ್ತಾಳೆ. ಹಿಂದೆ ತಾವಿದ್ದ ಐಸಿರಿಯ ಪರಿಯನ್ನು ನೆನೆಯುತ್ತ ಇಂತಹ ಕಷ್ಟ ಪರಂಪರೆಗೆ ಗುರಿಯಾದರೂ ಕೂಡ ದಾನವನ್ನು ಮರೆಯುವುದಿಲ್ಲ. ಹಿಂದೆ ಮಾಡಿದ ದಾನ-ಧರ್ಮವನ್ನು ಮರೆಯುವುದು ಸರಿಯಲ್ಲ ಎನ್ನುತ್ತಾ ಮಾಡಿದ ಅಡುಗೆಯಲ್ಲಿ ಏಳು ಭಾಗವನ್ನು ಮಾಡಿ, ಎರಡು ಭಾಗವನ್ನು ತೆಗೆದು ಪರದೇಶಿಗೆ ದಾನವನ್ನು ಮಾಡುವಳು. ಉಳಿದೈದು ಭಾಗವನ್ನು ತನ್ನ ಐದು ಮಕ್ಕಳಿಗೆ ಕೊಡುವಳು. ತನ್ನ ಹಸಿವನ್ನು ಯಾರಿಗೂ ತೋರಿಸದೆಯೇ ದಾನ-ಧರ್ಮದಲ್ಲಿ ಖುಷಿ ಪಡುವಳು ಕುಂತಿದೇವಿ. ಆದ್ದರಿಂದ ಈ ಕಥನಗೀತೆಯಲ್ಲಿ **ದಾನ-ಧರ್ಮವೆಂಬುದು ಒಂದು ಮೌಲ್ಯ**ವಾಗಿ ಬಿಂಬಿತವಾಗಿದೆ. ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಗೆ. ಕೊಟ್ಟಿದ್ದು ಕೆಟ್ಟಿತೆನಬೇಡ ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ ಎಂಬ ಸರ್ವಜ್ಞನ ಮಾತು ಇಲ್ಲಿ ನೆನಪಾಗುತ್ತದೆ. ಹಸಿವಾದಾಗ ಹಸಿದವರಿಗೆ ಅನ್ನ ನೀಡಿದರೆ ಅವರ ಹಾರೈಕೆ ಎಂದಿಗೂ ನಮ್ಮೊಂದಿಗೆ ಇರುತ್ತದೆ ಎಂಬ ಮಾನವೀಯತೆ ಕುಂತಿಯಲ್ಲಿರುವುದು ಎದ್ದು ಕಾಣುತ್ತದೆ.

ಕುಂತಿಯು ತನ್ನ ಜೀವನದಲ್ಲಿ ಎಷ್ಟೇ ಕಷ್ಟಗಳು ಎದುರಾದರೂ ತನ್ನ ಆದರ್ಶ ವ್ಯಕ್ತಿತ್ವವನ್ನು ಉಳಿಸಿ ಬೆಳೆಸಿಕೊಂಡು ಬಂದಳು. ಇಂದಿನ ಜೀವನದಲ್ಲಿ ಐಶಾರಾಮಿ ಜೀವನವನ್ನು ಅಪೇಕ್ಷಿಸುವ ಮಹಿಳೆಯರಿಗೆ ಇದ್ದದ್ದರಲ್ಲಿಯೇ ಹೇಗೆ ಬದುಕು ಸಾಗಿಸಿಕೊಂಡು ಹೋಗಬೇಕೆಂಬುದರಲ್ಲಿ ಮಹತ್ವದ ಪಾತ್ರ ವಹಿಸುತ್ತಾಳೆ. ಉಡುವುದಕ್ಕೆ ಬಟ್ಟೆ ಇಲ್ಲದೇ ಇದ್ದರೂ ಹಾದಿ ಒಳಗಿರುವ ಚಿಂದಿ, ಬೀದಿಯೊಳಗಿರುವ ಚಿಂದಿ, ತಿಪ್ಪೆ ಹಳ್ಳದ ಚಿಂದಿಗಳೆಲ್ಲವನ್ನು ಎತ್ತಿಕೊಂಡು ಹೋಗಿ ಹರಿಯುವ ಜಲದಲ್ಲಿ ಮಡಿಗಳನ್ನು ಮಾಡಿ ಸೂಜಿದಾರವಿಲ್ಲದೇ ಸೆಣಬಿನ ಒಳಗೆ ಹಂಚಿಯ ಕಡ್ಡಿಯ ಹಾಕಿ ಮೂರು ಮೊಳ ತುಡಿಬಿಗಳನ್ನು ಹೊಲೆದು ಧರಿಸುವಳು. ಮಕ್ಕಳಿಗೆ ಮಲಗಲು ಆಲದ, ಅಳ್ಳಿಯ ಮರದ ಒಣಗಿದ ಎಲೆ, ಗರಿಗಳನ್ನು ಗುಡಿಸಿ ತಂದು ಐದು ಮಕ್ಕಳಿಗೆ ಹಾಸಿಗೆ ಮಾಡಿ ಮಲಗಿಸಿ ತಾನು ಹಾಗೆಯೇ ಕುಳಿತು

---

೧೦. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೩೫೬

ಕಾಲವನ್ನು ಕಳೆಯುತ್ತಿದ್ದಳು. ಮಕ್ಕಳು ಮಲಗಿದ ಮೇಲೆ ತಾನು ಉಟ್ಟಿದ್ದಂತಹ ಮೂರು ಮೊಳ ತಡಬಿಗಳನ್ನು ಬಿಚ್ಚಿ ಐದು ಮಕ್ಕಳಿಗೆ ಹೊದಿಸಿ ತಾನು ಅಳ್ಳಿಯ ಒಣಗಿದ ಎಲೆಗಳ ಮೇಲೆ ಮಲಗುವವಳು ಮತ್ತು ಈಕೆಯ ಮಕ್ಕಳಾದ ಪಾಂಡವರು (ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ) ಕೂಡ ತಾಯಿಯ ಮಾತನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದರು. ಆದ್ದರಿಂದ ಅಣ್ಣನಾದ ಧರ್ಮರಾಯನ ಮಾತನ್ನು ತಮ್ಮಂದಿರೆಲ್ಲ ಕೇಳುತ್ತಿದ್ದರು. ಕೌಟುಂಬಿಕ ಕಲಹಗಳು ಹೆಚ್ಚುತ್ತಿರುವ ಈ ದಿನಮಾನಗಳಲ್ಲಿ ಐಕ್ಯತಾ ಮನೋಭಾವ ಬೆಳೆಸಿಕೊಳ್ಳುವಲ್ಲಿ ಆದರ್ಶ ಸಹೋದರತ್ವಕ್ಕೆ ಸಂಕೇತವಾಗಿ ಇವರ ಬದುಕು ಕಂಡುಬರುತ್ತದೆ. ಕುಂತಿ ಈಗಲೂ ಕೂಡ ಜನಪದರಲ್ಲಿ ದೇವರಾಗಿ ಪೂಜೆಗೊಳ್ಳುತ್ತಿದ್ದಾಳೆ. ಕಾರಣ ಆಕೆಯಲ್ಲಿರುವ ಗುಣಗಳೇ ಆಕೆಯನ್ನು ದೇವರ ಸ್ಥಾನಕ್ಕೆ ಕೊಂಡೊಯ್ದಿರುವುದು ಎಂದರೆ ತಪ್ಪಾಗಲಾರದು.

ಕುಂತಿಯು ಸತ್ಯ, ಸಹನೆ, ಶೀಲ, ತ್ಯಾಗ, ಸೇವೆ ಮುಂತಾದ ಸದ್ಗುಣಗಳ ಗಣಿಯಾಗಿರುವಳು. ಪಾಶ್ಚಾತ್ಯ ಸಂಸ್ಕೃತಿಯಿಂದ ಭಾರತೀಯ ಸಂಸ್ಕೃತಿಯು ಕಣ್ಮರೆ ಆಗುತ್ತಿದ್ದರೂ, ನಮ್ಮ ದೇಶದಲ್ಲಿ ಆದರ್ಶ ಗುಣಗಳು ಇಂಥವರಿಂದ ದೊರಕುತ್ತವೆ. ಆದರೆ ಅವುಗಳನ್ನು ಅನ್ವಯಿಸಿಕೊಂಡು ಹೋಗಿ ಜೀವನಾದರ್ಶಗಳನ್ನು ಪ್ರಮಾಣೀಕರಿಸಬೇಕು. ಇಂತಹ ಆದರ್ಶ ಗುಣಕ್ಕೆ ಈ ಕಥನಗೀತೆ ನಿದರ್ಶನವಾಗಿ ನಿಲ್ಲುತ್ತದೆ. ಕುಂತಿಯ ಗುಣಗಳನ್ನು ಕಂಡ ದುರ್ವಾಸ ಮುನಿಗಳು ಮೆಚ್ಚುಗೆಯನ್ನು ನೀಡಿ ಆಕೆಯ ಅತಿಥಿ ಸತ್ಕಾರ ಗುಣಕ್ಕೆ ಸಂತೋಷಗೊಂಡರು. ಪ್ರಸ್ತುತದಲ್ಲಿ ಅತಿಥಿ ಸತ್ಕಾರ ಅನ್ನುವುದು ಮರೆಯಾಗುತ್ತಿದೆ. ಇದ್ದರೂ ಅಷ್ಟಕಷ್ಟೇ. ಅತಿಥಿ ದೇವೋಭವ ಎಂದು ಜನಪದರು ಭಾವಿಸುತ್ತಿದ್ದರು. ಆದರೆ ವಾಸ್ತವದಲ್ಲಿ ಅತಿಥಿಗಳು ಮನೆಗೆ ಏತಕ್ಕಾಗಿ ಬರುವವರೋ ಎಂಬ ಚಿಂತೆಯಲ್ಲಿ ಮುಳುಗಿರುತ್ತಾರೆ. ಕಾರಣ ಕೆಲಸದ ಒತ್ತಡಗಳು ಮತ್ತು ಸಂಸ್ಕಾರದ ಕೊರತೆ.

ಕಡ್ಲಿಮಟ್ಟಿ ಕಾಶಿಬಾಯಿಯಲ್ಲಿಯ 'ಪಾತಿವ್ರತ್ಯ' ಪ್ರತಿಪಾದನೆ :

ಕಾಶಿಬಾಯಿಯ ತವರಿಗೆ ಹೋದ ಸಂದರ್ಭದಲ್ಲಿ ಗಂಡ ತನ್ನ ತಂದೆ-ತಾಯಿಯ ಅಪ್ಪಣೆ ಮೇರೆಗೆ ಹೋಗಿ ಕರೆಯುತ್ತಾನೆ. ಸಾಮಾನ್ಯವಾಗಿ ಬಾಣಂತಿ ಮಹಿಳೆಯನ್ನು ಗಂಡನ ಮನೆಗೆ ಕಳುಹಿಸುವಾಗ ಸೀರೆ-ಕುಪ್ಪಸ, ತೊಟ್ಟಲು-ಬಟ್ಟಲು ತರುವ ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವಂತಹದ್ದು. ಆದರೆ ಅಳಿಯನಿಗೆ ಕಾಶಿಬಾಯಿಯ ತವರಿನವರು ಸೀರೆ-ಕುಪ್ಪಸ ತಂದಿಲ್ಲ, ಬಿಸಿಲು ಬಹಳ ಇದೆ. ಸಣ್ಣ ಶಿಶುವಿಗೆ ಸಂಕಟವಾಗುತ್ತೆ

ಅದಕ್ಕೆ ಈಗ ಕಳುಹಿಸುವುದಿಲ್ಲ ಎನ್ನುವರು. ಇದರಿಂದ ಅಳಿಯ ಖಿನ್ನತೆಗೊಳಗಾಗಿ ಬಲು ಜ್ವಾಕಿಯಿಂದ ನನ್ನ ಪುತ್ರನನ್ನು ನೋಡಿಕೋ, ಸುರಕ್ಷಿತವಾಗಿ ಕರೆದುಕೊಂಡು ಬಾ ಎಂದು ಕಾಶಿಬಾಯಿಗೆ ಹೇಳಿ ಊಟವನ್ನೂ ಮಾಡದೇ ಸಿಟ್ಟಿನಿಂದ ಹೋಗುತ್ತಾನೆ. ಇತ್ತ ಕಾಶೀಬಾಯಿ ಗಂಡನ ಸಿಟ್ಟನ್ನು ನೋಡಿ ಕೂಸನ್ನು ಬಗಲಲ್ಲಿ ಇಟ್ಟುಕೊಂಡು ತನ್ನ ಗಂಡನ ಮನೆಗೆ ಹೋಗಬೇಕೆಂದು ಹೋಗುವಳು. ಪತಿಯ ಮೇಲಿನ ಪ್ರೀತಿಯಿಂದಲೋ ಅಥವಾ ಗಂಡನ ಮನೆಯೇ ತನಗೆ ಶಾಶ್ವತವೆಂತಲೋ ಒಟ್ಟಿನಲ್ಲಿ ಗಂಡ ಹೋದ ನಂತರ ಈಕೆಯೂ ಆತನ ಹಿಂದೆ ಹೋಗುತ್ತಾಳೆ. ಆದರೆ ಈಕೆ ಹೋಗುವುದರೊಳಗೆ ರೈಲು ಹೋಗಿರುವ ಕಾರಣ ಹಲವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾದಂತಹ ಪ್ರಸಂಗಗಳು ಆಕೆಗೆ ಒದಗಿ ಬರುತ್ತವೆ. ಸ್ಟೇಷನ್ ಮಾಸ್ತರರ ಕಾಮುಕ ದೃಷ್ಟಿ ಕಾಶಿಬಾಯಿಯ ಮೇಲೆ ಬಿದ್ದು, ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳಲು ಮಗುವನ್ನು ಕೂಡಾ ಲೆಕ್ಕಿಸದೇ ಪಾತಿವ್ರತ್ಯದ ಮಹತ್ವವನ್ನು ಎತ್ತಿ ಹಿಡಿಯುತ್ತಾಳೆ. ಅಷ್ಟೇ ಅಲ್ಲದೆ ಆಕೆಯ ಪ್ರಗತಿಪರ ನಿಲುವನ್ನೂ ಈ ಕಥನಗೀತೆ ಎತ್ತಿ ತೋರಿಸುತ್ತದೆ.

ಸ್ಟೇಷನ್ ಮಾಸ್ತರನು ಕಾಶಿಬಾಯಿಯ ಕೂಸನ್ನು ಹಿಡಿದುಕೊಂಡು ನೀನು ನನ್ನ ಹತ್ತಿರ ಬರದಿದ್ದರೆ ಮಗುವನ್ನು ಕೊಲ್ಲುತ್ತೇನೆ ಎಂದು ಕ್ರೂರ ಕಾಮುಕತನದ ಮಾತನ್ನಾಡುತ್ತಾನೆ.

ಈಗ ಬಂದರ ಬಿಡತೀನ ನಾನS।
ಬರದಿದ್ರ ಹೊಡಿಯತೀನಿ ಪ್ರಾಣ ।
ನನ್ನ ಕೈಯಾಗ ಕೂಸಿನ ಮರಣ ।
ಇದು ಸುಳ್ಳ ಖರೆ ನಿನ್ನ ಗಂಡನ ಪ್ರಮಾಣ ಹೋ ಜೀ ಜೀ ಜೀ"[೧೧]

ಎಂದು ಕಿಡಕಿಯ ಒಳಗಿನಿಂದ ಹೇಳುತ್ತಾನೆ. ಕಾಮಾತುರನಾದ ಸ್ಟೇಷನ್ ಮಾಸ್ತರನು ಆ ಮಗುವನ್ನು ಇಟ್ಟುಕೊಂಡು ಆಕೆಯನ್ನು ಹೆದರಿಸಿ ತನ್ನ ವಶಪಡಿಸಿಕೊಳ್ಳಬೇಕೆಂದು ಹವಣಿಸುತ್ತಾನೆ. ಆಗ ಕಾಶೀಬಾಯಿ ಆಡಿದ ಮಾತುಗಳು ಸ್ತ್ರೀಕುಲಕ್ಕೆ ಮಾದರಿಯಾಗಿವೆ.

"ಕೇಳ ಶ್ವಾನ, ಬದುಕಿರಲಿ ನನ್ನ ಒಗತಾನ
ಇಂಥಾವ ಏಸೋ ಮಂದಿ ಮಕ್ಕಳನ

---

೧೧. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೨೯

ನನ್ನ ಗಂಡಗಾಸೆ ಇದ್ರ ಮುಂದ ಎತ್ತಿ ಇಳಿಸೇನ

ಇದು ಒಂದು ಸತ್ತು ಹೋಗಲಿ ನನ್ನ ಪುತ್ತರ ಇಲ್ಲ ದರಕಾರ"[೧೨]

ಎಂದು ಪತಿವ್ರತಾ ಶಿರೋಮಣಿಯಾದ ಕಾಶೀಬಾಯಿಯು ಮುಖದ ಮೇಲೆ ಹೊಡೆದ ಹಾಗೆ ದಿಟ್ಟತನದಿಂದ ತನ್ನ ನೋವನ್ನು ತೋರಿಸಿಕೊಳ್ಳದೆ ಕಾಮುಕ ಸ್ಟೇಷನ್ ಮಾಸ್ತರನಿಗೆ ತಕ್ಕ ಉತ್ತರ ನೀಡುತ್ತಾಳೆ. ಈ ಒಂದು ಉತ್ತರದಿಂದಲೆ ಆಕೆಯಲ್ಲಿರುವ ದಿಟ್ಟತನ, ಶೀಲದ ಬಗೆಗೆ ಇರುವ ಗೌರವ ತಿಳಿದು ಬರುತ್ತದೆ.

ಕಾಶಿಬಾಯಿ ಕಥನಗೀತೆಯು ಉತ್ತರ ಕರ್ನಾಟಕದಲ್ಲಿ ಇಹಪರ ಕಥಾವಸ್ತು ಪ್ರಸಿದ್ಧಿಯನ್ನು ಪಡೆದಿದೆ. ಹೆಣ್ಣಿನ ಜೀವನದಲ್ಲಿ ಶೀಲಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಅದು ಅವಳ ವ್ಯಕ್ತಿತ್ವದ ಪಾವಿತ್ರ್ಯವೆಂದು ಕೂಡ ನಿರೂಪಿಸಲ್ಪಡುತ್ತದೆ. ಮಹಿಳೆ ಪಾತಿವ್ರತ್ಯ ಕಳೆದುಕೊಂಡರೆ ಅವಳಿಗೆ ಸ್ಥಾನವಿಲ್ಲ. ಅಷ್ಟೇ ಅಲ್ಲದೆ ಅವಳು ಸ್ತ್ರೀ ಸಮೂಹದ ಚರಿತ್ರೆಗೆ ಕುಂದು ತರಬಲ್ಲ ಕೆಟ್ಟ ಮಾದರಿಯಾಗಿ ರೂಪಿತವಾಗುತ್ತಾಳೆ. "ಒಂದು ವೇಳೆ ಕೋತಿ ತನ್ನ ಜೀವನ ಕೊಟ್ಟು ಮರಿಯನ್ನು ಕಾಪಾಡಲು ಬಯಸಿದ್ದರೆ. ಆ ತಾಯಿಯ ಬಗ್ಗೆ ಎಂತಹ ಭಾವನೆ ನಮ್ಮಲ್ಲಿ ಮೂಡಬಹುದಾಗಿತ್ತೋ ಕಾಶೀಬಾಯಿಯು ತನ್ನ ತ್ಯಾಗದಲ್ಲಿ ಮಗುವನ್ನು ಉಳಿಸಿಕೊಳ್ಳಲು ಬಯಸಿದ್ದರೆ ಅದಕ್ಕಿಂತಲೂ ಪೂಜ್ಯ ಭಾವನೆ ನಮ್ಮಲ್ಲಿ ಮೂಡುತ್ತಿತ್ತು."[೧೩] ಮೂಕ ಪ್ರಾಣಿಯಾದ ಕೋತಿಯು ತನ್ನ ಮಗುವನ್ನು ಉಳಿಸಲು ತಲೆಯ ಮೇಲೆ ಎತ್ತಿಕೊಂಡು ಶತಪ್ರಯತ್ನ ಮಾಡುತ್ತದೆ. ಯಾವಾಗ ನೀರು ತನ್ನ ಕುತ್ತಿಗೆಯ ಮೇಲ್ಮಟ್ಟಕ್ಕೆ ಬರುತ್ತದೋ ಆಗ ತನ್ನದೇ ಕಂದಮ್ಮನನ್ನು ಕಾಲ್ಕೆಳಗೆ ಹಾಕಿ ಅದರ ಮೇಲೆ ನಿಂತು ತನ್ನ ಪ್ರಾಣ ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಅಂತೆಯೇ ಕಾಶೀಬಾಯಿಯು ತನ್ನ ಶೀಲ ಉಳಿಸಿಕೊಳ್ಳಲು ತನ್ನ ಮಗುವನ್ನು ಲೆಕ್ಕಿಸದೇ ತನ್ನತನವನ್ನು ಕಾಪಾಡಿಕೊಳ್ಳುತ್ತಾಳೆ.

ಸುಶೀಲೆಯಾದ ಮಹಿಳೆ ತನ್ನ ಗಂಡನ ಹೊರತು ಪರಪುರುಷನಿಗೆ ತನ್ನನ್ನು ಒಪ್ಪಿಸಿಕೊಳ್ಳುವುದಿಲ್ಲ. ಸಮಾಜವನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಿರುವಾಗ ಕಾಶೀಬಾಯಿ ತಾನು ತ್ಯಾಗ ಮಾಡಿ ಮಗುವನ್ನು ಉಳಿಸಿಕೊಂಡಾಗ ಸಮಾಜ ಹಲವಾರು ಕಥೆಗಳನ್ನು ಕಟ್ಟಬಹುದು. ಸ್ಟೇಷನ್ ಮಾಸ್ತರನಿಗೆ ಆಕೆಗೆ ಸಂಬಂಧವಿದ್ದಿರಬೇಕು, ಅದಕ್ಕಾಗಿ ಅವಳು ಅಲ್ಲಿ ಹೋಗಿರಬಹುದೆಂಬ ಸಂಶಯ ಕಾಡಬಹುದು. ಹೀಗೆ ಸಮಾಜವು ಒಳ್ಳೆದನ್ನು ಕೆಟ್ಟದ್ದಾಗಿ

---

೧೨. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೨೯

೧೩. ಕನ್ನಡ ಜನಪದ ಪ್ರಜ್ಞೆ : ವೀರಣ್ಣ ದಂಡೆ, ಪು.೬೬

ನೋಡುತ್ತಿರುವಾಗ ಆಕೆಗೆ ಯಾವುದೇ ಅಪವಾದವನ್ನು ಹೊರಿಸಲು ಹಿಂಜರಿಯುವುದಿಲ್ಲ. ಆದಕಾರಣ ಇಡೀ ಸ್ತ್ರೀ ಸಮೂಹಕ್ಕೆ ಮಾದರಿಯಾಗಬೇಕಾದ ನಿಲುವನ್ನು ಕಾಶೀಬಾಯಿ ತೆಗೆದುಕೊಂಡಳು ಎನ್ನಬಹುದು. ಒಟ್ಟಿನಲ್ಲಿ ಈ ಕಥನಗೀತೆಯಲ್ಲಿ ಸಾಮಾಜಿಕ ಮೌಲ್ಯದ ಮುಂದೆ ವೈಯಕ್ತಿಕ ಮೌಲ್ಯಗಳು ಬಲಿಯಾಗುವುದನ್ನು ಕಾಣುತ್ತೇವೆ.

ಊರಿನ ಮುಖಂಡರು ಪಂಚಾಯಿತಿಯ ಮುಖಂಡತ್ವದ ಮೇಲೆ ಊರಿನ ಸಮಸ್ಯೆಗಳನ್ನು ಬಗೆಹರಿಸುತ್ತಿರುವದಕ್ಕೆ ತಿಲಾಂಜಲಿ ಇಟ್ಟು, ಕಾನೂನಾತ್ಮಕವಾಗಿ ಬಗೆಹರಿಸಲು ಅವಕಾಶ ಕಲ್ಪಿಸಿದೆ. ಸಮಾನತೆಗಾಗಿ ಕಾನೂನುಗಳು ಇದ್ದಾಗಲೂ ಹಲವಾರು ಸಮಸ್ಯೆ, ಪ್ರಶ್ನೆಗಳು ಉದ್ಭವಿಸುತ್ತಿರುವವು. ಸಮಸ್ಯೆಗಳು ಸ್ವರೂಪದಲ್ಲಿ ಮಾತ್ರ ಬದಲಾವಣೆಯಾಗಿ ಸಮಸ್ಯೆಗಳು ಪರಿಹಾರವಾಗದೆ ಉಳಿದುರುವುದು ಭಾರತದ ದುರಂತವಾಗಿದೆ. ಅದರಲ್ಲೂ ಪ್ರಾಚೀನ ಕಾಲದಿಂದ ಮಹಿಳೆಯರಿಗೆ ಹೇರಿದ ಮೌಲ್ಯಗಳು ಸಾಕಷ್ಟು. ಮೌಲ್ಯಗಳು ಮಹಿಳೆಗಷ್ಟೇ ಸೀಮಿತ ಎನ್ನುವಷ್ಟು ವಿಸ್ತಾರವಾಗಿದ್ದವು. ಇಂದಿಗೂ ಕೂಡ ಬಹುಪಾಲು ಕುಟುಂಬಗಳಲ್ಲಿ ಮೌಲ್ಯಗಳೇನಿದ್ದರೂ ಮಹಿಳೆಯರಿಗೆ ಮೀಸಲು. ಆದರೆ ಪುರುಷರಿಗೆ ಮೌಲ್ಯಗಳಿದ್ದರೂ ಕೂಡ ಒತ್ತಾಯಪೂರ್ವಕವಾಗಿ ಹೇರಲಾಗುವುದಿಲ್ಲ. ಏಕೆಂದರೆ ಸಮಾಜದಲ್ಲಿ ಇರುವ ಪುರುಷರಿಗೆ ಸ್ಥಾನಮಾನ, ಬೆಲೆ, ಕಾಳಜಿ ಮುಂತಾದವು ಮೌಲ್ಯಗಳು ಅವರಿಗೆ ಇದ್ದಲ್ಲಿಯೇ ಬಂದು ಸೇರುತ್ತವೆ. ಮಹಿಳೆಯರು ಅವುಗಳನ್ನು ಸಂಪಾದಿಸಿ, ಸಮಾಜದಿಂದ ಉತ್ತಮ ಬಿರುದುಗಳನ್ನು ತೆಗೆದುಕೊಳ್ಳಲು ಜೀವನವಿಡೀ ಏಗಬೇಕು. ಇಷ್ಟೆಲ್ಲಾ ಏಗಿದರೂ ಅದು ಸಾರ್ಥಕತೆ ಪಡೆಯುವುದು ಬಹು ವಿರಳ. ಸಮಾಜ ಒಳ್ಳೆದಿದ್ದರೂ ಅನ್ನುತ್ತೆ ಕೆಟ್ಟದಿದ್ದರೂ ಅನ್ನುತ್ತೇ ಎನ್ನುವಷ್ಟರ ಮಟ್ಟಿಗೆ ಸಮಾಜದ ಬಗ್ಗೆ ಜಿಗುಪ್ಸೆ ಹೊಂದಿದ ಅನೇಕ ಮಾನವರನ್ನು ಕಾಣಬಹುದು. ಮಾನವನು ರೂಪದಲ್ಲಿ ಹೇಗೆ ಭಿನ್ನವಾಗಿರುತ್ತಾನೋ ಹಾಗೆಯೇ ಇಡೀ ಸಮಾಜದ ದೃಷ್ಟಿಕೋನ ಬೇರೆ-ಬೇರೆಯಾಗಿರುತ್ತವೆ. ಆದ್ದರಿಂದಲೇ ಸಮಾಜ ಒಂದೇ ನಿಲುವಿನ ಮೌಲ್ಯಗಳಡಿಯಲ್ಲಿ ಹೋಗದೆ ಹಲವಾರು ಸಮಸ್ಯೆಗಳ ಆಗರವಾಗಿ ಬೃಹತ್ ಆಕಾರದಲ್ಲಿ ನಿಂತಿದೆ.

ಕಾಶೀಬಾಯಿ ಅಂದು ಕಾಮುಕ ಸ್ಟೇಷನ್ ಮಾಸ್ತರನಿಗೆ ಆಡಿದ ಮಾತಿನಂತೆ ಇಂದು ಅಂತಹ ದಿಟ್ಟತನದಿಂದ ಮಾತನಾಡುವಂತಹ ಶಕ್ತಿ, ಧೈರ್ಯದ ಅವಶ್ಯಕತೆ ಇದೆ. ಏಕೆಂದರೆ ಮಹಿಳೆಯರು ಸಮಾಜದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಮಾನಸಿಕ, ದೈಹಿಕ ಹಿಂಸೆಯನ್ನು ಅನುಭವಿಸುತ್ತಾ ಇರುವರು. ದಿನದಿನಕ್ಕೆ ಶೋಷಣೆಗಳು ಹೆಚ್ಚುತ್ತಿವೆ. ಗಂಡನ

ಮೇಲೆ ಪ್ರಮಾಣ ಮಾಡಿದರೂ, ಮಗುವನ್ನು ತುಂಡು ತುಂಡಾಗಿ ಕತ್ತರಿಸಿ ಒಗೆದರೂ ಆಕೆ ತನ್ನ ಶೀಲವನ್ನು ಕಾಪಾಡಿಕೊಂಡು ಬಂದು ಮಹಾನ್ ಸಾಧ್ವಿಯಾಗಿ ಇಡೀ ನಾಡಿಗೆ ಹೆಸರುವಾಸಿಯಾಗಿ ಹೋದಳು. ಆದ್ದರಿಂದ ಆಕೆಯಲ್ಲಿರುವ ಮೌಲ್ಯ ಶಾಶ್ವತವಾಗಿ ಸಮಾಜದಲ್ಲಿ ಬೇರೂರಿದೆ.

ಪಾತಿವ್ರತ್ಯ ಎನ್ನುವುದು ಪ್ರಾಚೀನ ಕಾಲದಿಂದಲೂ ಒಂದು ಮೌಲ್ಯವಾಗಿಯೇ ನಿರೂಪಿತವಾಗಿದೆ. ಮಹಿಳೆಯರಿಗೆ ಇದೊಂದು ಶ್ರೇಷ್ಠವಾದ ಮೌಲ್ಯವೆಂದು ತಿಳಿದು ಅದನ್ನು ಕಾಪಾಡಿಕೊಳ್ಳಲು ಎಂತಹದೇ ಪರಿಸ್ಥಿತಿ ಎದುರಾದರೂ ಕಾಪಾಡಿಕೊಳ್ಳಲು ಮುಂದಾಗುವರು. ಕೆಲವೊಂದು ಸಾರಿ ಅಸಹಾಯಕರಾಗಿ ಶೋಷಣೆಗೆ ಒಳಗಾಗಿ ಪಾತಿವ್ರತ್ಯವನ್ನು ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆಗಳೂ ಸಾಕಷ್ಟು ದೊರಕುತ್ತವೆ. ಏಕೆಂದರೆ ತನ್ನಲ್ಲಿರುವ ಒಂದು ಮೌಲ್ಯವನ್ನು ಕಳೆದುಕೊಂಡು ಸಮಾಜದಲ್ಲಿ ಮುಖ ಎತ್ತಿ ಅಡ್ಡಾಡಲೂ ಆಗದೆ ಅಸಹ್ಯಪಟ್ಟುಕೊಂಡು ಬದುಕುವುದಕ್ಕಿಂತ ಸಾವಿಗೆ ಶರಣಾಗುವುದೇ ಶ್ರೇಷ್ಠ ಎನಿಸಿ ಸಾವಿಗೆ ಶರಣಾಗುತ್ತಾಳೆ. ಇಲ್ಲಿ ಪಾತಿವ್ರತ್ಯ ಎನ್ನುವುದು ಕೇವಲ ಮಹಿಳೆಯರಲ್ಲಿ ಅಷ್ಟೇ ಇರುತ್ತೆ ಎಂದು ಸಮಾಜ ನಂಬಿಸಿಬಿಟ್ಟಿದೆ. ಪುರುಷರಲ್ಲಿಯೂ ಕೂಡ ಪಾತಿವ್ರತ್ಯ ಎಂಬುದು ಇರುತ್ತದೆ. ಹಾಗಾಗಿ ಅದನ್ನು ಕಾಪಾಡಿಕೊಂಡು ಬರುವುದು ಒಂದು ಮೌಲ್ಯ ಎಂಬುದನ್ನು ತಿಳಿಸುವುದೇ ಇಲ್ಲ. ಆದ್ದರಿಂದ ಪುರುಷ ಸಮಾಜವು ಪಾತಿವ್ರತ್ಯದ ಬೆಲೆಯು ತಮ್ಮಲ್ಲಿರುವುದನ್ನು ಅರಿಯದೇ ನಿಕೃಷ್ಟವಾಗಿ ನಡೆಯುವುದು, ವರ್ತಿಸುವುದು ಕಂಡುಬರುತ್ತದೆ. ಇದಕ್ಕೆ ಕಡಿವಾಣ ಹಾಕಿ ಅವರಿಗೂ ಕೂಡ ಪಾತಿವೃತ್ಯ ಎಂಬುದು ಒಂದು ಮೌಲ್ಯ. ಅದನ್ನು ಕಾಪಾಡಿಕೊಂಡು ಹೋಗುವುದು ಅವರ ಜವಾಬ್ದಾರಿಯೆಂದು ಮನದಟ್ಟು ಮಾಡಬೇಕು.

ನೀಲಗಂಗಾಳಲ್ಲಿರುವ ಪಾತಿವೃತ್ಯ ಪ್ರತಿಪಾದನೆ :

ಇದು ಕನ್ನಡ ಜನಪದ ಕಥನಗೀತೆಗಳಲ್ಲಿ ಒಂದು ಮಹತ್ವವಾದ ಕಾವ್ಯವಾಗಿದ್ದು, ನಮ್ಮ ಜನಪದ ಸಮಾಜ ಪಾತಿವ್ರತ್ಯಕ್ಕೆ, ಶೀಲಕ್ಕೆ ಹೆಚ್ಚು ಮನ್ನಣೆಯನ್ನು ನೀಡಿ ಜನಪದರ ಮೌಲ್ಯಗಳನ್ನು ಅನಾವರಣಗೊಳಿಸುತ್ತದೆ. ಮಹಿಳೆಯ ಬದುಕಿನಲ್ಲಿ ಪ್ರಾಣಕ್ಕಿಂತ ಮಾನ ಎಷ್ಟೊಂದು ಪ್ರಾಧಾನ್ಯತೆಯನ್ನು ಪಡೆದಿತ್ತು ಎಂಬುದಕ್ಕೆ ಹಲವಾರು ಕಥನಗೀತೆಗಳು ಸಾಕ್ಷಿಯಾಗಿರುವಲ್ಲಿ ಇದು ಒಂದು.

ತಂದೆ-ತಾಯಿ ಸತ್ತು ಹನ್ನೆರಡು ವರುಷವಾಗಿದೆ. ಆಗ ನೀಲಗಂಗಾಳ ಭಾವ ಆಕೆಯನ್ನು ಕರೆಯಲು ಬಂದಿದ್ದಾನೆ. ಇತ್ತ ಅಣ್ಣ ನೀಲಗಂಗಾಳಿಗೆ ಸೀರೆ ಉಟ್ಟು, ನಿನ್ನ

ಗೆಳತಿಯರಿಗೆ ಹೇಳಿ ಬಾ ತಂಗಿ ಎಂದು ಹೇಳಿ, ಭಾವನಿಗೆ ತಂಗಿಗೆ ಬಿಸಿಲು ಬಡಿಯದ ಹಾಗೆ ಮುಸುಕನ್ನು ಹಾಕಿ, ನೀರಡಿಕೆ ಆದರೆ ಗಿಂಡೀಲಿ ನೀರು ಕುಡಿಸಿ ಎಂದು ಹೇಳಿ ಕಳುಹಿದನು. ಆದರೆ ವಿಪರ್ಯಾಸವೆಂದರೆ ಇಲ್ಲಿ ನೀಲಗಂಗಾಳ ಜೀವನ ದುರಂತವಾಗುತ್ತದೆ. ಏಕೆಂದರೆ ನೀಲಗಂಗಾಳ ಭಾವ ತವರಿಗೆ ಹೊಡೆಯುವ ಕುದುರೆಯನ್ನು ತೆಗ್ಗಿಗೆ ಹೊಡೆಯುತ್ತಾನೆ. ಅಷ್ಟೇ ಅಲ್ಲದೆ ಆಕೆಯ ಮೈ ಕೈಗಳನ್ನು ಮುಟ್ಟಲು ಹೋಗಿದ್ದಾನೆ. ಇದರಿಂದ ಸಿಟ್ಟಿಗೆದ್ದು ನೀಲಗಂಗಾ ಮಡುವುಗೆ (ಹಳ್ಳ) ಧುಮುಕಿದಳು. ನಿರ್ಜನ ಪ್ರದೇಶಕ್ಕೆ ಕರೆದೊಯ್ದು ನೀಲಗಂಗಾಳ ಮೈ-ಕೈ ಮುಟ್ಟಲು ಹೋದಾಗ ಆಕೆ ಪ್ರತಿಭಟಿಸಿ ಹೊಳೆಗೆ ಹಾರಿದ್ದಾಳೆಂಬ ಸಂಗತಿ ತಿಳಿಯುತ್ತದೆ. ತನ್ನ ಮಾನಕ್ಕೆ ಧಕ್ಕೆ ಬರುತ್ತದೆ ಎಂದಾಗ ತನ್ನ ಬದುಕನ್ನು ಎಳ್ಳಷ್ಟೂ ಪರಿಗಣಿಸದೆ ಜೀವ ಹೋದರೂ ಶೀಲ ಕಳೆದುಕೊಳ್ಳಬಾರದೆಂದು ಭಾವಿಸಿ ಪಾತಿವ್ರತ್ಯ ಉಳಿಸಿಕೊಳ್ಳಬೇಕೆಂದು ಹಳ್ಳಕ್ಕೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ.

ಮುಂದೆ ಆ ಊರ ಹಾದಿಯಲ್ಲಿ ಬತ್ತಲ ಕುದುರಿ ಬರುತ್ತದೆ. ಅಣ್ಣ ಸಹದೇವಣ್ಣ ಒಬ್ಬನೇ ಬರುತ್ತಿರುವನಲ್ಲ. ಮಡದಿ ನೀಲಗಂಗಾಳನ್ನು ಎಲ್ಲಿ ಕಳುಹಿಸಿದನು ಎಂದು ಕೇಳಿದಾಗ ಆ ಊರ ಹಾದಿಯಲ್ಲಿ ಏಳು ಜನ ಕಳ್ಳರು ನೀಲಗಂಗಾನ ಮೈ-ಕೈ ಮುಟ್ಟಲು ಹೋಗ್ಯಾರ ಅದಕ್ಕಾಗಿ ಆಕೆ ಸಿಟ್ಟಿನಿಂದ ಹಳ್ಳಕ್ಕೆ ಹಾರಿದ್ದಾಳೆ ಎಂದು ಸುಳ್ಳು ಹೇಳುತ್ತಾನೆ. ನೀಲಗಂಗಾ ಮಾಡಿದ ಸುದ್ದಿ ಅಣ್ಣನಿಗೆ ತಿಳಿದಾಗ ಅತೀವ ಸಂಕಟಪಡುತ್ತ ತಾಯಿ ತಂದೆ ಸಾಯುವಾಗ ಐದು ದಿನದ ಕೂಸು ಇತ್ತು. ಖಾರಿಕ ತಯಾರಿಸಿ ಸಲಹಿದೆನು ತಂಗಿ, ತಾಯ್ತಂದಿ ಸಾಯುವಾಗ ಏಳು ದಿನದ ಕೂಸಿದ್ದೆ. ಅಂಜೂರದ ಹಣ್ಣು ತಿನಿಸಿ ಸಲುಹಿದೆನಲ್ಲ ತಂಗಿ ಎಂದು ತಾನು ಸಾಕಿ ಸಲುಹಿದ, ಅಪಾರವಾದ ಪ್ರೀತಿ, ವಾತ್ಸಲ್ಯ, ಮಮತೆಯಿಂದ ನೋಡಿಕೊಂಡಿದ್ದನ್ನು ನೆನೆಸಿಕೊಂಡು ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಮಹಿಳೆಗೆ ರಕ್ಷಣೆ ನೀಡುವ ಕುಟುಂಬವೆ ಅನ್ಯಾಯವೆಸಗಿದರೆ ಮಹಿಳೆ ಯಾರ ಮೇಲೆ ನಂಬಿಕೆ ಇಡಬೇಕೆಂಬುದೆ ಯಕ್ಷ ಪ್ರಶ್ನೆಯಾಗುತ್ತದೆ.

ಕೊರಾತಿ ಕಂಚಿಯಲ್ಲಿಯ ಸ್ತ್ರೀಪರ ವಿಚಾರಧಾರೆ :

ಗಂಡು ಪರಸ್ತ್ರೀಯ ವ್ಯಾಮೋಹಕ್ಕೆ ಒಳಗಾದಾಗ ಆ ಮಹಿಳೆಯೆ ಮುಂದೆ ಆಗಲಿರುವ ಅಪಾಯವನ್ನು ತಪ್ಪಿಸಿ ಆತನ ಹೆಂಡತಿಯ ಸಹಾಯದಿಂದ ಕುಟುಂಬವನ್ನು ಸೇರಿಸುವ ಗಂಡು ಪರಸ್ತ್ರೀಯ ವ್ಯಾಮೋಹಕ್ಕೆ ಒಳಗಾದಾಗ ಆ ಮಹಿಳೆಯೆ ಮುಂದೆ ಆಗಲಿರುವ ಅಪಾಯವನ್ನು ತಪ್ಪಿಸಿ ಆತನ ಹೆಂಡತಿಯ ಸಹಾಯದಿಂದ ಕುಟುಂಬವನ್ನು ಸೇರಿಸುವ

ಪ್ರಯತ್ನವೇ ಕೋರಾತಿ ಕಂಚಿಯ ಕಥೆಯ ವಸ್ತು. ಇದು ಉಳಿದ ಕಥನಗೀತೆಗಳಿಗಿಂತ ಭಿನ್ನವಾಗಿ ನಿರೂಪಿತವಾಗಿದೆ. ಈ ಕಥನಗೀತೆಯಲ್ಲಿ ಪರಸ್ತ್ರೀಯರನ್ನು ಸೋದರಿತ್ವದ ಭಾವದಿಂದ ಕಾಣುವ ಚಿತ್ರಣ ದಲಿತ ಹೆಣ್ಣೊಬ್ಬಳ ಮೂಲಕ ಪ್ರತಿಪಾದಿತವಾಗಿದೆ.

ಕೊರ್ರ ಕಂಚಿಯು ಗಿಡದ ನಡುವೆ ನಡೆದು ಅಲ್ಲಿ ಮಿಳಿನಾರೂ ಕಡಿಯಯತ್ತಿರುವ ಸಂದರ್ಭದಲ್ಲಿ ನಾರಾಯಣಸ್ವಾಮಿ ಎಂಬುವನು ಅಲ್ಲಿಗೆ ಬಂದು ಈಕೆಗೆ

"ಇಲ್ಲು ಬಾರೆ ಕಂಚೀ ನೀನು
ಒಂದ್ ಎಲೀನಾರೂ ತಿನ್ವನಾ"[೧೪]

ಎಂದು ಕಂಚಿಯನ್ನು ಜೊತೆಯಲ್ಲಿ ಕುಳಿತು ಎಲಿಯಾದರೂ ತಿನ್ನೋನ ಬಾ ಎಂದು ಕರೆದದ್ದರ ಹಿಂದೆ ಆಕೆಯನ್ನು ಇವನು ಬಹಳ ಹೊತ್ತಿನಿಂದಲೇ ಕರೆಯುತ್ತಿರಬಹುದು. ಈಕೆ ಹೋಗದಿರದ ಕಾರಣ ಹೀಗೆ ಕರೆದಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಈಕೆ ಆತನಿಗೆ ಕೊಟ್ಟ ಉತ್ತರದಿಂದ ಒಬ್ಬ ದಲಿತ ಜನಾಂಗ ದವಳೆಂಬ ಸತ್ಯ ತಿಳಿದುಬರುತ್ತದೆ.

"ನೀವ್ ನಾರಾಯ್ಣ್ ಸ್ವಾಮಿ ಎಂಬರು
ನಾ ಕೊರ್ರ ಕಂಚಿ ಎಂಬಳು
ನಾ ಕೊಟ್ಟ್ ಸುಣ್ಣವ
ನೀವಾರೂ ತಿನ್ಬಾರ್ದು!"[೧೫]

ಎಂದರೆ ಇದರ ಅರ್ಥ ನೀವು ಮೇಲ್ಜಾತಿಯವರು ನಾನು ಕೆಳಜಾತಿಯವಳು. ಆದಕಾರಣ ನೀವು ನಾನು ಕೊಟ್ಟ ಸುಣ್ಣ ತಿನ್ನಬಾರದು ಎಂದಾಗುತ್ತದೆ. ದಲಿತ ಜನಾಂಗವನ್ನು ಹೇಗೆ ಕೀಳಾಗಿ ನೋಡುತ್ತಿದ್ದರು ಎಂಬುದಕ್ಕೆ ಈಕೆಯ ಮಾತು ನಿದರ್ಶನವಾಗಿದೆ. ಅದಲ್ಲದೇ ತಾವು ಅಸ್ಪೃಶ್ಯರು, ನಮ್ಮನ್ನು ಅವರು ಮುಟ್ಟಬಾರದು, ನಾವು ಅವರ ಕುಲಕ್ಕೆ ಸಮಾನರಲ್ಲ, ಕೆಳವರ್ಗದವರೆಂದು ಒಪ್ಪಿಕೊಳ್ಳುವ ಹಾಗೆ ಅವರನ್ನು ಸಮಾಜ ರೂಪಿಸಿತ್ತು.

ನಾರಾಯಣಸ್ವಾಮಿಯಿಂದ ಬಿಡುಗಡೆ ಹೊಂದಲು ಕಂಚಿ ತನ್ನ ಚಾಣಾಕ್ಷತನದಿಂದ ನನ್ನ ಕೊರ್ಗ (ಗಂಡ) ಬರುವ ಹೊತ್ತಾಯಿತು, ಅವನಿಗೆ ಗಂಜಿ ಹಾಕಿ ಬರುತ್ತೇನೆ ಎಂದು ಸುಳ್ಳು ಹೇಳಿ ನಿಮ್ಮ ಮುದ್ರೆಯುಂಗುರ ಕೊಡಿ ನಾ ಕಂಡಿತ ಬರುತ್ತೇನೆಂದು ಮುದ್ರೆಯುಂಗುರ

೧೪. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೩೭
೧೫. ಅದೇ, ಪು.೧೩೭

ತೆಗೆದುಕೊಂಡು ನೇರವಾಗಿ ನಾರಾಯಣಸ್ವಾಮಿಯ ಮನೆಗೆ ಹೋಗಿ, ಅವನ ಹೆಂಡತಿ ಮಹಾಲಕ್ಷ್ಮೀಗೆ ಆ ಉಂಗುರ ಹಾಕಿ, ತನ್ನ ಸರ, ಬಟ್ಟೆ ಹಾಕಿಕೊಳ್ಳಲು ಹೇಳಿ ಗುಡ್ಡದಾಚೆ ಮಾಗುಡ್ಡಿ ಮರೆಯಲ್ಲಿ ನಿಮ್ಮ ಗಂಡ ನಾರಾಯಣಸ್ವಾಮಿ ಕೂತಿರುತ್ತಾರೆ ಎಂದು ಹೇಳಿ ಕಳುಹಿಸಿ ತನ್ನ ಮನೆಗೆ ಹೋಗುತ್ತಾಳೆ. ಇದರಿಂದ ಆಕೆಯಲ್ಲಿರುವ ನೈತಿಕ ಮೌಲ್ಯ ಕಂಡುಬರುತ್ತದೆ.

ಪರಸ್ತ್ರೀಗೆ ಆಗುತ್ತಿರುವಂತಹ ಅನ್ಯಾಯ ತನ್ನದೇ ಎಂದು ಭಾವಿಸಿ ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಾತಿಗೆ ವಿರೋಧವಾಗಿ ಹೆಣ್ಣಿನ ಕಷ್ಟವನ್ನು ಹೆಣ್ಣೇ ಅರ್ಥ ಮಾಡಿಕೊಳ್ಳುವಂತಹ ವಿಶಾಲ ಮನೋಭಾವ ಈ ಕಂಚಿಯ ಕಥನಗೀತೆಯ ಮುಖಾಂತರ ವ್ಯಕ್ತವಾಗುತ್ತದೆ. ಇಂತಹ ಮಹಿಳೆಯರು ನಮ್ಮ ಸಮಾಜಕ್ಕೆ ಅವಶ್ಯಕವಾಗಿದೆ. ಅನ್ಯಾಯವನ್ನು ತಡೆಗಟ್ಟುವ ಮನೋಭಾವ, ಸೋದರಿತ್ವದ ಪರಿಕಲ್ಪನೆ, ನಾವೆಲ್ಲ ಒಂದೇ ಕುಟುಂಬದವರು, ಎಲ್ಲರ ಸಮಸ್ಯೆಗಳಿಗೆ ನಾವು ಸ್ಪಂದಿಸುವ ಮನೋಭಾವದವರು ಎಂಬುದು ಬೆಳಕಿಗೆ ಬರಬೇಕಾದ ಅವಶ್ಯಕತೆ ಇದೆ.

ಶೋಕಿ ಜೀವನಕ್ಕೆ ಮಾರು ಹೋದ ಇಂದಿನ ಕೆಲವು ಮಹಿಳೆಯರು ತಮ್ಮದೇ ಲೋಕದಲ್ಲಿ ಮುಳುಗಿ, ಸಾಮಾಜಿಕ ಮೌಲ್ಯಗಳನ್ನು ಗಾಳಿಗೆ ತೂರಿಬಿಟ್ಟಿದ್ದಾರೆ. ಆದ್ದರಿಂದ ನೈತಿಕತೆ, ಸ್ಪಂದನಾ ಮನೋಭಾವ, ನಿಷ್ಕಲ್ಮಶವಾದ ಸಹಾಯ-ಸಹಕಾರ ಮುಂತಾದ ಮೌಲ್ಯಗಳನ್ನು ಈ ಕಥನಗೀತೆಯಿಂದ ಅರಿಯಬೇಕಾಗಿದೆ. ಕಂಚಿ ಬಡವಳು ದಲಿತ ಕುಲದವಳಾದ ಕಾರಣ ಆಕೆಯೊಂದಿಗೆ ಆ ವ್ಯಕ್ತಿ ಅಸಹ್ಯಕರವಾಗಿ ನಡೆದುಕೊಂಡನೆನಿಸುತ್ತದೆ. ಆದರೆ ಕಂಚಿಯ ಜಾಣತನವನ್ನು ಇಲ್ಲಿ ಮೆಚ್ಚಲೇಬೆಕು. ಈಕೆಯ ಚಾಣಾಕ್ಷತನ ಅವಲೋಕಿಸಿದಾಗ ಮಲ್ಲಿಕಾ ಘಂಟಿಯವರ ಚಾಜ ನಾಟಕ ನೆನಪಿಗೆ ಬರುತ್ತದೆ. ದೇಸಾಯಿಯಿಂದ ಊರಿನ ಹೆಣ್ಣುಮಕ್ಕಳ ಮೇಲೆ ಆಗುತ್ತಿದ್ದಂತಹ ಅನ್ಯಾಯವನ್ನು ದೇಸಾಯಿಯ ಹೆಂಡತಿಯಾದ ರುದ್ರಮ್ಮ ಹಾಗೂ ಮನೆ ಕೆಲಸದವಳಾದ ಕಲ್ಲಿ ಇಬ್ಬರೂ ಸೇರಿ ಚಾಣಾಕ್ಷತನದಿಂದ ತಡೆಯುತ್ತಿದ್ದರು. ಅನಕ್ಷರಸ್ಥರಾದರೂ ಅವರ ಚಾಣಾಕ್ಷತನ, ಅರಿವಿನ ದೀಪ ಹಚ್ಚಿದ ಮನೋಭಾವವನ್ನು ಮೆಚ್ಚಲೇಬೇಕು. ಇಲ್ಲಿ ಕೂಡ ಅನ್ಯಾಯ ಎಂಬುದು ಯಾವ ಹೆಣ್ಣುಮಕ್ಕಳ ಮೇಲಾದರೂ ಇಡೀ ಹೆಣ್ಣು ಸಮೂಹಕ್ಕೆ ಆದಂತೆ ಎಂಬ ಭಾವನೆ ವ್ಯಕ್ತವಾಗಿ ಮಹಿಳಾಲೋಕಕ್ಕೆ ಮಾದರಿಯಾಗಿದೆ.

ಗುಣಗಳನ್ನು ಮೌಲ್ಯಗಳ ಆಧಾರದ ಮೇಲೆ ವಿಂಗಡಿಸಬಹುದು. ಪ್ರತಿ ವ್ಯಕ್ತಿಯೂ ಮೂಲತಃ ಅಂತರಾಳದಲ್ಲಿ ಮೌಲ್ಯಗಳನ್ನು ಹೊಂದಿದ್ದು, ಅವು ಅವರ ನಂಬಿಕೆ, ಆಲೋಚನೆ

ಅಥವಾ ಅಭಿಪ್ರಾಯದ ಕ್ರಮವನ್ನು ನಿರ್ಧರಿಸುತ್ತವೆ. ನಾವು ಯಾವುದನ್ನು ಹೇಗೆ ಆಲೋಚಿಸಿ ನಂಬಿ ಮುಂದುವರೆಸಿಕೊಂಡು ಹೋಗುತ್ತೇವೆಯೋ ಅದರ ಮೇಲೆ ಮೌಲ್ಯಗಳು ನಿಂತಿರುತ್ತವೆ. ಮೌಲ್ಯವನ್ನು ಅನುಷ್ಠಾನಕ್ಕೆ ತರುವುದರಲ್ಲಿ ತೋರುವ ಪ್ರಾಮಾಣಿಕತೆಯು ಮೌಲ್ಯವನ್ನು ಬೆಳೆಸಲು ಸಹಕಾರಿಯಾಗಿದೆ.

ಒಂದು ಸಂಸ್ಕೃತಿಯನ್ನು ಅನುಸರಿಸುವ ಜನರ ಮೌಲ್ಯ(ಗುಣ)ಗಳು ಸಮಾಜದಲ್ಲಿಯೂ ಬಿಂಬಿತವಾಗುತ್ತ ಹೋಗುತ್ತವೆ. ವೈಯಕ್ತಿಕ ಮೌಲ್ಯ ಪಸರಿಸಿ ಇಡೀ ಕುಟುಂಬ, ಸಮಾಜ, ನಾಡು, ದೇಶದಲ್ಲಿ ಹರಡಿಕೊಂಡು ಬೆಳೆಯುತ್ತಿರುತ್ತದೆ. ಆದ್ದರಿಂದ ದೇಶವನ್ನು, ಸಮಾಜವನ್ನು ಕುರಿತು ಚಿಂತಿಸುವುದಾದರೆ ಮೊದಲು ವೈಯಕ್ತಿಕ ಮೌಲ್ಯಗಳು ವೃದ್ಧಿಯಾಗಬೇಕಿದೆ. ನಂತರ ವ್ಯಕ್ತಿಯ ಮೌಲ್ಯಗಳು ಇಡೀ ಸಮಾಜಕ್ಕೆ ತಲುಪಲು ಸಾಧ್ಯತೆ ಇದೆ. ಕಥನಗೀತೆಗಳಲ್ಲಿ ಸ್ತ್ರೀ ಮೌಲ್ಯ ಪ್ರತಿಪಾದನೆ ಕಂಡುಬುರುವುದು ಹೆಚ್ಚಾಗಿ ಸಮಾಜ ಒಪ್ಪಿದ ಮೌಲ್ಯಗಳ ಅಡಿಯಲ್ಲಿಯೇ. ಮನುಷ್ಯ ಜೀವ ಎಂದಿಗೂ ಶಾಶ್ವತವಲ್ಲ ಎಂಬುದು ಎಷ್ಟು ಸತ್ಯವೋ ಅಷ್ಟೇ ನಾವು ಸೃಷ್ಟಿಸಿ ಬಿತ್ತಿ ಹೋದ ಮೌಲ್ಯಗಳು ಬೆಳೆಯುತ್ತ ಹೋಗುವವು ಎಂಬುದು ಅಷ್ಟೇ ಸತ್ಯ. ಆದರೆ ಕಾಲಕ್ಕನುಗುಣವಾಗಿ ಮಾನವ ಅವುಗಳನ್ನು ಬದಲಾವಣೆ ಮಾಡುತ್ತ ಹೋಗುತ್ತಾನೆ. ಬದಲಾವಣೆಗಳು ಸದೃಢವಾದ ಸಮಾಜ ಕಟ್ಟುವಲ್ಲಿ ಸಹಾಯಕವಾಗಬೇಕೆ ವಿನಃ ಕೆಡಹುವುದಕ್ಕಲ್ಲ.

೬.೨. ಪುರುಷ ಪ್ರಧಾನ ಮೌಲ್ಯ ಪ್ರತಿಪಾದನೆ :

ಕಥನಗೀತೆಗಳಲ್ಲಿ ಸ್ತ್ರೀ ಪ್ರಧಾನ ಮೌಲ್ಯ ಪ್ರತಿಪಾದನೆಗಳು ಇರುವ ಹಾಗೆ ಪುರುಷ ಪ್ರಧಾನ ಮೌಲ್ಯಗಳು ಕೂಡ ಪ್ರಾಚೀನ ಕಾಲದಿಂದ ಕಂಡುಬರುತ್ತವೆ. ಆದರೆ ಸ್ತ್ರೀ ಪ್ರಧಾನ ಮೌಲ್ಯ ಪ್ರತಿಪಾದನೆಗಿಂತ ಪುರುಷ ಪ್ರಧಾನ ಮೌಲ್ಯಗಳು ಭಿನ್ನವಾಗಿ ಕಂಡುಬರುತ್ತವೆ. ಸಮಾಜ ಪುರುಷರಲ್ಲಿ ಧೈರ್ಯ, ವೀರತ್ವ ಇತ್ಯಾದಿ ಧನಾತ್ಮಕವಾದ ಮೌಲ್ಯಗಳನ್ನು ವೃದ್ಧಿಸುವುದು ಕಂಡುಬರುತ್ತದೆ. ಕಥನಗೀತೆಗಳ ಮೂಲಕ ಹೆಚ್ಚು ವೀರಕಾರ್ಯತನಕ್ಕೆ ಪುರುಷರಿಗೆ ಪ್ರಾಧಾನ್ಯತೆ ಇದ್ದಿತೆಂಬುದು ಹಲವಾರು ಶಾಸನಗಳ ಮೂಲಕ ನಮಗೆ ತಿಳಿದುಬರುತ್ತದೆ. "ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ 'ಚಾಗ' (ತ್ಯಾಗ) ದಷ್ಟೇ ಮುಖ್ಯವಾದುದು. 'ಬೀರ' (=ವೀರ) ಸಂಪಾದಿಸಿದ ಹಣವನ್ನು ಉದಾರವಾಗಿ ದಾನ ಮಾಡಬೇಕು, ಯುದ್ಧದಲ್ಲಿ ಧೈರ್ಯದಿಂದ ಹೋರಾಡಬೇಕು ಇವೆರಡೂ ಮೌಲ್ಯಗಳು ಆ ಕಾಲದ ಆದರ್ಶಗಳಾಗಿದ್ದವು. 'ಲೋಭಿ' ಎನ್ನಿಸಿಕೊಳ್ಳುವುದು, 'ಪಂದೆ' (ಹಂದೆ, ಹೇಡಿ)

ಯೆನ್ನಿಸಿಕೊಳ್ಳುವುದು ಸಾವಿಗಿಂತ ಕಡೆ ಎಂಬ ಭಾವನೆ ಆ ಕಾಲದಲ್ಲಿತ್ತು."[೧೬] ಇದರಿಂದ ಮೊದಲಿನಿಂದಲೂ ಕರ್ನಾಟಕದಲ್ಲಿ ಧೈರ್ಯ-ಶೌರ್ಯಕ್ಕೆ ಎಷ್ಟೊಂದು ಮಹತ್ವವನ್ನು ಕೊಡುತ್ತಿದ್ದರು, ಅದಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಡುತ್ತಿದ್ದರು ಎಂಬುದು ಹಲವಾರು ಘಟನೆಗಳ ಮೂಲಕ ತಿಳಿದುಬರುತ್ತದೆ. ಇಂದಿಗೂ ಕೂಡ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದಂತಹ ವೀರಯೋಧರನ್ನು ಪೂಜಿಸುತ್ತೇವೆ. ಏಕೆಂದರೆ ತಮ್ಮ ಜೀವನವನ್ನೇ ಒತ್ತೆಯಾಗಿಟ್ಟು ಇಡೀ ದೇಶದ ಜನರನ್ನು ಕಾಪಾಡಲು ಮುಡುಪಾಗಿ ಇಟ್ಟಿರುವರು. ಯೋಧರು ದೇಶದ ಆಸ್ತಿಯೆಂದೇ ಹೇಳಬೇಕು. ಅವರಿಗಾಗಿ ಎಷ್ಟು ಕೃತಜ್ಞತೆಯನ್ನು ಅರ್ಪಿಸಿದರೂ ಕಡಿಮೆ. ಆ ವೀರತನ ಎನ್ನುವುದು ಮೊದಲಿನಿಂದಲೂ ನಮ್ಮ ನಾಡು, ದೇಶದಲ್ಲಿ ರಕ್ತಗತವಾಗಿಯೇ ಬೆಳೆದು ಬಂದಿದೆ. ಬದಾಮಿಯ ಕಪ್ಪೆ ಅರಭಟ್ಟನ ಶಾಸನದಲ್ಲಿ

> ಸಾಧುಂಗೆ ಸಾಧು
> ಮಾಧುರ್ಯಂಗೆ ಮಾಧುರ್ಯನ್
> ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
> ಮಾಧವನೀತನ್ ಪೆಱನಲ್

ಎಂದರೆ ಕಪ್ಪೆ ಅರಭಟ್ಟ ಒಳ್ಳೆಯವರಿಗೆ ಒಳ್ಳೆಯವನಾಗಿ, ದುಷ್ಟರನ್ನು ಸೆದೆ ಬಡೆಯಲು ಮುನ್ನುಗ್ಗುವ ಮಹಾವೀರನೂ, ಶೌರ್ಯವನ್ನು ಹೊಂದಿದವನಾಗಿದ್ದನು ಎಂದರ್ಥ.

ಆದಿಕವಿ ಪಂಪನ ಕಾಲ ಪ್ರಧಾನವಾಗಿ ವೀರಯುಗವಾಗಿತ್ತು ಎಂಬುದಕ್ಕೆ "ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ"[೧೭] ಎಂಬುದರಲ್ಲಿಯೇ ಸ್ಪಷ್ಟವಾಗುತ್ತದೆ. ವಿಶ್ವಮಾನವ ತತ್ವವಾದ 'ಮಾನವ ಕುಲಂ ತಾನೊಂದೇ ವಲಂ' ಎಂದು ಇಡೀ ಮಾನವ ಕುಲಕ್ಕೆ ಮಾದರಿಯಾಗಬೇಕಾದ ಮೌಲ್ಯವನ್ನು ಎತ್ತಿ ಹಿಡಿದಿದ್ದಾನೆ. ಈತನ ಕೃತಿಗಳಲ್ಲಿ ಚಾರಿತ್ರಿಕ, ಸಾಂಸ್ಕೃತಿಕ ಪ್ರಜ್ಞೆಗಳ ಜೊತೆಗೆ ಅನೇಕ ಮೌಲ್ಯಗಳು ಕೂಡ ಅಡಗಿವೆ. ಎಲ್ಲ ಕಾಲಘಟ್ಟದ ಸಾಹಿತ್ಯದಲ್ಲೂ ಕೂಡ ಅಂದಂದಿನ ಸಾಮಾಜಿಕ ಪರಿಸರದ ಮೌಲ್ಯಗಳು ಇರುತ್ತವೆ. ಅದಕ್ಕೆ ಸಾಹಿತ್ಯ ಸಾಮಾಜಿಕ ಪರಿಸರದ ಕೂಸು ಎಂದರೆ ತಪ್ಪಾಗಲಾರದು.

ಕಥನಗೀತೆಗಳಲ್ಲಿ ಕುಮಾರರಾಮ, ಸರ್ಜಪ್ಪ ನಾಯಕ, ಸಂಗೊಳ್ಳಿ ರಾಯಣ್ಣ, ಹಲಗಲಿಯ ಬೇಡರು ಹೀಗೆ ವೀರತನದಿಂದ ಕೂಡಿದ ವೀರಕಥೆಗಳನ್ನು ಗೀತೆಗಳ ಮೂಲಕ

---

೧೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಎಂ. ಚಿದಾನಂದಮೂರ್ತಿ, ಪು.೨೬೨
೧೭. ಚಂಪೂ ಸಾಹಿತ್ಯ : ಆರ್.ಪಿ. ಹೆಗಡೆ, ಪು.೨೪

ಜನಪದರು ಕಟ್ಟಿಕೊಟ್ಟಿದ್ದಾರೆ ಹಾಗೂ ಭಾರತೀಯ ಮೌಲ್ಯಗಳನ್ನು ಜನರಲ್ಲಿ ಬಿತ್ತರಿಸಿದ, ಇವರ ಮಾತುಗಳು ಇವರಲ್ಲಿರುವ ಸುಶೀಲ ಗುಣಗಳು ದಾರಿದೀಪವಾಗಿವೆ.

ಸಾಹಿತ್ಯ ಕೃತಿಗಳನ್ನು, ಶಾಸನಗಳನ್ನು, ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಿದಾಗ ಪ್ರಾಚೀನ ಕರ್ನಾಟಕದ ಜನರು ಸತ್ಯ, ಅಹಿಂಸೆ, ದಾನ, ಶರಣಾಗತ ರಕ್ಷಣೆ, ಸ್ವಾಭಿಮಾನ, ವೀರವ್ರತ ಮುಂತಾದ ಮೌಲ್ಯಗಳನ್ನು ಆಚರಿಸುತ್ತಿದ್ದರು ಎನ್ನುವುದಕ್ಕೆ ಜೆ.ಎಂ. ನಾಗಯ್ಯ ಅವರ ರಾಷ್ಟ್ರಕೂಟರ ದೊರೆ ಮೂರನೇ ಕೃಷ್ಣನ ಜೂರಾ ಶಾಸನದಲ್ಲಿ ಬರುವ ಮೂರನೇ ಕೃಷ್ಣನು ತನ್ನ ಶುಚಿತ್ವ ಗುಣಗಳಿಂದ ಕೂಡಿದ ವೀರನು ಎಂಬುದು ತಿಳಿದುಬರುತ್ತದೆ. ಏಕೆಂದರೆ ಮೂರನೇ ಕೃಷ್ಣನು ಪರಸ್ತ್ರೀಯರನ್ನು ಕಣ್ಣೆತ್ತಿ ನೋಡದೆ, ಮಾನಸಿಕವಾಗಿ ಜಾರದೆ, ಮನಸ್ಸನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಬ್ರಹ್ಮಚರ್ಯವನ್ನು ಪಾಲಿಸಿದ್ದನು. ಅದಲ್ಲದೇ ಈತನಿಗೆ ಕಚ್ಚೆಗ, ಗಂಡಮಾರ್ತಾಂಡ, ಆನೆಬೆಡಂಗ, ಚಲಕೆನಲ್ಲಾತ, ವೈರಿವಿಳಾಸ, ಮದಗಜಮಲ್ಲ, ಪರಾಂಗನ ಪುತ್ರ ಎಂಬ ಬಿರುದುಗಳು ಇದ್ದವು. ಶ್ರೇಷ್ಠ ವೀರನಾಗಿ, ನೈತಿಕ ಗುಣಗಳನ್ನು ಹೊಂದಿದ್ದನು ಎಂಬುದಕ್ಕೆ ಇವನ ಈ ಬಿರುದುಗಳೇ ಸಾಕ್ಷಿ.

"ಸೋಲದೇ ಪರವನಿತೆಗೆ (ಕ)ಣ್
ಸೋಲದು ಮೊಲೆವಾಲನೂಡಿ ನಡಪಿದ ತಾಯಿಂ
ಮೇಲೆನೆ ಬಗೆಗುಂ ನೋಡಿರೆ
ಸೋಲದು ಚಿತ್ತಂ ಪರಾಂಗನಾ ಪುತ್ರಕನಾ॥"[೧೮]

ಪರಸ್ತ್ರೀಯನ್ನು ನೋಡಿದಾಗ ಎಂತಹ ಸೌಂದರ್ಯವಂತ ವನಿತೆಯರಿದ್ದರೂ ಸಹ ಅವರ ಸೌಂದರ್ಯಕ್ಕೆ ಮರುಳಾಗದೆ, ಅವರನ್ನು ಕಂಡಾಗ ಎದೆ ಹಾಲನ್ನು ಕುಡಿಸಿ, ಪೋಷಿಸಿ, ಸಲುಹಿದ ತಾಯಿಗಿಂತಲೂ ಮಿಗಿಲೆಂದು ಕಾಣುತ್ತಿದ್ದನು ಹಾಗೂ ತಾನು ಪರಸ್ತ್ರೀಯರ ಮಗನೆಂದು ಭಾವಿಸುತ್ತಿದ್ದನು. ತನ್ನ ವೀರ, ಧೈರ್ಯ, ಶೌರ್ಯದ ಜೊತೆಗೆ ಇದೂ ಒಂದು ನೈತಿಕ ಮೌಲ್ಯ ಅವನಲ್ಲಿ ಎದ್ದು ಕಾಣುತ್ತಿತ್ತು. ಇಂತಹ ಶುಚಿತ್ವ, ನೈತಿಕ ಗುಣಗಳು ಇಂದಿನ ಯುವ ಪೀಳಿಗೆಗಷ್ಟೇ ಅಲ್ಲದೆ ಇಡೀ ಪುರುಷ ಸಮಾಜ ಇಂತಹ ಗುಣಗಳನ್ನು ವೃದ್ಧಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಏಕೆಂದರೆ ಮಹಿಳೆ ಇಂದು ಒಬ್ಬಂಟಿಯಾಗಿ ಅಡ್ಡಾಡುವುದು, ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವುದು ಕಷ್ಟವಾಗಿದೆ. ಇನ್ನೂ

---

೧೮. ವಿಮರ್ಶೆ, ಸಂಶೋಧನೆ, ಶಾಸನ, ಸಂಸ್ಕೃತಿ : ಶ್ರೀಧರ ಬಿ. ನಾಯಕ, ಪು.೮೩

ಮುಂತಾದ ಕ್ಷೇತ್ರಗಳಲ್ಲಿ ಆಕೆ ಮಾನಸಿಕವಾಗಿ, ದೈಹಿಕವಾಗಿ ಪುರುಷನಿಂದ ನೋವನ್ನು ಅನುಭವಿಸುತ್ತಿರುವಳು ಎಂಬುದಕ್ಕೆ ಹಲವಾರು ಸಾಕ್ಷಿಗಳು ಸಿಗುತ್ತವೆ. ಕೆಲವೊಂದು ಶೋಷಣೆಗಳು ಕಣ್ಣ ಮುಂದೆಯೇ ನಡೆದರೂ, ಮುಚ್ಚಿ ಹೋಗುತ್ತವೆ. ಹಾಗಾಗಿ ಮೂರನೇ ಕೃಷ್ಣನು ಕಾಣುವ ಸ್ತ್ರೀ ದೃಷ್ಟಿಕೋನದ ಪರಿಕಲ್ಪನೆ ಸಮಾಜದಲ್ಲಿ ಪಸರಿಸಬೇಕಾಗಿದೆ. ಅಂದಿನ ಕಾಲದ ಮೌಲ್ಯಗಳು ಇಂದಿಗೂ ಮಾದರಿಯಾಗಿ ಮಹತ್ವವನ್ನು ಪಡೆದಿವೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ಪ್ರಾಚೀನ ಭಾರತೀಯರಿಗೆ ಗೋವು ಪೂಜ್ಯನೀಯವಾಗಿದ್ದು, ಕಾರಣ ಸೆರೆ ಸಿಕ್ಕ ಗೋವುಗಳನ್ನು ಸಂರಕ್ಷಿಸಲು, ನೆರೆರಾಜ್ಯದ ದಾಳಿಕೋರರು ಕದನಕ್ಕೆ ಬಂದು ಹೆಣ್ಣುಮಕ್ಕಳ ಮಾನಭಂಗಕ್ಕೆ ಮುಂದಾದಾಗ, ಅವರ ಮಾನ ರಕ್ಷಿಸಲು ಉಪ್ಪಿನ ಋಣಕ್ಕಾಗಿ ಹೋರಾಡುತ್ತಿದ್ದರು. ಅಷ್ಟೇ ಅಲ್ಲದೆ ಸಂಬಂಧಿಕರಿಗೆ ಸ್ನೇಹಿತರಿಗೆ ಸಂಬಂಧಿಸಿದ ಆಪತ್ಕಾಲದಲ್ಲಿ ನೆರವಾಗವುದು ಕೂಡ ಅಂದಿನ ಜೀವನದ ಮೌಲ್ಯಗಳಲ್ಲೊಂದಾಗಿತ್ತು.

ಮೌಲ್ಯಗಳಿಗೆ ಅಪವಾದವೆಂಬಂತೆ ಪುರುಷ ಪ್ರಧಾನ ಮೌಲ್ಯಗಳು ಇನ್ನೊಂದು ನೆಲೆಯಲ್ಲಿ ನಿರೂಪಿತವಾಗುತ್ತವೆ. ಕುಟುಂಬದ ಸರ್ವಾಧಿಕಾರ, ಬಹುಪತ್ನಿತ್ವ, ಗ್ರಾಮದ ಮುಖಂಡತ್ವ ಹೀಗೆ ಹಲವಾರು ಕಾರ್ಯ ನಿರ್ವಹಣೆಯಲ್ಲಿ ತನ್ನದೇಯಾದ ಮುಂದಾಳತ್ವ ದಿಂದ ಪುರುಷರ ಬೆಲೆ ಹೆಚ್ಚುತ್ತದೆ ಎಂಬ ಅಹಂನಿಂದ ಬದುಕನ್ನು ಸಾಗಿಸುತ್ತಿದ್ದರು. ಇವರು ಹಾಕಿಕೊಟ್ಟ ಮೌಲ್ಯಗಳ ಅಡಿಯಲ್ಲಿ ಮಹಿಳೆಯರು ಸಾಗಬೇಕಾಗಿತ್ತು. ವಾಸ್ತವದಲ್ಲಿ ಕಡಿಮೆಯಾಗಿದೆ ನಿಜ, ಆದರೆ ಇನ್ನೂ ಬಹುಪಾಲು ಮಹಿಳೆಯರು ನೋವುಗಳನ್ನು ಅದುಮಿಟ್ಟುಕೊಂಡು ಪುರುಷರಿಂದ ಶೋಷಣೆಗೆ ಒಳಗಾಗುತ್ತಿರುವುದನ್ನು ಕಾಣುತ್ತೇವೆ. ಕುಟುಂಬದಲ್ಲಿ ಸರ್ವಾಧಿಕಾರದಿಂದ ಸದಸ್ಯರೊಂದಿಗೆ ತಮ್ಮ ಭಾವನೆಗಳನ್ನು ಹಂಚಿ-ಕೊಳ್ಳುವುದರಿಂದ ದೂರವಾಗುತ್ತಾರೆ. ಬಹುಪತ್ನಿತ್ವದಿಂದ ಹಲವಾರು ಗೊಂದಲಗಳು, ಸಮಸ್ಯೆಗಳು, ಮಾನಸಿಕವಾಗಿ ಅಸಮಾಧಾನ ಹೆಚ್ಚುತ್ತವೆ. ಗ್ರಾಮದಲ್ಲಿ ಸರಿ ತಪ್ಪುಗಳನ್ನು ಸರಿಯಾಗಿ ಗಮನಿಸದೇ ತಾವೇ ತೆಗೆದುಕೊಂಡ ನಿರ್ಧಾರ ಅಂತಿಮವೆಂದು ಸಾರಿ, ತಾವು ಹಾಕಿದ ಶಿಕ್ಷೆಗೆ ಊರಿನ ಜನತೆ ಬಲಿಯಾಗಬೇಕಾದ ವಿಚಿತ್ರ ಘೋರ ಕಟ್ಟಳೆಗಳಿಂದ ಊರಿನಲ್ಲಿ ಸಮಾನತೆ ಇಲ್ಲದಾಗುತ್ತದೆ. ಹೀಗೆ ತನ್ನ ಅಧೀನದಲ್ಲಿಯೇ ಸಕಲ ಕಾರ್ಯಗಳು ನಡೆಯಬೇಕೆಂಬ ಅಹಂನಿಂದ ಸಮಾಜ ಮೌಲ್ಯಗಳಿಂದ ಕುಸಿಯುತ್ತದೆ. ಸಂಬಂಧಗಳು ಹರಿದು ಹಂಚಿ ಹೋಗುತ್ತವೆ. ಊರುಗಳು ಯುದ್ಧ ಭೂಮಿಗಳಾಗುತ್ತವೆ. ಇಡೀ ಸಮಾಜ

ಸಮಸ್ಯೆಗಳ ಆಗರವಾಗುತ್ತದೆ. ಆದ್ದರಿಂದ ಒಂದೊಂದೇ ಸಮಸ್ಯೆಯನ್ನು ಬಗೆಹರಿಸು-ವುದರಲ್ಲಿಯೇ ಬದುಕು ಮುಕ್ತಾಯವಾಗುತ್ತದೆ. ಸಮಸ್ಯೆಗಳಿಗೆ ಅಂತ್ಯವೆಂಬುದೆ ಇಲ್ಲವೆಂಬ ಭಯ ಹುಟ್ಟುತ್ತದೆ. ಅದೇನೆ ಇದ್ದರೂ ಆಶಾ ಭಾವನೆಯೊಂದಿಗೆ ಮುನ್ನುಗ್ಗಿ ಸಾಧ್ಯವಾದಷ್ಟು ಪರಿವರ್ತನೆ ಮಾಡುವಂತಹ ಮನೋಧರ್ಮದೊಂದಿಗೆ ಕಥನಗೀತೆಗಳಲ್ಲಿ ಕಂಡುಬರುವ ಕೆಲವೊಂದು ಪುರುಷಪ್ರಧಾನ ಮೌಲ್ಯಗಳನ್ನು ವಿಶ್ಲೇಸಿಸಲಾಗಿದೆ.

ಪರಸ್ತ್ರೀಯರನ್ನು ಸೋದರ ಭಾವನೆಯಿಂದ ಕಾಣುತ್ತಿದ್ದ ಕುಮಾರರಾಮ:

ಕರ್ನಾಟಕದ ಕಂದ ಕಥನಗೀತೆಯು 'ಹರಲೀಯ ಕೊಡಲಾರೆ ಕರ್ನಾಟಕ ಕಂದಗ' ಎನ್ನುವದರೊಂದಿಗೆ ಪ್ರಾರಂಭವಾಗುತ್ತದೆ. ರಣದಲ್ಲಿ ತುರುಕರನ್ನು ಗೆದ್ದವನಾದ ಈ ವೀರನಿಗೆ ಅಪವಾದವನ್ನು ಕೊಡುವುದಿಲ್ಲವೆಂದು ಜನಪದರು ಹೇಳುತ್ತಾರೆ. ವೀರತನ ಎಂಬುದು ಪುರುಷ ಪ್ರಧಾನ ಮೌಲ್ಯವಾಗಿತ್ತು. ಆದ ಕಾರಣ ಸಮಾಜವು ವೀರರನ್ನು ಪೂಜ್ಯತಾ ಭಾವನೆಯಿಂದ ನೋಡುತ್ತಿರುವುದಕ್ಕೆ ಹಲವಾರು ವೀರಗಲ್ಲುಗಳು ಸಾಕ್ಷಿಯಾಗಿವೆ.

ಕಂಪಿಲರಾಯನಿಗೆ ಇಬ್ಬರು ಅರಸಿಯರು. ಮೊದಲನೆಯವಳು ಹರಿಯಾಲಿ, ಎರಡನೆಯವಳು ರತ್ನಾಲಿ. ಕುಮಾರರಾಮ ಹರಿಯಾಲಿಯ ಮಗ. "ಕುಮಾರರಾಮ ಕಾವ್ಯದಲ್ಲಿ ರಾಮನಿಗೆ ನಿಶ್ಚಯಿಸಲಾಗಿದ್ದ ರತ್ನಾಕ್ಷಿ ಎಂಬ ಹೆಣ್ಣನ್ನು ಆತನ ತಂದೆ ಕಂಪಿಲರಾಯ ಮೋಸದಿಂದ ಮದುವೆ ಆಗುವನು. ರಾಮನ ಮೇಲೆ ಮನಸ್ಸಿದ್ದ ರತ್ನಾಕ್ಷಿ ಕುಮಾರರಾಮನಿಗೆ ಬಲವಂತದ ಮಲತಾಯಿಯಾಗುತ್ತಾಳೆ."[೧೯] ಕಂಪಲರಾಯನನ್ನು ಮದುವೆಯಾಗಲು ಇಷ್ಟವಿರದ ರತ್ನಾಕ್ಷಿ ಸಮಾಜದ ಒತ್ತಡಕ್ಕೆ ಮಣಿದು ಬಲವಂತದ ಮದುವೆಯಾಗಿ ಸಂಕಷ್ಟಗಳಲ್ಲಿ ಸಿಲುಕುತ್ತಾಳೆ. ಸಮಾಜವು ಮೌಲ್ಯಗಳ ಅಡಿಯಲ್ಲಿ ಮಹಿಳೆಯರನ್ನು ನೂಕುತ್ತಿದೆ ಎಂದು ಈ ಘಟನೆಯಿಂದ ತಿಳಿದುಬರುವುದು. ತಂದೆಯ ಸಮನಾದ ಪುರುಷನೊಂದಿಗೆ ಮದುವೆಯಾಗಿದೆ ಎಂದರೆ, ಆಕೆಗೆ ಇಷ್ಟ ಇರಲಿ; ಇರದೇ ಇರಲಿ ಬಾಳ್ವೆ ಮಾಡಲೇಬೇಕು. ಏಕೆಂದರೆ ಸಮಾಜದ ಹೆದರಿಕೆ ಆಕೆಯ ಅಂತರ್ಯದಲ್ಲಿ ನೆಲೆ ನಿಂತಿದೆ.

ಕಂಪಿಲರಾಯ ಬೇಟೆಗೆ ಹೋದ ಸಂದರ್ಭದಲ್ಲಿ ರತ್ನಾಲಿ ಮೈಮರೆತು ಹೋಳಿಯ ಆಡುತ್ತಾ, ಕೆಂಗಟ್ಟು ಸೋತು ಮಗನನ್ನು ನೋಡಿದಳು. ರಾಮ ಚೆಂಡು ಆಡುವ ವೇಳೆ ಪುಟಿದು ಒಳಮನೆಗೆ ಬಂದಾಗ ಅದನ್ನು ರತ್ನಾಲಿ ಮುಚ್ಚಿಟ್ಟು ಕೊಡುವುದಿಲ್ಲ. ಆಗ

೧೯. ಜನಪದ ಕಥನಗೀತೆಗಳಲ್ಲಿ ಸ್ತ್ರೀ ಸಂವೇದನೆ : ಶೋಧಗಂಗಾ, ಪು.೧೫೦

ಕುಮಾರರಾಮ ಹಡೆದವ್ವ ರತ್ನಾಲಿ, ಆಟವಾಡುವುದಕ್ಕೆ ಕತ್ತಲಾಗುತ್ತದೆ ಅರಮನೆಯಲ್ಲಿ ಹೆತ್ತ ತಾಯಿ ದಾರಿ ಕಾಯುವಳು ಬೇಗ ಕೊಡು ಎಂದು ವಾತ್ಸಲ್ಯಮಯವಾಗಿ ಕೇಳುವನು. ಆದರೆ ತಾಯಿ ಎನಿಸಿಕೊಂಡ ರತ್ನಾಲಿಯ ಬಯಕೆ, ನೋಡುವ ನೋಟ ತಾಯ್ತನಕ್ಕೆ ಕಳಂಕ ತರುವ ರೀತಿ ಗೋಚರಿಸುತ್ತದೆ. ರತ್ನಾಲಿ ಮಗನೊಂದಿಗೆ ಆಡುವ ಮಾತುಗಳನ್ನು ಗಮನಿಸಿದರೆ ಇನ್ನೂ ಸ್ಪಷ್ಟವಾಗುತ್ತದೆ.

"ಕಾಮನೀ ಕೊಮರಾಮ ಕಾಮಿಸಿದೆ ನಾ ನೋಡಿ
ಕಾಮಾಟ ಕೂಡಿ ನೀನಾಡೊ । ಮನದೊರೆಯೆ
ಪ್ರೇಮ ನಿನಮ್ಯಾಲೆ ಕೈ ಮುಗಿದೆ॥"[೨೦]

ಇಲ್ಲಿ ರತ್ನಾಲಿಯು ತನ್ನ ವಯಸ್ಸಿನವನೇಯಾದ ಕುಮಾರರಾಮನನ್ನು ನೋಡಿ ಮೋಹಿತಳಾಗುವಳು. ಆಸೆ-ಬಯಕೆ ಆಕೆಯ ವಯಸ್ಸಿಗೆ ಸಹಜವೆಂದು ಅನ್ನಿಸಬಹುದು. ಆದರೆ ತನ್ನ ಆಸೆ-ಬಯಕೆ ಹತ್ತಿಕ್ಕಿಕೊಂಡು ಆತನನ್ನು ನೋಡಿದಾಗ ತಾಯಿ ಸ್ಥಾನದಲ್ಲಿದ್ದುಕೊಂಡು ಮಗನನ್ನು ಮೋಹಿಸುವುದು ತಪ್ಪು ಎಂಬ ಭಾವನೆ ಉಂಟಾಗುತ್ತದೆ. ಏಕೆಂದರೆ ಒಂದು ಸಮಾಜ ಬೆಳೆಯಬೇಕಾದರೆ ವ್ಯಕ್ತಿ, ಕುಟುಂಬ, ಅವರ ವರ್ತನೆ, ವ್ಯಕ್ತಿತ್ವ ಇತ್ಯಾದಿ ಅಂಶಗಳು ಮುಖ್ಯವಾಗುತ್ತವೆ. ಇಲ್ಲಿ ಕಂಪಿಲರಾಯನ ಪಾತ್ರ ಸಂಕುಚಿತವಾಗುತ್ತದೆ. ಮೌಲ್ಯದಿಂದ ಕುಸಿಯುತ್ತದೆ. ವಯಸ್ಸಾದರಷ್ಟೇ ಸಾಲದು, ಬುದ್ಧಿ ಮತ್ತು ವಿಚಾರಶಕ್ತಿ ಮನುಷ್ಯನಲ್ಲಿರಬೇಕಿತ್ತು. ಆದರೆ ಅದಿಲ್ಲವಾದ್ದರಿಂದ ಕಂಪಿಲರಾಯ ತನ್ನ ಮಗಳ ವಯಸ್ಸಿನ ರತ್ನಾಲಿಯನ್ನು ಮದುವೆಯಾದದ್ದು ಸಮಾಜಕ್ಕೆ ಮಾರಕ. ಒಬ್ಬ ಹೆಂಡತಿ ಹರಿಯಾಲಿ ಇರುವಾಗ ಇನ್ನೊಂದು ಮದುವೆಯಾಗುವದು ತಪ್ಪು. ತಮಗೆ ಇಷ್ಟ ಬಂದ ಮಹಿಳೆಯರನ್ನು ಯಾವಾಗಲಾದರೂ ಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯ ಅಂದಿನ ಸಮಾಜದಲ್ಲಿ ಇತ್ತು. ರತ್ನಾಲಿ ಮಾಡುವ ಕುತಂತ್ರ ಇನ್ನೂ ಬೇಸರ ತರಿಸುತ್ತದೆ. ಮಗ ಕುಮಾರರಾಮನಿಂದ ಅತ್ಯಾಚಾರಕ್ಕೆ ಬಲಿಯಾದವಳಂತೆ ತಲೆಗೂದಲನ್ನು ಹರವಿಕೊಂಡು, ಮೈಮೇಲೆ ಚೂರು ಗಾಯ ಮಾಡಿಕೊಂಡು, ಕುಪ್ಪಸ, ಸೀರೆ ಸಡಿಲಿಸಿಕೊಂಡು ದುಃಖದಿಂದ ನಟಿಸುತ್ತ ಮಲಗಿದ್ದಳು. ಕುಮಾರರಾಮ ಚಿಕ್ಕವನಾದರೂ ಸಹಿತ ತಂದೆ-ತಾಯಿಯರ ಬಗ್ಗೆ ಇರುವ ಅಭಿಮಾನ, ಸಂಬಂಧಗಳ ಬಗೆಗೆ ಇರುವ ಅವನ ವೈಚಾರಿಕತೆ ಪ್ರತಿಯೊಬ್ಬರೂ ಮೆಚ್ಚುವಂತೆ ಕಥನಗೀತೆಯಲ್ಲಿ ಎದ್ದು ಕಾಣುತ್ತದೆ.

---

೨೦. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರು, ಪು.೨

"ತಾಯೆ ತಂದೆಯೆ ಸತಿಯೇ, ನಾಯಿ ಮಾಡುವ ಕೆಲಸ
ಮಾಯೆ ನಿನಗ್ಯಾಕ ನನಮ್ಯಾಲೆ । ಹಡೆದವ್ವ
ಹೇಯ ಇಲ್ಲೇನ ನಿನಗೇಟ
ಹೇಸಿ ಕೈ ಬಿಡ ತಾಯಿ, ಸೋಸಿ ನೋಡಿಲ ಮಾತ
ಮೂಸಿ ಹೊಲಸುಂಬು ಮನಸೇನ ಕೊಮರಾಮ
ಹೇಸಿ ಕೈ ಕೊಸರಿ ಹೊರಹೋದ"[೨೧]

ಇಲ್ಲಿ ಕುಮಾರರಾಮ ಹೇಳುವಂತಹ ಮಾತುಗಳು ತುಂಬಾ ವೈಚಾರಿಕವಾಗಿ ವ್ಯಕ್ತವಾಗಿವೆ. ಅದಕ್ಕಾಗಿ ತಾಯಿ ಸ್ಥಾನದಲ್ಲಿರುವ ರತ್ನಾಲಿಯನ್ನು ಕೊಸರಿ ಹೋಗುವನು. ಇಲ್ಲಿ ತಂದೆಯಲ್ಲಿರದ ಮೌಲ್ಯ ಪ್ರತಿಪಾದನೆ ಮಗನಲ್ಲಿ ಕಂಡುಬರುತ್ತದೆ. ಹಿರಿಯರಿಗಿಲ್ಲದ ವೈಚಾರಿಕತೆ ಕಿರಿಯರಲ್ಲಿರುವುದಕ್ಕೆ ನಿದರ್ಶನವಾಗಿ ಕುಮಾರರಾಮ ಕಂಡುಬರುತ್ತಾನೆ.

ಕುಮಾರರಾಮನ ಮಾತಿನಿಂದ ರತ್ನಾಲಿ ಬೇಸರಗೊಳ್ಳದೇ, ಪಶ್ಚಾತ್ತಾಪಪಡದೇ, ಅರಸ ಬರಲಿ ನಿನಗೆ ಹರಲಿಯ ಕೊಡುವೆ ತಲೆ ಹೊಡಿಸುವೆ ಎಂದು ದೇವರಲ್ಲಿ ಹರಕೆ ಹೊರುವಳು. ಹೆಣ್ಣುಮಕ್ಕಳ ಬುದ್ಧಿ ಮೊಣಕಾಲು ಕೆಳಗೆ ಎನ್ನುವಂತೆ ರತ್ನಾಲಿಯ ಬುದ್ಧಿ ಎಷ್ಟು ಕೆಳಮಟ್ಟದ್ದು ಎಂದು ಬಿಂಬತವಾಗುತ್ತದೆ. ತಾನೇ ಮಗನನ್ನು ಮೋಹಿಸಿ, ಅವನು ದಕ್ಕದಾದಾಗ ಇಂತಹ ಬೆದರಿಕೆಯನ್ನು ಹೇಳಿ ತನ್ನತನವನ್ನು ಪ್ರದರ್ಶಿಸಿದ್ದಾಳೆ. ಬೇಟೆಯಾಡಿ ದಣಿದು ಬಂದ ಕಂಪಿಲರಾಯನು, ರತ್ನಾಲಿ ಸುಮ್ಮನಿರುವುದನ್ನು ಕಂಡು, ಕೆಣಕಿ ಮಾತನಾಡಿಸುತ್ತಾನೆ. 'ಮನದ ಮೋಹದ ಗಿಣಿಯೆ, ಗಣಿಸದಲೆ ಮಾತಾಡು, ಯಾಕೆ ನೊಂದಿರುವೆ ಕಾರಣ ನನಗೆ ಹೇಳು' ಎಂದು ಕೇಳುವನು. ಆಗ ರತ್ನಾಲಿ ಕುಮಾರರಾಮನ ಬಗ್ಗೆ ಸುಳ್ಳು ದೂರು ನೀಡುವಳು. ಅದೇನೆಂದರೆ, "ಕೊಮರಾಮ ಕೇಳದಲೆ ಕೈ ಹಿಡಿದ, ಧುಮಕೀಯ ಮಾಡಿ ಕಾಮಿಸಿದ, ರಕ್ಕಸನ ಗಮನಿಸ್ದೆ ಕರೆಸಿ ತಲೆ ಹೊಡಿಸು"[೨೨] ಎಂದು ಹೇಳುವಳು. ಕಂಪಿಲರಾಯನಿಗೆ ಸಿಟ್ಟು ನೆತ್ತಿಗೇರಿ ಸತಿಯ ಒಳಭೇದವನ್ನು ಅರಿಯದೇ ಮಗ ಕುಮಾರರಾಮನ ಶಿರವನ್ನು ಛೇದಿಸಲು ಹೇಳುವನು. ಅದಕ್ಕೆ ರಾಮನು ತಕರಾರು ಮಾಡದೆ ತಲೆಯನ್ನು ಕೊಡುವನು. ಈ ಸನ್ನಿವೇಶವನ್ನು ಕಂಡಾಗ ಈ ಕಥನಗೀತೆಯಲ್ಲಿ ಕುಮಾರರಾಮನ ವ್ಯಕ್ತಿತ್ವ ಉತ್ತುಂಗಕ್ಕೇರುತ್ತದೆ ಮತ್ತು ಪುರುಷ ಪ್ರಧಾನ ಮೌಲ್ಯಕ್ಕೆ ಉತ್ತಮ ನಿದರ್ಶನವಾಗಿ ನಿಲ್ಲುತ್ತದೆ.

---

೨೧. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರು, ಪು.೨
೨೨. ಅದೇ, ಪು.೪

ಹೊಸ ಕುಮಾರರಾಮನ ಸಾಂಗತ್ಯ ಕೃತಿಯಲ್ಲಿ ಕುಮಾರರಾಮನ ಕಥೆ ಭಿನ್ನವಾಗಿ ಕಂಡುಬರುತ್ತದೆ. ರತ್ನಾಲಿಯ ನಾಟಕವನ್ನು ನಿಜವೆಂದು ನಂಬಿದ ಕಂಪಿಲರಾಯ ಕ್ರುದ್ಧ(ರೇಗಿದವ)ನಾಗಿ ಮಂತ್ರಿ ಬೈಚಪ್ಪನನ್ನು ಕರೆಯಿಸಿ ನಡೆದ ಸಂಗತಿಯನ್ನು ವಿವರಿಸಿ ರಾಮನನ್ನು ಕೊಲ್ಲಲು ಆಜ್ಞಾಪಿಸುತ್ತಾನೆ. ಇದನ್ನು ನಂಬದ ಬೈಚಪ್ಪನು ಒತ್ತಡಕ್ಕೆ ಒಳಗಾಗಿ ರಾಮನಿಗೆ ವಿವರ ತಿಳಿಸಿ, ಅವನನ್ನು ಹಾಗೂ ಅವನ ಐದು ಜನ ಆತ್ಮೀಯರನ್ನು ನೆಲಮಾಳಿಗೆಯಲ್ಲಿ ಬಚ್ಚಿಟ್ಟು, ಮುಂದೆ ಕಂಪಿಲರಾಯನಿಗೆ ತಿಳಿಯದಂತೆ ರಾಮನ ಹೋಲಿಕೆಯನ್ನು ಹೋಲುವಂತಹ ಶಿರವನ್ನು ಸೃಷ್ಟಿಸಿ, ಛೇದಿಸಿ ಬಂಧನದಲ್ಲಿದ್ದ ಕಳ್ಳರ ತಲೆಯನ್ನು ಹಾರಿಸಿ ಅವು ರಾಮನೊಂದಿಗೆ ನೆಲಮಾಳಿಗೆಯಲ್ಲಿದ್ದ ಕಾಟ, ಸಂಗ, ಲಿಂಗ, ನಾಗಲಿಂಗ, ಸಿಂಗರ ತಲೆಗಳೆಂದು ಕಂಪಿಲ ಹಾಗೂ ರತ್ನಾಲಿಯರಿಗೆ ನಂಬಿಸಿದನು.

ಇಲ್ಲಿ ಬೈಚಪ್ಪನು ರಾಮನ ಗುಣವನ್ನು ತಿಳಿದುಕೊಂಡವನಾಗಿದ್ದು, ರತ್ನಾಲಿಯ ಕುತಂತ್ರಕ್ಕೆ ತಕ್ಕ ಶಾಸ್ತಿಯನ್ನು ಮಾಡಿದನು. ಜೊತೆಗೆ ಕುಮಾರರಾಮನನ್ನು ಬದುಕಿಸುವಲ್ಲಿ ನಿಜದಾತರನ್ನು ಉಳಿಸಿ ತನ್ನ ಚಾಣಾಕ್ಷತನವನ್ನು ಪ್ರದರ್ಶಿಸಿದನು. ಮುಂದೆ ಕುಮಾರರಾಮ ಕನ್ನಡಿಗರ ಮನಸ್ಸಿನಲ್ಲಿ ಲೌಕಿಕ ವೀರನಾಗಿ, ಪುರಾಣ ವೀರನಾಗಿ, ದೇವರಾಗಿಯೂ ಕೂಡ ಕೆಲವೊಂದೆಡೆ ಪೂಜೆಗೊಳ್ಳುತ್ತಲಿರುವುದು ತಿಳಿದುಬರುತ್ತದೆ. ಹಾಗಾಗಿ ಕುಮಾರರಾಮನ ವ್ಯಕ್ತಿತ್ವ ಎರಡು ರೀತಿಯಲ್ಲಿ ಸಾಹಿತ್ಯ ಮುಖೇನ ತಿಳಿದುಬರುತ್ತದೆ.

"ಕುಮಾರರಾಮನ ವ್ಯಕ್ತಿತ್ವದ ಕೇಂದ್ರ ಲಕ್ಷಣ ಪರನಾರೀ ಸೋದರತ್ವ ಇದನ್ನು ಗಂಗಯ್ಯ ಸರಿಯಾಗಿ ಗ್ರಹಿಸಿದ್ದಾನೆ. ನಿಜ ಘಟನೆಯಾದ ರತ್ನಾಲಿಯ ಮೋಹ ನಿರಾಕರಣೆಯೆಂಬ 'ಪರನಾರಿ ಸೋದರ' ಮೌಲ್ಯಕ್ಕೆ ಇನ್ನು ಅರ್ಥ ತುಂಬುವುದು."[೨೩] ಇಲ್ಲಿ ಆತ ಪರಸ್ತ್ರೀಯರನ್ನು ಕಂಡಾಗ ಆತ ಅಕ್ಕ-ತಂಗಿಯರೆಂಬ ಭಾವನೆಯನ್ನು ಹೊಂದುತ್ತಿದ್ದ ಎಂದು ಈ ಹೇಳಿಕೆಯ ಮೂಲಕ ತಿಳಿದುಬರುತ್ತದೆ. ಕುಮಾರ ರಾಮನಿಗೆ ಐದು ಜನ ಮಡದಿಯರು ಇದ್ದರೆಂಬುದು ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರ ರಾಮನ ಸಾಂಗತ್ಯದಿಂದ ತಿಳಿದುಬರುತ್ತದೆ. ಆದರೆ ಕುಮಾರರಾಮನು ಪರನಾರೀ ಸೋದರತ್ವ ಎಂಬ ಬಿರುದನ್ನು ಹೊಂದಿದ್ದರಿಂದ ಐದು ಜನ ಸ್ತ್ರೀಯರನ್ನು ಮದುವೆಯಾಗಲು ಸಾಧ್ಯವಿಲ್ಲ ಎಂದು ಊಹಿಸಬಹುದು. ಇದಲ್ಲದೇ ಆತ ರತ್ನಾಲಿಯೊಂದಿಗೆ ಆಡಿದ ಮಾತು, ಆಕೆಯನ್ನು

---

೨೩. ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ : ಎಸ್.ಎಂ.ಮುತ್ತಯ್ಯ, ಪು.೬೦

ತಾಯಿಯಂತೆ ಕಂಡ ಬಗೆಯನ್ನು ಅವಲೋಕಿಸಿದಾಗ ಆತ ಪರಸ್ತ್ರೀಯರ ಮೇಲೆ ಇಟ್ಟಂತಹ ಅಭಿಮಾನ ಎದ್ದು ಕಾಣುತ್ತದೆ.

ಸರ್ಜಪ್ಪನಾಯಕನಲ್ಲಿರುವ ದಯೆ, ಕರುಣೆ, ಸ್ವಾಭಿಮಾನದ ಗುಣಗಳು :

ಈ ಕಥನಗೀತೆಯಲ್ಲಿ ಬ್ಯಾಡರ ಹುಡುಗ ಸರ್ಜಪ್ಪನಾಯಕನ ವ್ಯಕ್ತಿತ್ವ ಸಮಾಜಕ್ಕೆ ಮಾದರಿಯಾಗಿ ತೋರಿಬರುತ್ತದೆ. ಏಕೆಂದರೆ, ಬಡವರೆಂದರೆ ಕರುಣೆ ತೋರಿಸುವ, ಸಮಾಜದ ಹಿತಕ್ಕಾಗಿ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವಂತಹ ವ್ಯಕ್ತಿತ್ವ ಇವನದು. ಆದ ಕಾರಣ ಇಂತಹ ದಿಟ್ಟ ವ್ಯಕ್ತಿತ್ವ ಇರುವ, ಸಮಾಜದ ಬಗೆಗೆ ಕಾಳಜಿ ಇರುವ ಯುವಕರ ಅವಶ್ಯಕತೆ ಇದೆ. ಆ ಕಾರಣ ಈತನ ಗುಣವನ್ನು ಪುರುಷ ಮೌಲ್ಯವೆಂದು ಪ್ರತಿಪಾದಿಸುವುದು ಸೂಕ್ತವೆನಿಸುತ್ತದೆ.

ಬಡವರಿಗಾಗುವಂತಹ ಅನ್ಯಾಯವನ್ನು ಕಂಡು ಗೌಡ-ಶ್ಯಾನುಭೋಗರ ವಿರುದ್ಧ ಪ್ರತಿತಿಭಟಿಸಿದ ಸರ್ಜಪ್ಪನಾಯಕನನ್ನು ಸಂಚಿನಿಂದ ಹಿಡಿದು ತಂದು, ಊರಲ್ಲಿ ಕರೆದುಕೊಂಡು ಬಂದು ಬಿಲದ ಮೀಸೆಯನ್ನು ತೆಗೆಸಿ, ಮೇಲು ದುರ್ಗಕ್ಕೆ ಕರೆತಂದು ಜೋಡಿ ಆಲದ ಮರಕ್ಕೆ ಗಲ್ಲಿಗೆ ಹಾಕಲು ಮುಂದಾದರು. ಅದನ್ನು ಕಂಡು ಸರ್ಜಪ್ಪನಾಯಕ ನಿಮ್ಮ ಕೈಗೆ ನನ್ನ ಪ್ರಾಣವನ್ನು ಕೊಡುವುದಿಲ್ಲ ಎನ್ನುತ್ತ ನೂಲ್ ಹಗ್ಗವನ್ನು ತೆಗೆದುಕೊಂಡು ತಾನೇ ನೇಣು ಹಾಕಿಕೊಂಡು ಗಾಡಿಯನ್ನು ಒದ್ದನು. ಇಲ್ಲಿ ಆತ ಪ್ರಾಣವನ್ನು ಬಿಡುವಾಗಲೂ ತನ್ನ ಸ್ವಾಭಿಮಾನ, ದಿಟ್ಟತನ, ಧೈರ್ಯವನ್ನು ಮೆರೆದನು. ಇಂತಹ ವ್ಯಕ್ತಿತ್ವವುಳ್ಳ ಯುವಕರು ನಾಡಿನ ಜನತೆಗೆ ಬೇಕಾಗಿರುವ ಕಾರಣ ಅಂಥವರು ಹುಟ್ಟಿ ಬರಲಿ ಅನಿಸುತ್ತೆ, ಆದರೂ ಇನ್ನೂ ಅಂತಹ ಧೀರರು ಹುಟ್ಟಿಬಂದಿರುವುದನ್ನು ಕಂಡಿಲ್ಲ ಎಂದು ತಮ್ಮ ಅಳಲನ್ನು ತೋಡಿಕೊಂಡಿರುವುದು ಕಥನಗೀತೆಗಳಲ್ಲಿಯ ಜನಪದರ ಹೇಳಿಕೆಯ ಮೂಲಕ ಸ್ಪಷ್ಟವಾಗುತ್ತದೆ.

"ದುರುಗಾ ದುರುಗೆಂಬೋದು ಅದು ಎಂದ ದುರಗsವೋ
ಗಗನದ ಮ್ಯಾಲೆತೋ ಕೆಳಗೈತೋ – ಕಾಮನs ದುರುಗಾ
ಏಳೇ ಕಲ್ಲೀಗೆ ದಡೆದೈತೋ – ಸರುಜಪ್ಪ ನಾಯ್ಕ
ಮತ್ತೆ ದುರುಗಕ್ಕೆ ಬರಲಿಲ್ಲೋ"[೨೪]

೨೪. ಪಾಂಚಾಳ ಗಂಗ ವಿರಚಿತ ಹಳೆಯ ಕುಮಾರರಾಮನ ಸಾಂಗತ್ಯ, : ಎಂ.ಎಂ. ಕಲಬುರ್ಗಿ, ಪು.XXX

ಎಂದು ಸರ್ಜಪ್ಪನಾಯಕನಂತಹ ಪುರುಷರನ್ನು ಅಪೇಕ್ಷಿಸುತ್ತಿದ್ದಾರೆ ಜನಪದರು. ಈ ಹೇಳಿಕೆಯ ಮೂಲಕ ಆತನಲ್ಲಿರುವ ವ್ಯಕ್ತಿತ್ವ, ಮೌಲ್ಯಗಳು ಎಂದಿಗೂ ಮಾದರಿಯಾಗಿರುವುದು ಕಂಡುಬರುತ್ತದೆ. ಪ್ರಸ್ತುತ ಕಾಲದ ವಿಪರ್ಯಾಸವೆಂದರೆ ಊರಿಗೆ, ಕೇರಿಗೆ, ದೇಶಕ್ಕೆ, ಸಮಾಜಕ್ಕೆ ಏನಾದರೂ ಒಳ್ಳೆಯ ಕೆಲಸ, ಕಾರ್ಯಗಳನ್ನು ಮಾಡಲು ಮುಂದಾದರೆ, ಅಂತಹವರನ್ನು ಹತ್ತಿಕ್ಕುವುದರಲ್ಲಿ ಸಮಾಜ ಎತ್ತಿದ ಕೈ ಎಂಬುದು ಎಲ್ಲ ಕಾಲಕ್ಕೂ ಸಾಬೀತಾಗುತ್ತಾ ಬಂದಿದೆ. ಹೊಸ ಇತಿಹಾಸವನ್ನು ಸೃಷ್ಟಿಸುವ ಅವಕಾಶ ನಮ್ಮಲ್ಲಿದೆ. ಆದ್ದರಿಂದ ಅದನ್ನು ಮನಗಂಡು ಸರ್ಜಪ್ಪನಾಯಕ, ಸಂಗೊಳ್ಳಿ ರಾಯಣ್ಣ, ಭಗತಸಿಂಗ್ ಮುಂತಾದ ವೀರರಲ್ಲಿರುವ ಮೌಲ್ಯಗಳು ಪ್ರತಿಯೊಬ್ಬರ ನಾಡಿಮಿಡಿತಗಳಲ್ಲಿಯೂ ಕೂಡ ಚಿಮ್ಮಲಿ ಎಂಬ ಆಶಾಭಾವನೆಯನ್ನು ಇದು ಹುಟ್ಟು ಹಾಕುತ್ತದೆ.

ಬಸವಣ್ಣನವರಲ್ಲಿರುವ ಸದ್ಗುಣಗಳು :

ಹರಳಯ್ಯ ಕಥನಗೀತೆಯು ಜನಪದರು ಬಸವೇಶ್ವರರ ಆಳ್ವಿಕೆಯಲ್ಲಿ ಆದ ಮಹಾಯೋಗಿಗಳು ಮಾಡಿದಂತಹ ಕಥಾಸಾರವನ್ನು ಸರ್ವರಿಗೆ ತಿಳಿಸುತ್ತೇನೆ ಎನ್ನುವುದ-ರೊಂದಿಗೆ ಪ್ರಾರಂಭವಾಗುತ್ತದೆ. ಇದಲ್ಲದೇ ಸತಿ-ಪತಿಗಳ ಶರಣನಿಷ್ಠೆ, ಕಾಯಕದ ಮಹತ್ವ ಬಸವಣ್ಣನವರ ಆದರ್ಶ ವ್ಯಕ್ತಿತ್ವವನ್ನು, ಸಾಮಾಜಿಕ ವ್ಯವಸ್ಥೆಯಲ್ಲಿನ ಸಮಾನತೆಯನ್ನು ತಿಳಿಸುವುದರೊಂದಿಗೆ ಆತನ ಸರಳತೆಯನ್ನು ಕೂಡ ಬಿಂಬಿಸುತ್ತದೆ.

ಹನ್ನೆರಡನೇ ಶತಮಾನದಲ್ಲಿ ಹರಳಯ್ಯ ಎಂಬ ಶರಣನು ಬಸವೇಶ್ವರರನ್ನು ಭೇಟಿಯಾಗಲು ಹೊರಟು ನಿಂತನು. ಬಸವೇಶ್ವರರ ದರ್ಶನವಾದ ಕೂಡಲೇ ನಮಸ್ಕರಿಸಿದ್ದಕ್ಕೆ ಪ್ರತಿಯಾಗಿ ಬಸವೇಶ್ವರರು ಮನದೊಳಗೆ ಖುಷಿಪಡುತ್ತಾ ಹರಳಯ್ಯನವರಿಗೆ ಶರಣು ಶರಣಾರ್ತಿಯೆಂದು ಕೈಮುಗಿಯುವರು. ಇದನ್ನು ಕಂಡು ಹರಳಯ್ಯನವರು ನೊಂದು-ಕೊಂಡರು. ಏಕೆಂದರೆ ಮಹಾನ್ ವ್ಯಕ್ತಿ ಬಸವಣ್ಣನವರೇ ಶರಣೆಂದು ಹೇಳಿದರಲ್ಲ ಎಂದು ಮುಖ ಸಣ್ಣದು ಮಾಡಿಕೊಂಡು ಮನೆಯಲ್ಲಿ ಬಂದು ಕುಳಿತರು. ಹರಳಯ್ಯನವರ ಮುಖವನ್ನು ನೋಡಿ ಮಡದಿಯು ವಿಚಾರಿಸುತ್ತಾಳೆ. ಆಗ ಹರಳಯ್ಯನವರು ಏನು ಹೇಳು ಸತಿಯೇ ನಾನು ಪಾಪ ನಿವಾರಣೆಗೆಂದು ಬಸವೇಶ್ವರರ ಹತ್ತಿರ ಹೋದರೆ, ಅವರೇ ನನಗೆ ಶರಣು ಶರಣೆಂದು ಕೈಮುಗಿದು ನಿಂತರು. ಈ ದೋಷವನ್ನು ಕಳೆದುಕೊಳ್ಳುವುದಕ್ಕೆ ನಾನು ಏನು ಮಾಡಬೇಕೆಂದು ಚಿಂತಾಕ್ರಾಂತನಾಗಿ ಕುಳಿತಿರುವೆ ಎಂದು ಪ್ರತ್ಯುತ್ತರ ಕೊಟ್ಟನು. ಅದಕ್ಕೆ ಮಡದಿ ಒಂದು ಸಲಹೆಯನ್ನು ನೀಡುವಳು. ಅದೇನೆಂದರೆ, ಮೈ ಚರ್ಮ ತೆಗೆದು ಪಾದರಕ್ಷೆ

ಮಾಡಿ ಬಸವೇಶ್ವರರಿಗೆ ಮೆಟ್ಟಲು ಕೊಡಿ ಎಂದು ಹೇಳಿ ಸತಿ–ಪತಿಗಳಿಬ್ಬರೂ ಸೇರಿ ಪಾದರಕ್ಷೆಯನ್ನು ಸಿದ್ಧಮಾಡಿ ಬಸವೇಶ್ವರರ ಹತ್ತಿರ ಹೋಗಿ ಅವರಿಗೆ ಮೆಟ್ಟಲು ಹೇಳಿದರು. ಆದರೆ ಬಸವೇಶ್ವರರು ಅವುಗಳನ್ನು ನೋಡಿದ ಕೂಡಲೇ ತಮ್ಮ ತಲೆಯ ಮೇಲೆ ಇಟ್ಟುಕೊಂಡು ನನ್ನ ಜನ್ಮ, ಸಾರ್ಥಕವಾಯಿತೆಂದು ಥೈ ಥೈ ಅಂತ ಕುಣಿದು ಕುಪ್ಪಳಿಸಿದರು. ಇಲ್ಲಿ ಸತಿ–ಪತಿಗಳು ಬಸವಣ್ಣನವರ ಮೇಲಿಟ್ಟ ಪ್ರೀತಿ–ವಿಶ್ವಾಸದಲ್ಲಿ ದೇವರೆಂಬ ಭಾವ ಎದ್ದು ಕಾಣುತ್ತದೆ. ಇದರಿಂದ ಬಸವಣ್ಣನವರ ಆದರ್ಶ ವ್ಯಕ್ತಿತ್ವ ಕಣ್ಣ ಮುಂದೆ ಬಂದು ಒಡಮೂಡುತ್ತದೆ. ಹಾಗಾಗಿ ಇಲ್ಲಿ ಬಸವಣ್ಣನವರಲ್ಲಿರುವ ಸರಳತೆ, ಸನ್ನಡತೆ, ಆದರತನ ಮುಂತಾದ ಉತ್ತಮ ಮೌಲ್ಯಗಳು ಕಂಡುಬರುತ್ತವೆ. ಇಂತಹ ಮೌಲ್ಯಗಳ ಗಣಿ ಆಗಿರುವಂತಹ ಬಸವಣ್ಣನವರು ಮರೆಯಾಗಿರುವುದು ಶೋಚನೀಯ. ಆದರೆ ಅವರ ಅದರ್ಶ ಮೌಲ್ಯಗಳು ಜೀವಂತವಾಗಿವೆ. ಸಮಾಜದಲ್ಲಿ ಅವುಗಳ ಪ್ರಸರಣೆಯಾಗಬೇಕಾದ ಅವಶ್ಯಕತೆ ಇದೆ. ಅವರನ್ನು ಪೂಜಿಸುವುದರೊಂದಿಗೆ ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸುವುದು ಬಹುಮುಖ್ಯ–ವಾಗಿದೆ.

ಹರಳಯ್ಯ ಸಣ್ಣ ಮುಖಮಾಡಿದ್ದನ್ನು ಕಂಡ ಬಸವೇಶ್ವರರು ಕುಣಿಯುವುದನ್ನು ಬಿಟ್ಟು ದೃಷ್ಟಾಂತವನ್ನು ಹೇಳಿದರು, "ಇವು ಕೆರುವು ಮೆಡುವು ಅಲ್ಲ ಪೂಜಾ ಮಾಡೋವು"[೨೫] ಎಂದು ಶರಣೆಂದರು. ಮತ್ತೂ ಮುಖವನ್ನು ಸಣ್ಣದು ಮಾಡಿಕೊಂಡು ಪಾದರಕ್ಷೆಗಳನ್ನು ತೆಗೆದುಕೊಂಡು ಮನೆಗೆ ಹೊರಟನು. ದಾರಿಯಲ್ಲಿ ಹೋಗುವಾಗ ಮಧುವರಸನು ಕೆರವು ಬಹಳ ಚೆಂದ ಇದ್ದಾವು. ಖರೀದಿಗೆ ಕೊಡು ತಗೋತಿನಿ ಎಂದನು. ಹರಳಯ್ಯ ಆಗ "ಇವು ನರ ಮನುಷ್ಯರು ಮೆಡುವ ಕೆರುವಲ್ಲ"[೨೬] ಬೇಡ ಸುಮ್ಮನಿರು ಎಂದು ಎಷ್ಟೇ ಕೇಳಿಕೊಂಡರೂ ಸುಮ್ಮನಿರದೇ ಮಧುವರಸ ಹರಳಯ್ಯನನ್ನು ನೆಲಕ್ಕೆ ಕೆಡವಿ ಕೆರವಿನೊಳಗೆ ಕಾಲಿಟ್ಟು ನೋಡುತ್ತಾನೆ. ಕಾಲಿಟ್ಟ ತಕ್ಷಣವೇ ಪರಿಣಾಮವನ್ನನುಭವಿಸುತ್ತಾನೆ. ಮೈಯೆಲ್ಲ ಝುಂ ಎಂದು ಉರಿಯುವುಂತಾಗಿ, ಅಗ್ನಿಯೊಳಗೆ ಬಿದ್ದಂತೆ ಆಯಿತಂತೆ. ತಕ್ಷಣವೇ ದಾರಿಯಲ್ಲಿ ಬಿದ್ದು ಹೊರಳಾಡಿ ಅಳುತ್ತಾನೆ. ಈ ಸುದ್ದಿಯನ್ನು ತಿಳಿದು ರಾಜನ ಮಡದಿ ಮಕ್ಕಳು ಬಂದು, ಮನೆಗೆ ಕರೆದುಕೊಂಡು ಹೋಗುವರು. ಮೂರು ಮಂದಿ ತೊತ್ತದೇರು (ದಾಸಿ) ಬ್ಯಾಸರಿಲ್ಲದೇ ನೀರನ್ನು ತಂದು ತಂದು ಸುಸ್ತಾಗಿ ಮಧುವರಸನನ್ನು ಶಪಿಸುತ್ತಾರೆ.

---

೨೫. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರು, ಪು.೨೯೩
೨೬. ಅದೇ, ಪು.೨೯೪

"ಏ ಎಲಾ ಈ ರಾಜನ ಮ್ಯಾಲ ಮಣ್ಣ ಚಲ್ಲಲಿ ಎಂದೂss

ಉಸುರು ಹಾಕು ಹೊರಟಿದ್ದಾರಿs ಪುನಃ ನೀರಿಗೆ"[೨೭]

ಆದರೆ ದಾರಿಯಲ್ಲಿ ಡೊಂಬರಾಟವೊಂದು ನಡೆದ ಕಾರಣ ಸಣ್ಣ ತೊತ್ತೀನೆ ಆಟವನ್ನು ನೋಡುತ್ತಾ ನಿಂತಳು. ಆ ಬಾಲೆ ಸಮಯ ಬಹಳವಾದ ಕಾರಣ ಗಾಬರಿಯಾಗಿ ಗೆಳತಿಯರನ್ನು ನೋಡುತ್ತಾಳೆ. ಯಾರೂ ಕಾಣದ ಕಾರಣ ಗಾಬರಿಗೊಂಡು ಮುಂದಕ್ಕೆ ಹೋಗುತ್ತಾಳೆ. ಅಲ್ಲಿ ಸಮಗಾರ ಹರಳಯ್ಯನ ಬಚ್ಚಲು ಆಕೆಯ ದೃಷ್ಟಿಗೆ ಬೀಳುತ್ತದೆ. ಅಲ್ಲೇ ಹೋಗಿ ನೀರನ್ನು ತುಂಬಿಕೊಂಡು ರಾಜನಿಗಾಗಿ ಒಯ್ದಳು. ಆಗ ಮಧುವರಸನಿಗೆ ಉರಿ ಹೋಯಿತಂತೆ. ನೀರು ತಂದ ಸಂಗತಿಯ ಬಗೆಗೆ ಆಕೆಯೊಂದಿಗೆ ವಿಚಾರಿಸಿದಾಗ ನಡೆದ ಸಂಗತಿಯನ್ನು ಹೇಳಿದಳು. ತನ್ನ ತಪ್ಪಿನ ಅರಿವಾಗಿ ಸಮಗಾರ ಹರಳಯ್ಯನ ಹತ್ತಿರ ಹೋಗಿ ಕ್ಷಮೆ ಕೇಳಿ ಗುರುವೇ ನೀನೇನು ಬೇಡುವೆ ಬೇಡು ಎಂದು ಕೇಳಿದನು. "ಗುರುವೆಂಬುದು ಅಳಿದಕೇಸಿ ಅರಿವಿಲಿಂದ ತಿಳಿದ ನೀನುss ಏಕ ನಿಷ್ಠೆಯಿಂದ ಇವುಕ ಪೂಜೆ ಮಾಡೆಂದ!"[೨೮] ಅಂದಾಗ ನಿನಗೆ ಮುಕ್ತಿ ದೊರೆಯುವುದೆಂದು ನುಡಿದರು. ತಕ್ಷಣವೇ ಮಧುವರಸ ಹೋಗಿ ಜಗಲಿಯ ಮೇಲಿಟ್ಟು ಜರದ ಪಿತಾಂಬರ ತೊಡಿಸಿ ಮುಕ್ತಿಯನ್ನು ಬೇಡುತ್ತಿದ್ದನು. ಕೆಟ್ಟಮೇಲೆ ಬುದ್ಧಿ ಬಂತು ಎನ್ನುವ ಹಾಗೇ ಮಧುವರಸನಿಗೆ ಅರಿವಾಯಿತು.

ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲು-ಕೀಳೆಂಬ ಭಾವವನ್ನು ತೊಲಗಿಸಲು ಬಸವಣ್ಣ-ನವರು ಅಂದಿನಿಂದಲೇ ಪ್ರಯತ್ನಿಸಿದರು. ಎಲ್ಲರನ್ನು ಸಮಾನವಾಗಿ ಕಾಣುವ ದೃಷ್ಟಿಕೋನ ಅವರದ್ದಾಗಿತ್ತು. ಆದರೆ ಇಂದಿಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲು-ಕೀಳೆಂಬ ಭಾವ ಎದ್ದು ಕಾಣುತ್ತದೆ. ಆದ ಕಾರಣ ಇದನ್ನು ಹೊಡೆದೋಡಿಸಲು ಬಸವಣ್ಣನವರ ವ್ಯಕ್ತಿತ್ವ, ಆದರ್ಶ ವಿಚಾರಧಾರೆ ಅವಶ್ಯಕವಾಗಿ ಇಂದಿಗೂ, ಮುಂದೆಯೂ ಬೇಕೇ ಬೇಕು. ಇಂತಹ ಮೌಲ್ಯಗಳು, ಆದರ್ಶಗಳು ಸಮಾಜಕ್ಕೆ ಅವಶ್ಯಕವಾಗಿವೆ. ಕೇವಲ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರೆ ಸಾರ್ಥಕವಾಗದು. ಅವರ ತತ್ವಗಳನ್ನು ಬದುಕಿನಲ್ಲಿ ರೂಢಿಸಿಕೊಂಡು, ಮುಂದು-ವರೆಸಿಕೊಂಡು ಹೋಗಬೇಕು.

---

೨೭. ಐತಿಹಾಸಿಕ ಕಥನಗೀತೆಗಳು : ಕೃಷ್ಣಮೂರ್ತಿ ಹನೂರು, ಪು.೨೯೪

೨೮. ಅದೇ, ಪು.೨೯೫

೬.೩. ಸ್ಥಾಪಿತವಾದ ಸಾರ್ವಕಾಲಿಕ ಸಾಮಾಜಿಕ ಮೌಲ್ಯಗಳು :

ಪ್ರಾಚೀನ ಕಾಲದಿಂದಲೂ ಸಾರ್ವಕಾಲಿಕವಾಗಿ ಸ್ಥಾಪಿತವಾಗಿರುವಂತಹ ಮೌಲ್ಯಗಳನ್ನು ಹಿಂದೂ ಸನಾತನ ಧರ್ಮದ ವ್ಯಾಪ್ತಿಯಲ್ಲಿ ಕಾಣುತ್ತೇವೆ. ಅವು ಮಾನವ ಕುಲವು ಉತ್ತಮ ಪಥದಲ್ಲಿ ಸಾಗಲು ದಾರಿಯೂ ಕೂಡ ಆಗಿವೆ. ಹಾಗಾಗಿ ಬದುಕನ್ನು ಸಾಗಿಸಲು ಅವಕಶ್ಯಕವಾದಂತಹ ಕೆಲವೊಂದು ಮೌಲ್ಯಗಳನ್ನು ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

- ಪರೋಪಕಾರ
- ದಾನ ಧರ್ಮ
- ಸಹಾನುಭೂತಿ
- ವಿಶ್ವಾಸ
- ಅರಿವು
- ಸಹಕಾರ
- ಸಭ್ಯತೆ
- ಕ್ರಿಯಾಶೀಲತೆ
- ವಿಶ್ವಾಸಯೋಗ್ಯತೆ
- ಕೃತಜ್ಞತೆ ಭಾವ
- ಪ್ರಾಮಾಣಿಕತೆ
- ವಿನಮ್ರತೆ
- ಪಕ್ಷಪಾತರಹಿತತೆ
- ಸಹೃದಯತೆ
- ಪಾತಿವ್ರತ್ಯ
- ತರ್ಕಬದ್ಧತೆ
- ವಿನಯತೆ
- ತಾಳ್ಮೆ
- ಶಾಂತಿ
- ನಿರ್ಮಲತೆ
- ಗೌರವಪೂರ್ಣತೆ
- ಪೂಜ್ಯ ಭಾವನೆ
- ಆತ್ಮಗೌರವ
- ಆತ್ಮವಿಶ್ವಾಸ
- ನಿಸ್ವಾರ್ಥ ಸೇವೆ
- ಸತ್ಯ
- ನ್ಯಾಯ
- ಶುಚಿತ್ವ ಗುಣ
- ನ್ಯಾಯಬದ್ಧ ಸ್ವಾಭಿಮಾನ
- ದೃಢ ನಿಶ್ಚಯ

ಹೀಗೆ ಇನ್ನೂ ಅನೇಕ ಮೌಲ್ಯಗಳು ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸ್ತ್ರೀ ಮತ್ತು ಪುರುಷ ಮೌಲ್ಯ ಪ್ರತಿಪಾದನೆಯಲ್ಲಿ ಕೆಲವೊಂದು ಮೌಲ್ಯಗಳು ಕಂಡುಬರುತ್ತವೆ. ಆದರೆ ವಾಸ್ತವದಲ್ಲಿ ಇವುಗಳಲ್ಲಿರುವ ಮೌಲ್ಯಗಳನ್ನು ಹೆಚ್ಚು ಅಳವಡಿಸಿಕೊಳ್ಳದೆ ಅಪಮೌಲ್ಯಗೊಳಿಸುತ್ತಿರುವುದರಿಂದ ಬದುಕು ಜಟಿಲವಾಗಿದೆ. ಆದ್ದರಿಂದ ಮೌಲ್ಯಗಳನ್ನು ಕಾಪಾಡಿ-ಕೊಂಡು, ಅಳವಡಿಸಿಕೊಂಡು ಹೋಗುವುದು ಸಮಾಜದ ಸದಸ್ಯರೆಲ್ಲರ ಕರ್ತವ್ಯವಾದ್ದರಿಂದ ಜಾಗರೂಕರಾಗಿ ಬದುಕನ್ನು ಹಸನುಗೊಳಿಸುವತ್ತ ಚಿತ್ತಭಾವವಿಟ್ಟು ಸಾಗಬೇಕು. ಬಹುತೇಕ

ಮಾನವರಿಗೆ ಮೌಲ್ಯಗಳ ಅರಿವಿಲ್ಲದೆ ಇರುವುದು ವಿಪರ್ಯಾಸವೇ ಸರಿ. ಆದ ಕಾರಣ ಈ ಕಥನಗೀತೆಗಳ ಮೂಲಕ ಎಚ್ಚೆತ್ತುಕೊಂಡು ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಉದ್ದೇಶದಿಂದ ಸಾರ್ವಕಾಲಿಕ ಸ್ಥಾಪಿತವಾದ ಮೌಲ್ಯಗಳನ್ನು ಕೆಲವೊಂದು ಕಥನಗೀತೆಗಳ ಮೂಲಕ ವಿಮರ್ಶಿಸಲಾಗಿದೆ.

ಗೋವಿನ ಹಾಡು ಕಥನಗೀತೆಯಲ್ಲಿ ಅಭಿವ್ಯಕ್ತವಾದ ನಿಸ್ವಾರ್ಥ ತ್ಯಾಗ ಹಾಗೂ ಸತ್ಯ ಪರಿಪಾಲನೆ :

ಕನ್ನಡ ಜನಪದ ಗೀತೆಗಳಲ್ಲಿ ಅತ್ಯಂತ ಜನಪ್ರಿಯವಾದದ್ದು "ಗೋವಿನ ಹಾಡು". ಇದು ಸಾಮಾಜಿಕ ಮೌಲ್ಯವನ್ನು ಎತ್ತಿ ತೋರಿಸುವಂತಹ ಕಥನಗೀತೆಯಾಗಿದೆ. ಈ ಗೀತೆ ಒಂದು ಕಡೆ ಗೋವಿನ ಸತ್ಯ ಪರಿಪಾಲನೆಯನ್ನು ಮತ್ತೊಂದೆಡೆ ಹುಲಿಯ ತ್ಯಾಗವನ್ನು ಬಿಂಬಿಸುತ್ತದೆ. ಗೋವು ತನ್ನ ಹಾಲುಣಿಸುವ ಕರುವನ್ನು ಲೆಕ್ಕಿಸದೆ ಸತ್ಯಕ್ಕಾಗಿ ಪ್ರಾಣವನ್ನೇ ಕೊಡಲು ಮುಂದಾದಾಗ ಅತ್ಯಂತ ಕ್ರೂರಿಯಾದ ಹುಲಿಯ ಮನಸ್ಸು ಸಹ ಪರಿವರ್ತನೆಯಾಗಿ ತನ್ನ ಪ್ರಾಣವನ್ನು ತಾನೇ ತೆಗೆದುಕೊಂಡಿತು. ವಾಸ್ತವದಲ್ಲಿ ಸತ್ಯಯೆನ್ನುವುದು ಪುಸ್ತಕದಲ್ಲಿ ಅಚ್ಚಾಗಿ ಉಳಿದಿದೆಯೆ ಹೊರತು ಮಸ್ತಕದಲ್ಲಿ ಉಳಿದಿಲ್ಲ. ಕಾರಣ ಸತ್ಯ, ನ್ಯಾಯವೆಂಬ ಮೌಲ್ಯಗಳು ಕುಸಿದು ಮಿಥ್ಯ-ಅನ್ಯಾಯವೆಂಬುದು ತಾಂಡವವಾಡುತ್ತಿದೆ. ಇದನ್ನು ಹೋಗಲಾಡಿಸುವ ಹೊಣೆ ಸಮಾಜದ ಹೆಗಲಿಗಿದೆ. ಪ್ರಾಣಿಗಳಲ್ಲಿರುವ ಮೌಲ್ಯ ಮನುಷ್ಯನಲ್ಲಿ ಇರದಿರುವುದನ್ನು ಕಂಡರೆ ಮಾನವನ ಮೌಲ್ಯಗಳ ಕುಗ್ಗುವಿಕೆ ಕಂಡು ಬರುತ್ತದೆ. ಇದರಿಂದ ಮಾನವನು ಸಮಾಜದಲ್ಲಿ ಸಂಕುಚಿತ ನಾಗತೊಡಗಿದ್ದಾನೆ. ಆದ ಕಾರಣ ಇದನ್ನು ತಡೆಗಟ್ಟಲು ಸಾರ್ವಕಾಲಿಕ ಮೌಲ್ಯವಾಗಿ ಬಿಂಬಿತವಾದ ಗೋವಿನಲ್ಲಿರುವ ಸತ್ಯ ಪರಿಪಾಲನೆಯನ್ನು ಮುಂದು-ವರೆಸಿಕೊಂಡು ಹೋಗುವ ಅವಶ್ಯಕತೆ ಇದೆ. ಸತ್ಯವೆಂಬುದನ್ನು ಕೆಳಗೆ ಹಾಕಿ ಮಿಥ್ಯವೆಂಬುದು ಅದನ್ನು ತುಳಿಯುತ್ತಾ, ಸಮಾಜದಲ್ಲಿ ಅದರ ಮಹತ್ವವನ್ನು ಕಳೆಯುತ್ತಿದೆ. ಆ ಕಾರಣ ಸಮಾಜದಲ್ಲಿ ಸತ್ಯದ ಮಹತ್ವವನ್ನು ಪಸರಿಸಬೇಕು. ಆದರೆ ಇಂದು ಎಷ್ಟೋ ಜನರಿಗೆ, ಮಕ್ಕಳಿಗೆ ಗೋವಿನ ಹಾಡಿನ ಕಥೆಯೇ ಗೊತ್ತಿಲ್ಲದಿರುವುದನ್ನು ಕಂಡರೆ ಸಮಾಜದಲ್ಲಿ 'ಸತ್ಯ' ಎಂಬ ಮೌಲ್ಯ ಹೇಗೆ ಕುಸಿಯುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಕವುಲಿ ಹಾಡು ಕಥನಗೀತೆಯಲ್ಲಿ ಅಭಿವ್ಯಕ್ತವಾದ ಮೌಲ್ಯ ಪ್ರತಿಪಾದನೆ :

'ಗೋವಿನ ಹಾಡು' ಗೀತೆಯನ್ನು ಹೋಲುವ ಈ ಕಥನಗೀತೆಯಲ್ಲಿ ಹುಲಿ ತಿನ್ನದೇ ಬಿಟ್ಟ ಹಸುವಿನ ಚಿತ್ರಣ ಚಿತ್ರಿತವಾಗಿದೆ. ಕ್ರೂರತೆಯನ್ನು ಮೆಟ್ಟಿ ಮೃದುತ್ವವನ್ನು ವೈಭವೀಕರಿಸಿ-ಕೊಳ್ಳುವ ಮುಗ್ಧ, ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಸಂದ ಗೌರವವು ನಿರೂಪಿತವಾಗಿದೆ.

'ಸಿರಿಕವಲಿ'ಯನ್ನು ಹುಲಿ ತಿನ್ನದೇ ಬಿಟ್ಟರೂ, ಹಸಿರು ಹುಲ್ಲಿನ ಆಸೆಗಾಗಿ ಎತ್ತರದ ಗುಡ್ಡಕ್ಕೆ ಹೋಗಿ ಕಾಲು ಜಾರಿ ಪ್ರಪಾತಕ್ಕೆ ಬಿದ್ದು, ಜೀವ ಕಳೆದುಕೊಳ್ಳುವುದು. ಇದು ವಿಧಿಯಾಟವನ್ನು ಲೋಕಕ್ಕೆ ತೋರಿಸುವ ನಿದರ್ಶನವಾಗಿದೆ.

"'ಕವುಲಿ'ಯ ಕಥೆ ಕೇವಲ ಪ್ರಾಣ 'ಕಥೆಯಾಗಿರುವಂತೆ ತೋರುವುದಿಲ್ಲ. ಕವಿ ತಾನು ಸಮಾಜದಲ್ಲಿ ಕಂಡ ಕೆಲ ವ್ಯಕ್ತಿಗಳ ನಡುವೆ ನಡೆದಿರಬಹುದಾದ ಒಂದು ಘಟನೆಯನ್ನು ಏನಾದರೂ ಎತ್ತಿಕೊಂಡು ಅಲ್ಲಿಂದ ಮಾನವೀಯ ಸಂಬಂಧಗಳ ಕ್ರೌರ್ಯ, ಕರುಣೆ, ವಾತ್ಸಲ್ಯ ಭಾವನೆಗಳನ್ನು ಗಮನಿಸಿ ಅಂಥ ವ್ಯಕ್ತಿಗಳಿಗೆ ಒಂದೊಂದು ಪ್ರತೀಕವನ್ನಿಟ್ಟುಕೊಂಡು ಅತಿ ಕ್ರೂರ ವ್ಯಕ್ತಿ ಹುಲಿ. ಆಶ್ರಯವಿಲ್ಲದ ಅಥವಾ ಒಬ್ಬನ ಶೋಷಣೆಗೆ ಸಿಕ್ಕ ತಾಯಿ, ಮಗ- ಕೌಲಿ, ಕರು. ಹೀಗೆ ಆ ಇಡೀ ಘಟನೆಯನ್ನು ಒಂದು ಪ್ರಾಣಿ ರೂಪದಲ್ಲಿ ಸಂಯೋಜಿಸಿದನೇ? ವಿಚಾರಾರ್ಹವಾದುದು; ಗಮನಾರ್ಹವಾದುದು."[೨೯] ಈ ಕಥೆಯ್ನನು ಕವಿ ಹೇಗೆ ಬರೆದನೋ ಗೊತ್ತಿಲ್ಲ. ಏಕೆಂದರೆ ಅವರು ಬರೆದ ಕವಿತೆಯ ಹಿನ್ನೆಲೆ ಅವರಿಗೆ ಮಾತ್ರ ಗೊತ್ತಿರುತ್ತದೆ. ಪ್ರಾಣಿಯನ್ನು ಉದ್ದೇಶಿಸಿಯಾದರೂ ಇರಲಿ, ಮಾನವನನ್ನು ಉದ್ದೇಶಿಸಿಯಾದರೂ ಇರಲಿ ಒಟ್ಟಿನಲ್ಲಿ ಸಮಾಜಕ್ಕೆ ಎಲ್ಲ ಕಾಲಕ್ಕೂ ನೀತಿಯನ್ನು ಒದಗಿಸುತ್ತ ಬಂದ ಮಹತ್ವದ ಕಥನಗೀತೆ ಎಂದೇ ಹೇಳಬಹುದು. ಮಾನವನು ಪ್ರಾಣಿಗಳಿಗಿಂತಲೂ ನಿಕೃಷ್ಟವಾಗಿ ನಡೆದು-ಕೊಳ್ಳುತ್ತಿರುತ್ತಾನೆ. ಇದಕ್ಕೆ ಮೌಲ್ಯಗಳಿಂದ ಕುಸಿಯುತ್ತಿರುವ ವಾಸ್ತವ ಸಮಾಜವೇ ಸಾಕ್ಷಿ. ಈ ಕಥನಗೀತೆಯು ಇಡೀ ಮನುಕುಲಕ್ಕೆ ನೈತಿಕ ಮೌಲ್ಯವನ್ನು ಒದಗಿಸುವುದರೊಂದಿಗೆ ವೈಶಿಷ್ಟ್ಯತೆಯಿಂದ ಕೂಡಿದ್ದಾಗಿದೆ. ಹಾಗಾಗಿ ಸತ್ಯ, ಪ್ರಾಮಾಣಿಕತೆ ಎಂಬ ಸಾಮಾಜಿಕ ಮೌಲ್ಯವನ್ನು ಈ ಗೋವಿನ ಗೀತೆಯಲ್ಲಿ ಕಾಣುತ್ತೇವೆ.

"ಸತ್ಯವೇ ನಮ್ಮ ತಾಯಿ-ತಂದೆ
ಸತ್ಯವೇ ನಮ್ಮ ಸರ್ವ ಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು"[೩೦]

ಎಂದು ಸತ್ಯವನ್ನು ತಂದೆ-ತಾಯಿ-ಬಂಧು-ಬಳಗಕ್ಕೆ ಹೋಲಿಸಿ ಅದರ ಮೌಲ್ಯವು ಸರ್ವ ಕಾಲಕ್ಕೂ ಸಾರಲೂ ಯೋಗ್ಯವಾಗಿ ಕಂಡುಬರುತ್ತದೆ.

---

೨೯. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ : ದೇವೇಂದ್ರಕುಮಾರ ಹಕಾರಿ, ಪು.೨೮೫
೩೦. ಜನಪದ ಕಥನಗೀತೆಗಳು : ಪಿ.ಕೆ. ಖಂಡೋಬಾ, ಪು.೩

'ಹೆಬ್ಬುಲಿಗೆ ನಾನು ಕೊಟ್ಟೆನು ಭಾಷೆ' ಕಥನಗೀತೆಯಲ್ಲಿ ಅಭಿವ್ಯಕ್ತವಾದ ಮಾನವೀಯತೆ :

ಈ ಮೇಲಿನ ಎರಡೂ ಕತೆಗಿಂತಲೂ ಭಿನ್ನವಾದ ಘಟನೆ 'ಹೆಬ್ಬುಲಿಗೆ ನಾನು ಕೊಟ್ಟೆನು ಭಾಷೆ' ಎಂಬ ಕಥನಗೀತೆಯಲ್ಲಿ ವ್ಯಕ್ತವಾಗಿದೆ. ಇದರಲ್ಲಿ ಹಿಂತಿರುಗಿ ಬಂದ ಹಸುವನ್ನು ಹುಲಿಯು ತಿಂದುಬಿಡುತ್ತದೆ. ಮುಗ್ಧವಾದ ಗೋವನ್ನು ನಾಶ ಮಾಡಿದ್ದಕ್ಕೆ ಹುಲಿಯ ಮರಿಯು ತನ್ನ ತಾಯಿ ಹುಲಿಯನ್ನು ಆಕ್ಷೇಪಿಸುತ್ತಾ ಹಾಲನ್ನು ಕುಡಿಸುತ್ತಿರುವಾಗ ತಾಯಿಯ ಹೊಟ್ಟೆಯನ್ನು ಬಗೆದು ಕೊಲ್ಲುತ್ತದೆ. ನಂತರ ತಬ್ಬಲಿಯಾದ ಆ ಕರುವಿಗೆ ಸಾಂತ್ವನ-ಸಮಾಧಾನ ಹೇಳಿ ನಿನ್ನ ಗುಂಪನ್ನು (ಹಿಂಡನ್ನು) ಸೇರಿಕೋ ಎಂದು ಉಪದೇಶಿಸುತ್ತದೆ. ಇದು 'ಅಪ್ಪ ಗುಡಿಕಟ್ಯಾನ ಮಗ ಕಳಸಾ ಇಡ್ತಾನ' ಎನ್ನುವ ಮಾತಿಗೆ ವಿರೋಧವಾಗಿದೆ. ತಂದೆ-ತಾಯಿ ಇದ್ದ ಹಾಗೆ, ಹಿರಿಯರು ಇದ್ದ ಹಾಗೆ ಮಕ್ಕಳಿರುವುದಿಲ್ಲ. ಸ್ವರೂಪದಲ್ಲಿ ತಂದೆ-ತಾಯಿ ಹಾಗೂ ವಂಶಸ್ಥರನ್ನು ಹೋಲಬಹುದು. ಆದರೆ ನ್ಯಾಯ ಯಾವುದು ಅನ್ಯಾಯ ಯಾವುದು ಎಂಬುದನ್ನು ತೂಗಿ ನೋಡುವ ಶಕ್ತಿ ಪ್ರತಿಯೊಬ್ಬರಿಗೂ ಇರುತ್ತದೆ. ಅದು ಅವರವರ ವೈಚಾರಿಕತೆಗೆ ಸೀಮಿತವಾದದ್ದು. ಹಿರಿಯರು ಮಾಡಿದ ಅನ್ಯಾಯವನ್ನು ಮುಂದುವರಿಸದೇ ತಿದ್ದುವ ಪ್ರಯತ್ನವನ್ನು ಈ ಕಥನಗೀತೆಯಲ್ಲಿ ಕಾಣುತ್ತೇವೆ. ಹುಲಿಯ ಮರಿಯ ಮುಖಾಂತರ ಮಾನವೀಯತೆಯನ್ನು, ನ್ಯಾಯ ಸಮ್ಮತ ನಿರ್ಧಾರವನ್ನು ಎತ್ತಿ ಹಿಡಿಯಲಾಗಿದೆ.

ಸೋಮರಾಯ-ಭೀಮರಾಯ ಕಥನಗೀತೆಯಲ್ಲಿ ಅಭಿವ್ಯಕ್ತವಾದ ಆದರ್ಶ ಗೆಳೆತನ :


ಒಂದು ದಿನ ಸೋಮರಾಯನ ಹೆಂಡತಿ ಗಂಡನಿಗೆ ತಾಂಬೂಲ ತರುವುದಕ್ಕಾಗಿ ಅಂಗಡಿಗೆ ಹೋದಾಗ ಗೆಳೆಯನ ಹೆಂಡತಿಯೆಂದು ಗೊತ್ತಿರದೇ ಭೀಮರಾಯ ಕಣ್ಣಿಟ್ಟನು. ಆಗ ಶೂರ ಭೀಮರಾಯ ಗೆಳೆಯ ಸೋಮರಾಯನ ಹತ್ತಿರ ಬಂದು ಆಕೆಯನ್ನು ನನಗೆ ಕೊಡಿಸು ಸಂತೋಷದಿಂದ ಒಂದು ರಾತ್ರಿ ಆಕೆಯೊಂದಿಗೆ ಕಳೆಯುವೆನು ಎನ್ನುತ್ತಾನೆ. ಇದು ಈತನಲ್ಲಿರುವ ನೀಚ ಬುದ್ಧಿಯನ್ನು ಕಾಮುಕ ವ್ಯಕ್ತಿತ್ವವನ್ನು ತೋರಿಸುತ್ತದೆ. ಹಾಗಾಗಿ ಆಕೆಯನ್ನು ಒಂದು ವಸ್ತುವನ್ನಾಗಿ ವೇಶ್ಯೆಯನ್ನಾಗಿ ಕಂಡ ಬಗೆ ಕಂಡುಬರುತ್ತದೆ. ಗೆಳೆಯ ಸೋಮರಾಯನಿಗೆ ಚಿಂತೆ ಹತ್ತಿತು. ಭೀಮರಾಯನನ್ನು ತನ್ನ ಮಡದಿಯೊಂದಿಗೆ ಕಳಿಸುವ ಸಂದರ್ಭ ಬರುತ್ತದೆ. ಈಕೆ ಸೂಳೆಯಲ್ಲ ತನ್ನ ಗೆಳೆಯ ಸೋಮರಾಯನ ಮಡದಿ ಎಂದು ಗುರುತು ಹಿಡಿದು ತನ್ನನ್ನೇ ತಾನು ಹತಾರದಿಂದ ಇರಿದುಕೊಂಡು ಸಾಯುತ್ತಾನೆ. ಮುಂದೆ ತನ್ನ ಗಂಡ ಕೊಲ್ಲುತ್ತಾನೆ ಎಂಬ ಭಯದಿಂದ ಸೋಮರಾಯನ ಹೆಂಡತಿ ತಾನೇ ಪ್ರಾಣ

ಆಹುತಿ ಮಾಡಿಕೊಳ್ಳುವಳು. ಸೋಮರಾಯ ಬೆಳಿಗ್ಗೆ ಎದ್ದು ಹೆಣ ನೋಡಿ ಎಲ್ಲಿ ಹುಡುಕಿದರೂ ಇಂತಹ ಸತಿ ಸಿಗುವುದಿಲ್ಲ. ನನ್ನ ಜತೆಯಾಗಿಯೇ ಇದ್ದ ಪ್ರಾಣಸ್ನೇಹಿತ ಬಿಟ್ಟುಹೋದ ಎಂದು ನೊಂದು ಇನ್ನು ಜೀವನದಲ್ಲಿ ಏನೂ ಇಲ್ಲ ಎಂದುಕೊಂಡು ಹತಾರ ತಗೊಂಡು ಕೊರಳು ಕೊಯ್ದುಕೊಳ್ಳುವಾಗ ಹಸ್ತ ಹಿಡಿದು ಶಿವನು ಮೂವರ ಪ್ರಾಣವನ್ನು ಬದುಕಿಸಿದನು. ಜನಪದರು ದೈವೀಕತೆಯಲ್ಲಿ ಹೆಚ್ಚು ನಂಬಿಕೆ ಇಟ್ಟಿರುವ ಕಾರಣ ಶಿವನು ಬಂದು ಬದುಕಿಸಿದನು ಎಂದು ತಿಳಿಯಬಹುದು. ಅದೇ ವೈಜ್ಞಾನಿಕವಾಗಿ ವಿವೇಚಿಸಿದಾಗ ಮೂವರ ನಿಷ್ಠೆ ಸಮಾಜಕ್ಕೆ ಮಾದರಿಯಾಗಲಿ ಎಂಬ ಅರಿವು ಜನಪದರಲ್ಲಿರುವ ಕಾರಣ ಪಾತ್ರಗಳನ್ನು ಬದುಕಿಸುವುದರ ಮೂಲಕ ಆದರ್ಶತನ ಮೆರೆದಿದ್ದಾರೆ ಎಂದು ಹೇಳಬಹುದು. ಜೊತೆಗೆ ಹುಟ್ಟು-ಸಾವುಗಳ ಮಧ್ಯೆ ನಡೆಯುವ ಬದುಕನ್ನು ಹೇಗೆ ಸ್ವೀಕರಿಸಬೇಕೆಂಬ ಆಶಯವೂ ಇಲ್ಲಿ ಕಂಡುಬರುತ್ತದೆ.

ಇದರಿಂದ ತಿಳಿದುಬರುವ ಅಂಶಗಳೇನೆಂದರೆ ಪರಸ್ತ್ರೀಯರನ್ನು ನೋಡುವಂತಹ ದೃಷ್ಟಿಕೋನ ಬದಲಾಗಬೇಕು. ಪ್ರಾಮಾಣಿಕತೆ, ನಿಷ್ಠೆ ಇತ್ಯಾದಿ ಅಂಶಗಳು ತಿಳಿದುಬರುತ್ತವೆ.

ತಾನು ಇಷ್ಟಪಟ್ಟ ಹೆಣ್ಣು ಸ್ನೇಹಿತನ ಹೆಂಡತಿ ಎಂದು ತಿಳಿದಾಗ ಪಶ್ಚಾತ್ತಾಪಪಟ್ಟು ಆತ್ಮಹತ್ಯೆ ಮಾಡಿಕೊಳ್ಳುವ ಗೆಳೆಯ ಮುಂದೆ ಸ್ನೇಹಿತನ ಹೆಂಡತಿಯ ಆತ್ಮಹತ್ಯೆಗೂ ಕಾರಣವಾಗಿ. ದುರಂತದಲ್ಲಿ ಮುಕ್ತಾಯವಾಗುವ ಈ ಕಥನಗೀತೆಯಲ್ಲಿ ಶಿವನಕೃಪೆಯಿಂದ ಎಲ್ಲರೂ ಬದುಕಿ ಉಳಿಯುತ್ತಾರೆ. ಇದು ಆದರ್ಶ ಸ್ನೇಹಕ್ಕೆ ದೊರೆತಂತಹ ನೈತಿಕ ಮೌಲ್ಯವಾಗಿದೆ. ವೀರಣ್ಣ ದಂಡೆಯವರು ಸೋಮರಾಯ-ಭೀಮರಾಯ ಕಥಾನಕದಲ್ಲಿ ಮೌಲ್ಯಗಳ ಸಂಘರ್ಷ ಲೇಖನದಲ್ಲಿಯ ವಿನ್ಯಾಸವನ್ನು ಹೀಗೆ ಚಿತ್ರಿಸಿದ್ದಾರೆ.

ಕಥೆಯ ರಚನಾ ವಿನ್ಯಾಸ :



ಎ= ಹೆಂಡತಿ
ಬಿ= ಗಂಡ
ಸಿ= ಗೆಳೆಯ

ಡಿ : ಕಥೆಯ ಸಂಘರ್ಷದ ಬಿಂದು : ಎ ಮತ್ತು ಸಿ ಗಳ ಪ್ರಥಮ ಭೇಟಿ

ಎ-ಬಿ : ಇವುಗಳ ನಡುವೆ ವೈಯಕ್ತಿಕ ಸಂಬಂಧವಿದ್ದು (ಗಂಡ-ಹೆಂಡತಿ)

ಇವು ವೈಯಕ್ತಿಕ ಮೌಲ್ಯವನ್ನು ಪ್ರತಿನಿಧಿಸುತ್ತದೆ.

ಬಿ–ಸಿ : ಇವುಗಳ ನಡುವೆ ಸಾಮಾಜಿಕ ಸಂಬಂಧ (ಸ್ನೇಹ) ಇದ್ದು, ಇವು ಸಾಮಾಜಿಕ ಮೌಲ್ಯವನ್ನು ಪ್ರತಿನಿಧಿಸುತ್ತವೆ.

ಎ–ಸಿ: ಪರಸ್ಪರ ಯಾವ ಸಂಬಂಧವೂ ಇಲ್ಲ.ಅಪರಿಚಿತ ದಾರಿಯಲ್ಲೇ ಅನಾಹುತ ವುಂಟಾಗುವುದು. ಗಂಡಸಿನ ವೈಯಕ್ತಿಕ ಸಂಬಂಧ ಮತ್ತು ಆತನ ಸಾಮಾಜಿಕ ಸಂಬಂಧಗಳ ನಡುವೆ ಕಂದರ ಇರುವುದನ್ನು ಇದು ತೋರಿಸುತ್ತದೆ.[೩೧]

ಈ ಒಂದು ವಿನ್ಯಾಸ ವ್ಯಕ್ತಿಗಳ ಸಾಮಾಜಿಕ, ವೈಯಕ್ತಿಕ ಮೌಲ್ಯಗಳ ಹಂದರವನ್ನು ತಿಳಿಸಿಕೊಡುತ್ತದೆ.

'ಗಂಡ–ಹೆಂಡತಿ–ಗೆಳೆಯ ಪಾತ್ರಗಳಲ್ಲಿ ಸಾಮಾಜಿಕ ಮತ್ತು ವೈಯಕ್ತಿಕ ಮೌಲ್ಯ ಆಗಿರುವುದರಿಂದ, ವೈಯಕಿಕ ಮೌಲ್ಯವಾದ ಹೆಂಡತಿ ಕುಗ್ಗಿ, ಸ್ನೇಹವೆಂಬುದು ಗೆದ್ದು ನಿಲ್ಲುತ್ತದೆ. ಸೋಮರಾಯನ ಹೆಂಡತಿಗೆ ಭೀಮರಾಯ ಪೂರ್ವ ಪರಿಚಯವಿಲ್ಲದ ಪರಗಂಡಿನೊಡನೆ ಕೂಡುವುದು ಪಾಪವೇ ಸರಿ. ಇದನ್ನು ಗಂಡನೇ ಏರ್ಪಡಿಸಿರುವುದು ನುಂಗಲಾಗದ ಬಿಸಿತುಪ್ಪ ಆಕೆಗೆ. ಇಲ್ಲಿ ಸೋಮರಾಯ ತನ್ನ ಹೆಂಡತಿಯನ್ನೇ ಗೆಳೆಯನಿಗೆ ಮಾರಿದ ಹಾಗೇ ಸಂಭವಿಸಿದ ಘಟನೆಯನ್ನು ನೋಡಿದರೆ ಹೆಂಡತಿಗೆ ತಕ್ಕ ಗಂಡನಲ್ಲ. ಕ್ರೂರಿ ಎಂದು ಹಲವಾರು ಕೆಟ್ಟತನದ ಮಾತುಗಳು ಬರುತ್ತವೆ. ಆದರೆ ಕಥನಗೀತೆಯ ಕೊನೆಯಲ್ಲಿ ಸಾಮಾಜಿಕ ಮತ್ತು ವೈಯಕ್ತಿಕ ಮೌಲ್ಯಗಳೆರಡು ಅವಶ್ಯಕವಾಗಿವೆ ಎಂಬುದನ್ನು ಪ್ರತಿನಿಧಿಸುತ್ತದೆ. ನೀರು ತರಲು ಹೋದ ಅಪರಿಚಿತ ಹೆಣ್ಣನ್ನು ನೋಡಿ ಸೋಮರಾಯ ಮೋಹಗೊಂಡು ಆ ಹೆಣ್ಣನ್ನು ದೊರಕಿಸಿಕೊಡು ಎಂದು ಸ್ನೇಹಿತನಿಗೆ ವಿನಂತಿಸಿಕೊಳ್ಳುವುದು, ಗೆಳಯನಿಗಾಗಿ ತನ್ನ ಹೆಂಡತಿಯನ್ನು ಒಪ್ಪಿಸಿದ ಪ್ರಸಂಗವು ಆದರ್ಶ ಸ್ನೇಹವನ್ನು ಹೊರ ಹಾಕಿದರೆ; ಸ್ನೇಹಿತನ ಮನೆಯಲ್ಲಿ ಆಕೆಯನ್ನು ಕೂಡಲು ಬಂದ ಸ್ನೇಹಿತ ಮರಣವನ್ನಪ್ಪಿದ್ದು ಪಾಪಪ್ರಜ್ಞೆಗೆ ಕಾರಣವಾಗುತ್ತದೆ. ಅಲ್ಲಿ ಗಂಡ ಹಾಜರಿಲ್ಲದೆ ಇರುವುದು ಕಂಡು ಆ ಹೆಣದ ಮುಂದೆ ಅಪರಾಧಿ ಮನೋಭಾವ ಕಾಡಿ ತಾನೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುವುದು, ಸ್ನೇಹಿತ ಮತ್ತು ಹೆಂಡತಿಯ ಹೆಣಗಳನ್ನು ನೋಡಿ ತನಗೂ ಕೂಡ ಪಾಪಪ್ರಜ್ಞೆ ಕಾಡಿ ಸಾಯಲು ಮುಂದಾದಾಗ ಜನಪದರು ಶಿವನನ್ನು ಸೃಷ್ಟಿಸಿ ಸತ್ತವರನ್ನು ಬದುಕಿಸುತ್ತಾರೆ. ಅಂದರೆ ಅವರ ಮೂಲ ಉದ್ದೇಶ ಮಾನವ ಬದುಕಲು ಅವನಿಗೆ ವೈಯಕ್ತಿಕ ಹಾಗೂ ಸಾಮಾಜಿಕ ಮೌಲ್ಯ

---

೩೧. ಜಾನಪದ ಕರ್ನಾಟಕ: ಸಂ, ೯. ಸಂಚಿಕೆ, ೨ ಜೂನ್–೨೦೦೩, ಸಂ. ಮಂಜುನಾಥ ಬೇವಿನಕಟ್ಟಿ, ಪು.೨

ಎರಡೂ ಅವಶ್ಯಕ. ಆದ್ದರಿಂದ ವೈಯಕಿಕ ಮೌಲ್ಯವಾದ ಹೆಂಡತಿ, ಸಾಮಾಜಿಕ ಮೌಲ್ಯವಾದ ಗೆಳೆಯ ಇಬ್ಬರೂ ಮುಖ್ಯವಾದ್ದರಿಂದ ಸಮಾಜಿಕ ಬದುಕಿನಲ್ಲಿ ಮಾನವ ಎರಡೂ ಮೌಲ್ಯಗಳನ್ನು ಹೇಗೆ ಕಾಪಾಡಿಕೊಂಡು ಹೋಗಬೇಕು ಎಂಬ ಸಾರವನ್ನು ಈ ಕಥನಗೀತೆಗಳಲ್ಲಿ ಕಾಣುತ್ತೇವೆ. ವಾಸ್ತವದಲ್ಲಿ ಹದಗೆಟ್ಟು ಹೋಗುತ್ತಿರುವ ಸಮಾಜಕ್ಕೆ ಮೌಲ್ಯಗಳು ಎಷ್ಟು ಮುಖ್ಯ ಎಂದು ಅರಿತುಕೊಂಡು ಹೋಗುವುದು ವಿಚಾರಾರ್ಹವಾಗಿದೆ.

ಹಾವಿನ ಪದ ಕಥನಗೀತೆಯಲ್ಲಿ ಅಭಿವ್ಯಕ್ತವಾದ ಸಮಾನತಾ ಮನೋಭಾವ :

ಈ ಕಥನಗೀತೆಯಲ್ಲಿ ಸೊಸೆ ಹಾವನ್ನು ಕಂಡು ಭಯಪಟ್ಟ ಕಾರಣ ಅತ್ತೆ ಅದನ್ನು ಹೊಡೆದು ಅಡುಗೆ ಮಾಡಲು ಹೇಳಿ, ಅದನ್ನು ಸೊಸೆಯೇ ಊಟ ಮಾಡುವಂತೆ ಪ್ರೇರೇಪಿಸಿ, ಅವಳ ಸಾವಿಗೆ ಕಾರಣೀಭೂತಳಾಗುತ್ತಾಳೆ. ಆದರೆ ಜನಪದರ ಆಶಯದ ಪ್ರಕಾರ ಪ್ರಾಮಾಣಿಕರನ್ನು, ಮುಗ್ಧರನ್ನು ದೈವಕೃಪೆ ಬದುಕಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

ಸೊಸೆ ಹಿತ್ತಲಲ್ಲಿ ಹಾವನ್ನು ಕಂಡು ಅತ್ತೆಗೆ ಹೇಳುತ್ತಾಳೆ. ಆಗ ಅತ್ತೆ ಕಾಯಿ ಒಡೆಯಲು ಹೇಳಿ ಹಾವು ಸಾಯಿಸುವ ಹಾಗೆ ಸೊಸೆಗೆ ಪ್ರೇರಣೆ ನೀಡಿ ಹಾವು ಸತ್ತಿತು ಎಂದಾಗ, ಅತ್ತೆ ಅದನ್ನು ಎಳೆದುಕೊಂಡು ಬಂದು ಒತ್ತಾಯಪಡಿಸಿ ಅಡುಗೆಯನ್ನು ಮಾಡು ಎನ್ನುತ್ತಾಳೆ. ಸೊಸೆ ಬರುವುದಿಲ್ಲ ಎಂದಾಗ ಅತ್ತೆ ನಾನು ಹೇಳಿಕೊಡುತ್ತೇನೆ ಮಾಡು ಎಂದಾಗ ಅತ್ತೆಯ ಪ್ರೇರಣೆಯ ಮೇರೆಗೆ ಅಂದ-ಚೆಂದದ ಅಡುಗೆಯ ಮಾಡಿ ಸೊಸೆ ಚಿಕ್ಕಹೊನ್ನಿ ಅತ್ತೆಗೆ ಊಟಕ್ಕೆ ಕರೆದರೆ ಮಂಗಳವಾರ ನಾನು ಒಂದೊತ್ತು, ನಿನ್ನ ಮೈದುನನಿಗೆ ಕರೆ ಎಂದು ಹೇಳುತ್ತಾಳೆ. ಅವನು ಚೆಂಡಾಡಲು ಹೋದ ಕಾರಣ ಅವನು ಇಲ್ಲ. ಗಂಡ ದಂಡಿಗೆ ಹೋಗಿರುವನು. ನಾ ಮಾಡಿದ ಅಡುಗೆಯನ್ನು ಯಾರೂ ಊಟ ಮಾಡುತ್ತಿಲ್ಲ. ನಾನು ಮಾಡಿದಂತಹ ಅಡುಗೆಯನ್ನು ನಾನೇ ಊಟ ಮಾಡುತ್ತೇನೆ ಎಂದು ಅವಳ ಗಂಡಿದ್ದ ಅರಮನೆಗೆ ಬಂದು ಒಂದು ಚಿತ್ರಪಟವನ್ನು ಬರೆದಳು (ಅತ್ತೆ ಹಾವಿನಡುಗೆಯನ್ನು ಮಾಡಿಸಿರುವ ಬಗ್ಗೆ). ಬರೆದು ಊಟವನ್ನು ಮಾಡುತ್ತಾಳೆ. ಮಾಡುತ್ತಾ ಸತ್ತು ಬೀಳುತ್ತಾಳೆ. ಮೈದುನ ಮಲ್ಲಿಗೆ ದೊರೆ ಆಟ ಮುಗಿಸಿಕೊಂಡು ಅರಮನೆಗೆ ಬಂದು ಚಿತ್ರಪಟವನ್ನು ಕಂಡು ಬಹಳ ಶೋಕವನ್ನು ವ್ಯಕ್ತಪಡಿಸುತ್ತಾನೆ.

ಮಲ್ಲಿಗೆ ದೊರೆ ತಾಯಿ ಹತ್ತಿರ ಬಂದು ನಮ್ಮಣ್ಣ ದಂಡಿಗೆ ಹೋದ ಸಂದರ್ಭದಲ್ಲಿ ಅತ್ತಿಗೆ ಸತ್ತುಹೋದಳು ಎನ್ನುತ್ತಾ "ನೀನು ಹಾಳಾದಾ ಪಾಪಿ ಮುಂಡೆ"[೩೨] ಎಂದು ತಾಯಿಯನ್ನು ದೂಷಿಸುತ್ತಾನೆ. ಇಲ್ಲಿ ಮೈದುನನಲ್ಲಿರುವ ಉತ್ತಮ ಮನೋಭಾವ ಎದ್ದು ಕಾಣುತ್ತದೆ ಮತ್ತು ಪುರುಷ ಪ್ರಧಾನ ಮೌಲ್ಯ ಮೈದುನನಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ ಅತ್ತಿಗೆಯ ಮೇಲೆ ಇರುವಂತಹ ಅಪಾರವಾದ ವಾತ್ಸಲ್ಯ, ಮಮತೆ, ತಾಯಿಗಿಂತಲೂ ಹೆಚ್ಚು ಕಂಡುಬರುತ್ತದೆ. ಸೊಸೆಯನ್ನು ಸಂಸ್ಕಾರ ಮಾಡುವುದಕ್ಕೆ ಕಾಸು ಕೊಡಲು ಮುಂದಾಗದೇ ಇರುವುದನ್ನು ಇಲ್ಲಿ ಕಾಣುತ್ತೇವೆ. ಮೈದುನ ಕಷ್ಟಪಟ್ಟು ಎಲ್ಲದಕ್ಕೂ ಸಿದ್ಧಮಾಡಿ ಸಮಾಧಿ ಕಟ್ಟಿ ಬಹಳ ಶೋಕವನ್ನು ವ್ಯಕ್ತಪಡಿಸುತ್ತಾನೆ. ಇತ್ತ ರಂಗನಾಥಸ್ವಾಮಿಗೆ ಕೆಟ್ಟ ಸ್ವಪ್ನ ಬೀಳುತ್ತದೆ. ಆಗ ಆಳು-ಕಾಳುಗಳನ್ನು ಕರೆದು ನಾನು ಊರಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಎಂಟು ದಿವಸದ ಪ್ರಯಾಣವನ್ನು ಒಂದೇ ದಿವಸದಲ್ಲಿ ಬಂದು ತಲುಪುತ್ತಾನೆ. ಗಿಣಿಗಳ ಮುಖಾಂತರ ಪ್ರಸಂಗ ತಿಳಿದೊಡನೆ ಶೋಕಪಡುತ್ತಾ ಸಮಾಧಿಯನ್ನು ಬಗೆದು ಹೆಣವನ್ನು ಕಿತ್ತು ಮೇಲಕ್ಕೆ ಎತ್ತಿಕೊಂಡು ತೊಡೆಯ ಮೇಲೆ ಹಾಕಿಕೊಂಡು ಬಹಳ ಶೋಕಪಡುತ್ತಿರುವಾಗ ಈತನ ದುಃಖವನ್ನು ಕಂಡು ಸಹಿಸಲಾಗದೆ ಪಾರ್ವತಿ-ಪರಮೇಶ್ವರರು ಅಲ್ಲಿಗೆ ಬಂದು ಆಕೆಯನ್ನು ಮಂತ್ರದ ಮೂಲಕ ಎಬ್ಬಿಸುತ್ತಾರೆ. ಆಕೆ ಎದ್ದ ತಕ್ಷಣ ರಂಗನಾಥಸ್ವಾಮಿ ಕತ್ತನ್ನು ಹಿಡಿದು ತಬ್ಬಿಕೊಂಡು ದುಃಖಿಸುತ್ತಾ ನಿನ್ನ ಯಾರು ಹೊಡೆದರು, ಯಾರು ಬಡೆದರು ನನಗೆ ಹೇಳು ಎಂದು ಕೇಳುತ್ತಾನೆ. ಆಗ ನಡೆದ ಸಂಗತಿಯು ಅವನಿಗೆ ತಿಳಿಯುತ್ತದೆ. ಹೆಂಡತಿ ಚಿಕ್ಕಹೊನ್ನಿಯನ್ನು ಎತ್ತಿಕೊಂಡು ಕುದುರೆಯ ಮೇಲೆ ಕೂರಿಸಿ ತಾನು ಮುಂದೆ ಕೂತು ಊರಿಗೆ ಬರುತ್ತಾನೆ. ಅವನ ತಾಯಿ ಆರತಿಯನ್ನು ಮಾಡಲು ಬರುತ್ತಾಳೆ. ಆಗ ಬೇಕು ಅಂತಲೇ ನೀ ಯಾಕೆ ಬಂದ್ಯಮ್ಮ ನೀ ತಂದ ಸೊಸೆ ಎಲ್ಲಿದ್ದಾಳೆ ಎಂದು ಕೇಳಿದಾಗ, ಅವಳು ಕವಳುತ್ತ ಮಲಗಿದ್ದಳು, ಹೊಟ್ಟೆನೋವು ಅಂತ ಮಲಗಿದ್ದಳು, ಅದಕ್ಕೆ ಅವರಪ್ಪನ ಊರಿಗೆ ಹೋಗಿ ಎಂಟು ದಿನ ಆಯಿತು ಎಂದು ಹುಸಿಯ ನುಡಿಯುತ್ತಾಳೆ. ಇದನ್ನು ಕೇಳಿ ಮಗ ರಂಗನಾಥಸ್ವಾಮಿಗೆ ಕೋಪ ನೆತ್ತಿಗೇರಿ ಹಲ್ಲುಕಡಿದು ದುರದುರನೆ ಕಣ್ಣಿನಲ್ಲಿ ನುಂಗುವಂತೆ ತಾಯಿಯನ್ನು ನೋಡುತ್ತಾನೆ. ಚಿನ್ನದ ಕತ್ತಿಯನ್ನು ತೆಗೆದು ತಾಯಿಗೆ ಹೊಡೆಯುತ್ತಿರುವಾಗ ಹೆಂಡತಿ ಚಿಕ್ಹೊನ್ನಿ ಕುದುರೆಯಿಂದ ಇಳಿದು ಗಂಡನನ್ನು ತಡೆದು ನಮ್ಮತ್ತೆಯನ್ನು ಹೊಡೆಯಬೇಡಿ. ಹೊಡೆದರೆ ನನ್ನಾಣೆ, ನನ್ನನ್ನೇ ಹೊಡೆಯಿರಿ ಎನ್ನುತ್ತಾ ಅತ್ತೆಯ ಗುಣಗಾನ ಮಾಡುತ್ತಾಳೆ.

---

೩೨. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೬೧

"ಅವ್ರು ಚಿಕ್ಕಂದಿನಲ್ಲಿ ತಂದಾರು
ನನ್ನ ಮೈಕೈಯ ತೊಳೆದಾರು
ನನ್ಗೆ ಸೀರೇಯ ಹಿಂಡೀರು
ನಮ್ಮತ್ತಾಯ ಹೊಡಬೇಡಿ
ನನ್ನಾನೆ ಹೊಡೆಯಾರಿ"[೩೩]

ಇದರಿಂದ ನಮಗೆ ತಿಳಿದುಬರುವ ವಿಷಯವೆಂದರೆ ತನಗೆ ಕೇಡು ಬಗೆದ ಅತ್ತೆಗೆ ತಾ ಕೇಡು ಬಗೆಯದೇ ಆಕೆಯು ಮಾಡಿದ ಉಪಕಾರವನ್ನಷ್ಟೇ ನೆನೆದು ಮಹಾನ್ ವ್ಯಕ್ತಿಯಾಗಿ ಕಂಡುಬರುತ್ತಾಳೆ. ಇದು ಕೂಡ ಒಂದು ಮೌಲ್ಯವಾಗಿ ಪ್ರತಿಪಾದನೆಯಾಗುತ್ತದೆ. ರಂಗನಾಥ-ನಲ್ಲಿ ಯಾರೇ ತಪ್ಪು ಮಾಡಿದರೂ ಅದು ತಪ್ಪೇಯೆಂದು ತಾಯಿಯ ಮಾತಿಗೆ ರೋಷ ಉಕ್ಕಿ ಬಂದು ಶಿಕ್ಷೆಗೆ ಗುರಿಪಡಿಸುತ್ತಿರುವ ಸಂಗತಿಯಿಂದ ಆತನಲ್ಲಿರುವ ಪ್ರಾಮಾಣಿಕತನ ಅರ್ಥವಾಗುತ್ತದೆ.

ಇಪ್ಪತ್ತೈದು ವರ್ಷದ ಹಿಂದೆ ಮಹಿಳೆಯರು ಸರ್ವ ಸಾಮಾನ್ಯ ಪುರುಷನ ಭೋಗದ ವಸ್ತು, ಅಡಿಯಾಳು, ಮಕ್ಕಳನ್ನು ಹೆರುವ ಯಂತ್ರ ಎಂದು ತಿಳಿಯಲಾಗಿತ್ತು. ಈಗಲೂ ಕೂಡ ಕೆಲವೊಂದೆಡೆ ಹಾಗೆ ಇದೆ. ಇದಕ್ಕಿಂತ ಪೂರ್ವದಲ್ಲಿ ಭಾರತದ ಪ್ರಾಚೀನ ನಾಗರಿಕತೆಯನ್ನು ಅವಲೋಕಿಸಿದಾಗ ಸಿಂಧೂ ನಾಗರೀಕತೆಯಲ್ಲಿ ಮಹಿಳೆಯರಿಗೆ ಮುಖ್ಯ ಸ್ಥಾನವನ್ನು ಕೊಟ್ಟಿದ್ದರು ಎನ್ನಲಾಗುತ್ತದೆ. "ಸುಮೇರಿಯನ್, ಊರ್ ಮತ್ತು ಭಾರತದ ಹರಪ್ಪ, ಮೆಹೆಂಜೋದಾರೋ ಭಾಗಗಳಲ್ಲಿ ಸಿಗುವ ಮೂರ್ತಿಗಳು ಹೆಂಗಸಿನ ಉನ್ನತ ಸ್ಥಾನವನ್ನೇ ಹೇಳುತ್ತವೆ. ಇಲ್ಲಿಯ ಸಾಮಾಜಿಕ ವ್ಯವಸ್ಥೆಯ ರೀತಿ ಮಾತೃ ಪ್ರಧಾನವಾಗಿತ್ತೋ ಇಲ್ಲವೋ ಹೇಳಲು ಕಷ್ಟವಾದರೂ ಹೆಣ್ಣಿಗೆ ಸಮಾಜದಲ್ಲಿ ಗೌರವದಿಂದ ನೋಡುವ ವಾತಾವರಣ ಇದ್ದಿರಬೇಕು ಎನ್ನುವ ಅಭಿಪ್ರಾಯವನ್ನು ಅನೇಕ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ."[೩೪] ಈ ಹೇಳಿಕೆಯನ್ನು ಅವಲೋಕಿಸಿದಾಗ ಮಹಿಳೆಯು ಒಂದೊಂದು ಸಾಮಾಜಿಕ ವ್ಯವಸ್ಥೆಯಲ್ಲಿ ಅದಕ್ಕೆ ಹೊಂದಿಕೊಂಡು, ವ್ಯವಸ್ಥೆಗಳನ್ನು ಪಾಲಿಸಿ ಕಾಲಕ್ಕನುಗುಣವಾಗಿ ಜೀವನವನ್ನು ಸಾಗಿಸುತ್ತ ಬಂದಿದ್ದಾಳೆ ಎಂಬುದು ಸ್ಪಷ್ಟವಾಗುತ್ತದೆ. ಇಂದಿಗೂ ಕೂಡಾ ಮಾತೃದೇವೋಭವ, ಜನನಿ ಜನ್ಮಭೂಮಿ ಎಂದು ಹಲವಾರು ಹೇಳಿಕೆಗಳ ಮುಖಾಂತರ ಗೌರವ ಸೂಚಿಸುವುದನ್ನು

---

೩೩. ಜಾನಪದ ಸಾಮಾಜಿಕ ಕಥನಗೀತೆಗಳು : ಶಾಲಿನಿ ರಘುನಾಥ, ಪು.೧೭೬

೩೪. ಮಹಾಸತಿ ಆಚರಣೆ ಒಂದು ಅಧ್ಯಯನ : ಬಸವರಾಜ ಕಲ್ಗುಡಿ, ಪು.೧೧,೧೨

ಕಾಣುತ್ತೇವೆ. ಇವೆಲ್ಲ ಕೇವಲ ಓದಲು-ಬರೆಯಲು ಅಷ್ಟೇ ಸೀಮಿತವಾದ ಹಾಗೇ ಕಾಣಿಸುತ್ತದೆ. ಏಕೆಂದರೆ ಕೆಲವರಷ್ಟೇ ಒಳ್ಳೆಯ ಭಾವನೆ, ಉತ್ತಮ ನಾಗರೀಕತೆ, ನೈತಿಕ ಮೌಲ್ಯಗಳನ್ನು ಇಟ್ಟುಕೊಳ್ಳುವುದಷ್ಟೇ ಇಲ್ಲಿ ಮುಖ್ಯವಾಗುವುದಿಲ್ಲ. ಪ್ರಜ್ಞಾವಂತರೇ ಸಮಾಜದ ಆರೋಗ್ಯವನ್ನು ಹದಗೆಡಿಸಲು ಮುಂದಾಗುತ್ತಿರುವ ಸಮಾಜದಲ್ಲಿ ಪ್ರತಿಯೊಬ್ಬ ಮಾನವನು ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಮುಂದಾಗಬೇಕಾಗಿದೆ.

ಮೌಲ್ಯಗಳನ್ನು ಪರೀಕ್ಷೆಗಾಗಿ ಕಲಿಯುವುದಷ್ಟೇ ಮುಖ್ಯವಲ್ಲ. ಜೀವನದಲ್ಲೂ ಅಳವಡಿಸಿ- ಕೊಳ್ಳಬೇಕು. ಪ್ರತಿಯೊಬ್ಬ ಜೀವಿಯಲ್ಲಿ ಪ್ರಾಮಾಣಿಕತೆ ಕಾಣಬೇಕು. ಇತರರನ್ನು ತಮ್ಮಂತೆ ಕಾಣುವ ಮೌಲ್ಯ ಗುಣವನ್ನು ಹೊಂದಬೇಕು. ವಾಸ್ತವದಲ್ಲಿಯೂ ಕೂಡ ಮಾನವೀಯ ಮೌಲ್ಯಗಳನ್ನು ಹುಡುಕುವ ಪರಿಸ್ಥಿತಿ ಒದಗಿ ಬಂದಿರುವುದನ್ನು ಕಂಡರೆ ಸಮಾಜ ಎಷ್ಟೊಂದು ಮೌಲ್ಯಗಳಿಲ್ಲದೇ ಕುಸಿಯುತ್ತಿದೆ ಎಂಬುದು ಕಂಡು ಬರುತ್ತದೆ. ಆದರೂ ಕೂಡಾ ಮೌಲ್ಯಗಳ ಆಗರವಾದ ನಮ್ಮ ದೇಶದಲ್ಲಿಯ ಸಕಲ ಮೌಲ್ಯಗಳು, ಅವುಗಳ ಆಳಗಳನ್ನು, ಅರ್ಥಗಳನ್ನು ಬಿಡಿ-ಬಿಡಿಯಾಗಿ ತೋರಿಸುವ ಶಕ್ತಿ ಸಾಹಿತ್ಯದಲ್ಲಿದೆ. ಅವೆಲ್ಲವುಗಳ ಸದುಪಯೋಗವಾದರೆ ಸಮಾಜ ಸಮೃದ್ಧಿ- ಯಿಂದೊಡಗೂಡಲು ಸಂಶಯವೇ ಇಲ್ಲ.

ಕುಟುಂಬದ ನಿರ್ವಹಣೆ, ಯಜಮಾನಿಕೆಯನ್ನು ಮಾತೃಪ್ರಧಾನ ವ್ಯವಸ್ಥೆ, ಪಿತೃ ಪ್ರಧಾನ ವ್ಯವಸ್ಥೆಯೆಂದು ಎರಡು ರೀತಿಯಾಗಿ ಕಾಣುತ್ತೇವೆ. ಬಹುಕಾಲದಿಂದಲೂ ಪುರುಷ ಪ್ರಧಾನ ವ್ಯವಸ್ಥೆ ಉಳಿದು ಬೆಳೆದು ಬಂದಿದ್ದರೂ ಕೆಲವೊಂದು ಪ್ರದೇಶಗಳಲ್ಲಿ ಮಾತೃಪ್ರಧಾನ ವ್ಯವಸ್ಥೆಯನ್ನು ಕೂಡ ಕಾಣುತ್ತೇವೆ. ಉದಾ: ಕೇರಳದ ನಾಯರ್ ಜನಾಂಗದವರಲ್ಲಿ ಮಾತೃಪ್ರಧಾನ ವ್ಯವಸ್ಥೆ ಇದೆ. ಅಲ್ಲಿ ಹೆಣ್ಣಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಸ್ವತಂತ್ರಳಾಗಿ ಬದುಕುವ ಅವಕಾಶವನ್ನು ಒದಗಿಸಿದೆ ಅಲ್ಲದೇ ಗಂಡನ ಅಧೀನದಲ್ಲಿರುವ ವಾತಾವರಣ, ಸತಿಪದ್ಧತಿಯಾಗಲೀ, ಬಾಲ್ಯ ವಿವಾಹವಾಗಲೀ ಕಂಡು ಬರುವುದಿಲ್ಲ. ಇದನ್ನು ಹೇಳುವ ಉದ್ದೇಶ ಮಾತೃ ಪ್ರಧಾನ ವ್ಯವಸ್ಥೆ ಇರಬೇಕೆಂಬುದಲ್ಲ. ಇಬ್ಬರನ್ನೂ ಸಮಾನತಾ ದೃಷ್ಟಿಯಿಂದ ನೋಡಬೇಕಾದ ವ್ಯವಸ್ಥೆ ಸಮಾಜಕ್ಕೆ ಬೇಕಾಗಿದೆ. ಇದರ ಹೊರತಾಗಿ ಅನೇಕ ಸಾಮಾಜಿಕ ಸಮಸ್ಯೆಗಳೊಳಗೆ ಮಹಿಳೆ ಇನ್ನೂ ಬೇಯುತ್ತಿದ್ದಾಳೆ. ಅವೆಲ್ಲವನ್ನು ನಿವಾರಿಸುವಂತಹ ಶಕ್ತಿ ಮನುಷ್ಯನಲ್ಲಿದೆ, ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಲ್ಲಿದೆ. ಆದಕಾರಣ ಮೌಲ್ಯಗಳೇ ಜೀವನದ ಕೈಗನ್ನಡಿಯೆಂದು ತಿಳಿದು ಆ ಕನ್ನಡಿಯನ್ನು ಎಂದಿಗೂ ಫಳ ಫಳ ಹೊಳೆಯುವ ಹಾಗೇ ಸ್ವಚ್ಛತೆಯಿಂದ ಕಾಪಾಡಿಕೊಂಡು ಹೋದರೆ ನಮ್ಮ ಸಮಾಜ ಸುಂದರವಾಗಿ

ಕಾಣುತ್ತದೆ. ಆ ಸಮಾಜವೆಂಬ ಕನ್ನಡಿಯಲ್ಲಿ ನಾವೂ ಕೂಡಾ ಸುಂದರವಾಗಿ ಕಾಣುತ್ತೇವೆ. ಆದ್ದರಿಂದ ಸಮಾಜವನ್ನು ಸ್ವಚ್ಛವಾಗಿಡೋಣ ಎಂಬ ಆಶಯ ಈ ಮಹಾಪ್ರಬಂಧದ ಉದ್ದೇಶಗಳಲ್ಲೊಂದಾಗಿದೆ.

ತಂಬೂರಿ ಸಂಪ್ರದಾಯದ ರಾಮಾಯಣದಲ್ಲಿ ಸತ್ಯ, ಧರ್ಮ, ದಯೆ, ಪುಣ್ಯ :

ತಂಬೂರಿ ಸಂಪ್ರದಾಯದ ರಾಮಾಯಣದಲ್ಲಿ ರಾವಣನನ್ನು ಕೊಂದು ಸೀತೆಯನ್ನು ಕರೆತರಲು ಶ್ರೀರಾಮನು ಸೈನ್ಯವನ್ನು ಕರೆದನು. ಆಗ ಸಾವಿರಾರು ಕಪಿಗಳು ಬಂದು ಏನು ರಾಜರೇ ನಿಮಗೆ ಬಂದೊದಗಿದ ಕಷ್ಟ ಎಂಥಹದು ಎಂದು ವಿಚಾರಿಸಿದಾಗ ರಾಮನು ನಮದೊಂದು ಕಳ್ಳತನವಾಗಿದೆ. ಆದಕಾರಣ ಕಳವಾದ ಹೆಣ್ಣನ್ನು(ಸೀತೆಯನ್ನು) ಕರೆತರಬೇಕು. ರಾವಣನ ಪಟ್ಟಣಕ್ಕೆ ನೀವು ಸೇತುವೆಯನ್ನು ಕಟ್ಟಬೇಕು ಎಂದಾಗ, ಹನುಮಂತನು ಶ್ರೀರಾಮನಿಂದ ಆಶೀರ್ವಾದವನ್ನು ಅಪೇಕ್ಷಿಸುತ್ತಾನೆ. ಆಗ ರಾಮನು ಮಾಡಿದ ಆಶೀರ್ವಾದದಲ್ಲಿ ಅವರ 'ಸತ್ಯ' ಎಂಬ ಮೌಲ್ಯ ಹೇಗಿತ್ತು ಎಂಬುದರ ಅರಿವು ಉಂಟಾಗುತ್ತದೆ.

"ಸತ್ಯವುಳ್ಳವರ ಮಕ್ಕಳು ಪುಣ್ಯವುಳ್ಳವರ ಮಕ್ಕಳು
ನಾವಾಗಿದ್ರೆ ನಮ್ಮ ವರದಿಂದ ಸೇತುವೇಳಲಿ
ಅವರ ಮನೆದೇವ್ರು ಕಿರಿಸ್ಣನ ಸತ್ಯವು ನಮಗಿದ್ರೆ
ಮಾಯೇಶ್ವರನ ಸತ್ಯವು ನಮಗೆ ಇದ್ದರೆ
ಸೂರ್ಯಚಂದ್ರನ ದಯ ಒಂದಿದ್ದರೆ
ಧರ್ಮದ ಸೇತುವೆ ಬಂಗಾರವಾಗಿ ಏಳಲಿ
ಸೇತುವೆ ಮೇಲೆ ನಾವು ಹೋಗುತೀವಿ ಶಿವನೆ
ಹಾಗಂದು ಆಸೀರ್ವಾದ ಮಾಡರೆ ರಾಮರು"[೩೫]

ಪೌರಾಣಿಕ ಕಥನಗೀತೆಗಳಲ್ಲೊಂದಾದ ಇದರಲ್ಲಿ ಸತ್ಯ, ಧರ್ಮ, ದಯೆ, ಪುಣ್ಯ ಮುಂತಾದ ಮೌಲ್ಯಗಳು ಮೇಳೈಸಿರುವುದನ್ನು ಕಾಣುತ್ತೇವೆ. ಧರ್ಮ ಮತ್ತು ಸತ್ಯಕ್ಕೆ ಹೆಚ್ಚು ಬೆಲೆ ಕೊಡುತ್ತಿದ್ದರು ಎಂಬುದು ಇನ್ನು ಕೆಲವೊಂದು ಕಥನಗೀತೆಗಳ ಮೂಲ ಸ್ಪಷ್ಟಪಡಿಸಿ-ಕೊಳ್ಳಬಹುದು.

---

೩೫. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧೫೪

ರಾಮನು ಸೀತೆಯನ್ನು ಮದುವೆಯಾಗಿ ಕರೆದುಕೊಂಡು ಬಂದದ್ದನ್ನು ಕಂಡು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದು ಅಂದಿಗೆ ಮೌಲ್ಯವೆಂದು ಪ್ರತಿಪಾದಿತವಾದರೆ; ಇಂದು ಅಪಮೌಲ್ಯವಾಗಿ ಪ್ರತಿಪಾದಿತವಾಗುತ್ತಿದೆ. ಮತ್ತೊಮ್ಮೆ ಸೀತೆಯೊಂದಿಗೆ ವಿಜೃಂಭಣೆಯಿಂದ ಮದುವೆ ಮಾಡಿದ್ದು, ಜಲಕವತಿಯಿಂದ ಸೀತೆಯನ್ನು ಗೆದ್ದು ತಂದಿದ್ದೇವೆಂದು ದಂಡಿಗೆ, ಸಾವಿರಾರು ಜನಕ್ಕೆ ಓಲೆಯನ್ನು ಬರೆಯಿಸಿ ಮದುವೆಗೆ ಸಿದ್ಧತೆಯನ್ನು ಮಾಡಿ ಮದುವೆ ಮಾಡುವರು. ಅಂದು ಜೀವನದ ಒಂದು ಭಾಗ ಪ್ರೀತಿಯೆಂದು ನಂಬಿದ್ದರು ಎಂಬುದು ತಿಳಿಯುತ್ತದೆ. ಬದುಕಿನುದ್ದಕ್ಕೂ ಪ್ರೀತಿ ಮಾಡುವುದೇ ಜೀವನವೆಂದು ಇಂದು ನಂಬಿರುವರು. ಹಾಗಾಗಿಯೇ ಅಂದು ಮೌಲ್ಯವಾದದ್ದು ಇಂದು ಅಪಮೌಲ್ಯವಾಗಿ ನಿರೂಪಿತವಾಗುತ್ತಿದೆ ಎನ್ನಬಹುದು.

ರಾಮನು ಅಗಸನಾಡಿದ ಮಾತುಗಳನ್ನು ಕೇಳಿ ಸೀತೆಗೆ ನಿನ್ನಿಂದ ನಾನು ಕೆಟ್ಟ ಅಪವಾದವನ್ನು ಕಟ್ಟಿಕೊಳ್ಳುವಂತಾಯಿತು.

> "ನಾನು ಬಿಟ್ಟಾವೆ ಹೆಂಡತಿಯ ಕೈಯಾನು ಹಿಡಿಯಾಕೆ
> ನಾನಾವೆ ರಾಮದೇವರು ಅಂತ ತಿಳಿದೀಯ ಅಂದ ಶಿವನೆ"[೩೬]

ಎಂದು ನುಡಿದ ಅಗಸನ ಮಾತನ್ನು ಕೇಳಿ ಸೀತೆಯ ಮೇಲೆ ಅಪವಾದವನ್ನು ಹೊರಿಸಿ ನಂಬಿಕೆಯೆಂಬ ಗೆರೆಯನ್ನು ಮುರಿದು ಹಾಕುತ್ತಾನೆ. ಶ್ರೀರಾಮನು ಧರ್ಮದ ಹಾದಿಯಲ್ಲಿ ನಾನಿಲ್ಲವೆಂಬುದನ್ನು ಅರಿತು ಸೀತೆಯ ಮೇಲೆ ಕಿಡಿಕಾರಿ ಸಮಾಜದ ಜನರ ಮಾತುಗಳಿಗೆ ಕಿವಿಕೊಟ್ಟು ಪತಿಯೇ ಪರದೈವವೆಂದು ಬಾಳುವಂತಹ ಸೀತೆಯನ್ನು ಶೋಷಿಸುತ್ತಾನೆ. ಆಗ ಕಲ್ಲಿನರಮನೆಯಲ್ಲಿ ಲವ-ಕುಶ ಎಂಬ ಮಕ್ಕಳಿಗೆ ಜನ್ಮ ನೀಡಿದಳು. ಬೆಳೆಯುತ್ತಿರುವ ಮಕ್ಕಳಿಗೆ ಬುದ್ಧಿಯನ್ನು ಹೇಳುತ್ತಾಳೆ. ಕೇಳಿ ಮಕ್ಕಳೇ, ನೀವು ಯಾರಿಗೂ ಸಿಟ್ಟಾಗಬೇಡಿ ಎಂದಾಗ ಲವ-ಕುಶರು ನಾವು ತಪಸ್ಸನ್ನು ಕುಳಿತಿರುವ ಜಾಗಬಿಟ್ಟು, ನಮ್ಮ ಕಾಡುಬಿಟ್ಟು ಎಲ್ಲಿಯಾದರೂ ಸಿಕಾರಿ ಮಾಡಬಹುದು. ಅದೇ ನಾವಿದ್ದ ಜಾಗಕ್ಕೆ ಬಂದರೆ ನಾವು ಅವರನ್ನು ಬಿಡುವುದಿಲ್ಲವೆಂದಾಗ ರಾಮ-ಲಕ್ಷ್ಮಣರಿಬ್ಬರೂ ಶಿಕಾರಿಗೆಂದು ಕುದುರೆಯನ್ನು ಏರಿ ಬಂದರು. ನಾವು ನಿಮಗೆ ಶಿಕಾರಿ ಮಾಡಲು ಬಿಡುವುದಿಲ್ಲ ಎಂದು ಹೇಳಿ ಕುದುರೆಯನ್ನು ಕಟ್ಟಿಹಾಕಿ, ನಿಮ್ಮ ಕುದುರೆ ಬೇಕಾದರೆ ಯುದ್ಧ ಮಾಡಿ ಗೆದ್ದುಕೊಂಡು ಹೋಗಿ ಎಂದು ಆಹ್ವಾನಿಸುವರು. ಹಾಗಾಗಿ ರಾಮ-ಲಕ್ಷ್ಮಣ, ಲವ-ಕುಶರೊಂದಿಗೆ ಯುದ್ಧ ಸಂಭವಿಸುತ್ತದೆ. ಲವ-ಕುಶರು ಗೆದ್ದು ರಾಮ-ಲಕ್ಷ್ಮಣರ

---

೩೬. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧೫೪

ಶಿರಸ್ಸನ್ನು ತೆಗೆದುಕೊಂಡು ತಾಯಿ ಹತ್ತಿರ ಹೋಗುವರು. ಶಿರವನ್ನು ಕಂಡ ಸೀತಾದೇವಿಯು ಬಹಳ ದುಃಖವನ್ನು ಪಡುವಳು. ಲವ-ಕುಶರನ್ನು ಕರೆದು ರಾಮ-ಲಕ್ಷ್ಮಣರ ಪರಿಚಯವನ್ನು ಹೇಳಿ ಹೇಗೆ ಮೋಸವಾಯಿತು ನಿಮಗೆಂದು ದುಃಖಿಸುವಳು. ರಾಮನು ಎಷ್ಟೇ ಕಷ್ಟ-ನೋವುಗಳನ್ನು ಕೊಟ್ಟಿದ್ದರೂ ಆಕೆ ರಾಮನ ಬಗೆಗೆ ಆಡುವಂತಹ ಮಾತುಗಳು ಸೀತೆಯ ಆದರ್ಶ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ.

ಮಾಡಿದ ತಪ್ಪಿಗೆ ಲವ-ಕುಶರು ಪಶ್ಚಾತ್ತಾಪಪಟ್ಟು ಕ್ಷಮಿಸುಯೆಂದು ತಾಯಿಯನ್ನು ಕೇಳುವರು. ನೀನು ದುಃಖ ಪಡಬೇಡ ತಾಯಿ ಸತ್ಯವು ನಮಗಿದ್ದರೆ ತಂದೆಗೆ ಜೀವ ತುಂಬಿ ಮೂರ್ತಿ ಮಾಡುತ್ತೇವೆ ಎಂದು ಶಿರವನ್ನು ಅರಣ್ಯದಲ್ಲಿ ಬಿದ್ದ ಜಾಗಕ್ಕೆ ತೆಗೆದುಕೊಂಡು ಹೋಗಿ ಶಿವ-ಪಾರ್ವತಿಯರನ್ನು ನೆನೆದು ಪ್ರಾರ್ಥನೆ ಮಾಡಿ ಜೀವವನ್ನು ಪಡೆಯುವರು. ಆಗ ಸೀತೆ ರಾಮರ ಕಾಲನ್ನು ಹಿಡಿದು ದುಷ್ಟ ಮಕ್ಕಳುಟ್ಟಿ ನಿಮ್ಮನ್ನು ಕೊಂದವು. ನಿಮ್ಮ ಜೀವನವನ್ನು ಮರಳಿ ಪಡೆದಿದ್ದೇನೆ. ನಾವು ಈಗ ಸುಖವಾಗಿ ಬಾಳೋಣ ಪುರುಷರೇ ಎನ್ನುತ್ತಾಳೆ. ಆಗ ರಾಮನು ಸೀತೆಗೆ :

"ನಿನ್ನ ಸತ್ಯವ ಮೆಚ್ಚಿದೆ ನಿನ್ನ ಸತ್ಯಾನ ಹೊಗಳೀದೆ
ಇದರ ಮುಂದೆ ನಾವು ಸತ್ಯ ಮಾರ್ಗದಲ್ಲಿರುವಣ
ಮಕ್ಕಳ ಕರಕಂದು ಸೀತೆಯ ಕರಕಂದು
ರಾಮ-ಲಕ್ಷಮನರು ಐದುವೆ ಮಂದಿ ಶಿವನೆ"[೩೭]

ಐದು ಮಂದಿ ಅಯೋಧ್ಯ ಪಟ್ಟಣಕ್ಕೆ ಬಂದು ಸುಖವಾಗಿ ಬಾಳನ್ನು ಸಾಗಿಸುತ್ತಾರೆ. ದುಃಖದಿಂದ ಮುಕ್ತಾಯವಾಗುವಂತಹ ಕಥೆಯನ್ನು ಜನಪದರು ಸುಖಾಂತವಾಗಿ ಮಾರ್ಪಡಿಸಿದ್ದಾರೆ. ಸತ್ಯ-ಧರ್ಮದ ಮೌಲ್ಯವನ್ನು ಎತ್ತಿ ಹಿಡಿದು ಸಮಾಜಕ್ಕೆ ಅದರ ಮಹತ್ವವನ್ನು ಸಾರಿದ್ದಾರೆ.

ರಾಮರ ಅಪ್ಪಣೆಯಂತೆ ಆಂಜನೇಯ ಹಾಗೂ ಆತನ ಸೈನ್ಯವು ಕಣ್ಣಿಗೆ ಮಣ್ಣೆರಚಿ (ಹೊಂಚಿನಿಂದ) ನಿನ್ನ ಮಡದಿಯಾದ ಚೆಂದುಳ್ಳಿ ಚೆಲುವೆಯನ್ನು ನೋಡಬೇಕೆಂದು ಬಂದಿದ್ದೇವೆ ಎಂದು ಹೇಳುವರು. ರಾವಣನು ಬಾಗಿಲು ತೆಗೆದಾಗ ಸೀತೆಯನ್ನು ಕಂಡ ಕಪಿಗಳು ಆಕೆಯ ಸೆರಗನ್ನು ಮಾತೃ ವಾತ್ಸಲ್ಯದಿಂದ ಹಿಡಿದವು. ಆದರೆ ರಾವಣನಿಗೆ ಕೋಪ ಬಂದು, ಕಪಿಗಳನ್ನು ಸಂಹಾರ ಮಾಡಲು ಮುಂದಾಗುವನು. ಆಗಲೂ ಕೂಡ ಕಪಿಗಳು

---

೩೭. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧೭೯

ಸೀತೆಯ ಸೆರಗನ್ನು ಬಿಟ್ಟಿರಲಿಲ್ಲ. ಕೊನೆಗೆ ರಾವಣ ಆಂಜನೇಯನ ಬಾಲಕ್ಕೆ ಬೆಂಕಿಯನ್ನು ಹಚ್ಚುವನು. ಆದರೆ ಆಂಜನೇಯನ ಬಾಲ ಬೆಳೆಯುತ್ತಾ ಹೋಯಿತು. ನಿನ್ನ ಮಾತನ್ನು ಕೇಳಿ ಕೆಟ್ಟೇನಲ್ಲ ಎನ್ನುತ್ತಾ ರಾವಣ ಆಂಜನೇಯನ ಬಾಲಾ ಬೀಸುವಂತಹ ರಭಸಕ್ಕೆ ಇಡೀ ಪಟ್ಟಣವೆಲ್ಲಾ ಉರಿಯುತ್ತದೆ. ಆಗ ಚಿನ್ನದ ಕೊಡದಲ್ಲಿ ರಾವಣ ನೀರು ಹಾಕಲು ಹೋದಾಗ ರಾಮನು ವೇಷ ಹಾಕಿಕೊಂಡು ರಾವಣನನ್ನು ಕೊಂದು ಸೀತೆಯನ್ನು ಕರೆತಂದರು. ಆಗ ಅವರಿಬ್ಬರ ತಾಯಂದಿರಾದ ಕೌಸಲ್ಯ, ಸುಮಿತ್ರೆ ರಾಮ-ಲಕ್ಷ್ಮಣರನ್ನು ಹೀಗೆ ಹೊಗಳಿ ಮುದ್ದಾಡಿದರು.

"ನಾನೇಳೀದ ಮಾತಿಗೆ ಅವರು ತಪ್ಪನಿಲ್ಲ ಶಿವನೆ
ನಾನೇಳೀದ ಮಾತಿಗೆ ತಪ್ಪನಿಲ್ಲ ರಾಮಲಕ್ಚಮನರು
ನನ್ನ ಮಾತಿನ ವಾಕ್ಯದಂತೆ ನಡೆದಾರೆ ಸತ್ಯಪುರುಷರು"[೩೮]

ಎಂದು ಹತ್ತಿರ ಕರೆದು ಮುದ್ದಾಡುತ್ತ ಎಂದೆಂದಿಗೂ ನೀನು ಸತ್ಯದಲ್ಲಿ ಬಾಳು ಸತ್ಯಪುರುಷ, ನೀನು ಸತ್ಯ ಮಾರ್ಗದಲ್ಲಿ ಪಟ್ಟಕಟ್ಟಿಕೊಂಡು ತಂದೆ ಹೇಳಿದ ಮಾತು ಮೀರದೆ ರಾಜ್ಯವನಾಳು ಎಂದು ಆಶೀರ್ವದಿಸಿದರು. ಸತ್ಯವಂತನಾದ ರಾಮನು ಮುಂದೆ ಅಗಸನ ಮಾತನ್ನು ಕೇಳಿ ಸೀತೆಯನ್ನು ಕಾಡಿಗೆ ಬಿಟ್ಟು ಬರಲು ಹೇಳಿದ ಸನ್ನಿವೇಶ ತುಂಬಾ ಕರುಣಾಜನಕವಾದದ್ದು. ರಾಮನು ವೈಯಕ್ತಿಕ ಹಾಗೂ ಸಾಮಾಜಿಕ ಮೌಲ್ಯಗಳೆರಡರ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕು ಸಾಮಾಜಿಕ ಮೌಲ್ಯಕ್ಕೆ ಹೆಚ್ಚು ಒತ್ತು ಕೊಟ್ಟು ಸೀತೆಯನ್ನು ಕಷ್ಟದ ಕೋಟೆಗೆ ದೂಡುತ್ತಾನೆ.

ಪಾಂಡವರ ಮೇಲಿನ ಪದದಲ್ಲಿ ಮೌಲ್ಯ ಪ್ರತಿಪಾದನೆ :

ಪಾಂಡವರು ಸತ್ಯವಂತರು ಎಂಬುದನ್ನು ಜನಪದರು ಈ ಕಥನಗೀತೆಯ ಕೊನೆಯ ಭಾಗದಲ್ಲಿ ನಿರೂಪಿಸುತ್ತಾರೆ.

"ಅಪ್ಪ ನಿನ್ನ ಹಾಡೇವು ಅಪ್ಪ ನಿನ್ನ ಪಾಡೇವು
ಅಪ್ಪಾ ನಿಮ್ಮ ನಿದ್ರೆ ಅಳಾದೇವು ಧರುಮಣ್ಣ
ಪಟ್ಟೆಮಂಚದ ದೊರೆಯೇ ಪ್ರವಾಡೀಸೊ
ಸಾಮಿ ನಿಮ್ಮ ಪಾಡೇವು ದೇವಾ ನಿನ್ನ ಹಾಡೇವು
ಸಾಮಿ ನಿಮ್ಮs ನಿದ್ರೆ ಅಳಾದೇವು-ಅರಿಜಿಣರಾಯ

೩೮. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೧೬೧

ತೂಗಾ ಮಂಚುದ ದೊರಿಯೇ ಪ್ರವಾಡೀಸೊ
ಆಟಾ ಆಟಾದೋಳೆ ತೋಪೀನೊಳಗಿರುವೋಳೆ
ಎಷ್ಟುs ಹೊತ್ತೇನೆ ನಿನ್ನ ನೆನಿವೋದು – ಕುಂತ್ಯಮ್ಮ
ಮಾತೀನ ಅರಿಗಿಣಿಯೇ ಮನಾದಿರುವು
ಹಿಟ್ಟುಗೆರಿಸಿ ಅಗಲ ಹುಟ್ಟೀದ ಸೂರೀದ
ಹುಟ್ಟಿದೇಳಾ ದಿನುಕೆ ರಥುವೇರಿದ"[೩೯]

ಎಂದು ಪಾಂಡವರನ್ನು ತೂಗು ಮಂಚದಲ್ಲಿ ಪವಡಿಸಿಯೆಂದು ಕೊಂಡಾಡಿ ಜನಪದರು ಪಾಂಡವರೆಂದರೆ ದೇವರ ಸಮಾನರೆಂದು ತಿಳಿದಿದ್ದರು ಎಂಬುದು ತಿಳಿದುಬರುತ್ತದೆ. ದೇವರು ಎಂಬುದು ಮೌಲ್ಯದ ಕಿರೀಟ ಎಂದರೆ ತಪ್ಪಾಗಲಾರದು. ಅಂತಹ ಉಚ್ಚ ಸ್ಥಾನವನ್ನು ಅವರಿಗೆ ನೀಡಲಾಗಿತ್ತು.

"ಸುತ್ತೇಳು ಲೋಕಾವ ಸಂರಕ್ಷಣೆ ಮಾಡುವ
ಸತ್ತೇವಂತರು ಕಾಣೆ ಪಂಚು ಪಾಂಡೋರು"[೪೦]

ಎಂದು ಹೇಳುವಲ್ಲಿ ಪಾಂಡವರು 'ಸತ್ಯವಂತರು' ಎಂಬ ಮೌಲ್ಯ ಪ್ರತಿಪಾದನೆ ಇಲ್ಲಿ ವ್ಯಕ್ತವಾಗಿದೆ.

ಸಹೋದರರು ಹೇಗಿರಬೇಕು ಎಂಬುದನ್ನು ಧರ್ಮರಾಜ, ಭೀಮಸೇನ, ಅರ್ಜುನ, ನಕುಲ, ಸಹದೇವರ ಸಹೋದರತ್ವವನ್ನು ಈ ಐದು ಮಂದಿ ಪಾಂಡವರ ಆದರ್ಶ ಮತ್ತು ಕಷ್ಟದ ಪರಿಸ್ಥಿತಿ ಎದುರಾದರೂ, ಸಂತೋಷದ ವೈಭವ, ಅನ್ಯೋನ್ಯತೆ ಜಗತ್ತಿಗೆ ಮಾದರಿಯಾಗಿದೆ. ಹುಟ್ಟುತ್ತ ಅಣ್ಣ–ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು ಎಂಬ ಮಾತಿಗೆ ವಿರೋಧವಾಗಿತ್ತು. ಇವರ ಜೀವನ ಒಗ್ಗಟ್ಟಿನಿಂದ ಇದ್ದರೆ ಕುಟುಂಬ ಸದಾ ಆನಂದಮಯವಾಗಿಯೇ ಇರುತ್ತದೆ ಎಂಬುದನ್ನು ತಿಳಿದು ಕೊಳ್ಳಬಹುದು.

ಸಮಾಜದಲ್ಲಿ ಮೌಲ್ಯಗಳು ಪಸರಿಸಲು ಕುಟುಂಬ ಮಹತ್ವದ ಪಾತ್ರ ವಹಿಸುತ್ತದೆ. ಆದಕಾರಣ ಕೌಟುಂಬಿಕ ವಲಯದಲ್ಲಿ ಮೌಲ್ಯಗಳು ಸ್ಥಾಪಿತವಾದರೆ, ಇಡೀ ಕುಟುಂಬವೇ ಆದರ್ಶ, ಮೌಲ್ಯಯುತ ಕುಟುಂಬವಾಗುತ್ತದೆ. ಮತ್ತೊಂದು ಕುಟುಂಬ ಹಾಗೂ ಸಮಾಜಕ್ಕೆ ಮಾದರಿಯಾಗಿ ನಿಲ್ಲುತ್ತದೆ. ಕುಟುಂಬದಲ್ಲಿಯೇ ಮೌಲ್ಯಗಳು ಕುಸಿದರೆ ಇಡೀ ಸಮಾಜಕ್ಕೆ

---

೩೯. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೨೦೮,೨೦೯
೪೦. ಅದೇ, ಪು.೨೦೯

ಮಾರಕವಾದ ಕುಟುಂಬವಾಗಿ ಮಾರ್ಪಡುತ್ತದೆ. ಆದ್ದರಿಂದ ಮೌಲ್ಯಗಳು ಕೆಲವೊಂದು ಸಾರಿ ತನ್ನ ಮಹತ್ವವನ್ನು ಕಳೆದುಕೊಂಡು ಬಿಡುತ್ತವೆ. ಹೀಗಾಗದಂತೆ ಕಾಪಾಡಿಕೊಂಡು ಹೋಗುವುದು ಮಾನವನ ಆದ್ಯ ಕರ್ತವ್ಯವಾಗಿದೆ.

ಮಾನವ ಕುಲದ ಮಾನಸಿಕ ಸ್ಥಿತಿಗೆ ಸತ್ಯಂ ಶಿವಂ ಸುಂದರಂ ಇದು ದೊರೆಯಬೇಕಾದರೆ ಜ್ಞಾನ ಅವಶ್ಯಕ. ಜ್ಞಾನದಿಂದ ಶಾಂತಿ, ಶಾಂತಿಯಿಂದ ಸುಂದರವಾದ ಬದುಕು ಸಾಧ್ಯ. ಆದರೆ ಸತ್ಯ ಎನ್ನುವುದು ಇಂದು ಮರೆಮಾಚಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಸತ್ಯ ಎಂದಿಗೂ ಬದಲಾಗೊಲ್ಲ. ಅದನ್ನು ಬದಲಾವಣೆಗೆ ತರುವವರು ಮಾನವರು. ಸತ್ಯವನ್ನು ಸಾಬೀತುಪಡಿಸುವ ನ್ಯಾಯಾಲಯಗಳೇ ಇಂದು ಸುಳ್ಳಿನ ಕೇಂದ್ರ-ಳಾಗಿರುವಾಗ ಇನ್ನು ಜನಸಾಮಾನ್ಯರ ಸ್ಥಿತಿಯನ್ನು ಲೆಕ್ಕಿಸಲು ಅಸಾಧ್ಯ. ಆದರೂ ಸತ್ಯವನ್ನು ಉಳಿಸಲು ಪ್ರಯತ್ನಿಸುವುದು ಸಮಾಧಾನದ ಸಂಗತಿ. ಇದನ್ನು ಕರ್ನಾಟಕದ ಸಾಂಸ್ಕೃತಿಕ ಮೌಲ್ಯವೆಂದು ತಿಳಿದು ಉಳಿಸಲು ಹವಣಿಸುತ್ತಿರುವುದು ಎನ್ನಬಹುದು. ನ್ಯಾಯಯುತವಾಗಿ ಬಾಳಬೇಕೆಂದರೆ ಸಮಾಜ ಬಿಡುವುದಿಲ್ಲ. ಅಂತಹವರನ್ನು ಮೊದಲು ಈ ಲೋಕದಿಂದ ದೂರ ಮಾಡುತ್ತಾರೆ. ಹೀಗಾದರೆ ನ್ಯಾಯ ಮೌಲ್ಯದಿಂದ ಕುಸಿಯುತ್ತದೆ.

ಅರ್ಜುನನಲ್ಲಿರುವ ಸತ್ಯ ಪ್ರತಿಪಾದನೆ :

ಅರ್ಜುನನು ಕೊಟ್ಟ ಭಾಷೆಗೆ ಎಷ್ಟು ಮಹತ್ವವನ್ನು ಕೊಡುತ್ತಿದ್ದನು ಎಂಬುದು ಅವನ ಮಾತುಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು :

"ಆಡಿದ ಮಾತು ಏನೇ-ಪೂರ್ವದ ಒಳಗೆ
ಕೊಟ್ಟಂಥ ಭಾಷೆಯೇನೇ

ಕೊಟ್ಟ ಭಾಷೆಗೆ ನಾವು

ತಪ್ಪಿ ನಡೆದರೆ ನನ್ ಮಡದಿ

ರಣದಲ್ಲಿ ಕತ್ತಿ ಕೈ ನಡೆವುದಿಲ್ಲ

ಸತ್ಯದ ಪಿಂಡ ಕಾಣೆ ನಮ ಪಿಂಡ

ಪಾಪದ ಪಿಂಡ ಕಾಣೇ

ಕೊಟ್ಟ ಭಾಷೆ ತಪ್ಪಿ ನಾವು ನಡೆದರೆ

ರಣದಲ್ಲಿ ಕತ್ತಿ ಕೈ ನಡವುದಿಲ್ಲಾ

ಹೆಣ್ಣೆ ನಾನು ಹೋದರೆ ಏನು

ನನಗಿಂತ ಇನ್ನೂ ನಾಲ್ವರು ಅವರೇ

ನಾನು ಬರುವತನಕ

ನಾಲ್ವರು ಪತಿಗಳ ನೀ ಕೂಡಿ

ಸುಖದಿಂದ ಬಾಳೆ ರಮಣಶ್ರೀ”[೪೧]

ಅರ್ಜುನನು ದ್ರೌಪದಿಯೊಂದಿಗೆ ದಾಯ(ಪಗಡೆಯಾಟ)ದಲ್ಲಿ ಸೋತು ದೇಶ ಬಿಟ್ಟು ಹೋಗುವ ಸಂದರ್ಭದಲ್ಲಿ ಈ ಮಾತುಗಳನ್ನಾಡುವನು. ಮಡದಿ ದ್ರೌಪದಿಯು ಚೇಷ್ಟೆಗಾಗಿ ನಾನು ಆಟವಾಡಿದೆ ನನ್ನನ್ನು ಬಿಟ್ಟು ಹೋಗದಿರಿಯೆಂದು ಅರ್ಜುನನಲ್ಲಿ ಕೇಳುತ್ತಿರುವಾಗ, ಅರ್ಜುನ ತನ್ನತನದ ಬಗೆಗೆ ಹೇಳುವನು. ಕೊಟ್ಟ ಭಾಷೆಗೆ ತಪ್ಪಿ ನಡೆದರೆ ನನ್ನ ಕತ್ತಿ ಕೈ ರಣ(ಯುದ್ಧ)ದಲ್ಲಿ ನಡೆಯುವುದಿಲ್ಲ. ನಮ್ಮದು ಸತ್ಯದ ಪಿಂಡ, ತಪ್ಪಿ ನಡೆದರೆ ಪಾಪದ ಪಿಂಡವಾಗುತ್ತದೆ. ಅದಕ್ಕಾಗಿ ನಾನು ಹೋದರೇನಂತೆ ಇನ್ನೂ ನಾಲ್ಕು ಜನ ಪತಿಗಳಿರುವರು ನಿನಗೆ, ನಾನು ಬರುವವರೆಗೆ ಸುಖದಿಂದ ಬಾಳು ಎಂದು ಸಂತೈಸುವನು. ದ್ರೌಪದಿಗೆ ಏನು ಮಾಡಬೇಕೆಂದು ತೋಚದೇ ಯಾರಿದ್ದರೇನು ನೀವು ಇದ್ದಂತೆಯಾಗುವುದಿಲ್ಲ. ಅದಕ್ಕಾಗಿ ನಾನು ರಾಣಿವಾಸವನ್ನು ತ್ಯಜಿಸಿ ಜಾಣ ಜೋಗತಿಯಾಗಿ ನಿಮ್ಮೊಂದಿಗೆ ಬರುವೆನು ಎನ್ನುವಳು. ಆಗ ಅರ್ಜುನನು ಧೀರ-ಶೂರನ ಮಡದಿಯಾದ ನೀನು ಜೋಗಿತಿಯಾದರೆ ಪಾಂಡುರಾಜ್ಯದ ಮೇಲೆ ಅಪಕೀರ್ತಿವುಂಟಾಗುತ್ತದೆ ಎಂದು ಹೇಳಿ, ಹೇಳಿದ ಮಾತಿಗೆ ಮೌನದಿಂದ ಇದ್ದರೆ ನಿನ್ನಂತಹ ಬುದ್ಧಿವಂತಿಕೆಯೇ ಇಲ್ಲ ಎಂದು ಮಡದಿ ದ್ರೌಪದಿಯ ಮುಖವನ್ನು ನೋಡಿ ನಾಗಬೆತ್ತವನ್ನು ಎಳೆದುಕೊಂಡು ಏಳು ಬಾಗಿಲನ್ನು ದಾಟಿ ರಾಜಬೀದಿಗೆ ಇಳಿದನು. ಆದರೆ ಮಡದಿ ದ್ರೌಪದಿ ಗಂಡ ಪಾರ್ಥನನ್ನು ನೆನೆದು ದುಃಖಿಸುತ್ತ ಮೌನದಿಂದಿರುತ್ತಿದ್ದಳು.

ಇಲ್ಲಿ ಕೊಟ್ಟ ಮಾತಿಗೆ ಎಷ್ಟೊಂದು ಬೆಲೆಯಿತ್ತು, ಒಂದು ಮಾತನ್ನಾಡಬೇಕಾದರೆ ಜಾಗರೂಕತೆಯಿಂದ ಮಾತನಾಡಬೇಕೆಂಬ ಪ್ರಜ್ಞೆ ತಿಳಿದುಬರುತ್ತದೆ. ಮಾತಿನ ಮಾಲಿನ್ಯವನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಜೊತೆಗೆ ಕೌಟುಂಬಿಕ ಪರಿಸರದಲ್ಲಿ ಮಕ್ಕಳಿಗೆ ಎಂತಹ ಮೌಲ್ಯಗಳ ಬುನಾದಿಯನ್ನು ಹಾಕುತ್ತೇವೆಯೋ ಅವು ರಕ್ತಗತವಾಗಿ ಬೆಳೆಯುತ್ತಾ ಹೋಗುತ್ತವೆ ಎಂದು ಸಹ ತಿಳಿದುಬರುತ್ತದೆ.

೪೧. ಪೌರಾಣಿಕ ಕಥನಗೀತೆಗಳು : ಅಂಬಳಿಕೆ ಹಿರಿಯಣ್ಣ, ಪು.೩೮೬

ಇವೆಲ್ಲವುಗಳ ಅವಲೋಕನದ ಹಿನ್ನೆಲೆಯಲ್ಲಿ ಮಾನವರು ಸಮಾಜದಲ್ಲಿ ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಶಾಂತಿ, ಕರುಣೆ, ಕ್ಷಮೆ, ಸಾಮರಸ್ಯ, ನೈತಿಕತೆ, ಪ್ರಾಮಾಣಿಕತೆ, ಶ್ರಮದಂತಹ ಮುಂತಾದ ಮೌಲ್ಯಗಳು ಅವಶ್ಯಕವಾಗಿವೆ. ಜನಪದ ಕಥನಗೀತೆಗಳಲ್ಲಿ ಇನ್ನೂ ಹಲವಾರು ಮೌಲ್ಯಗಳ ಪ್ರತಿಪಾದನೆಗಳು ಕಂಡುಬರುತ್ತವೆ. ಆದರೆ ಇಲ್ಲಿ ಕೆಲವೊಂದನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವುಗಳಲ್ಲಿ ಕಂಡು ಬರುವಂತಹ ಸಮಕಾಲೀನ ಸಂದರ್ಭಕ್ಕೆ ಸ್ಥಾಪಿತವಾಗಬಹುದಾದ ಮೌಲ್ಯಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಸಮಾಜ ಜಾಗೃತ ವಾಗಿದೆ. ಆದ್ದರಿಂದ ಕರ್ತವ್ಯಗಳ ಅರಿವು ಹೆಚ್ಚುತ್ತಿದೆ. ವಿಷಯದ ಆಳಕ್ಕೆ ಇಳಿದು ಸತ್ಯ ತಿಳಿಯುವ ಜ್ಞಾನ ನಮ್ಮಲ್ಲಿ ಮೂಡಿದೆ. ಒಂದು ಸ್ವಸ್ಥ ಸಮಾಜ ಕಟ್ಟಲು ಬೇಕಾದ ಎಲ್ಲ ಜ್ಞಾನವು ಇತ್ತೀಚೆಗೆ ಹೆಚ್ಚುತ್ತಿದೆ. ಆದರೆ ಮಾನವನು ಆಧುನಿಕ ಜೀವನ ಶೈಲಿಯ ಜೊತೆಗೆ ಮಾನವೀಯತೆಯೊಂದಿಗೆ ಮೌಲ್ಯಗಳಿಗೆ ಬೆಲೆ ಕೊಟ್ಟು ತನ್ನಲ್ಲಿ ಅಡಗಿಸಿಕೊಳ್ಳುತ್ತಾ ಹೋದರೆ ಸದೃಢ ಸಮಾಜ ನಿರ್ಮಾಣವಾಗುತ್ತದೆ.

ಅಧ್ಯಾಯ–೭

ಸಮಾರೋಪ

ಅಧ್ಯಾಯ - ೭

ಸಮಾರೋಪ

ಕನ್ನಡ ಜನಪದ ಸಾಹಿತ್ಯದಲ್ಲಿ ಕಥನಗೀತೆಗಳು ವಿಭಿನ್ನ ರೀತಿಯ ವಸ್ತು, ವಿಷಯಗಳನ್ನು ಒಳಗೊಂಡು ತನ್ನದೇಯಾದಂತಹ ವೈಶಿಷ್ಟ್ಯತೆಯನ್ನು ಹೊಂದಿವೆ. ಒಂದೊಂದು ಕಥನಗೀತೆಗಳು ಒಂದೊಂದು ಜೀವನದ ಘಟನೆಗಳನ್ನು ನೆನಪಿಸುತ್ತವೆ. ಕಥನಗೀತೆಗಳ ವ್ಯಾಪ್ತಿ ಬಹಳ ವಿಶಾಲವಾಗಿರುವ ಕಾರಣ ಅಧ್ಯಯನದ ದೃಷ್ಟಿಯಿಂದ ೫೩ ಕಥನಗೀತೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವುಗಳಲ್ಲಿ ಕಂಡುಬರುವ ಮಹಿಳಾ ವಿನ್ಯಾಸವನ್ನು ವಿಶ್ಲೇಷಿಸಲಾಗಿದೆ.

ಸಂಶೋಧನೆಯ ಕೊನೆಯದಾದ ಈ ಅಧ್ಯಾಯದಲ್ಲಿ ಹಿಂದಿನ ಪ್ರತಿ ಅಧ್ಯಾಯದ ಅಧ್ಯಯನದ ಗ್ರಹಿಕೆ ಹಾಗೂ ಕಂಡುಕೊಂಡ ವಿಚಾರದ ಆಧಾರದ ಮೇಲೆ ಅದರ ತಾತ್ವಿಕತೆಯನ್ನು ಗುರುತಿಸಲಾಗಿದೆ. ಜನಪದ ಸಂಗತಿಗಳ ಅಧ್ಯಯನವೆಂದರೆ ಮುಚ್ಚಿ ಹಾಕಲಾದ ಇತಿಹಾಸದ ಗರ್ಭದ ಕತ್ತಲಲ್ಲಿರುವ ಜಗತ್ತನ್ನು ಹೊರತೆಗೆದು ಬೆಳಕಿನತ್ತ ಕೊಂಡೊಯ್ಯುವುದು. ಈ ನೆಲೆಯಲ್ಲಿ ಸಾಂಸ್ಕೃತಿಕ ಅನನ್ಯತೆಯ ಸಂಕೇತವಾಗಿ ಜನಪದ ಕಾವ್ಯ ಪ್ರಕಾರಗಳಲ್ಲೊಂದಾದ ಕಥನಗೀತೆಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಮಹಿಳಾ ಸಬಲೀಕರಣ, ಸಶಕ್ತೀಕರಣ, ಶೋಷಣೆ, ಆಚರಣೆ, ಮೌಲ್ಯಗಳನ್ನು ವಿವಿಧ ವಿನ್ಯಾಸಗಳಲ್ಲಿ ಸಾಹಿತ್ಯದ ಮುಖೇನ ಕಾಣುತ್ತೇವೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕಥನಗೀತೆಗಳ ಮೂಲಕ ಮಹಿಳೆ ಕೌಟುಂಬಿಕ, ಸಾರ್ವಜನಿಕ, ಆಚರಣಾತ್ಮಕ ನೆಲೆಯಲ್ಲಿ ವಿನ್ಯಾಸಗೊಂಡು, ಶೋಷಣೆಗೊಳಪಟ್ಟು ಮೌಢ್ಯಕ್ಕೊಳಗಾದ ಬಗೆ ವಿಭಿನ್ನವಾಗಿ ಕಂಡು ಬರುತ್ತವೆ. ಆಶಯ ಒಂದೇಯಾದರೂ ಕಥನಗೀತೆಗಳಲ್ಲಿ ಕಂಡುಬಂದ ಮಹಿಳೆಯನ್ನು ವಿಭಿನ್ನ ರೀತಿಯಲ್ಲಿ ಪ್ರಸ್ತುತ ಸಂಶೋಧನೆಯಲ್ಲಿ ಗುರುತಿಸಲಾಗಿದೆ.

ಮಹಿಳೆ ಅಸ್ಪೃಶ್ಯಳಾಗಿ ಬದುಕುತ್ತಿರುವ ಕಾಲದಲ್ಲಿ ಇಂದಿಗೂ ಹಲವಾರು ಸಂಶೋಧನೆಗಳು ಆಕೆಯ ಸಬಲೀಕರಣಗೊಳಿಸುವಲ್ಲಿ ತಮ್ಮದೇಯಾದ ಪಾತ್ರವನ್ನು ನಿರ್ವಹಿಸುತ್ತವೆ. ಅಂತಹ ಒಂದು ಪ್ರಯತ್ನವನ್ನು ಪ್ರಸ್ತುತ ಸಂಶೋಧನೆಯಲ್ಲಿ ಮಾಡಲಾಗಿದೆ. ಜನಪದ ಕಥನಗೀತೆಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಕೈಗೊಂಡ ನಂತರ ಹಲವಾರು ಫಲಿತಗಳು ದೊರಕಿವೆ. ಅವುಗಳು ಈ ಕೆಳಗಿನಂತಿವೆ:

ಅಧ್ಯಯನದ ಫಲಿತಗಳು :

ಕಥನಗೀತೆಗಳಲ್ಲಿ ಮಹಿಳೆ ಮಹಾಸತಿಯಾಗಿ, ಪತಿವ್ರತೆಯಾಗಿ, ವೀರವನಿತೆಯಾಗಿ, ಬಂಜೆಯಾಗಿ, ದೇವತೆಯಾಗಿ ಹೀಗೆ ಹಲವಾರು ಮುಖಗಳಲ್ಲಿ ಕಂಡುಬಂದು ಪುರುಷ ಪ್ರಧಾನ ಸಮಾಜದಲ್ಲಿ ನೆಲೆ ನಿಂತವಳು. ಪರಂಪರೆಯಿಂದ ಬಂದ ತನ್ನ ಜನಾಂಗದ, ಮನೆತನದ, ಸಮಾಜದ ರೀತಿ-ನೀತಿ ಸಂಪ್ರದಾಯ ಆಚರಣೆಗಳು ಆಕೆಯ ಮೇಲೆ ಪ್ರಭಾವ ಬೀರಿ ಅದರ ಅಡಿಯಲ್ಲಿ ನಡೆದುಕೊಂಡು ಬಂದು ಸಮಾಜಕ್ಕಾಗಿ ತನ್ನ ಬದುಕನ್ನು ಮುಡುಪಾಗಿಟ್ಟು ಬಲಿಗೆ ಸಿಲುಕಿ ಅಧಿದೇವತೆಯಾಗಿದ್ದಾಳೆ.

ಪಾರಂಪರಿಕ ಇತಿಹಾಸದಿಂದಲೂ ಮಹಿಳಾ ಲೋಕದ ನೆಲೆಗಳನ್ನು ಕಂಡಾಗ ಒಂದಿಲ್ಲೊಂದು ಸಮಸ್ಯೆಗಳ ಸುಳಿಯಲ್ಲಿಯೇ ಸಿಕ್ಕಂತಹ, ಶೋಷಣೆಗೆ ಗುರಿಯಾದಂತಹ ಮಹಿಳೆಯರ ಸ್ಥಿತಿಗತಿಗಳು ಕಾಲಕ್ಕನುಗುಣವಾಗಿ ಬದಲಾವಣೆಯಾಗುತ್ತಾ ಇದ್ದಂತಹ ಸಮಸ್ಯೆಗಳು ಸ್ವರೂಪದಲ್ಲಿ ಬದಲಾವಣೆಯಾಗಿ ಹೊಸ ರೂಪದೊಂದಿಗೆ ಕಂಡುಬರುತ್ತವೆ. ಆದ್ದರಿಂದ ಕಥನಗೀತೆಗಳಲ್ಲಿರುವ ಮಹಿಳಾ ಲೋಕ ವಾಸ್ತವಕ್ಕೂ ಕೂಡ ಕೆಲವು ಮಟ್ಟಿಗೆ ಹತ್ತಿರವಾಗಿದೆ. ಅವುಗಳನ್ನು ಮಹಿಳಾ ತಾತ್ವಿಕತೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಲಾಗಿದೆ. ಅಲ್ಲದೇ ಕನ್ನಡ ಸಾಹಿತ್ಯ ಪ್ರಕಾರಗಳಾದ ಕಥೆ, ನಾಟಕ, ಕಾದಂಬರಿ, ಕಾವ್ಯ ಮುಂತಾದ ಸಾಹಿತ್ಯದಲ್ಲೂ ಕಾಲಕ್ಕನುಗುಣವಾಗಿ ಮಹಿಳೆಯರ ಸ್ಥಿತಿಗತಿಗಳನ್ನು ಅಭಿವ್ಯಕ್ತಪಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ ಹೆಚ್ಚಾಗಿರುವ ಕಾರಣ ವಿಮರ್ಶೆ ತನ್ನದೇಯಾದ ಮಹತ್ವದೊಂದಿಗೆ ತೌಲನಿಕ ಅಧ್ಯಯನದಿಂದ ಸರಿ-ತಪ್ಪುಗಳೊಂದಿಗೆ ಮೌಲ್ಯಮಾಪನ ಗುಣವನ್ನು ಹೊಂದಿದೆ. ಆದ್ದರಿಂದ ಕಥನಗೀತೆಗಳನ್ನು ಕೂಡ ವಿಮರ್ಶಾತ್ಮಕವಾಗಿ ವೈಜ್ಞಾನಿಕ ನೆಲೆಯಲ್ಲಿ ಅಭ್ಯಸಿಸಿ ತಾತ್ವಿಕತೆಯನ್ನು ಸಾಬೀತುಪಡಿಸುವ ಪ್ರಯತ್ನವನ್ನು ಈ ಮಹಾ ಪ್ರಬಂಧದಲ್ಲಿ ಮಾಡಲಾಗಿದೆ.

ಮಹಿಳೆ ಸಮಾಜದಲ್ಲಿ ಕೌಟುಂಬಿಕ ಮತ್ತು ಸಾರ್ವಜನಿಕ ನೆಲೆಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಳು ಎಂಬುದು ಕಥನಗೀತೆಗಳಲ್ಲಿ ಕಂಡು ಬಂದ ಮಹಿಳಾಲೋಕದ ವಿನ್ಯಾಸದಿಂದ ತಿಳಿದು ಬರುತ್ತದೆ. ಬಾಲ್ಯ, ತವರು, ಮದುವೆ, ದಾಂಪತ್ಯ ಬದುಕಿನ ಚಿತ್ರಣದ ಮೂಲಕ ಕೌಟುಂಬಿಕ ಬಂಧನ ಆಕೆಯನ್ನು ಸೆರೆ ಹಿಡಿದಿದ್ದರೆ, ಊರು-ಕೇರಿ, ಗೌಡ-ಶಾನುಭೋಗ, ಕಾನೂನು-ಕಟ್ಟಳೆ, ತ್ಯಾಗ-ಬಲಿದಾನಗಳು ಸಮಾಜದಲ್ಲಿ ಆಕೆಯನ್ನು ಬಂಧಿಸಿದ್ದವು. ಮದುವೆಯಾಗುವವರೆಗೆ ಕುಟುಂಬದ ನಿಷೇಧಗಳೊಂದಿಗೆ ಬೆಳೆದು, ಮದುವೆಯ ನಂತರ

ಊರಿನ ಅಥವಾ ಸಮಾಜದ ಕಟ್ಟುಪಾಡುಗಳಿಗೆ ಮೂಕವಾಗಿ ತಲೆಯೊಡ್ಡುವ ಪರಿಸ್ಥಿತಿ ಅವಳಿಗೆ ಎದುರಾಗಿ ಆಚರಣೆ ಎಂಬ ಹೆಸರಿನಲ್ಲಿ ಮಹಿಳೆಯರನ್ನು ದೂಡಲಾಗಿತ್ತು. ಮೌಢ್ಯತೆಗೆ ಅಥವಾ ಅವರೇ ಅಂತಹ ಆಚರಣೆಗಳಿಗೆ ಬದ್ಧರಾಗಿದ್ದರು ಎಂಬುದು ತಿಳಿದುಬರುತ್ತದೆ.

ಹೆಣ್ಣಿಗೆ ಅವಿನಾಶಿ, ಸಂಜೀವಿನಿ, ವಿಶಿಷ್ಟ ಶಕ್ತಿಗಳ ಸಂಗಮ, ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ ಮತ್ತು ಭೂಮಿ ತೂಕದ ತಾಳ್ಮೆಯನ್ನು ಸ್ತ್ರೀ ಎಂದು ಕರೆಯುತ್ತಾರೆ. ಇಂತಹ ಗುಣಗಳು ಕೇವಲ ಮಹಿಳೆಯರಲ್ಲಿ ಅಷ್ಟೇ ಅಲ್ಲದೆ ಪುರುಷರಲ್ಲಿಯೂ ಕೂಡ ಇಂತಹ ಬಹುಪಾಲು ಗುಣಗಳು ಕಂಡುಬರುತ್ತವೆ ಎಂಬುದನ್ನು ಗಮನಿಸಬೇಕಾದ ವಿಷಯವಾಗಿದೆ. ಏಕೆಂದರೆ ಕೆಲವು ಪುರುಷರಲ್ಲಿಯೂ ಕೂಡ ತಾಳ್ಮೆ, ವಾತ್ಸಲ್ಯ, ಅಕ್ಕರೆ, ಮಮತೆ, ಕರುಣೆ ಹೀಗೆ ಇನ್ನೂ ಕೆಲವೊಂದು ವಿಶಿಷ್ಟ ಗುಣಗಳು ಕಂಡುಬರುತ್ತವೆ. ಆದಕಾರಣ ಸ್ತ್ರೀ ಆಗಿರಲಿ, ಪುರುಷರಾಗಿರಲಿ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಂತಹ ಗುಣಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ ಎಂಬುದು ತಿಳಿದುಬರುತ್ತದೆ.

ಸಾಹಿತ್ಯದಲ್ಲಿ ಸ್ತ್ರೀಯನ್ನು ಹಲವಾರು ರೀತಿಯ ನೆಲೆಗಳಲ್ಲಿ ಗುರುತಿಸಿರುವುದು ಕಂಡುಬರುತ್ತದೆ. ವೇದ ಕಾಲದಲ್ಲಿ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವಿತ್ತು ಎಂಬುದಕ್ಕೆ ಗಾರ್ಗಿ, ಮೈತ್ರೇಯಿ, ಅಪಲಾ, ಲೋಪಮುದ್ರಾ, ಉಭಯಭಾರತಿಯಯವರ ಬೌದ್ಧಿಕ ಸಾಧನೆಯೇ ಸಾಕ್ಷಿಯಾಗಿದೆ. ಜೊತೆಗೆ ಸ್ತ್ರೀಯರು ಬ್ರಹ್ಮವಾದಿನಿಯರಾಗಿ, ಬ್ರಹ್ಮ ಸಭೆಗಳಲ್ಲಿ ಪುರುಷರ ಸಮಾನವಾಗಿ ವಾದ ಮಾಡಬಲ್ಲವರಾಗಿದ್ದರು. ಆದರೆ ಇವರೆಲ್ಲರೂ ಋಷಿಯರ ಪತ್ನಿಯರೇ ಆಗಿದ್ದರೆಂಬುದನ್ನು ಮರೆಯುವಂತಿಲ್ಲ. ಸಾಮಾನ್ಯ ಸ್ತ್ರೀ ಈ ಎಲ್ಲ ಜ್ಞಾನದಿಂದ ವಂಚಿತಳಾಗಿದ್ದಳು. ಪ್ರಸ್ತುತ ದಿನಮಾನದಲ್ಲಿ ಪ್ರತಿಯೊಬ್ಬ ಮಹಿಳೆಗೂ ಶಿಕ್ಷಣ ಪಡೆಯುವಂತಹ ಅವಕಾಶವಿದೆ. ಆದ್ದರಿಂದ ಅದನ್ನು ಸದುಪಯೋಗಪಡಿಸಿಕೊಂಡು ಪ್ರಜ್ಞಾವಂತ ಸಮಾಜ ನಿರ್ಮಾಣಕ್ಕೆ ಶ್ರಮ ವಹಿಸಬೇಕಾದ ಅನಿವಾರ್ಯತೆಯನ್ನು ಕಂಡುಕೊಳ್ಳಲಾಗಿದೆ.

ಜನಪದ ಮಹಿಳೆಯರು ಅನಾಗರಿಕರು, ಮುಗ್ಧರು, ಸಹನಶೀಲ ಸ್ವಭಾವವುಳ್ಳವರು ಎಂಬುದನ್ನು ಆದಿ ಕಾಲದಿಂದಲೂ ಕೇಳುತ್ತಾ, ಹೇಳುತ್ತಾ ಬರಲಾಗಿದೆ. ಆದರೆ ಅವರಲ್ಲಿರುವ ದಿಟ್ಟತನ, ಜಾಗೃತಿ, ಬದುಕನ್ನು ಕಂಡುಕೊಂಡ ಬಗೆ, ಪ್ರೀತಿಸಿದ ರೀತಿ, ಬದುಕಿನಲ್ಲಿ ಎದುರಾದ ಸಮಸ್ಯೆಗಳಲ್ಲಿ ತಾವು ಸಾರ್ವಜನಿಕ ಹಿತಕ್ಕಾಗಿ ತೆಗೆದುಕೊಂಡ ನಿರ್ಧಾರ ಇವೆಲ್ಲವನ್ನು ಈ ಅಧ್ಯಯನದಿಂದ ತಿಳಿಯಲಾಗಿದೆ.

ಕೆಲವೊಂದು ಕಥನಗೀತೆಗಳ ಮೂಲಕ ಸ್ತ್ರೀ ಮತ್ತು ಪುರುಷ ಪ್ರಧಾನ ಸಾಮಾಜಿಕ ಮೌಲ್ಯವನ್ನು ವಿಶ್ಲೇಷಿಸಿ ಅವುಗಳ ಮಹತ್ವವನ್ನು ತಿಳಿಯುವುದು ಎಲ್ಲ ಕಾಲಕ್ಕೂ ಅವಶ್ಯಕವಾಗಿದೆ. ಅನವಶ್ಯಕ ಅಜ್ಞಾನಕ್ಕೆ ತಳ್ಳುವಂತಹ ಮೌಲ್ಯಗಳನ್ನು ದೂರ ಇರಿಸಿ ಜ್ಞಾನದತ್ತ ಕೊಂಡೊಯ್ಯುವ ಕಥನಗೀತೆಗಳಲ್ಲಿ ಬರುವ ಕೌಟುಂಬಿಕ ನೆಲೆ, ಸಾರ್ವಜನಿಕ ನೆಲೆ, ಆಚರಣಾತ್ಮಕ ನಲೆಗಳಲ್ಲಿ ಕಂಡು ಬರುವ ವಿಚಾರಗಳೆಲ್ಲವನ್ನು ಕಳೆದುಹೋದ ತಲೆಮಾರುಗಳಲ್ಲಿ ಜೀವಂತವಾಗಿದ್ದು, ಕಥೆಗಳನ್ನು ಗೀತೆಯ ಮೂಲಕ ಪ್ರಸ್ತಾಪ ಮಾಡಲಾಗಿದೆ. ಅವುಗಳು ಇತಿಹಾಸದಲ್ಲಿ ದಾಖಲಾಗಿ ಉಳಿದಿವೆ. ಅಂತಹ ದಾಖಲೆಗಳನ್ನು ಅಗೆದು ತೆಗೆದಾಗ ವಿಭಿನ್ನ ವಿಷಯಗಳು ವಿವಿಧ ರೀತಿಯಲ್ಲಿ ಕಾಣಸಿಗುತ್ತವೆ. ಅದೇ ಆಧಾರಗಳ ಮೇಲೆ ಕಥನಗೀತೆಗಳಲ್ಲಿ ಕಂಡು ಬರುವ ಮಹಿಳಾಲೋಕದ ವಿಭಿನ್ನ ವಿನ್ಯಾಸವನ್ನು ಗುರುತಿಸಲಾಗಿದೆ.

ಕನ್ನಡ ಸಾಹಿತ್ಯದ ಚರ್ಚೆಗಳಲ್ಲಿ ಸ್ತ್ರೀ ಪ್ರತಿನಿಧಿಕರಣದ ಪ್ರಶ್ನೆ ಎತ್ತಿದಾಗ ಸಾಮಾನ್ಯವಾಗಿ ಸ್ತ್ರೀಯು ಮುಖ್ಯವಾಗಿ ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳುತ್ತಾಳೆ. ಹೆಣ್ಣಿನ ತಾಯಿಗುಣವನ್ನು ಪ್ರತಿನಿಧಿಸುವ ನೆಲೆ ಒಂದಾದರೆ, ಆಕೆಯ ಪಾಲನೆಯ ಗುಣವನ್ನು ಪ್ರತಿನಿಧಿಸುವ ನೆಲೆ ಇನ್ನೊಂದಾಗಿದೆ. ಮಹಿಳೆ ಸಂಕಷ್ಟಗಳನ್ನು ಉಂಟು ಮಾಡುವ ಮತ್ತು ಅದರಿಂದ ಪಾರು ಮಾಡುವ ಎರಡೂ ಸಾಮರ್ಥ್ಯಗಳನ್ನು ಆರೋಪಿಸಲಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ಚಿತ್ರಣ ವಿವಿಧ ಮಾದರಿಗಳಲ್ಲಿ ಕಾಣಸಿಗುತ್ತದೆ ಹಾಗೂ ಹಲವಾರು ಪ್ರತೀಕಗಳನ್ನು ವಿಭಿನ್ನ ರೀತಿಯಲ್ಲಿ ಕೃತಿಕಾರರು ಶೋಧಿಸಿದ್ದಾರೆ. ಹಾಗೆಯೇ ಕಥನಗೀತೆಗಳಲ್ಲಿ ಮಹಿಳೆ ತಾಯಿಗುಣ, ಪಾಲನೆಯ ಗುಣ ನಿರ್ವಹಿಸುವುದರೊಂದಿಗೆ ಸಮಾಜದ ಒಳಿತಿಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದಂತಹ ಮಹಿಳಾ ನೆಲೆಯನ್ನು ಗುರುತಿಸಲಾಗಿದೆ. ಇದರೊಂದಿಗೆ ಶಿಕ್ಷಣದಿಂದ ವಂಚಿತಳಾಗಿ ಪ್ರತಿಭಟಿಸಲಾರದೇ ಕಾಲದ ಪರಿಸರಕ್ಕೆ ತಕ್ಕಂತೆ ತನ್ನ ಜೀವನವನ್ನು ತ್ಯಜಿಸಿದ್ದಾಳೆ, ತನಗೆ ಏನೇ ಸಂಕಷ್ಟ ಒದಗಿ ಬಂದರೂ ಸಹಿಸಿಕೊಂಡು ಕುಟುಂಬ, ಸಮಾಜದ ಹಿತಕ್ಕಾಗಿ ತನ್ನತನವನ್ನು ಅರಿಯದ ಸ್ಥಿತಿಗೆ ಕೊಂಡೊಯ್ಯುವವಳು ಮಹಿಳೆ ಎಂದರೆ ತಪ್ಪಾಗಲಾರದು. ಇದನ್ನು ಕುರಿತು ಜನಪದ ತ್ರಿಪದಿಯೊಂದು ಹೀಗೆ ಹೇಳಿದೆ:

'ಹೆಣ್ಣಿನ ಜನ್ಮ ಸುಣ್ಣಾಗಿ ಕುದಿಯಲಿ
ಗಾಣದ್ಹಿಂಡಿಯಾಗಿ ಸುರಿಯಾಲಿ, ಶಿವರಾಯ
ದೀಪದೆಣ್ಣೆಯಾಗಿ ಉರಿಯಾಲಿ'

ಎಂದು ಸಮಾಜದಲ್ಲಿ ತನಗ ಒದಗಿ ಬಂದ ಸಂಕಟವನ್ನು ಆಧರಿಸಿ ಹೆಣ್ಣಿನ ಜನ್ಮ ಬಿಸಿನೀರಿನಲ್ಲಿ ಸುಣ್ಣ ಕುದಿದ ಹಾಗೆ ಕುದ್ದು ಇಡೀ ಮನೆಗೆ ಬೆಳಕಾಗುವುದಕ್ಕೆ ಸಹಾಯವಾಗುತ್ತದೆ. ಕಬ್ಬು, ಧಾನ್ಯಗಳು ಗಾಣದಿಂದ ಹಿಂಡಿ ತೆಗೆದು ಸಿಹಿಯನ್ನು, ವಿವಿಧ ಸ್ವರೂಪದ ಎಣ್ಣೆಯನ್ನು ಒದಗಿಸುತ್ತದೆ. ಹಾಗೆಯೇ ದೀಪ ತಾನು ಉರಿದು ಜನರಿಗೆ ಹೇಗೆ ಬೆಳಕನ್ನು ಒದಗಿಸುತ್ತದೆಯೋ ಹಾಗೆ ಮಹಿಳೆಯ ಜನ್ಮ ಎನ್ನುವುದು ಸಮಾಜದಲ್ಲಿ ಎಷ್ಟೇ ಸಂಕಷ್ಟಗಳು ಎದುರಾದರೂ ಕೂಡ ಸಮಾಜಕ್ಕೆ, ಕುಟುಂಬಕ್ಕೆ ಬೆಳಕನ್ನೇ ನೀಡಬೇಕು ಎಂದು ಈ ಜನಪದದ ಮೂಲಕ ತಿಳಿದುಬರುತ್ತದೆ. ಆಕೆಗೆ ಏನೇ ನೋವು-ಸಂಕಷ್ಟಗಳು ಎದುರಾದರೂ ತನಗೆ ಜನ್ಮ ನೀಡಿದ ಕರ್ತೃ ದೇವರು ಎಂದು, ತನ್ನ ಗೋಳಿಗೆ ಕಾರಣ ಆತನೇ ಎಂದು ಅರಿತು, ಭಕ್ತಿಯಿಂದಲೇ ವಿವಿಧ ರೀತಿಯಲ್ಲಿ ಶಪಿಸುತ್ತಾ, ದೂಷಿಸುತ್ತಾ ತನ್ನೊಡಲಿನ ಉರಿಯನ್ನು ಹೊರಹಾಕುತ್ತಾಳೆ. ಮಂದಿರದಲ್ಲಿ ಕುಳಿತಿರುವ ದೇವರು ತನ್ನ ದೀಪವನ್ನು ತಾನೇ ಹಚ್ಚಿಕೊಳ್ಳಲಿಲ್ಲ ಎಂದ ಮೇಲೆ ನಿಮ್ಮ ಬಾಳಲ್ಲಿ ಹೇಗೆ ಬೆಳಕು ನೀಡಬಲ್ಲ ಎಂಬ ಅಂಬೇಡ್ಕರ್‌ರವರ ಮಾತು ನಿಜಕ್ಕೂ ಸತ್ಯ. ವೈಚಾರಿಕವಾಗಿ ತಿಳಿದು ನೋಡಿದರೆ ಬದುಕಿನಲ್ಲಿ ಕತ್ತಲು ಅಥವಾ ಬೆಳಕು ಆವರಿಸುತ್ತದೆ ಎಂದರೆ ಅದಕ್ಕೆಲ್ಲ ನಾವೇ ಹೊಣೆ. ಗೌತಮ ಬುದ್ಧ ಹೇಳಿದ 'ನಿನಗೆ ನೀನೇ ಬೆಳಕು' ಎಂಬ ಮಾತು ಅಕ್ಷರಶಃ ಸತ್ಯವಾಗಿದೆ. ಇಂತಹ ಅರಿವಿನಿಂದ, ವೈಚಾರಿಕತೆಯಿಂದ ಜನಪದ ಮಹಿಳೆಯರು ವಂಚಿತರಾಗಿದ್ದರು. ಯಾವುದನ್ನೂ ತೌಲನಿಕವಾಗಿ ವಿಶ್ಲೇಷಿಸಿ ನೋಡುವಂತಹ ಪರಿಸ್ಥಿತಿ ಅವರಿಗಿರಲಿಲ್ಲ. ಬದಲಾಗಿ ಸಮಾಜದ ಕಟ್ಟುಪಾಡುಗಳಿಗೆ ತಲೆ ಬಾಗಲೇಬೇಕಾದ ಪರಿಸ್ಥಿತಿ ಇತ್ತು ಎಂಬುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಜನಪದ ಹೆಣ್ಣಿನ ವೈವಿಧ್ಯಮಯ ಜೀವನಾನುಭವದ ಹಿನ್ನೆಲೆಯಲ್ಲಿ ಆಕೆಯ ಸಮಸ್ಯೆಗಳು ವಿಭಿನ್ನವಾಗಿಯೇ ಕಾಣಿಸುವಂತೆ ಅದಕ್ಕೆ ಪರಿಹಾರ ಹುಡುಕುವ ಮಾರ್ಗಗಳೂ ಭಿನ್ನವಾಗಿರುತ್ತವೆ. ಆದಕಾರಣ ಕಥನಗೀತೆಯಲ್ಲಿ ಮಹಿಳಾ ಲೋಕದ ವಿಭಿನ್ನ ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ಬಗೆಹರಿಸುವ ವಿಭಿನ್ನ ಮಾರ್ಗಗಳನ್ನು ಕಂಡುಕೊಳ್ಳಲು ಕೂಡ ಈ ಅಧ್ಯಯನ ಸಹಕಾರಿಯಾಗಿದೆ.

ಜನಪದ ಮಹಿಳಾ ಮಾದರಿಗಳನ್ನು ಶೋಧಿಸುವುದರ ಮೂಲಕ ಜನಸಾಮಾನ್ಯರ ಬದುಕಿನಲ್ಲಿರಬಹುದಾಗಿದ್ದ ಭಿನ್ನ ಭಿನ್ನ ವಸ್ತು-ವಿಷಯಗಳನ್ನು ಗುರುತಿಸುವಂತಹ ಪ್ರಯತ್ನ ಈಗಾಗಲೇ ನಡೆಯುತ್ತಲೇ ಇದೆ. ಹೀಗೆ ಗುರುತಿಸುವಿಕೆಯಲ್ಲಿ ಈ ಮಹಾಪ್ರಬಂಧದ ಪಾಲು

ಕೂಡ ಬಹಳಷ್ಟಿದೆ. ಅಕ್ಷರ ಪ್ರಪಂಚದ ಅರಿವಿನಾಚೆ ಜೀವಿಸುತ್ತಿದ್ದ ಮಹಿಳೆಯರು ತಮ್ಮ ಅಭಿವ್ಯಕ್ತಿಯಲ್ಲಿ ತೋರಿಸುವ ಪ್ರತಿಭಟನಾತ್ಮಕ ಧೋರಣೆ, ಪುರುಷ ಪ್ರಭುತ್ವದ ವಿರುದ್ಧ ನೇರವಾದ ಪ್ರತಿಭಟನೆ ತೋರಲಾರದೆ ಸಾಂಕೇತಿಕವಾಗಿ ಪ್ರತಿಭಟನೆಗಳನ್ನು ತೋರಿ ಹೆಣ್ಣಿನ ಜನ್ಮವನ್ನು ಜರಿದ ಬಗೆಯು ಕೂಡ ಕಂಡುಬರುತ್ತದೆ.

ಅತ್ತೆ-ಸೊಸೆಯರ ಜಗಳ; ಸವತಿ ಮಾತ್ಸರ್ಯ ಎಲ್ಲ ಕಾಲಕ್ಕೂ ತಪ್ಪದೇ ಇರುವ ಸಮಸ್ಯೆಗಳಾಗಿವೆ. ಆದ್ದರಿಂದಲೇ ಇಂತಹವು ಸ್ತ್ರೀ ಆತ್ಮದಲ್ಲಿ ಶಾಶ್ವತವಾಗಿ ನೆಲೆ ನಿಂತುಬಿಟ್ಟಿದೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬಂತೆ ಮಹಿಳೆಯರು ಮಹಿಳೆಯರಿಗೆ ಒದಗಿ ಬಂದ ಸಂಕಷ್ಟಗಳಿಗೆ ಸ್ಪಂದಿಸದೆ ದೂರುತ್ತಾ ಬರುವುದು ಸ್ಥಗಿತವಾಗಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಈ ಮಹಾಪ್ರಬಂಧದ ಮೂಲಕ ಸ್ಪಷ್ಟಪಡಿಸಲಾಗಿದೆ.

ಕೆರೆ-ಕೋಟೆಗೆ ಬಲಿಯಾದ ಚಿತ್ರಣವನ್ನು ಕಥನಗೀತೆಗಳಲ್ಲಿ ಕಂಡಾಗ ಕಣ್ಣಿಗೆ ಕಟ್ಟುವಂತಾಗಿ ಮನವನ್ನು ತೇವಗೊಳಿಸುತ್ತವೆ ಹಾಗೂ ಮಹಿಳೆಯ ಉದಾತ್ತ ಮನೋದಾರ್ಢ್ಯ; ಪತಿಯ ಪ್ರೇಮ, ತೌರಿನವರ ಕಾಳಜಿ ಇವೆಲ್ಲ ಸ್ಮರಣೀಯವಾಗಿವೆ. ಆದರೆ ಅಂದಿನ ಸಾರ್ವಜನಿಕ ವಲಯದಲ್ಲಿ ಮಹಿಳೆಯನ್ನು ಕೇವಲ ಒಂದು ವಸ್ತು ಅಥವಾ ಪರಿಕರವೆಂದು ಭಾವಿಸಿದ್ದರು ಎಂಬುದನ್ನು ಕಂಡರೆ ಖೇದವೆನಿಸುತ್ತದೆ. ಅಲ್ಲದೇ ದೇವರಿಗೆ ಬಲಿ ಕೊಡುವ ಬಲಿಪಶುವೆಂದು ಹೆಣ್ಣನ್ನು ಪರಿಗಣಿಸಲಾಗಿತ್ತು. ಊರಿನ ಅಥವಾ ಗ್ರಾಮದ ಅಭಿವೃದ್ಧಿಗೆ ಮಹಿಳೆಯರು ಬಲಿಯಾಗಿರುವಷ್ಟು ಪ್ರಾಣಿಗಳು ಕೂಡ ಬಲಿ ಆಗಿಲ್ಲವೆಂದೇ ಹೇಳಬಹುದು. ವಾಸ್ತವದಲ್ಲಿ ಕೂಡ ಮಹಿಳೆಯರನ್ನು ಪ್ರಾಣಿಗಳಿಗಿಂತ ನಿಕೃಷ್ಟವಾಗಿ ಕಾಣುವುದು ಅನಾರೋಗ್ಯಕರ ಪರಿಸರಕ್ಕೆ ಹಾದಿ ಮಾಡಿದೆ. ಜನಪದ ಸಮಾಜದಲ್ಲಿ ಅಸಮಾನತೆ, ಅಪಮೌಲ್ಯಗೊಂಡಂತಹ ಆಚರಣೆಗಳು ಕಂಡುಬರುತ್ತವೆ. ಹೀಗೆ ವಿವಿಧ ಮುಖಗಳಲ್ಲಿ, ವಿವಿಧ ಪಾತ್ರಗಳಲ್ಲಿ ಮಹಿಳೆ ಶೋಷಣೆಗೆ ಒಳಪಟ್ಟಿದ್ದಳು ಎಂಬುದನ್ನು ತಿಳಿಸಿಕೊಡಲು ಈ ಅಧ್ಯಯನ ಸಹಾಯಕವಾಗಿದೆ.

ಮಹಿಳೆ ಇಂದಿಗೂ ಕೂಡ ಶೋಷಣೆ ಮುಕ್ತಳಾಗದೇ ಜೀವಿಸುತ್ತಿದ್ದಾಳೆಂಬುದು ಗೊತ್ತಿರುವ ಸಂಗತಿ. ಆಕೆಗೆ ಅಪವಾದಗಳನ್ನು ಹೊರಿಸುವುದಕ್ಕೆ ಸಮಾಜದಲ್ಲಿ ಬದುಕಲು ಅಸಹ್ಯಪಟ್ಟುಕೊಂಡು ತನ್ನಷ್ಟಕ್ಕೆ ತಾನೇ ಸಾವಿಗೆ ಬಲಿಯಾಗುವ ಪ್ರಸಂಗಗಳು ನಡೆಯುತ್ತಿವೆ. ವರದಕ್ಷಿಣೆ, ಅನುಮಾನ, ನೇಣು ಹಾಕುವುದು, ಬಾವಿಗೆ ತಳ್ಳುವುದು, ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚುವುದು ಹೀಗೆ ಸಾವಿಗೆ ಗುರಿ ಮಾಡುವಂತಹ (ಬಲಿ) ಪರೋಕ್ಷ ನೆಲೆಯನ್ನು

ಕಾಣುತ್ತೇವೆ. ಇಂತಹ ಎಲ್ಲ ಸಮಸ್ಯೆಗಳಿಗೆ ತಿಲಾಂಜಲಿ ಇಡುವಂತಹ ಕಾಲಮಾನ ಎಂದಿಗೆ ಬರುತ್ತದೆ ಎಂಬುದೇ ಯಕ್ಷ ಪ್ರಶ್ನೆಯಾಗಿ ಉಳಿದಿದೆ. ಇದಕ್ಕೆಲ್ಲ ನಿರಾಶರಾಗದೇ ಮುಂದೆ ಇಟ್ಟ ಹೆಜ್ಜೆ ಹಿಂದೆ ತೆಗೆದುಕೊಳ್ಳದೆ ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ ದ್ವೇಷ-ಅಸೂಯೆಗಳನ್ನು ಮರೆತು ಸಮಾನರಾಗಿ ಬದುಕಬೇಕೆಂಬ ಗುರಿ ಎಲ್ಲರಲ್ಲಿ ಬರಲಿ ಎಂಬ ಆಶಯವೂ ಇಲ್ಲಿದೆ.

ಎಲ್ಲ ಸಾಹಿತ್ಯಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ವಿವೇಚಿಸುವ ಹಾಗೆ ಮಹಿಳಾ ಸಮಸ್ಯೆ, ಪರಿಹಾರಗಳನ್ನು ತಾತ್ವಿಕ ನೆಲೆಯಲ್ಲಿ ಚರ್ಚಿಸಬೇಕು. ಮಹಿಳಾ ಸಾಹಿತ್ಯ, ಮಹಿಳಾ ದಿನಾಚರಣೆ, ಮಹಿಳಾ ಗೋಷ್ಠಿಗಳು ಎಂದಾಗ ಕೇವಲ ಮಹಿಳೆಯರಿಗಷ್ಟೇ ಸೀಮಿತ ಎನ್ನುವಷ್ಟು ತಿರಸ್ಕಾರಕ್ಕೆ ಒಳಗಾಗಿವೆ. ಆದರೆ ವಾಸ್ತವದಲ್ಲಿ ಬೇಕಾಗಿರುವುದು ಪ್ರತಿಯೊಬ್ಬರು ಮಹಿಳಾ ಸಾಹಿತ್ಯದ ಬಗ್ಗೆ ಚಿಂತನೆ ಮಾಡುವ ಅವಶ್ಯಕತೆ ಇದೆ. ಎಷ್ಟೋ ಮಹಿಳೆಯರ ಸಾಧನೆಯ ಹಿಂದೆ ಪುರುಷ ಸಮಾಜ ಇದೆ ಎಂಬ ಮಾದರಿಯನ್ನು ತೋರಿಸುವುದರೊಂದಿಗೆ ಇಡೀ ಸಮಾಜ ಎಚ್ಚೆತ್ತುಕೊಳ್ಳುವಂತಹ ಕಾರ್ಯ ನಡೆಯಬೇಕಾಗಿದೆ ಎಂಬ ಕರೆಯನ್ನು ಕೂಡ ನೀಡಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಒಂದೇ ರೀತಿಯಾದ ಮೌಲ್ಯಗಳು, ಆಚಣೆಗಳು, ಕೌಟುಂಬಿಕ ನೆಲೆ, ಸಾಮಾಜಿಕ ನೆಲೆಗಳು ಕಂಡು ಬರುವುದಿಲ್ಲ. ಏಕೆಂದರೆ ಕಾಲ ಬದಲಾದಂತೆ ಸಾಹಿತ್ಯ ಬದಲಾಗುತ್ತಾ ಸಾಗುತ್ತದೆ. ಸಾಹಿತ್ಯ ಬದಲಾದಂತೆ ವಿಚಾರ ಬದಲಾಗುತ್ತಾ ಸಾಗುತ್ತದೆ. ವಿಚಾರ ಬದಲಾದಂತೆ ಸಮಾಜ ಬದಲಾವಣೆಯಾಗುವಲ್ಲಿ ಸಹಾಯಕವಾಗುತ್ತದೆ. ಇದಕ್ಕೆಲ್ಲ ಮೂಲಭೂತವಾಗಿ ಬೇಕಾದ ಮಾರ್ಗವೆಂದರೆ ಶಿಕ್ಷಣ. ಶಿಕ್ಷಣ ದೊರಕಿದಾಗ ಮಾತ್ರ ಈ ಎಲ್ಲವೂ ಹಂತ-ಹಂತವಾಗಿ ಬದಲಾಗುತ್ತ ಹೋಗುತ್ತವೆ. ಆದಕಾರಣ ಜನಪದ ಕಥನಗೀತೆಗಳನ್ನು ಕುರಿತು ಹೊಸ ದೃಷ್ಟಿಕೋನದಲ್ಲಿ ಅಭ್ಯಸಿಸಿ ವಿಭಿನ್ನ ಫಲಿತಗಳನ್ನು ಸಮಾಜಕ್ಕೆ ನೀಡಲು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಅವುಗಳಲ್ಲಿ ಪ್ರಮುಖ-ವಾದವುಗಳನ್ನು ಈ ಕೆಳಗಿನಂತೆ ನೋಡಬಹುದು.

- ಕಥನಗೀತೆಗಳಲ್ಲಿ ಮಹಿಳಾ ವಿನ್ಯಾಸದಲ್ಲಿಯ ಭಿನ್ನತೆ, ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಆಕೆಯ ದ್ವಿತೀಯ ದರ್ಜೆ ಸ್ಥಾನ, ಸಾರ್ವಜನಿಕ ಹಿತಕ್ಕಾಗಿ ತನ್ನನ್ನೇ ಬಲಿಕೊಟ್ಟು ಕೊಂಡಂತಹ ದುರಂತ ಜೀವನದ ಆಕೆಯ ಪರಿಸ್ಥಿತಿಯನ್ನು ತಿಳಿಸುತ್ತದೆ.

- ಕನ್ನಡ ಜನಪದ ಕಥನಗೀತೆಗಳಲ್ಲಿ ಮಹಿಳಾ ಪ್ರತಿರೋಧಗಳು ಶೋಷಣಾತ್ಮಕ ಪ್ರಕ್ರಿಯೆಗಳಲ್ಲಿ ಮಾತ್ರ ಕಂಡುಬರುತ್ತವೆ. ಅಂದರೆ ಅತ್ತೆ-ಮಾವ, ತಂದೆ-ತಾಯಿ, ನಾದಿನಿ-ನೆಗೆಣ್ಣಿ ಮುಂತಾದ ಕೌಟುಂಬಿಕ ಸದಸ್ಯರು ಅಶಕ್ತ ವರ್ಗಗಳ ಜೊತೆ ಪ್ರತಿರೋಧ ಮಾಡಿದ ಹೆಚ್ಚು ವಿವರಗಳು ಸಿಗುತ್ತವೆಯೇ ಹೊರತು ಶಕ್ತ ವರ್ಗಗಳ ಜೊತೆ ಪ್ರತಿರೋಧ ಮಾಡಿದ ವಿವರಗಳು ಕಡಿಮೆ ಕಂಡುಬರುವವು. ಅರ್ಥಾತ್ ಮಹಿಳೆಯಾದವಳು ಅಂತಹ ವರ್ಗದವರ ಜೊತೆಗೆ ಮಾತ್ರ ಪ್ರತಿರೋಧ ಮಾಡುವುದಕ್ಕೆ ಸೀಮಿತಳು ಎಂಬುದು ಕಂಡುಬರುತ್ತದೆ. ಹಾಗಾಗಿ ಕಥನಗೀತೆಗಳು ಪ್ರಭುತ್ವ ಕೇಂದ್ರಿತ ಸಂಸ್ಕೃತಿಯನ್ನು ಅನಾವರಣ ಮಾಡುತ್ತವೆ.
- ಜನಪದ ಕಥನಗೀತೆಗಳ ಹುಟ್ಟು, ಬೆಳವಣಿಗೆ, ಅವುಗಳ ಚಾರಿತ್ರಿಕ ಬೆಳವಣಿಗೆಯನ್ನು ಕುರಿತು ಅವಲೋಕಿಸಿ ಅವುಗಳ ಬಗ್ಗೆ ಈವರೆಗೆ ನಡೆದಿರುವಂತಹ ಅಧ್ಯಯನದ ಕೃತಿಗಳಲ್ಲಿ ಮಹಿಳೆಯ ಬಗೆಗೆ ವಿಮರ್ಶೆ ಮುಂತಾದ ವಿಚಾರಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗಿದೆ.
- ಜನಪದ ಕಥನಗೀತೆಗಳಲ್ಲಿ ಬರುವ ಮಹಿಳೆ ತನ್ನ ಬದುಕಿನುದ್ದಕ್ಕೂ ಪಡುವಂತಹ ನೋವು-ನಲಿವು, ರೀತಿ-ನೀತಿ, ಸುಖ-ದುಃಖಗಳನ್ನು ಎದುರಿಸುವ ಬಿಕ್ಕಟ್ಟುಗಳೆಲ್ಲವನ್ನು ಪರಿಚಯಿಸಲಾಗಿದೆ.
- ದೌರ್ಜನ್ಯ, ದರ್ಪದ ಸಂಕೇತವಾಗಿ ಕೆಲವು ಕಥನಗೀತೆಗಳು ಕಂಡುಬಂದಿವೆ. ಬಹುಪಾಲು ಕಥನಗೀತೆಗಳಲ್ಲಿ ಮಹಿಳೆ ಶೋಷಣೆ, ಅವಮಾನ, ಅನುಮಾನ ಮುಂತಾದ ಕಾರಣಗಳಿಗೆ ಈಡಾದರೆ ಬಡ ಪುರುಷನ ಮೇಲೆ ದರ್ಪ ತೋರುವಂತಹ ಕಥನಗೀತೆಗಳೂ ಕಂಡುಬರುತ್ತವೆ.
- ಪುರುಷ ಸಮಾಜ ಮಹಿಳೆಯರನ್ನು ಯಾವ ನಿಟ್ಟಿನಲ್ಲಿ ಬಳಸಿಕೊಂಡಿದೆ, ಮಹಿಳೆಯೇ ಏಕೆ ಆತ್ಮ ಹಾಗೂ ತ್ಯಾಗ ಬಲಿದಾನಗಳಿಗೆ ಈಡಾಗಬೇಕು ಎಂಬ ಅಂಶಗಳನ್ನು ಸ್ಥೂಲವಾಗಿ ವಿಶ್ಲೇಷಿಸಿ ಪರಿಹಾರಗಳನ್ನು ಸೂಚಿಸಲಾಗಿದೆ.
- ಕಥನಗೀತೆಗಳಲ್ಲಿ ಬರುವ ಪಾತ್ರಗಳನ್ನು ವಿಶ್ಲೇಷಿಸಿ ನೋಡಿದಾಗ ಪ್ರತಿಯೊಂದು ಪಾತ್ರವು ಸಮಾಜಕ್ಕೆ ಹೇಗೆ ಮುಖಾಮುಖಿಯಾಗಿದೆ ಮತ್ತು ಕಾಮ, ಕ್ರೋಧ, ಮದ-ಮತ್ಸರ, ರಾಗ-ದ್ವೇಷ, ಸವತಿ ಮತ್ಸರ ಮುಂತಾದ ಅಂಶಗಳು ನೈಜ ಜೀವನಕ್ಕೆ ಹೇಗೆ ಹತ್ತಿರವಾಗುವಂತೆ ಪ್ರತಿಬಿಂಬಿಸಿವೆ ಎಂಬುದನ್ನು ತಿಳಿಸಲಾಗಿದೆ.

- ಮಹಿಳೆಯರೇ ಸ್ವ-ಇಚ್ಛೆಯಿಂದ ಕೆರೆ, ಕೋಟೆ, ಕಟ್ಟಡಗಳಿಗೆ ಊರಿನ ಸಮಾಜದ ಹಿತಕ್ಕಾಗಿ ಹಾರವಾಗಿದ್ದು ಒಂದು ಕಡೆಯಾದರೆ, ಬಲವಂತವಾಗಿ ಪುರುಷ ಕೇಂದ್ರಿತ ಸಮಾಜ ನೂಕಿ ಹಾರವಾಗಿಸುವಂತಹದ್ದು ಇನ್ನೊಂದೆಡೆ ಕಂಡುಬರುತ್ತವೆ. ಹಾಗಾಗಿ 'ಸ್ವ-ಆಸಕ್ತಿ', 'ಪರಹಿತಾಸಕ್ತಿಗಾಗಿ' ಮಹಿಳಾ ವಿನ್ಯಾಸಗಳು ಎರಡು ಬಗೆಯಲ್ಲಿ ಗೋಚರವಾಗುತ್ತವೆ.

- ಯಜಮಾನ್ಯ ಸಂಸ್ಕೃತಿ, ಜಮೀನ್ದಾರಿ ವ್ಯವಸ್ಥೆಗಳ ಬಳುವಳಿಯಾಗಿ ಹೆಣ್ಣನ್ನು ಕೆರೆ, ಕೋಟೆ, ಬೆಂಕಿಗೆ ಬಲಿ ಕೊಡುವ ಸತಿಪದ್ಧತಿಯಿಂದಾಗಿ ವೀರಗಲ್ಲು, ಮಾಸ್ತಿಕಲ್ಲುಗಳು ಅಂದಿನ ಸಮಾಜದಲ್ಲಿರುವ ವ್ಯವಸ್ಥೆಗಳನ್ನು ತಿಳಿಸುತ್ತ ಅವುಗಳನ್ನು ಬಲಪಡಿಸುವಲ್ಲಿ ಪ್ರಮುಖ ಆಕರಗಳಾಗಿ ಬಳಕೆಯಾಗಿವೆ.

- ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿತು ಎಂಬ ಭಾವನೆ ಇವತ್ತಿಗೂ ಬಹಳಷ್ಟು ಜನರ ಮನಸ್ಸಿನಲ್ಲಿ ಬೇರೂರಿದೆ. ಮಗಳು ಎಂದಿದ್ದರೂ ಬೇರೆಯವರ ಮನೆಗೆ ಹೋಗುವವಳೆಂದು ತವರುಮನೆಯಲ್ಲಿಯೇ ಅವಳನ್ನು ಪರಕೀಯಳನ್ನಾಗಿ ಮಾಡಲಾಗುತ್ತದೆ. ಜೊತೆಗೆ ಗಂಡನ ಮನೆಯಿಂದ ಅಪವಾದ ಹೊತ್ತು ಬಂದರೆ ತವರುಮನೆಯ ಬಾಗಿಲು ಕೂಡ ಮುಚ್ಚಿರುತ್ತದೆ. 'ಕೊಟ್ಟ ಮಗಳು ಕುಲಕ್ಕೆ ಹೊರಗೆ' ಎಂಬ ನಿಲುವನ್ನು ತಾಳಿದ ಕಥನಗೀತೆಗಳಿಂದ ತವರಿನ ಅಥವಾ ಕುಟುಂಬದ ಜವಾಬ್ದಾರಿಯ ಮನವರಿಕೆ ಮಾಡಲಾಗಿದೆ.

- ಮಹಿಳೆ ಕುಟಂಬದಲ್ಲಿ ಎಷ್ಟೇ ಮಹತ್ವದ ಪಾತ್ರ ವಹಿಸಿದರೂ ಕೂಡಾ ಅದಕ್ಕೆ ದೊರೆಯುವ ಪ್ರತಿಫಲ ಗಣನೆಗೆ ಬಾರದಂತಿದೆ ಎಂಬುದನ್ನು ಗುರುತಿಸಲಾಗಿದೆ.

- ಹುಟ್ಟಿನಿಂದ ಚಿತೆಯವರೆಗೆ ನೂರಾರು ಸಮಸ್ಯೆಗಳನ್ನು, ಸಂಕಟಗಳನ್ನು ಎದುರಿಸುವುದ ರೊಂದಿಗೆ ಅವುಗಳ ಸುಳಿಯಲ್ಲಿಯೇ ಹುದುಗಿ ಹೋದ ಮಹಿಳೆಯ ಬದುಕಿನ ಹುಡುಕಾಟವಿದೆ ಮತ್ತು ಆಕೆಯ ಪರಿಸ್ಥಿತಿ ಇಂದಿಗೂ ದುಸ್ತರವಾಗಿಯೇ ಇದೆ ಎಂಬುದನ್ನು ಗುರುತಿಸಲಾಗಿದೆ.

- ಮದುವೆ ಎನ್ನುವುದು ವ್ಯಕ್ತಿಯ ಜೀವನದಲ್ಲಿ ಮಹತ್ವದ ತಿರುವು. ಅದೇ ಮದುವೆಯ ಕಾರಣದಿಂದ ಮಹಿಳೆಗೆ ಅನೇಕ ಸಮಸ್ಯೆಗಳು ಕಾಡಿವೆ. ಆ ಹಿನ್ನೆಲೆಯಲ್ಲಿ ಪರಿಹಾರೋಪಾಯಗಳನ್ನು ನೀಡಲಾಗಿದೆ.

- ಬಾಲ್ಯ ವಿವಾಹದಿಂದ ಮಹಿಳೆ ಅನುಭವಿಸುವ ತೊಂದರೆಗಳನ್ನು ತಡೆಯುವ ಪ್ರಯತ್ನದ ಅವಶ್ಯಕತೆಯನ್ನು ತಿಳಿಸಲಾಗಿದೆ. ಏನೂ ಅರಿಯದ ವಯಸ್ಸಿನಲ್ಲಿ ಮಾಡಿದ ಮದುವೆ ಮಹಿಳೆಯ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಎಬ್ಬಿಸುವ ಬಿರುಗಾಳಿಯನ್ನು ತಡೆಯಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆ ಇರುವ ಕಾರಣ ಅದರ ಬಗೆಗೆ ಚರ್ಚಿಸಲಾಗಿದೆ.
- ಭಾರತೀಯ ಸಮಾಜದ ಅನಿಷ್ಟ ಆಚರಣೆಗಳಲ್ಲಿ ಒಂದಾದ 'ಆಗೋಮ' ಆಚರಣಾ ಪದ್ಧತಿ ಹೆಣ್ಣಿನ ಶೋಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. "ಮದುವೆಯಿಲ್ಲದೆ ಮೋಕ್ಷವಿಲ್ಲ" ಎಂಬ ನಂಬಿಕೆಗೆ ಕಟ್ಟುಬಿದ್ದು ಸತ್ತ ಮಗನಿಗಾಗಿ ಜೀವಂತ ಹೆಣ್ಣನ್ನು ತಂದು ಮದುವೆ ಮಾಡುವ ಕ್ರೂರತೆಯಂತಹ ಇಂಥ ಅರ್ಥಹೀನ ಆಚರಣೆಗಳನ್ನು ಸಮಾಜ ತಡೆಯಬೇಕಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.
- ಮೌಲ್ಯಗಳು ವ್ಯಕ್ತಿಯ ವ್ಯಕ್ತಿತ್ವಕ್ಕೆ ಮೆರಗನ್ನು ತಂದುಕೊಡುತ್ತವೆ. ಹಾಗಾಗಿ ಅವುಗಳ ಪರಿಪಾಲನೆಯ ಹೊಣೆ ಎಲ್ಲರ ಕರ್ತವ್ಯ ಮತ್ತು ಧರ್ಮವಾಗಿದೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಮೌಲ್ಯಗಳನ್ನು ರೂಪಿಸುವವರು ಪುರುಷರಾದರೆ ಪರಿಪಾಲನೆಯ ಹೊಣೆ ಮಾತ್ರ ಹೆಣ್ಣಿನದು ಎಂಬಂತೆ ನಡೆದುಕೊಳ್ಳುವುದನ್ನು ಕಥನಗೀತೆಗಳಲ್ಲಿ ಗುರುತಿಸಲಾಗಿದೆ.
- ಮಾನವ ಜೀವಿಗಳ ನಡುವೆ ಸಮಾನತೆಯನ್ನು ಸ್ಥಾಪಿಸಿ, ಸಹಬಾಳ್ವೆಯ ಅವಶ್ಯಕತೆಯನ್ನು ನಿರೂಪಿಸಲಾಗಿದೆ.
- ಮಹಿಳೆಯರಲ್ಲಿರುವ ಕೀಳರಿಮೆ (Inferiority Complex) ಭಾವವನ್ನು ಕಿತ್ತು ಹಾಕುವಲ್ಲಿ ಸಹಕಾರಿಯಾಗಿದೆ.
- ಕುಟುಂಬದಲ್ಲಿ ಹೆಣ್ಣು ಶಿಶುವಿಗೆ ಉಜ್ವಲ ಭವಿಷ್ಯವಿದೆ ಎಂಬ ಪರಿಕಲ್ಪನೆಯ ಕರೆಯನ್ನು ನೀಡುತ್ತದೆ.
- ಮಹಿಳೆಯರಲ್ಲಿರುವ ಶಕ್ತಿ ಸಾಮರ್ಥ್ಯಗಳ ಜೊತೆಗೆ ಆವಿಷ್ಕಾರಕ ಯೋಜನೆಗಳಿಗೆ ಮನ್ನಣೆ ನೀಡಿ ಅಭಿವೃದ್ಧಿಪಡಿಸುವುದು.
- ಸ್ತ್ರೀ ಮತ್ತು ಪುರುಷರಿಬ್ಬರಿಗೂ ಕುಟುಂಬ ಮತ್ತು ಪಾಲಕರ ಮಹತ್ವದ ಅರಿವಿನೊಂದಿಗೆ ತರಬೇತಿಗೊಳಿಸುವ ಅವಶ್ಯಕತೆಯನ್ನು ಮೂಡಿಸುತ್ತದೆ.

- ಮಹಿಳೆಯರಿಗೆ ಆತ್ಮವಿಶ್ವಾಸವನ್ನು ಬಿತ್ತರಿಸಿ ಹೊಸ ಆಲೋಚನೆಗಳ ಕಡೆ ಗಮನ ಹರಿಸಲು, ಸಹಾಯಕವಾಗಿದೆ.
- ಸ್ತ್ರೀ ಪುರುಷರಿಬ್ಬರೂ ಮೌಲ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ದಿಕ್ಸೂಚಿಯಾಗಿದೆ.
- ಮಹಿಳೆಯರು ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ ಬದುಕಲು ಪ್ರೇರಣೆ ಮತ್ತು ಹಕ್ಕುಗಳ ಬಗೆಗೆ ಅರಿವು ಮೂಡಿಸುವುದು.
- ಲಿಂಗ ಸಮಾನತೆ, ಸಾಮಾಜಿಕ ತಾರತಮ್ಯಗಳ ಆಚರಣೆಗಳಿಗೆ ಕಡಿವಾಣ ಹಾಕಲು ಸೂಚಿಸುತ್ತದೆ.
- ಜನರನ್ನು ಮೂಢನಂಬಿಕೆಗಳಿಂದ ಹೊರತರುವುದು ಹಾಗೂ ಜನರಲ್ಲಿ ಅರಿವಿನ ದೀಪ ಹಚ್ಚಲು ಸಹಾಯವಾಗಿದೆ.
- ಅನಾರೋಗ್ಯಕರ ವಾತಾವರಣವನ್ನು ಸೃಷ್ಟಿಸುವ ಆಚರಣೆಗಳಿಗೆ ಕಡಿವಾಣ ಹಾಕುವುದಕ್ಕೆ ದಿಕ್ಸೂಚಿಯಾಗಿದೆ.
- ಮಹಿಳೆಯಾಗಲೀ, ಪುರುಷರಾಗಲೀ ಅವರವರ ಕರ್ತವ್ಯ ಜವಾಬ್ದಾರಿಗಳ ಬಗೆಗೆ ತಿಳುವಳಿಕೆ ನೀಡುವುದು.
- ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಪುರುಷ-ಮಹಿಳೆ, ಕುಟುಂಬದ ಪಾತ್ರಗಳ ಮಹತ್ವವನ್ನು ತಿಳಿಸುತ್ತದೆ.

ಕೆಲವೊಂದು ಕಥನಗೀತೆಗಳು ಎಲ್ಲಾ ಕಾಲದ ಜನರಿಗೂ ಮಾರ್ಗದರ್ಶನವಾದರೆ ಇನ್ನೂ ಕೆಲವೊಂದು ಕಥನಗೀತೆಗಳು ಕೇವಲ ಅಂದಿನ ಕಾಲದ ವಾಸ್ತವತೆಯ ಚಿತ್ರಣವನ್ನು ಕಟ್ಟಿಕೊಟ್ಟಿವೆ. ಬಹುಪಾಲು ಕಥನಗೀತೆಗಳಲ್ಲಿ ಮಹಿಳೆಯ ನೋವು-ಸಂಕಟಗಳೇ ಪ್ರಧಾನವಾಗಿ ರೂಪಿತವಾಗಿವೆ. "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ಯತ್ರೈ ತಾಸ್ತುಪೂಜ್ಯಂತೇ ಸರ್ವಾಸ್ತತ್ರಾ ಫಲಾಃ ಕ್ರಿಯಾಃ॥"[೧] ಎಂದು ಸ್ತ್ರೀ ಗೌರವದ ಕುರಿತು ಪ್ರಸ್ತಾಪಿಸಿದ ಮನು ಎಲ್ಲಿ ಸ್ತ್ರೀಯರಿಗೆ ಗೌರವ, ಸನ್ಮಾನಗಳು ದೊರಕುತ್ತವೆಯೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ ಅಲ್ಲಿ ಯಾವ ಯಜ್ಞ-ಪೂಜೆಗಳೂ ಫಲ ನೀಡುವುದಿಲ್ಲ ಎಂದು ಹೇಳಿ ಇದಕ್ಕೆ

೧. ಮಹಿಳೆ ಮತ್ತು ಧರ್ಮ: ಶಿವಾನಂದ ಎಸ್. ವಿರಕ್ತಮಠ, ಪು.೬೦

ವಿರೋಧಾಬಾಸವೆಂಬಂತೆ ಮತ್ತೊಂದು ಹೇಳಿಕೆಯನ್ನು ನೀಡುತ್ತಾನೆ: "ಬಾಲ್ಯೇ ಪಿತುರ್ವಶೇ ತಿಷ್ಠೆತ್ಪಾಣಿಗ್ರಾಹಸ್ಯ ಯೌವನೇ ಪುತ್ರಾಣಾಂ ಭರ್ತರಿ ಪ್ರೇತೇ ನ ಭಜೇತ್ ಸ್ತ್ರೀ ಸ್ವತಂತ್ರತಾಂ"[೨] ಎಂದರೆ ಮಹಿಳೆಯು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ವೈಧವ್ಯದಲ್ಲಿ ಮಕ್ಕಳ ಅಧೀನದಲ್ಲಿಯೇ ಬದುಕಬೇಕು. ಸ್ವತಂತ್ರ್ಯಳಾಗಿ ಒಬ್ಬಳೇ ವ್ಯವಹರಿಸಬಾರದು. ಮನೆಯ ಸಕಲ ಕಾರ್ಯಗಳೊಂದಿಗೆ ಪತಿಯ ಸೇವೆಯನ್ನು ಮಾಡುವುದರ ಮೂಲಕ ಜೀವನ ನಡೆಸಬೇಕು ಎಂದು ಆಕೆಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿದೆ. ಇದೇ ತಳಹದಿಯ ಮೇಲೆಯೇ ವಿನ್ಯಾಸಗೊಳ್ಳುತ್ತಾ ಬಂದ ಮಹಿಳೆ ತನ್ನ ನೋವು, ಸಂಕಟಗಳನ್ನು ಯಾರೊಂದಿಗೂ ಹೇಳಿಕೊಳ್ಳಲಾಗದೇ ದುರಂತ ಬದುಕನ್ನು ಕಂಡ ಮಹಿಳೆಯರು ಕಥನಗೀತೆಗಳಲ್ಲಿ ಸಾಕಷ್ಟು ಕಂಡುಬರುತ್ತಾರೆ. ಅಂತಹ ಮಹಿಳೆಯನ್ನು ದೇವರ ಸ್ಥಾನದಲ್ಲಿ ಕೂರಿಸಿ ಆಕೆಯ ಆಸೆ-ಆಕಾಂಕ್ಷೆಗಳನ್ನು ಮುಚ್ಚಿ ಹಾಕಲು ಪ್ರೇರಣೆ ನೀಡಲಾಗಿದೆ. ಅದಕ್ಕಾಗಿಯೇ ಇಂದಿನ ಮಹಿಳಾ ಲೋಕ ದೇವತೆಯೆಂದು ಹೊಗಳಿ ಹೊನ್ನ ಶೂಲಕ್ಕೇರಿಸುವುದರ ಬದಲು ಆಕೆಯನ್ನು ಮನುಷ್ಯಳಂತೆ ಕಂಡರೆ ಸಾಕು ಎಂಬ ಆಶಯವನ್ನು ಈ ಮಹಾಪ್ರಬಂಧ ಒಳಗೊಂಡಿದೆ.

ಮಹಿಳೆಯರು ಸಮಾಜ ವ್ಯವಸ್ಥೆಯ ದೌರ್ಜನ್ಯಕ್ಕೆ ಬಲಿಯಾಗುತ್ತ ಬಂದಿದ್ದರೂ ಕೂಡ ಕೆಲವೊಂದು ಮಾತುಗಳಿಂದ ಆಚರಣೆಗಳಿಗೆ ವಿರೋಧಿಯಾಗಿದ್ದರು ಎಂಬುದೂ ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಕೆರೆ, ಕೋಟೆಗೆ ಬಲಿಯಾಗುವಂತಹ ಸಂದರ್ಭದಲ್ಲಿಯೂ ಸಹ ಕ್ರೂರ ಸಮಾಜವನ್ನು ಧಿಕ್ಕರಿಸಿ ಹೆತ್ತವರನ್ನು, ಕುಟುಂಬದವರನ್ನು, ಸಮಾಜವನ್ನು ಶಪಿಸುತ್ತ, ಸಾವನ್ನು ಅಪ್ಪಿದಂತಹ ಮಹಿಳೆಯರ ಚಿತ್ರಣವನ್ನು ಕಥನಗೀತೆಗಳಲ್ಲಿ ಕಾಣುತ್ತೇವೆ. ಆದ ಕಾರಣ ಕಥನಗೀತೆಗಳಿಂದ ಹೊಸ ವ್ಯಾಖ್ಯಾನ ಮತ್ತು ಮರು ಮೌಲ್ಯ ನಿರ್ಮಾಣ ಮಾಡುವ ಪ್ರಯತ್ನ ಮಾಡಲಾಗಿದೆ.

ಒಟ್ಟಾರೆಯಾಗಿ ಕಥನಗೀತೆಗಳಲ್ಲಿ ಕಂಡುಬರುವ ಮಹಿಳೆ ಹಾಗೂ ವಾಸ್ತವದಲ್ಲಿ ಬಾಳಿ ಬದುಕುವಂತಹ ಮಹಿಳೆಯ ಮಧ್ಯೆ ಬಹುಪಾಲು ಶೋಷಣೆಗಳು ಬೇರೆ ಸ್ವರೂಪವನ್ನು ತಾಳಿ ವಿಜೃಂಭಿಸುತ್ತಿವೆ. ಆದ್ದರಿಂದಲೇ ಕಥನಗೀತೆಗಳಲ್ಲಿಯ ಮಹಿಳಾ ಲೋಕದ ವಿನ್ಯಾಸವನ್ನು ಪ್ರಸ್ತುತ ಮಹಿಳಾ ಲೋಕಕ್ಕೆ ಅನ್ವಯಿಸಿ ಮಹಿಳಾವಾದದ ಮುಖೇನ ತಾತ್ವಿಕತೆಯ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

---

೨. ಮಹಿಳೆ ಮತ್ತು ಧರ್ಮ: ಶಿವಾನಂದ ಎಸ್. ವಿರಕ್ತಮಠ, ಪು.೬೧

ಅನುಬಂಧಗಳು

೧. ಪ್ರಾಥಮಿಕ ಆಕರಗಳು

೨. ಪರಾಮರ್ಶನ ಗ್ರಂಥಗಳು

ಅನುಬಂಧ–೧

ಅನುಬಂಧ-೧

ಪ್ರಾಥಮಿಕ ಆಕರಗಳು

೧. ಅಂಬಳಿಕೆ ಹಿರಿಯಣ್ಣ(ಸಂ), 'ಪೌರಾಣಿಕ ಕಥನಗೀತೆಗಳು', ೨೦೦೬, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ ಬೆಂಗಳೂರ.

- ಇಕೋತಿದೇವಿ ಪುರಾಣ
- ಕೃಷ್ಣ ಕೊರವಂಜಿ
- ಗಂಗೆ-ಗೌರಿ
- ಗೊಲ್ಲರ ಕುಲದ ಹುಟ್ಟಿನ ಸಂದು
- ಜೋಗಿ ಹಾಡು
- ತಂಬೂರಿ ಸಂಪ್ರದಾಯದ ರಾಮಾಯಣ
- ಪಾಂಡವರ ಮೇಲಿನ ಪದ

೨. ಕೃಷ್ಣಮೂರ್ತಿ ಹನೂರ (ಸಂ), ಕತ್ತಾಲ ದಾರಿ ದೂರ, ೨೦೦೨ (ದ್ವಿತೀಯ ಮುದ್ರಣ), ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರ.

- ಕಾಡ ಸಿದ್ದಮ್ಮ
- ಗುಣಸಾಗರಿ
- ಧರಣಿಯಮ್ಮನ ಬಲಿದಾನ
- ಮದಗದ ಕೆಂಚವ್ವ
- ಮಹಾಸತಿ ತಾಡಿ ನಾಗಮ್ಮ
- ವಲ್ಲಣದೇವಿ
- ವೀರ ತಿಮ್ಮವ್ವ

೩. ಕೃಷ್ಣಮೂರ್ತಿ ಹನೂರ (ಸಂ), ಸಾವಿರದ ಸಿರಿ ಬೆಳಗು, ೨೦೦೫, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

- ಕಟ್ಟೆ ಮಾರವ್ವ
- ಕೊಂಡದ ಕಾಟವ್ವ
- ಮಳೆರಾಯನ ಹಾಡು

೪. ಕೃಷ್ಣಮೂರ್ತಿ ಹನೂರ (ಸಂ), ಐತಿಹಾಸಿಕ ಕಥನಗೀತೆಗಳು, ೨೦೦೬, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ ಬೆಂಗಳೂರ.

- ಕರ್ನಾಟಕದ ಕಂದ ಕುಮಾರ ರಾಮ
- ಕೆಂಪೇಗೌಡ
- ಸರ್ಜಪ್ಪ ನಾಯಕನ ಪದ
- ಹರಳಯ್ಯ
- ಹಲಗಲಿಯ ಬೇಡರು

೫. ಖಂಡೋಬಾ ಪಿ.ಕೆ. (ಸಂ), ಜನಪದ ಕಥನಗೀತೆಗಳು, ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರ.

- ಈರೋಬಿ
- ಕಲಿಯುಗದ ಬಾಲೆ
- ಕವುಲಿ ಹಾಡು
- ನೀಲಗಂಗಾನ ಹಾಡು
- ಸಂಗವ ಮಾಡ್ಯಾಳ ನಿಮ ತಂಗಿ

೬. ಪರಮಶಿವಯ್ಯ ಜೀ. ಶಂ., ಜನಪದ ಖಂಡಕಾವ್ಯಗಳು, ೧೯೭೯, ಶ್ರೀ ರಾಘವೇಂದ್ರ ಪ್ರಿಂಟರ್ಸ್, ತ್ಯಾಗರಾಜ ರಸ್ತೆ, ಮೈಸೂರ.

- ಉತ್ತರದೇವಿ
- ನಾಗವ್ವ
- ಹುಳಿಯೂರು ಕೆಂಚಮ್ಮ

೭. ಶಾಲಿನಿ ರಘುನಾಥ(ಸಂ), ಜಾನಪದ ಸಾಮಾಜಿಕ ಕಥನಗೀತೆಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ ಬೆಂಗಳೂರ.

- ಅತುಮವ್ವಿ
- ಎಳೆಯನ ಕೆಂಗಪ್ಪ ಎಳಗನಾತಗರನಾಕಿ

- ಒಬ್ಬರಿಗಟ್ಟುಡುಗೆ
- ಕಡ್ಲಿಮಟ್ಟಿ ಕಾಶಿಬಾಯಿ
- ಕರ್ತಿರಾಯ
- ಕೆರೆಗೆ ಹಾರ
- ಕೊರಾತಿ ಕಂಚಿಯ ಕಥೆ
- ಕೋಟಿ ಕಿಲ್ಲೇದ ಕಥೆ
- ಗರತಿ ಗಂಗವ್ವ
- ಗೋವಿನ ಹಾಡು
- ತೋಳನಿಗೆ ಬಲಿ
- ದಂಡು ಬಂತವ್ವಾ ದಂಡು
- ದಾಂಬ್ರಿವುವುs ಆಗಿ, ಅವ್ವ ಪುಟ್ಟಿದಾಳೋs
- ಬಂಜೆ ಹೊನ್ನಮ್ಮ
- ಬಪ್ಪಿಂಗ–ಬಮ್ಮಿಂಗ
- ಬಯಲು ಸೀಮೆಯ ಗೌಡನ ಮಗಳು
- ಬಾರ್ಕೂರ ಹಿರಿಯಣ್ಣ ಸೆಟ್ರು
- ಸೋಮರಾಯ – ಭೀಮರಾಯ
- ಸೌಂಸತೇರು
- ಹಾವಿನ ಪದ
- ಹೆಬ್ಬುಲಿಗೆ ನಾನು ಕೊಟ್ಟೇನು ಭಾಷೆ

೮. ಹೆಂಡಿ ಬಿ.ಬಿ. (ಸಂ), ಆಯ್ದ ಜನಪದ ಕಥನಗೀತೆಗಳು, ೨೦೧೨(ತೃತೀಯ ಮುದ್ರಣ) ಪ್ರಸಾರಾಂಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ

- ಈಸೂರಾಯನ ಪದ
- ಮುತ್ತೈದೆ ಚೆನ್ನಮ್ಮ

ಅನುಬಂಧ-೨

ಅನುಬಂಧ-೨

ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ (ಸಂ), ಪೌರಾಣಿಕ ಕಥನ ಗೀತೆಗಳು, ೨೦೦೬, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಬೆಂಗಳೂರು.

೨. ಅಕ್ಕಮಹಾದೇವಿ, ಮಹಿಳಾ ಸಾಹಿತ್ಯ, ೨೦೧೧, ಚೇತನ ಬುಕ್‌ಹೌಸ್, ಮೈಸೂರು.

೩. ಅರ್ಜುನ ಗೊಳಸಂಗಿ, ಉತ್ತರದೇವಿ ಹಾಗೂ ಇತರ ಜನಪದ ರೂಪಕಗಳು, ೨೦೧೪, ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ.

೪. ಅರ್ಜುನ ಗೊಳಸಂಗಿ, ವಿಧವೆ ಮತ್ತು ಇತರ ಏಕಾಂಕ ನಾಟಕಗಳು, ೨೦೧೪, ದಲಿತ ಸಾಹಿತ್ಯ ಪರಿಷತ್ತು, ರಾಜ್ಯಘಟಕ, ಗದಗ.

೫. ಅನುಪಮಾ ಎಚ್.ಎಸ್., ಮಹಿಳೆ ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ೨೦೧೨, ಲಡಾಯಿ ಪ್ರಕಾಶನ, ಗದಗ.

೬. ಅನುಪಮಾ ಎಚ್.ಎಸ್., ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ, ೨೦೧೩, ಲಡಾಯಿ ಪ್ರಕಾಶನ, ಗದಗ.

೭. ಆಶಾದೇವಿ ಎಂ.ಎಸ್., ನಡುವೆ ಸುಳಿವ ಆತ್ಮ- ಸ್ತ್ರೀ ಸಂಕಥನದ ಚಹರೆಗಳು, ೨೦೧೧, 'ಅಹರ್ನಿಶಿ' ಪ್ರಕಾಶನ, ವಿದ್ಯಾನಗರ, ಶಿವಮೊಗ್ಗ.

೮. ಇಂದಿರಾ ಜೈಪ್ರಕಾಶ್, ಸ್ತ್ರೀವಾದಿ ಮನೋವಿಜ್ಞಾನ, ೨೦೦೯, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕಲಬುರ್ಗಿ ಎಂ.ಎಂ., ಹೊಸ ಕುಮಾರರಾಮನ ಸಾಂಗತ್ಯ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಕಲಬುರ್ಗಿ ಎಂ.ಎಂ. (ಸಂ), ಪಾಂಚಾಳ ಗಂಗ ವಿರಚಿತ ಹಳೆ ಕುಮಾರರಾಮನ ಸಾಂಗತ್ಯ, ೨೦೦೮, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೧. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ-೨, ೨೦೧೦ (ತೃತೀಯ ಮುದ್ರಣ), ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೨. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ-೪, ೨೦೧೦ (ತೃತೀಯ ಮುದ್ರಣ), ಸ್ವಪ್ನ

ಬುಕ್‌ಹೌಸ್, ಬೆಂಗಳೂರು.

೧೩. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ-೫, ೨೦೧೦, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೪. ಕವಿತಾ ರೈ, ಮಹಿಳೆ ವಸಾಹತ್ತೋತ್ತರ ಸಂದರ್ಭ, ೨೦೧೫, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.

೧೫. ಕಾಪಸೆ ರೇವಪ್ಪ, ಮಲ್ಲಿಗೆ ದಂಡೆ, ೨೦೦೦ (ಐದನೆಯ ಮುದ್ರಣ), ಸಮಾಜ ಪುಸ್ತಕಾಲಯ, ಧಾರವಾಡ.

೧೬. ಕಾಶೀನಾಥ ರೆಡ್ಡಿ ಎಚ್. (ಸಂ), ಆಚರಣೆಯ ಹಾಡುಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

೧೭. ಕಾಳೇಗೌಡ ನಾಗವಾರ (ಸಂ), ಬಯಲು ಸೀಮೆಯ ಲಾವಣಿಗಳು, ೧೯೭೩, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

೧೮. ಕೃಷ್ಣಮೂರ್ತಿ ಹನೂರ (ಸಂ), ಜನಪದ ಮತ್ತು ಬುಡಕಟ್ಟು ಗೀತೆಗಳು, ೧೯೯೮, ಸಾಹಿತ್ಯ ಅಕಾಡೆಮಿ, ರವೀಂದ್ರ ಭವನ, ನವದೆಹಲಿ.

೧೯. ಕೃಷ್ಣಮೂರ್ತಿ ಹನೂರ, ಕತ್ತಾಲ ದಾರಿ ದೂರ, ೨೦೦೨ (ದ್ವಿತೀಯ ಮುದ್ರಣ), ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜ ನಗರಪೇಟ, ಬೆಂಗಳೂರು.

೨೦. ಕೃಷ್ಣಮೂರ್ತಿ ಹನೂರು, ನುಡಿಶೋಧ, ೨೦೦೪, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೧. ಕೃಷ್ಣಮೂರ್ತಿ ಹನೂರ (ಸಂ), ಸಾವಿರದ ಸಿರಿಬೆಳಗು, ೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಕೃಷ್ಣಮೂರ್ತಿ ಹನೂರ (ಸಂ), ಐತಿಹಾಸಿಕ ಕಥನಗೀತೆಗಳು, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

೨೩. ಕೆರೆಮನೆ ಶಂಭು ಹೆಗಡೆ, ಜಾನಪದ ಸಮಾಚಾರ, ೨೦೦೬, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೪. ಖಂಡೋಬಾ ಪಿ.ಕೆ. (ಸಂ.), ಜನಪದ ಕಥನ ಗೀತೆಗಳು, ೧೯೯೬, ಕರ್ನಾಟಕ

ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೫. ಗಾಯತ್ರಿ ಎನ್., ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ, ೨೦೧೨, ಲಡಾಯಿ ಪ್ರಕಾಶನ, ಗದಗ.

೨೬. ಗಾಯತ್ರಿ ನಾವಡ, ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ೨೦೧೧, ಅಸ್ಮಿತೆ ಪ್ರಕಾಶನ, ಮಂಗಳೂರು.

೨೭. ಗಿರಡ್ಡಿ ಗೋವಿಂದರಾಜ (ಸಂ), ಜನ್ನ, ೨೦೦೮, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೮. ಗೀತಾ ಕೃಷ್ಣಮೂರ್ತಿ, ಮಹಿಳಾ ಹಕ್ಕುಗಳು (ಮಾನವ ಹಕ್ಕುಗಳ ನೆಲೆಯಲ್ಲಿ), ೨೦೦೯, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಗೀತಾ ಕೃಷ್ಣಮೂರ್ತಿ, ಮಹಿಳೆ ಸಮಾಜ ಕಾನೂನ, ೨೦೧೪ (ಐದನೆಯ ಮುದ್ರಣ), ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೦. ಗೀತಾ ಪ್ರಸಾದ್, ಆಧುನಿಕ ಮಹಿಳಾ ಅಭಿವ್ಯಕ್ತಿ, ೨೦೦೯, ಎಂ. ಮೀನಾಕ್ಷಿ ರಮೇಶ, ಧಾತ್ರಿ ಪುಸ್ತಕ, ಬೆಂಗಳೂರು.

೩೧. ಗೊರೂರು ರಾಮಸ್ವಾಮಿ ಅಯ್ಯಂಗಾರ, ಜನಪದ ಜೀವನ ಮತ್ತು ದರ್ಶನ, ೧೯೭೪, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು.

೩೨. ಚಂದ್ರಪ್ಪ, ಜನಪದ ಸಿರಿ, ೨೦೧೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೩. ಚಕ್ಕೆರೆ ಶಿವಶಂಕರ್, ಜಾನಪದ ಪ್ರವೇಶ, ೨೦೧೨ (ದ್ವಿತೀಯ ಮುದ್ರಣ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೪. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೧೪ (ಆರನೆಯ ಮುದ್ರಣ), ಸ್ವಪ್ನಾ ಬುಕ್ ಹೌಸ್, ಬೆಂಗಳೂರು.

೩೫. ಚೆನ್ನಣ್ಣ ವಾಲೀಕಾರ, ಕಥನ ಕವನಗಳು, ೨೦೧೦, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು.

೩೬. ಜವರೇಗೌಡ ದೇ., ಜಾನಪದ ಅಧ್ಯಯನ, ೨೦೧೫ (ನಾಲ್ಕನೆಯ ಮುದ್ರಣ), ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೩೭. ಜ್ಯೋತಿ ಶಶಿಕುಮಾರ, ಮಹಿಳಾ ಸಾಮಾಜಿಕತೆ, ೨೦೦೭, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ತಳವಾರ ಹ.ಮು., ಮದಗದ ಕೆಂಚಮ್ಮನ ಸಂಕ್ಷಿಪ್ತ ಕಥಾಸಾರ, ೨೦೧೫ (ತೃತೀಯ ಮುದ್ರಣ), ಶ್ರೀಮತಿ ಅನುಸೂಯಾ ಸೋಮಶೇಖರ ಹಾದ್ರಿಹಳ್ಳಿ ಮತ್ತು ಮಕ್ಕಳು ಸಾ॥ ಹುಲ್ಲತ್ತಿ

೩೯. ದಸ್ತಗೀರಸಾಬ್ ದಿನ್ನಿ, ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ-೩, ೨೦೦೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೦. ದೇವೇಂದ್ರಕುಮಾರ ಹಕಾರಿ., ಜಾನಪದದ ಮೂಲಭೂತ ತತ್ವಗಳು, ೧೯೮೩, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ.

೪೧. ದೇವೇಂದ್ರಕುಮಾರ ಹಕಾರಿ., ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ೧೯೮೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೨. ಧೂಪದ ಎಂ.ಟಿ., ಕನ್ನಡ ಜನಪದ ರಂಗ ಪರಂಪರೆ, ೨೦೧೦, ಪ್ರಸಾರಾಂಗ,, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೩. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ನಾಟಕಗಳ ಅಧ್ಯಯನ, ೨೦೧೧, ಅಹಿತ ಪುಸ್ತಕ, ಬೆಂಗಳೂರು

೪೪. ನಾಗಭೂಷಣಸ್ವಾಮಿ ಓ. ಎಲ್, ವಿಮರ್ಶೆಯ ಪರಿಭಾಷೆ, ೨೦೧೪ (ಆರನೆಯ ಮುದ್ರಣ) ಅಭಿನವ ಪ್ರಕಾಶನ, ವಿಜಯನಗರ ಬೆಂಗಳೂರು.

೪೫. ನಾಗರಾಜ ಎಂ.(ಪ್ರಸಂ), ಮಹಿಳಾ ಸಂಶೋಧನೆ: ಸಂಕೀರ್ಣ ಸಂಕಲನಗಳು, ಸಂ.೪, ೨೦೧೩, ಪ್ರಸಾರಾಂಗ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

೪೬. ನಾವಡ ಎ. ವಿ. (ಸಂ), ಕರ್ನಾಟಕ ಸಂಶೋಧನಾ ಜನಪದ, ೨೦೦೬, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ

೪೭. ಪರಮಶಿವಯ್ಯ. ಜೀ.ಶಂ., ಜನಪದ ವೀರ ಕಾವ್ಯಗಳು, ೧೯೭೩, ಪೃಥ್ವಿ ಪ್ರಕಾಶನ, ಸರಸ್ವತೀಪುರಂ, ಮೈಸೂರು.

೪೮. ಪರಮಶಿವಯ್ಯ. ಜೀ.ಶಂ., ಜನಪದ ಖಂಡ ಕಾವ್ಯಗಳು, ೧೯೭೯, ಶ್ರೀ ರಾಘವೇಂದ್ರ

ಪ್ರಿಂಟರ್ಸ್, ಮೈಸೂರು.

೪೯. ಪರಮಶಿವಯ್ಯ. ಜೀ.ಶಂ., ಪಿರಿಯಾಪಟ್ಟಣದ ಕಾಳಗ, ೨೦೧೨, ಚೇತನಬುಕ್ ಹೌಸ್, ಮೈಸೂರು.

೫೦. ಪರಮಶಿವಯ್ಯ. ಜೀ.ಶಂ., ಜನಪದ ಸಾಹಿತ್ಯ ಸಮೀಕ್ಷೆ, ೨೦೧೫ (ದ್ವಿತೀಯ ಮುದ್ರಣ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೧. ಪರಮಶಿವಯ್ಯ. ಜೀ.ಶಂ., ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು, ೨೦೧೫ (ತೃತೀಯ ಮುದ್ರಣ), ಅಭಿನವ ಪ್ರಕಾಶನ, ಬೆಂಗಳೂರು.

೫೨. ಪ್ರಭಾಕರ ಎ.ಎಸ್. (ಸಂ), ಮ್ಯಾಸಬೇಡರ ಕಥನಗಳು, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೩. ಪ್ರಭಾವತಿ ಎಸ್.ವಿ., ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು:ಒಂದು ತೌಲನಿಕ ಅಧ್ಯಯನ, ೨೦೦೫, ಸುಮುಖ ಪ್ರಕಾಶನ, ಬೆಂಗಳೂರು.

೫೪. ಪಾರ್ವತಿ ಐತಾಳ್ ಜಿ., ಮಹಿಳಾ ಚಿಂತನೆಯ ವಿಭಿನ್ನ ನೆಲೆಗಳು, ೨೦೧೩, ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು.

೫೫. ಪುಟ್ಟಯ್ಯ ಬಿ.ಎಂ., ಸಂಶೋಧನೆ ತಾತ್ವಿಕ ಆಯಾಮಗಳು, ೨೦೧೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೫೬. ಪುರುಷೋತ್ತಮ ಬಿಳಿಮಲೆ, ಕೂಡು ಕಟ್ಟು, ೧೯೯೭, ಆನಂದಕಂದ ಗ್ರಂಥಮಾಲೆ, ಮಲಾಡಿಹಳ್ಳಿ.

೫೭. ಪೋಲಂಕಿ ರಾಮಮೂರ್ತಿ, ಸೀತಾಯಣ, ೧೯೮೯ (ತೃತೀಯ ಮುದ್ರಣ), ಸ್ಪಂದನ ಪ್ರಕಾಶನ, ಚಳ್ಳಕೆರೆ.

೫೮. ಬರಗೂರ ರಾಮಚಂದ್ರಪ್ಪ (ಪ್ರಸಂ.), ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ೨೦೦೬, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.

೫೯. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ೧೯೮೫, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೬೦. ಬಸವರಾಜ ಸಬರದ, ಜಾನಪದ ಆಯಾಮಗಳು, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. ಭಟ್‌ಸೂರಿ ಕೆ.ಜಿ., ಶಾಸನ ಅಧ್ಯಯನ, ಸಂಪುಟ-೮, ಸಂಚಿಕೆ-೨, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ಭಟ್ಟ ಜಿ.ಎಸ್, ಕನ್ನಡ ಜಾನಪದ ಸಾಹಿತ್ಯ, ೨೦೧೧, ಚೇತನ ಬುಕ್‌ಹೌಸ್, ಮೈಸೂರು.

೬೩. ಮಂಗಳಾ ಪ್ರಿಯದರ್ಶಿನಿ ಡಿ., ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ, ೨೦೦೭, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೪. ಮಂಜುನಾಥ ಎಂ.ಜಿ. (ಸಂ), ರಾಣಿಯರು ಮತ್ತು ವೀರ ಮಹಿಳೆಯರು, ೨೦೧೩, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ.

೬೫. ಮಲ್ಲಿಕಾ ಘಂಟಿ, ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ, ೧೯೯೪, ಯುವಲೋಕ ಪ್ರಕಾಶನ, ಶ್ರೀನಗರ, ಧಾರವಾಡ.

೬೬. ಮಲ್ಲಿಕಾ ಘಂಟಿ (ಸಂ), ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ-೫, ೨೦೦೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೭. ಮಹೇಶ ಚಿಂತಾಮಣಿ (ಸಂ), ಮಹಿಳಾ ಸಂಶೋಧನೆ, ೨೦೧೩, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ.

೬೮. ಮುಕ್ತಾಯಕ್ಕ ಎಚ್.ಎಸ್., ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ೧೯೯೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೯. ಮುತ್ತಯ್ಯ ಎಸ್.ಎಂ., ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ, ೨೦೦೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೦. ಮುದೇನೂರ ಸಂಗಣ್ಣ, ಜನಪದ ಮುಕ್ತಕಗಳು, ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭೧. ಮೂರ್ತಿ ಕೆ.ಆರ್.ಕೆ., ಹೆಣ್ಣು ಸರ್ವಜ್ಞನ ದೃಷ್ಟಿಯಲ್ಲಿ, ೨೦೦೬, ಜನಪದ ಪ್ರಕಾಶನ, ಬೆಂಗಳೂರು.

೭೨. ಮೋಹನ್ ಜಿ.ಎನ್. (ಸಂ), ಮಡಿಲಕ್ಕಿ, ೧೯೯೧-೯೨, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು.

೭೩. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ೨೦೧೨ (ನಾಲ್ಕನೆಯ ಮುದ್ರಣ), ಅಭಿನವ ಪ್ರಕಾಶನ, ಬೆಂಗಳೂರು.

೭೪. ರಹಮತ್ ತರೀಕೆರೆ, ಸಂಶೋಧನ ಮೀಮಾಂಸೆ, ೨೦೧೮, (ದ್ವಿತೀಯ ಮುದ್ರಣ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೭೫. ರಾಜಶೇಖರ ಮಠಪತಿ, ಹೆಣ್ಣು ಹೇಳುವ ಅರ್ಧಸತ್ಯ, ೨೦೧೪, ಕಣ್ವ ಪ್ರಕಾಶನ, ಬೆಂಗಳೂರು.

೭೬. ರಾಹು, ಭಾರತೀಯ ಮಹಿಳಾ ವಿಮೋಚನೆ ಆಂದೋಲನ, ೨೦೧೩, ಲಡಾಯಿ ಪ್ರಕಾಶನ, ಗದಗ.

೭೭. ರುಕ್ಮಿಣಿ ಎಂ.ಕೆ., ಜನಪದ ಕಥನಗೀತೆಗಳಲ್ಲಿ ಮಹಿಳೆ : ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೮, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು.

೭೮. ರೇಖಾ ಹಿಮಾನಂದ (ಸಂ), ಸ್ತ್ರೀ ಸಂಪದ, ೨೦೧೩, ಶ್ರೀ ಅನ್ನದಾನೇಶ್ವರ ಪ್ರಕಾಶನ, ಬೆಂಗಳೂರು, ಗ್ರಾಮಾಂತರ ಜಿಲ್ಲೆ.

೭೯. ವರದಾ ಶ್ರೀನಿವಾಸ, ಮಹಿಳೆ ವೈಚಾರಿಕತೆ ಮತ್ತು ವಿಮರ್ಶೆ, ೧೯೯೧, ಶ್ರೀ ವೆಂಕಟೇಶ್ವರ ಪ್ರಕಾಶನ, ಬೆಂಗಳೂರು.

೮೦. ವಸುಂಧರಾ ಭೂಪತಿ, ಮಹಿಳೆ ಮತ್ತು ಮೌಢ್ಯ, ೨೦೧೪, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೮೧. ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ತರೀಕೆರೆ ಪಾಳೆಯಗಾರ ಸರ್ಜಪ್ಪ ನಾಯಕನ ಕಥನಕಾವ್ಯ, ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೨. ವೀಣಾ ಶಾಂತೇಶ್ವರ, ಇಲ್ಲಿಂದ ಮುಂದೆಲ್ಲಿಗೆ?, ೨೦೦೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೩. ವೀರಣ್ಣ ದಂಡೆ, ಕನ್ನಡ ಜಾನಪದ ಪ್ರಜ್ಞೆ, ೧೯೯೩, ಕವಿಮಾರ್ಗ ಪ್ರಕಾಶನ, ಕಲಬುರ್ಗಿ.

೮೪. ವೀರಣ್ಣ ದಂಡೆ (ಸಂ), ಸುವರ್ಣ ಜಾನಪದ ಲೇಖನಗಳು, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

೮೫. ವೀರಣ್ಣ ದಂಡೆ, ಜಾನಪದ (ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೮), ೨೦೧೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೬. ವೆಂಕಟಗಿರಿ ದಳವಾಯಿ (ಸಂ), ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ-೬, ೨೦೦೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮೭. ವೆಂಕಟರಮಣ ಬಿ.ಆರ್. ಐತಾಳ, ಜನ್ನನ ಯಶೋಧರ ಚರಿತೆ ಪ್ರವೇಶ, ೨೦೧೩ (ದ್ವಿತೀಯ ಮುದ್ರಣ), ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ) ಕರ್ನಾಟಕ

೮೮. ವೆಂಕಟೇಶ ಇಂದ್ವಾಡಿ, ಸಿರಿ ಜನಪದ ಕಾವ್ಯ, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೯. ವೆಂಕಟೇಶಮೂರ್ತಿ ಎಚ್.ಎಸ್., ಹೊಸಗನ್ನಡ ಕಥನ ಕವನ, ೨೦೧೧ (ದ್ವಿತೀಯ ಮುದ್ರಣ), ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೯೦. ವೈದೇಹಿ, ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ, ಕಮಲಾದೇವಿ ಚಟ್ಟೋಪಾಧ್ಯಾಯ, ೨೦೧೪ ಅಭಿನವ ಪ್ರಕಾಶನ, ಬೆಂಗಳೂರು.

೯೧. ಶರಣಬಸಪ್ಪ ಕೋಲ್ಕಾರ (ಸಂ), ದಾಂಪತ್ಯ ಸಂಪದ, ೨೦೦೧, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಗಂಗಾವತಿ.

೯೨. ಶಶಿಕಲಾ ಮೋಳ್ದಿ (ಸಂ), ಉತ್ತರ ಕರ್ನಾಟಕದ ಮದುವೆ ಹಾಡುಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

೯೩. ಶಾಲಿನಿ ರಘುನಾಥ (ಸಂ), ಜಾನಪದ ಸಾಮಾಜಿಕ ಕಥನಗೀತೆಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೯೪. ಶಿಲ್ಪಾ ಎಸ್. (ಸಂ), ಮಹಿಳಾ ಸಂವೇದನೆ, ೨೦೧೨, ಅನ್ನಪೂರ್ಣ ಪಬ್ಲಿಕೇಶನ್ ಹೌಸ್, ಬೆಂಗಳೂರು.

೯೫. ಶಿವರಾಮ ಕಾಡನಕುಪ್ಪೆ, ಸಾಮಾಜಿಕ ನೆಲೆ, ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೯೬. ಶಿವರಾಮ ಕಾರಂತ, ಸರಸಮ್ಮನ ಸಮಾಧಿ, ೨೦೧೮, (ಹನ್ನೆರಡನೇ ಮುದ್ರಣ), ಸಪ್ನ ಬುಕ್ ಹೌಸ್ ಬೆಂಗಳೂರು.

೯೭. ಶಿವಾನಂದ ಎಸ್. ವಿರಕ್ತಮಠ., ಮಹಿಳೆ ಮತ್ತು ಧರ್ಮ, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೮. ಶ್ರೀಕಂಠ ಕೂಡಿಗೆ, ಜಾನಪದ ಶೋಧ, ೨೦೦೪, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ

೯೯. ಶ್ರೀಕಂಠಯ್ಯ ಬಿ. ಎಂ., ಕನ್ನಡದ ಬಾವುಟ, ೨೦೦೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦೦. ಶ್ರೀಕಂಠಯ್ಯ ತೀ. ನಂ., ಸಮಾಲೋಕನ, ೨೦೧೫ (ತೃತೀಯ ಮುದ್ರಣ), ಶ್ರೀ ಕೂಡಲಿ ಚಿದಂಬರಂ ಸಂಸ್ಥಾಪಕರು, ಕಾವ್ಯಾಲಯ, ಬೆಂಗಳೂರು.

೧೦೧. ಶ್ರೀಕಂಠಶಾಸ್ತ್ರೀ ಎಸ್., ಭಾರತೀಯ ಸಂಸ್ಕೃತಿ, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

೧೦೨. ಶ್ರೀಮತಿ ಎಚ್.ಎಸ್., ಮಹಿಳೆ ದುಡಿಮೆ ಮತ್ತು ಬಿಡುವು, ೨೦೦೭, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೩. ಶ್ರೀಮತಿ ಎಚ್.ಎಸ್., ಹೆಣ್ಣು ಮತ್ತು ಭಾಷೆ, ೨೦೦೭, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೪. ಶ್ರೀಮತಿ ಎಚ್.ಎಸ್., ಮಹಿಳಾ ಆರ್ಥಿಕತೆ, ೨೦೦೭, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೫. ಶ್ರೀಮತಿ ಎಚ್.ಎಸ್., ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ, ೨೦೦೯, ಪ್ರಸಾರಾಂಗ,, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೬. ಶ್ರೀಮತಿ ಎಚ್.ಎಸ್., ಹೆಣ್ಣು ಬರಹದ ಒಳಬಂಡಾಯ, ೨೦೧೦, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೦೭. ಶ್ರೀಮತಿ ಎಚ್.ಎಸ್.(ಅನು), ಸಿಮೋನ್ ದ ಬೋವಾ, ದ ಸೆಕೆಂಡ್ ಸೆಕ್ಸ್, ೨೦೧೧, ಬರಹ ಪಬ್ಲಿಕೇಶನ್ ಹೌಸ್, ಬೆಂಗಳೂರು

೧೦೮. ಶೀಮತಿ ಎಚ್.ಎಸ್., ಸೀವಾದ:ತಾತಿ ಕತೆ, ೨೦೧೨, ಪಗತಿ ಗಾಫಿಕ್ ಬೆಂಗಳೂರು.

೧೦೯. ಶೇಷಗಿರಿ ರಾವ್ ಎಲ್.ಎಸ್., ಸಮಗ್ರ ವಿಮರ್ಶಾ ಸಾಹಿತ್ಯ ಸಂಪುಟ-೩, ೨೦೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

೧೧೦. ಶೈಲಜ ಹಿರೇಮಠ., ಹರದೇಶಿ-ನಾಗೇಶಿ: ಕಲೆ ಮತ್ತು ಕಲಾವಿದರು ಲಿಂಗ ಸಂಬಂಧ ಅಧ್ಯಯನ, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೧. ಸಣ್ಣವೀರಣ್ಣ ದೊಡ್ಡಮನಿ ಎಚ್., ಶಿಳ್ಳೇಕ್ಯಾತರು ಒಂದು ಜಾನಪದೀಯ ಅಧ್ಯಯನ, ೨೦೧೩, ಗಂಗಬಸವ ಪ್ರಕಾಶನ, ಕೊಕ್ಕರಗೊಂದಿ.

೧೧೨. ಸಬಿಹಾ ಭೂಮೀಗೌಡ, ಮಹಿಳೆ ಇಂದಿನ ಸವಾಲುಗಳು, ೨೦೧೪, ಲಡಾಯಿ ಪ್ರಕಾಶನ, ಗದಗ.

೧೧೩. ಸರೋಜ ಕೆ., ಮಹಿಳಾ ಆರೋಗ್ಯ ಒಂದು ಮರು ಚಿಂತನೆ, ೨೦೦೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೪. ಸಾವಿತ್ರಿ ಮುಜುಮದಾರ, ಹೆಣ್ಣು ಹೆಜ್ಜೆ, ೨೦೧೪, ಜನದನಿ ಪ್ರಕಾಶನ,, ಅಳವಂಡಿ.

೧೧೫. ಸೀತಾರಾಮಯ್ಯ (ಸಂ), ಜನಪದ ಸಾಹಿತ್ಯ, ೨೦೧೨ (ದ್ವಿತೀಯ ಮುದ್ರಣ), ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೧೬. ಸುಜ್ಞಾನಮೂರ್ತಿ ಬಿ., ಪುರುಷ ಅಹಂಕಾರಕ್ಕೆ ಸವಾಲ್, ೨೦೧೧, ಲಡಾಯಿ ಪ್ರಕಾಶನ, ಗದಗ.

೧೧೭. ಹನುಮಂತರಾವ ಬಿ. ದೊಡ್ಡಮನಿ, ಜಾನಪದ ಸಂಗಮ, ೨೦೧೧, ಶಾಂತಕುಮಾರ ಪ್ರಕಾಶನ, ಮಲ್ಲಾಬಾದ.

೧೧೮. ಹಿರೇಮಠ. ಪಿ.ಜಿ, ಕಥನಕವನ ಹಾಗೂ ವಿಚಾರ ಸಾಹಿತ್ಯ ಸಂಗ್ರಹ, ೨೦೧೬, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧೯. ಹೆಂಡಿ ಬಿ.ಬಿ., ಹರದೇಶಿ ನಾಗೇಶಿ, ೧೯೮೩, ಕನ್ನಡ ಅಧ್ಯಯನ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೨೦. ಹೆಂಡಿ ಬಿ. ಬಿ. (ಸಂ), ಆಯ್ದ ಜನಪದ ಕಥನಗೀತೆಗಳು, ೨೦೧೨ (ತೃತೀಯ

ಮುದ್ರಣ), ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨೧. ಹೆಗಡೆ ಎಲ್. ಆರ್, ತಿಮ್ಮಕ್ಕನ ಪದಗಳು, ೧೯೬೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨೨. ಹೆಗಡೆ ಆರ್.ಪಿ, ಚಂಪೂ ಸಾಹಿತ್ಯ, ೨೦೧೧, ಚಿಂತನ ಬುಕ್‌ಹೌಸ್,, ಮೈಸೂರು.

೧೨೩. ಹೆಬ್ಬಾಲೆ ಕೆ. ನಾಗೇಶ್, ದಲಿತ ಸ್ತ್ರೀ ದೈವಗಳು, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೪. ಹೇಮಲತಾ ಎಚ್.ಎಂ., ಮಹಿಳಾ ಅಧ್ಯಯನ-೧, ೨೦೦೭ (ದ್ವಿತೀಯ ಮುದ್ರಣ), ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೧೨೫. ಹೇಮಲತಾ ಎಚ್.ಎಂ., ಮಹಿಳಾ ಅಧ್ಯಯನ-೨, ೨೦೦೯ (ದ್ವಿತೀಯ ಮುದ್ರಣ), ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೧೨೬. ಹೇಮಲತಾ ಎಚ್.ಎಂ., ಮಹಿಳಾ ಅಧ್ಯಯನ-೬, ೨೦೦೯, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೧೨೭. ಹೇಮಲತಾ ಎಚ್.ಎಂ., ಮಹಿಳಾ ಅಧ್ಯಯನ-೨, ೨೦೧೦, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೧೨೮. ಹೇಮಲತಾ ಮಹಿಷಿ, ಮಹಿಳೆ ಮತ್ತು ಆಸ್ತಿ ಹಕ್ಕು, ೧೯೯೯, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಮೈಸೂರು.



ಸಾಹಿತ್ಯ ಅಧ್ಯಯನ ವಿಭಾಗ